ಕರ್ನಾಟಕ ಸರ್ಕಾರ

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು ಸಂಪುಟ-೫


ಲೇಖಕರು

**ಪಂ. ದೀನ್ ದಯಾಳ್ ಉಪಾಧ್ಯಾಯ**



ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಬೆಂಗಳೂರು, ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-೫೬೦ ೦೫೬

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೩೪

ವಿಚಾರ ಸಾಹಿತ್ಯಮಾಲೆ – ೫೦

ಪ್ರಧಾನ ಸಂಪಾದಕರು

**ಡಾ. ಪ್ರಧಾನ್ ಗುರುದತ್ತ**

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೫

**ಸಂಪಾದಕ ಮಂಡಳಿ**

ಡಾ. ಪ್ರಧಾನ್ ಗುರುದತ್ತ (ಅಧ್ಯಕ್ಷ)
ಶ್ರೀ ಎಸ್.ಆರ್. ರಾಮಸ್ವಾಮಿ (ಸದಸ್ಯರು)
ಡಾ. ಜಿ.ಬಿ. ಹರೀಶ್ (ಸದಸ್ಯರು)
ಡಾ. ಮಂಗಳಾ ಶ್ರೀಧರ್ (ಸದಸ್ಯರು)
ಶ್ರೀ ಪಿ.ಎಂ. ರಮೇಶ್ (ಸದಸ್ಯರು)



# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೫

**ಪಂ॥ ದೀನ್ ದಯಾಳ್ ಉಪಾಧ್ಯಾಯ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**DĪN DAYĀL UPĀDHYĀYA AVARA SAMAGRA BAREHAGAḶU (Samputa 5) (Complete Works of Pandit Deendayal Upadhaya, Vol. 5)** Consisting of the Kannada translation of **Political Diary** and **Vicāraras'mi** ; Editor-in-Chief : **Dr. Pradhan Gurudatta;** Published by **Sri P. Narayana Swamy, Registrar, Kuvempu Bhasha Bharathi Pradhikara;** Kalagrama, Jnana Bharathi, Behind Bangalore University Campus, Mallattahalli, Bangalore - 560 056 ; 2012 ; Pp. x + 358 ; Price : Rs. 125/-

© : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಪ್ರಥಮ ಮುದ್ರಣ : ೨೦೧೨
ಪುಟಗಳು : x + ೩೫೮
ಬೆಲೆ : ರೂ. ೧೨೫/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀ ವಿಶ್ವನಾಥ್ ಶೆಟ್ಟಿಗಾರ್**

**ISBN : 978-93-80415-19-2**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦. ದೂ : ೨೩೩೪೨೭೨೪

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೫

**ರಾಜಕೀಯ ದಿನಚರಿ**

ಮತ್ತು

**ವಿಚಾರ ರಶ್ಮಿ**

**Blank Page**



# ಪರಿವಿಡಿ

## ಸಂಪುಟ ೫

**೧. ರಾಜಕೀಯ ದಿನಚರಿ**

ಅನು. : **ಎಲ್.ವಿ. ಶಾಂತಕುಮಾರಿ**

| | |
|---|---|
| ಮುನ್ನುಡಿ | ೩ |
| ಜೀವನ ವೃತ್ತಾಂತದ ಸ್ಥೂಲ ಚಿತ್ರಣ | ೮ |
| ಆರ್ಥಿಕ ಪರಿಸ್ಥಿತಿ – ನಿರಾಶಾದಾಯಕ ನಾಲ್ಕನೆಯ ಯೋಜನೆ | ೧೩ |
| ಆರ್ಥಿಕ ಬೆಳವಣಿಗೆಯ ಸಮಸ್ಯೆಗಳು | ೧೫ |
| ೧೯೬೩ರ ಮೊರಾರ್ಜಿಯವರ ಆಯವ್ಯಯ ಪತ್ರ | ೨೧ |
| ಭಾರತ ಸರ್ಕಾರದ ಸ್ವರ್ಣನೀತಿ | ೨೯ |
| ಮೂರನೆಯ ಯೋಜನೆಯು ಬಗೆಗೆ ಕ್ಷ–ಕಿರಣ | ೩೬ |
| ಆಹಾರ ಧಾನ್ಯಗಳಲ್ಲಿ ರಾಜ್ಯಗಳ ವ್ಯಾಪಾರ | ೩೯ |
| ಪಿ.ಎಲ್.೪೮೦, ಒಪ್ಪಂದಗಳ ಬಗೆಗೆ | ೪೪ |
| ಸಾರ್ವತ್ರಿಕ ವಿ. ಖಾಸಗಿ ವಲಯ | ೪೯ |
| ಸಹಕಾರಿ ಕೃಷಿ ಕ್ಷೇತ್ರಗಳು – ಗೊಂದಲದ ಒಂದು ಪ್ರಯತ್ನ! | ೫೨ |
| ಭಾರತ, ಪಾಕಿಸ್ತಾನ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳು | ೫೭ |
| ಪಾಕಿಸ್ತಾನಕ್ಕೆ ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ರಕ್ಷಣಾ ನೆರವು | ೬೪ |
| ಕಾಶ್ಮೀರದ ಬಗೆಗೆ ರಾಜಿ ಮಾಡಿಕೊಳ್ಳಲು ನಮಗೆ ಶಕ್ಯವೇ? | ೬೮ |
| ವಿದೇಶಾಂಗ ವ್ಯವಹಾರಗಳು : ಪಶ್ಚಿಮದ ಕೆಲವು ಪ್ರಭಾವಗಳು | ೭೫ |
| ವಿದೇಶಾಂಗ ನೀತಿ ಮತ್ತು ರಾಷ್ಟ್ರರಕ್ಷಣೆ | ೮೦ |
| ಕಾಂಗೋ ಮತ್ತು ಬೆರೂಬಾರಿಯ ಬಗೆಗೆ | ೮೭ |
| ಭಾರತ ಮತ್ತು ಸಾಮ್ರಾಜ್ಞಿ | ೯೨ |
| ಕಾಮನ್‌ವೆಲ್ತ್‌ನ ಬಗೆಗೆ ಕೆಲವು ಆಲೋಚನೆಗಳು | ೯೫ |
| ಭಾರತ, ನೇಪಾಳ ಮತ್ತು ಪ್ರಜಾಪ್ರಭುತ್ವ | ೧೦೦ |

ಭಾಷೆ : ಸಂಸ್ಕೃತಮಯ ಹಿಂದೀ ಏಕೆ? ೧೦೪
ಸ್ವಭಾಷಾ ಮತ್ತು ಸುಭಾಷಾ ೧೧೦
ಚೀಣಾ ಆಕ್ರಮಣದ ಪಾಠಗಳು: ನಾವು ಏನನ್ನಾದರೂ ಕಲಿತಿದ್ದೇದೆಯೆ? ೧೧೬
ಮೆನನ್ ಹೋಗಲೇಬೇಕು ೧೨೦
ನಾವು ಹೊಂದಾಣಿಕೆ ಮಾಡಿಕೊಳ್ಳಬೇಕೇ? ೧೨೪
ಸರ್ಕಾರ ಜನರಲ್ಲಿ ವಿಶ್ವಾಸವಿಡಲಿ ೧೩೧
ಚೀಣಾದ ಆಕ್ರಮಣ ಮತ್ತು ಭಾರತ ಸರ್ಕಾರ ೧೩೪
"ಅಂಗುಲದಿಂದ ಅಥವಾ ಮೈಲಿಯಿಂದ" ೧೩೯
ಚೀಣಾದ ಬೆದರಿಕೆ ಮತ್ತು ಸಿ.ಪಿ.ಐ. (C.P.I) ೧೪೫
ಟಿಬೆಟ್‌ನ ಸ್ವಾತಂತ್ರ್ಯದಲ್ಲಿ ಭಾರತದ ಹೊಣೆ ೧೪೭
ಸಂಸದೀಯ ಪ್ರಜಾಪ್ರಭುತ್ವ–ಚುನಾವಣಾ ಕಾನೂನಿನ ಬಗ್ಗೆ ಕೆಲವು
ಆಲೋಚನೆಗಳು ೧೫೩
ರಾಜಕೀಯ ಪಕ್ಷಗಳಿಗೆ ನೀತಿಸಂಹಿತೆ ೧೬೦
ಕಾಂಗ್ರೆಸ್ ಮತ್ತು ಪ್ರಜಾಪ್ರಭುತ್ವ ೧೬೩
ಪ್ರಜಾಪ್ರಭುತ್ವ ಮತ್ತು ರಾಜಕೀಯ ಪಕ್ಷಗಳು ೧೬೮
ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ೧೭೩
ನಿಮ್ಮ ಮತ : (೧) ಸೂಕ್ತ ಅಭ್ಯರ್ಥಿ ಯಾರು? ೧೭೭
ನಿಮ್ಮ ಮತ : (೨) ಅಭ್ಯರ್ಥಿ, ಪಕ್ಷ ಮತ್ತು ಸಿದ್ಧಾಂತ ಎಲ್ಲವೂ ಗಣನೆಗೆ ಬರುತ್ತವೆ ೧೮೨
ನಿಮ್ಮ ಮತ : (೩) ಬದಲಾಗುವವರು ಮತ್ತು ಬದಲಾಗದಿರುವವರು ೧೮೭
ಜನಸಂಘದ ಅಧಿವೇಶನಗಳು ೧೯೧
ಸ್ವತಂತ್ರ ಪಕ್ಷ – ಭಾರತೀಯ ಜನಸಂಘ ವಿಲೀನ ೧೯೬
ಕಾಶ್ಮೀರ, ಜನಸಂಘ ಮತ್ತು ಸ್ವಾತಂತ್ರ್ಯ ೧೯೯
ಬೆಲೆಯ ನಿಯಂತ್ರಣ ೨೦೧
ಕಾಮರಾಜ್ ಯೋಜನೆಯನ್ನು ಕುರಿತು ೨೦೩
ಪಂಜಾಬ್ ಮತ್ತು ಪಂಜಾಬೀ ೨೦೬
ಮಧ್ಯಪ್ರದೇಶದ ಬುಡಕಟ್ಟು ಜನರು ೨೧೧
ಫೋರ್ಡ್ ಸಂಸ್ಥೆ ಮತ್ತು ಗೋಹತ್ಯೆ ೨೧೫
ರಾಜ್ಯದ ಮೇಲೆ ಹೆಚ್ಚುತ್ತಿರುವ ಅವಲಂಬನೆ ೨೨೦



**೨. ವಿಚಾರ ರಶ್ಮಿ**

೧. ರಾಷ್ಟ್ರೀಯತೆ–ಮೂಲಮಂತ್ರ ೨೨೭
೨. ರಾಷ್ಟ್ರ ದೇವೋ ಭವ ೨೩೬
೩. ಚಿತಿ ೨೫೦
೪. ನಮ್ಮ ರಾಷ್ಟ್ರದ ಆತ್ಮ ಎಲ್ಲಿದೆ? ೨೫೭
೫. ಸ್ವರಾಷ್ಟ್ರ ದರ್ಶನ ೨೬೩
೬. ನಮ್ಮ ಸಂಸ್ಕೃತಿಯ ಒಳನೋಟ ೨೭೫
೭. 'ಸ್ವರಾಜ್ಯ'ದಿಂದ 'ಸ್ವರಾಷ್ಟ್ರ'ಕ್ಕೆ ೨೮೭
೮. ಸಂಘಟನೆಯ ಆಧಾರ ೨೯೧
೯. ರಾಷ್ಟ್ರೀಯತೆ ಮತ್ತು ಮಾನವ–ಏಕತೆ ೨೯೯
೧೦. ವ್ಯಕ್ತಿಸುಖದ ರಹಸ್ಯ ೩೦೭
೧೧. ಸಮಾಜದ ನೈಜ ರೂಪ ೩೧೬
೧೨. ಸಮಾಜವಾದ–ಪ್ರಜಾಪ್ರಭುತ್ವ–ಹಿಂದುತ್ವ ೩೩೧
೧೩. ಧರ್ಮರಾಜ್ಯ: ಏನು ಮತ್ತು ಏಕೆ ? ೩೪೧
೧೪. ಲೋಕಹಿತದ ರಾಜಮಾರ್ಗ ೩೪೮

**Blank Page**

# ೧. ರಾಜಕೀಯ ದಿನಚರಿ

ಅನು : **ಎಲ್.ವಿ. ಶಾಂತಕುಮಾರಿ**

**BLANK PAGE**

# ಮುನ್ನುಡಿ

ಡೆಲ್ಲಿಯ 'ಆರ್ಗನೈಸರ್' ಪತ್ರಿಕೆಯ ದಿನಚರಿ ಅಂಕಣಗಳಲ್ಲಿ ಪ್ರಕಟಗೊಂಡಿರುವ ಬರಹಗಳ ಈ ಸಂಕಲನಕ್ಕೆ ಮುನ್ನುಡಿಯ ರೂಪದಲ್ಲಿ ನಾನು ಕೆಲವು ಅಭಿಪ್ರಾಯಗಳನ್ನು ಬರೆದುಕೊಡಬೇಕೆಂದು ಶ್ರೀ ನಾನಾಜಿ ದೇಶಮುಖ್ ಮತ್ತು ನನ್ನ ಕೆಲವು ಸ್ನೇಹಿತರು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಕೂಡಲೇ ಒಪ್ಪಿಕೊಂಡೆ. ಶ್ರೀ ದೀನ್ ದಯಾಳ್ ಉಪಾಧ್ಯಾಯರು ಜನಸಂಘದ ಮಹಾನಾಯಕರಲ್ಲಿ ಒಬ್ಬರಾಗಿದ್ದರು ಮತ್ತು ರಾಜಕೀಯ ಜೀವನದ ಪೂರ್ಣಾವಧಿಯೂ ಕಾಂಗ್ರೆಸ್ಸಿನ ಸದಸ್ಯನಾಗಿಯೇ ಇರುವ ನನಗೆ ಈ ರೀತಿಯ ಬೇಡಿಕೆಯನ್ನು ಮಂಡಿಸುವುದಾಗಲೀ, ಅದನ್ನು ಒಪ್ಪಿಕೊಳ್ಳುವುದಾಗಲೀ ಕೆಲವು ಮಂದಿಗೆ ಆಶ್ಚರ್ಯವನ್ನುಂಟು ಮಾಡಬಹುದು. ನಾನು ಇದನ್ನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ, ವಾಸ್ತವಾಂಶವೆಂದರೆ, ಇದು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವು ಬೇರೂರಬೇಕಾದರೆ, ನಾವೆಲ್ಲರೂ ಅನುಸರಿಸಲು ಕಲಿಯಬೇಕಾಗಿರುವ ಸಹನೆ ಎಂಬ ಸದ್ಗುಣದ, ಸರಳ ಅಭಿವ್ಯಕ್ತಿ ಮಾತ್ರ. ಸತ್ಯಕ್ಕೆ ಏಕಸ್ವಾಮ್ಯದ ಹಕ್ಕನ್ನು ಯಾರೂ ಸಾಧಿಸಲಾರರು. ಪರಸ್ಪರ ವಿರೋಧವಾಗಿರುವುವೆಂದು ತೋರುವ, ಎಲ್ಲ ವಿಭಿನ್ನ ಮುಖಗಳನ್ನೂ ಅರಿಯುವುದರ ಮೂಲಕ ಸತ್ಯವನ್ನು ಸಮೀಪಿಸಬಹುದು. ನಿಜವಾದ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ, ಚೆನ್ನಾಗಿ ತಿಳಿದಿರುವ ನಿರ್ದಿಷ್ಟ ಪರಿಮಿತಿಗಳಲ್ಲಿ, ತನಗೆ ತಿಳಿದಿರುವಮಟ್ಟಿಗೆ ಸತ್ಯವನ್ನು ಅಭಿವ್ಯಕ್ತಿಸುವ ಸಂಪೂರ್ಣ ಹಕ್ಕು ಮತ್ತು ಕರ್ತವ್ಯಗಳಿರಬೇಕು ಮತ್ತು ತನ್ನಂತೆಯೇ ಬೇರೆ ಪ್ರತಿ ವ್ಯಕ್ತಿಗೂ ಇಂತಹುದೇ ಸ್ವಾತಂತ್ರ್ಯವಿರುವಂತೆ ನೋಡಿಕೊಳ್ಳಬೇಕು. ಹೀಗೆ, ನಮ್ಮಲ್ಲಿ ಪ್ರತಿಯೊಬ್ಬರಿಂದಲೂ ಸಂಗ್ರಹಿಸಲ್ಪಟ್ಟ ವಿಭಿನ್ನ ತುಣುಕುಗಳನ್ನು, ಚೂರುಗಳನ್ನು ಪ್ರಾಮಾಣಿಕವಾಗಿ ಒಟ್ಟುಗೂಡಿಸುವುದರಿಂದ ಮಾತ್ರವೇ ನಾವು, ಅಸಂಪಾತ (asymptotic) ರೇಖೆಯನ್ನು ತಲುಪುವಂತೆ ಸತ್ಯದ ಹತ್ತಿರ ಹತ್ತಿರ ತಲುಪಬಹುದಾದ ಪ್ರಯತ್ನ ಮಾಡಬಹುದು. ಅತ್ಯುತ್ತಮ ರೀತಿಯಲ್ಲಿ ಮಾನವಕುಲದ ಸೇವೆ ಮಾಡಲು ಸಹಾಯಕವಾಗುವ ಅರಿವನ್ನು ಪಡೆಯುವ ಸಲುವಾಗಿ, ಆಲೋಚನಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಹಾಗೂ ಪರಸ್ಪರ ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳುವ ಪ್ರತಿಯೊಬ್ಬನಿಗೂ ಇದೇ ಮನೋಧರ್ಮವು ಇರಬೇಕಾಗುತ್ತದೆ. ಕೇವಲ ಬೇರೆಯವರ

ಮೇಲೆ ವಿಜಯ ಸಂಪಾದಿಸುವುದರಲ್ಲಿ ಮಾತ್ರ ಆಸಕ್ತರಾಗಿರುವವರಿಂದ ಪ್ರಜಾಪ್ರಭುತ್ವದ ಸೇವೆಗೆ ಯಾವುದೇ ಸಹಾಯವೂ ಇಲ್ಲ. ಅಲ್ಲದೇ ಸನಾತನ ಸಂತರು (ಋಷಿಗಳು) ಹೇಳುವಂತೆ– **ವಾದೇ ವಾದೇ ಜಾಯತೇ ತತ್ತ್ವ ಬೋಧಃ;** ನಮಗೆ ತತ್ತ್ವ ಬೋಧೆ ಬೇಕೆಂದರೆ ಚರ್ಚೆ ಮಾಡಬೇಕು ಆದರೆ, ಆ ಚರ್ಚೆಯಲ್ಲಿ ಭಾಗವಹಿಸುವವರು 'ತತ್ತ್ವಜಿಜ್ಞಾಸ"ದಿಂದ ಪ್ರೇರಿತರಾಗಿರಬೇಕೇ ಹೊರತು 'ವಿಜಗೀಷ' ಎಂಬ ಇನ್ನೊಬ್ಬರ ಮೇಲೆ ವಿಜಯ ಸಾಧಿಸುವ ಆಸೆಯಿಂದಲ್ಲ.

ಈ ಸಂಕಲನದ ಬರಹಗಳನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು, ರಾಜಕೀಯ ವಾದ–ವಿವಾದಗಳಿಗೆ, ಮುಖ್ಯವಾಗಿ ವಾರ್ತಾಪತ್ರಿಕೆಗಳ ವಿವಾದಾತ್ಮಕ ಸಂಗತಿಗಳಿಗೆ ಮೀಸಲಾಗಿದೆ. ಈ ಲೇಖನಗಳಲ್ಲಿನ ವಸ್ತುಗಳು ತಮ್ಮಲ್ಲಿ ತಾವು ಯಾವುದೇ ಪ್ರಾಮುಖ್ಯತೆಯನ್ನು ಪಡೆದಿಲ್ಲ. ಒಂದು ವಿಧದಲ್ಲಿ, ಅವು ಬರೆಯಲ್ಪಟ್ಟ ಸಂದರ್ಭಗಳಲ್ಲಿ ಮಾತ್ರ ಅರ್ಥಪೂರ್ಣವಾಗಿದ್ದವು. ಚುನಾವಣಾ ಕ್ಷೇತ್ರಗಳಲ್ಲಿ ನಡೆಸುವ ರಾಜಕೀಯ ಕದನಗಳಲ್ಲಿ ಕಂಡುಬರುವ ವಾದ–ಪ್ರತಿವಾದಗಳಂತಹ ಉತ್ಸಾಹದಿಂದ ಬಹುಮಟ್ಟಿಗೆ ಅವು ಜೀವಂತವಾಗಿವೆ. ಅವು ಮುಂದಿನ ದಿನಗಳಲ್ಲಿ ಕೂಡ ಒಂದು ಉಪಯುಕ್ತ ಉದ್ದೇಶಕ್ಕೆ ನೆರವಾಗಬಹುದು ಈ ಸಂಪುಟದಲ್ಲಿ ಅವುಗಳ ಸೇರ್ಪಡೆಯನ್ನು ಸಮರ್ಥಿಸಲು ನಾನು ಒಂದು ಕಾರಣವನ್ನು ನೀಡುತ್ತೇನೆ. ಅದೆಂದರೆ, ಅಂದಿನ ಹೋರಾಟಗಳಲ್ಲಿ ಭಾಗವಹಿಸಿದ್ದವರ ಮಾನಸಿಕ ಭಾವಾವೇಶ, ಅವರನ್ನು ಚೈತನ್ಯಪೂರ್ಣವಾಗಿರಿಸಿದ್ದ ಆ ಉತ್ಸಾಹಗಳನ್ನು ಮುಂದಿನ ಕಾಲಮಾನದ ಓದುಗರಿಗೆ, ಇವು ಪರಿಚಯಿಸುವುವು.

ಇಲ್ಲದಿದ್ದರೆ, ಮಾನಸಿಕ ಸಂಗತಿಗಳ ವಿವರಗಳಿರದ, ಅಂದಿನ ದಿನಗಳ ಘಟನೆಗಳ ಕೇವಲವರದಿಯು ಹುರುಪಿರದ ತೀರಾ ಬೇಸರದ ಓದಿನಲ್ಲಿ ಪರ್ಯವಸಾನವಾಗಬಹುದು.

ಮೊದಲನೆಯ ಭಾಗದ ಬರಹಗಳಿಗೆ ಸಮೀಪವಾಗಿ, ಅದಕ್ಕೆ ಹೊಂದಿ ಕೊಂಡಿರುವಂತಹ, ಆದರೆ ಸ್ವಲ್ಪ ದೀರ್ಘವಾದ, ಹೆಚ್ಚು ಆಳವಾಗಿರುವ ಮತ್ತು ಆಲೋಚನೆಗೆ ಹೆಚ್ಚು ಆಹಾರ ಒದಗಿಸುವಂತಹ ಎರಡನೆಯ ಭಾಗದ ಬರಹಗಳಿವೆ. ಈ ರೀತಿಯ ವಸ್ತುವು, ಒಂದು ದಶಕದ ನಂತರ, ಅಂದಿನ ದಿನಗಳ ಇತಿಹಾಸವನ್ನು ತಿಳಿಯಬೇಕೆನ್ನುವ ಯಾರಿಗೇ ಆದರೂ ಬಹಳ ಅಮೂಲ್ಯವಾದದ್ದಾಗಿವೆ. ಇತಿಹಾಸದ ಬಗೆಗೆ ತಿಳಿಯಲು ಇಚ್ಛಿಸುವ ವ್ಯಕ್ತಿಯು ಈ ಲೇಖನಗಳಿಂದ, ಹಿಂದೆ ಏನಾಯಿತು, ಏಕೆ ಆಯಿತು ಎಂಬ ಮಾಹಿತಿಯನ್ನು ಮಾತ್ರವೇ ತಿಳಿಯವುದಿಲ್ಲ. ಜೊತೆಗೆ, ಆ ಕಾಲಘಟ್ಟದಲ್ಲಿ, ನಿರ್ದಿಷ್ಟ ವ್ಯಕ್ತಿಗಳು, ನಿರ್ದಿಷ್ಟ ಘೋಷಣೆಗಳು ಜನಪ್ರಿಯ ಕಲ್ಪನೆಗಳಾಗಿ ಏಕೆ ಜನರ ಮನಸ್ಸನ್ನು ಸೆರೆಹಿಡಿದವು, ವಿವಿಧ ಪಕ್ಷಗಳು ನೀಡಿದ



ಹೇಳಿಕೆಗಳಲ್ಲಿ ವೈಚಾರಿಕತೆಯ ಪಾತ್ರವಾದರೂ ಯಾವುದು ಎಂಬ ವಿಚಾರವನ್ನು ರೂಪಿಸಿಕೊಳ್ಳಲು ಆ ವ್ಯಕ್ತಿಗೆ ಸಾಧ್ಯವಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ, ಈ ಲೇಖನಗಳು, ಯಾವುದೇ ಒಂದು ಈಚಿನ ಗತ ಇತಿಹಾಸವನ್ನು, ಸರಿಯಾದ ಕ್ರಮದಲ್ಲಿ ಜೋಡಿಸಲು ಹಾಗೂ ವಿಸ್ತಾರವಾಗಿ, ಸಂಪೂರ್ಣವಾಗಿ ಗ್ರಹಿಸಲು ಅತ್ಯವಶ್ಯಕವಾಗುವಂತಹ ಮಾಹಿತಿಗಳನ್ನು ಒದಗಿಸುತ್ತವೆ. ಅದೂ ಅಲ್ಲದೇ, ಈ ಇತ್ತೀಚಿನ ಗತ ಇತಿಹಾಸವನ್ನು ರೂಪಿಸುವುದರಲ್ಲಿ ನಾವೆಲ್ಲರೂ ಸಹ ನಮ್ಮ ನಮ್ಮ ತಿಳಿವಳಿಕೆಗೆ ಅನುಸಾರವಾಗಿ ಕಾಣಿಕೆ ನೀಡಿದ್ದೇವೆ. ಎಷ್ಟೇ ಸಾಧಾರಣವಾದದ್ದಾದರೂ, ಆ ಇತಿಹಾಸವು ಏನಾಗಿದ್ದಿತೋ ಅದನ್ನು ನಿರ್ಮಿಸುವುದರಲ್ಲಿಯೂ ಮತ್ತು ಅದರಿಂದ ಇಂದು ನಾವು ಬದುಕುತ್ತಿರುವ ವರ್ತಮಾನವನ್ನು ಅರಳಿಸುವುದರಲ್ಲಿಯೂ ನಾವು ನಮ್ಮ ಪಾತ್ರಗಳನ್ನು ನಿರ್ವಹಿಸಿದ್ದೇವೆ. ಇದೇ ಇತ್ತೀಚಿನ ಗತ ಇತಿಹಾಸವೇ, ನಮ್ಮ ಸ್ವಾತಂತ್ರ್ಯಸಾಧನೆಯ ನಂತರ ಆವಿರ್ಭವಿಸಿದ ಇದೇ ಈಚಿನ ಇತಿಹಾಸವೇ ನಮ್ಮ ಭವಿಷ್ಯಕ್ಕೆ ಪ್ರಗತಿಯ ಸೋಪಾನವಾಗುವುದು ಮತ್ತು ಇದನ್ನು ನಾವೆಲ್ಲರೂ ವಿಭಿನ್ನ ರೀತಿಯಲ್ಲಿ ಕನಸುಕಾಣುತ್ತೇವೆ. ಆದ್ದರಿಂದ, ವಿಶೇಷವಾಗಿ ಈಗ ಈ ವರ್ತಮಾನದಲ್ಲಿ, ಧೂಳು, ಕಾವುಗಳು, ಅಡಗಿ ತಿಳಿಗೊಂಡಿರುವಾಗ, ನಾವು ಸಮಾಧಾನಚಿತ್ತರಾಗಿ, ಶಾಂತಿಯಿಂದ ಇತ್ತೀಚಿನ ಗತಇತಿಹಾಸವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ಅದನ್ನು ಅಪಾರ್ಥ ಮಾಡಿಕೊಳ್ಳುವುದರಿಂದಲೂ, ವಿವೇಚನೆಯ ಸ್ಥಾನವನ್ನು ಭಾವಾವೇಶ, ಭಾವೋದ್ವೇಗಕ್ಕೆ ಬಿಟ್ಟು ಕೊಡುವುದರಿಂದಲೂ, ನಾವು ಭವಿಷ್ಯವನ್ನು ಸಂಪೂರ್ಣವಾಗಿ ಅನಪೇಕ್ಷಣೀಯದ್ದಾಗಿ ರೂಪಿಸಿಬಿಡಬಹುದು. ಆದ್ದರಿಂದ, ಈ ವಿಷಯವಾಗಿ ಯಾರು ಏನನ್ನು ಹೇಳುವುದಾದರೂ, ಅದಕ್ಕೆ ಆ ವ್ಯಕ್ತಿಗೆ ಸಂಪೂರ್ಣ ಅವಕಾಶ ನೀಡುವುದು ಅಗತ್ಯ. ಮುಕ್ತ ಮತ್ತು ಸ್ವತಂತ್ರ ಚರ್ಚೆಗೆ ಜನರ ಮುಂದೆ ಬರುವ ಯಾವುದೇ ಒಂದು ವಿಚಾರಕ್ಕೂ ಸಂಪೂರ್ಣ ಅವಕಾಶ ನೀಡುವುದು ಅವಶ್ಯ. ಈ ಕಾರಣದಿಂದಾಗಿಯೇ ದಿವಂಗತ ಶ್ರೀ ದೀನ್ ದಯಾಳ್ ಉಪಾಧ್ಯಾಯ ಅವರ ಆಲೋಚನೆಗಳಿಗೆ ಸಂಪೂರ್ಣ ಪ್ರಚಾರ ಒದಗಿಸುವ ಸಲುವಾಗಿ ಕೋರಿದ ನೆರವಿಗೆ ನಾನು ಪ್ರತಿಸ್ಪಂದಿಸದಿದ್ದರೆ ನಾನು ನನ್ನ ಕರ್ತವ್ಯದಲ್ಲಿ ವಿಫಲನಾಗುತ್ತೇನೆಂದು ನಾನು ಭಾವಿಸಿದೆ. ಅಷ್ಟೇ ಅಲ್ಲದೇ ಈ ಆಲೋಚನೆ ಕೇವಲ ಯಾರೋ ಒಬ್ಬ ಸಾಮಾನ್ಯ ಮನುಷ್ಯನದಲ್ಲ ಎಂಬುದನ್ನು ನಾವು ನೆನಪಿಡಬೇಕಾಗಿದೆ. ನಮ್ಮ ಕಾಲದ ಅತ್ಯಂತ ಹೆಸರಾಂತ ರಾಜಕೀಯ ನಾಯಕರೊಬ್ಬರ ಆಲೋಚನೆಗಳನ್ನು ಈ ಮಾತುಗಳು ಹಿಡಿದಿಟ್ಟಿವೆ; ತನ್ನ ದೇಶದ ಅತ್ಯುನ್ನತ ಒಳಿತಿಗಾಗಿ ತನ್ನ ಜೀವನವನ್ನು ಮುಡುಪಿಟ್ಟಂತಹ ಹಾಗೂ ಸಾವಿರಾರು ವಿದ್ಯಾವಂತರನ್ನು ತನ್ನ ಗಂಭೀರ ತೂಕದ ಮಾತುಗಳಿಂದ ಪ್ರಭಾವಿಸಿದಂತಹ ಮತ್ತು ಯಾವುದೇ ರೀತಿಯ ದೋಷಾರೋಪಣೆ

ಮಾಡಲು ಸಾಧ್ಯವಿಲ್ಲದ ಚಾರಿತ್ರ್ಯವುಳ್ಳವರಾಗಿದ್ದವರು ಅವರು. ಅವರ ಅಭಿಪ್ರಾಯಗಳೊಡನೆ ನಮಗೆ ಸಹಮತವಿರದಿದ್ದಲ್ಲಿ, ಅವುಗಳಿಗೆ ಸಲ್ಲಬೇಕಾದ ಗೌರವದಿಂದ ಕಂಡು, ಅವುಗಳ ಸೂಚನೆ, ಅರ್ಥಗಳ ಬಗೆಗೆ ಆಲೋಚಿಸೋಣ. ಚುನಾವಣೆಗಳು ಮುಂತಾದ ಇತರ ತಾತ್ಕಾಲಿಕ ಪ್ರಾಮುಖ್ಯತೆಯ ಘಟನೆಗಳು ಮುಗಿದಿವೆ, ಆದರೆ ದೇಶ ಉಳಿದಿದೆ; ಯಾವುದರ ಹೆಸರಿನಲ್ಲಿ ಈ ಎಲ್ಲ ಚಟುವಟಿಕೆಗಳನ್ನು ನಡೆಸಲಾಗಿದ್ದಿತೋ ಆ ದೇಶ ಉಳಿದಿದೆ. ಕತ್ತಿಗಳನ್ನು ಕೈಲಿ ಹಿಡಿದುಕೊಂಡೇ ಧರೆಗುರುಳಿದ ಹಿಂದಿನ ಹಿರಿಯ ಹೋರಾಟಗಾರರು ಪ್ರಪಂಚದಿಂದ, ಪಡೆಯಬಹುದಾದಂತಹ ಜ್ಞಾನ, ಅನುಭವಗಳ ಬೆಳಕನ್ನು ಪಡೆದುಕೊಂಡು, ನಾವು ಇನ್ನೂ ದೇಶದ ಕಾರ್ಯವನ್ನು ಮಾಡಬೇಕಾಗಿದೆ. ಈ ಮಹಾನುಭಾವರು ಯಾವ ಪಕ್ಷಕ್ಕೆ ಸೇರಿದ್ದರು ಎಂಬುದರ ಬಗೆಗೆ ಚಿಂತಿಸಬೇಕಾಗಿಲ್ಲ. ಅವರು ತಮ್ಮ ಹೃದಯದಲ್ಲಿ ದ್ವೇಷ, ಹಗೆತನಗಳಿಲ್ಲದೇ ಶುದ್ಧರಾಗಿ, ನಿಸ್ಪೃಹರಾಗಿ ಹೋರಾಡಿದ್ದರು. ಅವರು ಪರಸ್ಪರರಲ್ಲಿ ಸಭ್ಯ ವ್ಯಕ್ತಿಗಳನ್ನು ಗುರುತಿಸಿ ಮನ್ನಿಸುತ್ತಿದ್ದರು. ಹಾಗೊಮ್ಮೆ ಯಾವುದಾದರೂ ಸಂದರ್ಭದಲ್ಲಿ ಅವರೇನಾದರೂ, ತಾತ್ಕಾಲಿಕವಾಗಿ ಮಾನವೀಯ ದೌರ್ಬಲ್ಯಕ್ಕೆ ಶರಣಾಗಿದ್ದುದ್ದಾದರೆ, ನಾವು, ಶ್ರೀರಾಮಚಂದ್ರನು ವಿಭೀಷಣನಿಗೆ ಹೇಳಿದ 'ಮರಣಾಂತು ನಿರ್ವೈರಾಣಿ' ಎಂಬ ಬುದ್ಧಿಮಾತುಗಳನ್ನು ನೆನಪು ಮಾಡಿಕೊಳ್ಳೋಣ.

ಈ ಬರಹಗಳಲ್ಲಿ, ದುರದೃಷ್ಟವಶಾತ್ ಬಹಳ ಕಡಿಮೆ ಸಂಖ್ಯೆಯಲ್ಲಿರುವ ಮೂರನೆಯ ವರ್ಗಕ್ಕೆ ಸೇರುವ ಲೇಖನಗಳ ಬಗೆಗೂ ನಾನು ಹೇಳಬೇಕಾಗಿದೆ. ಇವು ನಿರ್ದಿಷ್ಟ ಸಮಯದ ತಾತ್ಕಾಲಿಕ ವ್ಯವಸ್ಥೆ, ಸಿದ್ಧತೆಗಳಿಂದ, ಪರಿಸ್ಥಿತಿಗಳಿಂದ ನಿರ್ದೇಶಿಸಲ್ಪಟ್ಟು ಮೂಡಿರುವಂತಹವಾದರೂ, ಈ ವರ್ತಮಾನ ಕಾಲದ ಪರಿಧಿಯನ್ನು ಮೀರಿ, ಅದರ ಆಚೆಗೂ ಅಮೂಲ್ಯವಾಗುತ್ತವೆ. ಉಪಾಧ್ಯಾಯರು ತಾವೇ ಇದನ್ನು ಅರಿತಿದ್ದರೋ ಅಥವಾ ಇದನ್ನು ಅರಿತುಕೊಳ್ಳಲು ಅವರಿಗೆ ಸಮಯವಿತ್ತೋ ಇಲ್ಲವೋ ಎಂದು ನಾನು ಆಲೋಚಿಸುತ್ತೇನೆ. ಉದಾಹರಣೆಗಾಗಿ ನಾನು ಇಲ್ಲಿ ಒಂದು ಲೇಖನದ ಬಗೆಗೆ ಉಲ್ಲೇಖಿಸುತ್ತೇನೆ. "ನಿಮ್ಮ ವೋಟು' ಎಂಬ ಶೀರ್ಷಿಕೆಯ ಅಡಿಯಲ್ಲಿರುವ ಲೇಖನವು, ವರ್ತಮಾನದ ಮತದಾರರನ್ನು ಸಂಬೋಧಿಸಿರುವಂತಹದಾಗಿದೆ. ಆದರೆ ಪ್ರಾಸಂಗಿಕವಾಗಿ, ಆ ಲೇಖನವು, ರಾಜಕೀಯ ಶಾಸ್ತ್ರದ ಅತ್ಯಂತ ಮುಖ್ಯವಾದ ಸಮಸ್ಯೆಗಳನ್ನು ಒಳಗೊಂಡಿರುವಂತಹ, ಸಮಸ್ಯೆಗಳನ್ನು ನಿರ್ಮಿಸುವಂತಹ ವಿಷಯಗಳನ್ನು ಸ್ಪರ್ಶಿಸುತ್ತದೆ. ಈ ಸಮಸ್ಯೆಗಳ ಸಮರ್ಪಕ ತಿಳುವಳಿಕೆಯ ಮೇಲೆ ಒಂದು ಸಮಾಜದ ವೈಜ್ಞಾನಿಕ ವ್ಯವಸ್ಥೆಯು ಅವಲಂಬಿಸಿರುತ್ತದೆ. ಕೇವಲ ವರ್ತಮಾನ ಕಾಲದವರು ಮಾತ್ರವಲ್ಲ, ರಾಜಕೀಯ ಸಿದ್ಧಾಂತದ ಬಗೆಗೆ ಹಲವಾರು ಅತ್ಯಂತ ಶ್ರೇಷ್ಠ ಲೇಖಕರು, ಉದಾಹರಣೆಗೆ ಸನಾತನ ಕಾಲದ ಭೀಷ್ಮ



ಪಿತಾಮಹರಂತಹವರು ಕೂಡ ಇವುಗಳ ಬಗೆಗೆ ಉಲ್ಲೇಖಿಸಿದ್ದಾರೆ. ಹಾಗೆಯೇ ಇತ್ತೀಚಿನ ಕಾಲದಲ್ಲಿ ಮಹಾತ್ಮ ಗಾಂಧಿ ಮತ್ತು ಡಾ. ಭಗವಾನ್ ದಾಸ್‌ರಂತಹ ಮಹನೀಯರು ಕೂಡ ಈ ವಿಷಯದ ಬಗೆಗೆ ಉಲ್ಲೇಖಿಸಿದ್ದಾರೆ. ಮತದಾನ ಮಾಡಲು ಯಾರು ಅರ್ಹರು ಮತ್ತು ಮತ ಪಡೆಯಲು ಯಾರು ಅರ್ಹರು ಎಂಬುವು ಮುಖ್ಯ ಪ್ರಶ್ನೆಗಳು. "ಮತವನ್ನು ಪಡೆ" ಎಂಬ ಪದಗುಚ್ಛವೇ ಮಹತ್ವಪೂರ್ಣವಾಗಿದ್ದು, ಸೂಚನೆಗಳ ಪ್ರಪಂಚವನ್ನೇ ತನ್ನಲ್ಲಿ ಒಳಗೊಂಡಿದೆ. ಉಪಾಧ್ಯಾಯರ ಪ್ರಶಂಸಕರಲ್ಲಿ ಕೆಲವರಾದರೂ, ಈ ಪ್ರಶ್ನೆಗಳನ್ನು ತೆಗೆದುಕೊಂಡು, ಈ ಲೇಖನದ ಆಳವಾದ ಅಂತರಾರ್ಥಗಳ ಬಗೆಗೆ ಶೋಧನೆಯನ್ನು ಕೈಗೊಳ್ಳುವರೆಂದು ನಾನು ನಂಬುತ್ತೇನೆ.

ಈ ಲೇಖನಗಳಿಗೆ ನನ್ನಿಂದ ಇದಕ್ಕಿಂತಲೂ ಹೆಚ್ಚಿನದಾದ ಮುನ್ನುಡಿಯು ಬೇಕೆಂದು ನಾನು ಆಲೋಚಿಸುವುದಿಲ್ಲ. ಶೀಘ್ರದಲ್ಲಿಯೇ ಈ ಬರಹಗಳು ಸಾರ್ವಜನಿಕರಿಗೆ ದೊರಕುತ್ತವೆ. ಈ ಪ್ರಕ್ರಿಯೆಯಲ್ಲಿ ತೀರಾ ಸ್ವಲ್ಪ ಮಟ್ಟಿಗಾದರೂ ಜೊತೆಯಾಗಿರುವುದಕ್ಕಾಗಿ ನಾನು ಹರ್ಷಿಸುತ್ತೇನೆ.

ಕಾಶೀ ವಿದ್ಯಾಪೀಠ **ಸಂಪೂರ್ಣಾನಂದ**
ವಾರಾಣಾಸಿ – ೨ ಕುಲಪತಿಗಳು

# ಜೀವನ ವೃತ್ತಾಂತದ ಸ್ಥೂಲ ಚಿತ್ರಣ

ಎಂಥ ಕಿರಿಹರೆಯ, ಎಂಥ ನ್ಯಾಯನಿಷ್ಠ
ಸಹಜ ಸದ್ಗುಣಶೀಲ
ಶತ್ರುವಿರದ ಮಹಾಶ್ರೇಷ್ಠ– **ಬೈರನ್**

ಕೆಲವರು ಜನ್ಮದಿಂದಲೇ ಶ್ರೇಷ್ಠರಾಗಿರುತ್ತಾರೆ, ಕೆಲವರು ಮಹತ್ತನ್ನೂ ಸಾಧಿಸುತ್ತಾರೆ, ಮತ್ತು ಕೆಲವರಿಗೆ ಹೊರೆಸಲಾಗುತ್ತದೆ ಎಂದು ಹೇಳಲಾಗಿದೆ. ಪಂಡಿತ ದೀನದಯಾಳ್ ಉಪಾಧ್ಯಾಯರು ಎರಡನೆಯ ಗುಂಪಿಗೆ ಸೇರಿದವರು. ಹುಟ್ಟಿನಿಂದ, ಸಂಪತ್ತಿನಿಂದ ಅಥವಾ ಅಧಿಕಾರ ಪದವಿಗಳಿಂದ ದೊರಕುವಂತಹ ಯಾವ ಅನುಕೂಲವೂ ಇರದೇ ಪ್ರಯಾಣ ಆರಂಭಿಸಿದ ಅವರು ಭಾರತದ ರಾಜಕೀಯದ ಮುಂಚೂಣಿಯಲ್ಲಿ ಅಗ್ರಸ್ಥಾನಕ್ಕೆ ಏರಿದರು. ಅನೇಕ ಪ್ರಮುಖ ನಾಯಕರು ತಮ್ಮ ಮರಣಾನಂತರ ಮರೆತುಹೋಗುತ್ತಾರೆ. ಆದರೆ, ಮರಣಾನಂತರ ನಿಜವಾಗಿಯೂ ಮಹಾನ್ ಎಂಬುವವರ ಸಾಲಿಗೆ ಸೇರಿ, ಉನ್ನತ ಸ್ಥಾನಕ್ಕೆ ಏರುವುದರ ಗುಂಪಿಗೆ ದೀನದಯಾಳಜಿ ಸೇರಿದವರು.

೧೯೧೬ನೆಯ ಸೆಪ್ಟೆಂಬರ್ ೨೫ರಂದು [ವಿಕ್ರಮ ಸಂವತ್ಸರ ೧೯೭೩ (ಚೈತ್ರ) ಶಾಲಿವಾಹನಶಕೆ, ೧೮೩೮, ಭಾದ್ರಪದ–ಅಶ್ವಿನಿ, ಕೃಷ್ಣಪಕ್ಷ ೧೩, ಸೋಮವಾರ] ಜಯಪುರ ಅಜಮೇರ್ ರೈಲ್ವೆ ದಾರಿಯಲ್ಲಿರುವ ಧನಕಿಯಾ ಗ್ರಾಮದಲ್ಲಿ ದೀನ್‌ದಯಾಳ್‌ರು ಜನ್ಮತಾಳಿದರು. ಅವರ ತಾಯಿಯ ತಂದೆ ಶ್ರೀ ಚುನ್ನಿಲಾಲ್ ಶುಕ್ಲ ಅವರು ಅಲ್ಲಿಯ ಸ್ಟೇಷನ್ ಮಾಸ್ತರ್ ಆಗಿದ್ದರು. ದೀನದಯಾಳರ ತಂದೆ ಶ್ರೀ ಭಗವತೀ ಪ್ರಸಾದ್‌ರು, ಮಥುರಾ ಜಿಲ್ಲೆಯ ಫರಾಹ್ ಗ್ರಾಮದವರು. (ನಾಗ್ಲಾಚಂದ್ರಭಾನ್) ಅವರು ಮಥರಾದ ಸಮೀಪದ ಜಲೇಸರ್ ರೋಡ್ ಸ್ಟೇಷನ್‌ನ ಸ್ಟೇಷನ್ ಮಾಸ್ಟರ್ ಆಗಿದ್ದರು. ದೀನದಯಾಳರ ತಂದೆಯ ತಂದೆ ಪಂಡಿತ ಹರಿರಾಮ್ ಅವರು ಪ್ರಸಿದ್ಧ ಜ್ಯೋತಿಷಿಯಾಗಿದ್ದರು. ಅವರು ಮರಣ ಹೊಂದಿದಾಗ ಆಗ್ರಾ ಮತ್ತು ಮಥುರಾದಲ್ಲಿ ಮೆರವಣಿಗೆ ನಡೆದಿತ್ತು.

ದೀನ್ ದಯಾಳರು ಕೇವಲ ಮೂರು ವರ್ಷಗಳಿಗೂ ಕಡಿಮೆ ವಯಸ್ಸಿನವರಾಗಿದ್ದಾಗಲೇ ಭಗವತೀ ಪ್ರಸಾದರು ಮರಣ ಹೊಂದಿದರು. ನಂತರ ಅವರು ತಮ್ಮ ತಾಯಿಯ ಜೊತೆ ತಾತನ ಮನೆಗೆ ಹೋಗಿ (ತಾಯಿಯ ತಂದೆ)



ಅಲ್ಲಿಯೇ ಇದ್ದರು. ಆದರೆ ಅವರಿನ್ನೂ ಎಂಟುವರ್ಷ ವಯಸ್ಸಿನವರಾಗುವುದಕ್ಕು ಮೊದಲೇ, ತಮ್ಮ ತಾಯಿಯನ್ನೂ ಕಳೆದುಕೊಂಡರು. ಆನಂತರ ದೀನ್ ದಯಾಳರನ್ನು, ಫ್ರಾಂಟಿಯರ್ ಮೇಲ್‌ನಲ್ಲಿ ರೈಲ್ವೆಯ ಗಾರ್ಡ್ ಆಗಿದ್ದ ಶ್ರೀ ರಾಧಾ ರಮಣ ಶುಕ್ಲಾ ಅವರು ಪೋಷಿಸಿದರು.

ದೀನ್ ದಯಾಳ ಅಸಾಧಾರಣ ಬುದ್ಧಿಶಕ್ತಿಯ ಹುಡುಗ. ಬುದ್ಧಿಶಕ್ತಿ ಮತ್ತು ಧೈರ್ಯ ಅವರಿಗೆ ಸಂಪೂರ್ಣ ಮೈಗೂಡಿತ್ತು. ಸಿಕಾರದ ಕಲ್ಯಾಣ ಹೈಸ್ಕೂಲಿನಿಂದ ಮೆಟ್ರಿಕ್ ಪರೀಕ್ಷೆಯಲ್ಲಿ, ಅಜಮೇರಿನ ಬೋರ್ಡ್ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಉತ್ತೀರ್ಣರಾದರು. ಬೋರ್ಡ್‌ನಿಂದಲೂ, ಶಾಲೆಯಿಂದಲೂ, ಚಿನ್ನದ ಪದಕಗಳನ್ನು ಅವರಿಗೆ ನೀಡಲಾಯಿತು. ಎರಡು ವರ್ಷಗಳ ನಂತರ ಪಿಲಾನಿಯ ಬಿರ್ಲಾ ಕಾಲೇಜಿನ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಕಾಲೇಜಿಗೆ ಪ್ರಥಮರಾಗಿ ಉತ್ತೀರ್ಣರಾದರು. ಪುನಃ, ಬೋರ್ಡ್‌ನಿಂದ ಮತ್ತು ಕಾಲೇಜಿನಿಂದ ಎರಡು ಚಿನ್ನದ ಪದಕಗಳನ್ನು ಪಡೆದರು. ಕಾನ್‌ಪುರದ ಎಸ್.ಡಿ.ಕಾಲೇಜಿನಲ್ಲಿ ಗಣಿತಶಾಸ್ತ್ರದ ಬಿ.ಎ. ಪರೀಕ್ಷೆಯಲ್ಲಿ ಕೂಡ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದರು. ಗಣಿತ ಶಾಸ್ತ್ರದಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡಲು (ಎಂ.ಎ.) ಪಂಡಿತ್‌ಜೀಯವರು ಆಗ್ರಾದ ಸೇಂಟ್‌ಜಾನ್ ಕಾಲೇಜನ್ನು ಸೇರಿದರು. ಆದರೆ ಮಧ್ಯದಲ್ಲಿಯೇ ಅದನ್ನು ಬಿಟ್ಟು ಎಲ್.ಟಿ. ಅಧ್ಯಯನ ಮಾಡಲು ಅಲಹಾಬಾದಿಗೆ ಹೋದರು. ತಮ್ಮ ಪೂರ್ತಿ ಕಾಲೇಜು ವಿದ್ಯಾಭ್ಯಾಸವನ್ನು ಅವರು ಮಾಸಿಕ ವಿದ್ಯಾರ್ಥಿವೇತನದಿಂದಲೇ ನಡೆಸಿದರು.

೧೯೩೭ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವು, ಉತ್ತರ ಪ್ರದೇಶಕ್ಕೆ ಬಂದಾಗ ಅದಕ್ಕೆ ಮೊದಲು ಸೇರಿದ ಕೆಲವರಲ್ಲಿ ದೀನ್ ದಯಾಳ್‌ರೂ ಒಬ್ಬರು. ಮತ್ತು ದೇಶದ ಅತ್ಯಂತ ವಿಸ್ತಾರವಾದ ಆ ರಾಜ್ಯದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರಬಲ ಶಕ್ತಿಯಾಗಿ ರೂಪಿಸಲು ಅವರು ಕಾರಣಕರ್ತರಾದರು.

ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ಕೂಡಲೇ ತಾವು ಯಾವುದೇ ಉದ್ಯೋಗಕ್ಕೆ ಸೇರದೇ. ಜಾಗೃತಿ ಹಾಗೂ ರಾಷ್ಟ್ರೀಯ ಏಕತೆಯಂತಹ ಆರ್.ಎಸ್.ಎಸ್.ನ ಕಾರ್ಯಗಳಿಗೆ ತಮ್ಮ ಜೀವನವನ್ನು ಮುಡುಪಾಗಿಡಲು ನಿರ್ಧರಿಸಿದರು. ಉತ್ತರ ಪ್ರದೇಶದ ಲಕ್ಷಿಮ್‌ಪುರದಲ್ಲಿ, ೧೯೪೨ರಲ್ಲಿ, ಜಿಲ್ಲಾ ಪ್ರಚಾರಕರಾಗಿ ತಮ್ಮ ಕಾರ್ಯ ಆರಂಭಿಸಿದ ಅವರು ಕೇವಲ ಐದು ವರ್ಷಗಳಲ್ಲೇ, ಭಾವುರಾವ್ ದೇವರಸ್ ಅವರಿಗೆ ಎರಡನೆಯವರಾಗಿ ಜಂಟಿ ಪ್ರಾಂತಪ್ರಚಾರಕರ ಸ್ಥಾನಕ್ಕೆ ಏರಿದರು. ೧೯೫೧ರವರೆಗೂ ಇದೇ ಸ್ಥಾನದಲ್ಲಿ ಮುಂದುವರೆದ ಅವರು, ಅದೇ ವರ್ಷ ಭಾರತೀಯ ಜನಸಂಘವು ಸ್ಥಾಪಿಸಲ್ಪಟ್ಟಾಗ, ಅವರ ಸೇವೆಯನ್ನು ಅಲ್ಲಿಗೆ ಎರವಲು ನೀಡಲಾಯಿತು. ಅವರು ಉತ್ತರಪ್ರದೇಶ ರಾಜ್ಯದ ಭಾರತೀಯ ಜನಸಂಘದ ಕಾರ್ಯದರ್ಶಿಯಾದರು.

ಮುಂದಿನ ವರ್ಷದ ಜನಸಂಘದ ಕಾನ್‌ಪುರ ಅಧಿವೇಶದಲ್ಲಿ ಡಾ. ಶ್ಯಾಮಾಪ್ರಸಾದ್ ಮುಖರ್ಜಿಯವರು ದೀನ್ ದಯಾಳ್ ಉಪಾಧ್ಯಾಯರನ್ನು, ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಗಳಾಗಿ ನಿಯೋಜಿಸಿದರು. ದೀನ್ ದಯಾಳ್ ಉಪಾಧ್ಯಾಯರ ಸಂಘಟನಾ ಸಾಮರ್ಥ್ಯದಿಂದ ಅತ್ಯಂತ ಪ್ರಭಾವಿತರಾಗಿದ್ದ ಡಾ. ಮುಖರ್ಜಿಯವರು, ಕಾನ್‌ಪುರದ ಸಮಾವೇಶದ ನಂತರ ಹೀಗೆ ಹೇಳಿದರು: "ನನ್ನ ಬಳಿ ಇಬ್ಬರು ದೀನ್ ದಯಾಳರು ಇದಿದ್ದಿರೆ ನಾನು ಭಾರತದ ರಾಜಕೀಯ ಚಹರೆಯನ್ನೇ ಬದಲಾಯಿಸಿಬಿಡುತ್ತಿದ್ದೆ.'

ದುರದೃಷ್ಟವಶಾತ್ ಡಾ. ಮುಖರ್ಜಿಯವರು ಶೀಘ್ರ ಸಮಯದಲ್ಲಿಯೇ ಮರಣಹೊಂದಿದರು. ಆದ್ದರಿಂದ ಭಾರತದ ರಾಜಕೀಯ ಚಹರೆಯನ್ನು ಬದಲಾಯಿಸುವ ಹೊಣೆಗಾರಿಕೆ ದೀನ್ ದಯಾಳರ ಮೇಲೆಯೇ ಬಿದ್ದಿತು. ಈ ಕಾರ್ಯವನ್ನು ದೀನ್ ದಯಾಳರು ಸದ್ದುಗದ್ದಲವಿರದೆ ಅತ್ಯಂತ ವಿಶಿಷ್ಟತೆಯಿಂದ ಸಾಧಿಸಿದ್ದುದು ೧೯೬೭ರ ಚುನಾವಣೆಯ ಫಲಿತಾಂಶಗಳಿಂದ ತಿಳಿದು ಬಂದು ದೇಶವನ್ನು ಅಚ್ಚರಿಗೊಳಿಸಿತು. ಅವರು ಇದನ್ನು ಭಾರತದ ಸ್ವಾತಂತ್ರ್ಯದ ನಂತರದ ಎರಡನೆಯ ಮಹಾಕ್ರಾಂತಿ ಎಂದು ವಿವರಿಸಿದರು. ಚುನಾವಣೆಯಲ್ಲಿ ಜನಸಂಘವು ದೇಶದ ಎರಡನೆಯ ದೊಡ್ಡಪಕ್ಷವಾಗಿ ಹೊರಹೊಮ್ಮಿತು. ಪಕ್ಷವು ಮೊದಲನೆಯದಾಗಿ ಹೊರಹೊಮ್ಮುವುದು ಕೇವಲ ಇನ್ನು ಕೆಲವು ವರ್ಷಗಳ ಸಂಗತಿ ಮಾತ್ರ ಎನ್ನುವುದು ಸ್ಪಷ್ಟವಾಗಿತ್ತು.

ಮಹಾನಾಯಕನ ಸ್ಥಾನಕ್ಕೇರಿದರೂ ಸರಳಜೀವಿಯಾಗಿದ್ದ ದೀನ್ ದಯಾಳರು, ತಮ್ಮ ಬಟ್ಟೆಬರೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ತಮ್ಮ ಬನಿಯನ್‌ಗಳು ಹರಿದು ತುಂಡು ತುಂಡಾಗುವ ತನಕವೂ ಅವುಗಳನ್ನು ಬದಲಾಯಿಸುತ್ತಿರಲಿಲ್ಲ. ದೀನ್‌ದಯಾಳ್ ಅವರು ಎಂದೂ ಸ್ವದೇಶೀ ಬಗೆಗೆ ಕೂಗಿ ಹೇಳಿಕೆ ನೀಡುತ್ತಿರಲಿಲ್ಲ. ಆದರೆ ಅವರು ಎಂದೂ ವಿದೇಶೀ ಕೊಳ್ಳುತ್ತಿರಲಿಲ್ಲ.

'ಪಾಂಚಜನ್ಯ' (ಸಾಪ್ತಾಹಿಕ) ಮತ್ತು 'ಸ್ವದೇಶ್' (ದೈನಿಕ)ಗಳ ಸಂಪಾದಕರಾಗಿದ್ದಾಗ ಲಕ್ನೋದಲ್ಲಿ ಅವರು ಕೇವಲ ಪತ್ರಿಕೆಗಳ ಸಂಪಾದನಾ ಕಾರ್ಯವನ್ನು ಮಾತ್ರವೇ ಮಾಡುತ್ತಿರಲಿಲ್ಲ, ಸುದ್ದಿ ಬರೆಯುತ್ತಿದ್ದರು, ಮುದ್ರಣ ಯಂತ್ರದ ಕಾರ್ಯ ನೋಡಿಕೊಳ್ಳುತ್ತಿದ್ದರು ಹಾಗೂ ಬೈಂಡರ್ ಮತ್ತು ವಿತರಣೆಕಾರನ ಕೆಲಸವನ್ನು ಕೂಡ ಅವಶ್ಯಕತೆ ಬಿದ್ದಾಗ ನಿರ್ವಹಿಸುತ್ತಿದ್ದರು! ಒಂದು ಸಂದರ್ಭ– ಸುಮಾರು ನಲವತ್ತರ ದಶಕದ ಕಡೆಯ ಭಾಗದಲ್ಲಿ–, ಚಂದ್ರಗುಪ್ತ ಮೌರ್ಯ ಚಕ್ರವರ್ತಿಯನ್ನು ಕುರಿತ ಒಂದು ಕಿರುಕಾದಂಬರಿಯನ್ನು ಹಿಂದಿಯಲ್ಲಿ ಕೇವಲ ೧೬ ಗಂಟೆಗಳ ಅವಧಿಯಲ್ಲಿ ಬರೆದಿದ್ದರು. ನಂತರ ಹಿಂದಿಯಲ್ಲಿಯೇ ಶಂಕರಾಚಾರ್ಯರ ಜೀವನಚರಿತ್ರೆಯನ್ನು ರಚಿಸಿದರು. ಮತ್ತೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪಕರಾದ ಡಾ. ಹೆಡ್ಗೆವಾರ್ ಅವರ ನಿಖರವಾದ ಜೀವನಚರಿತ್ರೆಯನ್ನು ಮರಾಠಿಯಿಂದ ಹಿಂದಿಗೆ ಅನುವಾದಿಸಿದರು.



ನೋಡುವುದಕ್ಕೆ ತೀರಾ ಸಾಧಾರಣರಂತೆ ಇದ್ದರೂ ದೀನ್ ದಯಾಳ್ ಅವರು, ತಮ್ಮ ವಿಚಾರಗಳ ಹರಹಿನಲ್ಲಿ, ತಮ್ಮ ಮಾತಿನ ತೀವ್ರ ಪ್ರಾಮಾಣಿಕತೆಯಲ್ಲಿ, ತಮ್ಮ ಕಾರ್ಯದಲ್ಲಿ ದಣಿವಿರದ ಅವಿರತ ಪ್ರಯತ್ನದಲ್ಲಿ ಹಾಗೂ ತಮ್ಮ ಜೀವನದಲ್ಲಿನ ಪಾರದರ್ಶಕ ಪಾವಿತ್ರ್ಯದಲ್ಲಿ ಹಾಗೂ ಉಳಿದೆಲ್ಲ ಸಂಗತಿಗಳಲ್ಲಿ ಅಸಾಧಾರಣರಾಗಿದ್ದರು.

ಜನಸಂಘವು ಆರಂಭವಾದ ಮೊದಲಿನಿಂದ ತಾವು ಮರಣ ಹೊಂದುವ ಕೆಲವು ತಿಂಗಳ ಹಿಂದಿನವರೆಗೂ ದೀನ್ ದಯಾಳ್ ಅವರು ಜನಸಂಘದ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಅನೇಕ ಅಧ್ಯಕ್ಷರು ಬದಲಾದರು. ಆದರೆ ಪ್ರಧಾನ ಕಾರ್ಯದರ್ಶಿ ಮಾತ್ರ ಇವರೇ ಇದ್ದರು. ಕಾರ್ಯಕರ್ತನ ನಂತರ ಕಾರ್ಯಕರ್ತನಂತೆ, ರಾಜ್ಯದ ನಂತರ ಆ ರಾಜ್ಯದಂತೆ ಅವರು ಪಕ್ಷವನ್ನು ಕಟ್ಟಿದರು. ಶ್ರೀ ವಾಜಪೇಯಿಯವರು ಹೇಳಿರುವಂತೆ, ದೀನ್ ದಯಾಳ್ ಅವರು ಸ್ವತಃ ತಾವೇ ಎಂ.ಪಿ. (ಲೋಕಸಭಾ ಸದಸ್ಯ) ಆಗಲಿಲ್ಲ. ಆದರೆ ಜನಸಂಘವನ್ನೆಲ್ಲಾ, ಅವರು ಎಂ.ಪಿ.ಗಳಾಗಿ ಮಾಡಿದರು. ಆದರೂ ಅವರು ತಮ್ಮ ಬಗೆಗಾಗಲೀ, ತಮ್ಮ ಪ್ರಯತ್ನದ ಬಗೆಗಾಗಲಿ ಮಾತನಾಡಿದುದನ್ನು ಯಾರೂ ಕೇಳಿಲ್ಲ. 'ನಾನು' ಎಂಬ ಪದವೇ ಅವರಿಗೆ ನಿಷಿದ್ಧವಾಗಿದ್ದಂತೆ ತೋರುತ್ತಿತ್ತು. ಶ್ರೀ ಯಜ್ಞದತ್ತರು ಹೇಳುವಂತೆ, ದೀನ್ ದಯಾಳ್ ಅವರ ಜೀವನವು ಪವಿತ್ರ ತ್ರಿವೇಣಿಯಂತಿದ್ದಿತು ಮತ್ತು ಸಂಗಮದಲ್ಲಿಯ ಸರಸ್ವತಿಯಂತೆ 'ತಮಸ್' ಎಂಬುದು ಅವರ ಜೀವನದಲ್ಲಿ ಅಸ್ತಿತ್ವದಲ್ಲಿಯೇ ಇರಲಿಲ್ಲ ಮತ್ತು 'ರಜಸ್' ಮತ್ತು 'ಸತ್ವ' ಗುಣಗಳು ಯಮುನೆ ಮತ್ತು ಗಂಗೆಯಂತೆ ಆಳವಾಗಿಯೂ ವ್ಯಾಪಕವಾಗಿಯೂ ಇದ್ದವು.

೧೯೬೪ರಲ್ಲಿ ಪಂಡಿತ್ ದೀನ್‌ದಯಾಳರನ್ನು ಅಮೇರಿಕಕ್ಕೆ ಭೇಟಿಕೊಡಲು ಆಹ್ವಾನಿಸಲಾಯಿತು. ಆದರೆ ವಿಚಾರಹೀನ ರಿಸರ್ವ್ ಬ್ಯಾಂಕ್, ಪಂಡಿತರಿಗೆ 'P' ಫಾರಂ ಕೊಡಲು ನಿರಾಕರಿಸಿತು. ನೆಹರೂಜಿಯವರ ವೈಯಕ್ತಿಕ ಮಧ್ಯಪ್ರವೇಶದಿಂದಾಗಿ ದೀನ್ ದಯಾಳರಿಗೆ ಫಾರಂ ಸಿಕ್ಕಿತು. ಅವರು ಈ ಅವಕಾಶವನ್ನು ಉಪಯೋಗಿಸಿಕೊಂಡು, ಯುನೈಟೆಡ್ ಕಿಂಗ್‌ಡಮ್ (U.K), ಪಶ್ಚಿಮ ಜರ್ಮನಿ ಮತ್ತು ಪೂರ್ವ ಆಫ್ರಿಕಾಗಳಿಗೆ ಭೇಟಿ ನೀಡಿದರು. ಈ ಸಮಯದಲ್ಲಿ ಅವರು ಲಂಡನ್ನಿನ, ನೈರೋಬಿ ಮತ್ತು ಬೇರೆ ಬೇರೆ ಪ್ರದೇಶದ ಭಾರತೀಯ ಸಮುದಾಯದ ಮೇಲೆ ಬಹಳ ಪ್ರಭಾವ ಬೀರಿದರು.

ವಿಶ್ವವಿದ್ಯಾಲಯದಲ್ಲಿ ಪಂಡಿತ್‌ಜೀಯವರ ಮುಖ್ಯ ಅಧ್ಯಯನದ ವಿಷಯ ಗಣಿತಶಾಸ್ತ್ರ. ಅವರ ಮೊದಲಪ್ರೀತಿಯ ವಿಷಯ ಸಂಸ್ಕೃತವಾಗಿತ್ತು. ಆದರೆ, ಸಾರ್ವಜನಿಕ ಜೀವನವನ್ನು ಪ್ರವೇಶಿಸಿದ ಕೂಡಲೇ, ಅರ್ಥಶಾಸ್ತ್ರದ ಪ್ರಾಮುಖ್ಯತೆಯನ್ನು ಅರಿತ

ಅವರು, ಯಾವುದೇ ಒಬ್ಬ ಅರ್ಥಶಾಸ್ತ್ರಜ್ಞ, ಅರ್ಥಶಾಸ್ತ್ರದ ಸಿದ್ಧಾಂತಗಳ ಪರಿಣತನಿಗಿಂತಲೂ ಉತ್ತಮವಾಗಿ ಅದನ್ನು ಅರ್ಥಮಾಡಿಕೊಳ್ಳುವವರೆಗೂ ಅಧ್ಯಯನ ಮಾಡಿದರು. ಯಾವುದೇ ಒಬ್ಬ ರಾಜಕಾರಣಿ ಅಥವಾ ಅರ್ಥಶಾಸ್ತ್ರಜ್ಞನಿಗಿಂತಲೂ ಹೆಚ್ಚು ಗಮನ ಕೊಟ್ಟು, ಅವರು ವಿವಿಧ ಯೋಜನೆಗಳನ್ನು ಅಧ್ಯಯನ ಮಾಡಿದರು. ಭಾರತೀಯ ಆರ್ಥಿಕ ಆಲೋಚನೆಗೆ, ಅವರ ಅತ್ಯಂತ ಸ್ವೋಪಜ್ಞ ಹಾಗೂ ಮೌಲಿಕ ಕೊಡುಗೆಯೆಂದರೆ ಇಂದಿನ ಸಮಾಜೋ– ಆರ್ಥಿಕ ಸಮಸ್ಯೆಗಳಿಗೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಪ್ರಸ್ತುತವಾಗುವಂತೆ ಜೋಡಿಸುವ ಏಕಾತ್ಮ ಮಾನವತಾವಾದ.

೧೯೬೮ರ, ಫೆಬ್ರವರಿ ೧೧ರಂದು, ತಾವು ಹತ್ಯೆಯಾಗುವ ಕೆಲವೇ ವಾರಗಳ ಹಿಂದೆ, ದೀನ್ ದಯಾಳ್‌ಜೀಯವರು, ಕ್ಯಾಲಿಕಟ್‌ನಲ್ಲಿ ನಡೆದ ಜನಸಂಘದ ಚರಿತ್ರಾರ್ಹ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದರು–ಅವರ ಸಾವಿನ ಸಂದರ್ಭಗಳು ಇಂದಿಗೂ ನಿಗೂಢತೆಯ ಮುಸುಕಿನಲ್ಲಿ ಮುಚ್ಚಿಹೋಗಿವೆ. ಈ ಮಹಾ ಸಮಾವೇಶದ ಬಗೆಗೆ ವ್ಯಾಖ್ಯಾನ ಮಾಡುತ್ತಾ, ಭಾರತದ ಅತ್ಯಂತ ದೊಡ್ಡ ಪತ್ರಿಕೆ 'ಮಾತೃಭೂಮಿ'ಯು ಹೀಗೆ ಬರೆಯಿತು: "ಗಂಗೆಯು ಮೂರು ದಿನಗಳವರೆಗೆ ತನ್ನ ಪಥವನ್ನು ಬದಲಾಯಿಸಿ, ಕೇರಳದ ಮೂಲಕ ಹರಿಯುತ್ತಿದ್ದಾಳೆಯೇ ಎನ್ನುವಂತೆ ತೋರುತ್ತಿತ್ತು." ಜನಸಂಘವು ದಕ್ಷಿಣದಲ್ಲಿ ಭಾರಿ ವಿಜೃಂಭಣೆಯಿಂದ ಬಂದಿಳಿದಿತ್ತು. ಇಂತಹದೊಂದು ಮಹಾಕ್ಷಣದಲ್ಲಿ, ದೀನ್ ದಯಾಳ್ ಅವರು ಕೊಲೆಯಾದರು–ಅವರಿಗಿಂತಲೂ ಮುಂಚೆ ಸ್ವಾಮಿ ದಯಾನಂದ ಸರಸ್ವತಿ, ಸ್ವಾಮಿ ಶ್ರದ್ಧಾನಂದ ಮತ್ತು ಮಹಾತ್ಮಾ ಗಾಂಧಿ, ಇವರುಗಳು ಕೊಲೆಯಾದಂತೆ.

ಗೃಹಸಚಿವ ಚವ್ಹಾಣ್‌ರು ದೀನ್ ದಯಾಳರನ್ನು 'ಆದರ್ಶ ಭಾರತೀಯ' ಎಂದು ಗೌರವಿಸಿದರು. ಆರ್.ಎಸ್.ಎಸ್.ನ ಪ್ರಧಾನ ಕಾರ್ಯದರ್ಶಿ ಬಾಳಾ ಸಾಹೇಬ್ ದೇವರಸ್ ಅವರು 'ಆದರ್ಶ ಸ್ವಯಂಸೇವಕ' ಎಂದು ವರ್ಣಿಸಿ ಅವರನ್ನು ಡಾ. ಹೆಡ್ಗೆವಾರ್‌ರೊಂದಿಗೆ ಹೋಲಿಸಿದರು. ನಾಥ್ ಪೈ ರವರು ದೀನದಯಾಳರನ್ನು ಗಾಂಧಿ, ತಿಲಕ್ ಮತ್ತು ಬೋಸ್‌ರ ರಾಷ್ಟ್ರೀಯ ಪರಂಪರೆಗೆ ಸೇರಿಸಿದರು. ಹೀರೆನ್ ಮುಖರ್ಜಿ ಅವರು 'ಅಜಾತಶತ್ರು' ಎಂದು ಕರೆದರು. ಆಚಾರ್ಯ ಕೃಪಲಾನಿಯವರು ಅವರಲ್ಲಿ 'ದೇವತಾ ಪುರುಷ'ನನ್ನು ಕಂಡರು. ಮಹರ್ಷಿ ದಧೀಚಿಯಂತೆ ಪಂಡಿತ್‌ಜೀಯುವರು, ದೇಶಸೇವೆಗಾಗಿ ತಮ್ಮ ಇಡೀ ಜೀವನವನ್ನೇ ಅರ್ಪಿಸಿಕೊಂಡಿದ್ದರು. ಹೀಗಿದ್ದರು ದೀನ್ ದಯಾಳ್ ಅವರು. ಅವರನ್ನು ಕಳೆದುಕೊಂಡ ನಷ್ಟವನ್ನು ದೇಶವು ಬಹುಕಾಲ ಅನುಭವಿಸುತ್ತದೆ ಮತ್ತು ಎಂದೆಂದಿಗೂ ಅವರನ್ನು ನೆನಪಿನಲ್ಲಿ ಉಳಿಸಿಕೊಳ್ಳುತ್ತದೆ.



# ಆರ್ಥಿಕ ಪರಿಸ್ಥಿತಿ

## ನಿರಾಶಾದಾಯಕ ನಾಲ್ಕನೆಯ ಯೋಜನೆ

ನಾಲ್ಕನೆಯ ಯೋಜನೆಯ ಬಗೆಗೆ, ಯೋಜನಾ ಆಯೋಗವು ತಯಾರಿಸಿರುವ ಟಿಪ್ಪಣಿಯು ಇನ್ನೂ ಸಂಪೂರ್ಣವಾಗಿ ಪ್ರಕಟಗೊಂಡಿಲ್ಲ. ಆದರೆ ವಾರ್ತಾಪತ್ರಿಕೆಗಳಲ್ಲಿ ಪ್ರಕಟಗೊಂಡಿರುವಂತೆ, ಹಿಂದಿನ ಯೋಜನೆಗಳು ತೀರಾ ದಯನೀಯವಾಗಿ ವಿಫಲಗೊಂಡಿದ್ದರು ಕೂಡ ಆಯೋಗವು ಅದೇ ತಾಂತ್ರಿಕತೆ ಹಾಗೂ ಅದೇ ವಿಧಾನಕ್ಕೆ ಆದ್ಯತೆ ನೀಡುವುದನ್ನು ಮುಂದುವರೆಸಿರುವಂತೆ ತೋರುತ್ತದೆ. ಬದಲಾವಣೆಯ ಅವಶ್ಯಕತೆಯನ್ನು ಗುರುತಿಸಲಾಗಿದ್ದರೂ ವಿಭಾಗವಾರು ವಿತರಣೆಯಲ್ಲಿ ಅದು ಪ್ರತಿಫಲಿಸಿಲ್ಲ. ಅದರಲ್ಲಿನ ಕೆಲವು ಅನಪೇಕ್ಷಣೀಯವಾದ ಸಂಗತಿಗಳು ಇಂತಿವೆ.

ಬಹುದೊಡ್ಡ ರೀತಿಯಲ್ಲಿ ಯೋಜನೆಯನ್ನು ರೂಪಿಸುವ, ಮಹತ್ವಾಕಾಂಕ್ಷೆಯ ಭ್ರಮೆ ಅಪ್ರತಿಹತವಾಗಿ ಮುಂದುವರೆದಿದೆ. ಮೂರನೆಯ ಯೋಜನೆಯ ಅವಧಿಯಲ್ಲಿನ ಅಭಿವೃದ್ಧಿಯ ಬೆಳವಣಿಗೆಯ ಪ್ರಮಾಣವು ವಾರ್ಷಿಕ ಶೇಕಡಾ ಮೂರನ್ನೇ ದಾಟುವ ಸೂಚನೆಗಳಿಲ್ಲ. ಆದರೆ, ನಾಲ್ಕನೆಯ ಯೋಜನೆಯು ಅಭಿವೃದ್ಧಿಯ ಪ್ರಮಾಣವು ವಾರ್ಷಿಕ ಶೇಕಡಾ ೬.೫ ಎಂಬ ಗ್ರಹಿಕೆಯ ಮೇಲೆ, ರೂಪಿಸಲ್ಪಟ್ಟಿದೆ. ಹಾಗಾಗಿ ಡಂಭಾಚಾರ, ಬಡಾಯಿಯ ಮಾತುಗಳಿಗಿಂತ ವಾಸ್ತವತೆಯ ಅರಿವು ಉತ್ತಮ.

ಸಾರ್ವಜನಿಕ ಹಾಗೂ ಖಾಸಗೀ ವಲಯಗಳ ನಡುವಿನ ವಿತರಣೆಯು ಕೇವಲ ಸೈದ್ಧಾಂತಿಕ ಆಧಾರದ ಮೇಲೆ ನಡೆದಿದ್ದು, ಅದು ಈ ಎರಡೂ ವಲಯಗಳ ಹಿಂದಿನ ಸಾಧನೆಗಳನ್ನಾಗಲೀ, ವರ್ತಮಾನದಲ್ಲಿ ಅವುಗಳ ಸಾಮರ್ಥ್ಯವನ್ನಾಗಲೀ, ಭವಿಷ್ಯದಲ್ಲಿ ಕಾರ್ಯರೂಪಕ್ಕೆ ಬರುವ ಸಾಮರ್ಥ್ಯದ ಸಂಭಾವ್ಯತೆಯನ್ನಾಗಲೀ ಪರಿಗಣನೆಗೇ ತೆಗೆದುಕೊಂಡಿಲ್ಲ. ಸಾರ್ವಜನಿಕ ವಲಯವು ಇನ್ನೂ ಸಂಘಟಿತವಾಗಿಲ್ಲ. ಮೂರನೆಯ ಯೋಜನೆಯ ಅವಧಿಯಲ್ಲಿನ ಸಾರ್ವಜನಿಕ ವಲಯದ ಅರ್ಥ ಸಂಬಂಧಿ ಸಾಧನೆಯು, ೬,೫೦೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಲ್ಲ. ಆದ್ದರಿಂದ ಸಾರ್ವಜನಿಕ ವಲಯಕ್ಕೆ ನಿಗದಿಪಡಿಸಿರುವ ೧೫,೬೦೦ ಕೋಟಿ ರೂಪಾಯಿ, ಅದರ ಸಾಮರ್ಥ್ಯಕ್ಕೆ ಮೀರಿರುವುದಾಗಿದೆ.

ಕೃಷಿಯನ್ನು ಈಗಲೂ ಮೂಲೆಗುಂಪಾಗಿಸುವುದು ಮುಂದುವರೆದಿದೆ. ಮೂರನೆಯ ಯೋಜನೆಯಲ್ಲಿ ನೀಡಿದ್ದ ಶೇ. ೧೪ಕ್ಕೆ ಬದಲಾಗಿ ನಾಲ್ಕನೆಯ ಯೋಜನೆಯಲ್ಲಿ ಕೃಷಿಯ ಅಭಿವೃದ್ಧಿಗಾಗಿ ಕೇವಲ ಶೇ. ೧೩.೮ನ್ನು ಗೊತ್ತುಪಡಿಸಲಾಗಿದೆ. ಆದರೆ ಕೈಗಾರಿಕೆ ಮತ್ತು ಖನಿಜ ಕ್ಷೇತ್ರಗಳಿಗೆ ಕಳೆದ ಬಾರಿ ಇದ್ದ ಶೇಕಡಾ ಶೇ. ೨೦ ಇದೀಗ ಶೇಕಡ ಶೇ. ೨೫ ಆಗಿದೆ. ಅದೇ, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕಳೆದ ಬಾರಿ ಇದ್ದ ಶೇ. ೪ ರಿಂದ ಶೇ. ೩ಕ್ಕೆ ಇಳಿಸಲಾಗಿದೆ. ಈ ಎಲ್ಲ ಕ್ರಮಗಳಿಂದ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲಾಗಲೀ, ಬೆಲೆಗಳನ್ನು ಸ್ಥಿರಗೊಳಿಸುವುದಾಗಲೀ ಸಾಧ್ಯವಾಗುವುದಿಲ್ಲ.

ಸಂಪನ್ಮೂಲಗಳ ಸಂಪೂರ್ಣ ಚಿತ್ರ ಇನ್ನೂ ಲಭ್ಯವಿರದಿದ್ದರೂ, ೨೫,೦೦೦ ಕೋಟಿ ರೂಪಾಯಿಗಳ ಅಧಿಕ ತೆರಿಗೆ ಹಾಕಬೇಕಾಗಬಹುದೆಂದು ಸೂಚಿಸಲಾಗಿದೆ. ತೆರಿಗೆ ವಿಧಿಸುವ ಸಂಬಂಧದಲ್ಲಿ ಈಗಾಗಲೇ, ಇನ್ನು ಸಾಧ್ಯವಿಲ್ಲ ಎನ್ನುವಷ್ಟು ಪರ್ಯಾಪ್ತ ಸ್ಥಿತಿಯ ಹಂತ ತಲುಪಿ ಮುಂದೆ ಹೋಗಿದೆ. ಯಾವುದಾದರೂ ಬೃಹತ್ ಆರ್ಥಿಕ ಚಟುವಟಿಕೆಯಿಂದ ಬರಬಹುದಾದ ಹೆಚ್ಚಿನ ಕಂದಾಯದ ಹೊರತಾಗಿ ತೆರಿಗೆಯ ಸ್ವರೂಪಕ್ಕೆ ಯಾವುದೇ ಸೇರ್ಪಡೆಗೆ ಆಸ್ಪದವೇ ಇಲ್ಲ. ನಾಲ್ಕನೇ ಯೋಜನೆಯು ಚಿನ್ನದ ಮೊಟ್ಟೆಯನ್ನಿಡುವ ಕೋಳಿಯನ್ನೇ ಕೊಲ್ಲುವ ಸಾಧ್ಯತೆಯಿದೆ.

ಯೋಜನಾ ಆಯೋಗವು ಈ ಟಿಪ್ಪಣಿಯನ್ನು ರೂಪುಗೊಳಿಸುವಾಗ ಯೋಜನೆ ಹಾಗೂ ಆದ್ಯತೆಗಳ ಬಗೆಗೆ ಪ್ರಧಾನ ಮಂತ್ರಿಯವರು (ಶ್ರೀ ಶಾಸ್ತ್ರಿ) ಸಾರ್ವಜನಿಕವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಸಾಕಷ್ಟು ಗಮನ ನೀಡಿಲ್ಲ. ಯೋಜನಾ ಆಯೋಗವು ತನ್ನ ಹಿಂದಿನ ಆಲೋಚನೆಗಳಲ್ಲಿಯೇ ಗ್ರಸ್ತವಾಗಿ, ಹೊಸದಾಗಿ ಆಲೋಚಿಸಲಾರದಾಗಿದೆ ಎನಿಸುತ್ತದೆ. ಆಯೋಗದ ಸ್ವರೂಪವನ್ನು ಬದಲಾಯಿಸುವುದು ಮತ್ತು ಅನುಭವ ಹಾಗೂ ಅರಿವಿನಿಂದ ನಿರ್ಧಾರ ತೆಗೆದುಕೊಳ್ಳಬಲ್ಲ ಹಾಗೂ ಪ್ರಧಾನಮಂತ್ರಿಗಳ ಆಲೋಚನೆಗಳಿಗೆ ಹೊಂದಿಕೆಯಾಗುವಂತಹ ಯೋಜನೆಯನ್ನು ರೂಪಿಸುವಂತಹ ವ್ಯಕ್ತಿಗಳಿಗೆ ಈ ಮಹತ್ಕಾರ್ಯವನ್ನು ಒಪ್ಪಿಸುವುದು ಒಳ್ಳೆಯದು.

(ಅಕ್ಟೋಬರ್ ೨೬, ೧೯೬೪)



# ಆರ್ಥಿಕ ಬೆಳವಣಿಗೆಯ ಸಮಸ್ಯೆಗಳು

'ಆರ್ಗನೈಸರ್' ಪತ್ರಿಕೆಯ ಸಂಪಾದಕರೊಡನೆ ಸಂದರ್ಶನ

ಪ್ರಶ್ನೆ : ನಮ್ಮ ಆರ್ಥಿಕ ಬೆಳವಣಿಗೆಯ ಪ್ರಮಾಣ ನಿಮಗೆ ತೃಪ್ತಿ ತಂದಿದೆಯೇ?

ಉತ್ತರ : ಇಲ್ಲ, ನಾನು ತೃಪ್ತನಾಗಿಲ್ಲ.

ಪ್ರಶ್ನೆ : ಏನು ಮತ್ತು ಎಲ್ಲಿ ತಪ್ಪಾಗಿದೆಯೆಂದು ನೀವು ಆಲೋಚಿಸುತ್ತೀರಿ?

ಉತ್ತರ : ಅಭಿವೃದ್ಧಿಯು ಕಡಿಮೆ ಪ್ರಮಾಣದಲ್ಲಿ ಬಂಡವಾಳ ಕೇಂದ್ರಿತವೂ ಮತ್ತು ಹೆಚ್ಚು ಪ್ರಮಾಣದಲ್ಲಿ ಪರಿಶ್ರಮಗಳ ಬಗೆಗೆ ಕೇಂದ್ರಿತವೂ ಆಗಿರಬೇಕೆಂದು ನಾನು ಆಲೋಚಿಸುತ್ತೇನೆ ಮತ್ತು ಅದು ಕಡಿಮೆ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವುದರತ್ತ ಅಭಿರುಚಿ ಹೊಂದಿರಬೇಕು.

ಪ್ರಶ್ನೆ : ನೀವು ಯಾವುದಾದರೂ ಸ್ಪಷ್ಟವಾದ ಉದಾಹರಣೆಗಳನ್ನು ಕೊಡಲು ಸಾಧ್ಯವೇ?

ಉತ್ತರ : ಖಂಡಿತವಾಗಿಯೂ. ನಮ್ಮ ಅಣೆಕಟ್ಟುಗಳನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಅವುಗಳ ನಿರ್ಮಾಣಕ್ಕಾಗಿ ನಾವು ಅತ್ಯಂತ ದುಬಾರಿ ಯಂತ್ರೋಪಕರಣಗಳನ್ನು ಆಮದು ಮಾಡಿಕೊಂಡಿದ್ದೇವೆ. ಬದಲಿಗೆ, ಅವುಗಳ ನಿರ್ಮಾಣದಲ್ಲಿ ನಾವು ಹೆಚ್ಚು ಕಾರ್ಮಿಕರನ್ನು ಬಳಸಿಕೊಳ್ಳಬೇಕಾಗಿತ್ತೆಂದು ನಾನು ಆಲೋಚಿಸುತ್ತೇನೆ. ಸ್ಥಳೀಯ ಯೋಜನಾ ಕಾರ್ಯಗಳಲ್ಲಿ ಉತ್ತಮ ಅನುಭವ ಪಡೆದಿದ್ದ ಮೈಸೂರಿನ ಇಂಜಿನಿಯರ್‌ಗಳು, ಚಂಬಲ್ ಕಾರ್ಯಯೋಜನೆಯಲ್ಲಿ ಕೆಲಸ ಮಾಡುವಾಗ, ಈ ರೀತಿ ಮಾಡಿದ್ದಾರೆ. ಉಳಿದ ಎಲ್ಲ ಅಣೆಕಟ್ಟುಗಳ ನಿರ್ಮಾಣದಲ್ಲಿಯೂ ಇದೇ ವಿಧಾನವನ್ನು ಅನುಸರಿಸಬಹುದಾಗಿತ್ತೆಂದು ನನ್ನ ಅನಿಸಿಕೆ. ಮತ್ತು, ನಾವು ಮತ್ತಷ್ಟು ಚಿಕ್ಕ ಚಿಕ್ಕ ಅಣೆಕಟ್ಟುಗಳ ನಿರ್ಮಾಣಕ್ಕೆ ಗಮನ ನೀಡಬೇಕಾಗಿತ್ತೆಂದೂ ನಾನು ಯೋಚಿಸುತ್ತೇನೆ. ಆಗ, ಕಡಿಮೆ ವೆಚ್ಚ, ಹೆಚ್ಚಿನ ಪ್ರಮಾಣದ ಉಪಯೋಗ ಮತ್ತು ಶೀಘ್ರವಾದ ಹಾಗೂ ಹೆಚ್ಚಿನ ಲಾಭ, ಪ್ರತಿಫಲಗಳು ದೊರಕುತ್ತಿದ್ದವು.

ಪ್ರಶ್ನೆ : ಇನ್ನೊಂದು ಉದಾಹರಣೆ ನೀಡುವಿರಾ?

ಉತ್ತರ : ಆಗಲಿ, ನಾವು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಡಗಳನ್ನು

ನಿರ್ಮಿಸುತ್ತಿದ್ದೇವೆ. ಮತ್ತು ನಾವು ಅವುಗಳನ್ನು ಸಿಮೆಂಟಿನಿಂದ ನಿರ್ಮಿಸುತ್ತಿದ್ದೇವೆ. ನಾವೇಕೆ ಸ್ಥಳೀಯವಾಗಿ ಸಿದ್ಧಪಡಿಸಿದ ಇಟ್ಟಿಗೆಗಳನ್ನು ಉಪಯೋಗಿಸಬಾರದು? ಇದು ರೈಲ್ವೆಗೆ, ಭಾರವಾದ ಸಿಮೆಂಟ್‌ನ್ನು ಸಾಗಿಸುವ ಒತ್ತಡವನ್ನು ಕಡಿಮೆ ಮಾಡುತ್ತಿತ್ತು ಹಾಗೂ ವಿಕೇಂದ್ರೀಕರಣಗೊಂಡ ಸ್ಥಳೀಯ ಇಟ್ಟಿಗೆಗಳ ಗೂಡಿನ ಕೈಗಾರಿಕೆಯನ್ನು ಪ್ರೋತ್ಸಾಹಿಸಿರುತ್ತಿತ್ತು. ನಾವು ಹಡಗುಗಳನ್ನು ಕಟ್ಟಲು, ನೌಕಾಂಗಣಗಳನ್ನು ನಿರ್ಮಿಸುತ್ತಿದ್ದೇವೆ, ನಮ್ಮ ವ್ಯಾಪಾರವನ್ನು ಮುಂದುವರೆಸಲು ಅವಶ್ಯಕ ಕೂಡ. ಈ ಹಂತದಲ್ಲಿ ಬಹುಶಃ, ನಮಗೆ ಹಡಗುಗಳನ್ನು ಖರೀದಿಸುವುದು ಹೆಚ್ಚು ಅಗ್ಗವಾಗುತ್ತದೆನಿಸುತ್ತದೆ. ನಾವು ಸಾಕಷ್ಟು ಕೊರತೆಯಿರುವ ಬಂಡವಾಳದ ಸಂಪನ್ಮೂಲಗಳ ಬಾಗಿಲನ್ನು ಮುಚ್ಚಿಟ್ಟಿದ್ದೇವೆ ಶೀಘ್ರ ಉತ್ಪಾದನೆ, ಲಾಭಗಳನ್ನು ಕೊಡುವತ್ತ ನಮ್ಮ ಹೂಡಿಕೆಗಳನ್ನು ಮಾಡಬೇಕು. ಸರ್ಕಾರವು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಎಷ್ಟು ಗಮನ ನೀಡಬೇಕಾಗಿತ್ತೋ ಅಷ್ಟನ್ನೂ ನೀಡುತ್ತಿಲ್ಲವೆಂದು ನಾನು ಯೋಚಿಸುತ್ತೇನೆ.

ಪ್ರಶ್ನೆ : ಯಾವುದಾದರೂ ಉದಾಹರಣೆಗಳಿವೆಯೇ?

ಉತ್ತರ : ನಮ್ಮ ವಿದ್ಯುತ್ ಇಂಜಿನಿಯರಿಂಗ್ ಕೈಗಾರಿಕೆಯು ಬಹಳ ಉತ್ತಮವಾಗಿ ಕಾರ್ಯನಿರ್ವಹಿಸಿದೆ. ವಿದ್ಯುತ್ ಮೋಟಾರ್‌ಗಳು ಮತ್ತು ಪಂಪ್‌ಗಳು ಮುಂತಾದವುಗಳನ್ನು ಅವು ರಫ್ತುಮಾಡುತ್ತಿವೆ. ಆದರೆ, ತಮಗೆ ಅವಶ್ಯವಾಗಿರುವಷ್ಟು, ಸಂಪೂರ್ಣ ಉಕ್ಕಿನ, ಸರಕನ್ನು ಪಡೆಯಲು ಅವರಿಗೆ ದುಸ್ತರವಾಗುತ್ತಿದೆ. ಅನೇಕ ಬಾರಿ, ಪರವಾನಗಿಗಳು ರಾಜಕೀಯ ವಾಣಿಜ್ಯೋದ್ಯಮಿಗಳಿಗೆ ಲಭ್ಯವಾಗುತ್ತದೆಯೇ ವಿನಃ, ವಾಸ್ತವ ಬಳಕೆದಾರರಿಗಲ್ಲ. ಸಮತೂಕವಿಲ್ಲದ, ಏರುಪೇರಾದ ಈ ಅಭಿವೃದ್ಧಿಯ ಗಂಭೀರ ಪರಿಣಾಮವೆಂದರೆ, ಅವಶ್ಯಕ ವಸ್ತುಗಳ ಪೂರೈಕೆ ಕಡಿಮೆಯಾಗುತ್ತದೆ ಮತ್ತು ದಿನಬಳಕೆ ವಸ್ತುಗಳ ಬೆಲೆಗಳು ಒಂದೇ ಸಮನೆ ಏರುತ್ತಿರುತ್ತದೆ.

ಪ್ರಶ್ನೆ : ಒಟ್ಟಿನಲ್ಲಿ ಜನರು ಈಗ ಮೊದಲಿಗಿಂತಲೂ ಉತ್ತಮ ರೀತಿಯಲ್ಲಿ ಜೀವಿಸುತ್ತಿದ್ದಾರೆ ಎಂದು ನಿಮಗೆ ಅನ್ನಿಸುವುದಿಲ್ಲವೇ?

ಉತ್ತರ : ಇದು ವರ್ಗದಿಂದ ವರ್ಗಕ್ಕೆ ವ್ಯತ್ಯಾಸವಾಗುತ್ತದೆ. ಭೂರಹಿತ ಕೂಲಿಕಾರನು ಎಲ್ಲರಿಗಿಂತಲೂ ಅತ್ಯಂತ ನಿಕೃಷ್ಟನಾಗಿದ್ದಾನೆ. ಹಾಗೆಯೇ, ಸಮಾಜದಲ್ಲಿ ನಿಶ್ಚಿತ ಆದಾಯವಿರುವ ಸಂಬಳದಾರ, ಮಧ್ಯಮವರ್ಗದ ರೈತನ ಸ್ಥಿತಿ ಹಿಂದಿಗಿಂತಲೂ ಹೆಚ್ಚು ಕೆಟ್ಟಿಲ್ಲ. ದೊಡ್ಡ ಹಿಡುವಳಿದಾರ, ಹೆಚ್ಚು ಲಾಭ



ಪಡೆಯುವವನಾಗಿದ್ದಾನೆ. ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕ ಸಣ್ಣ ಪಟ್ಟಣಕ್ಕಿಂತಲೂ ಮಹಾನಗರದಲ್ಲಿ ಅನುಕೂಲವಾಗಿದ್ದಾನೆ. ಉದ್ಯಮಿಯೂ ಅನುಕೂಲವಾದ್ದಾನೆ. ಹಾಗೆಯೇ ಹಿರಿಯ ವಕೀಲರು, ವೈದ್ಯರು ಮೊದಲಾದವರೂ ಕೂಡ. ಆದರೆ, ಇದು ಬಹುಸಂಖ್ಯಾತ ಜನರನ್ನು ಹಿಂದಿಗಿಂತಲೂ ದುಸ್ಥಿತಿಗೆ ತಂದಿರುವುದನ್ನು ನೀವು ಕಾಣುತ್ತೀರಿ. ಹಿಂದೆ ಒಬ್ಬ ಗುಮಾಸ್ತ ಮತ್ತು ಶಿಕ್ಷಕ, ಚಿಕ್ಕ ಸಾಹೇಬನಾಗಿದ್ದ. ಈಗ ಅವನು ಕೇವಲ ಬಿಳಿಉಡುಪು ಧರಿಸಿರುವವನು ಮಾತ್ರ. ಅವನು ಏನನ್ನೂ ಉಳಿಸುವುದೂ ಸಾಧ್ಯವಿಲ್ಲ ಮತ್ತು ಅವನಿಗೆ ಯಾವ ಅಂತಸ್ತೂ ಇಲ್ಲ.

ಪ್ರಶ್ನೆ : ಸ್ಥಿತಿ ಹೀಗಿರುವುದಾದರೆ, ಅವರೇಕೆ ಪ್ರತಿಭಟಿಸುವುದಿಲ್ಲ?

ಉತ್ತರ : ಮೂರು ವರ್ಷಗಳ ಹಿಂದೆ ನಡೆದ ಕೇಂದ್ರ ಸರ್ಕಾರದ ನೌಕರರ ಚಳುವಳಿಯು ಅವರಲ್ಲಿ ಮನೆಮಾಡಿದ್ದ ಆಳವಾದ ಅತೃಪ್ತಿಯ ಅಭಿವ್ಯಕ್ತಿಯಾಗಿತ್ತು. ಅವರು ಕಚೇರಿಗಳಲ್ಲಿ ಅತಿಹೆಚ್ಚು ಸಮಯ ಕಳೆಯುತ್ತಾರೆ ಮತ್ತು ಕಚೇರಿಗೆ ಹೋಗಲು ಮನೆಗೆ ಬರಲು ಬಹಳ ಸಮಯ ವ್ಯಯಿಸುತ್ತಾರೆ. ಹಾಗಾಗಿ ಅವರಲ್ಲಿ ಪ್ರತಿಭಟನೆ ನಡೆಸಲು ಶಕ್ತಿಯಾಗಲೀ, ಸಮಯವಾಗಲೀ ಇರುವುದಿಲ್ಲ. ಅಲ್ಲದೇ, ಬಹುಶಃ ಬಿಳಿಯ ಕೊರಳಪಟ್ಟಿಯ ವರ್ಗದವರಲ್ಲಿ ಪ್ರತಿಭಟಿಸುವುದು ಸಾಮಾಜಿಕವಾಗಿ ಹೆಚ್ಚು ಗೌರವಯುತವಾದುದಲ್ಲದಿರಬಹುದು.

ಪ್ರಶ್ನೆ : ವೇತನದಾರ ವರ್ಗವೂ ಹಿಂದಿಗಿಂತಲೂ ಈಗ ಉತ್ತಮರಾಗಿ ತೋರುತ್ತಿಲ್ಲವೇ?

ಉತ್ತರ : ಹೌದು, ನೋಟ, ರೂಪ, ಚಹರೆಗಳು ಬದಲಾಗಿವೆ. ಬಳಕೆ, ಉಪಯೋಗಗಳ ಮಟ್ಟವೂ ಬದಲಾಗಿದೆ. ತಿಂಗಳಿಗೊಮ್ಮೆ ಥಿಯೇಟರ್‌ನಲ್ಲಿ ಸಿನಿಮಾ ವೀಕ್ಷಣೆ ಕಡ್ಡಾಯವಾಗಿದೆ. ಆದರೆ ಅವರ ಮಕ್ಕಳಿಗೆ ಕುಡಿಯಲು ಹಾಲು ದೊರೆಯುತ್ತಿಲ್ಲ. ೧೯೩೯ರಿಂದ ಈಚೆಗೆ ಬೆಲೆಗಳು ಐದುಪಟ್ಟು ಹೆಚ್ಚಿರುವುದು ಎಂಬುದನ್ನು ಮರೆಯಬೇಡಿ, ಆದರೆ ಒಬ್ಬ ಗುಮಾಸ್ತನ ಆರಂಭಿಕ ವೇತನವು ಆಗಿನ ೪೦ ರೂಪಾಯಿಗಳಿಂದ ಕೇವಲ ೧೦೫ ರೂಪಾಯಿಗಳಿಗೆ ಮಾತ್ರ ಹೆಚ್ಚಾಗಿದೆ. ಕೇರಳ, ಮೈಸೂರು ಮುಂತಾದ ಪ್ರದೇಶಗಳಲ್ಲಿ ಪದವೀಧರರು ಮಾಸಿಕ ೭೦ ರೂಪಾಯಿ ವೇತನದಿಂದ ಆರಂಭಿಸುತ್ತಾರೆ.

ಪ್ರಶ್ನೆ : ಬಹುಶಃ ಈಗ ಬಹಳ ಮಂದಿ ದುಡಿಯುವ ಗೃಹಿಣಿಯರಿರಬಹುದು.

ಉತ್ತರ : ಇಲ್ಲ, ಬಹಳ ಹೆಚ್ಚಿಗೆ ಏನಿಲ್ಲ, ದೇಶದ ಬಹುಭಾಗದಲ್ಲಿ ಇಲ್ಲ.

ಪ್ರಶ್ನೆ : ಆಹಾರ ಪದಾರ್ಥಗಳ ಬೆಲೆ ಈಗ ಹೆಚ್ಚಿದೆ. ಹಾಗಿದ್ದರೂ, ಹಿಂದಿಗಿಂತಲೂ ಹೆಚ್ಚಾಗಿ ಆಹಾರಧಾನ್ಯಗಳನ್ನು ಉತ್ಪಾದನೆ ಮಾಡುವಂತೆ ರೈತನನ್ನು ಏಕೆ ಈಗಲೂ ಪ್ರೋತ್ಸಾಹಿಸುತ್ತಿಲ್ಲ?

ಉತ್ತರ : ರೈತನು ಈಗ ಮೊದಲಿಗಿಂತಲೂ ಹೆಚ್ಚು ಉತ್ಪಾದಿಸುತ್ತಿದ್ದಾನೆ, ಆದರೆ ಅವನಿಗೆ ದೊರಕುತ್ತಿರುವ ಬೆಲೆಯು ಹೆಚ್ಚಾಗಿಲ್ಲ; ಎಷ್ಟು ಬೇಕೋ ಅಷ್ಟು ಮಾತ್ರವಿದೆ. ರೈತನ ಅವಶ್ಯಕತೆಗಳು ಕೂಡ ಅವನಿಗೆ ಹೆಚ್ಚು ದುಬಾರಿಯಾಗುತ್ತಿವೆ.

ಪ್ರಶ್ನೆ : ಧಾರಣೆಯ ಮಟ್ಟದಲ್ಲಿ, ಆಹಾರ ಧಾನ್ಯಗಳ ಬೆಲೆಯು ಎಲ್ಲಕ್ಕಿಂತಲೂ ಅತ್ಯಂತ ದೊಡ್ಡದಾದ ಏಕಮೇವ ಅಂಶವಾಗಿದೆ. ಇತರ ಎಲ್ಲ ವಸ್ತುಗಳ ಬೆಲೆಗಳನ್ನೂ ಮೇಲಕ್ಕೇರಿಸುತ್ತಿರುವ ಹಾಗೂ ವೇತನದಾರರನ್ನು ನಜ್ಜುಗುಜ್ಜು ಮಾಡುತ್ತಿರುವ ಅಂಶ ಆಹಾರ ಧಾನ್ಯಗಳ ಬೆಲೆ ಏರಿಕೆಯಾಗಿದೆ. ನೀವು ರೈತನಿಗೆ ಹೆಚ್ಚು ಹೆಚ್ಚು ಕೊಟ್ಟಷ್ಟೂ, ಗುಮಾಸ್ತ ವರ್ಗದವರಿಂದ ಹೆಚ್ಚು ಹೆಚ್ಚು ಕಸಿದುಕೊಳ್ಳುತ್ತೀರಿ.

ಉತ್ತರ : ಇದಕ್ಕೆ ಒಂದು ದಾರಿಯಿದೆ. ಮಾಸಿಕ ವರಮಾನ ೨೦೦ ರೂಪಾಯಿಗಳಷ್ಟೂ ಮಾತ್ರವಿರುವವರಿಗೆ, ಸರ್ಕಾರವು ಆಹಾರ ಸಾಮಗ್ರಿಗಳಿಗೆ ಸಹಾಯಧನ ಒದಗಿಸಬೇಕು. ಸರ್ಕಾರದ ಎಲ್ಲ ವರಮಾನದ ೨೦% ಹಣವನ್ನು ಕಬಳಿಸುತ್ತಿರುವ ಆಡಳಿತಾಂಗದ ವ್ಯವಸ್ಥೆಯ ವೆಚ್ಚವನ್ನು ತಪಾಸಣೆ ಮಾಡಿ, ಕಡಿತಗೊಳಿಸುವ ಮೂಲಕ ಸರ್ಕಾರವು ಈ ಕೆಲಸಕ್ಕೆ ಸುಲಭವಾಗಿ ಹಣ ಹೊಂದಿಸಬಹುದು. ಸರ್ಕಾರಿ ಕಚೇರಿಗಳ ಈ ನಾಯಿಕೊಡೆಗಳಂತಹ ಬೆಳವಣಿಗೆಯನ್ನು ಕತ್ತರಿಸಬೇಕು.

ಪ್ರಶ್ನೆ : ಪ್ರತಿಯೊಬ್ಬರೂ ರಾಷ್ಟ್ರೀಯ ಅರ್ಥವ್ಯವಸ್ಥೆಗೆ ಅತ್ಯುತ್ತಮವಾದ ಕೆಲಸ ಮಾಡುತ್ತಿದ್ದಾರೆ ಎಂದು ನೀವು ಭಾವಿಸುವಿರಾ? ದೇಶದಲ್ಲಿ ವಿಪರೀತವಾಗಿ ಜಡತ್ವ, ಆಲಸ್ಯಗಳು ತುಂಬಿವೆ ಎಂದು ಅನ್ನಿಸಲಿಲ್ಲವೇ?

ಉತ್ತರ : ಹೌದು, ಅದು ಬಹುಮಟ್ಟಿಗೆ ತುಂಬಿದೆ.

ಪ್ರಶ್ನೆ : ಸರಳತೆ ಮತ್ತು ತ್ಯಾಗ ಈ ಪರಿಕಲ್ಪನೆಗಳೇ ಇದಕ್ಕೆ ಹೊಣೆಗಾರರೆಂದು ನೀವು ಭಾವಿಸುತ್ತೀರಾ? ಈ ತ್ಯಾಗದ ಪರಿಕಲ್ಪನೆ ವಿಚಾರವನ್ನೇ ನಾವು ತ್ಯಜಿಸಿಬಿಡಬಾರದೇ?

ಉತ್ತರ : ಇದೇನೋ ಕೇಳಲು ಆಸಕ್ತಿಪೂರ್ಣವಾಗಿದೆ. ಆದರೆ ನಮ್ಮ ಸಮಾಜವು ಹಲವು ನಿರ್ದಿಷ್ಟ ಆದರ್ಶಗಳನ್ನು ಹೊಂದಿದೆ. ಧನಾರ್ಜನೆಯು, ತನ್ನಷ್ಟಕ್ಕೆ ತಾನು ಉತ್ತಮ ಕಾರ್ಯವೆಂದು ಪರಿಗಣಿಸಲ್ಪಟ್ಟಿಲ್ಲ. ನಮ್ಮ ಸಮಾಜವನ್ನು



ಶಕ್ತಿಪೂರ್ಣ ಹಾಗೂ ಚೈತನ್ಯಪೂರ್ಣ ಮಾಡುವ ಅತ್ಯುತ್ತಮ ವಿಧಾನವೆಂದರೆ, ವ್ಯಕ್ತಿಗಳ ಮನಸ್ಸನ್ನು ಅತ್ಯಂತ ಉನ್ನತವಾದ ರಾಷ್ಟ್ರೀಯ ಗುರಿ, ಆದರ್ಶಗಳೊಡನೆ ಜೋಡಿಸುವುದು. ಭಾರತ ಮತ್ತು ಪಾಕಿಸ್ತಾನಗಳ ಪುನರೈಕ್ಯ ಅವುಗಳಲ್ಲಿ ಒಂದಾಗಬಹುದು. ಭಾರತವನ್ನು ಚೀನಾದ ಆಕ್ರಮಣದಿಂದ ಮುಕ್ತಗೊಳಿಸುವುದು ಮತ್ತೊಂದಾಗಬಹುದು.

ಪ್ರಶ್ನೆ : ಸ್ಫೂರ್ತಿಯುತ ಆದರ್ಶವಾಗಿ, ಸಮಾಜವಾದದ ಬಗೆಗೆ ನಿಮ್ಮ ಅಭಿಪ್ರಾಯವೇನು?

ಉತ್ತರ : ಸಮಾಜವಾದವೆಂದರೆ, ವಿಭಿನ್ನ ವ್ಯಕ್ತಿಗಳು ಆರೇಳು ರೀತಿಯಲ್ಲಿ ಅರ್ಥೈಸುತ್ತಾರೆ. ಅದು ಯಾರನ್ನೂ ಸ್ಫೂರ್ತಿಗೊಳಿಸಿಲ್ಲವೆಂಬುದು ಖಂಡಿತವಾದದ್ದು. ಸಮಾಜವಾದವೆಂದರೆ 'ರಾಷ್ಟ್ರೀಕರಣ'ವೆಂಬ ಅರ್ಥ ಉಂಟಾದಾಗ ಮತ್ತು ರಾಷ್ಟ್ರೀಕರಣವೆಂದರೆ – ರಾಜಾಸ್ಥಾನದಲ್ಲಿ ಆಹಾರಧಾನ್ಯಗಳ ವ್ಯಾಪಾರದಲ್ಲಿ ನಡೆದಂತೆ–ತಮ್ಮ ಬೆಂಬಲಿಗ ಕೆಲವರಿಗೆ ಪರವಾನಗಿ ಪತ್ರಗಳನ್ನು ಕೊಡುವುದೆಂದರೆ; ಅಂತಹ ಸಮಾಜವಾದದಿಂದ ಯಾರೂ ಸ್ಫೂರ್ತಿಗೊಳ್ಳುವುದಿಲ್ಲ ಎಂಬುದರಲ್ಲಿ ಆಶ್ಚರ್ಯವೇ ಇಲ್ಲ.

ಪ್ರಶ್ನೆ : ಅಭಿವೃದ್ಧಿಯ ಪ್ರಮಾಣದ ವೇಗ ವರ್ಧಿಸುವಲ್ಲಿ ಯಾವುದಾದರೂ ಸ್ಪಷ್ಟ, ವಾಸ್ತವಿಕ ಸಲಹೆಗಳನ್ನೇನಾದರೂ ನೀಡುವಿರಾ?

ಉತ್ತರ : ಸದ್ಯ, ವರ್ತಮಾನದಲ್ಲಿನ ವರಮಾನ ತೆರಿಗೆ ಮತ್ತು ವಾಣಿಜ್ಯ ತೆರಿಗೆಗಳು, ವಿಪರೀತ ಹೆಚ್ಚಿಗೆ ಇರುವುದರಿಂದ, ಆ ತೆರಿಗೆಗಳ ಬಹುಭಾಗವನ್ನು ತಪ್ಪಿಸಿಕೊಳ್ಳುವುದೇ ಹೆಚ್ಚಾಗಿದೆ. ಅದರ ಪರಿಣಾಮವಾಗಿ ಅಗಾಧ ಮೊತ್ತದ ಕಪ್ಪುಹಣವು ತನ್ನ ಲಾಭದ ಊಹೆಯ ಚಟುವಟಿಕೆಗಳಿಂದ, ಕಾರ್ಯಗಳಿಂದ ಆರ್ಥಿಕ ವ್ಯವಸ್ಥೆಯನ್ನು ಪಲ್ಲಟಗೊಳಿಸುತ್ತದೆ. ಸರ್ಕಾರವು ಕಾಲ್ಡೋರ ಸಲಹೆಗಳನ್ನು ಸಂಪೂರ್ಣ ಒಪ್ಪಿಕೊಂಡು, ತೆರಿಗೆಗಳನ್ನು ಗರಿಷ್ಠ ೪೫%ಕ್ಕೆ ಮಿತಿಗೊಳಿಸಬೇಕೆಂದು ನಾನು ಅಭಿಪ್ರಾಯಪಡುತ್ತೇನೆ. ಅಲ್ಲದೇ, ಮಾಸಿಕ ೨೫೦ ರೂಪಾಯಿಗಳಿಗೂ ಕಡಿಮೆ ವರಮಾನವಿರುವವರಿಗೆ ತೆರಿಗೆಯು ಅನವಶ್ಯಕ. ಅದಕ್ಕೆ ದ್ವಿಗುಣವಾದ ಮೊತ್ತದಿಂದ ತೆರಿಗೆ ಆರಂಭವಾಗಬೇಕು. ಇದರಿಂದ ಕಡಿಮೆ ಆದಾಯದ ಆದರೆ, ಹೆಚ್ಚು ಕಷ್ಟ ಪಡಬೇಕಾದ ಕೆಲಸದಿಂದ ವರಮಾನ ತೆರಿಗೆ ಅಧಿಕಾರಿಗಳು ನಿರಾಳವಾಗುತ್ತಾರೆ.

ಮತ್ತು ನಾಮಮಾತ್ರದ ತೆರಿಗೆ ಪ್ರಮಾಣವನ್ನು ಕಡಿತಗೊಳಿಸಿದನಂತರ, ಎಲ್ಲ ಆದಾಯದ ಘೋಷಣೆಗಳನ್ನೂ, ಸರ್ಕಾರವು ಸತ್ಯ ಎಂದು ಒಪ್ಪಿಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ. ಸಾಮಾನ್ಯ ತನಿಖೆಗಳಲ್ಲಿ,

ತೆರಿಗೆ ತಪ್ಪಿಸಿ, ಅಪರಾಧಿಗಳೆಂದು ಕಂಡುಬಂದವರನ್ನು ನಿಷ್ಕರುಣೆಯಿಂದ ಶಿಕ್ಷಿಸಬೇಕು. ಈ ರೀತಿಯ ವ್ಯವಸ್ಥೆಯು, ಪ್ರತಿಯೊಬ್ಬ ತೆರಿಗೆ ಪಾವತಿದಾರನನ್ನೂ ಕಳ್ಳನೆನ್ನುವಂತೆ ಪರಿಗಣಿಸುವ ಈಗಿನ ವ್ಯವಸ್ಥೆಗಿಂತಲೂ ಹೆಚ್ಚಿನ ವರಮಾನವನ್ನು ರಾಜ್ಯದ ಬೊಕ್ಕಸಕ್ಕೆ ತಂದುಕೊಡುವುದು ಎಂದು ನಾನು ಊಹಿಸುತ್ತೇನೆ.

(ಏಪ್ರಿಲ್ ೧೩, ೧೯೬೪)



# ೧೯೬೩ರ ಮೊರಾರ್ಜಿಯವರ ಆಯವ್ಯಯ ಪತ್ರ

ಪ್ರಸ್ತುತ ಆಪತ್ಕಾಲದಲ್ಲಿ ರಕ್ಷಣಾ ವ್ಯವಸ್ಥೆಗೆ ಪೂರಕವಾಗುವ ಆಯವ್ಯಯ ಪತ್ರವನ್ನು ಎಲ್ಲರೂ ನಿರೀಕ್ಷಿಸಿದ್ದರು. ಅರ್ಥ ಸಚಿವರು, ರಕ್ಷಣಾ ವ್ಯವಸ್ಥೆಗೆ ತೊಡಗಿಸುವ ಮೂಲವೆಚ್ಚವನ್ನು ಗಣನೀಯವಾಗಿ ಹೆಚ್ಚಿಸುವುದರ ಮೂಲಕ, ನಿರೀಕ್ಷೆಗೆ ತಕ್ಕಂತೆ ನಡೆದುಕೊಂಡಿದ್ದಾರೆ. ಇದು ಸ್ವಾಗತಾರ್ಹವಾದದ್ದಾದರೂ ಈ ಮೊತ್ತವು ಸಮರ್ಪಕವಾಗಿ ಉಪಯೋಗಿಸಲ್ಪಡುವುದರತ್ತ ಮತ್ತು ದೇಶದ ರಕ್ಷಣೆಯನ್ನು ಸಂಪೂರ್ಣವಾಗಿ ಸುರಕ್ಷಿತ ಮತ್ತು ಸುಭದ್ರಗೊಳಿಸಲು ಪ್ರಯತನನ್ನಗಳನ್ನು ಕೈಗೊಳ್ಳಬೇಕಾಗಿದೆ. ಭದ್ರತೆಯ ಕಾರಣಗಳಿಂದಾಗಿ, ರಕ್ಷಣಾ ಆಯವ್ಯಯವು, ಹೆಚ್ಚು ವಿವರವಾಗಿ, ಲೋಕಸಭೆಯಲ್ಲಿ ಮಂಡಿಸಲ್ಪಟ್ಟಿಲ್ಲ. ರಕ್ಷಣಾ ವಿಭಾಗದ ಪರಿಷತ್ತಾಗಲೀ, ಅಥವಾ ರಕ್ಷಣಾ ಉಪಸಮಿತಿಯಾಗಲೀ ಈ ಪ್ರಶ್ನೆಗೆ ಹೆಚ್ಚಿನ ಗಮನ ನೀಡುವುದು ಸೂಕ್ತ.

ರಕ್ಷಣಾ ವ್ಯವಸ್ಥೆ ಮತ್ತು ಅಭಿವೃದ್ಧಿ ಈ ಎರಡೂ ಜೊತೆ ಜೊತೆಯಲ್ಲಿಯೇ ಸಾಗುತ್ತವೆ ಎಂಬುದನ್ನು ನಾವು ಒಪ್ಪುತ್ತೇವೆ. ಅಭಿವೃದ್ಧಿಯನ್ನೇನಾದರೂ ಬಿಟ್ಟಿದ್ದೇ ಆದರೆ, ದೀರ್ಘಕಾಲಾವಧಿಯಲ್ಲಿ ರಕ್ಷಣಾ ವ್ಯವಸ್ಥೆಯೂ ದುರ್ಬಲಗೊಳ್ಳುತ್ತದೆ. ಆದರೆ, ಮೂರನೆಯ ಯೋಜನೆಯು, ಸಶಕ್ತ ರಕ್ಷಣಾ ವ್ಯವಸ್ಥೆಯನ್ನು ರೂಪಿಸುವಂತಹ, ನಿಜವಾಗಿಯೂ ಅಭಿವೃದ್ಧಿಶೀಲ ಯೋಜನೆಯೆಂದು ಭಾವಿಸುವುದು ತಪ್ಪು. ಸರ್ಕಾರದ ಯೋಜನೆಗಳಲ್ಲಿ ಮತ್ತು ನೀತಿಗಳಲ್ಲಿ ಮೂಲಭೂತವಾದ ಮರುಹೊಂದಾಣಿಕೆಯ ಹೊಸದೃಷ್ಟಿಯ ಅವಶ್ಯಕತೆಯಿದೆ. ಪ್ರಸ್ತುತ ಆಯವ್ಯಯ ಪತ್ರವು, ಯುದ್ಧದಲ್ಲಿ ಹೋರಾಡಲು ಸಜ್ಜಾಗಿರುವ ದೇಶದ ಅರ್ಥವ್ಯವಸ್ಥೆಯ ಸಮಗ್ರ ದೃಷ್ಟಿಕೋನವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಸರ್ಕಾರದ ಧೋರಣೆ, ಕಾರ್ಯನೀತಿಗಳಿಂದಾಗಿ ಈಗಾಗಲೇ ದೇಶದ ಆರ್ಥಿಕ ಪರಿಸ್ಥಿತಿಯು ತೀವ್ರ ಒತ್ತಡಕ್ಕೊಳಗಾಗಿದೆ. ಈಗ, ಯುದ್ಧದಿಂದಾಗಿ, ಹೆಚ್ಚುವರಿ ಹೊರೆಗಳ ಆಗಮಿಸಿರುವಾಗ ಪರಿಹಾರೋಪಾಯಗಳ ಕೈಗೊಳ್ಳುವುದು ತುರ್ತು ಅಗತ್ಯವಿದೆ. ಆದರೆ, ಸರ್ಕಾರವು ಅಂತಹ ಯಾವುದೇ ಕ್ರಮ ಕೈಗೊಳ್ಳುವುದರಲ್ಲಿ ವಿಫಲವಾಗಿದೆ.

ಈ ವರ್ಷದ ಆಯವ್ಯಯ ಪತ್ರವನ್ನು ನಾವು ವಿಶ್ಲೇಷಿಸುವುದಾದರೆ, ಕಳೆದ

ವರ್ಷ ಹಣಕಾಸು ಸಚಿವರು ಆಯವ್ಯಯ ಪತ್ರಕವನ್ನು ಮಂಡಿಸಿದಾಗ, ಅರುವತ್ತು ಕೋಟಿ ರೂಪಾಯಿಗಳ ಆದಾಯದ ಕೊರತೆಯನ್ನು, ಅದೇ ಮೊತ್ತದ ಹೆಚ್ಚುವರಿ ತೆರಿಗೆಗಳನ್ನು ವಿಧಿಸುವುದರ ಮೂಲಕ ತುಂಬಿಕೊಳ್ಳಬಹುದೆಂದು ತಿಳಿಸಿದ್ದರು. ಮತ್ತು ಕೇವಲ ೭೨ ಲಕ್ಷಗಳ ಉಳಿತಾಯವನ್ನು ತೋರಿಸಿದ್ದರು. ಹೊಸ ತೆರಿಗೆಗಳಿಂದಾಗಿ ಹೆಚ್ಚಿನ ವರಮಾನ ಬಂದಿದ್ದಾಗ್ಯೂ, ಪರಿಷ್ಕರಿಸಿದ ಲೆಕ್ಕಾಚಾರಗಳ ಪ್ರಕಾರ ೨೨.೦೬ ಕೋಟಿಗಳ ಆದಾಯದ ಕೊರತೆ ಕಂಡು ಬಂದಿದೆ. ವರಮಾನ ಮತ್ತು ಬಂಡವಾಳದ ಆಯವ್ಯಯವನ್ನು ಗಣನೆಗೆ ತೆಗೆದುಕೊಳ್ಳುತ್ತಾ ಸರ್ಕಾರವು, ಹಣಕಾಸಿನ ಕೊರತೆ ಕೇವಲ ೧೫೦ ಕೋಟಿ ರೂಪಾಯಿಗಳಷ್ಟು ಮಾತ್ರ ಇರಬೇಕೆಂದು ಉದ್ದೇಶಿಸಿತ್ತು. ಈಗ ಅರ್ಥಸಚಿವರು ಈ ಸಂಖ್ಯೆಯನ್ನು ೨೪೦ ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ. ಈ ದೋಷವನ್ನು, ರಾಷ್ಟ್ರೀಯ ಆಪತ್ಕಾಲೀನ ಪರಿಸ್ಥಿತಿ ಮತ್ತು ಅದರ ಪರಿಣಾಮವಾಗಿ ಉಂಟಾಗಿರುವ ರಕ್ಷಣಾ ವೆಚ್ಚದ ಹೆಚ್ಚಳದ ಹೆಸರಿನಲ್ಲಿ ಅವರು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ಈ ಮೂಲಕ ಅವರು ತಪ್ಪುಕಲ್ಪನೆಯನ್ನು ಸೃಷ್ಟಿಸಲು ಹೊರಟ್ಟಿದ್ದಾರೆ. ಕಮ್ಯೂನಿಸ್ಟ್ ಚೀನಾದ ಆಕ್ರಮಣದಿಂದಾಗಿ ಬಜೆಟ್‌ನಲ್ಲಿನ ನಮ್ಮ ರಕ್ಷಣಾ ವೆಚ್ಚವು, ೩೪೩.೪೭ ಕೋಟಿ ರೂಪಾಯಿಗಳಿಂದ, ಪರಿಷ್ಕೃತ ೪೫೧.೮೧ ಕೋಟಿ ರೂಪಾಯಿಗಳಿಗೆ ಹೆಚ್ಚಿತ್ತು. (ವರಮಾನ) ಮತ್ತು ಬಂಡವಾಳದ ಆಯವ್ಯಯವು ೩೨.೬೩ ಕೋಟಿ ರೂಪಾಯಿಗಳಿಂದ ೫೨.೭೫ ಕೋಟಿ ರೂಪಾಯಿಗಳಿಗೆ ಹೆಚ್ಚಿತು. ನಾವು ಸರ್ಕಾರದ ವರಮಾನವನ್ನು ನೋಡಿದರೆ, ಅದು ಕೂಡ, ೧೨೦ ಕೋಟಿ ರೂಪಾಯಿಗಳ ಹೆಚ್ಚಳವನ್ನು ತೋರಿಸುತ್ತದೆ–ಆಯವ್ಯಯ ಪತ್ರದಲ್ಲಿ ತೋರಿಸಲಾಗಿದ್ದ ೧೩೮೦.೯೩ ಕೋಟಿ ರೂಪಾಯಿಗಳಿಂದ ಪರಿಷ್ಕೃತ ಅಂದಾಜು ೧೫೦೦.೨೫ ಕೋಟಿ ರೂಪಾಯಿಗಳ ಹೆಚ್ಚಳವಾಗಿದೆ. ಆದ್ದರಿಂದ, ಸರ್ಕಾರವು ಬೇರೆ ಬೇರೆ ಇಲಾಖೆಗಳಲ್ಲಿ. ಮಂಜೂರು ಮಾಡದಿದ್ದ ವೆಚ್ಚವನ್ನು ಕಡಿತಗೊಳಿಸುವತ್ತ ಅಥವಾ ಕಡಿಮೆ ಮಾಡುವತ್ತ ಗಮನ ಹರಿಸಿದ್ದಿದ್ದರೆ, ಇಷ್ಟು ಹೆಚ್ಚಿನ ಕೊರತೆಯುಂಟಾಗಲು ಕಾರಣವೇ ಇರಲಿಲ್ಲ. ಅದೂ ಅಲ್ಲದೆ, ರಾಷ್ಟ್ರದ ಕರೆಗೆ ಪ್ರತಿಸ್ಪಂದಿಸಿದ ಜನತೆ, ತುರ್ತುಪರಿಸ್ಥಿತಿಯ ಘೋಷಣೆಯ ನಂತರ ವಿವಿಧ ನಿಧಿಗಳಿಗೆ ೧೨೩.೯೩ ಕೋಟಿ ರೂಪಾಯಿಗಳ ಕೊಡುಗೆ ನೀಡಿದ್ದಾರೆ.

ನಿಸ್ಸಂಶಯವಾಗಿಯೂ ಜನರು ಹೆಚ್ಚಿನ ಹೊರೆಯನ್ನು ಹೊತ್ತಿದ್ದಾರೆ. ಏನಾದರೂ ದೋಷವಿರುವುದಾದರೆ, ಅದು ಸರ್ಕಾರದ ಕಡೆಯಲ್ಲಿಯೇ. ಆದರೆ, ಸರ್ಕಾರದವರ ಹದ್ದುಮೀರಿದ ದುಂದುವೆಚ್ಚವಿರದಿದ್ದರೆ ಪ್ರಸಕ್ತ ವರ್ಷ ಉಳಿತಾಯದ ಆಯವ್ಯಯ ಪತ್ರವಾಗಿರುತ್ತಿತ್ತು. ಸಾರ್ವಜನಿಕ ಲೆಕ್ಕಪತ್ರಗಳ ಪರಿಶೀಲನಾ ಸಮಿತಿಯು ಸಲಹೆ ಮಾಡಿದ ಉಳಿತಾಯಗಳನ್ನು ಅವರು, ಕಾರ್ಯಗತಗೊಳಿಸಿದ್ದಿದ್ದರೆ, ಭವಿಷ್ಯದಲ್ಲಿನ ವೆಚ್ಚವನ್ನು ಭರಿಸಲು ಖಂಡಿತವಾಗಿ ಸ್ವಲ್ಪವನ್ನಾದರೂ ಉಳಿಸಬಹುದಾಗಿತ್ತು.



ಈ ಹೆಚ್ಚಿನ ವೆಚ್ಚದ ಕಾರಣಗಳಲ್ಲಿ ಒಂದು, ರಾಜ್ಯ ಸರ್ಕಾರಗಳಿಗೆ ತಮ್ಮ ಸ್ಥಿತಿಗತಿಗಳನ್ನು ಉತ್ತಮಗೊಳಿಸಿಕೊಳ್ಳಲು ನೀಡಿದ ತಾತ್ಪೂರ್ತಿಕ ಸಾಲಗಳ ಅನುದಾನ, ಕೇಂದ್ರದಿಂದ ರಾಜ್ಯಗಳಿಗೆ ನೀಡಲಾಗಿರುವ ಅಧಿಕ ಆದಾಯದ ಮೂಲಗಳು. ಮೂರನೆಯ ಹಣಕಾಸು ಆಯೋಗವು ಕೇಂದ್ರದಲ್ಲಿ ರಾಜ್ಯಗಳ ಭಾಗವನ್ನೂ ಹೆಚ್ಚಿಸಿತು. ಜೊತೆಗೆ ಕೇಂದ್ರ ಕೂಡ, ಪ್ರತಿವರ್ಷವೂ ಧಾರಾಳವಾಗಿ ಅನುದಾನಗಳನ್ನು ನೀಡುತ್ತಿತ್ತು. ಎರಡನೆಯ ಯೋಜನೆಯ ಪೂರ್ಣ ಅವಧಿಯಲ್ಲಿ ಕೇಂದ್ರದಿಂದ ರಾಜ್ಯಗಳಿಗೆ ಕೊಡಲಾದ ಹಣ ೨೮೬೭.೯೨ ಕೋಟಿ ರೂಪಾಯಿಗಳಾದರೆ, ಮೂರನೆಯ ಯೋಜನೆಯ ಆರಂಭದಲ್ಲಿಯೇ, ಅಷ್ಟು ಮೊತ್ತದ ಹಣ ರಾಜ್ಯಗಳ ಪಾಲಿಗೆ ಸಂದಿತ್ತು. ಈ ವರ್ಷದ ಆಯವ್ಯಯ ಪತ್ರವು ಆ ಮೊತ್ತದ ಹಣವನ್ನು ೧೦೦೮.೭೨ ಕೋಟಿ ರೂಪಾಯಿಗಳೆಂದು ನಿಗದಿ ಪಡಿಸಿದೆ. ಪರಿಷ್ಕೃತ ಲೆಕ್ಕಾಚಾರಗಳು, ಈ ವರ್ಷಕ್ಕೆ ೯೮೨.೪೪ ಕೋಟಿ ರೂಪಾಯಿಗಳೆಂದು ಹೇಳಲಾಗಿದೆ. ೧೯೬೨–೬೩ರಲ್ಲಿ ರಾಜ್ಯಗಳ ಸಂಪೂರ್ಣ ವರಮಾನ ಮತ್ತು ಬಂಡವಾಳದ ಆಯವ್ಯಯವು ೧೭೦೦.೬೧ ಕೋಟಿ ರೂಪಾಯಿಗಳಾಗುತ್ತವೆ. ನಿಶ್ಚಯವಾಗಿಯೂ, ರಾಜ್ಯಗಳು ಶೇಕಡ ೬೦ಕ್ಕಿಂತಲೂ ಹೆಚ್ಚಿನ ಸಂಪನ್ಮೂಲಗಳನ್ನು ಕೇಂದ್ರದಿಂದ ಪಡೆಯುತ್ತವೆ. ವ್ಯವಹಾರದ ಈ ಸ್ಥಿತಿಯ ಸುಧಾರಣೆ ಅಗತ್ಯವಾಗಿದೆ. ರಾಜ್ಯಗಳು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವಂತೆ ಅವುಗಳಿಗೆ ಹೇಳಬೇಕು ಅಥವಾ ತಮ್ಮ ಹಾಸಿಗೆಯಿದ್ದಷ್ಟು ಮಾತ್ರ ಕಾಲು ಚಾಚುವಂತೆ ಅವುಗಳಿಗೆ ಹೇಳಬೇಕು.

ಕೇಂದ್ರ ಮತ್ತು ರಾಜ್ಯಗಳ ನಡುವೆ ಅಸ್ತಿತ್ವದಲ್ಲಿರುವ ವಿಭಿನ್ನ ತೆರಿಗೆ ವಿಭಾಗಗಳ ಮರು ಸಂಯೋಜನೆಯ ಅಗತ್ಯವೂ ಇದೆ. ಪ್ರಸ್ತುತ ಪರಿಸ್ಥಿತಿಯು ರಾಜ್ಯಗಳು ಹೆಚ್ಚು ಹೆಚ್ಚಾಗಿ ಕೇಂದ್ರವನ್ನು ಅವಲಂಬಿಸುವಂತೆ ಮಾಡುವುದರಿಂದಾಗಿ, ರಾಜ್ಯಗಳು ಬೇಜವಾಬ್ದಾರಿಯುತವಾಗುವಂತೆ ಮಾಡುತ್ತದೆ. ಮೀಸಲು ನಿಧಿಯ ಮೇಲೆ ತನ್ನ ಮಿತಿಗಿಂತಲೂ ಹೆಚ್ಚು ಹಣ ತೆಗೆದುಕೊಳ್ಳುವುದನ್ನು ಮುಂದುವರೆಸುವ ರಾಜ್ಯಗಳ ಮೇಲೆ ಸಮರ್ಪಕವಾದ ಸಂವಿಧಾನಾತ್ಮಕ ಕ್ರಮಗಳನ್ನು ಕೈಗೊಳ್ಳುವುದೂ ಅಗತ್ಯವಾಗಿದೆ. ಅರ್ಥ ಸಚಿವರ ಸಲಹೆ ಅಥವಾ ಭರವಸೆಯ ಮಾತುಗಳು ಖಂಡಿತ ಸಾಕಾಗುವುದಿಲ್ಲ. ೩೬೦ನೇ ಆರ್ಟಿಕಲ್‌ನ ಪ್ರಕಾರ, ರಾಷ್ಟ್ರಪತಿಗಳು ಮಧ್ಯ ಪ್ರವೇಶಿಸಿ ಅಂತಹ ರಾಜ್ಯಗಳಲ್ಲಿ ಆರ್ಥಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಬೇಕು.

ಮುಂದಿನ ವರ್ಷದ ಆಯವ್ಯಯ ಪತ್ರಕ್ಕೆ, ಜನತೆಯ ಹಾಗೂ ಅರ್ಥ ವ್ಯವಸ್ಥೆಯ ಮೇಲೆ ಉಂಟಾಗಬಹುದಾದ ಪರಿಣಾಮವನ್ನು ಲೆಕ್ಕಿಸದೆಯೇ, ಅರ್ಥ ಸಚಿವರು, ಸಾಧ್ಯವಾದಷ್ಟು ಅಗಲವೂ, ಆಳವೂ ಆದ ಬಲೆ ಬೀಸಲು ಪ್ರಯತ್ನಿಸಿದ್ದಾರೆ.

ಹೊರಲಾಗಲಾರದ ಹೊರೆಯುನ್ನು ಹೊರಲು ಜನರೇನೋ ಸಾಕಷ್ಟು ದೇಶಭಕ್ತಿಯುಳ್ಳವರಾಗಿರಬಹುದು. ಆದರೆ ಖಂಡಿತವಾಗಿಯೂ ಅರ್ಥವ್ಯವಸ್ಥೆಯು, ಭಾವನಾತ್ಮಕವಾಗಿ ಪ್ರತಿಸ್ಪಂದಿಸಲಾರದು. ಮುಂದಿನ ಈ ಮಾತುಗಳನ್ನು ಹೇಳುವಾಗ ಅರ್ಥ ಸಚಿವರು ಸಿದ್ಧಾಂತದ ಮೂಲತತ್ತ್ವಗಳನ್ನು ಅರಿತಿದ್ದಾರೆ: 'ಯೋಜನಾಬದ್ಧವಾದ ಅರ್ಥವ್ಯವಸ್ಥೆಯಲ್ಲಿ ತೆರಿಗೆ ವಿಧಿಸುವ ನೀತಿಯು, ಕೇವಲ ಸರ್ಕಾರಿ ಬೊಕ್ಕಸಕ್ಕೆ ಸಂಪನ್ಮೂಲವನ್ನು ಕೂಡಿಸುವ ಉದ್ದೇಶವನ್ನು ಮಾತ್ರವೇ, ಪೂರೈಸುವುದಿಲ್ಲ. ಆದರೆ, ಅರ್ಥವ್ಯವಸ್ಥೆಯ ಬೆಳವಣಿಗೆಯನ್ನು ಪ್ರೋತ್ಸಾಹಿಸುವ ಮತ್ತು ವಿವಿಧ ವಿಭಾಗಗಳ ನಡುವೆ ಇರುವ ಅಸಮತೋಲನವನ್ನು ಸರಿಪಡಿಸುವ ವಿಶಾಲ ಉದ್ದೇಶವನ್ನು ಸಾಧಿಸುವ ಆರ್ಥಿಕ ನೀತಿಯ ಸಾಧನವೆಂದು ನಾನು ಒತ್ತುಕೊಟ್ಟು ತಿಳಿಸಿದ್ದೆ.' ಆದರೆ, ಅವರ ಆಯವ್ಯಯದ ಪ್ರಸ್ತಾಪಗಳು ಈ ದೃಷ್ಟಿಕೋನವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತವೆ. ಅರ್ಥಸಚಿವರು ೨೯೬.೫೦ ಕೋಟಿ ರೂಪಾಯಿಗಳ ತನಕ ತೆರಿಗೆಯ ಪ್ರಸ್ತಾಪ ಮಾಡಿದ್ದಾರೆ. ಅದರ ಜೊತೆಗೆ, ಕಡ್ಡಾಯ ಠೇವಣಿ ಯೋಜನೆಯ ಅಡಿಯಲ್ಲಿ, ಸುಮಾರು ೭೦ ಕೋಟಿ ರೂಪಾಯಿಗಳನ್ನು ಪಡೆಯುವ ಭರವಸೆಯನ್ನೂ ಹೊಂದಿದ್ದಾರೆ. ಹೀಗಾಗಿ ೩೬೬.೫೦ ಕೋಟಿ ರೂಪಾಯಿಗಳು ಹೆಚ್ಚು ಹೊರೆ ಉಂಟಾಗುತ್ತದೆ. ರಾಜ್ಯಗಳು ಕೂಡ, ೧೩೫ ಕೋಟಿ ರೂಪಾಯಿಗಳವರೆಗೂ ಬರಬಹುದಾದಷ್ಟು ವಿವಿಧ ತೆರಿಗೆಗಳನ್ನು ಪ್ರಸ್ತಾಪಿಸುತ್ತಿವೆ. ಇನ್ನು ಸ್ಥಳೀಯ ಅಂಗಸಂಸ್ಥೆಗಳು ಮತ್ತಿನ್ನೆಷ್ಟು ಹೊರೆ ಹೊರಿಸುವುವು ಎಂಬುದನ್ನು ಲೆಕ್ಕ ಮಾಡುವುದು ಕಷ್ಟ. ಒಟ್ಟಿನಲ್ಲಿ ಹೇಳಬಹುದಾದರೆ. ಈ ವರ್ಷ ಜನರು, ಇಲ್ಲಿಯ ತನಕವೂ ತಾವು ಕೊಡುತ್ತಿದ್ದ ತೆರಿಗೆಗಳ ಜೊತೆಗೆ ಇನ್ನೂ ೫೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ತೆರಿಗೆಗಳನ್ನು ಪಾವತಿಸಬೇಕಾಗುತ್ತದೆ. ಮತ್ತು ಈ ಎಲ್ಲ ಹೊರೆಯನ್ನೂ ರಕ್ಷಣಾ ವ್ಯವಸ್ಥೆಯ ಹೆಸರಿನಲ್ಲಿ ಹೇರಲಾಗುತ್ತಿದೆ. ಆದರೆ ವಾಸ್ತವಾಂಶವೇನೆಂದರೆ, ರಕ್ಷಣಾ ವ್ಯವಸ್ಥೆಯ ಸೇವೆಗಳಲ್ಲಿ ೪೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗಿ ವೆಚ್ಚ ಮಾಡುವ ಸಂಭವವಿಲ್ಲ.

ಪ್ರಸ್ತುತ ತೆರಿಗೆಗಳು ಎಲ್ಲ ವರ್ಗದ ಜನರಿಗೆ ಹೊಡೆತ ನೀಡುತ್ತವೆ ಹಾಗೂ ಸುಲಭ ಭೇದ್ಯ ಸ್ಥಾನಗಳಿಗೇ ಹೊಡೆತ ನೀಡುತ್ತವೆ. ಉತ್ಪಾದನಾ ತೆರಿಗೆ ಸುಂಕ ಮತ್ತು ಸೀಮಾಸುಂಕಗಳು (customs duty) ಖಂಡಿತವಾಗಿಯೂ ಹಣದುಬ್ಬರದ ಆಘಾತಕರ ಪರಿಣಾಮವನ್ನುಂಟುಮಾಡುತ್ತವೆ. ಈ ದಿನಗಳೆಲ್ಲಲ್ಲಾ ಏರುವ ಪ್ರವೃತ್ತಿಯನ್ನೇ ತೋರಿಸುತ್ತಿದ್ದ ಧಾರಣೆಗಳು, ತುರ್ತು ಪರಿಸ್ಥಿತಿಯ ಪರಿಣಾಮವಾಗಿ ಸ್ವಲ್ಪವಾದರೂ ನಿಯಂತ್ರಣಕ್ಕೊಳಪಟ್ಟಿದ್ದವು. ಇದರ ಮನ್ನಣೆ, ವಿಶ್ವಾಸಾರ್ಹತೆಗಳು ಬಳಕೆದಾರರು, ಉತ್ಪಾದಕರು ಮತ್ತು ವ್ಯಾಪಾರಗಾರರು ಹೀಗೆ, ಜನರಿಗೆ ಸೇರುತ್ತದೆ.



ಆದರೆ ಈಗ ಅವರು ಈ ಹೊಸ ತೆರಿಗೆಗಳ ಪರಿಣಾಮವನ್ನು ತಟಸ್ಥಗೊಳಿಸಲಾರರು. ಭಾರತದಲ್ಲಿನ ಬಳಕೆಯ ವಿಧಾನವು ಬಹುಮಟ್ಟಿಗೆ, ಬೇಡಿಕೆಗೆ ಅನುಸಾರವಾಗಿ ಸ್ಥಿತಿಸ್ಥಾಪಕವಾಗದಿರುವಂತಹದು. ಆನರು ತಮ್ಮ ಸೊಂಟಪಟ್ಟಿಗಳನ್ನು ಮತ್ತೂ ಬಿಗಿಗೊಳಿಸಲಾಗದಂತಹ ಮಿತಿಯಿದೆ. ಇತ್ತೀಚಿನ ತೆರಿಗೆಗಳಿಂದಾಗಿ ಒಂದು ಕುಟುಂಬದ ಆಯವ್ಯಯದ ಸುಮಾರು ಶೇಕಡ ೨೫ ರಿಂದ ೩೦ರ ತನಕ ಏರುವುದೆಂದು ಅಂದಾಜು ಮಾಡಲಾಗಿದೆ ಇದು ತೀರಾ ಹೆಚ್ಚಾಯಿತು.

ನೇರ ತೆರಿಗೆಗಳು ಮಧ್ಯಮವರ್ಗದವರು ಮತ್ತು ಹೂಡಿಕೆದಾರರು, ಇಬ್ಬರನ್ನೂ ಘಾಸಿಗೊಳಿಸುತ್ತವೆ. ಯುದ್ಧವು ವಿಸ್ತಾರವಾದ ಕೈಗಾರಿಕಾ ನೆಲೆಯನ್ನು ಕೋರುತ್ತದೆ. ಆದರೆ, ಅರ್ಥಸಚಿವರು ಖಾಸಗಿ ವಲಯದ ಅವಶ್ಯಕತೆಗಳನ್ನು ಪರಿಗಣನೆಗೇ ತೆಗೆದುಕೊಂಡಿಲ್ಲ. ಷೇರುಗಳು ಕುಸಿಯುತ್ತಿರುವ ಈ ಸಮಯದಲ್ಲಿ ಈ ರೀತಿಯ ಪ್ರಸ್ತಾಪಗಳು ಆತಂಕಕಾರಕಗಳಾಗಿ ಸಾಬೀತಾಗುತ್ತವೆ. ಅತ್ಯಂತ ಹೆಚ್ಚಿನ ಲಾಭದ ಮೇಲಿನ ತೆರಿಗೆಯು ಚಿನ್ನ ಮತ್ತು ಪಾನನಿರೋಧ ನೀತಿಗಳಂತೆಯೇ ಆರ್ಥಿಕವಾಗಿ ದೋಷಯುಕ್ತ ಹಾಗೂ ಅಭದ್ರತೆಯಿಂದ ಕೂಡಿದೆ.

ಜನಗಳ ಮೇಲೆ ಹಿಂದೆ ಎಂದೂ ಇರದಿದ್ದಂತಹ ಈ ಎಲ್ಲ ಹೊರೆಗಳು ಇದ್ದಾಗ್ಯೂ ಅರ್ಥಸಚಿವರು, ಸಮಗ್ರವಾದ ಆಯವ್ಯಯದ ಸ್ಥಿತಿಯನ್ನು ಸಮತೋಲನಗೊಳಿಸುವಲ್ಲಿ ವಿಫಲರಾಗಿದ್ದಾರೆ. ಬಂಡವಾಳದ ಆಯವ್ಯಯವು ೧೫೧ ಕೋಟಿ ರೂಪಾಯಿಗಳ ಕೊರತೆಯನ್ನು ತೋರಿಸುತ್ತದೆ ಮತ್ತು ಈ ಕೊರತೆಯು ಕೋಶಾಗಾರದ ಬಿಲ್ಲುಗಳ ವಿಸ್ತರಣೆಯಿಂದ ತುಂಬಬೇಕಾಗಿದೆ. ಮೂರನೆಯ ಯೋಜನೆಯು ಕೊರತೆ ಆರ್ಥಿಕತೆಗೆ ಮಿತಿಯನ್ನು ವಿಧಿಸಿತ್ತು. ಆದರೆ, ಅರ್ಥಸಚಿವರು ಹೋಗುತ್ತಿರುವ ಹಾದಿಯನ್ನು ನೋಡಿದರೆ, ಅವರು ಅದನ್ನು ಬಹಳ ಬೇಗನೇ ದಾಟುತ್ತಾರೆ. ಇವೆಲ್ಲವೂ ಬೆಲೆ ಏರಿಕೆಯಲ್ಲಿ ಪರ್ಯವಸಾನ ಹೊಂದುತ್ತವೆ ಮತ್ತು ಪರಿಣಾಮವಾಗಿ ಅಧಿಕ ವೇತನದ ಬೇಡಿಕೆಗೆ, ಬೆಲೆಯ ಸ್ವರೂಪದ ಏರಿಕೆಗೆ ದಾರಿಯಾಗುತ್ತದೆ. ರಫ್ತು ಮಾಡುವ ಹಲವು ವಸ್ತುಗಳಿಗೆ ಅರ್ಥಸಚಿವರು ಕೆಲವು ರಿಯಾಯಿತಿಗಳನ್ನು ಮಂಜೂರು ಮಾಡಿದ್ದಾರೆ. ರಫ್ತು ಮಾಡುವ ಕೈಗಾರಿಕೆಗಳಿಗೆ ಸಹಾಯಧನ ನೀಡುವುದರಲ್ಲಿ ಕೆಲವು ಸಮರ್ಥನೆಗಳು ಇರಬಹುದು. ಆದರೆ, ಸ್ವದೇಶ ಮತ್ತು ವಿದೇಶಗಳಲ್ಲಿನ, ಬೆಲೆಯ ವ್ಯತ್ಯಾಸವನ್ನು ಬಹಳ ಕಾಲ ಉಳಿಯಲು ಬಿಟ್ಟರೆ, ಅದು ಭ್ರಷ್ಟಾಚಾರಕ್ಕೆ ಎಡೆಮಾಡುತ್ತದೆ ಮತ್ತು ಲಾಭದಾಯಕವಲ್ಲದ ತಳಹದಿಗಳನ್ನು ಆಧರಿಸಿದ ಆರ್ಥಿಕ ಸ್ವರೂಪಕ್ಕೂ ಅವಕಾಶ ಮಾಡುತ್ತದೆ. ಬೆಲೆಗಳನ್ನು ಸ್ಥಿರಗೊಳಿಸಲು ಸರ್ಕಾರವು ತನ್ನ ನೀತಿಯನ್ನು ಸ್ವಲ್ಪ ಮಾರ್ಪಾಟು ಮಾಡಿಕೊಳ್ಳಬೇಕು.

ಆಡಳಿತದಲ್ಲಿ ಮಿತವ್ಯಯವನ್ನು ಕಾರ್ಯರೂಪಕ್ಕೆ ತರಲು ಸರ್ಕಾರವು ಏನನ್ನೂ

ಮಾಡಿಲ್ಲ. ಸಂಪೂರ್ಣವಾಗಿ ವಿಫಲವೆಂದು ಸಾಬೀತಾಗಿರುವ, ಸಮುದಾಯ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ. ಆಡಳಿತಕ್ಕೆ ಸಂಬಂಧಿಸಿದಂತೆ ಹೇಳುವುದಾದರಲ್ಲಿ, ವೆಚ್ಚದಲ್ಲಿ ಹೆಚ್ಚಳವೇ ಕಂಡುಬರುತ್ತಿದೆ. ೧೯೬೧–೬೨ರಲ್ಲಿ ವೇತನಗಳು ತುಟ್ಟಿಭತ್ಯೆಗಳು ಇವುಗಳ ಬಾಬತ್ತಿನಲ್ಲಿ ಬರುವ ವಾಸ್ತವ ಮೊತ್ತ ೯೮.೪೦ ಕೋಟಿ ರೂಪಾಯಿಗಳಿಗೆ ವಿರುದ್ಧವಾಗಿ ಈಗಿನ ಆಯವ್ಯಯವು ಅದಕ್ಕಾಗಿ ೧೨೧.೧೫ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದೆ, ಇದು ೨೩ ಕೋಟಿ ರೂಪಾಯಿಗಳಷ್ಟು ಅಧಿಕವಾಗಿದೆ. ಪಿ.ಎ.ಸಿ.ಯು, ವಾರ್ಷಿಕ ೬೦ ರಿಂದ ೧೦೦ ಕೋಟಿ ರೂಪಾಯಿಗಳ ಉಳಿತಾಯದ ಸೂಚನೆ ನೀಡಿತ್ತು. ಆದರೆ ಸರ್ಕಾರವು ಅದರ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿರುವುದನ್ನು ನಾವು ಕಾಣುತ್ತೇವೆ. ಉನ್ನತಾಧಿಕಾರಿಗಳ ವೇತನ, ಯೋಜನಾ ಮೊತ್ತ ಮುಂತಾದವುಗಳಿಂದಾಗಿ ಆಡಳಿತವು ತಲೆಭಾರವಾಗಿ ಪರಿಣಮಿಸುತ್ತಿದೆ.

೧೯೬೧–೬೨ರಲ್ಲಿ ಅಧಿಕಾರಿಗಳ ವೇತನವು ೧೭.೨೧ ಕೋಟಿ ರೂಪಾಯಿಗಳೂ ಮತ್ತು ಸಿಬ್ಬಂದಿ ವರ್ಗದವರ ವೇತನವು ೫೬.೧೦ ಕೋಟಿಗಳೂ ಆಗಿದ್ದವು. ಈಗ ಅವು ಕ್ರಮವಾಗಿ ೨೩.೧೮ ಕೋಟಿ ರೂಪಾಯಿಗಳು ಹಾಗೂ ೬೫.೭೦ ಕೋಟಿ ರೂಪಾಯಿಗಳಿಗೆ ಏರಿವೆ. ಆದ್ದರಿಂದ ಅಧಿಕಾರಿಗಳ ವೇತನವು ಒಟ್ಟು ವೇತನದ ಬಿಲ್ಲಿನ ಪ್ರತಿಶತ ೧೭.೪ ರಿಂದ ೧೯.೧ಕ್ಕೆ ಏರಿದೆ, ಅದೂ ಕಳೆದ ಎರಡು ವರ್ಷಗಳಲ್ಲಿ. ಅಲ್ಲದೇ, ಶೇಕಡ ಎಂಬತ್ತರಷ್ಟು ರಾಜರು, ಸ್ವಇಚ್ಛೆಯಿಂದ ಪ್ರತಿಶತ ಹತ್ತು (ಪರ್ಸೆಂಟನ್ನು) ಕಡಿತಗೊಳಿಸಿಕೊಳ್ಳಲು ಸಮ್ಮತಿಸಿರುವುದಾಗಿ ವರದಿಯಾಗಿದ್ದರೂ ಕೂಡ, ರಾಜಧನದ ಮೊತ್ತದಲ್ಲಿ ಗಣನೀಯವಾದ ಇಳಿತಾಯವಾಗಿಲ್ಲ. ಈ ಆಯವ್ಯಯ ಪತ್ರವು ಅರ್ಥಶಾಸ್ತ್ರ ಪರಿಣತಿಯ ಕೊರತೆಯಿಂದ ಕೂಡಿದೆ ಮತ್ತು ಉಳಿತಾಯವನ್ನು ಅಲಕ್ಷಿಸಿದೆ. ಆಯವ್ಯಯ ಪತ್ರಗಳೊಡನೆ ಪ್ರಸ್ತುತ ಪಡಿಸಿರುವ ಆರ್ಥಿಕ ಸಮೀಕ್ಷೆಯ ಬೆಳಕಿನಲ್ಲಿ ತಮ್ಮ ಹೊಸ ಪ್ರಸ್ತಾಪಗಳನ್ನು, ಕ್ರಮಬದ್ಧವಾಗಿ ಸೂತ್ರೀಕರಿಸಲು ಅರ್ಥಸಚಿವರು ಗಮನಹರಿಸಿಲ್ಲ. ಚೀನಾದ ಆಕ್ರಮಣದಿಂದ ಉಂಟಾದ ಸವಾಲನ್ನು ಎದುರಿಸುವಲ್ಲಿ ಜನರು ಸಮರ್ಥ ರೀತಿಯಲ್ಲಿ ವರ್ತಿಸಿದ್ದಾರೆ ಎಂದು ಸಮೀಕ್ಷೆಯು ನೇರವಾಗಿ ಮುಕ್ತ ಮಾತುಗಳಿಂದ ಒಪ್ಪಿಕೊಳ್ಳುತ್ತದೆ. ಆ ಸಮೀಕ್ಷೆಯು ಹೀಗೆ ಹೇಳುತ್ತದೆ: "ತುರ್ತು ಪರಿಸ್ಥಿತಿಯ ಪರಿಣಾಮದಲ್ಲಿ ಉಳಿತಾಯದ ಸಾಮಾನ್ಯ ಸಮತೋಲನವನ್ನು ಪಲ್ಲಟಗೊಳಿಸದೇ, ಅದಷ್ಟೂ ಶೀಘ್ರಗತಿಯಲ್ಲಿ ರಕ್ಷಣಾ ವ್ಯವಸ್ಥೆಯ ಸಂಚಲನಕ್ಕೆ ಅನುಮತಿಸುವುದು, ಆರ್ಥಿಕ ನೀತಿಯ ಪ್ರಥಮ ಹಾಗೂ ತತ್‌ಕ್ಷಣದ ಕಾರ್ಯವಾಗಿತ್ತು, ದೊರಕಿರುವ ಎಲ್ಲ ಸಾಕ್ಷ್ಯಾಧಾರಗಳಿಂದ, ಈ ನಿಕಟತಮ ಲಕ್ಷ್ಯವು (ಗುರಿಯು) ಜನರ ಸ್ವಯಂಪ್ರೇರಿತ ಸಹಕಾರದ ಸಹಾಯದಿಂದ ಸಾಧಿಸಲ್ಪಟ್ಟಿದೆ." ತತ್‌ಕ್ಷಣದ ಈ ಲಕ್ಷ್ಯವು ಸಾಧಿತವಾದ



ನಂತರ ದೀರ್ಘಾವಧಿಯ ಅವಶ್ಯಕತೆಗಳನ್ನು, ಸಮರ್ಪಕವಾಗಿ ಆಲೋಚಿಸಿದ ಮತ್ತು ಸುಸಂಘಟಿತವಾದ ಕಾರ್ಯನೀತಿಗಳ ಮೂಲಕ ಸಾಧಿಸುವ ಕಾರ್ಯಕೈಗೊಳ್ಳಬೇಕಾಗಿದೆ. ಆದರೆ, ಅರ್ಥಸಚಿವರು, ಸರಿಯಾಗಿ ಪರಾಮರ್ಶಿಸದ ಕ್ರಮಗಳನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಈ ಸಮೀಕ್ಷೆಯು ಎಚ್ಚರಿಸುತ್ತದೆ ಮತ್ತು ಹೀಗೆ ಹೇಳುತ್ತದೆ: 'ಅನಿರ್ದಿಷ್ಟತೆಯ ಸಾಮಾನ್ಯ ಭಾವನೆಯು ಮೇಲುಗೈಯಾಗಿದೆ ಮತ್ತು ಅದು ಹೊಸ ವಿಷಯಗಳ ಚಾಲನೆಗೆ ಪ್ರತಿರೋಧಕವಾದ ಪರಿಣಾಮವನ್ನುಂಟು ಮಾಡಿದೆ. ಆದರೆ, ಮುಂಬರುವ ತಿಂಗಳುಗಳಲ್ಲಿನ ಅರ್ಥವ್ಯವಸ್ಥೆಯು, ಖಾಸಗಿ ಹೂಡಿಕೆದಾರರ ಭರವಸೆ ಮತ್ತು ಪ್ರಮುಖ ವಾಣಿಜ್ಯ ವ್ಯವಹಾರಗಳ ವಿಸ್ತರಣೆಗೆ ಅವಶ್ಯಕವಾದ ಸಂಪತ್ತನ್ನು ಕೂಡಿಸುವ ಅವರ ಸಾಮರ್ಥ್ಯದ ಮೇಲೆ, ಬಹಳಮಟ್ಟಿಗೆ ಅವಲಂಬಿತವಾಗಿರುತ್ತದೆ.' ಅರ್ಥ ಸಚಿವರು ಈ ನಂಬಿಕೆ, ಭರವಸೆಗಳನ್ನು ಮತ್ತಷ್ಟು ದುರ್ಬಲಗೊಳಿಸಿದ್ದಾರೆ.

ಹೊಸದಾಗಿ ಪ್ರವೇಶಿಸುವವರು ಹೆದರುವುದು ಮಾತ್ರವಲ್ಲದೇ ಹಾಲಿ ಅಸ್ತಿತ್ವದಲ್ಲಿರುವ ಕೈಗಾರಿಕೆಗಳಿಗೂ ಕೂಡ ಅಹಿತಕರ ಪರಿಣಾಮಗಳಾಗುವ ಸಂಭವವಿದೆ. ಹೊಸದಾಗಿ ವಿಧಿಸಿರುವ ಸೀಮಾಸುಂಕಗಳು, ಆಮದು ನಿಯಂತ್ರಣಕ್ಕೆ ಪ್ರಯತ್ನಿಸಬೇಕಾಗಿದೆ. ಆದರೆ ಸಮೀಕ್ಷೆಯು ಹೇಳುವಂತೆ:

'ಮುಂದುವರೆಯುತ್ತಿರುವ ಆಮದು ನಿರ್ಬಂಧಗಳ ಬಿಗಿಗೊಳಿಸುವಿಕೆಯಿಂದಾಗಿ ಈಗಾಗಲೇ, ಇನ್ನು ಯಾವುದೇ ಪ್ರಮಾಣದ ನಿರ್ಬಂಧಗಳ ಹೆಚ್ಚಳವು, ಉನ್ನತ ಮಟ್ಟದ ಉತ್ಪಾದನೆಯ ಅವಕಾಶಗಳನ್ನಲ್ಲದೇ, ಉನ್ನತ ಮಟ್ಟದ ರಫ್ತನ್ನು ಕೂಡ ತೀವ್ರವಾಗಿ ಹಾನಿಗೊಳಿಸುತ್ತವೆ ಎಂಬ ಮಟ್ಟವನ್ನು ತಲುಪಿದೆ.'

ಕಡ್ಡಾಯ ಠೇವಣಿ ಯೋಜನೆಯು ಸಣ್ಣ ಉಳಿತಾಯವನ್ನೂ ಬಡಜನರನ್ನೂ ಪ್ರಭಾವಿಸುವಂತಹ ಹೊಸ ಬದಲಾವಣೆಯಾಗಿದೆ. ಅದು ನ್ಯಾಯವಿರುದ್ಧವಾದದ್ದು ಹಾಗೂ ರಾಜ್ಯವು ಎಚ್ಚರಿಕೆಯಿಂದ (ಪೂರ್ವಾಪರ ಆಲೋಚಿಸಿ) ನಿವಾರಿಸಿದ್ದ ಹೊರೆಯನ್ನು ಕೃಷಿಕರ ಮೇಲೆ ಹೇರುತ್ತದೆ. ಈಗಾಗಲೇ ಸರ್ಕಾರದ ಸುವರ್ಣ ನೀತಿಯು ಗ್ರಾಮೀಣ ಸಾಲವನ್ನು ಸಮಸ್ಯೆಯನ್ನಾಗಿಸಿದೆ. ಸರ್ಕಾರವೇನಾದರೂ ಈಗ ಒತ್ತಾಯ ಪೂರ್ವಕವಾಗಿ–ಕಡ್ಡಾಯವಾಗಿ–ಭೂಮಿಯ ಕಂದಾಯದ ಶೇಕಡ ಐವತ್ತರಷ್ಟನ್ನು ಠೇವಣಿಗಳಾಗಿ ತೆಗೆದುಕೊಂಡು ಬಿಟ್ಟರೆ, ಆಗ ವ್ಯವಸಾಯಗಾರರ ಬಳಿ ಬಂಡವಾಳವಾಗಿ ತೀರಾ ಕಡಿಮೆ ಹಣ ಉಳಿಯುತ್ತದೆ. ಅದೂ ಅಲ್ಲದೆ, ವಿವಿಧ ರಾಜ್ಯಗಳಲ್ಲಿ ಏಕರೀತಿಯ ಭೂಕಂದಾಯದ ದರಗಳಿಲ್ಲ ಅಥವಾ ಅದೇ ರಾಜ್ಯದಲ್ಲಿನ ಬೇರೆ ಬೇರೆ ಭಾಗದಲ್ಲಿ ಕೂಡ ಇಲ್ಲ. ಈ ರೀತಿಯ ಸಂಕಷ್ಟವನ್ನು ಎದುರಿಸಲು ಸರ್ಕಾರವು ಏನನ್ನು ಪ್ರಸ್ತುತಪಡಿಸುತ್ತದೆ? ಒಂದೇ ರೀತಿಯ ದರವು ಖಂಡಿತವಾಗಿಯೂ ಅನ್ಯಾಯವಾದದ್ದಾಗುತ್ತದೆ ಅಸಮರ್ಪಕವಾಗುತ್ತದೆ.

ವೇತನ ಪಡೆಯುತ್ತಿರುವ ಉದ್ಯೋಗಿಗಳಿಗೆ ಸಂಬಂಧಿಸಿದಂತೆ. ವಾರ್ಷಿಕ ೧೫೦೦ ರೂಪಾಯಿಗಳನ್ನು ಪಡೆಯುತ್ತಿರುವವರು ವಿನಾಯಿತಿ ಪಡೆದಿದ್ದಾರೆ. ಹಾಗೆಯೇ ವ್ಯವಸಾಯಗಾರರಲ್ಲಿಯೂ ಯಾಕಿರಬಾರದು? ೧೫೦೦ ರೂಪಾಯಿಗಳಿಗಿಂತಲೂ ಕಡಿಮೆ ಆದಾಯವಿರುವವರು ಕೋಟಿಗಟ್ಟಳೆ ಇದ್ದಾರೆ. ನಗರಗಳಲ್ಲಿ ವಾಸಿಸುತ್ತಿರುವ ತಮ್ಮ ಬೇರೆ ಭಾಗಗಳಿಗಿಂತ ಇವರು ಬೇರೆ ರೀತಿಯಲ್ಲಿ ಯಾಕೆ ವರ್ತಿಸಬೇಕು?

ಅರ್ಥಸಚಿವರು ತಮ್ಮ ಎಲ್ಲ ಪ್ರಸ್ತಾಪಗಳನ್ನೂ ಮರುಚಿಂತಿಸಬೇಕು ಮತ್ತು ಜನರಿಗೆ ತಮ್ಮ ಸೊಂಟಪಟ್ಟಿಗಳನ್ನು ಬಿಗಿಗೊಳಿಸುವಂತೆ ಹೇಳುವುದಕ್ಕೆ ಮೊದಲು ಸರ್ಕಾರವು ತೀರಾ ಸಡಿಲವಾಗಿ, ವಿಶ್ವಾಸವನ್ನೂ, ದಕ್ಷತೆಯನ್ನೂ ಕಳೆದುಕೊಂಡು, ಸಡಿಲವಾಗಿರುವ ತನ್ನ ಸೊಂಟಪಟ್ಟಿಯನ್ನು ಕೂಡ ಬಿಗಿಗೊಳಿಸಿಕೊಳ್ಳಬೇಕಾಗಿದೆ.

(೧೯೬೩, ಮಾರ್ಚ್ ೧೧)



## ಭಾರತ ಸರ್ಕಾರದ ಸ್ವರ್ಣನೀತಿ

ಸ್ವರ್ಣ ನಿಯಂತ್ರಣ ಆಜ್ಞೆಯು ಈಗ ಒಂದು ತಿಂಗಳಿಗೂ ಹೆಚ್ಚು ಕಾಲದಿಂದಲೂ ಜಾರಿಯಲ್ಲಿದೆ. ಆಭರಣವಲ್ಲದ ಚಿನ್ನವನ್ನು ಹೊಂದಿರುವುದರ ಬಗೆಗೆ ವಿನಾಯಿತಿಯು ವಯಸ್ಕರಿಗೆ ೫೦ ಗ್ರಾಂಗಳು ಮತ್ತು ಮೈನರ್‌ಗಳಿಗೆ ೨೦ ಗ್ರಾಂಗಳು ಎನ್ನುವ ಮಿತಿಯಂತೆ, ತಮ್ಮಲ್ಲಿರುವ ಸ್ವರ್ಣದ ಪ್ರಮಾಣವನ್ನು ಘೋಷಿಸಿಕೊಳ್ಳುವ ಕಡೆಯ ದಿನಾಂಕವನ್ನು ೨೮ನೆಯ ಫೆಬ್ರವರಿಯ ತನಕ ವಿಸ್ತರಿಸಲಾಗಿದೆ. ಇಂದಿನ ತನಕವೂ ಮಾಡಿರುವ ಘೋಷಣೆಗಳು ಖಂಡಿತವಾಗಿಯೂ, ಈ ನೀತಿನಿರ್ಮಾಪಕರ ನಿರೀಕ್ಷೆಯ ಮಟ್ಟಕ್ಕೆ ಬಂದಿಲ್ಲವೆಂದು ತೋರುತ್ತದೆ.

ಚಿನ್ನದ ಬಾಂಡ್‌ಗಳ ನೀಡಿಕೆಗೆ, ಚಂದಾದಾರರಾಗುವ ಅಥವಾ ಚಿನ್ನ ನೀಡುವ ಅವಧಿಯನ್ನು ಕೂಡ ವಿಸ್ತರಿಸಲಾಗಿದೆ. ಅಲ್ಲಿ ಕೂಡ ಪ್ರತಿಕ್ರಿಯೆಯು ತೀರಾ ಶೋಚನೀಯವಾಗಿ ಕಡಿಮೆಯಿದೆ. ಒಂದು ಪತ್ರಿಕಾ ಹೇಳಿಕೆಯ ಪ್ರಕಾರ ಆ ಬಾಂಡ್‌ಗಳಿಗೆ ನೀಡಿದ ಇಡಿಯ ಹಣದ ಮೊತ್ತವು ಸುಮಾರು ಕೇವಲ ೩ ಕೋಟಿ ರೂಪಾಯಿಗಳು ಮಾತ್ರ. ಈ ಹಳದಿಲೋಹದ ವ್ಯಾಪಾರಕ್ಕೆ, ಸಿದ್ಧರೂಪದಲ್ಲಿಯಾಗಲೀ ಅಥವಾ ಬೇರೆ ಕಡೆಗೆ ಕಳಿಸುವುದಕ್ಕಾಗಲೀ ಅನುಮತಿಯಿಲ್ಲದಿದ್ದರೂ, ನಾಮಮಾತ್ರಕ್ಕೆ– ಕೇವಲ ಹೆಸರಿಗೆ ಮಾತ್ರ– ಹೇಳಿರುವ ಅದರ ಬೆಲೆಯಲ್ಲಿ ಯಾವ ಇಳಿತವೂ ದಾಖಲೆಯಾಗಿಲ್ಲ.

ಫೆಬ್ರವರಿ ೧೨ರಂದು ದಿಲ್ಲಿಯ ಬುಲಿಯನ್ ಮಾರುಕಟ್ಟೆಯಲ್ಲಿ, ಸ್ವರ್ಣ ವಜ್ರವು ೧೦ ಗ್ರಾಂಗಳಿಗೆ ೧೦೮ ರೂಪಾಯಿಗಳಂತೆ (ನಾಮಿನಲ್ ಬೆಲೆ) ಬೆಲೆ ನಿಗದಿಸಲ್ಪಟ್ಟಿತು. ಜನವರಿ ೮ರಂದು ಸ್ವರ್ಣ ನಿಯಂತ್ರಣ ಕಾಯಿದೆಯನ್ನು (ಒತ್ತಾಯಪೂರ್ವಕ) ಕಡ್ಡಾಯವಾಗಿ ಕಾರ್ಯಗತಗೊಳಿಸುವುದಕ್ಕೆ ಮುನ್ನ ಬೆಲೆಯು ೧೦೭.೭೫ ರಷ್ಟಾಗಿತ್ತು. ಸ್ವರ್ಣ ನಿಯಂತ್ರಣ ಕಾಯಿದೆಯ ನಂತರದ ಎರಡು ಮೂರು ದಿನಗಳನ್ನು ಹೊರತುಪಡಿಸಿದರೆ, ಹೊಸ ಸ್ವರ್ಣ ನೀತಿಯು ಚಿನ್ನದ ಬೆಲೆಗಳ ಮೇಲೆ ಯಾವುದೇ ಪರಿಣಾಮವನ್ನು ಬೀರಿದಂತೆ ತೋರುವುದಿಲ್ಲ.

ಕಳೆದ ವರ್ಷ ನವೆಂಬರಿನಲ್ಲಿ ಚಿನ್ನದ ಬೆಲೆಗಳನ್ನು ಕೆಳಗಿಳಿಸುವುದರ ಬಗೆಗೆ, ಸರ್ಕಾರೀ ಕ್ರಮಗಳನ್ನು ತೆಗೆದುಕೊಳ್ಳುವ ಅರ್ಥಸಚಿವರ ಸೂಚನೆಯಿಂದ, ಈ ಲೋಹದ ಭವಿಷ್ಯದ ಬಗೆಗೆ ಭಯವಿಹ್ವಲರಾಗಿದ್ದ ವ್ಯಾಪಾರಿಗಳು, ಈ ಬಾರಿ

ಸಹಜವಾಗಿ ವರ್ತಿಸಿದರು. ಸರ್ಕಾರಿ ಕ್ರಮಗಳ ಆಘಾತಕ್ಕೆ ಅವರು ತಮ್ಮ ನರಗಳನ್ನು ಸಶಕ್ತಗೊಳಿಸಿಕೊಂಡಿರಬಹುದು ಅಥವಾ ಹೊಸನೀತಿಯು ಅದರ ಕಟ್ಟುನಿಟ್ಟು, ಕಠಿಣತೆ ಮತ್ತು ಪರಿಣಾಮಕಾರಿತ್ವದ ಬಗೆಗೆ ಅವರ ನಿರೀಕ್ಷೆಗಳನ್ನು ಹುಸಿಗೊಳಿಸಿರಬಹುದು.

ನವೆಂಬರಿನಲ್ಲಿ, ಸಂಗ್ರಹಿಸಿದ್ದ ಎಲ್ಲ ಚಿನ್ನದ ಕೊಡುಗೆಯ ಕಾರ್ಯ ನಡೆಯಿತು. ಎಲ್ಲ ಕಾಲದ ದಾಖಲೆ ಬೆಲೆಯಾಗಿದ್ದ ಹಿಂದಿನ ವರ್ಷದ ೧೦ ಗ್ರಾಂಗಳಿಗೆ ೧೨೯.೫೦ ರೂಪಾಯಿಗಳಿಗೆ ಹೋಲಿಸಿದರೆ, ೧೦ ಗ್ರಾಂಗಳಿಗೆ ೮೪.೫೦ ರೂಪಾಯಿಗಳಿಗೆ ಬೆಲೆ ಕುಸಿದು ಅಪಾಯಕಾರಿ ಮಾರಾಟದ ಮಟ್ಟ ತಲುಪಿತು. ಇದು ದೊಡ್ಡ ಹೊಡೆತವಾಗಿತ್ತು. ಸರ್ಕಾರವು ಪ್ರೋತ್ಸಾಹಗೊಂಡಿತು ಮತ್ತು ಚಿನ್ನದ ಬೆಲೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಇಳಿಸಬಹುದೆಂಬ ಭರವಸೆ ಹೊಂದಿತು. ಆದರೂ, ಕಂಗಾಲಾಗುವಂತಹ ಪರಿಸ್ಥಿತಿಗಳು ಮಾಯವಾಗಿ, ಭರವಸೆಯ ದೃಷ್ಟಿಗೆ ಎಡೆಮಾಡಿತು ಮತ್ತು ಬೆಲೆಗಳು ಏರಿದವು. ಸಾಮಾನ್ಯವಾದ, ಅಲ್ಪಪ್ರಮಾಣದ ಅಸ್ಥಿರತೆ, ಏರುಪೇರುಗಳನ್ನು ಹೊರತುಪಡಿಸಿದರೆ, ಯೂನಿಯನ್‌ನ ಅರ್ಥಸಚಿವರಿಂದ ಕಠಿಣವಾದ ಸರ್ಕಾರಿ ಕ್ರಮಗಳ ಬೆದರಿಕೆ, ಚಿನ್ನದ ಬೆಲೆಯ ಮೇಲೆ, ಮುಂಗಡ ನೀಡುವುದರ ವಿರುದ್ಧ ರಿಸರ್ವ್‌ಬ್ಯಾಂಕಿನ ಸತತ ನಿರ್ದೇಶನಗಳಿದ್ದರೂ. ಸ್ವಸ್ಥಿತಿಗೆ ಬರುತ್ತಿದ್ದ ಈ ಅವಧಿಯಲ್ಲಿ ಚಿನ್ನದ ಬೆಲೆಯು ೧೦ ಗ್ರಾಂಗಳಿಗೆ ೧೧೯ ರೂಪಾಯಿಗಳಷ್ಟಾಯಿತು. ಅಂತರರಾಷ್ಟ್ರೀಯ ಮಟ್ಟಕ್ಕೆ ಇಳಿಯುವುದರಿಂದ ದೂರವೇ ಉಳಿದ ಬೆಲೆಯ ಬಾಗುವಿಕೆಯು ಮೇಲಕ್ಕೆ ಏರುತ್ತಲೇ ಇದೆ.

ಸರ್ಕಾರದ ಸ್ವರ್ಣನೀತಿಯ ಉದ್ದೇಶಗಳು ಇದುವರೆಗೂ ' ಕೈಗೂಡಿದಂತೆ ಕಂಡುಬರುವುದಿಲ್ಲ. ೧೯೬೩ರ ಜನವರಿ ೯ನೆಯ ದಿನಾಂಕ, ಸ್ವರ್ಣ ನಿಯಂತ್ರಣ ಕಾಯಿದೆಯು ಘೋಷಿಸಲ್ಪಟ್ಟಾಗ ಶ್ರೀ ಮೊರಾರ್ಜಿ ಭಾಯಿಯವರು ತಮ್ಮ ಆಕಾಶವಾಣಿಯ ಪ್ರಸಾರ ಭಾಷಣದಲ್ಲಿ ಹೇಳಿದ್ದಾರೆ: 'ನಮ್ಮ ಪರಿಸ್ಥಿತಿಯಲ್ಲಿ ಈ ಸ್ವರ್ಣನೀತಿಯ ಅತ್ಯಂತ ಮೂಲಭೂತ ಉದ್ದೇಶವು (ಗುರಿ) ಚಿನ್ನದ ಬೇಡಿಕೆಯನ್ನು ಕಡಿಮೆಗೊಳಿಸುವ ನಿರ್ಧಾರದ ಪ್ರಯತ್ನವನ್ನು ಕೇವಲ ತುರ್ತು ಪರಿಸ್ಥಿತಿಯ ಅವಧಿಗೆ ಮಾತ್ರವಲ್ಲ ಆದರೆ ಬಹುಕಾಲದ ತನಕವೂ ಮುಂದುವರೆಸುವುದನ್ನಾಧರಿಸಿದೆ.' ಹಾಗಾಗಿ, ಕೇವಲ ಕಳೆದ ಒಂದು ತಿಂಗಳಿನ ಧೋರಣೆಯ ಆಧಾರದ ಮೇಲೆ, ಯಾವುದೇ ತೀರ್ಮಾನಕ್ಕೆ ಬರುವುದು ಸಮರ್ಪಕವಾಗಲಾರದು. ಆದಾಗ್ಯೂ, ಸ್ವರ್ಣನೀತಿಯ ವಿಶ್ಲೇಷಣೆಯಲ್ಲಿ ಮಾರುಕಟ್ಟೆಯ ಈ ವರ್ತನೆಯನ್ನು ಉಪೇಕ್ಷಿಸಲು ಸಾಧ್ಯವಿಲ್ಲ.

ಕಮ್ಯೂನಿಸ್ಟ್ ಚೀನಾದ ಆಕ್ರಮಣದಿಂದ ಉಂಟಾದ ತುರ್ತುಪರಿಸ್ಥಿತಿಯು,



ಖಂಡಿತವಾಗಿಯೂ, ಬೆಲೆಬಾಳುವ ಈ ಲೋಹವನ್ನು ಹೊರತೆಗೆಸುವ ಗುರಿಯನ್ನುಳ್ಳ ಸ್ವರ್ಣನೀತಿಯನ್ನು ಕಾರ್ಯಗತಗೊಳಿಸಲು ಅತ್ಯಂತ ಸೂಕ್ತ ಸಮಯವಾಗಿತ್ತು. ಆದರೆ, ಈ ಸಂಪೂರ್ಣ ಯೋಜನೆಗೆ ಸಮಯ ಹಿಡಿಯಿತು. ೧೯೬೨ರ ನವೆಂಬರ್, ೫ರಂದು ಗೋಲ್ಡ್‌ಬಾಂಡ್‌ಗಳನ್ನು ನೀಡಲಾಯಿತು. ಆದರೆ, ಎರಡು ತಿಂಗಳುಗಳ ನಂತರ ೧೯೬೩ರ ಜನವರಿ ೯ನೆಯ ದಿನಾಂಕ ಸ್ವರ್ಣನಿಯಂತ್ರಣ ಕಾಯಿದೆಯು ಹೊರಬಿದ್ದಿತು. ಈ ಮಧ್ಯೆ ಕದನವಿರಾಮ ಒಪ್ಪಂದ ಮತ್ತು ನಂತರದ ಸರ್ಕಾರದ ಮನೋಧರ್ಮಗಳ ಪರಿಣಾಮವಾಗಿ ತುರ್ತುಪರಿಸ್ಥಿತಿಯ ಮಾನಸಿಕ ಒತ್ತಡವು ಗಣನೀಯವಾಗಿ ಕಡಿಮೆಯಾಗಿತ್ತು. ಕೊಲಂಬೊ ಪ್ರಸ್ತಾಪಗಳನ್ನು ಒಪ್ಪಿಕೊಳ್ಳುವುದರೊಂದಿಗೆ ರಾಷ್ಟ್ರವು ಒಂದು ರೀತಿಯ ನಿರಾತಂಕವಾದ ನೆಮ್ಮದಿಯಲ್ಲಿ ಸ್ತಬ್ಧಗೊಂಡಿತ್ತೆನಿಸುತ್ತದೆ. ಇದರ ಒಟ್ಟು ಫಲಿತಾಂಶವೆಂದರೆ, ರಾಷ್ಟ್ರಭಕ್ತಿಯ ಮನವಿಯ ಮೇಲಿನ ತೀವ್ರತೆಯು ಬಹುವಾಗಿ ಕಡಿಮೆಯಾಗಿದೆ.

ಆದಾಗ್ಯೂ, ಸರ್ಕಾರವು ತುರ್ತುಪರಿಸ್ಥಿತಿಯ ಶಾಸನದ ಅಡಿಯಲ್ಲಿ ತನಗೆ ಕೊಡಲ್ಪಟ್ಟ ಅಧಿಕಾರದ ಮೇಲೆ ಅವಲಂಬಿತವಾಗಿದೆ. ಕೇವಲ ತನ್ನ ನೀತಿಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಮಾತ್ರವಲ್ಲ ಆದರೆ ಅದನ್ನು ಸೂತ್ರೀಕರಿಸುವುದರಲ್ಲಿ ಕೂಡಾ. ಎನ್.ಡಿ.ಎ.ಗೆ ಜನರ ಪ್ರತಿಕ್ರಿಯೆಯು ಹಣ ಹಾಗೂ ಚಿನ್ನದ ರೂಪದಲ್ಲಿ ಪ್ರೋತ್ಸಾಹಕರವಾಗಿಯೇ ಇದೆ. ಆದರೆ, ದೀರ್ಘಕಾಲಿನ ಉದ್ದೇಶಗಳಿರುವ (ಗುರಿಯಿರುವ) ಆರ್ಥಿಕ ನೀತಿಯ ಸೂತ್ರೀಕರಣದಲ್ಲಿ ಆ ರೀತಿಯ ಭಾವೋದ್ರಿಕ್ತ ಪ್ರವೇಶವನ್ನು ಊಹಿಸಿಕೊಳ್ಳಲಾಗುವುದಿಲ್ಲ. ಪ್ರಸಕ್ತ ನೀತಿಯನ್ನು ಖಚಿತವಾಗಿ ಪ್ರತಿಪಾದಿಸುವಲ್ಲಿ ಸರ್ಕಾರವು  ಆರ್ಥಿಕ ಅಂಶಗಳನ್ನು ಕಡೆಗಣಿಸಿದೆಯೆಂದು ತೋರುತ್ತದೆ.

ಅದಲ್ಲದೆ, ದೇಶದಲ್ಲಿರುವ ಚಿನ್ನದ ಸಂಗ್ರಹದ ಬಗೆಗಿರುವ ಖಚಿತ ಮಾಹಿತಿಯ ಕೊರತೆಯಿಂದ ಸರ್ಕಾರಕ್ಕೆ ಪ್ರತಿಕೂಲವಾಗಿದೆ. ಸ್ವರ್ಣನಿಯಂತ್ರಣ ಕಾಯಿದೆಯ ಅಡಿಯಲ್ಲಿ ಒಪ್ಪಿಸಬೇಕಾಗಿರುವ ಆದಾಯದ ಆಧಾರದಿಂದ, ಆಭರಣವಲ್ಲದ ಚಿನ್ನದ ಪ್ರಮಾಣ ಮತ್ತು ವಿತರಣೆಯ ಬಗೆಗೆ, ಯುಕ್ತ ಮತ್ತು ಸಕಾರಣವಾದ, ಸಮರ್ಪಕ ಅಂದಾಜನ್ನು ತಲುಪಲು ಸಾಧ್ಯವಾಗಬಹುದು. ಇದುವರೆಗೂ ಕೇವಲ ಸ್ಥೂಲವಾದ ಅಂದಾಜುಗಳನ್ನು ಮಾಡಲಾಗಿದ್ದು ಅವು ಸುಮಾರು ೬೦೦ ಕೋಟಿ ರೂಪಾಯಿಗಳಿಂದ ೬೧೦೦ ಕೋಟಿ ರೂಪಾಯಿಗಳ ತನಕ ಬದಲಾಗುತ್ತವೆ. ಆದರೂ, ರಿಸರ್ವ್ ಬ್ಯಾಂಕು, ಅಂತರಾಷ್ಟ್ರೀಯ ಬೆಲೆಯ ಪ್ರಕಾರ ಅದನ್ನು ೧೮೫೦ ಕೋಟಿ ರೂಪಾಯಿಗಳು ಎಂದು ಅಂದಾಜುಮಾಡುತ್ತದೆ. ಆದರೆ, ಅದರಲ್ಲಿ ಬಹುಪಾಲು ಆಭರಣಗಳ ಸ್ವರೂಪದಲ್ಲಿದ್ದಿಬೇಕೆನಿಸುತ್ತದೆ.

ದೇಶದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡಾಗ, ಚಿನ್ನದ ಮೇಲೆ ಹಣ ತೊಡಗಿಸುವುದು ಸಮರ್ಥನೀಯವಲ್ಲ. ಅದು ಉತ್ಪಾದನಾ

ಸಾಮರ್ಥ್ಯವಿಲ್ಲದ್ದು (ಅನುತ್ಪಾದಕ) ಮತ್ತು ಕಳೆದ ದಶಕದಿಂದಲೂ ಅದು ಅಲ್ಪ ಪ್ರಮಾಣದ ನಮ್ಮ ವಿದೇಶಿ ವಿನಿಮಯ ಸಂಪನ್ಮೂಲಗಳ ಮೇಲೆ ಅತ್ಯಂತ ಹೆಚ್ಚಿನ ಒತ್ತಡವನ್ನು ಪ್ರಯೋಗಿಸುತ್ತಿದೆ. ಚಿನ್ನದ ಮೇಲಿನ ಹಣ ಹೂಡಿಕೆಯು, ವ್ಯಕ್ತಿಯ ಆದಾಯಕ್ಕಾಗಲೀ ರಾಷ್ಟ್ರೀಯ ಆದಾಯಕ್ಕಾಗಲೀ ಏನನ್ನೂ ಸೇರಿಸುವುದಿಲ್ಲ ಮತ್ತು ಹೆಚ್ಚಿನ ಉದ್ಯೋಗಕ್ಕೆ ಬಂಡವಾಳವನ್ನು ಅದು ಒದಗಿಸುವುದಿಲ್ಲ. ಆದ್ದರಿಂದ ಜನರು ಚಿನ್ನವನ್ನುಖರೀದಿಸುವ ಬದಲು, ತಮ್ಮ ಉಳಿತಾಯವನ್ನು ಯಾವುದಾದರೂ ಅಧಿಕ ಉತ್ಪಾದನಾ ಸಾಮರ್ಥ್ಯದ (ಲಾಭದಾಯಕ) ಉದ್ಯಮದಲ್ಲಿ ತೊಡಗಿಸಿದರೆ, ಅವರು ದ್ವಿಗುಣಲಾಭ ಪಡೆಯುವರು. ಅದು ಅವರಿಗೆ ಕೇವಲ ಬಡ್ಡಿ ಮತ್ತು– ಅಥವಾ ಲಾಭಗಳನ್ನು ಮಾತ್ರ ತರುವುದಲ್ಲದೇ ಉಳಿತಾಯ ಮಾಡಲು ಮತ್ತು ಹಣ ಹೂಡಲು ಹೆಚ್ಚು ಒಲವು ತೋರಿಸುವ ಪ್ರವೃತ್ತಿಯತ್ತ ಕರೆದೊಯ್ದು ಅಭಿವೃದ್ಧಿಯ ಪ್ರಕ್ರಿಯೆಯನ್ನು ಉಂಟುಮಾಡುತ್ತದೆ.

ಆದರೆ, ಜನಗಳಿಗೇಕೆ ಚಿನ್ನದ ಬಗೆಗೆ ಈ ಹಸಿವು, ಇಂತಹ ಹೆಬ್ಬಯಕೆ? ಇದಕ್ಕೆ ಸಾಮಾಜಿಕ ಮತ್ತು ಆರ್ಥಿಕ ಎರಡೂ ಕಾರಣಗಳಿವೆ. ಭಾರತದಲ್ಲಿ, ಸಾಮಾಜಿಕ ಒತ್ತಡಗಳು ಕ್ಷೀಣಿಸುತ್ತಿದ್ದರೂ, ಬದಲಾದ ಪರಿಸ್ಥಿತಿಯಲ್ಲಿ ಸಹ, ಆರ್ಥಿಕ ಕಾರಣಗಳು, ಚಿನ್ನದ ಬೇಡಿಕೆಯ ಹೆಚ್ಚಳಕ್ಕೆ ದಾರಿ ಮಾಡಿವೆ. ಇವು ಮುಖ್ಯವಾಗಿ, ಸರ್ಕಾರದ ಕಾರ್ಯಭಾರ ಹಾಗೂ ಲೋಪಗಳ ಪರಿಣಾಮವಾಗಿದೆ. ೧೯೫೨–೫೩ರಿಂದ, ದೊಡ್ಡ ಪ್ರಮಾಣದಲ್ಲಿ ಆರಂಭವಾಯಿತೆಂದು ಪರಿಗಣಿಸುವ ಚಿನ್ನದ ಕಳ್ಳಸಾಗಾಣಿಕೆಯು, ಆಗಿನಿಂದಲೂ ಸತತವಾಗಿ ನಡೆದು ಹೆಚ್ಚಾಗುತ್ತಲೇ ಇದೆ. ಈ ಪರಿಸ್ಥಿತಿಗೆ ಹೊಣೆಯಾಗಿರುವಂತಹ ಆರ್ಥಿಕ ಅಂಶಗಳನ್ನು ಅರ್ಥಮಾಡಿಕೊಂಡು, ಸರಿಪಡಿಸಬೇಕಾಗಿದೆ.

ಚಿನ್ನದ ಬೇಡಿಕೆಯನ್ನು ಹೆಚ್ಚಿಸುತ್ತಿರುವ ಮೊದಲನೆಯ ಮತ್ತು ಅತ್ಯಂತ ಹೆಚ್ಚಿನ ಅಂಶವೆಂದರೆ ಹಣದುಬ್ಬರ. ಸರ್ಕಾರವು ಬೆಲೆಗಳನ್ನು ಹಾಗೂ ತನ್ನ ನಾಣ್ಯದ ಮೌಲ್ಯವನ್ನೂ ಸ್ಥಿರೀಕರಿಸುವುದರಲ್ಲಿ ವಿಫಲವಾದರೆ, ನಿಜವಾದ ಲೋಹರೂಪದ ನಾಣ್ಯಗಳಲ್ಲಿ ಹಣ ಹೂಡುವ ಪ್ರವೃತ್ತಿ ಉಂಟಾಗುವುದರಲ್ಲಿ ಸಂದೇಹವೇ ಇರುವುದಿಲ್ಲ.

ಎರಡನೆಯದಾಗಿ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ಬ್ಯಾಂಕ್‌ಗಳ ಹಾಗೂ ಸಾಲ ನೀಡುವ ಸೌಲಭ್ಯಗಳ ಕೊರತೆಯಿದೆ. ಗ್ರಾಮಗಳಲ್ಲಿ ಜನರಿಗೆ ತಮ್ಮ ಉಳಿತಾಯವನ್ನು ಸುರಕ್ಷಿತವಾಗಿಡಲು, ಅದನ್ನು ಚಿನ್ನದ ಆಭರಣಗಳಾಗಿ ರೂಪಾಂತರಿಸುವುದನ್ನು ಬಿಟ್ಟು ಬೇರೆ ಯಾವ ದಾರಿಯೂ ಇಲ್ಲ. ಅವರು ಹಣ (ಹೂಡಬಹುದಾದ) ಇಡಬಹುದಾದ ಯಾವುದೇ ಬ್ಯಾಂಕಿಂಗ್ ಸಂಸ್ಥೆಗಳು ಅಲ್ಲಿ ಇಲ್ಲ ಮತ್ತು ಭದ್ರತೆಯಿರದೇ ಯಾರೂ ಹಣವನ್ನು ಸಾಲವಾಗಿ ಅವರಿಗೆ ಕೊಡುವುದಿಲ್ಲ.



ಅವರ ಬಳಿ ಚಿನ್ನವಿದ್ದರೆ, ಸಹಜವಾಗಿಯೇ ಅವರು ಅದನ್ನು ಗಿರವಿ ಇಟ್ಟು, ಅವಶ್ಯಕತೆಯಿದ್ದಾಗ ಹಣ ಪಡೆಯಬಹುದು. ಗ್ರಾಮೀಣ ಸಾಲದ ಸಮೀಕ್ಷೆಯ ಪ್ರಕಾರ, ಸಹಕಾರಿ ಮತ್ತು ಭೂಅಡಮಾನ ಬ್ಯಾಂಕುಗಳು ನಿರ್ವಹಿಸುತ್ತಿರುವ ಪಾತ್ರ, ವ್ಯವಸಾಯಗಾರರ ಸಾಲದ ಅಗಾಧ ಅವಶ್ಯಕತೆಗಳ ದೃಷ್ಟಿಯಿಂದ ಈಗಲೂ ತೀರಾ ನಗಣ್ಯವಾಗಿದೆ.

ಜಮೀನು ಇರದಿರುವ ಕೂಲಿಕಾರರು ಮತ್ತು ಕುಶಲಕರ್ಮಿಗಳಿಗೆ, ಯಾವುದೇ ಸಾಲಸೌಲಭ್ಯಗಳೂ ಇಲ್ಲ. ಅವನು ತಾನು ಹಿಂದೆ ಕೂಡಿಟ್ಟು, ಅದನ್ನು ಚಿನ್ನ ಅಥವಾ ಬೆಳ್ಳಿಯ ಒಡವೆಗಳನ್ನು ಮಾಡಿಸಿಟ್ಟಿದ್ದರೆ, ತನ್ನ ಸಂಕಷ್ಟದ ಸಮಯದಲ್ಲಿ ಅವುಗಳನ್ನೇ ಅವಲಂಬಿಸಬೇಕು. ಇನ್ನು ನಗರಗಳ ಮಧ್ಯಮವರ್ಗದವರ ಕಥೆಯೇನೂ. ಹೆಚ್ಚು ಬೇರೆಯ ರೀತಿಯಲ್ಲಿಲ್ಲ. ಅಂಚೆ ಇಲಾಖೆಯ ಮತ್ತು ಇತರ ಬ್ಯಾಂಕುಗಳ ಉಳಿತಾಯಗಳಿದ್ದಾಗ್ಯೂ ಅಂತಹ ವ್ಯತ್ಯಾಸವೇನೂ ಇಲ್ಲ. ಸಹಕಾರಿ ಸಂಘಗಳೊಡನೆ, ಸಾಲಸಂಸ್ಥೆಗಳು, ಚಿಟ್ ಫಂಡ್ಸ್ ಮುಂತಾದವುಗಳು ವ್ಯಾಪಕವಾಗಿ ಹರಡಿದ ಜಾಲವೊಂದು ಒಂದೇ ಬಾರಿಗೆ, ಒಟ್ಟೊಟ್ಟಾಗಿ ಹರಡಲ್ಪಡದಿದ್ದರೆ, ಪ್ರಸಕ್ತ ಸ್ವರ್ಣನಿಯಮಗಳು ಈ ವರ್ಗದವರಿಗೆ ಖಂಡಿತವಾಗಿಯೂ ಹೊಡೆತ ನೀಡುತ್ತವೆ.

ಚಿನ್ನದ ಬೇಡಿಕೆಯನ್ನು ಹೀಗೆ ಹೆಚ್ಚಿಸುವುದರಲ್ಲಿ ಸರ್ಕಾರದ ಕೈಗಾರಿಕಾ ಮತ್ತು ವಾಣಿಜ್ಯ ನೀತಿಗಳು ಕೂಡ ಜವಾಬ್ದಾರರಾಗಿವೆ. ಈ ವರ್ಗದವರ ಉಳಿತಾಯಗಳಿಗೆ ತಕ್ಕದಾದ– ಯುಕ್ತವಾದ–ಹೂಡಿಕೆಯ ಸೌಲಭ್ಯಗಳಿಲ್ಲ. ಈ ಎಲ್ಲ ವರ್ಷಗಳಲ್ಲಿಯೂ ಖಾಸಗಿ ಸಂಗತಿಗಳಿಗೆ ಹೆಚ್ಚಿನ ಧನಸಹಾಯ ಮಾಡಲಾಗಿದೆ. ಬೇರೆ ಬೇರೆ ಮಾರ್ಗಗಳನ್ನು ಹುಡುಕುತ್ತಾ ಹಣವು ಖಂಡಿತವಾಗಿಯೂ ಇತ್ತು. ಆದರೆ ಸರ್ಕಾರದ, ಸಮಾಜವಾದದ ಬಗೆಗಿನ ಗ್ರಸ್ತತೆಯು ಅದರ ಕತ್ತು ಹಿಸುಕಿತ್ತು. ಸಹಜವಾಗಿಯೇ ಆ ವರ್ಗದ ಜನರು ಚಿನ್ನದತ್ತ ಧಾವಿಸಿದರು. ಅದು ಕಳ್ಳಮಾಲಾದರೂ ಆಗಲೀ ಅಥವಾ ಬೇರೆ ಯಾವುದಾದರೂ ಆಗಿರಲಿ.

ಸರ್ಕಾರದ ತೆರಿಗೆಯ ಕಾನೂನುಗಳು ಮತ್ತು ಎಲ್ಲ ಸೇವಾಕ್ಷೇತ್ರಗಳಲ್ಲಿಯೂ ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರ ಇವು ಕೂಡ ಚಿನ್ನದ ಈ ಹೆಚ್ಚಿದ ಬೇಡಿಕೆಗೆ ಕೊಡುಗೆ ನೀಡಿವೆ. ಕೆಲವು ನಿರ್ದಿಷ್ಟ ಸ್ಥಾನಗಳಲ್ಲಿರುವ ಅಧಿಕಾರಿಗಳು ಮತ್ತು ವಾಣಿಜ್ಯ ವ್ಯಾಪಾರಗಳಲ್ಲಿರುವ ಸಮುದಾಯ, ಈ ಇಬ್ಬರ ಬಳಿಯೂ 'ಕಪ್ಪು ಹಣ'ವಿದೆ. ಈ 'ಕಪ್ಪು ಹಣ'ವನ್ನು ಬಿಳಿಯದಾಗಿ ಪರಿವರ್ತಿಸಲು ಸಾಧ್ಯವಿಲ್ಲದ್ದರಿಂದ ಅದನ್ನು 'ಹಳದಿ'ಯನ್ನಾಗಿ ಪರಿವರ್ತಿಸಲಾಗುತ್ತದೆ. ಸರ್ಕಾರವು ತನ್ನ ನೀತಿಯು ಯಶಸ್ವಿಯಾಗಬೇಕೆಂದು ಇಚ್ಛಿಸುವುದಾದಲ್ಲಿ, ಅದು ಈ ಕಾರಣಗಳನ್ನು ಪರಿಹರಿಸಬೇಕು ಮತ್ತು ಸ್ವರ್ಣನಿಯಂತ್ರಣ ಕಾಯಿದೆಯ ಅಡಿಯಲ್ಲಿ ಆಲೋಚಿಸಲ್ಪಟ್ಟಿರುವ ಕ್ರಮಗಳನ್ನು ಕಡ್ಡಾಯವಾಗಿ ಕಾರ್ಯಗತ ಮಾಡಬೇಕು.

ಈಗ ಪ್ರಸಕ್ತ ಸಮಯದ ಅವ್ಯವಸ್ಥೆ ಗೊಂದಲಗಳಿಗೆ ಎಡೆಮಾಡಿರುವ ಸರ್ಕಾರದ ಆರ್ಥಿಕ ನೀತಿಗಳನ್ನು, ಮೂಲಭೂತವಾಗಿ ಪರಿಷ್ಕರಿಸಿ, ಮರು ಸೂತ್ರೀಕರಿಸದಿದ್ದಲ್ಲಿ ಸ್ವರ್ಣ ನಿಯಂತ್ರಣ ಮಂಡಲಿಯ ಛೇರ್‌ಮನ್‌ರಾದ ಶ್ರೀ ಕೊಟಕ್ ಅವರು, ರಾಜ ಕಾನ್ಯೂಟ್ ನಂತೆ, ಆರ್ಥಿಕ ಸಾಗರದ, ಚಿನ್ನದ ಅಲೆಗಳನ್ನು ತಡೆಯಲು ವಿಫಲರಾಗುತ್ತಾರೆ. ಶ್ರೀ ಮೊರಾರ್ಜಿ ಭಾಯಿಯವರ ಸ್ವರ್ಣನೀತಿಯು ತನ್ನ ಉದ್ದೇಶಗಳಲ್ಲಿ ಪ್ರಶಂಸನೀಯವಾಗಿದ್ದರೂ, ಇದು ಪಾನನಿರೋಧ ನೀತಿಯ ಗತಿಯನ್ನೇ ಪಡೆಯುತ್ತದೆ. ಇದು, ಸಾಧಾರಣವಾದ ವ್ಯಾಪಾರ ವಾಹಿನಿಗಳನ್ನು, ಭೂಗತ ಮಾಡುವುದು ಮತ್ತು ಸರ್ಕಾರಿ ಬೊಕ್ಕಸಕ್ಕೆ ನಷ್ಟವುಂಟು ಮಾಡುವುದರಲ್ಲಿ ಪರಿಣಮಿಸುವುದು, ಮತ್ತು ಅಧಿಕಾರಿಗಳೊಡನೆ ಇನ್ನಷ್ಟು ಕಾನೂನುಬದ್ಧವಲ್ಲದ ಹಣ ಸೇರುತ್ತದೆ. ಕಪ್ಪುಹಣದಿಂದಾಗಿ ಚಿನ್ನದ ಬೆಲೆ ಏರುತ್ತದೆ ಹಾಗೂ ಇದು ಕಳ್ಳಸಾಗಣೆದಾರರಿಗೆ ದೊಡ್ಡ ಪ್ರಚೋದಕವಾಗುತ್ತದೆ. ಕಳ್ಳಭಟ್ಟಿ ಮತ್ತು ಚಿನ್ನದ ಕಳ್ಳಸಾಗಾಣಿಕೆಗಳು ಸಂಘಟನೆ ಇರದ ಇಂತಹ ನಡೆಯ ಸಹಜ ಫಲಿತಾಂಶವಾಗಿರುತ್ತದೆ. ತನ್ನ ಬಹುಮುಖೀ ಸಂಕೀರ್ಣತೆಯಿಂದಾಗಿ, ಸ್ವರ್ಣನೀತಿಯು, ಅಕ್ಕಸಾಲಿಗರ ಮೇಲೆ ಕೂಡಾ ಪರಿಣಾಮ ಬೀರುತ್ತದೆ. ಈಗಿನ ನಿಯಮದ ಅಡಿಯಲ್ಲಿ ಅವರು ಅತ್ಯಂತ ಹೆಚ್ಚು ಸಂಕಷ್ಟವನ್ನು ಅನುಭವಿಸುತ್ತಿರುವವರು. ಸ್ವರ್ಣ ನಿಯಂತ್ರಣ ಕಾಯಿದೆಯು ಕಾರ್ಯರೂಪಕ್ಕೆ ಬಂದಾಗಿನಿಂದಲೂ, ಅಕ್ಕಸಾಲಿಗರು ನಿರುದ್ಯೋಗಿಗಳಾಗಿದ್ದಾರೆ. ಸರ್ಕಾರವು ಮೊದಲನೆಯ ಈ ಮಾನವೀಯ ಅಂಶವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಮತ್ತು ಎರಡನೆಯದಾಗಿ ಇದು ಅವರ ಎಲ್ಲ ಮನವಿ, ಅಹವಾಲುಗಳಿಗೆ ತೀರಾ ಕಠಿಣವಾಗಿ, ಸಂಪೂರ್ಣವಾಗಿ ಕಿವುಡಾಗಿ ಬಿಟ್ಟಂತೆ ತೋರುತ್ತದೆ.

ಹದಿನಾಲ್ಕು ಕ್ಯಾರಟ್‌ಗಳಿಗಿಂತಲೂ ಹೆಚ್ಚಿನ ಪರಿಶುದ್ಧತೆಯುಳ್ಳ ಚಿನ್ನದ ಆಭರಣಗಳ ತಯಾರಿಕೆಯನ್ನು ಸರ್ಕಾರವು ನಿಷೇಧಿಸಿದುದರಿಂದಾಗಿ ಅಕ್ಕಸಾಲಿಗರು–ಸ್ವರ್ಣಕಾರರು–ಬಹಳ ಸಂಕಷ್ಟಕ್ಕೊಳಗಾದರು. ಗ್ರಾಮಗಳಲ್ಲಿ ಮತ್ತು ಪಟ್ಟಣಗಳಲ್ಲಿ ವಾಸಿಸುತ್ತಿರುವ ಹೆಚ್ಚಿನ ಸಂಖ್ಯೆಯ ಈ ಜನರು, ಈ ಕಡಿಮೆ ಗುಣಮಟ್ಟದ ಗಟ್ಟಿಗೊಂಡ ಚಿನ್ನದಿಂದ ಆಭರಣಗಳನ್ನು ತಯಾರಿಸಲಾರರು. ಅವರು ಈ ರೀತಿಯ ತಯಾರಿಕೆಗೆ ಅವಶ್ಯಕವಾದ ಶಿಕ್ಷಣ–ತರಬೇತಿಗಳನ್ನೂ ಅವರು ಪಡೆದಿರುವುದಿಲ್ಲ ಮತ್ತು ಈ ಕಲಬೆರಕೆಯ ಚಿನ್ನದ ಆಭರಣಗಳನ್ನು ತಯಾರಿಸಲು ಅವಶ್ಯಕ ಪ್ರಕ್ರಿಯೆಯಾದ, ಪರಿಷ್ಕರಣದ ಸೌಲಭ್ಯಗಳೂ ಇಲ್ಲಿ ಲಭ್ಯವಿರುವುದಿಲ್ಲ. ತಾಂತ್ರಿಕ ನಿರುದ್ಯೋಗವಲ್ಲದೇ, ಇದು ಚಿನ್ನದ ತಯಾರಿಕಾ ವ್ಯವಹಾರವು ನಗರಗಳ ಕೆಲವೇ ಬಂಡವಾಳಗಾರರ ಕೈಲಿ ಕೇಂದ್ರೀಕರಿಸುವುದರತ್ತ ಸಾಗುವುದು ಮತ್ತು ಭಾರತವು ಪ್ರಸಿದ್ಧವಾಗಿರುವ ಕೆಲವು ಅತ್ಯಂತ ಉತ್ಕೃಷ್ಟ ಕಲಾಕೌಶಲ್ಯದ ಸಾವಿನಲ್ಲಿ ಪರ್ಯವಸಾನವಾಗುವುದು, ಮತ್ತು ನಮಗೆ ಅಮೂಲ್ಯವಾದ ವಿದೇಶಿ ವಿನಿಮಯ



ಗಳಿಸಿಕೊಡುತ್ತಿದ್ದ ಈ ಕೌಶಲ್ಯ ಕೊನೆಯಾಗುವುದು.

೧೪ ಕ್ಯಾರಟ್ ಚಿನ್ನದ ನಿಯಮವು, ಚಿನ್ನದ ಬೇಡಿಕೆಯನ್ನು ಕಡಿತಗೊಳಿಸುವುದರಲ್ಲಿ ಪರಿಣಮಿಸುವುದೇ ಎಂಬುದು ಇನ್ನೂ ಚರ್ಚಾರ್ಹವಾಗಿದೆ. ಅಧಿಕಾರ ವರ್ಗದವರು ಇದು ಚಿನ್ನದ ಬೇಡಿಕೆಯನ್ನು ಇಳಿಸುತ್ತದೆ ಎಂದು ದೃಢವಾಗಿ ಹೇಳಿದರೆ, ಕೆಲಸಗಾರರು, ಹಾಗಾಗುವುದಿಲ್ಲವೆಂದು ವಾದಿಸುತ್ತಾರೆ. ೧೪ ಕ್ಯಾರಟ್ ಚಿನ್ನದ ಆಭರಣವು ನಿಜವಾಗಿಯೂ ಕಡಿಮೆ ಬೆಲೆಯದಾಗಿರುತ್ತದೆ. ಆದರೆ ಅವು ಮಾರುಕಟ್ಟೆಯ ವಿಸ್ತರಣಕ್ಕೆ ದಾರಿ ಮಾಡಿಕೊಡಬಹುದು, ಮತ್ತು ಹಾಗಾಗಿ ಒಟ್ಟಿನಲ್ಲಿ ರಾಷ್ಟ್ರೀಯವಾಗಿ ಹೆಚ್ಚಿನ ಚಿನ್ನದ ಬಳಕೆಯಾಗಬಹುದು. ಆದ್ದರಿಂದ, ಯಾವ ಉದ್ದೇಶವನ್ನು ಸಾಧಿಸಲೆಂದು ಚಿನ್ನದ ನೀತಿಯನ್ನು ಸೂತ್ರೀಕರಿಸಲಾಯಿತೋ ಅದಕ್ಕೆ ಬದಲಾಗಿ ಈ ಪ್ರಸ್ತುತ ಚಿನ್ನದ ನೀತಿಯು, ಆರ್ಥಿಕ ಉದ್ದೇಶಗಳ ನಷ್ಟದಲ್ಲಿ, ಬೇರೆ ಸಾಮಾಜಿಕ ಉದ್ದೇಶಗಳನ್ನು ಈಡೇರಿಸಬಹುದು. ದೇಶದಲ್ಲಿ ಶುದ್ಧ ಚಿನ್ನದ ಆಭರಣಗಳ ತಯಾರಿಕೆಯ ಮೇಲೆ ವಿಧಿಸುವ ಸಂಪೂರ್ಣ ನಿಷೇಧವು, ಅಂತಹ ಆಭರಣಗಳ ಕಳ್ಳಸಾಗಾಣಿಕೆಗೆ ಎಡೆ ಮಾಡಬಹುದು.

ಆರ್ಥಿಕ ಕ್ರಮಗಳೇ ವಿಫಲವಾದರೆ, ಕಳ್ಳಸಾಗಾಣಿಕೆಯನ್ನು ತಡೆಗಟ್ಟುವುದರಲ್ಲಿ ಆಡಳಿತಾತ್ಮಕ ಕ್ರಮಗಳು ಯಶಸ್ವಿಯಾಗುವುದೆಂಬುದು ಅನುಮಾನ. ಶುದ್ಧ ಚಿನ್ನದ ಆಭರಣಗಳನ್ನು ಹೊಂದಿರುವುದರ ಮೇಲೆ ನಿಷೇಧವಿಲ್ಲದಿರುವುದರಿಂದ ಮತ್ತು ಅವುಗಳನ್ನು ಘೋಷಿಸಬೇಕಾಗಿಲ್ಲದಿರುವುದರಿಂದ ಅದು ಗ್ರಾಹಕರನ್ನು ತಲುಪಿದ ಮೇಲೆ ಅದು ಕಳ್ಳಸಾಗಣೆಯಿಂದ ಬಂದಿದ್ದೇ ಎಂದು ಪರೀಕ್ಷಿಸಲಾಗುವುದಿಲ್ಲ. ಹೀಗಾಗಿ, ನಮ್ಮ ಕುಶಲ ಕರ್ಮಿಗಳ ಕೆಲಸವನ್ನು ಕಿತ್ತುಕೊಂಡು ನಾವು ಪಾಕಿಸ್ತಾನ ಮತ್ತು ಇತರ ಮಧ್ಯ–ಪೂರ್ವದೇಶಗಳ ಕುಶಲಕರ್ಮಿಗಳು, ಅಕ್ಕಸಾಲಿಗರಿಗೆ ಕೆಲಸವನ್ನು ಒದಗಿಸುತ್ತೇವೆ.

ಎಷ್ಟೇ ಉತ್ತಮ ಉದ್ದೇಶವಿದ್ದರೂ, ಯಾವುದೇ ನೀತಿಯನ್ನು, ಅದರ ಎಲ್ಲ ಅಂಶಗಳಲ್ಲಿಯೂ ಗ್ರಹಿಸದಿದ್ದಲ್ಲಿ ಅದು ವಿಫಲವಾಗುತ್ತದೆ. ಈ ನೀತಿಯನ್ನು ನಿರ್ದುಷ್ಟಗೊಳಿಸಲು, ಒಂದು ತಿಂಗಳ ಅನುಭವ, ಸಮಾಜದ ವಿವಿಧ ವರ್ಗಗಳಿಂದ, ಹಲವು ತಜ್ಞರಿಂದ ವ್ಯಕ್ತಪಡಿಸಲ್ಪಟ್ಟಿರುವ ಅಭಿಪ್ರಾಯಗಳು ಮತ್ತು ಅನೇಕ ಆಸಕ್ತರಿಂದ ಮಾಡಲ್ಪಟ್ಟಿರುವ ಮನವಿಗಳು, ಎಲ್ಲವನ್ನೂ ಬಳಸಿಕೊಳ್ಳಬೇಕಾಗಿದೆ. ಉದ್ದೇಶಗಳ ಬಗೆಗೆ ಒಮ್ಮತವಿದ್ದರೆ, ಅದನ್ನು ಕಾರ್ಯಗತಗೊಳಿಸುವಲ್ಲಿ ಪರಿಣಾಮಕಾರೀ ನೀತಿಯನ್ನು ರೂಪಿಸುವುದರಲ್ಲಿ ನಾವು ವಿಫಲರಾದರೆ, ಮತ್ತು 'ನಾನೊಬ್ಬನೇ ಸರಿಯಾಗಿದ್ದೇನೆ' ಎಂಬ ಮನೋಧರ್ಮದಿಂದ, ಆ ಉದ್ದೇಶಗಳು ಸೋಲು ಕಾಣುವ ಬದಲು, ಅಥವಾ ಯಾರೋ ಒಬ್ಬ ವ್ಯಕ್ತಿಯ ಅಥವಾ ಒಂದು ಗುಂಪಿನ ಖಯಾಲಿಗೆ ನಾವು ಬೆಲೆಕೊಟ್ಟರೆ ಅದು ತೀರಾ ಶೋಚನೀಯವಾಗುತ್ತದೆ.

(೧೯೬೩ರ ಫೆಬ್ರವರಿ ೧೮)

# ಮೂರನೆಯ ಯೋಜನೆಯು ಬಗೆಗೆ ಕ್ಷ-ಕಿರಣ

ಮೂರನೆಯ ಪಂಚವಾರ್ಷಿಕ ಯೋಜನೆಯು ಸೋಮವಾರ ಆಗಸ್ಟ್ ೭ನೆಯ ದಿನಾಂಕದಂದು, ಅದು ಮಾನ್‌ಸೂನ್ ಅಧಿವೇಶನಕ್ಕೆ ಮತ್ತೆ ಪ್ರಾರಂಭವಾದಾಗ, ಲೋಕಸಭೆಯ ಮುಂದೆ ಮಂಡಿಸಲ್ಪಟ್ಟಿತು. ಯೋಜನೆಯ ಸ್ಥೂಲ ರೂಪರೇಷೆಗಳು, ಮೊದಲು ಪರಿಜಿನಲ್ಲಿ ಚರ್ಚಿಸಿದ್ದುದಕ್ಕಿಂತ ಬೇರೆಯಾಗೇನೂ ಇಲ್ಲ. ಕೆಲವು ಕಾರ್ಯಕ್ರಮಗಳು ಹೆಚ್ಚು ವಿವರವಾಗಿಯೇ ವ್ಯಕ್ತಪಡಿಸಲ್ಪಟ್ಟಿವೆ. ಆದರೆ, ಅಂತಿಮ ಯೋಜನೆಗೆಂದು, ನಿರ್ದಿಷ್ಟವಾಗಿ ಮುಂದೂಡಲ್ಪಟ್ಟಿದ್ದ, ಉದ್ಯೋಗ ಮತ್ತು ಬೆಲೆ ನೀತಿಗಳಲ್ಲಿ, ಯೋಜನಾಕರ್ತರು ಯಾವುದೇ ಸ್ಪಷ್ಟ ಸೂಚನೆ ನೀಡುವುದರಲ್ಲಿ ವಿಫಲರಾಗಿದ್ದಾರೆ. ಉದ್ದೇಶಗಳು, ಆದ್ಯತೆಗಳು ಮತ್ತು ಯೋಜನಾ ಕೌಶಲ್ಯಗಳು, ಆಹಾರ ಧಾನ್ಯದಲ್ಲಿ ಸ್ವಸಾಮರ್ಥ್ಯ ಮತ್ತು ಕೃಷಿ ಉತ್ಪಾದನೆಯ ಹೆಚ್ಚಳವನ್ನು ಪಟ್ಟಿಯೊಳಗೆ ಸೇರಿಸಿರುವುದನ್ನು ಬಿಟ್ಟರೆ, ಬೇರೆ ಯಾವುದೇ ರೀತಿಯಲ್ಲಿಯೂ ಎರಡನೆಯ ಯೋಜನೆಗಿಂತಲೂ ಬೇರೆಯಾಗಿಲ್ಲ. ಎರಡನೆಯ ಯೋಜನಾ ಅವಧಿಯ ತೊಂದರೆಗಳಿಂದ ಯೋಜನಾಕರ್ತರು ಏನನ್ನಾದರೂ ಕಲಿತಿರುವರೆಂದು ತೋರಿದರೆ, ಅದು, ದೇಶದ ಅಭಿವೃದ್ಧಿಯಲ್ಲಿ ಕೃಷಿಗಿರುವ ಪ್ರಾಮುಖ್ಯತೆಯ ಹೆಚ್ಚಿನ ಅರಿವು ಮಾತ್ರ. ಆದರೂ, ನಾವು ಮುಂದೆ ನೋಡುವಂತೆ, ಈ ಯೋಜನೆಯ ಅಡಿಯಲ್ಲಿ ಕಾರ್ಯಕ್ರಮಗಳು, ಈ ನಿಟ್ಟಿನಲ್ಲಿ ತಮ್ಮ ಉದ್ದೇಶಗಳನ್ನೂ ಆದ್ಯತೆಗಳನ್ನೂ ಅನುಸರಿಸದಿರುವುದು ವಿಷಾದದ ಸಂಗತಿಯಾಗಿದೆ.

ಯೋಜನೆಯಲ್ಲಿ ಒಳಗೊಳ್ಳಲ್ಪಟ್ಟಿರುವ ವಸ್ತುಸಂಬಂಧಿ ಅಥವಾ ಪ್ರಾಕೃತಿಕ ಕಾರ್ಯಕ್ರಮಗಳಿಗೆ ಸಾರ್ವಜನಿಕ ವಲಯದಲ್ಲಿ ೮,೦೦೦ ಕೋಟಿ ರೂಪಾಯಿಗಳಿಗಿಂತಲೂ ಅಧಿಕ ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದೆ. ಆದಾಗ್ಯೂ, ಸಾರ್ವಜನಿಕ ವಲಯಕ್ಕೆ ಆರ್ಥಿಕ ಸಂಪನ್ಮೂಲಗಳು ಪ್ರಸ್ತುತ ಅಂದಾಜು ಮಾಡಿರುವ ಮೊತ್ತವು ೭,೫೦೦ ಕೋಟಿ ರೂಪಾಯಿಗಳಾಗಿವೆ. ಹಾಗಾಗಿ ಯೋಜನೆಯ ಭೌತಿಕ ಹಾಗೂ ಆರ್ಥಿಕ ಸ್ವರೂಪಗಳಲ್ಲಿ ೫೦೦ ಕೋಟಿ ರೂಪಾಯಿಗಳ ಅಂತರವಿದೆ ಮತ್ತು ಮಾಮೂಲಿಯಾಗಿರುವಂತೆ ಅನೇಕ ಯೋಜನೆಗಳಿಗೆ ಸಂಬಂಧಿಸಿದಂತೆ, ರಿಯಾಯಿತಿಗಳು, ವಿನಾಯಿತಿಗಳು ಇವುಗಳಿಂದ ಕಡಿಮೆ ವೆಚ್ಚದ ಅಂದಾಜು ಮಾಡಿದರೆ ಈ ಅಂತರವು ಮತ್ತಷ್ಟು ಹೆಚ್ಚಾಗುವುದು.



ಚುನಾವಣೆಗಳಿಗೆ ಸ್ವಲ್ಪ ಮುಂಚೆ, ರಾಜಕೀಯ ಸಮಯಸಾಧಕತೆಯು, ಅನೇಕ ಯೋಜನೆಗಳನ್ನು ಸೇರಿಸುವುದನ್ನು ಅನಿವಾರ್ಯವಾಗಿಸಿರಬಹುದು, ಅಂತಿಮವಾಗಿ ಅವುಗಳನ್ನು ಕೈಬಿಡಲೂಬಹುದು. ಇದು, ಜನರಲ್ಲಿ ಹತಾಶೆಯ ಭಾವನೆಯನ್ನು ಮಾತ್ರ ಹುಟ್ಟಿಸುವ, ಹುಸಿನಿರೀಕ್ಷೆ ಮತ್ತು ಅತೃಪ್ತಿಗಳನ್ನು ಉಂಟುಮಾಡುತ್ತದೆ.

೭,೫೦೦ ಕೋಟಿ ರೂಪಾಯಿಗಳ ಮೊತ್ತವು ಕೇವಲ ರಾಜ್ಯ ಮತ್ತು ಕೇಂದ್ರಗಳು ಭರಿಸಬೇಕೆಂದು ಪ್ರಸ್ತಾಪಿಸಿರುವ ವೆಚ್ಚದ ಭಾಗವನ್ನು ಮಾತ್ರ ಒಳಗೊಂಡಿದೆ. ಅಲ್ಲದೆ, ಅಧಿಕಾರದ ವಿಕೇಂದ್ರೀಕರಣವೆಂದು ಪ್ರತಿಷ್ಠೆಯ ಭಾವದಿಂದ ಕರೆಯಲಾಗಿರುವ ಪುರಸಭೆಗಳಲ್ಲಿನ ಸ್ಥಳೀಯ ಸಂಸ್ಥೆಗಳು, ಮಹಾನಗರಪಾಲಿಕೆಗಳು, ಗ್ರಾಮ ಪಂಚಾಯ್ತಿಗಳು, ಜಿಲ್ಲಾ ಪರಿಷತ್ತುಗಳು ಸ್ಥಳೀಯ ಯೋಜನೆಗಳಿಗೆ ಆರ್ಥಿಕ ನೆರವು ನೀಡಲು ಅಥವಾ ಅನುದಾನಕ್ಕೆ ಅನುಗುಣವಾಗಿ ಪೂರಕವಾಗುವಂತಹ ಸಂಪನ್ಮೂಲಗಳನ್ನು ತಾವೇ ಸಂಗ್ರಹಿಸಿಕೊಳ್ಳಬೇಕೆಂದೂ ನಿರೀಕ್ಷಿಸಲಾಗಿದೆ. ಇದರ ಜೊತೆಗೆ, ಅಭಿವೃದ್ಧಿ ಸೇವಾಶುಲ್ಕಗಳು ಮತ್ತು ಎರಡನೆಯ ಯೋಜನೆಯ ಅಂತ್ಯದವರೆಗೂ ಸ್ಥಾಪಿಸಲ್ಪಟ್ಟ ಸಂಸ್ಥೆಗಳ ವೆಚ್ಚ, ಐದು ವರ್ಷಗಳ ಅವಧಿಯಲ್ಲಿ ಅಂದಾಜು ಮಾಡಲ್ಪಟ್ಟಿರುವ ಸುಮಾರು ೩,೦೦೦ ಕೋಟಿ ರೂಪಾಯಿಗಳ ವೆಚ್ಚವನ್ನೂ ಸೇರಿಸಬೇಕಾಗಿದೆ. ಹಾಗಾಗಿ, ಸಾರ್ವತ್ರಿಕ ವಲಯದ ಖರ್ಚುವೆಚ್ಚವನ್ನು ಸರಿದೂಗಿಸಲು ಜನರಿಗೆ ೧೧,೦೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಅವಶ್ಯಕತೆಯಿದೆ– ಅದೂ ಸರ್ಕಾರವು ಅತಿಶೀಘ್ರಗತಿಯಲ್ಲಿ ಸಂಗ್ರಹಿಸುತ್ತಿರುವ ಪ್ರಸಕ್ತ ವೆಚ್ಚದ ಜೊತೆಗೆ, ಸರ್ಕಾರದ ಅವಶ್ಯಕತೆಗಳಿಗೆ ಒದಗಿಸಿದ ನಂತರ ೪೧,೦೦೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿಗದಿಪಡಿಸಿರುವ ಖಾಸಗಿ ವಲಯದ ಯೋಜನೆಯ ಭಾಗವನ್ನು ಪೂರ್ಣಗೊಳಿಸಲು, ಜನರು ವಿವಿಧ ಸಂಪನ್ಮೂಲಗಳನ್ನು ಉಪಯೋಗಿಸಬೇಕಾಗಿದೆ. ವಿದೇಶಿ ಬಂಡವಾಳದ ಆಮದಿನ ಅಂದಾಜು ೨,೨೦೦ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ ನಂತರ, ಜನರು ಹೊರಬೇಕಾಗಿರುವ ಯೋಜನಾ ವೆಚ್ಚವು ೧೨,೯೦೦ ಕೋಟಿ ರೂಪಾಯಿಗಳಾಗುತ್ತವೆ.

ಮೊದಲನೆಯ ಮತ್ತು ಎರಡನೆಯ ಯೋಜನೆಗಳ ಮೂಲ ವೆಚ್ಚದ ಅಂದಾಜು ಕ್ರಮವಾಗಿ ೩,೭೬೦ ಕೋಟಿ ರೂಪಾಯಿಗಳು ಹಾಗೂ ೭,೭೦೦ ಕೋಟಿ ರೂಪಾಯಿಗಳಾಗಿದ್ದವು. ಈ ಮೂಲವೆಚ್ಚದಲ್ಲಿ ಖಾಸಗಿ ವಲಯವು, ಹತ್ತು ವರ್ಷಗಳ ಅವಧಿಯಲ್ಲಿ ೪,೯೦೦ ಕೋಟಿ ರೂಪಾಯಿಗಳನ್ನು ಕೊಡುಗೆಯಾಗಿ ನೀಡಿತ್ತು. ಸಾರ್ವತ್ರಿಕ ವಲಯವು ಎರಡು ಯೋಜನೆಗಳ ಅವಧಿಯಲ್ಲಿ ೬,೫೦೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿತು. ಹತ್ತು ವರ್ಷಗಳಲ್ಲಿ ೬,೫೦೦ ಕೋಟಿ ರೂಪಾಯಿಗಳಿಂದ, ಐದು ವರ್ಷಗಳಲ್ಲಿ ೧೨,೦೦೦ ಕೋಟಿ ರೂಪಾಯಿಗಳಿಗೆ ಭಾರಿ ನೆಗೆತವಾಗಿದೆ, ಮತ್ತು ರಾಷ್ಟ್ರದ ಭಾರಿ ರಕ್ಷಣಾವೆಚ್ಚ ಮತ್ತು ಇತರ ಬದ್ಧತೆ,

ಬಾಧ್ಯತೆಗಳ ಬಗೆಗೆ ನೋಡುವಾಗ, ಚಿಂತನಶೀಲ ವ್ಯಕ್ತಿಗಳು, ಈ ಹೊರೆಗಳನ್ನು ಹೊರುವ ನಮ್ಮ ಸಾಮರ್ಥ್ಯದ ಬಗೆಗೆ ಅಥವಾ ನಮ್ಮ ಆರ್ಥಿಕ ಸ್ಥಿರತೆಯ ತೀವ್ರವಾದ ಸ್ಥಾನಪಲಟವನ್ನು ಗ್ರಹಿಸುವ ಸಾಮರ್ಥ್ಯದ ಬಗೆಗೆ, ನಿಜವಾದ ಅನುಮಾನಗಳನ್ನು ವ್ಯಕ್ತಪಡಿಸುತ್ತಾರೆ, ಮಹತ್ವಾಕಾಂಕ್ಷಿಗಳಿಲ್ಲದ ಜನರು ಎಂದು ಅವರನ್ನು ನಿವಾರಿಸುವ ಬದಲು, ಅವರ ಮಾತುಗಳಿಗೆ ಗಮನನೀಡಬೇಕು.

ಯೋಜನಾಕರ್ತರು ಮುಂದಿಡುತ್ತಿರುವ ಒಂದೇ ಒಂದು ವಾದವೆಂದರೆ, ಜನರ ಅಗಾಧ ಅವಶ್ಯಕತೆಗಳಿಗೆ ಹೋಲಿಸಿದರೆ ಯೋಜನೆಯ ಗಾತ್ರವು ತೀರಾ ಚಿಕ್ಕದು. ಆದರೆ, ಆದ್ಯತೆಗಳನ್ನು ನಿಗದಿಪಡಿಸುವಾಗ ಅಥವಾ ವಲಯಾನ್ವಿತ ಯೋಜನೆಗಳನ್ನು ಪ್ರಸ್ತಾಪ ಮಾಡುವಾಗ, ಬಹಳ ಅನುಕೂಲಕರವಾಗಿ ಮರೆತು ಬಿಡುತ್ತಾರೆ. ಉಪಭೋಗಿ ಕೈಗಾರಿಕೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಮೂಲಭೂತವಾದ ಮತ್ತು ಭಾರೀ ಕೈಗಾರಿಕೆಗಳಿಗೆ ಹೆಚ್ಚು ಒತ್ತು ಕೊಡುವ ಮೂಲಕ, ದೇಶದೊಳಗಿನ ಬಳಕೆದಾರನ ನ್ಯಾಯಯುಕ್ತ ಅವಶ್ಯಕತೆಗಳನ್ನು ಕಸಿದುಕೊಂಡು, ರಫ್ತನ್ನು ಪ್ರೋತ್ಸಾಹಿಸಲು ವಾದ ಮಾಡುವ ಮೂಲಕ, ಬಳಕೆಯನ್ನು ನಿರ್ಬಂಧಿಸಲು ತೆರಿಗೆಗಳನ್ನು ವಿಧಿಸುವ ಮೂಲಕ, ಯೋಜನಾಕರ್ತರು ಜನರ ಅಗಾಧ ಅವಶ್ಯಕತೆಗಳಿಗಿಂತ, ಬೇರೆಯದನ್ನೇ ನೋಡುತ್ತಾರೆ. ಅಭಿವೃದ್ಧಿಯ ದೀರ್ಘಕಾಲೀನ ಅವಶ್ಯಕತೆಗಳು ಮತ್ತು ಜನರ ಉತ್ತಮ ಮಟ್ಟದ ಜೀವನದ ನಿರೀಕ್ಷೆಯನ್ನು ಪೂರೈಸುವ ಅಲ್ಪಕಾಲೀನ ಅವಶ್ಯಕತೆಗಳ ಸಮತೋಲನ ಸಾಧಿಸಬೇಕಾಗಿದೆ. ರಷ್ಯದ ಮಾದರಿಯಲ್ಲಿ ನಾವು ರೂಪಿಸಿ ಅಳವಡಿಸಿಕೊಂಡಿರುವ ಯೋಜನಾತಂತ್ರವು ಈ ಸಮತೋಲನವನ್ನು ತರುವಲ್ಲಿ ವಿಫಲವಾಗಿದೆ. ಈ ಎಲ್ಲ ವರ್ಷಗಳಲ್ಲಿ ಅರ್ಥವ್ಯವಸ್ಥೆಯು ಅನುಭವಿಸುತ್ತಿರುವ ಒತ್ತಡಗಳನ್ನು ಮತ್ತು ನೋವು ಎಳೆತಗಳನ್ನು ಮೂರನೆಯ ಯೋಜನೆಯು ತೀವ್ರಗೊಳಿಸುತ್ತದೆ ಅಷ್ಟೆ.

(೧೯೬೧ರ, ಆಗಸ್ಟ್ ೨೧)



## ಆಹಾರ ಧಾನ್ಯಗಳಲ್ಲಿ ರಾಜ್ಯಗಳ ವ್ಯಾಪಾರ

ಏಪ್ರಿಲ್ ೧೭ರಂದು ನಡೆದ, ರಾಷ್ಟ್ರೀಯ ಅಭಿವೃದ್ಧಿ ಸಮಿತಿಯ ಅಂತಿಮ ಸಭೆಯಲ್ಲಿ ಮೂರನೆಯ ಯೋಜನಾ ಅವಧಿಯಲ್ಲಿ, ಬೆಲೆಗಳನ್ನು ಸ್ಥಿರಗೊಳಿಸಲು ಕೈಗೊಳಬೇಕಾದ ಕ್ರಮಗಳ ಬಗೆಗೆ ಯಾವುದೇ ನಿರ್ಧಾರ ತೆಗೆದುಕೊಳ್ಳಲೂ ಸಾಧ್ಯವಾಗಲಿಲ್ಲ. ಯೋಜನಾ ಆಯೋಗವು ತನ್ನ ಮೊದಲಿನ ನಿಲುವು ಹಾಗೂ ಸೈದ್ಧಾಂತಿಕ ಮಾರ್ಗಕ್ಕನುಗುಣವಾಗಿ ಆಹಾರ ಧಾನ್ಯಗಳಲ್ಲಿ ರಾಜ್ಯಗಳ ವ್ಯಾಪಾರದ ವಿಸ್ತರಣೆಯ ಸಲಹೆ ಮಾಡಿತು. ಇದು ಅಂತಿಮವಾಗಿ ನಿಯಂತ್ರಣಗಳು, ಪಡಿತರ ಪದ್ಧತಿ ಹಾಗೂ ಸಂಗ್ರಹಣೆಗಳಿಗೆ ಎಡೆ ಮಾಡುವಂತಹದಾಗಿತ್ತು. ಆದರೆ, ತಾವು ಅಧಿಕಾರ ವಹಿಸಿಕೊಂಡಾಗಿನಿಂದಲೂ ಆಹಾರ ಧಾನ್ಯಗಳಲ್ಲಿ ರಾಜ್ಯಗಳ ವ್ಯಾಪಾರದ ನೀತಿಗೆ ವಿರುದ್ಧವಾಗಿರುವ ಕೇಂದ್ರ ಆಹಾರ ಸಚಿವ ಶ್ರೀ ಎಸ್.ಕೆ.ಪಾಟೀಲರು, ಯೋಜನಾಕರ್ತರೊಂದಿಗೆ ಅಸಮ್ಮತಿಸಿದರು. ಒಮ್ಮತಕ್ಕೆ ಬರಲಾರದಷ್ಟು ಬಿಕ್ಕಟ್ಟನ್ನು ಮಾಡುವಷ್ಟು ತೀವ್ರವಾಗಿದ್ದಿತು ಭಿನ್ನಾಭಿಪ್ರಾಯಗಳು ಮತ್ತು ಈ ಸಮಸ್ಯೆಯ ಈ ಪ್ರಶ್ನೆಯ ಒಳಹೊಕ್ಕು ಪರಿಶೀಲಿಸಲು ಒಂದು ಉಪಸಮಿತಿಯನ್ನು ರಚಿಸುವಂತೆ ಪ್ರಧಾನಮಂತ್ರಿಯವರು ಸಲಹೆ ನೀಡಿದರು.

ರಾಷ್ಟ್ರೀಯ ಅಭಿವೃದ್ಧಿ (ಮಂಡಳಿ) ಆಹಾರಧಾನ್ಯ ವ್ಯಾಪಾರವನ್ನು ಕೈಗೊಳ್ಳಲು ದಿಢೀರನೆ ನಿಶ್ಚಯಿಸಿ ಈಗಾಗಲೇ ಎರಡು ವರ್ಷಗಳಿಗಿಂತಲೂ ಹೆಚ್ಚು ಕಾಲವಾಯಿತು. ಈ ಪ್ರಶ್ನೆಯನ್ನು ಎಲ್ಲ ಮಗ್ಗಲುಗಳಿಂದಲೂ ಎಚ್ಚರಿಕೆಯಿಂದ ಪರಿಶೀಲಿಸದೆ, ಆತುರವಾಗಿ ತೀರ್ಮಾನ ತೆಗೆದುಕೊಂಡಿದ್ದುದಾಗಿತ್ತು ಎಂಬುವುದು, ಈ ನಿರ್ಧಾರವನ್ನು ಕಾರ್ಯಗತ ಮಾಡಲು ಪ್ರಯತ್ನಿಸಿದ ಎಲ್ಲ ರಾಜ್ಯಗಳೂ ಲೆಕ್ಕವಿರದಷ್ಟು ತೊಂದರೆಗಳನ್ನು ಎದುರಿಸಬೇಕಾದುದರಿಂದಲೂ ಮತ್ತು ಕ್ರಮೇಣ, ಈ ಪ್ರಯತ್ನದಿಂದ ಹಿಂದಕ್ಕೆ ಸರಿಯುತ್ತಿರುವುದರಿಂದಲೂ ಸಾಬೀತಾಗಿದೆ. ಈಗಿನ ಆಹಾರ ಸಚಿವರಂತೆಯೇ, ಅವರ ಹಿಂದಿನವರೂ ಸಹ, ಈ ವಿಷಯದಲ್ಲಿ ರಾಷ್ಟ್ರೀಯ ಅಭಿವೃದ್ಧಿ (ಮಂಡಳಿ) ಮತ್ತು ಯೋಜನಾ ಆಯೋಗದೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರೆಂಬುದು ಈಗ ಯಾವುದೇ ರಹಸ್ಯವಾಗಿ ಉಳಿದಿಲ್ಲ. ಇಂತಹದೊಂದು ಪ್ರಮುಖ ವಿಷಯದ ಬಗೆಗೆ ಇಂತಹ ಡೋಲಾಯಮಾನವಾದ ನೀತಿಯು ದೇಶದ ಆರ್ಥಿಕತೆಗೆ ಎಣಿಸಲಾರದಷ್ಟು ಹಾನಿಯನ್ನು ಉಂಟುಮಾಡಿದೆ. ಈಗಿನ

ಪರಿಸ್ಥಿತಿಯಂತೆ, ಯೋಗ್ಯಬೆಲೆಯಲ್ಲಿ ಜನರಿಗೆ ಆಹಾರ ಒದಗಿಸುವ ಹೊಣೆಯನ್ನು ರಾಜ್ಯವು ತನ್ನ ಮೇಲೆ ಹೊತ್ತುಕೊಳ್ಳುತ್ತಿಲ್ಲ, ಅಥವಾ ಜನನ್ನು ಬದಲಾಗುತ್ತಿರುವ ಆರ್ಥಿಕ ಪರಿಸ್ಥಿತಿಗೆ ತಾವೇ ಹೊಂದಿಕೊಳ್ಳುವಂತೆಯೂ ಬಿಟ್ಟಿಲ್ಲ. ಮುಕ್ತ ಅರ್ಥವ್ಯವಸ್ಥೆಯಲ್ಲಿ ವೇತನಗಳು ಮತ್ತು ಬೆಲೆಗಳು, ಅಗೋಚರ ರೀತಿಯಲ್ಲಿ, ಗ್ರಹಿಕೆಗೆ ಅಸಾಧ್ಯವಾದ ರೀತಿಯಲ್ಲಿ ಯಾವುದೋ ಒಂದು ರೀತಿಯಲ್ಲಿ, ಹೊಂದಾಣಿಕೆಯಾಗಿರುತ್ತವೆ ಮತ್ತು ಪ್ರಾರಂಭಕಾಲದ ಕಷ್ಟಕಾರ್ಪಣ್ಯಗಳ ನಂತರ, ಜನರ ಸ್ಥಿತಿಯು, ಸಾಧಾರಣವಾಗಿ ಯಥಾಸ್ಥಿತಿಯನ್ನು ತಲುಪುತ್ತದೆ. ಆದರೆ ನಿಯಂತ್ರಿತ ಅರ್ಥವ್ಯವಸ್ಥೆಯಲ್ಲಿ ಧಾರಣೆಯ ಮಟ್ಟವನ್ನು ತನ್ನ ಆರ್ಥಿಕ ಉದ್ದೇಶಗಳಿಗೆ ಅನುಸಾರವಾಗಿ ನಿರ್ವಹಿಸಲು, ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಈಗ ಪ್ರಸಕ್ತ ಸನ್ನಿವೇಶದಲ್ಲಿ ನಾವು ಈ ಎರಡೂ ವಿಧಾನದ ಅನನುಕೂಲಗಳನ್ನು ಹೊಂದಿದ್ದೇವೆ, ಆದರೆ ಯಾವುದೇ ಒಂದರ ಲಾಭವನ್ನೂ ಪಡೆಯುತ್ತಿಲ್ಲ.

ಶನಿವಾರ ೯ನೆ ದಿನಾಂಕದಂದು, ಶ್ರೀ ಸಿ.ರಾಜಗೋಪಾಲಚಾರಿಯವರಿಂದ ಉದ್ಘಾಟಿಸಲ್ಪಟ್ಟ ಸಮಾವೇಶದಲ್ಲಿ ದೇಶದ ಧಾನ್ಯ ವ್ಯಾಪಾರಿಗಳು ಒಂದುಗೂಡಿದ್ದರು. ಮುಕ್ತ ಅರ್ಥ ವ್ಯವಸ್ಥೆಯ ದೃಢ ಅನುಚರರಾದ ಶ್ರೀ ರಾಜಗೋಪಾಲಚಾರಿಯವರು, ಆಹಾರಧಾನ್ಯ ವ್ಯಾಪಾರವನ್ನು ಏಕಸ್ವಾಮ್ಯತ್ವಕ್ಕೆ ಒಳಪಡಿಸುವ ಸರ್ಕಾರದ ಸೂಚನೆಯನ್ನು ವಿರೋಧಿಸುವುದರಲ್ಲಿ ವ್ಯಾಪಾರಿಗಳಿಗೆ ಬೆಂಬಲ ನೀಡದಿರಲು ಸಾಧ್ಯವಿರಲಿಲ್ಲ. ಸಮಾಜವಾದಿಯಾಗಿದ್ದು, ಸರ್ಕಾರವನ್ನು ಬೆಂಬಲಿಸುವ ಪ್ರವೃತ್ತಿಯಿರಬೇಕಾಗಿದ್ದ ಶ್ರೀ ಜಯಪ್ರಕಾಶ ನಾರಾಯಣರು ಕೂಡ, ಸಾಮಾಜವಾದದ ಸಿದ್ಧಾಂತಗಳನ್ನು ಈ ಕ್ಷೇತ್ರಕ್ಕೆ ವಿಸ್ತರಿಸುವುದು ಅಪೇಕ್ಷಣೀಯವಲ್ಲವೆಂದು ಭಾವಿಸಿದರು. ಅವರು ಹೀಗೆ ಹೇಳಿದ್ದರು: 'ವ್ಯಾಪಾರಿಗಳು ಈ ಕ್ಷೇತ್ರದಲ್ಲಿ ತಲೆಮಾರುಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಆ ಉದ್ಯಮದಲ್ಲಿ (ವೃತ್ತಿಯಲ್ಲಿ) ವಿಶೇಷ ಪರಿಣತರಾಗಿದ್ದಾರೆ. ಅವರಷ್ಟೇ ಕೌಶಲ್ಯ ಮತ್ತು ದಕ್ಷತೆಗಳಿಂದ ಸರ್ಕಾರವು ಈ ಕಾರ್ಯವನ್ನು ಮಾಡಲಾರದು ಮತ್ತು ಈ ವಿಷಯವು ಯಾವುದೇ ವಿವಾದವನ್ನಾಗಲೀ, ಸಿದ್ಧಾಂತಗಳ ಜಗಳಗಳನ್ನಾಗಲೀ ಸಮ್ಮತಿಸುವುದಿಲ್ಲ.'

ಜನರಿಗೆ ಆಹಾರ ಒದಗಿಸುವ ಮೂಲಭೂತ ಪ್ರಶ್ನೆಯೊಳಗೆ, ತತ್ತ್ವ, ಸಿದ್ಧಾಂತಗಳ ಪರಿಗಣನೆ ಬರಬಾರದು ಎನ್ನುವ ಸರ್ವೋದಯ ನಾಯಕರ ಮಾತುಗಳನ್ನು ನಾವು ಒಪ್ಪಬೇಕು. ದುರದೃಷ್ಟವಶಾತ್, ಬಹುತೇಕ ಸರ್ಕಾರದ ಒಳಗಿರುವವರಾಗಲೀ, ಹೊರಗಿರುವವರಾಗಲೀ ಈ ವಿಷಯದ ಬಗೆಗೆ, ಭಾವೋದ್ರೇಕವಿರದೆ, ನಿಷ್ಪಕ್ಷಪಾತದಿಂದಾಗಲೀ, ವ್ಯಾವಹಾರಿಕ ಕಾರ್ಯವಿಧಾನದಿಂದಾಗಲೀ (ಪ್ರಾಯೋಗಿಕ ದೃಷ್ಟಿಯಿಂದಾಗಲೀ) ಚಿಂತನೆ ನಡೆಸಿಲ್ಲ. ಸಂಪೂರ್ಣ ವ್ಯಾಪಾರವನ್ನು ತನ್ನ ಹಿಡಿತದಲ್ಲಿ (ತನ್ನ ಕೈಗಳಲ್ಲಿ) ತೆಗೆದುಕೊಂಡಿದ್ದರೂ



ಸರ್ಕಾರವು ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದರಲ್ಲಿ ವಿಫಲಗೊಂಡರೆ, ಅದು ಸಮಾಜವಾದಕ್ಕೆ ಅಪಚಾರ ಮಾಡಿದಂತೆ. ಅಲ್ಲದೆ, ಅವಶ್ಯಕ ಸಾಮಗ್ರಿಗಳ ಬೆಲೆ ಮೇಲಮೇಲಕ್ಕೆ ಏರುತ್ತಲೇ ಇರುವುದಕ್ಕೆ ನಾವು ಬಿಡಬಾರದು. ಏರಿದ ಬೆಲೆಗಳು ವೇತನ ಏರಿಕೆಯ ಬೇಡಿಕೆಗೆ ದಾರಿಯಾಗುತ್ತದೆ. ಹಾಗಾಗಿ, ಬೆಲೆ ಮತ್ತು ವೇತನದ– ಗಾದೆ ಮಾತಿನ– ಆವರ್ತವು (ಸುರುಳಿಯು) ಏರುತ್ತಲೇ ಹೋಗುತ್ತದೆ. ಬೆಲೆಗಳ ಶ್ರೇಣಿಯು ಸ್ಥಿರಗೊಳ್ಳದಿದ್ದರೆ ನಮ್ಮ ಎಲ್ಲ ಆರ್ಥಿಕ ಯೋಜನೆಗಳೂ ವಿಫಲಗೊಳ್ಳುತ್ತವೆ.

ಬೆಲೆಗಳನ್ನು ಸ್ಥಿರಗೊಳಿಸುವ ಹೆಸರಿನಲ್ಲಿ ಯೋಜನೆಯ ಕರ್ತರು ನಿಯಂತ್ರಣ ನೀತಿಯ ಪರ ವಕಾಲತ್ತು ವಹಿಸುತ್ತಾರೆ. ಆದರೆ, ರಾಜ್ಯದ ವ್ಯಾಪಾರದಿಂದ ಲಾಭ ಪಡೆದು ಯೋಜನೆಗಳಿಗೆ ಆದಾಯವನ್ನು ಹೆಚ್ಚಿಸಿಕೊಳ್ಳಬೇಕೆಂಬುದು ನಿಜವಾದ ಉದ್ದೇಶವೆಂದು ತೋರುತ್ತದೆ. ಅಖಿಲ ಭಾರತ ಆಹಾರ ವರ್ತಕರ ಸಂಘದ ಅಧ್ಯಕ್ಷರಾದ ಶ್ರೀ ಎಂ.ಹೆಚ್. ಹಾಷಿಮ್ ಪ್ರೇಮ್‌ಜೀಯವರು ತಿಳಿಸಿರುವಂತೆ, ಆಹಾರಧಾನ್ಯ ವ್ಯಾಪಾರದಿಂದ ಸರ್ಕಾರವು ೧೭೦ ಕೋಟಿ ರೂಪಾಯಿಗಳಿಂದ ೨೭೦ ಕೋಟಿ ರೂಪಾಯಿಗಳವರೆಗೆ ಲಾಭ ಪಡೆಯಲು ಬಯಸುತ್ತದೆ. ಅದು ಸರ್ಕಾರದ ಉದ್ದೇಶವಾಗಿದ್ದಲ್ಲಿ, ಬೆಲೆಗಳನ್ನು ತಡೆಹಿಡಿಯುವ ನಿಜವಾದ ಉದ್ದೇಶವು ವಿಫಲವಾಗುವುದು. ಆಹಾರಕ್ಕೆ ಸಂಬಂಧಿಸಿದಂತೆ ಸಂವಿಧಾನಾತ್ಮಕ ದೃಷ್ಟಿಕೋನ ಕೂಡ, ವಿಷಯವನ್ನು ಸಂಕೀರ್ಣಗೊಳಿಸಿದೆ. ರಾಜ್ಯಗಳು ಮತ್ತು ಕೇಂದ್ರ ಎರಡೂ ಕೂಡ ಈ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಪ್ರಸ್ತುತವಾಗುತ್ತವೆ. ಇಬ್ಬರಲ್ಲಿ ಒಬ್ಬರು ಕೂಡ ಸಂಪೂರ್ಣ ಜವಾಬ್ದಾರಿಯನ್ನು ಹೊರಲು ಸಿದ್ಧರಾಗಿಲ್ಲ. ಪ್ರಸ್ತುತ ಸಮಯದಲ್ಲಿ ಸರ್ಕಾರದ ನೀತಿಯ ನಿರ್ವಹಣೆಯು, ಕೇವಲ ಅಂತರರಾಜ್ಯಗಳ ನಡುವೆ ಆಳವಾದ ಅಸೂಯೆಯನ್ನು ಸೃಷ್ಟಿಸಿದೆ. ಒಂದು ರಾಜ್ಯವು ಮತ್ತೊಂದು ರಾಜ್ಯದ ದುಃಖ ಕಷ್ಟಗಳನ್ನು ಹಂಚಿಕೊಳ್ಳಲು ಸಿದ್ಧವಿಲ್ಲ. ಹೆಚ್ಚುವರಿ ಉತ್ಪಾದನೆಯ ರಾಜ್ಯವು, ಆಹಾರಧಾನ್ಯವನ್ನು ಲಾಭದಾಯಕ ವ್ಯಾಪಾರವೆಂದು ಪರಿಗಣಿಸುತ್ತದೆ ಮತ್ತು ಬೆಲೆಗಳನ್ನು ಇಳಿಸಲು ಸಿದ್ಧವಿರುವುದಿಲ್ಲ. ಮಧ್ಯಪ್ರದೇಶದ ಸರ್ಕಾರವು ಒಂದು ಮಣಕ್ಕೆ ೧೩–೧೪ ರೂಪಾಯಿಗಳಂತೆ ಗೋಧಿಯನ್ನು ಖರೀದಿಸಿದೆಯೆಂದು ವರದಿಯಾಗಿದೆ. ಅದೇ ಗೋಧಿಯನ್ನು ಅದು, ಕೇಂದ್ರಕ್ಕೆ ಮಣಕ್ಕೆ ೧೯ ರೂಪಾಯಿಗಳಿಗೆ ದೊರಕುವಂತೆ ಮಾಡಿತು ಮತ್ತು ಕೇಂದ್ರವು ಆ ಗೋಧಿಯನ್ನು ರಾಜ್ಯ ಸರ್ಕಾರಗಳಿಗೆ ಮಣಕ್ಕೆ ೨೨ ರೂಪಾಯಿಗಳಂತೆ ಮರುಮಾರಾಟಮಾಡಿತು. ಗ್ರಾಹಕನು ಆ ಗೋಧಿಯನ್ನು ಮಣಕ್ಕೆ ೨೪ ರೂಪಾಯಿಗಳನ್ನು ಕೊಟ್ಟು ಮಾತ್ರ ಪಡೆಯಬಹುದು. ಹೀಗಾಗಿ, ರಾಜ್ಯಗಳ ವ್ಯಾಪಾರವು ಬೆಲೆ ಏರಿಕೆಗೆ ಮತ್ತಷ್ಟು ಸಹಾಯ ಮಾಡಿದೆ. ಈ ರೀತಿಯ ಕಾರ್ಯಗಳಿಂದ ಪ್ರತ್ಯೇಕ ರಾಜ್ಯಗಳನ್ನು ಕ್ರಿಯಾವಿಮುಖವನ್ನಾಗಿ

ಮಾಡಲು ಸಾಧ್ಯವಿಲ್ಲ. ಆಹಾರ ಧಾನ್ಯಗಳನ್ನು ಖರೀದಿಸುವ ಮತ್ತು ಮಾರುವ ಸಂಪೂರ್ಣ ಜವಾಬ್ದಾರಿಯನ್ನು ತನ್ನ ಮೇಲೆ ತೆಗೆದುಕೊಳ್ಳುವ, ಕೇಂದ್ರ ಆಡಳಿತವರ್ಗ ಅಥವಾ ಅಂತಹ ಶಾಸನಬದ್ಧ ಅಂಗಸಂಸ್ಥೆಗಳನ್ನು ಸ್ಥಾಪಿಸುವುದೊಂದೇ ಮಾರ್ಗವಾಗಿದೆ. ರಾಜ್ಯಗಳು ಮಧ್ಯೆ ಬರಬಾರದು. ಅದೊಂದು ಮಾತ್ರ ದೇಶಾದ್ಯಂತ ಏಕರೀತಿಯ ಬೆಲೆಗಳನ್ನು ತರಬಲ್ಲದು.

ಸರ್ಕಾರವು ಸಂಪೂರ್ಣ ವ್ಯಾಪಾರವನ್ನು ತಾನೇ ವಹಿಸಿಕೊಳ್ಳುವ ಬದಲು, ದೊಡ್ಡ ವ್ಯಾಪಾರಿಯಂತೆ ಭಾಗಶಃ ಆ ಕ್ಷೇತ್ರದಲ್ಲಿ ಪ್ರವೇಶಿಸಬೇಕು ಎಂಬುದನ್ನೂ ಮನಸ್ಸಿನಲ್ಲಿ ಆಲೋಚಿಸಬೇಕು. ಆಹಾರಧಾನ್ಯವನ್ನು ಆಮದು ಮಾಡಿಕೊಳ್ಳುವುದರಿಂದಾಗಲೀ ಹೆಚ್ಚುವರಿ ಧಾನ್ಯ ಉತ್ಪಾದನೆಯಾಗಿರುವ ದೇಶಗಳಿಂದ ಅಥವಾ ದೇಶದೊಳಗೇ ಹೆಚ್ಚುವರಿ ಉತ್ಪಾದನೆಯಾಗಿರುವ ಪ್ರದೇಶಗಳಿಂದ, ಅಥವಾ ಬೆಲೆ ಕಡಿಮೆಯಿರುವ ಸಮಯದಲ್ಲಿ ಖರೀದಿಸುವ ಮೂಲಕವಾಗಲೀ, ಸರ್ಕಾರವು ಧಾನ್ಯದ ಕಾಪು ದಾಸ್ತಾನನ್ನು ನಿರ್ಮಿಸಿಟ್ಟುಕೊಳ್ಳಬೇಕು. ಬೆಲೆ ಏರಿಕೆಯ ಸಂದರ್ಭಗಳಲ್ಲಿ ಅಥವಾ ಆಹಾರ ಧಾನ್ಯದ ತೀವ್ರ ಕೊರತೆ ಇರುವ ಪ್ರದೇಶಗಳಲ್ಲಿ ಸರ್ಕಾರವು ಮಾರಾಟಗಾರನಾಗಿ ಮಾರುಕಟ್ಟೆಯನ್ನು ಪ್ರವೇಶಿಸಬೇಕು. ಬೇರೆ ಯಾವುದೇ ವ್ಯವಸ್ಥೆಯೂ ಕಾಳಸಂತೆ ಮತ್ತು ಅಧಿಕಾರಶಾಹಿಯ ಅಸಾಮರ್ಥ್ಯ ಅದಕ್ಷತೆಗಳಲ್ಲಿ ಪರಿಣಮಿಸುತ್ತದೆ.

ನಾವು ನಮ್ಮ ದೇಶದಲ್ಲಿ ಆಹಾರದ ಉತ್ಪಾದನೆಯನ್ನು ಹೆಚ್ಚಿಸಿದುದಲ್ಲದೇ ವಿತರಣಾ ವ್ಯವಸ್ಥೆಯಲ್ಲಿನ ಯಾವುದೇ ಬದಲಾವಣೆಗಳು ಅಥವಾ, ಹೊಸಕಲ್ಪನೆಗಳು ಏನೂ ಪ್ರಯೋಜನಕಾರಿಯಾಗುವುದಿಲ್ಲವೆಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಆಹಾರ ಮತ್ತು ವ್ಯವಸಾಯ ಮಂತ್ರಾಲಯಗಳು ಯಾವಾಗಲೂ, ಎಲ್ಲ ಕಡೆಯೂ, ಆಹಾರ ಉತ್ಪಾದನೆಗಿಂತಲೂ ಹೆಚ್ಚಾಗಿ ಆಹಾರ ವಿತರಣೆಯ ಬಗೆಗೆ ಹೆಚ್ಚು ಗಮನ ನೀಡಿರುವುದು ದುರದೃಷ್ಟಕರ. ವಿದೇಶಗಳಿಂದ ಆಹಾರ ಧಾನ್ಯ ಪಡೆಯುವುದು ಕೂಡ ದೀರ್ಘಕಾಲ ಮುಂದುವರಿಯಲು ಸಾಧ್ಯವಿಲ್ಲ. ೧೨ ಮಿಲಿಯನ್ ಟನ್‌ಗಳ ಆಹಾರವನ್ನು ೭೦೦ ಕೋಟಿ ರೂಪಾಯಿಗಳ ಬೆಲೆಯಲ್ಲಿ ಆಮದು ಮಾಡಿಕೊಳ್ಳುವ ಶ್ರೀ ಎಸ್.ಕೆ.ಪಾಟೀಲರ ಪ್ರಸಕ್ತ ಸಲಹೆಯು, ದೀರ್ಘಕಾಲದವರೆಗೆ ಬೆಲೆಗಳನ್ನು ಕೆಳಗಿಳಿಸಲು ಸಾಧ್ಯವಾಗುವುದಿಲ್ಲ. ಅಷ್ಟೇ ಮೊತ್ತದ ಹಣವನ್ನು ಈಗಾಗಲೇ ಅಂದಾಜು ಮಾಡಿ ನಿಗದಿಪಡಿಸಿರುವುದರ ಜೊತೆಗೆ, ದೇಶದಲ್ಲಿ ಹೆಚ್ಚು ಆಹಾರ ಬೆಳೆಗಳನ್ನು ಬೆಳೆಯಲು ವೆಚ್ಚಮಾಡಲು ಸಿದ್ಧರಾಗುವ ತನಕ, ಬೆಲೆಗಳನ್ನು ಇಳಿಸುವುದು ಸಾಧ್ಯವಿಲ್ಲ.

ಈಗಿನ ಸನ್ನಿವೇಶಗಳಲ್ಲಿ, ಸರ್ಕಾರವು, ತಾನು ನಿರ್ಧರಿಸಿದರೂ, ಆಹಾರಧಾನ್ಯದ ಸಂಪೂರ್ಣ ವ್ಯಾಪಾರವನ್ನು ವಹಿಸಿಕೊಳ್ಳಲಾಗುವುದಿಲ್ಲ. ಮಧ್ಯಮ ಮಾರ್ಗ ಮಾತ್ರವೇ ಈಗ ಸಾಧ್ಯವಾಗುವುಂತಹುದು. ಸರಿಯಾಗಿ ಪರಾಮರ್ಶಿಸದ



ತಮ್ಮ ಪ್ರಕಟಣೆಗಳಿಂದ ಅವರು ವ್ಯಾಪಾರೀ ಸಮುದಾಯವನ್ನು ಗಾಬರಿಗೊಳಿಸಿಬಿಡಬಹುದು ಅಷ್ಟೆ. ವಾಸ್ತವವಾಗಿ ಕೇಂದ್ರ ಆಹಾರ ಸಚಿವರ ದೃಷ್ಟಿಕೋನಕ್ಕೂ ಮತ್ತು ಬಹುತೇಕ ಸರ್ಕಾರಗಳ ಆಚರಣೆಗೂ ಹೆಚ್ಚು ವ್ಯತ್ಯಾಸವೇನೂ ಇಲ್ಲ. ಈ ಪ್ರಮುಖ ವಿಷಯದಲ್ಲಿ ಸೈದ್ಧಾಂತಿಕ ಚರ್ಚೆಗಳು, ಅನಿರ್ದಿಷ್ಟತೆಯ ಸ್ಥಿತಿಯನ್ನು ಸೃಷ್ಟಿಸಲು ಎಡೆ ಮಾಡಿಕೊಡದಿದ್ದರೆ ಉತ್ತಮ.

(೧೯೬೦ರ, ಏಪ್ರಿಲ್ ೨೫)

# ಪಿ.ಎಲ್.೪೮೦, ಒಪ್ಪಂದಗಳ ಬಗೆಗೆ

ಆಹಾರದ ಕೊರತೆಯು ಜನಗಳು ಮತ್ತು ಸರ್ಕಾರ ಇಬ್ಬರಿಗೂ ತಲೆನೋವಾಗಿರುವ ಸಂದರ್ಭದಲ್ಲಿ, ಯು.ಎಸ್. ಪಬ್ಲಿಕ್ ಲಾ ೪೮೦ರ ಅಡಿಯಲ್ಲಿ, ಗೋಧಿಗಾಗಿ ೬೦೭ ಕೋಟಿ ರೂಪಾಯಿಗಳ ಸಾಲದ ಒಪ್ಪಂದದ ಮುಕ್ತಾಯ. ದೇಶದಲ್ಲಿನ ಸಾಮಾನ್ಯ ಪ್ರತಿಕ್ರಿಯೆಯು, ಆಪಾದ್ಬಾಂಧವನೆನಿಸಿದ ಶ್ರೀ ಎಸ್.ಕೆ.ಪಾಟೀಲರ ಬಗೆಗೆ ಕೃತಜ್ಞತೆಗಳನ್ನು ಉಳಿದು ಬೇರೆ ಏನೂ ಇರಲಾರದು. ಶ್ರೀ ಎಸ್.ಕೆ.ಪಾಟೀಲರು, ಸಮಯಕ್ಕೆ ಸರಿಯಾಗಿ, ಅದೂ ಹಿಂದೆಂದೂ ಇಲ್ಲದಂತಹ ಬೃಹತ್ ಪ್ರಮಾಣದಲ್ಲಿ ನೆರವನ್ನು ಒದಗಿಸಲು ಸಾಧ್ಯವಾದದ್ದಕ್ಕೆ, ನ್ಯಾಯೋಚಿತವಾಗಿ ಹೆಮ್ಮೆಪಡಬಹುದು.

ರಾಜತಾಂತ್ರಿಕ ಶಿಷ್ಟಾಚಾರಕ್ಕೆ ವಿರುದ್ಧವಾಗಿ ಅಧ್ಯಕ್ಷ ಐಸೆನ್ ಹೋವರ್ ಅವರು. ಯು.ಎಸ್. ಸರ್ಕಾರದ ಪರವಾಗಿ ವೈಯಕ್ತಿಕವಾಗಿ ಒಪ್ಪಂದಕ್ಕೆ ಸಹಿಹಾಕಿದ, ಮತ್ತು ಭಾರತ ಸರ್ಕಾರದ ಪರವಾಗಿ ರಾಜ್ಯದ ಮುಖ್ಯಸ್ಥರಾಗಲೀ ಸರ್ಕಾರದ ಮುಖ್ಯಸ್ಥರಾಗಲೀ ಉಪಸ್ಥಿತರಿರದೆ ಕೇವಲ ಆಹಾರ ಮತ್ತು ಕೃಷಿ ಸಚಿವರಾದ ಎಸ್.ಕೆ.ಪಾಟೀಲ್ ಒಬ್ಬರೇ ಇದ್ದಿದ್ದು, ಎನ್ನುವ ವಾಸ್ತವತೆಯಿಂದ, ಸಂಯುಕ್ತ ಸಂಸ್ಥಾನವು ಈ ಒಪ್ಪಂದಕ್ಕೆ ಅಸಾಧಾರಣ ಮಹತ್ವ ನೀಡುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಲಡಾಖ್ ಮತ್ತು ಎನ್.ಇ.ಎಫ್.ಎ. (ನೀಫಾ)ಗಳಲ್ಲಿ ಚೀನದ ಆಕ್ರಮಣದಿಂದಾಗಿ ಜನರು, ಅಮೆರಿಕದ ವಿರುದ್ಧ ತಮ್ಮ ವಿರೋಧ, ವೈರಗಳನ್ನು ಕ್ರಮೇಣ ಬಿಟ್ಟುಬಿಡುತ್ತಿರುವಾಗ, ಸಂಯುಕ್ತ ಸಂಸ್ಥಾನದ ಈ ಕಾರ್ಯವು ಭಾರತದ ಜೊತೆ ಸ್ನೇಹ ಗಳಿಸುವ, ಮುತ್ಸದ್ದಿತನದ ದೊಡ್ಡ ಹೊಡೆತವೆಂದು ಪರಿಗಣಿಸಬೇಕಾಗಿದೆ. ಆದ್ದರಿಂದ, ಸಂಯುಕ್ತ ಸಂಸ್ಥಾನದ ಭಾರತದ ರಾಯಭಾರಿಯಾದ ಮಿ॥ ಎಲ್ಸ್‌ವರ್ತ್ ಬಂಕರ್ ಅವರು, ವಾಷಿಂಗ್‌ಟನ್‌ನಲ್ಲಿ ಭಾರತದ ರಾಯಭಾರಿಯಾಗಿದ್ದ ಶ್ರೀ ಛಾಗ್ಲಾ ಅವರ ಈ ಅವಲೋಕನವನ್ನು ಅನೇಕ ಬಾರಿ ಪುನರುಚ್ಚರಿಸಿದುದರಲ್ಲಿ ಯಾವುದೇ ಆಶ್ಚರ್ಯವೂ ಇಲ್ಲ: 'ಭಾರತ ಮತ್ತು ಸಂಯುಕ್ತ ಸಂಸ್ಥಾನದ ಸಂಬಂಧಗಳು, ಎಲ್ಲಾ ಕಾಲಕ್ಕಿಂತಲೂ ಈಗ ಉನ್ನತ ಮಟ್ಟವನ್ನು ತಲುಪಿವೆ.' ತಮ್ಮ ಸರ್ಕಾರದ ನಿರ್ಧಾರವು ರಾಜಕೀಯ ಪರಿಗಣನೆಯಿಂದ ಕೂಡ ಪ್ರೇರೇಪಿಸಲ್ಪಟ್ಟಿದೆಯೆಂಬುದನ್ನು ಸಂಯುಕ್ತ ಸಂಸ್ಥಾನಗಳ ರಾಯಭಾರಿಗಳು



ರಹಸ್ಯವಾಗಿಯೇನೂ ಇಟ್ಟಿಲ್ಲ. ಅವರು ಹೀಗೆ ಭಾವಿಸುತ್ತಾರೆ: 'ಪಬ್ಲಿಕ್ ಲಾ ೪೮೦ (ಪಿ.ಎಲ್.೪೮೦)ಯು ಒದಗಿಸುವ ಸರಬರಾಜು ಭಾರತವು ತನ್ನ ಆಂತರಿಕ ಅರ್ಥವ್ಯವಸ್ಥೆಯನ್ನು ಸುಭದ್ರಗೊಳಿಸಿಕೊಳ್ಳಲು, ರಾಜಕೀಯ ಜೀವನವನ್ನು ಸುಸ್ಥಿರಗೊಳಿಸಿಕೊಳ್ಳಲು, ತನ್ನ ಊರ್ಧ್ವಮುಖ ಪ್ರಗತಿಯನ್ನು ಹೆಚ್ಚಿಸಲು ಸಹಾಯ ಮಾಡುವುದು.'

ಈ ಒಪ್ಪಂದವು ಕೇವಲ ಧರ್ಮದೃಷ್ಟಿಯ ಅಥವಾ ಮುತ್ಸದ್ದಿತನದ್ದೆಂದೂ ಮತ್ತು ಇದು ಆರ್ಥಿಕವಾಗಿ ಸಂಯುಕ್ತ ಸಂಸ್ಥಾನಗಳಿಗೆ ಲಾಭದಾಯಕವಲ್ಲವೆಂದೂ ಊಹಿಸುವುದು ತಪ್ಪಾಗುತ್ತದೆ. ವಾಸ್ತವವಾಗಿ, ಪಬ್ಲಿಕ್ ಲಾ ೪೮೦ (ಪಿ.ಎಲ್.೪೮೦)ಯು ಅಮೆರಿಕಾದ ವ್ಯವಸಾಯಕ್ಷೇತ್ರಕ್ಕೆ ಆರ್ಥಿಕ ಸ್ಥಿರತೆಯನ್ನು ಒದಗಿಸುವ ಮುಖ್ಯ ಉದ್ದೇಶದಿಂದ ಮತ್ತು ವ್ಯವಸಾಯ ಕ್ಷೇತ್ರದ ಉಪಯುಕ್ತ ವಸ್ತುಗಳ ಅಂತರರಾಷ್ಟ್ರೀಯ ವ್ಯಾಪಾರವನ್ನು ವೃದ್ಧಿಸುವ ಸಲುವಾಗಿ, ೧೯೫೪ರಲ್ಲಿ ಜಾರಿಗೆ ತರಲ್ಪಟ್ಟಿತು. ೧೯೫೯ರ ಡಿಸೆಂಬರ್ ೩೧ರವರೆಗೆ, ೩೮ ದೇಶಗಳಿಗೆ, ರಫ್ತು ಮಾರುಕಟ್ಟೆಯ ಬೆಲೆಯಲ್ಲಿ ವ್ಯವಸಾಯದ ಉಪಯುಕ್ತ ವಸ್ತುಗಳನ್ನು ೧೫೬ ಮಿಲಿಯನ್ ಡಾಲರ್‌ಗಳನ್ನು (೧೯೭೮ ಕೋಟಿ ರೂಪಾಯಿಗಳು) ಮಾರಲಾಗಿತ್ತು. ಆದ್ದರಿಂದ ಈ ಒಪ್ಪಂದವು ಎರಡೂ ದೇಶಗಳ ಆರ್ಥಿಕ ಆಸಕ್ತಿಗಳಿಗೆ ಪೂರಕವಾಗುತ್ತದೆಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು ಮತ್ತು ಹಾಗಿರುವುದರಿಂದ, ಆಸಕ್ತ ಪಕ್ಷಗಳು ಯಾವುದೇ ರೀತಿಯ ರಾಜಕೀಯ ಮಹತ್ವವನ್ನು ಈ ಒಪ್ಪಂದಕ್ಕೆ ಲಗತ್ತಿಸಲು ಪ್ರಯತ್ನಿಸಿದರೂ, ನಾವು ಅದನ್ನು ವಾಸ್ತವಿಕ ದೃಷ್ಟಿಯಿಂದ ವಸ್ತುನಿಷ್ಠವಾಗಿಯೇ ನೋಡಬೇಕಾಗಿದೆ. ನಮ್ಮ ಕ್ಲಿಷ್ಟ ಪರಿಸ್ಥಿತಿಯಲ್ಲಿ ಅದು ನಮ್ಮ ಅವಶ್ಯಕತೆಗಳನ್ನು ಪೂರೈಸಿದೆಯೆಂದರೆ, ಅದು ಸಂಯುಕ್ತ ಸಂಸ್ಥಾನಗಳ ಹೆಚ್ಚಿನ ಉತ್ಪಾದನೆಯ ವ್ಯವಸಾಯದ ಉಪಯುಕ್ತ ವಸ್ತುಗಳಿಗೆ, ಮುಂದಿನ ವರ್ಷಗಳಲ್ಲಿ ಮಾರುಕಟ್ಟೆಯನ್ನೂ ಭದ್ರಗೊಳಿಸಿದೆ.

ಪ್ರಸಕ್ತ ಒಪ್ಪಂದವು, ಪಿ.ಎಲ್.೪೮೦ ಅಡಿಯಲ್ಲಿ ಭಾರತವು ಸಹಿಮಾಡಿರುವ ಸರಣಿಯಲ್ಲಿ ಐದನೆಯದು. ಮೊದಲನೆಯ ಒಪ್ಪಂದಕ್ಕೆ ೧೯೫೬ರ ಆಗಸ್ಟ್ ೧೯ನೆಯ ದಿನಾಂಕ ಸಹಿಹಾಕಲಾಯಿತು ಮತ್ತು ೧೯೬೦ರ ಮೇ ೪ನೆಯ ದಿನಾಂಕ ಐದನೆಯ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಮೊದಲನೆಯ ನಾಲ್ಕು ಒಪ್ಪಂದಗಳು ಒಟ್ಟು ೪೬೦ ಕೋಟಿ ರೂಪಾಯಿಗಳ ಮೊತ್ತದ್ದಾಗಿದ್ದು ವ್ಯವಸಾಯಕ್ಕೆ ಬೇಕಾಗುವ ಉಪಯುಕ್ತ ವಸ್ತುಗಳ ಸರಬರಾಜಿಗಾಗಿ ಆಗಿತ್ತು; ಐದನೆಯ ಒಪ್ಪಂದವು ೬೦೭ ಕೋಟಿ ರೂಪಾಯಿಗಳಷ್ಟು ಉಪಯುಕ್ತ ವಸ್ತುಗಳನ್ನು ಒಳಗೊಳ್ಳುತ್ತದೆ. ಇದು ಕ್ರಮವಾಗಿ ೧೬ ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ಗೋಧಿ ಮತ್ತು ಒಂದು ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ಅಕ್ಕಿಯನ್ನು ಒಳಗೊಂಡಿತ್ತು. ಸಂಯುಕ್ತ ಸಂಸ್ಥಾನಗಳ ಸರ್ಕಾರವು ಈ ಒಪ್ಪಂದದ ಅಡಿಯಲ್ಲಿ ಖರೀದಿಸಿದ ಗೋಧಿ ಮತ್ತು

ಅಕ್ಕಿಗೆ, ಕೊಳ್ಳುವುದಕ್ಕೂ ಮತ್ತು ಸಾಗರದ ಮೂಲಕ ಸಾಗಣೆಗೂ ಧನಸಹಾಯ ಮಾಡುವುದು. ಒಪ್ಪಿಕೊಂಡಿರುವ ಹಣದ ನಾಲ್ಕನೇ ಒಂದು ಭಾಗವು, ಈ ವರ್ಷವೇ ಅಂದರೆ, ಹಡಗಿನ ಸಾಗಣೆ ಆರಂಭವಾದ ಮೇಲೆ, ಸೆಪ್ಟೆಂಬರ್ ೩೦ರ ನಂತರ ಸಿಗುವುದು. ಉಳಿದದ್ದೆಲ್ಲಾ, ಹಡಗು ಸಾಗಣೆಯ ದರ ಮತ್ತು ರೀತಿಗೆ ಅನುಗುಣವಾಗಿ ಎರಡು ಸರ್ಕಾರಗಳ ಒಪ್ಪಿಗೆಯಂತೆ ೧೯೬೧ರ ಜನವರಿ ೧ನೆಯ ದಿನಾಂಕದ ನಂತರ, ದೊರೆಯುವುದು. ಸಂಯುಕ್ತ ಸಂಸ್ಥಾನಗಳ ಸರ್ಕಾರ ಕೂಡ ಈ ಉಪಯುಕ್ತ ವಸ್ತುಗಳ ಮಾರಾಟದ ಉತ್ಪತ್ತಿ, ೫೧೨ ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರಕ್ಕೆ ಕೊಡಲು ಒಪ್ಪಿದೆ. ಈ ಹಣದ ಅರ್ಧಭಾಗವನ್ನು ಸಹಾಯಧನವಾಗಿಯೂ ಉಳಿದ ಅರ್ಧಭಾಗವನ್ನು ನೂರಕ್ಕೆ ನಾಲ್ಕರ ಬಡ್ಡಿಯ ದರದಲ್ಲಿ ಸಾಲವಾಗಿಯೂ ನೀಡಲಾಗುತ್ತದೆ. ಉಳಿದ ೯೫ ಕೋಟಿ ರೂಪಾಯಿಗಳನ್ನು ಯು.ಎಸ್. ರಾಯಭಾರ ಕಚೇರಿಯು, ತನ್ನ ದಿನನಿತ್ಯದ ಕಾರ್ಯಕಲಾಪಗಳಿಗಾಗಿ ಭಾರತದಲ್ಲಿ ಖರ್ಚುಮಾಡುತ್ತದೆ.

ಈ ಒಪ್ಪಂದವು ಧಾನ್ಯದ ಕೇವಲ ಈಗಿನ ಬಳಕೆಯ ಅವಶ್ಯಕತೆಯನ್ನು ಪೂರೈಸುವುದಕ್ಕೆ ಮಾತ್ರವೇ ಕರಾರುಮಾಡಿಕೊಂಡಿರುವುದಲ್ಲ, ಆದರೆ ನಾಲ್ಕು ಮಿಲಿಯನ್ ಮೆಟ್ರಿಕ್ ಟನ್‌ಗಳ ಗೋಧಿ ಮತ್ತು ಒಂದು ಮಿಲಿಯನ್ ಟನ್ ಅಕ್ಕಿ ಇವುಗಳ ಕಾಪು ದಾಸ್ತಾನು ನಿರ್ಮಿಸುವುದನ್ನು ಕೂಡ ಇದು ಒಳಗೊಂಡಿದೆ. ಈ ಕಾಪುದಾಸ್ತಾನು, ಬೆಲೆಗಳನ್ನು ನಿಯಂತ್ರಿಸುವಲ್ಲಿ, ಸರಕಾರಕ್ಕೆ ನೆರವಾಗುವುದೆಂದು ಆಶಿಸಲಾಗುತ್ತದೆ. ಶ್ರೀ ಎಸ್.ಕೆ.ಪಾಟೀಲರು, ತಾವು ಆಹಾರ ಮತ್ತು ಕೃಷಿ ಇಲಾಖೆಯ ಸಚಿವರಾಗಿ ಅಧಿಕಾರ ವಹಿಸಿಕೊಂಡಾಗಿನಿಂದಲೂ, ಈ ಕಾಪುದಾಸ್ತಾನನ್ನು ನಿರ್ಮಿಸಿಡಲು ಪ್ರಯತ್ನಿಸುತ್ತಲೇ ಇದ್ದಾರೆ. ಈ ಒಪ್ಪಂದವು, ಅವರು ತಮ್ಮ ನೀತಿಯನ್ನು ಕಾರ್ಯರೂಪಕ್ಕೆ ತರಲು ಸಹಾಯಮಾಡುತ್ತದೆ. ಆಹಾರದ ಬೆಲೆಗಳು ಇಳಿದರೆ, ಹಣದುಬ್ಬರವನ್ನು ತಡೆಯಬಹುದು ಎಂದು ಭಾವಿಸಲಾಗಿದೆ ಮತ್ತು ಆಗ ದೇಶದ ಅರ್ಥವ್ಯವಸ್ಥೆಯನ್ನು ಒಂದು ಸಮಸ್ಥಿತಿಗೆ ತರಬಹುದು.

ಈ ಒಪ್ಪಂದದಡಿಯಲ್ಲಿ ಭಾರೀ ಪ್ರಮಾಣದ ಆಹಾರಧಾನ್ಯದ ಆಮದು ಭಾರತದ ಅರ್ಥವ್ಯವಸ್ಥೆಗೆ ದೊರಕಿಸಿರುವ ಪ್ರಯೋಜನವನ್ನು ಕನಿಷ್ಠಗೊಳಿಸಲು ನಾವು ಬಯಸದಿದ್ದರೂ, ಸರ್ಕಾರವು, ಎಚ್ಚರಿಕೆ ಮತ್ತು ಜಾಗೃತಿಯ ನೀತಿಯನ್ನು ಅನುಸರಿಸಬೇಕೆಂದು ಬಯಸುತ್ತೇವೆ. ಆಹಾರವು ಅತ್ಯಂತ ಮುಖ್ಯ ಅಂಶವೆನ್ನುವುದರಲ್ಲಿ ಅನುಮಾನವಿಲ್ಲ ಹಾಗೂ ಅದು, ಸಾಧಾರಣ ಭಾರತೀಯ ಕುಟುಂಬದ ಆಯವ್ಯಯದ ಮುಖ್ಯ ಘಟಕವಾಗಿರುವುದೆಂಬುದರಲ್ಲಿ ಯಾವುದೇ ಅನುಮಾನವೂ ಇಲ್ಲ. ಆದರೆ, ನಮ್ಮ ದೇಶದಲ್ಲಿ ಜನಸಂಖ್ಯೆಯ ೭೦ ಪ್ರತಿಶತಕ್ಕು ಹೆಚ್ಚಾಗಿ, ಕೃಷಿಆಧಾರಿತ ಆಹಾರ ಮತ್ತು ಇತರ ವ್ಯವಸಾಯೋತ್ಪನ್ನ ಪದಾರ್ಥಗಳನ್ನೇ (ದಿನಸಿ ವಗೈರೆ) ಖರೀದಿಸುವ ಸಾಮರ್ಥ್ಯವನ್ನು ಪಡೆಯುವ ಮುಖ್ಯ ಸಾಧನವಾಗಿ,



ಅವಲಂಬಿಸಿರುತ್ತಾರೆ. ಸರ್ಕಾರದ ಈ ಸರಕನ್ನು ಒಟ್ಟುವ ನೀತಿಯು, ದೇಶದ ವ್ಯವಸಾಯೋತ್ಪನ್ನಗಳ ಬೆಲೆಗಳಲ್ಲಿ ರಭಸದ–ತೀವ್ರವಾದ–ಇಳಿತಾಯವನ್ನು ತಂದಿದ್ದೇ ಆದರೆ, ಅದರಿಂದ ದೇಶಕ್ಕೆ ಹೆಚ್ಚು ಒಳಿತೇನೂ ಆಗುವುದಿಲ್ಲ. ಅಲ್ಲದೇ, ಇದು. ಭಾರತದ ರೈತಾಪಿಯಿಂದ ಕಸಿದುಕೊಂಡು ಸಂಯುಕ್ತ ಸಂಸ್ಥಾನಗಳ ರೈತರನ್ನು ಬೆಂಬಲಿಸಿದಂತೆ ಆಗುವುದಿಲ್ಲವೇ? ಅಲ್ಲದೇ, ಈ ರೀತಿಯ ಅಪಾಯದ ಶಂಕೆ, ಆತಂಕಗಳಿಗೆ ಮತ್ತೊಂದು ಹೆಚ್ಚಿನ ಕಾರಣವೂ ಇದೆ, ಏಕೆಂದರೆ, ಈ ಒಪ್ಪಂದದ ಮೇರೆಗೆ ಆಮದು ಮಾಡಿಕೊಳ್ಳುತ್ತಿರುವ ಗೋಧಿ, ಅಕ್ಕಿಗಳ ಜೊತೆಗೇ, ಭಾರತವು, ವಿಶ್ವ ಮಾರುಕಟ್ಟೆಯಿಂದ, ೧೪,೬೮೦,೦೦೦ ಬುಷೆಲ್‌ಗಳಷ್ಟು ಗೋಧಿಯನ್ನು ಖರೀದಿಸಲು ಭಾರತ ತನ್ನನ್ನು ತಾನು ನಿಬದ್ಧಗೊಳಿಸಿಕೊಂಡಿದೆ. ಭಾರತ ಮತ್ತು ಸಂಯುಕ್ತ ಸಂಸ್ಥಾನಗಳ ಒಪ್ಪಂದದ ಪರಿಣಾಮವಾಗಿ, ತಮ್ಮ ಗೋಧಿಯ ಮಾರುಕಟ್ಟೆಯು ಕುಸಿಯುವುದೆಂದು ಹೆದರಿದ ಕೆನಡಾ ಮತ್ತು ಆಸ್ಟ್ರೇಲಿಯಾಗಳನ್ನು ಸಂತೃಪ್ತಿಗೊಳಿಸಲು, ನಮ್ಮ ಮೇಲೆ ಈ ನಿರ್ಬಂಧದ ನಿಯಮವನ್ನು ಹೇರಲಾಗಿದೆ. ಆದರೆ ಈ ನಿಯಮ (ನಿರ್ಬಂಧವು) ಸಂಪೂರ್ಣವಾಗಿ ಅನ್ಯಾಯವಾಗಿದೆ; ಏಕೆಂದರೆ ತನ್ನ ಸಾಮಾನ್ಯ ಅಗತ್ಯಗಳಿಗಿಂತಲೂ ತೀರಾ ಹೆಚ್ಚಾಗಿ, ಭಾರತವು ವಿದೇಶಗಳಿಂದ ಖರೀದಿಸಬೇಕೆಂಬ ಒತ್ತಾಯದ ಷರತ್ತು ವಿಧಿಸಿದಂತೆಯೇ ಆಗುತ್ತದೆ. ಇದು ಕೂಡ ಭಾರತದ ಕೃಷಿ ಉತ್ಪನ್ನಗಳ ಬೆಲೆಯ ಪತನಕ್ಕೆ ಕಾರಣವಾಗುವುದು.

ಆಹಾರ ಧಾನ್ಯಗಳ ಬೆಲೆಯ ಇಳಿತವು ಬೆಲೆಯ ಮಟ್ಟದಲ್ಲಿ ಸಾಧಾರಣ ಅವನತಿಯೆಡೆಗೆ ದಾರಿ ಮಾಡುತ್ತದೆಯೆಂಬುದು ಸಂಪೂರ್ಣವಾಗಿ ಸರಿ ಎಂದು ಹೇಳಲಾಗುವುದಿಲ್ಲ. ಆಹಾರದ ಕೊರತೆಯು ಬೆಲೆಯ ಸಮಸ್ಯೆಯನ್ನು ಅಧಿಕಗೊಳಿಸಿದೆಯಾದರೂ, ಬೆಲೆ ಏರಿಕೆಯ ಕಾರಣಗಳನ್ನು ರಾಜ್ಯದ ಆದಾಯ, ಹಣಕಾಸು ಮತ್ತು ಸರ್ಕಾರದ ಕೈಗಾರಿಕಾ ನೀತಿ– ಈ ನೆಲೆಗಳಿಂದ ವಿಶ್ಲೇಷಿಸಬೇಕಾಗಿದೆ. ಉತ್ಪಾದಿತ ವಸ್ತುಗಳ (ಸರಕುಗಳ) ಬೆಲೆ ಏರಿಕೆಯು ಮುಂದುವರೆಯುತ್ತಿದ್ದಂತೆ, ಕೃಷಿ ಉತ್ಪನ್ನ ವಸ್ತುಗಳ ಬೆಲೆಗಳಲ್ಲಿ ಇಳಿತದ ಸಾಧ್ಯತೆಯೂ ಇದೆ.

ಸಂಯುಕ್ತ ಸಂಸ್ಥಾನಗಳ ಪಬ್ಲಿಕ್ ಲಾ (ಪಿಎಲ್ ೪೮೦) ನಿಧಿಯನ್ನು ದೇಶದಲ್ಲಿ ವಿತರಿಸುವ ಪ್ರಶ್ನೆಯೂ ಮುಖ್ಯವಾದದ್ದು. ರಾಜಕೀಯ ತೊಡಕು, ಸೂಚ್ಯಾರ್ಥಗಳಲ್ಲದೇ ಅದರ ಆರ್ಥಿಕ ಮೌಲ್ಯವೂ ಅನುಮಾನಾಸ್ಪದ. ಈಗಾಗಲೇ ಶ್ರೀ ಶೆಣೈ ಮತ್ತು ಇತರ ಆರ್ಥಿಕತಜ್ಞರ ನಡುವೆ ಈ ರೀತಿಯ ಹಣದ ಬಳಕೆಯು ಹಣದುಬ್ಬರಕ್ಕೆ ಇಲ್ಲವೇ ಎಂಬುದರ ಬಗೆಗೆ ಭಿನ್ನಾಭಿಪ್ರಾಯವಿದೆ. ಈ ರೀತಿಯ ನಿಧಿಸಂಗ್ರಹವು, ವಿದೇಶಿ ಸರ್ಕಾರಕ್ಕೆ ವಿಶೇಷ ರೀತಿಯ ಆಶ್ರಯದಾತನ ಅಧಿಕಾರವನ್ನು ಕೊಡುವುದಂತೂ ನಿಶ್ಚಿತವಾಗಿದೆ. ಈ ನಿಧಿ ಸಂಗ್ರಹದ ಶೇಕಡ ೨೫ರಷ್ಟನ್ನು ಖಾಸಗೀ ವಲಯಕ್ಕೆ ಸಾಲ ನೀಡಬೇಕೆಂದು ಕೂಲಿ ತಿದ್ದುಪಡಿಯು ಆದೇಶಿಸುತ್ತದೆ. "ಈ ನಿಧಿಯನ್ನು" ಅಮೆರಿಕದ ಸಂಸ್ಥೆಗಳಿಗೆ ಅಥವಾ ಅತಿಥಿ ದೇಶಗಳಲ್ಲಿ

ಕಾರ್ಯನಿರ್ವಹಿಸುತ್ತಿರುವ ಅಥವಾ ಅಮೆರಿಕದ ಸಂಸ್ಥೆಯೊಡನೆ ಭಾಗ ಹೊಂದಿರುವ (ಅಥವಾ ಸೇರಿಕೊಂಡಿರುವ) ದೇಶಿ ಸಂಸ್ಥೆಗಳಿಗೆ ಮಂಜೂರು ಮಾಡಬೇಕು ಅಥವಾ ಅಮೆರಿಕದ ವ್ಯವಸಾಯೋತ್ಪನ್ನ ವಸ್ತುಗಳ ವಿಲೇವಾರಿ (ವಿತರಣೆ)ಯನ್ನು ಸುಗಮಗೊಳಿಸುತ್ತಿರುವಂತಹ ದೇಶೀಯ ಸಂಸ್ಥೆಗಳಿಗೆ ಆ ಹಣವನ್ನು ನೀಡಬೇಕು. ಆದ್ದರಿಂದ, ಈ ಒಪ್ಪಂದವು ಅಮೆರಿಕದ ವ್ಯಯಸಾಯದ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಸಂಪಾದಿಸಿಕೊಡುವುದಲ್ಲದೇ, ಈ ದೇಶಕ್ಕೆ ಬರಲು ಇಚ್ಛಿಸುವಂತಹ ಅಮೆರಿಕದ ಕೈಗಾರಿಕೋದ್ಯಮಿಗಳಿಗೆ ಅನುಕೂಲಕರ ಪರಿಸ್ಥಿತಿಯನ್ನು ನಿರ್ಮಿಸಿಕೊಡುತ್ತದೆ. ಈ ರೀತಿಯ ಪ್ರಸ್ತಾಪಗಳ ದೀರ್ಘಕಾಲೀನ ಪರಿಣಾಮಗಳಿಗೆ, ನಾವು ಕಣ್ಣುಮುಚ್ಚಿ ಕೂರುವುದು ತೀರಾ ಅವಿವೇಕವಾಗುತ್ತದೆ.

ಆ ಆಮದುಗಳು ನಮ್ಮ ಸದ್ಯದ ಸಂಕಷ್ಟಗಳಿಂದ ಪಾರಾಗಲು ಸಹಾಯ ಮಾಡಬಹುದಾದರೂ, ಸಮಸ್ಯೆಯ ನಿಜವಾದ ಪರಿಹಾರವು, ದೇಶದಲ್ಲಿ ವ್ಯವಸಾಯೋತ್ಪನ್ನ ವಸ್ತುಗಳ ಉತ್ಪಾದನೆಯನ್ನು ಪರಮಾವಧಿಗೇರಿಸುವುದೇ ಆಗಿದೆ. ಈ ದಿಕ್ಕಿನಲ್ಲಿ ನಾವು ಸಾಕಷ್ಟು ಏನನ್ನೂ ಮಾಡಿಲ್ಲವೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಪ್ರಸಕ್ತ ಈ ಒಪ್ಪಂದವು, ಈ ವಿಷಯದಲ್ಲಿ ಸರ್ಕಾರದ ವೈಫಲ್ಯಕ್ಕೆ ಜ್ವಲಂತ ಸಾಕ್ಷಿಯಾಗಿದೆ. ಕಾಲ ಮುಂದುವರೆದಂತೆಲ್ಲಾ ನಾವು ವಿದೇಶೀ ಮೂಲಗಳಿಂದ ಹೆಚ್ಚು ಹೆಚ್ಚು ಸ್ವತಂತ್ರರಾಗುತ್ತಾ ಬಂದಿದ್ದೇವೆ. ಈಗ ಸದ್ಯದಲ್ಲಿ ಆಹಾರ ಧಾನ್ಯವು ಸಮೃದ್ಧಿಯಾಗಿ ದೊರಕುತ್ತಿರುವುದರಿಂದ (ಕೇಂದ್ರ ಮತ್ತು ರಾಜ್ಯಗಳಲ್ಲಿ) ಸರ್ಕಾರಗಳು ಸ್ಥಳೀಯವಾಗಿ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನಗಳಲ್ಲಿ, ಆತ್ಮತೃಪ್ತರಾಗಿ ನಿರಾತಂಕವಾಗಿದ್ದುಬಿಡಬಹುದೆಂಬ ಭಯ ನಮಗಿದೆ. ಪ್ರಜಾಪ್ರಭುತ್ವದಲ್ಲಿ ಸಂಘರ್ಷಕ್ಕೊಳಗಾಗಿರುವ ಜನರು "ಸ್ವಾತಂತ್ರ್ಯ ಮತ್ತು ಆಹಾರ ಎರಡೂ ಇರಬಹುದು" ಎಂಬುದನ್ನು ಅರಿಯಲು ಅಮೆರಿಕವು ಈ ನೀತಿಯನ್ನು ಅನುಸರಿಸುತ್ತಿದೆಯೆಂದು ಸಂಯುಕ್ತ ಸಂಸ್ಥಾನಗಳ ರಾಯಭಾರಿ ಭಾವಿಸುತ್ತಾರೆ. "ವಿದೇಶೀ ಆಹಾರದಿಂದ ಮುಕ್ತಿ" ಎಂಬ ನಮ್ಮ ಹಳೆಯ ಘೋಷಣೆಯನ್ನು ಪುನರುಜ್ಜೀವನಗೊಳಿಸಿದಾಗ ಮಾತ್ರವೇ ಅದು ಸಾಧ್ಯವಾಗುತ್ತದೆ. ವಿದೇಶೀ ಮೂಲಗಳ ಮೇಲೆ ಅವಲಂಬಿಸುವುದು ನಮ್ಮನ್ನು ನಿರ್ಗತಿಕರನ್ನಾಗಿಸುತ್ತದೆ ಮತ್ತು ತೊಡಕು, ಗೊಂದಲಗಳಿಗೆ ಸಿಕ್ಕಿಸುತ್ತದೆ. ಆದ್ದರಿಂದ ನಾವು, ಹೂಗುಚ್ಛಗಳನ್ನು ಶ್ರೀ ಪಾಟೀಲರಿಗೆ, ಅವರು ಅಮೆರಿಕದಿಂದ ಹಿಂದಿರುಗಿದ ನಂತರವಲ್ಲ ಆದರೆ, ಈ ದೇಶದಲ್ಲಿ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದರಲ್ಲಿ ಯಶಸ್ವಿಗಳಾದಾಗ ಮತ್ತು ಭಿಕ್ಷಾಪಾತ್ರೆ ಹಿಡಿದು ಪ್ರಪಂಚವನ್ನು ಸುತ್ತಲು ಹೊರಟ, ಸ್ವತಂತ್ರ ಭಾರತದ ಕಟ್ಟಕಡೆಯ ಆಹಾರ ಸಚಿವರು ತಾವೆಂದು ಪ್ರಪಂಚಕ್ಕೆ ತೋರಿಸಿದಾಗ ನಾವು ಹೂಗುಚ್ಛಗಳನ್ನು ಅರ್ಪಿಸುತ್ತೇವೆ.

(೧೯೬೦ ಮೇ ೧೬)



## ಸಾರ್ವತ್ರಿಕ ವಿ. ಖಾಸಗಿ ವಲಯ

ಒಂದು ಟ್ರಕ್‌ನ (ಲಾರಿಯ) ತಯಾರಿಕೆಯು, ತನ್ನಷ್ಟಕ್ಕೆ ತಾನೇ ಮಹತ್ವದ ಘಟನೆಯಾಗದಿರಬಹುದು, ಆದರೆ ಅಂತಹದೊಂದು ಕಾರ್ಯಕ್ರಮವನ್ನು ಪ್ರಧಾನಮಂತ್ರಿಗಳು ಉದ್ಘಾಟಿಸಿದಾಗ ಪತ್ರಿಕೆಯವರ ಹಾಗೂ ಜನರ ಕಣ್ಣಿನಲ್ಲಿ ಅದು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಜಬಲ್‌ಪುರದ ಕಾರ್ಯಕ್ರಮವನ್ನು ನಿಷ್ಠೆಯಿಂದ ವರದಿ ಮಾಡುವ ಮೂಲಕ ಪತ್ರಿಕಾವಲಯವು ತನ್ನ ಹೊಣೆಯನ್ನು ನಿರ್ವಹಿಸಿಕೊಂಡಿದೆ. ಅದು ಮೊದಲ ದರ್ಜೆಯ ಮೊದಲ ಪುಟದ ಸುದ್ದಿಯೆಂದು ಪರಿಗಣಿಸಲ್ಪಟ್ಟಿದೆ. ಆದರೆ, 'ಶಕ್ತಿಮಾನ್'ನ ಶಕ್ತಿಯನ್ನು ಕಾಣುವುದರಲ್ಲಿ ಜನರು ನಿಜಕ್ಕೂ ವಿಫಲರಾಗಿದ್ದಾರೆ. ಯಾವುದೋ ಒಂದು ಮೂರು ಟನ್‌ಗಳ ಭಾರದ ಲಾರಿಯೊಂದು, ಎಲ್ಲಾ ಜೋಡಣೆಗೊಂಡು ರಸ್ತೆಗಿಳಿಯುವುದಕ್ಕಾಗಿ, ಕೇವಲ ಒಂದು ಗುಂಡಿ ಒತ್ತುವುದಕ್ಕೋಸ್ಕರ ಪ್ರಧಾನಮಂತ್ರಿಗಳು ಜಬಲ್‌ಪುರದ ತನಕ ಹೋಗುವ ಕಷ್ಟವನ್ನೇಕೆ ತೆಗೆದುಕೊಳ್ಳಬೇಕೆಂಬುದು ಬೀದಿಯಲ್ಲಿನ ಸಾಮಾನ್ಯ ಮನುಷ್ಯನಿಗೆ ಅರ್ಥವಾಗುವುದಿಲ್ಲ. ಕೇವಲ ಪ್ರಧಾನಮಂತ್ರಿಯವರು ಮಾತ್ರವಲ್ಲ, ಆದರೆ ಬಹಳ ಜನ V.I.Ps (ಅತ್ಯಂತ ಮುಖ್ಯ ವ್ಯಕ್ತಿಗಳು) ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲು ಸಮಯ ಹೊಂದಿಸಿಕೊಂಡಿದ್ದಾರೆ. ರಕ್ಷಣಾ ಸಚಿವರಾದ ಶ್ರೀ ಕೃಷ್ಣಮೆನನ್, ಉಕ್ಕು, ಗಣಿಗಾರಿಕೆ ಮತ್ತು ಇಂಧನ ಸಚಿವರಾದ ಸರ್ದಾರ್ ಸ್ವರ್ಣಸಿಂಗ್, ಆ ಪ್ರಾಂತ್ಯದ ಮುಖ್ಯಮಂತ್ರಿ ಡಾ. ಕೈಲಾಸನಾಥ ಕಾಟ್ಜು ಇವರುಗಳು ಕೂಡ ಉಪಸ್ಥಿತರಿದ್ದರು. ಸೈನ್ಯ ಸಿಬ್ಬಂದಿಯ ಮುಖ್ಯಸ್ಥ, ವಾಯುಸೈನ್ಯದ ಮುಖ್ಯಸ್ಥ, ನೌಕಾಸೇನಾ ಸಿಬ್ಬಂದಿಯ ಉಪಮುಖ್ಯಸ್ಥ (ಡೆಪ್ಯೂಟಿ ಚೀಫ್) ಮತ್ತು ಸಿ.ಸೌತ್ ಕಮ್ಯಾಂಡ್‌ನ ಜಿ.ಓ.ಸಿ. ಇವರುಗಳು ರಕ್ಷಣಾ ಬಲವನ್ನು ಪ್ರತಿನಿಧಿಸಿದ್ದರು. ರಾಜ್ಯದಲ್ಲಿನ ಇಷ್ಟೆಲ್ಲಾ ಉನ್ನತ, ಗಣ್ಯಾತಿಗಣ್ಯರು ಒಟ್ಟುಗೂಡಿದಾಗ ಅವರನ್ನು ಗಮನಿಸಿ ಅವರ ತಾಳಕ್ಕೆ ಕುಣಿಯಲು ಅಧಿಕಾರಿಗಳ ಸಮೂಹವಿರದಿದ್ದರೆ ಅದು ಅವಿನಯವಾಗುತ್ತದೆಂದು ಪರಿಗಣಿಸಲಾಗುತ್ತದೆ. V.I.P ಗಳಿಂದ ಅತ್ಯಂತ ಮುಖ್ಯವ್ಯಕ್ತಿಗಳಿಂದ ಮತ್ತು ಅಷ್ಟೇನೂ ಮುಖ್ಯರಲ್ಲದ ವ್ಯಕ್ತಿಗಳಿಂದ, ಈ ಸಮಾರಂಭಕ್ಕಾಗಿ ಎಷ್ಟು ಪ್ರಯಾಣ ಭತ್ಯೆಯನ್ನು (ಟಿ.ಎ.) ಸಂಗ್ರಹಿಸಲಾಯಿತೆಂಬ ಬಗೆಗೆ ಕಂಡುಹಿಡಿಯುವುದು ಬಹಳ ಆಸಕ್ತಿ ಪೂರ್ಣವಾದ ಸಂಶೋಧನಾ ಕೆಲಸವಾಗಬಹುದು. ಆ ಅಂಕಿಯು, ಬಹುಮಟ್ಟಿಗೆ,

ಆ ಧಾನ್ಯ ಲಾರಿಯ ಬೆಲೆಗಿಂತಲೂ ಹೆಚ್ಚಿಗೆಯೇ ಆಗಬಹುದು.

ಈ ವಿಷಯವು ಸಂಪೂರ್ಣವಾಗಿ, ಪತ್ರಿಕೆಗಳಿಗೆ ದೊಡ್ಡ ಸುದ್ದಿಯಿರಬಹುದು, ಆದರೆ ಈ ಸಂದರ್ಭಕ್ಕೆ ಇಷ್ಟೆಲ್ಲಾ ಬಾಜಾ ಭಜಂತ್ರಿ, ಖರ್ಚುಗಳ ಅವಶ್ಯಕತೆಯಿತ್ತೇ ಎಂದು ಜನರು ಆಶ್ಚರ್ಯಪಡುತ್ತಾರೆ. ಈ ದೇಶದಲ್ಲಿ ಒಂದು ಲಾರಿಯನ್ನು ತಯಾರಿಸುತ್ತಿರುವುದು ಇದೇನು ಮೊದಲ ಸಲವೇ? ಈ ವಿಶಿಷ್ಟವಾದ ಲಾರಿಯಲ್ಲಿ ಏನಾದರೂ ವಿಶೇಷವಿದೆಯೇ? ಸದ್ಯಕ್ಕೆ ತಿಳಿದಿರುವ ಸುದ್ದಿಯಂತೆ ತಯಾರು ಮಾಡು ಎನ್ನುವ ಪದದ ಉಪಯೋಗವು (manufacture),ಈ ಸಂದರ್ಭದಲ್ಲಿ ಪ್ರಸಕ್ತ ವಿಷಯಕ್ಕೆ ಸಂಬಂಧಿಸಿದಂತೆ, ತಪ್ಪುದಾರಿಗೆ ಎಳೆಯುವಂತಹುದಾಗಿದೆ. ಇದು ಕೇವಲ ಆಮದು ಮಾಡಿಕೊಂಡ 'ಚಾಸಿಸ್' ಮತ್ತು 'ಇಂಜಿನ್'ಗಳಿಗೆ ಮರದ ಹೊರಕವಚವನ್ನು ನಿರ್ಮಿಸುವುದು ಮಾತ್ರ ಆಗಿದೆ. ಅದು ಹಾಗಿದ್ದ ಮೇಲೆ, ಪ್ರಧಾನಮಂತ್ರಿಯವರು ಆ ರೀತಿಯ ಸವಾಲು ಹಾಕುವ ರೀತಿಯಲ್ಲಿ ಮಾತನಾಡಬಾರದಿತ್ತು. ಖಂಡಿತವಾಗಿಯೂ ಅದು, ಖಾಸಗಿ ಮತ್ತು ಸಾರ್ವತ್ರಿಕ ವಲಯಗಳ ಸಾಧನೆಗಳನ್ನು ತುಲನೆ ಮಾಡುವ ಸಂದರ್ಭವಾಗಿರಲಿಲ್ಲ. ತಮ್ಮ ಮೇಲೆ, ಲೋಕಸಭೆಯಲ್ಲಿ ಮಾಡಲಾಗಿದ್ದ ಟೀಕೆಗಳಿಗೆ ಉತ್ತರ ಹೇಳುವ ಅವಕಾಶವನ್ನು ರಕ್ಷಣಾ ಸಚಿವರು ಉಪಯೋಗಿಸಿಕೊಳ್ಳಲು ಇಚ್ಛಿಸಿದರೆಂದು ತೋರುತ್ತದೆ. ಪ್ರಧಾನ ಮಂತ್ರಿಯವರು ತಮ್ಮ ಸ್ನೇಹಿತನಿಗೆ ಉಪಕಾರ ಮಾಡಲು ಆಲೋಚಿಸಿದರು. ಆದರೆ, ಎಲ್ಲ ರೀತಿಯ ಉಳಿತಾಯವೂ, ಈ ಗಳಿಗೆಯ ಅವಶ್ಯಕತೆಯಾಗಿರುವಾಗ, ನಾವು ಈ ರೀತಿಯ ಅನ್ಯಾಯದ ದುಂದುವೆಚ್ಚವನ್ನು ಸಮರ್ಥಿಸಲಾಗುವುದಿಲ್ಲ.

ಸಾರ್ವತ್ರಿಕ ವಲಯ ಮತ್ತು ಖಾಸಗಿ ವಲಯಗಳ ಬಗೆಗೆ ಇರುವ ಭಿನ್ನಾಭಿಪ್ರಾಯ ವಿವಾದಗಳ ಬಗೆಗೆ ಹೇಳುತ್ತಾ, ಪ್ರಧಾನಮಂತ್ರಿಗಳು, ತಾವು ಎರಡೂ ವಲಯಗಳು ಅಭಿವೃದ್ಧಿ ಹೊಂದಬೇಕೆಂದು ಬಯಸುವುದಾಗಿಯೂ, ಮತ್ತು ಅವೆರಡರ ನಡುವೆ ಸ್ವಲ್ಪ ಸ್ಪರ್ಧೆಯ ಅಂಶವಿದ್ದರೆ ಅದು ಎರಡಕ್ಕೂ ಲಾಭದಾಯಕವಾಗುವುದೆಂದೂ ಹೇಳಿದರು.

ಪಂಡಿತ ನೆಹರೂರವರ ಹೇಳಿಕೆಗಳು ಮಹತ್ವಪೂರ್ಣವಾದವು. ಆದರೆ ತಾವು ಹೇಳಿದ್ದನ್ನು ಅವರು ನಿಜವಾಗಿಯೂ ನಂಬುತ್ತಾರೆಯೇ? ಇಲ್ಲಿಯವರೆಗೂ ಸಾರ್ವತ್ರಿಕ ವಲಯವು ಸ್ಪರ್ಧೆಯನ್ನೇ ಅನುಮತಿಸಿಲ್ಲ. ಎಲ್ಲೆಲ್ಲಿ ಸರ್ಕಾರವು ಪ್ರವೇಶಿಸುತ್ತದೆಯೋ, ಅಲ್ಲೆಲ್ಲ ಏಕಸ್ವಾಮ್ಯವನ್ನು ಪಡೆದುಕೊಳ್ಳುತ್ತದೆ, ದಕ್ಷತೆಯಿಂದಾಗಲೀ ಅಥವಾ ಆರ್ಥಿಕ ಬಲ ಪ್ರದರ್ಶನದಿಂದಾಗಲೀ ಅಲ್ಲ, ಆದರೆ ಶಾಸಕಾಂಗದ ಬೆಂಬಲದಿಂದ. ಇಂತಹ ಏಕಸ್ವಾಮ್ಯದ ಕಾರಣದಿಂದ ಮತ್ತು ಅದರ ಪರಿಣಾಮವಾಗಿ ವೈಯಕ್ತಿಕ ಉದ್ಯಮಗಳ ಸ್ಥಾನಪಲ್ಲಟಗಳಿಂದ ಜನರು ಸಾರ್ವತ್ರಿಕ ವಲಯವನ್ನು ಇಷ್ಟಪಡುವುದಿಲ್ಲ. ಏಕಸ್ವಾಮ್ಯವು ಅದಕ್ಷತೆ, ಕೊರತೆ, ಭ್ರಷ್ಟಾಚಾರ ಮತ್ತು ಇತರ



ಕೆಡುಕುಗಳನ್ನು ಹುಟ್ಟಿಸಿ ಬೆಳೆಸುತ್ತದೆ. ಪಂಡಿತ ನೆಹ್ರೂ ಅವರು, ಸ್ಪರ್ಧೆಯ ಸ್ವಲ್ಪ ಅಂಶದ ಈ ತತ್ತ್ವದಲ್ಲಿ ನಂಬಿಕೆ ಇಡುವುದಾದಲ್ಲಿ, ಅವರು ಖಾಸಗಿ ಉದ್ಯಮಕ್ಕೆ ಅನೇಕ ಕ್ಷೇತ್ರಗಳಲ್ಲಿ ಅನುಮತಿ ನೀಡಲಿ, ತಾಂತ್ರಿಕ ಅಥವಾ ಯಾವುದೇ ಅಂತಹುದೇ ಕಾರಣಗಳಿಗಾಗಲೀ ರಾಜ್ಯದ ಕಾರ್ಯಕ್ಕೆಂದು ಮೀಸಲಿಡದಿರಲಿ. ಆಗ ನಿಜವಾಗಿಯೂ ಅದು ಇಬ್ಬರಿಗೂ ಒಳ್ಳೆಯದನ್ನು ಮಾಡುವುದು.

(೧೯೫೮ರ ಜೂನ್ ೨೯)

# ಸಹಕಾರಿ ಕೃಷಿ ಕ್ಷೇತ್ರಗಳು – ಗೊಂದಲದ ಒಂದು ಪ್ರಯತ್ನ!

ಹೊಸದಿಲ್ಲಿಯಲ್ಲಿ ನಡೆದ ಅಧಿವೇಶನದಲ್ಲಿ ಎ.ಐ.ಸಿ.ಸಿ.ಯು ಸಹಕಾರಿ ಕೃಷಿಯ ಕಾಂಗ್ರೆಸ್ಸಿನ ಕಾರ್ಯಕ್ರಮದ ಮೇಲೆ ಯಾವ ಬೆಳಕನ್ನೂ ಚೆಲ್ಲಿಲ್ಲ. ಕಾಂಗ್ರೆಸ್‌ನ ಅಧ್ಯಕ್ಷೆಯು (ಶ್ರೀಮತಿ ಗಾಂಧಿ) ಕೋಪದಿಂದ ಕಿರಿಚಿಕೊಂಡರೆಂದು ವರದಿಯಾದಾಗ ಸ್ವತಃ ತಾವೇ ಇದನ್ನು ಒಪ್ಪಿಕೊಂಡಿದ್ದಾರೆ: ‘ಈ ರೀತಿಯ ಸಾಮಾನ್ಯ ಚರ್ಚೆಯು ನನಗೆ ಬೇಕಾಗಿಲ್ಲ. ಇದು ಯಾವ ಫಲಿತಾಂಶವನ್ನೂ ನೀಡುವುದಿಲ್ಲ. ಈ ದಿನ ನಾನು ಹೊಸದಾದುದೇನನ್ನೂ ತಿಳಿಯಲಿಲ್ಲ. ಎ.ಐ.ಸಿ.ಸಿ.ಯು ಮುಖ್ಯ ವಿಷಯಕ್ಕೆ ಬರುತ್ತದೆಂದು ನಾನು ಆಶಿಸುತ್ತೇನೆ. ಈ ‘ಮುಖ್ಯ ವಿಷಯ’ (Brasstacks) ಎನ್ನುವುದು ಕೇಳಲು ಚೆನ್ನಾಗಿರುತ್ತದೆ. ಆದರೆ, ನೀವು ಮುಖ್ಯ ವಿಷಯಕ್ಕೆ ಬಂದಾಗ ಸಂಪೂರ್ಣವಾಗಿ ಕಾರ್ಯಕ್ರಮವನ್ನು ಬಿಟ್ಟುಬಿಡುವುದರ ವಿನಾ, ಬೇರೆ ದಾರಿಯೇ ಇಲ್ಲವಾಗುತ್ತದೆ. ಏಕೆಂದರೆ ಸಹಕಾರವು ಒಂದು ಆದರ್ಶವಾಗಿ ಪ್ರಶ್ನಿಸಲ್ಪಟ್ಟಿಲ್ಲ. ಆದರೆ ಅದು ಕೆಲವು ನಿರ್ದಿಷ್ಟ ಮಿತಿಗಳಲ್ಲಿ ಮಾತ್ರಾ ಮನಗಾಣಿಸಿಕೊಳ್ಳುವಂತಹುದು ಮತ್ತು ಕೃಷಿ ಎನ್ನುವುದು ಒಂದು ಸಾವಯವ, ಸಂಘಟನಾ ಪ್ರಕ್ರಿಯೆ ಮತ್ತು ಈ ದಿನಗಳಲ್ಲಿ ಅರ್ಥಮಾಡಿಕೊಂಡಿರುವಂತೆ ಅದು ಸಹಕಾರ ತತ್ತ್ವಗಳ ಪ್ರಯೋಜನವನ್ನು ತೀವ್ರವಾಗಿ ಮಿತಿಗೊಳಿಸುತ್ತದೆ. ಜನರು ಕೌಟುಂಬಿಕ ಬಾಂಧವ್ಯಗಳಿಂದ ಒಟ್ಟುಗೂಡಿ, ಆರ್ಥಿಕ ಮತ್ತು ವ್ಯಾವಹಾರಿಕ ಸಂಬಂಧಗಳನ್ನು ಮೀರಿದಾಗ ಅದು ಬೇರೆಯೇ ವಿಷಯವಾಗುತ್ತದೆ.

‘ಪ್ರತಿ ವ್ಯಕ್ತಿಯಿಂದಲೂ ಅವನವನ ಸಾಮರ್ಥ್ಯಕ್ಕೆ ತಕ್ಕಂತೆ ಮತ್ತು ಪ್ರತಿ ವ್ಯಕ್ತಿಗೂ ಅವನವನ ಅವಶ್ಯಕತೆಗೆ ತಕ್ಕಂತೆ’ ಎನ್ನುವ ಆದರ್ಶವನ್ನು ಕುಟುಂಬವು ಪ್ರತಿನಿಧಿಸುತ್ತದೆ. ಈ ಭಾವನೆಯು ಕುಟುಂಬದ ಸದಸ್ಯರಲ್ಲಿ ಮೈಗೂಡುವಂತೆ ಪರಂಪರೆ ಸಹಾಯ ಮಾಡಿದೆ. ಕುಟುಂಬದ ‘ಕರ್ತ’ನು, ಸದಸ್ಯರ ಮತಗಳನ್ನು ಅವಲಂಬಿಸುವುದಿಲ್ಲ. ತನ್ನ ಜವಾಬ್ದಾರಿಗಳನ್ನು ಎಷ್ಟು ಉತ್ತಮವಾಗಿ ನಿರ್ವಹಿಸಬಹುದೆನ್ನುವುದಕ್ಕೆ, ಅವನಿಗೆ ಯಾವುದೇ ತರಬೇತಿಯ ತರಗತಿಗಳನ್ನು ಏರ್ಪಡಿಸಬೇಕಾಗಿಲ್ಲ. ಅವನು ಅದನ್ನು ತನ್ನ ಪೂರ್ವಜರು ಅನುಸರಿಸಿದ್ದ ಹಾದಿಯನ್ನು ಅನುಸರಿಸಿ, ತನ್ನ ಹುಟ್ಟುಗುಣ, ಸ್ವಭಾವಗಳಿಂದಲೇ ಮಾಡುತ್ತಾನೆ. ಆದರೆ ಸಹಕಾರಿ ಪದ್ಧತಿಯಲ್ಲಿ, ಉತ್ಪನ್ನವನ್ನು ಹೇಗೆ ವಿತರಿಸಬೇಕು ಎನ್ನುವ ನಿರ್ಣಾಯಕ, ಕ್ಲಿಷ್ಟ



ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಎಲ್ಲ ವಿಧದ ಜಮೀನು ಇರುವವರೊಡನೆ, ಜಮೀನು ಇಲ್ಲದವರು ಮತ್ತು ಭೂಮಿಯಲ್ಲಿ ಬೇರೆ ಬೇರೆ ರೀತಿಯ ಹಕ್ಕುಗಳುಳ್ಳವರು ಎಲ್ಲರೂ ಒಂದುಗೂಡಿದಾಗ, ಉತ್ಪನ್ನವನ್ನು ನ್ಯಾಯಸಮ್ಮತವಾಗಿ ವಿತರಿಸುವುದು, ಕಾರ್ಯತಃ ಅಸಾಧ್ಯವಾಗುತ್ತದೆ. ಅದನ್ನು ಸಮನಾಗಿ ವಿತರಿಸಬಹುದು ಆದರೆ ಅದು ನ್ಯಾಯಸಮ್ಮತವಾಗಲಾರದು. ಡಾ. ಸುಶೀಲಾ ನಯ್ಯರ್ ಅವರು ಈ ಪ್ರಶ್ನೆಯನ್ನು ಮಂಡಿಸಿದರು ಮತ್ತು ಎ.ಐ.ಸಿ.ಸಿ.ಯು ಈ ವಿಷಯವನ್ನು ಸ್ಪಷ್ಟಗೊಳಿಸುವಂತೆ ಹಕ್ಕೊತ್ತಾಯ ಮಾಡಿದರು. ಸರಿ, ಇದೇ ‘ಮುಖ್ಯ ವಿಷಯಕ್ಕೆ’ ಬರುವುದೆಂದರೆ ಕಾಂಗ್ರೆಸ್ಸಿನ ಅಧ್ಯಕ್ಷರು ಈ ಕೆಲಸವನ್ನು ಕೈಗೆತ್ತಿಕೊಳ್ಳುವರೇ?

ನಾಯಕತ್ವದ ಪ್ರಶ್ನೆಯು ಈಗಾಗಲೇ ಅಲ್ಲಿದೆ. ನಾಯಕರನ್ನು ಶಿಕ್ಷಣ ಶಾಲೆಗಳಲ್ಲಿ ತರಬೇತಿಗೊಳಿಸಲಾಗುವುದಿಲ್ಲ. ಆದರೆ ಅಲ್ಲಿ ಕೂಡ ಜನರು ಮುಂದೆ ಬರುತ್ತಿದ್ದಾರೆ. ಎ.ಐ.ಸಿ.ಸಿ. ಸದಸ್ಯರು ಸಾವಿರ ಜನರ ಬಗೆಗೆ ಮಾತನಾಡಬಹುದು, ಆದರೆ, ಈ ರೀತಿ ಪ್ರಸ್ತಾಪಿಸಿದ ತರಬೇತಿಯ ಶಿಬಿರಕ್ಕೆ, ಕಚೇರಿಯಿಂದ ಕೇವಲ ಆರು ಅಥವಾ ಏಳು ಹೆಸರುಗಳನ್ನು ಮಾತ್ರ ಸ್ವೀಕರಿಸಲಾಗಿದೆ; ಅದು ಕೂಡ, ಕಾಂಗ್ರೆಸ್ಸಿಗರಲ್ಲದವರು ಕೂಡ ಸೇರಿಸಿಕೊಳ್ಳಲು ಅನುಮತಿಸಿದಾಗ. ಖಂಡಿತವಾಗಿಯೂ ಈ ಕಾರ್ಯಕ್ರಮವು ಸ್ವಯಂಪ್ರೇರಣೆಯ ಆಧಾರದ ಮೇಲಾಗಲೀ, ಅಥವಾ ಸಾಮಾಜಿಕ ಕಾರ್ಯಕರ್ತರಿಂದಾಗಲೀ ಕಾರ್ಯಗತ ಮಾಡಿದುದಲ್ಲ. ಆದರೆ ಅಧಿಕಾರಿಗಳಿಂದಲೇ ನಡೆಸಲ್ಪಡುವಂತಹುದು. ಈ ದಿಕ್ಕಿನಲ್ಲಿ ಮುಖ್ಯ ಜವಾಬ್ದಾರಿಯು ಸರ್ಕಾರದ ಮೇಲಿದೆ ಎಂದು ಹೇಳಿದಾಗ ಕಾಂಗ್ರೆಸ್ ಅಧ್ಯಕ್ಷೆಯು ಈ ಸಂಗತಿಯನ್ನು ಗಮನಿಸಿದರು.

ರೈತರ ನಡುವೆ, ಸಾಮೂಹಿಕ ಜವಾಬ್ದಾರಿಯ ಪ್ರಜ್ಞೆ ಮತ್ತು ನಾಯಕತ್ವವು ಬೆಳೆಯಬೇಕೆಂದು ಶ್ರೀ ಸುಬ್ರಮಣ್ಯಂ ಹೇಳಿದರು. ಸ್ವಲ್ಪ ಪ್ರಮಾಣದಲ್ಲಿ ಈ ನಾಯಕತ್ವವು, ಹಿಂದಿ ಜಮೀನ್ದಾರರು ಮತ್ತು ಜಮೀನನ್ನು ಹೊಂದಿರುವ ವರ್ಗಗಳಿಂದ ಬರಬಹುದು. ಆದರೆ, ಗ್ರಾಮಗಳಲ್ಲಿನ ವಾತಾವರಣವು, ಅವರು ಕೂಡ ಜನರನ್ನು ಉತ್ಸಾಹಿಸಲಾರದಷ್ಟು ಮಟ್ಟಿಗೆ ಕಲುಷಿತಗೊಂಡಿದೆ. ಶ್ರೀಬಿಮಲ್ ಚಂದ್ರ ಸಿನ್ಹಾ ಅವರು ಇಂತಹವರು ಸಹಕಾರೀ ಸಂಸ್ಥೆಗಳನ್ನು ಸೇರುವುದರಲ್ಲಿ ಅಪಾಯವನ್ನು ಕಂಡರು. ಅವರು ಇಡಿಯ ಪ್ರದೇಶದಲ್ಲಿ ಪ್ರಬಲವಾದ (ಅಧಿಕಾರ) ಧ್ವನಿ ಹೊಂದಬಹುದು ಎಂದು ಸಿನ್ಹಾ ಹೇಳಿದರು. ಕಾಂಗ್ರೆಸ್ಸಿಗೆ ಹೊಸ ನಾಯಕತ್ವ ಬೇಕಾಗಿದೆ. ಅದು ಎಲ್ಲಿಂದ ಬರಬೇಕು? ಅದು ಗ್ರಾಮಗಳ ಒಳಗಿನಿಂದ ಬೆಳೆಯುವುದಿಲ್ಲ. ಹಾಗಾಗಿ, ನಾಯಕತ್ವವು ಮೇಲಿನಿಂದ ಹೊರಿಸಲ್ಪಡುತ್ತದೆ.

ಕೇರಳದಿಂದ ಶ್ರೀ ಪಿ.ಗೋವಿಂದ ಮೆನನ್‌ರು ಅಲ್ಲಿಯ ಕಮ್ಯೂನಿಸ್ಟ್ ಸರ್ಕಾರವು ಸಹಕಾರಿಸಂಘಗಳನ್ನು ನಿಯಂತ್ರಿಸುತ್ತಿದೆಯೆಂದು ದೂರಿದರು. ಅವರು ಹೇಳಿದರು: ‘ಕೇರಳದಲ್ಲಿನ ಕೇವಲ ವಾಸ್ತವತೆಯೆಂದರೆ ಕಾಂಗ್ರೆಸ್ಸಿನವರಿಂದ ಆರಂಭಗೊಂಡ

ಸಹಕಾರಿ ಸಂಘಗಳು ನೋಂದಣಿಗೊಂಡೇ ಇಲ್ಲದಿರುವುದು. ಕಾಂಗ್ರೆಸ್ಸಿನವರಾಗಲೀ, ಕಮ್ಯುನಿಸ್ಟರಲ್ಲದವರಾಗಲೀ, ಸಹಕಾರಿ ಸಂಘಗಳ ನೋಂದಣಿಗೆ ಅರ್ಜಿ ಹಾಕಿದಾಗ, ಸಂಬಂಧಪಟ್ಟ ಸಚಿವರು ಅಥವಾ ಪಕ್ಷದ ನಾಯಕರು, ಅರ್ಜಿಹಾಕಲು ತಮ್ಮವರೇ ಆದ ಜನರನ್ನು ಗೊತ್ತುಮಾಡುತ್ತಾರೆ ಮತ್ತು ರಿಜಿಸ್ಟ್ರಾರ್ ಅವರು ಈ ಜನರ ಅರ್ಜಿಯನ್ನೇ ಮಂಜೂರುಮಾಡುತ್ತಾರೆ. ಈ ಚಳುವಳಿಯು ಕಮ್ಯುನಿಸ್ಟ್ ಪಕ್ಷದ್ದಾಗಿಯೇ ಉಳಿದುಕೊಳ್ಳುವಂತೆ ನೋಡಲು, ಕಮ್ಯೂನಿಸ್ಟರು ಅನುಸರಿಸುವ ತಂತ್ರಗಳಲ್ಲಿ ಇದೂ ಒಂದು. ಕಮ್ಯುನಿಸ್ಟ್‌ರಲ್ಲದವರ ಸಂಘಗಳನ್ನು ಹಿಂದೆ ಹಾಕುವುದು ಅಥವಾ ಅತಿಕ್ರಮಿಸುವುದು ಅವರ ಎರಡನೆಯ ತಂತ್ರ. ಮೂರನೆಯದಾಗಿ, ಸಂಘಗಳ ಕಾರ್ಯನಿರ್ವಾಹಕ ಸಮಿತಿಗಳನ್ನು ನಿರ್ದೇಶಿಸಲು ತನ್ನಿಂದಲೇ ಅಂಗೀಕರಿಸಲ್ಪಟ್ಟ ವ್ಯಕ್ತಿಯನ್ನು ಸದಸ್ಯನನ್ನಾಗಿ ಮಾಡುವ ಅಧಿಕಾರವನ್ನು ರಿಜಿಸ್ಟ್ರಾರಿಗೆ ಕೊಡಲಾಗಿದೆ. ಈ ರೀತಿಯಲ್ಲಿ ಕಮ್ಯುನಿಸ್ಟರು ಒಳಗೆ ಪ್ರವೇಶಿಸುತ್ತಾರೆ.' ಕೇರಳದಲ್ಲಿ ಕಮ್ಯುನಿಸ್ಟರು ಮಾಡುತ್ತಿರುವುದನ್ನು ಕಾಂಗ್ರೆಸ್ಸಿನವರು ಬೇರೆ ಕಡೆಗಳಲ್ಲಿ ಮಾಡುತ್ತಿದ್ದಾರೆ. ಸಹಕಾರೀಕರಣವೆನ್ನುವುದು ಅಧಿಕಾರೀಕರಣಕ್ಕೆ ಇನ್ನೊಂದು ಹೆಸರು ಅಷ್ಟೆ. ಸಾಮುದಾಯಿಕತ್ವದಿಂದ ಇದು ಯಾವ ರೀತಿಯಲ್ಲಿ ಭಿನ್ನವಾಗಿದೆ?

ಪ್ರಧಾನಮಂತ್ರಿಯವರು ಒಬ್ಬ ಸಾಧಾರಣ ಪ್ರತಿನಿಧಿಯಂತೆ ಮಾತನಾಡಿದರೂ ಅವರ ದೃಷ್ಟಿಕೋನಗಳ ವ್ಯಾಪಕ ಪ್ರಚಾರ ಪಡೆದಿವೆ. ಆ ವಿಷಯದ ಮೇಲೆ ಅವರು ಅನೇಕ ಬಾರಿ ಮಾತನಾಡಿದ್ದಾರೆ, ಮತ್ತು ಯಾವಾಗಲೂ ಒಬ್ಬ ಪ್ರಚಾರಕನ ಉತ್ಸಾಹ, ಶಕ್ತಿಗಳಿಂದ ಮಾತನಾಡಿದ್ದು, ಸಹಕಾರಿ ಸಂಘಗಳ ಸ್ವರೂಪದ ಬಗೆಗೆ ವೈರುಧ್ಯಗಳ ಹೇಳಿಕೆಯನ್ನು ನೀಡಿದ್ದಾರೆ. ಈಗಿನ ಭಾಷಣದಲ್ಲಿ ಕೂಡ, ಸಹಕಾರಿ ಕೃಷಿ ಕ್ಷೇತ್ರದ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ಅವರು ಇನ್ನೂ ಮೂರು ವರ್ಷಗಳ ತನಕ ಕಾಯಬೇಕಾಗಿಲ್ಲವೆಂದು ಹೇಳಿದ್ದಾರೆ. ಆದರೂ, ಸಮಪರ್ಕವಾಗಿ ತರಬೇತಿ ಹೊಂದಿದ ಮುಖಂಡರು ಸಿಗುವವರೆಗೂ, ಒಂದೇ ಒಂದು ಸಹಕಾರಿ ಸಂಸ್ಥೆಯು ರೂಪುಗೊಳ್ಳದಿದ್ದರು ತಾವು ಚಿಂತಿಸುವುದಿಲ್ಲ ಎಂದು ಮತ್ತೊಂದು ಕಡೆ ಹೇಳಿದ್ದಾರೆ. ಹೀಗಿರುವಾಗ, ಇಂದೇ, ಇಲ್ಲಿಯೇ, ಅಂತಹ ಸಹಕಾರೀ ಸಂಸ್ಥೆಗಳನ್ನು ರೂಪಿಸಲು ಯಾರು ಒತ್ತಾಯ ಮಾಡಬಲ್ಲರು? ಜೊತೆಗೆ, ಇಂತಹ ಸಹಕಾರಿ ಸಂಸ್ಥೆಯನ್ನು ಬಿಟ್ಟುಬಿಡುವ ರೈತನ ಹಕ್ಕುಗಳ ಬಗೆಗೂ ಗೊಂದಲಮಯವಾದ ಹೇಳಿಕೆಗಳನ್ನು ಅವರು ನೀಡಿದ್ದಾರೆ. ಸಹಕಾರಿ ಕೃಷಿಕ್ಷೇತ್ರಕ್ಕೆ ಒಳಪಡಲು ಇಚ್ಛಿಸುವ ಒಬ್ಬ ರೈತ ಒಳಬರುವುದು ಮತ್ತೆ ಹೊರಹೋಗುವುದು ಇಂತಹದಕ್ಕೆ ಅನುಮತಿ ನೀಡಬಾರದೆಂದು, ಒಂದು ಕಡೆ ಹೇಳಿದರೆಂದು ವರದಿಯಾಗಿದೆ. ಸಹಕಾರಿ ಕೃಷಿಯು, ಪ್ರಮುಖವಾಗಿ ಸ್ವಇಚ್ಛೆಯದಾದ್ದರಿಂದ ಇಷ್ಟಪಡದ ವ್ಯಕ್ತಿಗಳು ಹೊರಹೋಗಲು ಇಚ್ಛಿಸಿದಾಗ 'ಉತ್ತಮ ರೀತಿಯಲ್ಲಿ



ಹೊರಕ್ಕೆ ಹೋಗುವಂತಹ' ಯಾವುದಾದರೂ ಕ್ರಮವನ್ನು ಕಂಡುಹಿಡಿಯಬೇಕೆಂದು, ಅವರು ಮತ್ತೊಂದು ಕಡೆ ಹೇಳಿದ್ದಾರೆ. ಅಲ್ಲದೇ, ವೈಜ್ಞಾನಿಕ ಮತ್ತು ಯಂತ್ರವ್ಯವಸ್ಥೆಯ ವ್ಯವಸಾಯಗಳ ನಡುವೆ ಇರುವ ವ್ಯತ್ಯಾಸವನ್ನು ತಿಳಿಸಲು ಅವರು ಪ್ರಯತ್ನಿಸಿದರು. ಆದರೆ, ಅಧಿಕಾರಾವಧಿಯು ಯಾವುದೇ ಆಗಿರಲಿ, ವಿಶಾಲ ಪ್ರದೇಶಗಳಲ್ಲಿನ ವ್ಯವಸಾಯವು, ಉತ್ಪಾದನೆಯ ವೈಜ್ಞಾನಿಕ ವಿಧಾನಗಳ ಹೆಸರಿನಲ್ಲಿ ಯಂತ್ರ ವ್ಯವಸ್ಥೆಯತ್ತಲೇ ಪ್ರವೃತ್ತವಾಗುತ್ತದೆ ಎಂಬುದನ್ನು ಅವರು ಮರೆಯಬಾರದು. ವಿಜ್ಞಾನ ಮತ್ತು ಯಂತ್ರ ಎರಡೂ ಪರಸ್ಪರ ಸಂಬಂಧಿಸಿವೆ. ನಾವು ಯಾಂತ್ರಿಕ ವ್ಯವಸ್ಥೆಯನ್ನು ಪ್ರತಿರೋಧಿಸಬೇಕಾದರೆ, ಭೂಮಿ–ಜಮೀನನ್ನು ಒಟ್ಟಿಗೇ ಸೇರಿಸುವ ಆಮಿಷವನ್ನು ಬಿಡಬೇಕು. ಇದು ಭಾರತದಲ್ಲಿ ಖಂಡಿತವಾಗಿಯೂ, ಬದಲಾಗದ, ಯಾಂತ್ರಿಕರಣದಲ್ಲಿ ಪರಿಣಮಿಸುತ್ತದೆ.

ಸಹಕಾರ ಕೃಷಿಯನ್ನು ವಿರೋಧಿಸುವವರು ಬೇರೆ ಯಾವುದೇ ಪರ್ಯಾಯವಾದದ್ದನ್ನು ಸೂಚಿಸುವುದಿಲ್ಲವೆಂದು ಪಂಡಿತ ನೆಹರೂ ಆಪಾದಿಸಿದ್ದಾರೆ. ಇಲ್ಲಿರುವ ತೊಂದರೆಯೆಂದರೆ ನೆಹರೂ ಅವರು ತಮ್ಮದೇ ಕಲ್ಪನೆಗಳ ವಿಚಾರದಲ್ಲಿ ಬಹಳವಾಗಿ ಗ್ರಸ್ತರಾಗಿದ್ದು, ಬೇರೆ ಪರ್ಯಾಯಕ್ರಮಗಳನ್ನು ನೋಡುವುದರಲ್ಲಿ ವಿಫಲರಾಗುತ್ತಾರೆ. ಇದೊಂದೇ ಸಂದರ್ಭದಲ್ಲಲ್ಲ ಹೀಗಾಗಿರುವುದು. ಕಾರ್ಯನೀತಿಯ ಯಾವುದೇ ಇತರ ವಿಷಯಗಳಲ್ಲಿಯೂ ಅವರು ಒಂದೇ ದಾರಿಯನ್ನು ಕಾಣುತ್ತಾರೆ ಮತ್ತು ಆ ದಾರಿಯು ಅವರದೇ ಆಗಿರುತ್ತದೆ. ರೈತರ ಒಡೆತನದ–ಮಾಲಿಕತ್ವದ–ಆಧಾರದ ಮೇಲೆ ವ್ಯವಸಾಯ ಮಾಡುವುದು ಕೂಡ ಇದೆ. ಅದು ಜಪಾನ್ ಮತ್ತು ಇತರ ದೇಶಗಳಲ್ಲಿ ಪರಮಾವಧಿ ಫಲಿತಾಂಶಗಳನ್ನೂ ಕೊಟ್ಟಿದೆ. ಸಹಕಾರೀ ಕೃಷಿಕ್ಷೇತ್ರಗಳಲ್ಲಿ ವಿಫಲ ಪ್ರಯತ್ನಗಳ ನಂತರ ಪೋಲೆಂಡ್, ಮೇಲಿನ ಕ್ರಮಕ್ಕೆ–ರೈತರ ಮಾಲಿಕತ್ವದ ಆಧಾರದ ಮೇಲೆ ವ್ಯವಸಾಯ– ಹಿಂದಿರುಗಿತು. ಚಂಚಲಚಿತ್ತ, ಮನೋವಿಕಾರಕ್ಕೊಳಗಾದವರ ಅಭಿಪ್ರಾಯಗಳನ್ನು ಅವಲಂಬಿಸದೇ ಅವರು ಚಿತ್ರದ ಇನ್ನೊಂದು ಮಗ್ಗುಲಿನ ಬಗೆಗೆ ಸಮಾಧಾನಚಿತ್ತದಿಂದ ಆಲೋಚಿಸಿದರೆ, ಅವರು ಸತ್ಯವನ್ನು ಮನಗಾಣುತ್ತಾರೆ. ಅವರು ಮತ್ತು ಕಾಂಗ್ರೆಸ್ಸಿನ ಅಧ್ಯಕ್ಷರು, ಪ್ರತಿರೋಧವನ್ನು–ಸಂಭವನೀಯ ಹಾಗೂ ವಾಸ್ತವವಾದ– ಕನಿಷ್ಠಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಎಲ್ಲ ಕಡೆಗಳಲ್ಲಿಯೂ ರೈತಾಪಿವರ್ಗವು ಈ ಕಾರ್ಯಕ್ರಮಕ್ಕೆ ಅತ್ಯಂತ ಪ್ರೋತ್ಸಾಹದಿಂದ ಪ್ರತಿಕ್ರಿಯಿಸಿದೆಯೆಂದು ಅವರು ಕಲ್ಪಿಸಿಕೊಳ್ಳುತ್ತಾರೆ. ಪಂಡಿತ ನೆಹರೂ ಬಹಳ ವಿಶ್ವಾಸ ಮತ್ತು ಸ್ನೇಹದಿಂದ ಮಾತನಾಡಿದ್ದಾರೆ. ಆದರೆ ಅವರ ತಾತ್ಪರ್ಯವು ಸಹಕಾರಿ ಕೃಷಿಗೆ ಯಾವುದೇ ಆಧಾರವನ್ನೂ ಒದಗಿಸುವುದಿಲ್ಲ. ಕಾಂಗ್ರೆಸ್ ನಾಯಕರ ಬಗೆಗೆ ಡಾ. ಮೆಹತಾಬ್ ಅವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ: ಅವರಲ್ಲಿ ಅನೇಕರು, 'ಜನರನ್ನು ಕಾರ್ಯಗೊಳಿಸುವಂತೆ ತಾವು ಕೇಳುತ್ತಿರುವ ಕಾರ್ಯಕ್ರಮದ

ಬಗೆಗೆ ಇನ್ನೂ ಗೊಂದಲದ ಸ್ಥಿತಿಯಲ್ಲಿಯೇ ಇದ್ದಾರೆ. ಹೌದು, ಖಂಡಿತವಾಗಿಯೂ ಗೊಂದಲವಿದೆ ಮತ್ತು ಮೇಲಿನಿಂದ ಕೆಳಗಿನವರೆಗೂ ಅದು ಬಹಳ ದೃಢವಾಗಿ ಬೇರೂರಿದೆ.' ಕಾಂಗ್ರೆಸ್ ನಾಯಕರು ಮೊದಲು ಯೋಜನೆಯನ್ನು ಅದರ ಎಲ್ಲ ವಿವರಗಳಲ್ಲಿ ಮತ್ತು ಅದರ ಸಂಕೀರ್ಣ ಪರಿಣಾಮಗಳಲ್ಲಿ ಆಲೋಚಿಸಲಿ ಮತ್ತು ನಂತರ ನಿಸ್ಸಂದಿಗ್ಧ ಮಾತುಗಳಲ್ಲಿ, ಸ್ಪಷ್ಟವಾಗಿ ಅದನ್ನು ಜನರಿಗೆ ತಿಳಿಸಲಿ. ಈ ದಿನಗಳಲ್ಲಿ ನಾವು ಅನುಭವಿಸುತ್ತಿರುವ ಅನೇಕ ಜನರ ವಾಚಾಳತ್ವಕ್ಕಿಂತಲೂ ಅದು ಜನರಿಗೆ ಹೆಚ್ಚು ಒಳಿತನ್ನು ಮಾಡುತ್ತದೆ.

(೧೯೫೯, ಮೇ ೧೮)



# ಭಾರತ, ಪಾಕಿಸ್ತಾನ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳು

ಕಮ್ಯುನಿಸ್ಟ್ ಚೀನಾದ ಆಕ್ರಮಣದ ವಿರುದ್ಧ, ಅಮೆರಿಕಾದ ಜನರು, ಭಾರತದೊಡನೆ ಸಹಾನುಭೂತಿ ಹೊಂದಿದ್ದಾರೆ. ಆದರೆ, ನಾವು ಚೀನಾದೊಡನೆ ಸಮರ್ಪಕವಾಗಿ ಯುದ್ಧ ಮಾಡಲು ಇಚ್ಛಿಸುವುದಿಲ್ಲವೇನೋ ಎಂಬ ಗುಪ್ತ ಅನುಮಾನವನ್ನೂ ಅವರು ಹೊಂದಿದ್ದಾರೆ. ಇಂತಹ ಅನುಮಾನಕ್ಕೆ ಅನೇಕ ಕಾರಣಗಳಿವೆ. ಸ್ವಲ್ಪವೂ ಲಜ್ಜೆಯಿಂದ, ಹಿಂದಿನ ನಮ್ಮ ಚೀನಾದೊಂದಿಗಿನ ನೀತಿ ಮತ್ತು ಆಕ್ರಮಣಕಾರನನ್ನು ಹೊರಗಟ್ಟುವುದರಲ್ಲಿನ ಮೆದು ನೀತಿ ಇವು ಬಹುಮಟ್ಟಿಗೆ ಈ ಭಾವನೆಗಳಿಗೆ ಹೊಣೆಯಾಗಿವೆ. ಆಕ್ರಮಣಕಾರಿ ಎಂದು ನಾವು ಆಪಾದಿಸುವ ದೇಶದೊಡನೆ ನಾವು ಹೊಂದಿರುವ ಸತತವಾದ ರಾಜತಾಂತ್ರಿಕ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದು ಅವರಿಗೆ ಕಷ್ಟವಾಗುತ್ತದೆ. ಕೊಲಂಬೊ ಪ್ರಸ್ತಾಪಗಳ ಬಗೆಗಿನ ನಮ್ಮ ನಿಲುವನ್ನು ಅವರು ಮೆಚ್ಚುವುದಿಲ್ಲ. ನಿಜ ಹೇಳಬೇಕೆಂದರೆ ನಮ್ಮ ಚೀನಾ ನೀತಿಯು ಅವರಿಗೆ ಒಂದು ನಿಗೂಢ ಸಂಗತಿಯಾಗಿದೆ, ಒಗಟಾಗಿದೆ. ಅದು ಅಸಂಬದ್ಧ ಹಾಗೂ ಅಸಮಂಜಸವಾದದ್ದು, ತಾನು ತೊಂದರೆಗೊಳಗಾಗಿದ್ದೇನೆಂದು ಭಾವಿಸುವ ಮತ್ತು ಮುಂದೆಯೂ ಬೆದರಿಕೆಯಿರುವುದನ್ನು ಕಾಣುವ ಮತ್ತು ಪುನಃ ತನ್ನ ಸ್ಥಾನವನ್ನು ಗಳಿಸಿಕೊಳ್ಳಬೇಕೆಂದು ಬಯಸುವ ದೇಶವು ಅನುಸರಿಸುವ ಹಾದಿ ಇದಲ್ಲ. ಇದು ನಮ್ಮ ಸನ್ನಿವೇಶವನ್ನು ದುರ್ಬಲಗೊಳಿಸಿದೆ.

ಭಾರತ ಸರ್ಕಾರದ ನೀತಿಯು ಅಮೆರಿಕಾದ ಬೇಹುಗಾರಿಕೆಯೊಡನೆ ಜೊತೆಗೂಡಿ, ಕಮ್ಯುನಿಸ್ಟ್ ಚೀನಾವು ತನ್ನ ಆಕ್ರಮಣವನ್ನು ಮತ್ತೆ ನಿಕಟ ಭವಿಷ್ಯದಲ್ಲಿ ಆರಂಭಿಸುವುದಿಲ್ಲವೆಂದು ಸಂಗತಿಯು, ಅಕ್ಟೋಬರ್ ತಿಂಗಳಿನಲ್ಲಿ ನಮ್ಮ ಸಹಾಯಕ್ಕೆ ಧಾವಿಸಿದ ದೇಶದ ಸ್ನೇಹ, ಭಾವದ ಮೇಲೆ, ನಿರುತ್ಸಾಹದ ಪರಿಣಾಮ ಬೀರಿತು. ಭಾರತಕ್ಕೆ ಮಿಲಿಟರಿ ನೆರವು ನೀಡುವ ಸಂಗತಿಯು ಈಗ ತೀರಾ ಹತ್ತಿರವಾಗಿರುವ ಅಪಾಯದ ವಿರುದ್ಧ ತತ್‌ಕ್ಷಣವೇ ನಿರ್ಮಿಸಬೇಕಾಗಿರುವ– ರೂಪಿಸಬೇಕಾಗಿರುವ ತಂತ್ರವಿಧಾನಕ್ಕಿಂತಲೂ, ದೀರ್ಘಕಾಲೀನ ತಂತ್ರವಿನ್ಯಾಸದ ಹಿನ್ನೆಲೆಯಲ್ಲಿ ಪರಿಶೀಲಿಸಲ್ಪಡುತ್ತಿದೆ. ಈ ಪರಿಸ್ಥಿತಿಗಳ ಅಡಿಯಲ್ಲಿ ಭಾರತಕ್ಕೆ ಶಸ್ತ್ರಾಸ್ತ್ರ ನೀಡಬಾರದೆಂಬ

ಪಾಕಿಸ್ತಾನದ ಬೇಡಿಕೆಯನ್ನು, ಮನ್ನಿಸಿ, ಒಪ್ಪುವುದರಲ್ಲಿ ಅವರು ಯಾವ ಹಾನಿಯನ್ನೂ ಕಾಣುವುದಿಲ್ಲ.

ಈ ನೀತಿಗೆ, ಪೂರ್ವ–ಪಶ್ಚಿಮಗಳ ನಡುವಿನ ದ್ವೇಷದ ಅಂತ್ಯ ಮತ್ತು ಸೀನೊ– ಸೋವಿಯೆಟ್ ಒಡಕುಗಳು ಕೂಡ ಕಾರಣವಾಗಿವೆ. ಎರಡು ಧ್ರುವಗಳ ಪ್ರಪಂಚವು ಈಗ ಅಲ್ಲಿಲ್ಲವೆಂಬ ಭಾವನೆಯು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಕ್ಯೂಬಾದಿಂದ ಸೋವಿಯೆಟ್ ರಷ್ಯಾವು ಕಾಲುತೆಗೆದ ಕಾರಣದಿಂದಾಗಿ ಸಂಯುಕ್ತ ಸಂಸ್ಥಾನಗಳು ತನ್ನಲ್ಲಿ ಹೆಚ್ಚು ಆತ್ಮವಿಶ್ವಾಸ ಗಳಿಸಿದ್ದಂತೆ ತೋರುತ್ತಿತ್ತು. ಒಂದು ಅಂಶದಲ್ಲಿ ಗಳಿಸಿದ ನಂತರ ಅವರು ಮತ್ತೊಂದು ಪಣ ಕಟ್ಟುವ ಅಪಾಯ ತೆಗೆದುಕೊಳ್ಳಲು ಅವರು ಸಿದ್ಧರಿರಲಿಲ್ಲ. ಶೀತಯುದ್ಧದಲ್ಲಿನ ಒಂದು ಧ್ರುವೀಕರಣವು ಅವರ ಇಚ್ಛೆಯನ್ನೂ ತಂತ್ರವನ್ನೂ ಪೂರ್ಣಗೊಳಿಸುತ್ತದೆ. ತನ್ನ ಪ್ರಸ್ತುತ ಲಹರಿಯಲ್ಲಿ ಅಮೆರಿಕವು ನಿಶ್ಚಯವಾಗಿಯೂ ಭಾರತವನ್ನು ಜಯಿಸಲು ಇಚ್ಛಿಸುತ್ತದೆ, ಆದರೆ, ಸೋವಿಯೆಟ್ ರಷ್ಯಾಕ್ಕೆ ಮುಜುಗರವಾಗುವಂತೆ, ಭಾರತವು ತನ್ನನ್ನು ಸಂಯುಕ್ತ ಸಂಸ್ಥಾನಗಳೊಡನೆ ಜೋಡಿಸಿಕೊಳ್ಳುವುದನ್ನು ಅಮೆರಿಕವು ಖಂಡಿತವಾಗಿಯೂ ಇಷ್ಟಪಡುವುದಿಲ್ಲ. ಇದು ವಿಚಿತ್ರವಾಗಿ ಕಾಣಿಸುತ್ತದೆ. ಆದರೆ, ಭಾರತದ ಅಲಿಪ್ತ ನೀತಿಯ ಬಗೆಗೆ ಪಶ್ಚಿಮ ದೇಶಗಳು ಈಗ ಅಪ್ರಿಯ ಅಭಿಪ್ರಾಯ ಹೊಂದಿಲ್ಲವೆಂಬುದು ಗಣನೀಯ ಪ್ರಮಾಣದಲ್ಲಿ ಸಮರ್ಪಕವಾಗಿದೆ. ಸ್ವಲ್ಪಮಟ್ಟಿಗೆ ಅದು ಅವರಿಗೆ ಸೂಕ್ತವಾಗುತ್ತದೆ ಕೂಡ.

ಕಮ್ಯುನಿಸ್ಟ್ ಒಕ್ಕೂಟದಲ್ಲಿನ ಒಡಕಿನ ಬೆಳವಣಿಗೆಯಿಂದಾಗಿ, ಪಾಶ್ಚಿಮಾತ್ಯ ಪ್ರಪಂಚಕ್ಕೆ, ಸಹಜವಾಗಿಯೇ ಹರ್ಷವಾಗಿದೆ. ಒಂದುವೇಳೆ ಕಮ್ಯುನಿಸ್ಟ್ ಮತ್ತು ಕಮ್ಯುನಿಸ್ಟ್‌ರಲ್ಲದ ಪ್ರಪಂಚಗಳ ನಡುವೆ ಶಸ್ತ್ರಾಸ್ತ್ರ ಸಂಘರ್ಷವೇನಾದರೂ ಉಂಟಾದಲ್ಲಿ ಒಳಒಕ್ಕೂಟಗಳಲ್ಲಿನ ಭೇದಗಳು ಗಣನೆಗೆ ಬರುವುದಿಲ್ಲವೆಂದು, ಅಂತಿಮ ವಿಶ್ಲೇಷಣೆಯಲ್ಲಿ, ಸಾಧಾರಣವಾಗಿ ಸಮ್ಮತಿಸಲಾಗಿದೆ. ಆದರೆ ಆ 'ಕಟ್ಟಕಡೆಯ' ಎನ್ನುವುದು ಈಗ ಬಹುದೂರದ ಸಂಭವನೀಯತೆಯಾಗಿದೆ ಮತ್ತು ಅದನ್ನು ಸರಿಯಾದ ನೀತಿಯ ನಿರ್ಧಾರಗಳಿಂದ ಮತ್ತಷ್ಟು ದೂರಕ್ಕೆ ತಳ್ಳಬಹುದಾಗಿದೆ. ಕಮ್ಯೂನಿಸ್ಟ್ ಚೀನಾವು, ಕಮ್ಯೂನಿಸ್ಟ್ ಪ್ರಪಂಚದ ಏಕಮೇವ ಮಾರ್ಗದರ್ಶಕ ತಾನೆಂದು ಹಕ್ಕು ಕೋರಿದ್ದ ಕ್ರೆಮ್ಲಿನ್‌ಗೆ ಸವಾಲು ಹಾಕಿದುದರಿಂದ, ಚೀನಾವನ್ನು ಈಗ ಬೇರೆಯೇ ದೃಷ್ಟಿಕೋನದಿಂದ ನೋಡುವಂತಾಗಿದೆ. ಅವರು (ಪಾಶ್ಚಿಮಾತ್ಯ ದೇಶಗಳು) ನೇರವಾಗಿ ಚೀನಾದ ಬೆನ್ನು ತಟ್ಟದಿದ್ದರೂ ಚೀನಾವು ತನ್ನ ಮುಖವನ್ನು ಸೋವಿಯೆಟ್ ರಷ್ಯಾದ ಕಡೆಗೆ ತಿರುಗಿಸಿರುವಾಗ, ಚೀನಾದ ಬೆನ್ನಿನಲ್ಲಿ ಚೂರಿ ಹಾಕುವುದನ್ನು ತಪ್ಪಿಸಲು ಖಂಡಿತವಾಗಿಯೂ ಇಷ್ಟಪಡುತ್ತಾರೆ. ಕೆಲವರು ಚೀನಾವು ಸ್ಥೈರ್ಯ ಕೆಟ್ಟು ತತ್ತರಿಸಿ, ಮತ್ತೆ ರಷ್ಯಾದ ಪಾದದಡಿ ಬೀಳಬಾರದೆಂದು, ಕೆಲವರು,



ಕಮ್ಯೂನಿಸ್ಟ್ ಚೀನಾಕ್ಕೆ ಆಸರೆ ನೀಡುವ ಮಟ್ಟಕ್ಕೆ ಕೂಡ ಹೋಗುತ್ತಾರೆ. ಕಮ್ಯೂನಿಸ್ಟ್ ಚೀನಾವು ಪಾಶ್ಚಿಮಾತ್ಯ ರಂಗದತ್ತ ಆಕರ್ಷಿತವಾಗಿದ್ದಾಗ ಕೆಎಂಟಿಯು ಮುಖ್ಯ ಪ್ರದೇಶವನ್ನು ಆಕ್ರಮಿಸಲು ಏಕೆ ಅನುಮತಿ ಸಿಕ್ಕಲಿಲ್ಲವೆಂಬುದುನ್ನು, ಭಾರತದ ವಿರುದ್ಧ ಚೀನಾವು ಸ್ಪಷ್ಟವಾಗಿ ಆಕ್ರಮಣ ಮಾಡಿದ ನಂತರವೂ, ಯುನೈಟೆಡ್ ಕಿಂಗ್‌ಡಮ್ಸ್ ಚೀನಾಕ್ಕೆ ಏಕೆ ವಿಮಾನಗಳನ್ನು ಸರಬರಾಜು ಮಾಡಲು ನಿರ್ಧರಿಸಿತೆಂಬುದನ್ನೂ ಇದು ವಿವರಿಸುತ್ತದೆ ಮತ್ತು ಕಡೆಯದಾಗಿ ಫ್ರಾನ್ಸ್ ತನ್ನ ಮೊದಲಿನ ಸ್ನೇಹಿತ ಚಿಯಾಂಗ್ ಕೈ ಷೇಕ್‌ನನ್ನು ವಂಚಿಸಿಯಾದರೂ, ಕಮ್ಯೂನಿಸ್ಟ್ ಚೀನಾಕ್ಕೆ ಮನ್ನಣೆ ನೀಡಿ ತನ್ನ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಿಕೊಂಡಿದೆ ಎಂಬುದನ್ನು ಸಹ ಇದು ವಿವರಿಸುತ್ತದೆ.

ಪಾಕಿಸ್ತಾನವು ಕಮ್ಯೂನಿಸ್ಟ್ ಚೀನಾದೊಂದಿಗೆ ಬೆಳಸುತ್ತಿರುವ ಸಲಿಗೆಯನ್ನು ಸ್ನೇಹವನ್ನು, ಅಮೆರಿಕವು ಸಹಿಸುತ್ತಿರುವುದಕ್ಕೆ ಕೂಡ ಇದು ಸಮಂಜಸವೆನಿಸುವ ವಿವರಣೆಯನ್ನು ಒದಗಿಸುತ್ತದೆ. ಅಮೆರಿಕದ ಜನರ ಬಗೆಗೆ ಹೇಳುವುದಾದರೆ ಅವರು ಪಾಕಿಸ್ತಾನದ ಕಪಿಚೇಷ್ಟೆಯ ಬಗೆಗೆ ಕುಪಿತರಾಗಿದ್ದಾರೆ. ಪಾಕಿಸ್ತಾನವನ್ನು ಸಂಪೂರ್ಣ ಶಸ್ತ್ರ ಸನ್ನದ್ಧಗೊಳಿಸಿರುವುದು ಕೇವಲ ಕಮ್ಯೂನಿಸಂನ ವಿಸ್ತರಣಾ ಮನೋಭಾವವನ್ನು ತಡೆ ಹಿಡಿದಿಟ್ಟಿರಲು ಮಾತ್ರ. ಆದರೆ, ಕಮ್ಯೂನಿಸ್ಟ್ ಅಲ್ಲದ ದೇಶವಾದ ಭಾರತವು ಕಮ್ಯೂನಿಸ್ಟ್ ಅಧಿಕಾರದ ಕುತಂತ್ರಗಳಿಗೆ ಬಲಿಯಾಗಿ ಬಿದ್ದಾಗ, ಪಾಕಿಸ್ತಾನವು ಕೇವಲ ಜಡ ಪ್ರೇಕ್ಷಕನಾಗಿ ಉಳಿದುದುದು ಮಾತ್ರವಲ್ಲ, ಆದರೆ ಭಾರತದ ವಿಪತ್ತಿನ ಪರಿಸ್ಥಿತಿಯನ್ನು ತನ್ನ ಸದವಕಾಶವೆಂದು ಪರಿಗಣಿಸಿತು. ಪಾಕಿಸ್ತಾನವು ಮೂರ್ಖ, ಕೃತಘ್ನ ಮತ್ತು ನಂಬಿಕೆಗೆ ಅನರ್ಹವೆಂದು ಬಹಳ ಜನ ಅಭಿಪ್ರಾಯಪಟ್ಟರು.

ಆದರೆ, ಈ ಭಾವನೆಯಲ್ಲಿ ಆಡಳಿತವು ಸಹಮತ ಹೊಂದಿಲ್ಲ. ರಾಜ್ಯ ಇಲಾಖೆಯು ಪಾಕಿಸ್ತಾನವನ್ನು ಮಿತ್ರರಾಷ್ಟ್ರವೆಂದೇ ಭಾವಿಸುವುದನ್ನು ಮುಂದುವರೆಸುತ್ತದೆ ಮತ್ತು ಚೀನಾದೊಡನೆ ಪಾಕಿಸ್ತಾನದ ಪೂರ್ವಭಾವಿ ಮಾತುಕತೆಗಳಿಗಾಗಲೀ ಅಥವಾ ತನ್ನ ಭೂಪ್ರದೇಶವನ್ನು ಚೀನಾಕ್ಕೆ ಒಪ್ಪಿಸಿದುದರಿಂದಾಗಲೀ ರಾಜ್ಯದ ಇಲಾಖೆಯು ವಿಚಲಿತಗೊಳ್ಳುವುದಿಲ್ಲ.

ವಾಷಿಂಗ್‌ಟನ್‌ನ ನೀತಿನಿರ್ಮಾಪಕರು, ಭಾರತವು ಕಮ್ಯೂನಿಸ್ಟ್ ಚೀನಾದೊಡನೆ ಕಠಿಣ ನೀತಿಯನ್ನು ಅನುಸರಿಸಬೇಕೆಂದು ಬಯಸುತ್ತಾರೆ. ಆದರೆ ಅದೇ ಸಮಯದಲ್ಲಿ ಪಾಕಿಸ್ತಾನದೊಡನೆ ಮೃದುನೀತಿಯನ್ನು ಅನುಸರಿಸಬೇಕೆಂದೂ ಅವರು ಬಯಸುತ್ತಾರೆ. ಮತ್ತೊಂದೆಡೆ, ಅವರು ಪಾಕಿಸ್ತಾನವು ಚೀನಾದೊಡನೆ ಮೃದುನೀತಿಯನ್ನು ಅನುಸರಿಸಲೂ ಭಾರತದೊಡನೆ ಕಠಿಣ ನೀತಿಯನ್ನು ಅನುಸರಿಸಲೂ ಅನುಮತಿಸಬಲ್ಲವರಾಗುತ್ತಾರೆ. ಇಲ್ಲಿ ಸ್ಪಷ್ಟವಾದ ವಿರೋಧಾಭಾಸವಿದೆ,

ಆದರೆ ಅದು ಅವರಿಗೆ ಚೆನ್ನಾಗಿ ಒಪ್ಪುತ್ತದೆ. ಈವರೆಗೂ ಚೀನಾಕ್ಕೆ ಸಂಬಂಧಿಸಿದಂತೆ, ಪಾಶ್ಚಿಮಾತ್ಯ ಶಕ್ತಿ ಬಣಗಳು, ಈ ವರ್ಷಗಳಲ್ಲೆಲ್ಲಾ ಭಾರತವು ವಹಿಸಿದ್ದ ಪಾತ್ರವನ್ನೇ ವಹಿಸುತ್ತಿವೆ. ಒಂದೇ ಒಂದು ವ್ಯತ್ಯಾಸವೆಂದರೆ, ಭಾರತವು ಸರಳವಾಗಿ, ಹೆಚ್ಚು ಕಡಿಮೆ ಮೂರ್ಖತನದಿಂದ ಎಂಬಂತೆ ವರ್ತಿಸಿತು. ಭಾರತದ ಚೀನಾ ನೀತಿಯು ಪಾಶ್ಚಿಮಾತ್ಯ ಒಕ್ಕೂಟಕ್ಕೆ ಸೇರಿದ್ದ ಹಿರಿಯ ಪಾಲುಗಾರರ ಹಾರೈಕೆಗಳನ್ನು ಪಡೆದಿತ್ತು. ಅನೇಕ ವಿಷಯಗಳಲ್ಲಿ ಭಾರತವು ಯುನೈಟೆಡ್ ಕಿಂಗ್‌ಡಮ್ಸ್ ಅನ್ನು ಅನುಸರಿಸಿತು ಅಥವಾ ಯ.ಕೆ.ಯನ್ನು ಸೇರಿಕೊಂಡಿತು. ಹೇಗೇ ಆದರೂ ನಾವು ನಮ್ಮ ಪಾತ್ರವನ್ನು ಮಿತಿಮೀರಿ ನಿರ್ವಹಿಸಿದೆವು. ಆದ್ದರಿಂದ ಕಷ್ಟಗಳನ್ನು ಅನುಭವಿಸಿದೆವು. ಈಗ ಭಾರತ ಮತ್ತು ಚೀನಾಗಳ ನಡುವಿನ ಬಾಂಧವ್ಯವು ಹದಗೆಟ್ಟಿರುವುದರಿಂದ ಆ ಪಾತ್ರವನ್ನು ನಿರ್ವಹಿಸಲು ಪಾಕಿಸ್ತಾನವನ್ನು ಆರಿಸಿಕೊಳ್ಳಲಾಗಿದೆ. ಪಶ್ಚಿಮ ರಾಷ್ಟ್ರಗಳಿಗೆ ಪಾಕಿಸ್ತಾನದೊಡನೆ ಮತ್ತೊಂದು ಪ್ರಯೋಜನವೂ ಸೇರಿದೆ–ಪಾಕಿಸ್ತಾನವು ಯಾವಾಗಲೂ ಅವುಗಳಿಂದ ತನ್ನ ಸೂಚನೆ, ಸಂಕೇತಗಳನ್ನು ಪಡೆಯಬಹುದು. ಭಾರತವು ಅನೇಕ ಸಂದರ್ಭಗಳಲ್ಲಿ ಸ್ವತಂತ್ರ ನೀತಿಯನ್ನು ಅನುಸರಿಸಿತು ಮತ್ತು ಕೆಲವು ಸಮಯದಲ್ಲಿ ಅಸಮಾಧಾನ, ಕಿರಿಕಿರಿ, ಮುಜುಗರಗಳನ್ನು ಉಂಟು ಮಾಡಿತು.

ಯುನೈಟೆಡ್ ಸ್ಟೇಟ್ಸ್‌ನ ಜನತೆ ಹಾಗೂ ಸರ್ಕಾರ ಎರಡೂ ಭಾರತ–ಪಾಕಿಸ್ತಾನಗಳ ಸ್ನೇಹಸೌಹಾರ್ದಗಳ ಬಗೆಗೆ ಆಸಕ್ತವಾಗಿವೆ. ಆದರೆ ಅವರು ಭಾರತದ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ವಿಫಲರಾಗಿದ್ದಾರೆ. ಇನ್ನು ಮೆಚ್ಚುವುದಂತ ತೀರಾ ಕಡಿಮೆಯೇ. ಕೇವಲ ಸಾಮಾನ್ಯ ಮನುಷ್ಯ ಮಾತ್ರವಲ್ಲದೇ, ಉನ್ನತ ಶಿಕ್ಷಣ ಪಡೆದಿರುವ ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳು ಕೂಡ, ಭಾರತೀಯ ಜೀವನದ ವಾಸ್ತವತೆಗಳ ಬಗೆಗೆ ಅಗಾಧ ಅಜ್ಞಾನವನ್ನು ಪ್ರಕಟಿಸುತ್ತಾರೆ. ಭಾರತದ ವಿಭಜನೆಯು ಹಿಂದೂ–ಮುಸ್ಲಿಂ ಆಧಾರದ ಮೇಲೆ ನಡೆಯಿತೆಂದೂ ಭಾರತದಲ್ಲಿ ಮುಸ್ಲಿಮರೇ ಇಲ್ಲವೆಂದೂ. ವ್ಯಾಪಕವಾದ ಭಾವನೆಯು ಅಲ್ಲಿದೆ. ಒಂದು ವಿಶ್ವವಿದ್ಯಾಲಯದಲ್ಲಿ, ವಿದೇಶೀ ವಿದ್ಯಾರ್ಥಿಗಳ ಡೀನ್ ಒಬ್ಬರೊಡನೆ ಮಾತನಾಡುತ್ತಾ ಬೇರೆ ಬೇರೆ ದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಡಲು ತೊಂದರೆಯಾಗುವುದೇ ಎಂದು ನಾನು ಅವರನ್ನು ಕೇಳಿದೆ. ಅರಬ್ ವಿದ್ಯಾರ್ಥಿಗಳು, ಇಸ್ರೇಲಿನಿಂದ ಬಂದಿದ್ದ ಯೆಹೂದೀ ವಿದ್ಯಾರ್ಥಿಗಳೊಡನೆ ವಾಸಿಸಲು ಇಷ್ಟಪಡುವುದಿಲ್ಲವೆಂದು ಅವರು ಹೇಳಿದರು. ನಾನು ಮತ್ತೆ ಕೇಳಿದೆ, 'ಭಾರತ ಮತ್ತು ಪಾಕಿಸ್ತಾನಗಳಿಂದ ಬಂದಿದ್ದ ವಿದ್ಯಾರ್ಥಿಗಳಿಂದಲೂ ಇಂತಹ ತೊಂದರೆ ಏನಾದರೂ ಬಂದಿತೇ' ಇಲ್ಲ ಎಂದು ಅವರು ಉತ್ತರಿಸಿದರು ಮತ್ತು ಈ ಎರಡೂ ದೇಶಗಳ ನಡುವೆ ಉಂಟಾಗಿರುವ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಭಾರತ ಮತ್ತು ಪಾಕಿಸ್ತಾನದ ವಿದ್ಯಾರ್ಥಿಗಳು ಸ್ನೇಹಭಾವನೆಯಲ್ಲಿಯೇ ಇರುವುದನ್ನು



ಮುಂದುವರೆಸುತ್ತಿರುವುದು ತಮಗೆ ಆಶ್ಚರ್ಯ ಉಂಟುಮಾಡಿದೆಯೆಂದರು.

ಈ ವಿಭಜನೆಯು ಒಂದು ಕೃತಕ ಆಧಾರದ ಪರಿಣಾಮಕ್ಕೆ ಬಂದಿದ್ದು ಎಂದೂ ಮತ್ತು ಇತಿಹಾಸದ ಉದ್ದಕ್ಕೂ ನಾವು ಒಂದೇ ಆಗಿದ್ದೇವೆಂದೂ ಮತ್ತು ಕೇವಲ ಒಂದು ರಾಜಕೀಯ ಗೆರೆಯು ಜನರನ್ನು ವಿಭಜಿಸಲಾರದು ಎಂದು ಹೇಳುವುದರ ಮೂಲಕ ನಾನು ಅವರಿಗೆ ಸಂಪೂರ್ಣವಾಗಿ ವಿಷಯವನ್ನು ವಿವರಿಸಲು ಪ್ರಯತ್ನಿಸಿದೆ. ಮುಂದುವರೆದು ನಾನು ಅವರಿಗೆ ಹೇಳಿದೆ, ಯಾರಾದರೂ ಅವರ ಬಳಿಗೆ ಬಂದರೆ ಅವರು ಹಿಂದುಗಳೋ ಮುಸ್ಲಿಮರೋ ಎಂದು ಗುರುತಿಸಲು ಸಾಧ್ಯವಿಲ್ಲ. ಅವರು ಹೇಳಿದರು ಯಾಕೆ? ಅದು ಬಹಳ ಸುಲಭ. ಅವರ ರಾಷ್ಟ್ರೀಯತೆಯನ್ನು ನಾನು ಅವರ ಹೆಸರುಗಳಿಂದ ತಿಳಿದುಕೊಳ್ಳಬಲ್ಲೆ. ನಾನು ಪ್ರಶ್ನಿಸಿದೆ 'ನೀವು ಹೇಗೆ ಅದನ್ನು ಮಾಡಲು ಸಾಧ್ಯ?' ಓಹ್, ಅದು ಬಹಳ ಸರಳ, ಅವನಿಗೆ ಮುಸ್ಲಿಂ ಹೆಸರಿದ್ದರೆ, ಅವನು ಪಾಕಿಸ್ತಾನಿ, ಇಲ್ಲದಿದ್ದರೆ ಅವನು ಭಾರತೀಯ. ಈ ಸರಳ ನಿಯಮವನ್ನು ಕೇಳಿ ನಾನು ಆಘಾತಗೊಂಡೆ–ಒಂದು ರೀತಿಯ thumb meshod (ಹೆಬ್ಬೆಟ್ಟಿನ ನಿಯಮ). ವಿಶ್ವವಿದ್ಯಾಲಯದಲ್ಲಿರುವ ಭಾರತೀಯ ವಿದ್ಯಾರ್ಥಿಗಳ ಪಟ್ಟಿಯನ್ನು ನನಗೆ ಕೊಡುವಂತೆ ಅವರಲ್ಲಿ ನಾನು ಮನವಿ ಮಾಡಿಕೊಂಡೆ. ಆ ಪಟ್ಟಿಯನ್ನು ಒದಗಿಸುವಂತೆ ಅವರು ಆದೇಶಿಸಿದರು. ಕೆಲವು 'ಪಾಕಿಸ್ತಾನಿ ಹೆಸರುಗಳು' ಅದರಲ್ಲಿ ಸೇರಿರುವಂತೆ ತೋರಿದ್ದರಿಂದ ಪಟ್ಟಿಯು ಸರಿಯಾಗಿದೆಯೇ ಎಂದು ನಾನು ಅವರನ್ನು ಕೇಳಿದೆ. ಪಟ್ಟಿಯ ಖಚಿತತೆಯ ಬಗೆಗೆ ಅವರು ದೃಢಪಡಿಸಿದರು. ನಂತರ ನಾನು ಅವರಿಗೆ ಪಟ್ಟಿಯಲ್ಲಿದ್ದ ಮುಸ್ಲಿಂ ಹೆಸರುಗಳನ್ನು ತೋರಿಸಿದೆ ಮತ್ತು ಕೇಳಿದೆ, 'ಅವರೆಲ್ಲರೂ ಮುಸ್ಲಿಮರೆಂದು ಹಾಗಿದ್ದರೂ ಅವರೆಲ್ಲರೂ ಭಾರತೀಯರ ಪಟ್ಟಿಯಲ್ಲಿ ಸೇರಿದ್ದಾರೆಂದು ನಿಮಗೆ ತಿಳಿದಿದೆಯೇ?' ಅವೆಲ್ಲವೂ ಮುಸ್ಲಿಮರ ಹೆಸರುಗಳು ಎಂದು ಅವರು ಒಪ್ಪಿಕೊಂಡರು. ಆದರೆ, ಆ ಹೆಸರುಗಳು ಭಾರತೀಯರ ಪಟ್ಟಿಯಲ್ಲಿ ಹೇಗೆ ಬಂದವು ಎಂಬುದನ್ನು ವಿವರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅವರು ಸಮಸ್ಯೆಗೊಳಗಾದಂತೆ ಹಾಗೂ ಕಂಗೆಟ್ಟಂತೆ ಕಂಡರು. ಪಟ್ಟಿಯಲ್ಲಿನ ಮುಸ್ಲಿಮರ ಹೆಸರುಗಳಲ್ಲಿ ಏನೂ ದೋಷವಿಲ್ಲವೆಂದೂ ಏಕೆಂದರೆ ಸುಮಾರು ೪೫ ಮಿಲಿಯನ್ ಮುಸ್ಲಿಮರು ಇನ್ನೂ ಭಾರತದಲ್ಲಿ ವಾಸಿಸುತ್ತಿದ್ದಾರೆಂದೂ ನಾನು ಹೇಳಿದ ಮೇಲೆ ಮಾತ್ರ, ಅವರು ತಮ್ಮ ಅಧಿಕೃತ ಪಟ್ಟಿಯ ಸಮರ್ಪಕತೆಯ ಬಗೆಗೆ ಮತ್ತೆ ಭರವಸೆ ತಳೆದರು. ಅವರಿಗೆ ಇದೊಂದು ರೀತಿಯ ಜ್ಞಾನೋದಯ, ಆಶ್ಚರ್ಯದ ಸಂಗತಿಯಾಗಿತ್ತು.

ಈ ಜ್ಞಾನಿ ಡೀನ್‌ರಷ್ಟು ಅಜ್ಞಾನಿಗಳಾಗಿಲ್ಲದವರೂ ಕೂಡ, ಭಾರತ ಮತ್ತು ಪಾಕಿಸ್ತಾನದ ಸಮಸ್ಯೆಗಳನ್ನು ಹಿಂದೂ–ಮುಸ್ಲಿಮ್ ಸಂಬಂಧಗಳ ನೆಲೆಯಿಂದಲೇ ನೋಡುತ್ತಾರೆ. 'ನ್ಯೂಯಾರ್ಕ್ ಟೈಮ್ಸ್'ನ ಅಂಕಣಕಾರ, ಹಿಂದೂ ಎಂಬ ಜಾತಿವಾಚಕ

ವಿರದೆ ಭಾರತದ ಬಗೆಗೆ ಬರೆಯುವುದಿಲ್ಲ. ಯಾವಾಗಲೂ ಅದು 'ಹಿಂದೂಭಾರತ' ಮತ್ತು 'ಮುಸ್ಲಿಮ್ ಪಾಕಿಸ್ತಾನ' ಎಂದೇ ಇರುತ್ತದೆ. ವಿಶೇಷವಾಗಿ ಕಾಶ್ಮೀರದ ಬಗೆಗೆ ಬರೆಯುವಾಗ. ಆ ಪತ್ರಿಕೆಯ ಸಂಪಾದಕೀಯ ಸಿಬ್ಬಂದಿಯ ಸದಸ್ಯರೊಬ್ಬರನ್ನು ಈ ಪದ್ಧತಿಯ ಬಗೆಗೆ ಕೇಳಿ, ಭಾರತವು ಜಾತ್ಯತೀತ ರಾಷ್ಟ್ರ ಹಾಗೂ ಭಾರತದಲ್ಲಿ ೪೫ ಮಿಲಿಯನ್ ಮುಸ್ಲಿಮರು ವಾಸಿಸುತ್ತಿದ್ದಾರೆಂಬುದು ಅವರಿಗೆ ತಿಳಿದಿದೆಯೇ ಎಂದೂ ಪ್ರಶ್ನಿಸಿದೆ. ಅವರು ಹೇಳಿದರು 'ಆದರೆ, ಅದರಲ್ಲೇನಿದೆ? ನೀವು ನಿರ್ದಿಷ್ಟವಾಗಿಯೂ (ಯಾರೂ ತಪ್ಪು ತಿಳಿಯದಂತೆ) ಒಂದು ಹಿಂದೂ ದೇಶ ಮತ್ತು ಪಾಕಿಸ್ತಾನವು ಮುಸ್ಲಿಮ್ ರಾಷ್ಟ್ರ.'

ಭಾರತದ ರಾಷ್ಟ್ರೀಯ ಕಾಂಗ್ರೆಸ್ ಯಾವಾಗಲೂ ತಾನು ಒಂದು ಹಿಂದೂ ಸಂಸ್ಥೆ ಎಂಬುದನ್ನು ನಿರಾಕರಿಸುವುದರಲ್ಲಿ ಪಟ್ಟುಹಿಡಿಯುತ್ತಿದ್ದುದನ್ನೂ, ಮತ್ತು ಮುಸ್ಲಿಮ್ ಲೀಗ್ ಕೇವಲ ಮುಸ್ಲಿಮರನ್ನು ಮಾತ್ರ ಪ್ರತಿನಿಧಿಸುತ್ತಿತ್ತೆಂಬುವ ಅಭಿಪ್ರಾಯಕ್ಕೆ ಸವಾಲು ಹಾಕುತ್ತಿದ್ದುದನ್ನೂ ನಾನು ನೆನಪು ಮಾಡಿಕೊಂಡೆ. ತನ್ನ ನಿರ್ಧಾರವನ್ನು ಬೆಂಬಲಿಸಲು ರಾಷ್ಟ್ರೀಯ ಕಾಂಗ್ರೆಸ್, ನ್ಯಾಯಯುಕ್ತವಾದ ಹಿಂದೂ ಆಸಕ್ತಿಗಳನ್ನು ಕಡೆಗಣಿಸಿ ಅಸಂಬದ್ಧವೆನಿಸುವ ಮಟ್ಟಕ್ಕೆ ಹೋಗಿ ಮುಸ್ಲಿಮರನ್ನು ಸಂತುಷ್ಟಿಗೊಳಿಸಿತು. ಆದರೆ, ಬ್ರಿಟಿಷರು ಮಾತ್ರ ಯಾವಾಗಲೂ ಕಾಂಗ್ರೆಸ್ ಅನ್ನು ಹಿಂದೂ ಸಂಸ್ಥೆ ಎಂದೂ, ಮುಸ್ಲಿಮ್ ಲೀಗನ್ನು ಮುಸ್ಲಿಮ್ ಸಂಸ್ಥೆಯೆಂದೇ ಪರಿಗಣಿಸಿದರು. ಈ ಹಳೆಯ ಇತಿಹಾಸವು ತನ್ನನ್ನು ತಾನೇ ಪುನರಾವರ್ತನೆಗೊಳಿಸಿಕೊಳ್ಳುವುದು ಮುಂದುವರೆಯುತ್ತಿದೆ. ತಾನು ಕೇವಲ ಹಿಂದೂ ಅಲ್ಲವೆಂದು ತೋರಿಸಿಕೊಳ್ಳಲು ಭಾರತವು ಏನೇ ಮಾಡಿದರೂ, ಪ್ರಪಂಚವು ಅದನ್ನು ನಂಬುವುದಿಲ್ಲ. ಪಾಕಿಸ್ತಾನವು ತಾನು ಮುಸ್ಲಿಮ್ ದೇಶವಲ್ಲವೆಂದರೂ ಪ್ರಪಂಚವು ಅದನ್ನು ಮುಸ್ಲಿಮರನ್ನು ಪ್ರತಿನಿಧಿಸುವ ರಾಜ್ಯವೆಂದೇ ಪ್ರಪಂಚವು ಪರಿಗಣಿಸುತ್ತದೆ. ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿದ್ದ ಶ್ರೀ ಛಗಲಾ ಅವರು ಮುಸ್ಲಿಮರು ಎಂದು ತಿಳಿಯದಿದ್ದ ಅನೇಕರು ಇದ್ದರು, ಮತ್ತು ಹಾಗೆ ಹೇಳಿದಾಗ ಅವರು ನಂಬಲಾರದವರಾಗುತ್ತಿದ್ದರು ಮತ್ತು ಅದನ್ನು ತಿಳಿದವರು, ಆ ಕಾರಣಕ್ಕಾಗಿ ಭಾರತವು ಹಿಂದೂ ಅಲ್ಲ ಎನ್ನುವುದನ್ನು ಒಪ್ಪಲು ಸಿದ್ಧರಿರುತ್ತಿರಲಿಲ್ಲ.

ಈ ವಿಷಯವನ್ನು ನಾನು ಮತ್ತೊಬ್ಬ ಪ್ರೊಫೆಸರ್‌ರೊಡನೆ ಚರ್ಚಿಸಿದಾಗ ಅವರು, ನನಗೆ ಹೇಳಿದರು– ಮತ್ತು ಅದು ನ್ಯಾಯವಾಗಿತ್ತೆಂದು ನಾನು ಭಾವಿಸುತ್ತೇನೆ– ಭಾರತದಲ್ಲಿ ಮುಸ್ಲಿಮರು ವಾಸಮಾಡಲು ಅನುಮತಿಸುವುದರಲ್ಲಾಗಲೀ ಅವರಲ್ಲಿನ ಸಮರ್ಥ ವ್ಯಕ್ತಿಗಳನ್ನು ವಿವಿಧ ಹುದ್ದೆಗಳಿಗೆ ಆಯ್ಕಾಮಾಡುವುದರಲ್ಲಾಗಲೀ ಯಾವುದೇ ತಪ್ಪು ಕೂಡ ಇಲ್ಲ. 'ವಿದೇಶೀ ರಾಷ್ಟ್ರೀಯರನ್ನು ನಿರ್ದಿಷ್ಟ ಹುದ್ದೆಗಳಿಗೆ ನಿಯಮಿಸಿಕೊಳ್ಳಬಹುದಾದರೆ, ನಿಮ್ಮವರೇ ಆದ ಪ್ರಜೆಗಳನ್ನು ಯಾಕೆ



ನಿಯೋಜಿಸಿಕೊಳ್ಳಬಾರದು' ಎಂದು ಅವರು ಕೇಳಿದರು. ಆದರೆ, ಅವರು ಹೇಳಿದರು. ಹಿಂದೂ ಭಾರತವನ್ನಲ್ಲದಿದ್ದರೆ ಛಾಗಲಾ ಏನನ್ನು ಪ್ರತಿನಿಧಿಸಿದರು? 'ಮುಂದುವರೆದು ಅವರು ಹೇಳಿದರು': ಲಾರ್ಡ್ ಮೌಂಟ್ ಬ್ಯಾಟನ್‌ರನ್ನು ಕೆಲವು ಸಮಯದವರೆಗೆ ನಿಮ್ಮ ಗವರ್ನರ್ ಜನರಲ್ಲರನ್ನಾಗಿ ಇಟ್ಟುಕೊಂಡಿದ್ದರಿಂದ ಭಾರತವು ಇಂಗ್ಲಿಷ್ ಜನರ ದೇಶವೇನೂ ಆಗಲಿಲ್ಲವಲ್ಲ. 'ಈ ಉದಾಹರಣೆಯು (ಸಾಮ್ಯವು) ಸರಿಯಾಗಿಲ್ಲವೆಂದು ನಾನು ಹೇಳಿದೆ. ಭಾರತದಲ್ಲಿನ ಮುಸ್ಲಿಮರು ಹೊರಗೆ ಬೆಳೆದವರಲ್ಲ. ಅವರು ಹೇಳಿದರು' ಹೌದು, ನಾನು ಒಪ್ಪುತ್ತೇನೆ, ಆದರೆ ಭಾರತ ಮತ್ತು ಪಾಕಿಸ್ತಾನಗಳು ಮತ್ತೆ ಒಂದಾಗುವತನಕವೂ, ಅವುಗಳು ಹಿಂದೂ ಮತ್ತು ಮುಸ್ಲಿಮ್ ರಾಷ್ಟ್ರಗಳಾಗಿಯೇ ಮುಂದುವರೆಯುತ್ತವೆ. 'ಅಖಂಡ ಭಾರತದ ಕಲ್ಪನೆಯನ್ನು ತಳ್ಳಿಹಾಕದಿದ್ದ ಒಬ್ಬ ವ್ಯಕ್ತಿಯನ್ನು ಭೇಟಿ ಮಾಡಲು ಸಾಧ್ಯವಾದದ್ದರಿಂದ ನಾನು ಸಂತುಷ್ಟನಾಗಿದ್ದೆ. ಅಖಂಡ ಭಾರತವನ್ನು ವಿರೋಧಿಸುವಾಗ ಕಾಂಗ್ರೆಸ್ ನಾಯಕರು, ಕಣ್ಣಿಗೆ ರಾಚುವಂತೆ ಕಾಣಿಸುತ್ತಿರುವ ಈ ಅಸಂಗತತೆಯನ್ನು ಕಾಣಲು ವಿಫಲರಾಗುವುದು ಆಶ್ಚರ್ಯಕರವಾಗಿದೆ. ವಿಭಜನೆ ಮತ್ತು ಜಾತ್ಯತೀತತೆಗಳು ಒಟ್ಟಾಗಿ ಸಾಗುವುದು ಸಾಧ್ಯವಿಲ್ಲ.

(೧೯೬೪ರ, ಮಾರ್ಚ್ ೩೦)

# ಪಾಕಿಸ್ತಾನಕ್ಕೆ ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ರಕ್ಷಣಾ ನೆರವು

ಪಾಕಿಸ್ತಾನದ ಅಧ್ಯಕ್ಷ ಜನರಲ್ ಅಯೂಬ್‌ಖಾನ್ ಅವರು ಅಮೆರಿಕಾ ಸಂಯುಕ್ತ ಸಂಸ್ಥಾನದೊಂದಿಗೆ ತಮ್ಮ ರಾಯಭಾರದಲ್ಲಿ ಯಶಸ್ವಿಯಾಗಿದ್ದಾರೋ ಇಲ್ಲವೋ ಎಂದು ಹೇಳುವುದು ಕಷ್ಟವಾಗುತ್ತದೆ. ಅದಾಗ್ಯೂ, ಪಾಕಿಸ್ತಾನದ ಆರಂಭದಿಂದಲೂ ಭಾರತದ ವಿರುದ್ಧ ಅದು ಇಂಬುಗೊಟ್ಟಿರುವ ತೀವ್ರ ವೈಷಮ್ಯವು ಸ್ವಲ್ಪವೂ ಕಡಿಮೆಯಾಗದೇ ಮುಂದುವರೆಯುತ್ತಿರುವುದು ಮಾತ್ರ ಸ್ಪಷ್ಟವಾಗಿದೆ. ಅಯೂಬ್‌ಖಾನ್‌ರ ಸಂಯುಕ್ತ ಸಂಸ್ಥಾನಗಳ ಪ್ರವಾಸದ ಒಂದು ಉದ್ದೇಶವು, ಭಾರತದ ವಿರುದ್ಧ ಅಪಪ್ರಚಾರದ ವಿಷವನ್ನು ಸುರಿಸುವುದಾಗಿತ್ತು ಮತ್ತು ಇದನ್ನು ಅವರು ಹೃದಯ ಸಂತೃಪ್ತಿಪಡುವಷ್ಟು ಮಾಡಿದ್ದಾರೆ. ಅಧ್ಯಕ್ಷ ಕೆನೆಡಿ ಮತ್ತು ಜನರಲ್ ಅಯೂಬ್ ಅವರ ಮಾತುಕತೆಯ ನಂತರ ಹೊರಬಿದ್ದ ಜಂಟಿ ಅಧಿಕೃತ ಪ್ರಕಟಣೆಯು, ಸಂಯುಕ್ತ ಸಂಸ್ಥಾನಗಳ ಸರ್ಕಾರ ಮತ್ತು ಜನರ ಮೇಲೆ ಅಪನಿಂದೆಯ ಪ್ರಚಾರವು ಉಂಟುಮಾಡಿರುವ ಮಹತ್ತರವಾದ ಪರಿಣಾಮದ ಪ್ರಮಾಣವನ್ನು ಒದಗಿಸುತ್ತದೆ. ನಿಸ್ಸಂಶಯವಾಗಿಯೂ ಅಯೂಬ್‌ಖಾನ್, ಸಂಯುಕ್ತ ಸಂಸ್ಥಾನಗಳೊಡನೆ ಇರುವ ತಮ್ಮ ಸಂಬಂಧಗಳನ್ನು ಸಂಯುಕ್ತ ಸಂಸ್ಥಾನಗಳು ಭಾರತದ ಬಗೆಗೆ ಹಗೆತನ ತಾಳುವಂತೆ ಮಾಡುವ, ಸನ್ನೆಗೋಲಾಗಿ ಬಳಸಲು ಬಯಸುತ್ತಾರೆ. ಅಧ್ಯಕ್ಷ ಕೆನೆಡಿಯವರು ಈ ವಿಷಯದಲ್ಲಿ ಅನುಗ್ರಹಿಸುವಂತೆ ಕಂಡುಬಂದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಕಾಶ್ಮೀರದ ವಿಷಯವೂ ಕೂಡ. ಕೆನೆಡಿಯವರು ಶೀಘ್ರವಾಗಿ ಶಾಂತಿಪೂರ್ಣ ಪರಿಹಾರದ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ. ಈಗಿನ ಪರಿಸ್ಥಿತಿಗಳಲ್ಲಿ ಭಾರತದ ವಿರುದ್ಧ ಏನಾದರೂ ಸಾಹಸಪೂರ್ಣ ದಂಡಯಾತ್ರೆಯನ್ನು ಕೈಗೊಳ್ಳಲು ಕಾಶ್ಮೀರದ ವಿಷಯವನ್ನು ಪಾಕಿಸ್ತಾನ ಒಂದು ನೆಪ ಮಾಡಿಕೊಳ್ಳುವುದನ್ನೂ ಸಂಯುಕ್ತ ಸಂಸ್ಥಾನಗಳು ಸಮ್ಮತಿಸಲಾರವು.

ಈ ಜಂಟಿ ಅಧಿಕೃತ ಪ್ರಕಟಣೆಯು ಒಳಗೊಂಡಿರುವ ರಕ್ಷಣಾ ನೆರವಿನ ಬಗೆಗೆ ಎರಡು ವಿಭಿನ್ನ ವ್ಯಾಖ್ಯಾನಗಳನ್ನು ಮಾಡಲಾಗುತ್ತಿದೆ. ನೆರವಿನ 'ವಿಸ್ತರಣೆ' ಎಂದರೆ ಸ್ವಲ್ಪ ಕಾಲಾವಧಿಯವರೆಗೆ ನೆರವಿನ ಮುಂದುವರಿಕೆ ಮಾತ್ರ, ಮತ್ತು ಇದು ವಾಸ್ತವವಾಗಿ ನೆರವಿನ 'ಪ್ರಮಾಣ ಗಾತ್ರ'ದ ವಿಸ್ತರಣೆಯನ್ನೂ ಒಳಗೊಳ್ಳಬಹುದು.



ಕೇವಲ ಮೊದಲನೆಯ ವಿಷಯವಷ್ಟೇ ಉದ್ದೇಶವಾದಲ್ಲಿ, ಸಂಯುಕ್ತ ಸಂಸ್ಥಾನಗಳು ಮತ್ತು ಪಾಕಿಸ್ತಾನದ ಒಪ್ಪಂದವು ಮುಂದುವರೆಯುತ್ತದೆ ಎಂದು ಮಾತ್ರ ಸರಳವಾದ ಅರ್ಥವಾಗುತ್ತದೆ. ಆದರೆ, ಈ ಪ್ರಕಟಣೆಯು, ಪಾಕಿಸ್ತಾನಕ್ಕೆ ಅಧಿಕ ರಕ್ಷಣಾ ನೆರವನ್ನು ನೀಡುವ ಅಂಶವನ್ನೇನಾದರೂ ಒಳಗೊಂಡಿದ್ದಲ್ಲಿ, ಖಂಡಿತವಾಗಿಯೂ, ಭಾರತ ಕಳವಳಪಡಲು ಕಾರಣವಿದೆ. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಈಗ ಪ್ರಸಕ್ತ ಸಮಯದಲ್ಲಿ ಅತ್ಯಂತ ಸ್ಪಷ್ಟವಾಗಿ ಶಕ್ತಿಯ ಅಸಮತೋಲನವಿದೆಯೆಂದು ತೋರಿಸಲು ಜನರಲ್ ಅಯೂಬ್‌ಖಾನ್ ಅಮೆರಿಕದಲ್ಲಿ ಪ್ರಯತ್ನಿಸಿದ್ದಾರೆ. ಅಲ್ಲದೇ, ಪಾಕಿಸ್ತಾನದ ರಕ್ಷಣಾ ಬಲವನ್ನು ಭಾರತದ ರಕ್ಷಣಾ ಬಲದ ಮಟ್ಟಕ್ಕಿಂತಲೂ ಹೆಚ್ಚಿಗೆಯಲ್ಲದಿದ್ದರೂ ಆ ಬಲದ ಸಮಸಮಕ್ಕಾದರೂ ತರದಿದ್ದಲ್ಲಿ, ಪಾಕಿಸ್ತಾನದ ಜೀವವು ಯಾವಾಗಲೂ ಗಂಡಾಂತರದಲ್ಲಿಯೇ ಇರುತ್ತದೆ. ಭಾರತದ ವಿರುದ್ಧವಾಗಿ ಜೆಹಾದ್ ಉನ್ಮಾದವನ್ನು ಸತತವಾಗಿ ಬೆಳೆಸುತ್ತಿರುವ ಮತ್ತು ನಮ್ಮ ದೇಶದಲ್ಲಿ ಸಾಕ್ಷಾತ್ತಾದ (ವಾಸ್ತವವಾದ) ಗೂಢಚಾರರ ಸೈನ್ಯವನ್ನೇ ನಡೆಸುತ್ತಿರುವ (fifth columnist) ಮತ್ತು ಅವರ ಮೂಲಕ ಭಾರತದ ಭದ್ರತೆ ಮತ್ತು ಶಾಂತಿಗಳನ್ನು ದುರ್ಬಲಗೊಳಿಸಲು ಸತತವಾಗಿ ಕಠಿಣ ಕ್ರಮತೆಗೆದುಕೊಂಡು ಪ್ರಯತ್ನಿಸುತ್ತಿರುವ ಸರ್ಕಾರವು, ತನ್ನ ಅಸ್ತಿತ್ವವು ಅಪಾಯದಲ್ಲಿದೆಯೆಂದು ಈ ರೀತಿ ಹುಯಿಲೆಬ್ಬಿಸುವುದು, ಪಾಕಿಸ್ತಾನದ ಆಡಳಿತಗಾರರು ಕೇವಲ ಭಾರತ ವಿರೋಧಿಗಳು ಮಾತ್ರವಲ್ಲ, ಅವರು ಮೋಸಗಾರರು ಕೂಡ ಎಂಬುದನ್ನು ತೋರಿಸುತ್ತದೆ.

ಭಾರತ ಏನಾದರೂ ಪಾಕಿಸ್ತಾನದ ಅಸ್ತಿತ್ವವನ್ನು ಅಳಿಸಿಹಾಕಿಬಿಡಬೇಕು ಎಂದು ಬಯಸಿದ್ದಿದ್ದರೆ, ೧೯೪೭ರಿಂದಲೂ ಅದು ಸುಲಭವಾಗಿ ಹಾಗೆ ಮಾಡಬಹುದಾಗಿದ್ದ ಹಲವು ಸಂದರ್ಭಗಳು ಇಲ್ಲದಿರಲಿಲ್ಲ. ಆದರೆ ಭಾರತದ ಆಡಳಿತಗಾರರು, ಅಂತಹ ಪ್ರತಿಯೊಂದು ಸಂದರ್ಭದಲ್ಲಿಯೂ, ಸಾತ್ವಿಕ ಕ್ರೋಧದ ಸಾರ್ವತ್ರಿಕ ಅಭಿಪ್ರಾಯದೊಡನೆ ದುರಹಂಕಾರದಿಂದ ನಡೆದುಕೊಂಡಿದ್ದಾರೆ ಮತ್ತು ಪಾಕಿಸ್ತಾನವನ್ನು ಸಂತೃಪ್ತಿಪಡಿಸಲು ರಿಯಾಯಿತಿಗಳ ನಂತರ ರಿಯಾಯಿತಿಗಳನ್ನು ನೀಡುತ್ತಿದ್ದಾರೆ. ಹೀಗಿದ್ದರೂ ಪಾಕಿಸ್ತಾನವು ನಿಜವಾಗಿಯೂ ತನ್ನ ಅಸ್ತಿತ್ವದ ಬಗೆಗೆ ಹೆದರಿದೆಯೆಂದರೆ ತನ್ನ ಪಾಪಗಳಿಂದಾಗಿಯೇ ಅದು ಅಷ್ಟು ಭಯವಿಹ್ವಲಗೊಂಡಿರಬೇಕು.

ಸಂಯುಕ್ತ ಸಂಸ್ಥಾನಗಳ ಜನರ ಕಮ್ಯೂನಿಸ್ಟ್ ವಿರೋಧಿ ಭಾವನೆಯನ್ನು ಲಾಭಕರವಾಗಿ ಉಪಯೋಗಿಸಿಕೊಳ್ಳುವ ಪ್ರಯತ್ನದಲ್ಲಿ ಪಾಕಿಸ್ತಾನದ ಅಧ್ಯಕ್ಷರು, ಚೀನಾದ ಗಡಿಯಲ್ಲಿ ಭಾರತೀಯ ಸೈನ್ಯಗಳ ಸಣ್ಣತುಕಡಿಯೊಂದನ್ನು ಇಡಲಾಗಿದೆ ಎಂದು ಸಂಯುಕ್ತ ಸಂಸ್ಥಾನಗಳ ಜನರಿಗೆ ಹೇಳುತ್ತಿದ್ದಾರೆ. ಅದರಲ್ಲಿ ಸತ್ಯವೂ ಇರಬಹುದು. ಆದರೆ, ಈ ಕ್ರಮಕ್ಕೆ ಸ್ವತಃ ಪಾಕಿಸ್ತಾನದ ವರ್ತನೆಯೇ ಕಾರಣ ಎನ್ನುವುದನ್ನು ಪಾಕ್‌ನ ಜನರಲ್ ಅಲಕ್ಷಿಸಬಲ್ಲರೇ? ನಾವು ಚೀನಾದ ಆಕ್ರಮಣವನ್ನು

ತಡೆಯಲು ಬಯಸುತ್ತೇವೆ, ಆದರೆ, ಪಾಕಿಸ್ತಾನದ ಕುತಂತ್ರಗಳಿಗೆ ನಮ್ಮ ಕಣ್ಣುಗಳನ್ನು ಮುಚ್ಚಿಕೊಂಡಲ್ಲ. ಪಾಕಿಸ್ತಾನದ ಉದ್ದೇಶಗಳು ಶಾಂತಿಯುತವಾಗಿದ್ದಿದ್ದರೆ, ಚೀನಾದೊಡನೆ ಹೋರಾಡಲು ಭಾರತವು ತನ್ನ ಸಂಪೂರ್ಣ ಸಾಮರ್ಥ್ಯವನ್ನು ಕೇಂದ್ರೀಕರಿಸಲು ಸಮರ್ಥವಾಗಬಹುದಾಗಿತ್ತು. ಆದರೆ, ಈಗ ಇರುವಂತೆ, ನಾವು ಎರಡು ರಂಗಗಳಲ್ಲಿ ಹೋರಾಡಬೇಕಾಗಿದೆ.

ವಾಸ್ತವವಾಗಿ, ಸಂಯುಕ್ತ ಸಂಸ್ಥಾನಗಳು ಪಾಕಿಸ್ತಾನದೊಡನೆ, ರಕ್ಷಣಾ ಒಪ್ಪಂದ ಮಾಡಿಕೊಂಡಿರುವುದರಿಂದಾಗಿ, ಕಮ್ಯೂನಿಸ್ಟ್‌ರೊಡನೆ ಹೋರಾಡಲು ಅದು ಭಾರತದ ಕೈಗಳನ್ನು ದುರ್ಬಲಗೊಳಿಸಿದೆ. ಈಗ, ಪಾಕಿಸ್ತಾನಕ್ಕೆ ರಕ್ಷಣಾ ನೆರವು ಹರಿದು ಬಂದಲ್ಲಿ. ಭಾರತವು ತನ್ನ ಹೆಚ್ಚಿನ ಗಮನವನ್ನು ಪಾಕಿಸ್ತಾನದ ಗಡಿಗೆ ಮೀಸಲಿಡಬೇಕಾಗುವಂತಹ ಅನಿವಾರ್ಯ ಪರಿಣಾಮವುಂಟಾಗುತ್ತದೆ. ತಾನು ಏನನ್ನು ಬಯಸುತ್ತೇವೆ ಎನ್ನುವುದನ್ನು ಸಂಯುಕ್ತ ಸಂಸ್ಥಾನಗಳು ನಿರ್ಧರಿಸಬೇಕು– ಅದು ಅಲಿಪ್ತ ಸ್ವತಂತ್ರ ಭಾರತವನ್ನು, ಪಾಕಿಸ್ತಾನದ ಕಡೆಯ ಅಪಾಯದಿಂದ ಮುಕ್ತವಾಗಿಟ್ಟು, ಭಾರತವು ತನ್ನ ಎಲ್ಲ ಸಾಮರ್ಥ್ಯವನ್ನು ಕೆಂಪು ಅಪಾಯದ ವಿರುದ್ಧ ಉಪಯೋಗಿಸಲು ನೆರವಾಗುವುದೇ ಅಥವಾ ಅದು ಭಾರತವು ತನ್ನ ಗಮನವನು ಹಲವು ರಂಗಗಳಲ್ಲಿ ಹರಿಸುವುದನ್ನು ಬಯಸುವುದೇ? 'ಮುಕ್ತ ಪ್ರಪಂಚಕ್ಕೆ' ಯಾರು ಹೆಚ್ಚು ಪ್ರಯೋಜನಕಾರಿಗಳೆಂದು ಸಾಬೀತಾಗುತ್ತದೆ, ಪ್ರಜಾಪ್ರಭುತ್ವದ ವಿನಾಶದ ಮೇಲೆ ಸ್ಥಾಪಿಸಲ್ಪಟ್ಟಿರುವ ಮಿಲಿಟರಿ ಸರ್ವಾಧಿಕಾರದ ಪಾಕಿಸ್ತಾನವೋ ಅಥವಾ ಪ್ರಜಾಪ್ರಭುತ್ವದ ಆಧಾರದ ಮೇಲೆ ಸ್ಥಾಪಿಸಲ್ಪಟ್ಟಿರುವ ಭಾರತವೋ? ಇಂದು ಭಾರತದ ಸೈನ್ಯಗಳು ಎರಡು ಮುಖ್ಯ ಯುದ್ಧರಂಗಗಳಲ್ಲಿ ವಿಭಜಿತಗೊಂಡಿವೆ, ಆದರೆ ಪಾಕಿಸ್ತಾನದ ಸೈನ್ಯಗಳೆಲ್ಲಾ ಭಾರತ ಅಥವಾ ಆಫ್‌ಘನ್ ಗಡಿಗಳಲ್ಲಿ ಜಮಾಯಿಸಿವೆ. ಪಾಕಿಸ್ತಾನವು ಎಲ್ಲಿ ಮತ್ತು ಹೇಗೆ ಕಮ್ಯೂನಿಸ್ಟ್‌ರೊಡನೆ ಹೋರಾಡುತ್ತಿದೆ?

ವಾಸ್ತವವೆಂದರೆ, ಸಂಯುಕ್ತ ಸಂಸ್ಥಾನಗಳು ಪಾಕಿಸ್ತಾನಕ್ಕೆ ಅನುಗ್ರಹಿಸಿರುವ ರಕ್ಷಣಾ ನೆರವಿನ ನಿಯುಮದ ಉದ್ದೇಶವು ಕಮ್ಯೂನಿಸ್ಟ್ ಶಕ್ತಿಗಳನ್ನು ನಿಯಂತ್ರಣದಲ್ಲಿಡುವುದಾಗಿದೆ. ಕೇವಲ ಈ ಉದ್ದೇಶವು ಮಾತ್ರವೇ ಅಂತಹ ನೆರವನ್ನು ಮಂಜೂರು ಮಾಡುತ್ತದೆ. ಇಲ್ಲಿಯವರೆಗೂ ಪಾಕಿಸ್ತಾನದ ವಿಷಯದಲ್ಲಿ ಅಂತಹ ಷರತ್ತನ್ನು ಸಂಪೂರ್ಣವಾಗಿ ಗಣನೆಗೆ ತಂದುಕೊಳ್ಳಲಾಗಿಲ್ಲ ಮತ್ತು ರಕ್ಷಣಾ ನೆರವಿನ ಪ್ರಮಾಣವನ್ನು ಸಂಯುಕ್ತ ಸಂಸ್ಥಾನಗಳು ಮತ್ತಷ್ಟು ಹೆಚ್ಚಿಸಿದರೆ, ಅದು ತನ್ನ ನಿಯಮಕ್ಕೆ ತಾನೇ ವಿರೋಧಿಸದಂತಾಗುತ್ತದೆ.

ಪಾಕಿಸ್ತಾನ ಮತ್ತು ಸಂಯುಕ್ತ ಸಂಸ್ಥಾನಗಳ ನಡುವಿನ ರಕ್ಷಣಾ ಒಪ್ಪಂದವು ಭಾರತದ ರಾಷ್ಟ್ರೀಯ ಭಾವನೆಯನ್ನು ಬಹಳ ತೀವ್ರವಾಗಿ ಗಾಸಿಗೊಳಿಸಿತ್ತು ಮತ್ತು ಅದರ ಪರಿಣಾಮವಾಗಿ ಭಾರತ ಮತ್ತು ಸಂಯುಕ್ತ ಸಂಸ್ಥಾನಗಳ ಬಾಂಧವ್ಯದಲ್ಲಿ



ಕಟುವಾದ ವೈಮನಸ್ಯವು ತಲೆದೋರಿತು. ಕಾಲಕ್ರಮೇಣ ಹಾಗೂ ಭಾರತದ ಅಲಿಪ್ತ ನೀತಿಯ ಬಗೆಗೆ ಬೆಳೆಯುತ್ತಿರುವ ಮೆಚ್ಚಿಗೆಯನ್ನು ಸಂಯುಕ್ತ ಸಂಸ್ಥಾನಗಳು ಪ್ರಕಟಿಸಿದ ನಂತರ ಈ ಎರಡೂ ರಾಷ್ಟ್ರಗಳ ಜನರ ನಡುವೆ ಬಿಕ್ಕಟ್ಟು ಸಡಿಲಗೊಂಡಿದೆ. ಅಮೆರಿಕವೇನಾದರೂ ತನ್ನ ಮುಂಚಿನ ಅವಿವೇಕ, ಪ್ರಮಾದಗಳನ್ನು ಪುನರಾವರ್ತಿಸಿದರೆ ನಿಶ್ಚಯವಾಗಿಯೂ ಅಮೇರಿಕ ವಿರೋಧಿ ಭಾವನೆಗಳ ಹೊಸ ದಾಳಿಯು ಉಂಟಾಗುವುದು. ಇಲ್ಲಿರುವ ಕಮ್ಯೂನಿಸ್ಟರು ಚೀನಾ ಮತ್ತು ರಷ್ಯಾಗಳ ಪ್ರಯೋಜನಕ್ಕಾಗಿ, ಅಂತಹ ಅವಕಾಶವನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳುವುದರಲ್ಲಿ ಖಂಡಿತ ವಿಫಲರಾಗುವುದಿಲ್ಲ. ಕಮ್ಯೂನಿಸ್ಟ್ ದೇಶಗಳೊಡನೆ ಭಾರತದ ಬಾಂಧವ್ಯಗಳಿಂದಾಗಿ, ಕಮ್ಯೂನಿಸ್ಟರು 'ದಿ ರೈಡ್' ಈಗಾಗಲೇ ರಾಜಕೀಯದ ಫಸಲನ್ನು ಕೊಯ್ಯುತ್ತಿದ್ದಾರೆ. ಸಂಯುಕ್ತ ಸಂಸ್ಥಾನಗಳಿಗೆ ಹೋಗುವಾಗ, ಮಾರ್ಗದಲ್ಲಿ ರಷ್ಯಕ್ಕೆ ಭೇಟಿ ಕೊಡಲು ಪ್ರಧಾನಮಂತ್ರಿಗಳು ಆಲೋಚಿಸುತ್ತಿದ್ದಾರೆ. ಕಮ್ಯೂನಿಸ್ಟರ ಬೆಳವಣಿಗೆಯನ್ನು ಭಾರತದಲ್ಲಿ ಪರಿಣಾಮಕಾರಿಯಾಗಿ ತಡೆಯಬೇಕೆಂದು ಸಂಯುಕ್ತ ಸಂಸ್ಥಾನಗಳು ಬಯಸುವುದಾದರೆ, ಅದು ಭಾರತದ ರಾಷ್ಟ್ರೀಯ ಭಾವನೆಯನ್ನು ಅರ್ಥಮಾಡಿಕೊಳ್ಳಬೇಕು. ಪಾಕಿಸ್ತಾನವು ತನ್ನ ಆತ್ಮಾಭಿಮಾನ, ಆತ್ಮಗೌರವಗಳನ್ನು ಅದುಮಿಟ್ಟು ಬೇರೆ ದೇಶದ ಮಿಲಿಟರಿ ಶಿಬಿರದಲ್ಲಿ ಕೆಲಸಗಾರನಾಗಿರಬಲ್ಲದು, ಆದರೆ ಆತ್ಮಗೌರವ, ಆತ್ಮಾಭಿಮಾನಗಳುಳ್ಳ, ಹೆಮ್ಮೆಯ ಭಾರತವು ಎಂದೂ ಹಾಗೆ ಮಾಡಲಾರದು. ಆದ್ದರಿಂದ ಕಮ್ಯೂನಿಸಂಗೆ ಎದುರಾಗಿ ಹೋರಾಡುತ್ತಿರುವಾಗ ಸಂಯುಕ್ತ ಸಂಸ್ಥಾನಗಳು ಭಾರತದ ಸ್ವಾತಂತ್ರ್ಯ ಮತ್ತು ಆತ್ಮಗೌರವಗಳನ್ನು ಗೌರವಿಸಬೇಕು.

(೧೯೬೧ರ ಜುಲೈ ೨೪)

# ಕಾಶ್ಮೀರದ ಬಗೆಗೆ ರಾಜಿ ಮಾಡಿಕೊಳ್ಳಲು ನಮಗೆ ಶಕ್ಯವೇ?

ಪ್ರಧಾನ ಮಂತ್ರಿಗಳು ಈ ತಿಂಗಳ ೧೯ನೆಯ ದಿನಾಂಕದಂದು ಪಾಕಿಸ್ತಾನಕ್ಕೆ ಹೋಗುತ್ತಿದ್ದಾರೆ. ಲೋಕಸಭೆಯಲ್ಲಿನ ಅವರ ಹೇಳಿಕೆಯ ಪ್ರಕಾರ, ಈ ಭೇಟಿಯ ಘೋಷಿತ ಉದ್ದೇಶ, ಕಾಲುವೆ ನೀರಿನ ಒಪ್ಪಂದಕ್ಕೆ ಸಹಿ ಹಾಕುವುದು. ಆದರೆ ಒಂದು ದಾಖಲೆಯ ಪತ್ರಕ್ಕೆ ಸಹಿಮಾಡಲು ಐದು ದಿನಗಳು ಬೇಕಾಗುವುದಿಲ್ಲ. ನಿಸ್ಸಂದೇಹವಾಗಿಯೂ ಈ ಸಮಯವನ್ನು ಭಾರತ ಮತ್ತು ಪಾಕಿಸ್ತಾನಗಳ ನಡುವೆ ಇತ್ಯರ್ಥವಾಗದೇ ಉಳಿದಿರುವ ಇತರ ಸಮಸ್ಯೆಗಳ ಬಗೆಗೆ ಚರ್ಚಿಸಲು ಉಪಯೋಗಿಸಬಹುದು. ಆದಾಗ್ಯೂ, ಯಾವುದೇ ನಿರ್ದಿಷ್ಟ ಕಾರ್ಯಕ್ರಮಗಳ ಪಟ್ಟಿಯನ್ನೂ ಗೊತ್ತುಪಡಿಸಿಲ್ಲ. ಎರಡು ರಾಷ್ಟ್ರಗಳ ನಡುವೆ ಬಹುತೇಕ ವಿಷಯಗಳ ನಡುವೆ ದೃಷ್ಟಿಕೋನಗಳಲ್ಲಿ ಮೂಲಭೂತ ವ್ಯತ್ಯಾಸಗಳಿರುವಾಗ, ನಿರ್ದಿಷ್ಟ ಕಾರ್ಯಕ್ರಮಗಳ ಪಟ್ಟಿಗಾಗಿ ಒತ್ತಾಯಮಾಡದೇ ಇರುವುದರ ಅಪೇಕ್ಷಣೀಯತೆಯನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಮಾತುಕತೆಗಳ ಅನಿರ್ದಿಷ್ಟ ಮತ್ತು ಸ್ಥೂಲ (ಸಾಧಾರಣ) ಸ್ವರೂಪವು, ಅದರ ಉದ್ದೇಶ ಹಾಗೂ ಚರ್ಚಿಸಲ್ಪಡುವ ವಿಷಯಗಳ ಮೇಲೆ ವ್ಯಾಪಕವಾದ ಊಹಾಪೋಹಗಳಿಗೆ ಎಡೆಮಾಡಿದೆ. ಹೊಸದಿಲ್ಲಿಯು ಹೆಚ್ಚು ಮಾತಾಡದೆ ಬಹುತೇಕ ಮೌನವಾಗಿದ್ದರೆ ಕರಾಚಿಯು ಸಾಕಷ್ಟು ಮಾತನಾಡುತ್ತಿದೆ. ಕರಾಚಿ ಮತ್ತು ರಾವಲ್ಪಿಂಡಿಗಳಿಂದ ನಂಬಲರ್ಹವಾದ ಮೂಲಗಳನ್ನು ಆಧರಿಸಿ ಹೊರಬರುತ್ತಿರುವ ಸುದ್ದಿಯ ಅಂಶಗಳು, ಇಬ್ಬರು ನಾಯಕರೂ ಪ್ರಾಯಶಃ ಕಾಶ್ಮೀರದ ಬಗೆಗೆ ಚರ್ಚಿಸುವರೆಂದು ಪ್ರಪಂಚಕ್ಕೆ ತಿಳಿಯಪಡಿಸುತ್ತಿವೆ. ಪಾಕಿಸ್ತಾನದಲ್ಲಿ ವಾರ್ತಾ ನಿಯಂತ್ರಣವಿರುವುದರಿಂದ ಈ ವರದಿಗಳನ್ನು ನಾವು ಕೇವಲ ಸರ್ಕಾರಿ ಮಾಹಿತಿಗಳು ಎಂದು ಮಾತ್ರ ಭಾವಿಸಬಹುದು. ಮಾತುಕತೆಗಳ ವ್ಯಾಪ್ತಿಯು ಬಹಳ ವಿಸ್ತಾರವಾಗಿದ್ದು ಅದು ಭಾರತ-ಪಾಕಿಸ್ತಾನ ವಾಣಿಜ್ಯದಿಂದ, ಜಂಟಿ ರಕ್ಷಣೆಯವರೆಗೂ ಎಲ್ಲ ರೀತಿಯ ವಿಷಯಗಳನ್ನೂ ಒಳಗೊಂಡಿರುತ್ತದೆಂದು ಈ ವರದಿಗಳಿಂದ ಕಂಡುಬರುತ್ತದೆ.

ಇತ್ಯರ್ಥವಾಗದಿರುವ ಮತ್ತು ಸಾಧ್ಯವಾಗಬಹುದಾದ ಎಲ್ಲ ವಿಷಯಗಳು ಕೂಡ ಚರ್ಚಿಸಲ್ಪಡಬಹುದೆಂಬ ವಾಸ್ತವಾಂಶದ ಹೊರತಾಗಿಯೂ ಯಾವುದೇ ಬಹ್ವಂಶಗಳ ಸಮಗ್ರ ಕರಾರಿನ ಸಾಧ್ಯತೆ ಕಂಡುಬರುವುದಿಲ್ಲ. ಭಾರತ ಸರ್ಕಾರವಾಗಲೀ ಅಥವಾ ಪಾಕಿಸ್ಥಾನ ಸರ್ಕಾರವಾಗಲೀ ತಮ್ಮ ಜನರಿಗೆ ಅಂತಹದೊಂದು ಒಪ್ಪಂದವನ್ನು ನೀಡುವಂತಹ ಸ್ಥಿತಿಯಲ್ಲಿಲ್ಲ. ತಮ್ಮ ತಮ್ಮ ದೇಶದಲ್ಲಿ ಮತ್ತು ವಿದೇಶಗಳಲ್ಲಿ ಎರಡೂ ಬದ್ಧತೆಗಳನ್ನೂ ಹೊಂದಿವೆ ಮತ್ತು ಜಂಟಿ ರಕ್ಷಣೆಯಂತಹ ಪ್ರಶ್ನೆಯನ್ನು ಪರಿಗಣಿಸುವುದಕ್ಕೆ ಕೂಡ, ನೀತಿಗಳಲ್ಲಿ ಮೂಲಭೂತ ಹಿಂಚಲನೆಯ ಅವಶ್ಯಕತೆಯಿದೆ, ಇಂತಹ ಪರಿಸ್ಥಿತಿಗಳ ಅಧೀನದಲ್ಲಿ ಎಲ್ಲ ಪ್ರಶ್ನೆಗಳನ್ನೂ ಚರ್ಚೆಗೆ ತೆಗೆದುಕೊಳ್ಳುವುದು ಅಪೇಕ್ಷಣೀಯವೆಂದಾಗಲೀ, ವಿವೇಕಪೂರ್ಣವೆಂದಾಗಲೀ ತೋರುವುದಿಲ್ಲ -ದೃಷ್ಟಿಕೋನಗಳ ನಡುವೆ ಅಗಲವಾದ ತಿರುವು ಅಸ್ತಿತ್ವದಲ್ಲಿದೆಯೆಂದು ಕಂಡುಕೊಳ್ಳುವುದಕ್ಕಾಗಿ ಮಾತ್ರ, ಈ ಪ್ರಶ್ನೆಗಳ ಚರ್ಚೆ ಬೇಕೇ?

ಅಂತಹದೊಂದು ಸಂಗತಿಯು, ಇತ್ತೀಚೆಗೆ ಎರಡೂ ರಾಷ್ಟ್ರಗಳ ನಡುವೆ ಕಂಡುಬರುತ್ತಿರುವ ಬಾಂಧವ್ಯದ ಸುಧಾರಣೆಯನ್ನು ತಡೆಹಿಡಿಯುತ್ತದೆ. ಆಲೋಚಿಸಲಾಗದಂತಹ ಮತ್ತು ಒಪ್ಪಿಕೊಳ್ಳಲು ಸಾಧ್ಯವಾಗದಂತಹ ಎಲ್ಲ ರೀತಿಯ ಸಲಹೆಗಳನ್ನೂ ಮುಂದಿಡುವುದರ ಮೂಲಕ, ಅಧ್ಯಕ್ಷರು ಈ ಭೇಟಿಯನ್ನು ಪ್ರಚಾರದ ಉದ್ದೇಶಕ್ಕಾಗಿ, ಬಳಸಿಕೊಳ್ಳದಿರಬೇಕಾದರೆ ಈ ಮಾತುಕತೆಗಳು, ಏನೂ ಭಿನ್ನಮತವಿಲ್ಲದಂತಹ ವಿಚಾರಗಳಿಗೆ ಸೀಮಿತವಾಗಿರಬೇಕು. ಬಾಂಧವ್ಯಗಳು ಉತ್ತಮಗೊಂಡಂತೆ, ಕ್ಲಿಷ್ಟವಾದ ಪ್ರಶ್ನೆಗಳನ್ನು ಕೂಡ ವ್ಯವಹರಿಸುವಂತಹ ವಾತಾವರಣವು ನಿರ್ಮಾಣವಾಗುವುದು.

ಈಗಿನ ಪ್ರಸಕ್ತ ಸಮಯದಲ್ಲಿ ವಿಶೇಷ ಕಳಕಳಿ, ಕಾಳಜಿಯ ಪ್ರಶ್ನೆ ಕಾಶ್ಮೀರವನ್ನು ಕುರಿತದ್ದಾಗಿದೆ. ಈ ವಿಷಯವನ್ನು ಮಾತುಕತೆಗಳ ಅಘೋಷಿತ ಕಾರ್ಯಕ್ರಮಗಳ ಪಟ್ಟಿಯಲ್ಲಿ ಸೇರಿಸಲಾಗಿದೆಯೆಂದು ವರದಿಯಾಗಿದೆ. ಆಕ್ರಮಿತ ಪ್ರದೇಶವನ್ನು ತೆರವು ಮಾಡುವ ಸದ್ವಿವೇಕವನ್ನು ಪಾಕಿಸ್ತಾನ ಪಡೆಯದಿದ್ದಲ್ಲಿ, ಈ ಸಮಸ್ಯೆಯು ಸುಲಭವಾಗಿ ಪರಿಹಾರವಾಗುವುದಿಲ್ಲವೆಂಬ ಸಂಪೂರ್ಣ ಅರಿವು ಪಾಕಿಸ್ತಾನಕ್ಕೆ ಇದೆ. ಹಾಗಿದ್ದರೂ, ಕಾಶ್ಮಿರದ ವಿಷಯವು ಸೇರಿಸಲ್ಪಟ್ಟಿದೆಯೆಂದರೆ, ಪಾಕಿಸ್ತಾನ ಕಿರುಕುಳ ತಂಟೆ ಮಾಡುವುದನ್ನು ಬಯಸುತ್ತದೆ. ಈ ವರ್ಷಗಳಲ್ಲೆಲ್ಲಾ ಪಾಕಿಸ್ತಾನದ ಕುಟಿಲತಂತ್ರವೆಂದರೆ, ಕಾಶ್ಮೀರದ ಭವಿಷ್ಯದ ಬಗೆಗೆ ಅನಿಶ್ಚಯದ ಪರಿಸ್ಥಿತಿಯನ್ನು ಸೃಷ್ಟಿಸುವುದು ಮತ್ತು ಕಾಶ್ಮೀರದಲ್ಲಿ ರಾಷ್ಟ್ರವಿರೋಧಿ ಮತ್ತು ಪಾಕಿಸ್ತಾನದ ಪರವಾದ ಘಟಕಗಳಿಗೆ ಪುಷ್ಟಿ ನೀಡುವುದೇ ಆಗಿದೆ.

ಇದುವರೆಗೂ, ಭಾರತಕ್ಕೆ ಸಂಬಂಧಿಸಿದಂತೆ, ಪಾಕಿಸ್ತಾನದೊಡನೆ ಚರ್ಚಿಸಲ್ಪಡಬೇಕಾಗಿರುವ, ಕಾಶ್ಮೀರದ ಬಗೆಗಿನ ಒಂದೇ ಒಂದು ಪ್ರಶ್ನೆಯೆಂದರೆ, ಪಾಕಿಸ್ತಾನವು ಯಾವಾಗ ಮತ್ತು ಹೇಗೆ, ಪಾಕಿಸ್ತಾನವು ಭಾರತ ಪ್ರದೇಶದ ಭಾಗದಿಂದ ಹಿಂದೆ ಸರಿಯಲು ಉದ್ದೇಶಿಸಿದೆ ಎನ್ನುವುದು. ಅಧಿಕಾರಗ್ರಹಣದ ಪ್ರಶ್ನೆಯು ಬಹಳ ಹಿಂದೆಯೇ ಅಂತಿಮವಾಗಿ ನಿರ್ಧರಿಸಲ್ಪಟ್ಟಿದೆ. ನಾವು ಮತ್ತೆ ಆ ಪ್ರಶ್ನೆಯನ್ನು

ಚರ್ಚಿಸುವಂತಿಲ್ಲ. ವಿಲೀನ ಪತ್ರಕ್ಕೆ ಸಹಿಹಾಕಲು ಮಹಾರಾಜರಿಗಿರುವ ಹಕ್ಕು ಅಧಿಕಾರಗಳನ್ನು ಪಾಕಿಸ್ತಾನವು ಪ್ರಶ್ನಿಸುವುದಾದರೆ, ಅಥವಾ ಅದನ್ನು ಸ್ಥಿರೀಕರಿಸಲು ಜಮ್ಮು ಮತ್ತು ಕಾಶ್ಮೀರದ ಅಂಗಘಟಕವಾದ ವಿಧಾನಸಭೆಯನ್ನು ಪ್ರಶ್ನಿಸುವುದಾದರೆ, ನಾವು ಕೂಡ, ಪ್ರತ್ಯೇಕ ಅಸ್ತಿತ್ವವಾಗಿರುವುದರ ಬಗೆಗೆ ಪಾಕಿಸ್ತಾನದ ಹಕ್ಕನ್ನು (ಅಧಿಕಾರವನ್ನು) ಪ್ರಶ್ನಿಸಬಹುದು. ಭಾರತ ಸ್ವಾತಂತ್ರ್ಯ (ನಿಯಮ) ವಿಧಿಯ ಅಡಿಯಲ್ಲಿ ಪಾಕಿಸ್ತಾನವು ಸೃಷ್ಟಿಸಲ್ಪಟ್ಟಿತು. ಅದೇ ನಿಯಮವು, ಆಗಿನ ಬ್ರಿಟಿಷ್ ಸರ್ಕಾರದ ಸಾರ್ವಭೌಮತ್ವವನ್ನು ಕೊನೆಮಾಡಿತು ಮತ್ತು ಬೇರೆ ಎಲ್ಲ ರಾಜರುಗಳಂತೆಯೇ ಜಮ್ಮು ಮತ್ತು ಕಾಶ್ಮೀರದ ಮಹಾರಾಜನನ್ನು, ರಾಜ್ಯದ ಭವಿಷ್ಯವನ್ನು ತನ್ನದೇ ಅಧಿಕಾರದಲ್ಲಿ ನಿರ್ಧರಿಸುವ ಸಾರ್ವಭೌಮನನ್ನಾಗಿ ಬಿಟ್ಟಿತು. ಜನರ ಮಟ್ಟಿಗೆ, ರಾಜ್ಯದ ಚುನಾಯಿತ ವಿಧಾನಸಭೆಯು, ದೇಶವನ್ನು ವಿಭಜಿಸಿದ ರಾಜಕಾರಣಿಗಳ ಒಳಸಂಚಿನ ತಂಡಕ್ಕಿಂತಲೂ, ಅಥವಾ ಈಗ ಪಾಕಿಸ್ತಾನವೆಂದು ಹೆಸರಿರುವ ಪ್ರದೇಶದಲ್ಲಿ ಆಳುತ್ತಿದ್ದವರಿಗಿಂತಲೂ, ನಿಜವಾಗಿಯೂ ಹೆಚ್ಚು ಪ್ರಾತಿನಿಧಿಕವಾದ ಗುಣಗಳನ್ನು ಹೊಂದಿದ್ದಿತು. ಪಾಕಿಸ್ತಾನವು ಗಡಿಯಾರದ ಮುಳ್ಳುಗಳನ್ನು ಹಿಂದಕ್ಕೆ ತಿರುಗಿಸಲು ಇಚ್ಛಿಸಿದಲ್ಲಿ ನಾವು ೧೯೪೭ರ ಜೂನ್ ೩ಕ್ಕೆ ೧೯೪೭, ೨೬ ಅಕ್ಟೋಬರ್‌ನಲ್ಲಿ ಹಿಂದಿರುಗೋಣ.

ಪ್ರಧಾನಮಂತ್ರಿಯವರು ಕಾಶ್ಮೀರ ವಿಲೀನ ಪ್ರಶ್ನೆಯನ್ನು ಚರ್ಚಿಸಲು ನಿರಾಕರಿಸುವುದು ಅವಶ್ಯಕವಾಗಿದೆ ಮತ್ತು ಇದರ ಖಚಿತವಾದ ಘೋಷಣೆಯನ್ನು ಮಾಡಬೇಕಾಗಿದೆ. ಅವರ ಮೌನವು ಹಾನಿಕರವಾಗಿ ಪರಿಣಮಿಸುತ್ತಿದೆ. ಅವರು ತಮಗೆ ಅರಿವಿರದಂತೆಯೇ ಪಾಕಿಸ್ತಾನದ ಯುಕ್ತಿಗೆ ವಶರಾಗುತ್ತಿದ್ದಾರೆ. ಇದು ಜನಮತಗಣನೆ ಮಾಡಬೇಕೆನ್ನುವರ ಗುಂಪಿಗೆ ಮತ್ತು ರಾಜ್ಯದ ಇತರ ಕೋಮುವಾದಿ ಘಟಕಗಳಿಗೆ ಹೊಸ ಜೀವವನ್ನು ನೀಡುತ್ತಿದೆ. ಒಂದು ಕಡೆ, ಕಾರ್ಯಕ್ರಮದ ಪಟ್ಟಿಯಲ್ಲಿ ಕಾಶ್ಮೀರದ ಸೇರ್ಪಡೆಯ ಬಗೆಗೆ ಪಾಕಿಸ್ತಾನವು ವ್ಯಾಪಕವಾಗಿ ಪ್ರಚಾರ ಮಾಡುತ್ತಿದ್ದರೆ, ಇನ್ನೊಂದು ಕಡೆ ಷೇಕ್ ಅಬ್ದುಲ್ಲಾ ಮತ್ತು ಬೇಗ್ ತಮಗೆ ವಿಚಾರಣೆಯ ಹಾದಿಯಲ್ಲಿ ದೊರೆತಿರುವ ಈ ಅವಕಾಶವನ್ನು ಸಾಧ್ಯವಾದಷ್ಟೂ ಪರಮಾವಧಿ ಮಟ್ಟದಲ್ಲಿ, ರಾಜಕೀಯ ಹೇಳಿಕೆಗಳನ್ನು ನೀಡಲು, ತಮ್ಮ ಬೆಂಬಲಿಗರಲ್ಲಿ ಹೊಸ ಭರವಸೆಗಳನ್ನು ತುಂಬಲು ಉಪಯೋಗಿಸಿಕೊಳ್ಳುತ್ತಿದ್ದಾರೆ. ಕಾಶ್ಮೀರಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಭಾವನೆಗಳಿಗೆ ಅಭಿವ್ಯಕ್ತಿಗೆ ಸ್ಥಳ ಕಾದಿರಿಸಲು ಅತ್ಯಂತ ಕೃಪಣತನ ತೋರುವ ಭಾರತದ ಪತ್ರಿಕಾವಲಯವು ಅಸಾಮಾನ್ಯ ಪ್ರಚಾರಕ್ಕಾಗಿ ಈ ರಾಷ್ಟ್ರವಿರೋಧಿ ಶಕ್ತಿಗಳ ದೃಷ್ಟಿಕೋನಗಳನ್ನು ಪ್ರಕಟಪಡಿಸುತ್ತಿರುವುದು ದುರದೃಷ್ಟಕರ. ಈ ಎಲ್ಲ ವಿಷಯಗಳೂ ಕುತೂಹಲಕರವೂ, ಒಳ ಸಂಚಿನದಾಗಿಯೂ ತೋರುತ್ತವೆ.

ಕದನವಿರಾಮದ ರೇಖೆಯ ಉದ್ದಕ್ಕೂ ಇರುವ, ರಾಜ್ಯದ ವಿಭಜನೆಯ



ವಾಸ್ತವವಾಗಿ ಇರುವ (ನ್ಯಾಯವೋ, ಅನ್ಯಾಯವೋ ಕಾರ್ಯತಃ ಇರುವ) ವಿಭಜನೆಯನ್ನು ಒಪ್ಪಿಕೊಳ್ಳುವ ಮೂಲಕ ಈ ಸಮಸ್ಯೆಯ ಪರಿಹಾರಸಾಧ್ಯವೆಂದು ಅಭಿಪ್ರಾಯಗಳು ಕೂಡ ವ್ಯಕ್ತಗೊಂಡಿವೆ. ಪಾಕಿಸ್ತಾನವು ಇಂತಹ ಪರಿಹಾರವನ್ನು ಒಪ್ಪಿಕೊಳ್ಳುವುದೇ ಎಂಬುದರ ಬಗೆಗೆ ಯಾವುದೇ ಸೂಚನೆಯಿಲ್ಲ. ಪ್ರಧಾನಮಂತ್ರಿ ನೆಹರೂ ಒಂದು ಸಾರಿ ಅಂತಹ ಪ್ರಸ್ತಾಪವನ್ನು ಮಾಡಿದ್ದರು. ಆದರೆ ಪಾಕಿಸ್ತಾನವು ಅದನ್ನು ಸಾರಾಸಗಟಾಗಿ ನಿರಾಕರಿಸಿತು. ಈಗಲೂ ಕೂಡ, ಕೇವಲ ನಮ್ಮ ಪಕ್ಷದ ಪತ್ರಿಕಾ ವಲಯ ಮತ್ತು ಜನತೆ ಆ ರೀತಿಯ ಪರಿಹಾರವನ್ನು ಸೂಚಿಸಲು ದಾರಿಬಿಟ್ಟು ಹೋಗುತ್ತಿದ್ದಾರೆ. ಅವರಲ್ಲಿ ಅನೇಕರು, ಪಾಕಿಸ್ತಾನದೊಡನೆ ಯಾವುದಾದರೂ ಒಂದು ರೀತಿಯ ಜಂಟಿ ರಕ್ಷಣಾ ಒಪ್ಪಂದ ಮಾಡಿಕೊಳ್ಳಲು ಕಾತರವಾಗಿರುವ ಗುಂಪಿಗೆ ಸೇರಿದವರು, ಆದ್ದರಿಂದ ಅದಕ್ಕಾಗಿ ಯಾವುದೇ ಬೆಲೆಯನ್ನು ಕೊಡಲೂ ಸಹ ಸಿದ್ಧವಾಗಿರುವವರು. ಇಂತಹ ಅನಗತ್ಯವಾದ ಆತಂಕವು ನಮ್ಮ ಮಟ್ಟಿಗೆ ಹೇಳುವುದಾದರೆ, ಮುತ್ಸದ್ದಿತನದ್ದಾಗಲೀ ಅಥವಾ ರಾಷ್ಟ್ರೀಯತೆಯದಾಗಲೀ ನಿದರ್ಶನವಲ್ಲ.

ಈ ಜನರ ವಾದವೆಂದರೆ, ಕದನವಿರಾಮ ರೇಖೆಯ ಆಚೆಗಿರುವ ಮೂರನೇ ಒಂದು ಭಾಗದ ಕಾಶ್ಮೀರವನ್ನು ಮತ್ತೆ ಪಡೆಯುವ ಸಂದರ್ಭಗಳು ತೀರಾ ದೂರವಾಗಿವೆ. ಆದ್ದರಿಂದ, ಆ ಪ್ರದೇಶದಲ್ಲಿ ನಮ್ಮ ಸಾರ್ವಭೌಮತ್ವದ ಮಿಥ್ ಅನ್ನು ಜೀವಂತವಾಗಿಟ್ಟು ಅದರಿಂದಾಗಿ ಸಮಸ್ಯೆಯನ್ನು ಅಮಾನತ್ತಿನಲ್ಲಿಡುವುದಕ್ಕಿಂತಲೂ, ಈಗಾಗಲೇ ಅಸ್ತಿತ್ವದಲ್ಲಿರುವ ವಾಸ್ತವತೆಗೆ ನ್ಯಾಯಬದ್ಧ ಸ್ಥಾನ ಕೊಡುವುದು ಉತ್ತಮ. ಹೆಚ್ಚುತ್ತಿರುವ ಚೀನಾದ ಆಕ್ರಮಣದ ಭಯದ ದೃಷ್ಟಿಯಿಂದ ನಾವು ಈ ಪಾಕಿಸ್ತಾನದ ಗೊಂದಲದಿಂದ ಬಿಡಿಸಿಕೊಳ್ಳಬೇಕೆಂದು ಸಹ ಅವರು ಭಾವಿಸುತ್ತಾರೆ. ಒಂದು ಸಾರಿ ಪಾಕಿಸ್ತಾನದೊಡನೆ ಈ ವಿಷಯವು ತೀರ್ಮಾನಗೊಂಡರೆ, ರಾಜ್ಯದ ಉಳಿದ ಭಾಗಗಳಲ್ಲಿ ಸಹಜ ಸ್ಥಿತಿಯು ಮರಳುತ್ತದೆ. ಈ ಜನರು ರಾಷ್ಟ್ರೀಯ ಭಾವನೆಯನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಆದರೆ, ರಾಷ್ಟ್ರೀಯ ಭಾವನೆ ಮತ್ತು ಆತ್ಮಗೌರವಗಳ ಎಲ್ಲ ಅಭಿವ್ಯಕ್ತಿಗಳನ್ನೂ ಕೇವಲ ಭಾವಾತಿರೇಕವೆಂದು ತಿರಸ್ಕಾರದಿಂದ ತಳ್ಳಿಹಾಕುತ್ತಾ ವ್ಯಾವಹಾರಿಕ ವಾಸ್ತವವಾದಿಗಳಂತೆ ಮಾತನಾಡುವ ಹಕ್ಕು ಸಾಧಿಸುತ್ತಾರೆ. ವಾಸ್ತವವಾದಿಯು ಭಾವನೆಗಳು ಮತ್ತು ಭಾವಾತಿರೇಕತೆಗಳ ನಡುವೆ ಇರುವ ಭೇದವನ್ನು ತಿಳಿಯಲು ಸಮರ್ಥನಾಗಿರಬೇಕು ಹಾಗೂ ಜನರನ್ನು ನಿರ್ಮಾಣ ಮಾಡುವುದರಲ್ಲಿ– ರೂಪಿಸುವುದರಲ್ಲಿ– ಭಾವನೆಗಳಿಗೆ ಇರುವ ಮಹಾಶಕ್ತಿಯುಳ್ಳ ಸಾಮರ್ಥ್ಯವನ್ನು ಅರಿಯಬೇಕು ಎಂದು ನಾವು ಭಾವಿಸುತ್ತ, ನಾವು ಸದ್ಯದಲ್ಲಿ ಆ ಸಲಹೆಯನ್ನು ಹೆಚ್ಚು ಸಾಮಾನ್ಯ ರೀತಿಯಲ್ಲಿ ಪರಿಗಣಿಸುತ್ತೇವೆ ಮತ್ತು ಆ ಸಲಹೆಯು ಒಳಗೊಂಡಿರುವ ಅಪಾಯಕಾರೀ ತೊಡಕುಗಳನ್ನು ನೋಡಲು

ಪ್ರಯತ್ನಿಸುತ್ತೇವೆ.

ಕದನ ವಿರಾಮರೇಖೆಯನ್ನು ಭಾರತ–ಪಾಕಿಸ್ತಾನಗಳ ನಡುವೆ ಇರುವ ಯಥಾರ್ಥವಾದ ಗಡಿ ಎಂದು ಮನ್ನಿಸುವುದಾದರೆ, ರಾಜ್ಯದ ಜನರಲ್ಲಿ ಅದು ಯಾವ ಪ್ರತಿಕ್ರಿಯೆಯನ್ನು ಉಂಟುಮಾಡಬಹುದು? ನಮ್ಮ ಸಾರ್ವಭೌಮ ಹಕ್ಕುಗಳ ಮೂಲಭೂತ ಶರಣಾಗತಿಯಾಗುವುದರಿಂದ ಹಾಗೂ ವಿಲೀನಪತ್ರದ ವ್ಯಾಪ್ತಿಯನ್ನು ಹ್ರಸ್ವಗೊಳಿಸಿದಂತಾಗುವುದರಿಂದ ಇದು ರಾಜ್ಯದಲ್ಲಿ ಪಾಕಿಸ್ತಾನದ ಘಟಕಗಳಿಗೆ ಪ್ರೋತ್ಸಾಹ, ಉತ್ತೇಜನಗಳು ದೊರಕುತ್ತವೆ. ಕಣಿವೆಯ ಜನರ ಮೇಲೆ ಕಮ್ಯೂನಿಸ್ಟರೂ ಸ್ವಲ್ಪ ಹಿಡಿತ ಹೊಂದಿದ್ದಾರೆಂಬುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. 'ದಿ ಡೆಮಾಕ್ರಾಟಿಕ್ ನ್ಯಾಷನಲ್ ಕಾನ್‌ಫರೆನ್ಸ್' ರಾಜ್ಯದಲ್ಲಿ ಸಿ.ಪಿ.ಐ.ನ ಒಂದು ಪಕ್ಷವಲ್ಲದೇ ಬೇರೆ ಏನೂ ಇಲ್ಲ. ಒಂದುಬಾರಿ, ಭಾರತದೊಡನೆ ರಾಜ್ಯಕ್ಕೆ ಇರುವ ಬಾಂಧವ್ಯದ ನಿಶ್ಚಿತತೆಯು ಪಲ್ಲಟಗೊಂಡರೆ (ಬದಲಾದರೆ) ಇವರು ಮತ್ತು ಇತರರು ಸನ್ನಿವೇಶದ ಲಾಭ ಪಡೆಯುತ್ತಾರೆ. (ಬೆಂದ ಮನೆಯ ಗಳ ಹಿರಿಯುತ್ತಾರೆ.) ಈಗಾಗಲೇ ಗಡಿಯನ್ನು ದಾಟಿ ಬಂದಿರುವ ಚೀನೀಯರ ಜೊತೆ ಸೇರಿ ಕೆಲಸ ಮಾಡುವುದಿಲ್ಲ ಎಂಬ ಭರವಸೆಯೇನೂ ಇಲ್ಲ. ಭಾರತವು ಚೀನಾವನ್ನು ಪರಿಣಾಮಕಾರಿಯಾಗಿ ಎದುರಿಸುವ ಸಲುವಾಗಿ, ಕಾಶ್ಮೀರದ ಒಂದು ಭಾಗವನ್ನು ಪಾಕಿಸ್ತಾನಕ್ಕೆ ಒಪ್ಪಿಸಿಕೊಡಬೇಕೆನ್ನುವವರ ಉದ್ದೇಶವನ್ನೇ ಈ ಮಾರ್ಗವು ಪರಾಜಯಗೊಳಿಸುವುದು ಹಾಳುಗೆಡವುತ್ತದೆ.

ಕಾಶ್ಮೀರದ ಪ್ರಶ್ನೆಯು ಮತ್ತೆ ಅನಾವೃತವಾಗುತ್ತದೆಂಬ ಕೇವಲ ವರದಿಗಳೇ ಭಕ್ಷಿ ಸರ್ಕಾರಕ್ಕೆ ಸಮಸ್ಯೆಗಳನ್ನು ಸೃಷ್ಟಿಸಿವೆ. ಶ್ರೀಗುಲಾಂ ಮೊಹಮ್ಮದ್ ಭಕ್ಷಿಯವರ ಬಗೆಗೆ ಗೌರವಪೂರ್ಣವಾಗಿ ಹೇಳಬಹುದಾದುದೆಂದರೆ, ಭಾರತದ ಬಗೆಗೆ ತಮಗಿರುವ ನಿಷ್ಠೆಯನ್ನು ವಿಫಲಗೊಳಿಸಲು ಮಾಡಿದ ಎಲ್ಲ ಪ್ರಯತ್ನಗಳನ್ನೂ ಎದುರಿಸಿ ಅಚಲರಾಗಿ ನಿಂತಿದ್ದಾರೆ ಮತ್ತು ಇಲ್ಲಿಯವರೆಗೂ ನಿಜವಾದ ರಾಷ್ಟ್ರೀಯತಾ ವಾದಿಯಂತೆ ನಡೆದುಕೊಂಡಿದ್ದಾರೆ. ಆದರೆ, ಅವರ ಕೈಗಳನ್ನು ಬಲಪಡಿಸುವ ಬದಲು, ಹಾಗೂ ರಾಜ್ಯದಲ್ಲಿ ರಾಷ್ಟ್ರೀಯತಾವಾದಿ ಬಲವನ್ನು ಒಟ್ಟುಗೂಡಿಸುವ ಬದಲು, ಹೊಸದಿಲ್ಲಿಯು, ಕಾಶ್ಮೀರದ ಪ್ರಶ್ನೆಯನ್ನು ಪರಿಹರಿಸುವ ಬದಲು ಗಾಳಿಯಲ್ಲಿ ನೇತಾಡಿಸುತ್ತಿರುವಂತಹ ನೀತಿಯನ್ನು ಮುಂದುವರಿಸಿದರೆ, ಇದುವರೆಗೂ ನಾವು ನಿಸ್ಸಂದಿಗ್ಧತೆಗಳನ್ನು ಬಿಟ್ಟು ಬೇರೆ ಏನನ್ನೂ ಕಾಣದಿದ್ದ ಕಡೆಯಲ್ಲೆಲ್ಲಾ ಸಂದಿಗ್ಧತೆಯನ್ನೇ ಕಾಣಬೇಕಾಗಬಹುದು. ಭಕ್ಷಿ ಸರ್ಕಾರದ ನೀತಿಯನ್ನು ಈಗಾಗಲೇ, ಕೋಮುವಾದ ಮತ್ತು ಪ್ರಾದೇಶಿಕ ಪರಿಗಣನೆಗಳು ನಿರ್ಧರಿಸಲಾರಂಭಿಸಿವೆ. ಅವರು ರಾಜ್ಯದಲ್ಲಿನ ಮತ್ತು ಹೊರಗಿನ ರಾಷ್ಟ್ರೀಯತಾವಾದೀ ಘಟಕಗಳ ಮೇಲೆ ಅವಲಂಬಿಸುವುದರ ಬದಲಿಗೆ, ಕಣಿವೆಯಲ್ಲಿನ ಕೋಮುವಾದಿ ಶಕ್ತಿಗಳನ್ನು ಓಲೈಸಲು ಯತ್ನಿಸುತ್ತಿರುವಂತೆ ತೋರುತ್ತದೆ. ಈ ನಿಟ್ಟಿನಲ್ಲಿ ವೈಫಲ್ಯ ವಿನಃ ಬೇರೇನೂ ಅವರಿಗೆ ಸಿಕ್ಕಲಾರದು. ಆದರೆ, ಆ ವೇಳೆಗೆ ಸರ್ಕಾರದ ನೀತಿಯು ರಾಜ್ಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಹಾನಿ, ತೊಂದರೆಗಳನ್ನು ಸೃಷ್ಟಿಸಿರುತ್ತದೆ ಮತ್ತು ಜಮ್ಮುವಿನ ಜನರಿಗೆ ಹೇಳಲಾರದಷ್ಟು ಸಂಕಷ್ಟಗಳನ್ನು ಉಂಟುಮಾಡಿರುತ್ತದೆ.



ಭಾರತ ಸರ್ಕಾರದ ತಾಟಸ್ಥ್ಯ ನೀತಿಯ ಹಿನ್ನೆಲೆಯಲ್ಲಿ, ಚೀನಾ ಆಕ್ರಮಣದ ಪ್ರಶ್ನೆಯನ್ನೂ ಪರಿಗಣಿಸಬೇಕಾಗಿದೆ. ಆಕ್ರಮಣವನ್ನು ತೆರವುಗೊಳಿಸಲು, ಚೀನಾದ ವಿರುದ್ಧ ಯಾವುದೇ ಮಿಲಿಟರಿ ಕಾರ್ಯತಂತ್ರವನ್ನೂ ತೆಗೆದುಕೊಳ್ಳದಿರಲು ಪಂಡಿತ ನೆಹರೂ ನಿರ್ಧರಿಸಿದ್ದಾರೆ. ಈ ಸಂಗತಿಯು ಈಗಾಗಲೇ ತಣ್ಣಗಾಗಿ ಹೆಪ್ಪುಗಟ್ಟಿದೆ. ಪಾಕಿಸ್ತಾನವು ಕಾಶ್ಮೀರದಲ್ಲಿ ತಳವೂರಿರುವಂತೆ ಚೀನಾವು ಲಡಾಖ್‌ನಲ್ಲಿ ತಳವೂರಿ ಮುಂದುವರಿಯುತ್ತದೆ. ಕೆಲವು ಜನರು, ನ್ಯಾಯವೋ ಅನ್ಯಾಯವೋ ಸ್ವಾಧೀನತೆಯನ್ನು ವಾಸ್ತವವಾಗಿ ಅನುಭವಿಸುತ್ತಿರುವಂತೆ, ಕಾನೂನಿಗೆ ಅನುಸಾರವಾಗಿ ಮನ್ನಣೆ ನೀಡಬೇಕೆಂದೂ ಕೆಲವರು ಸಲಹೆ ನೀಡಬಹುದು. ಹಾಗಾಗಿ ನಾವು ಎರಡೂ ಪಕ್ಷಗಳಿಂದಲೂ ಕಳೆದುಕೊಂಡಂತಾಗುತ್ತದೆ. ತಲೆಯನ್ನು ಪಾಕಿಸ್ತಾನಕ್ಕೆ ಕೊಟ್ಟು ಕಳೆದುಕೊಳ್ಳುತ್ತೇವೆ, ಬಾಲವನ್ನು ಚೀನಾಕ್ಕೆ ಕೊಟ್ಟು ಕಳೆದುಕೊಳ್ಳುತ್ತೇವೆ. ಈ ಶರಣಾಗತರಾಗುವ ಅಥವಾ ಬಿಟ್ಟುಕೊಡುವ ನೀತಿಯು, ಭಾರತದ ವಿರುದ್ಧ ಮತ್ತಷ್ಟು ಆಕ್ರಮಣಗಳಿಗೆ ಪ್ರೋತ್ಸಾಹ ನೀಡುತ್ತದೆ.

ದೇಶದ ಒಳಗೆ ಹೆಚ್ಚುತ್ತಿರುವ ಮುಸ್ಲಿಮ್ ಕೋಮುವಾದೀ ಘಟಕಗಳ ಚಟುವಟಿಕೆಗಳನ್ನೂ ನಾವು ಪರಿಗಣಿಸಬೇಕಾಗಿದೆ. ಅವು ಹೆಚ್ಚು ಹೆಚ್ಚಾಗಿ ಆಕ್ರಮಣಶೀಲವಾಗುತ್ತಿವೆ. ಇತ್ತೀಚೆಗಿನ ಅಸ್ಸಾಮ್ ದಂಗೆಗಳಲ್ಲಿ ಅವುಗಳ ಚಟುವಟಿಕೆಗಳು ಎಲ್ಲರಿಗೂ ಚೆನ್ನಾಗಿ ತಿಳಿದಿವೆ. ಈ ಜನರು ತಮ್ಮ ಬೇಡಿಕೆಗಳನ್ನು ಮಂಡಿಸುವ ಮತ್ತು ಕಾಶ್ಮೀರದ ವಿಷಯದಲ್ಲಿ ಮಾಡುತ್ತಿರುವಂತೆಯೇ ಇವರನ್ನು ಪಾಕಿಸ್ತಾನವು ಸ್ಫೂರ್ತಿಗಳಿಸುವ ಹಾಗೂ ಬೆಂಬಲಿಸುವ ದಿನಗಳು ದೂರವೇನಿಲ್ಲ. ತುಷ್ಟೀಕರಣವು ಪಾಕಿಸ್ತಾನದ ಹಸಿವನ್ನು ಮತ್ತಷ್ಟು ಹರಿತಗೊಳಿಸುತ್ತದೆ ಹಾಗೂ ಹಿಂದೂಸ್ತಾನದಲ್ಲೊಂದು ಇಸ್ಲಾಮಿಸ್ತಾನವನ್ನು ಕನಸು ಕಾಣುತ್ತಿರುವವರ ಬಯಕೆಗೂ ನೀರೆರೆಯುತ್ತದೆ.

ಆದ್ದರಿಂದ, ಪ್ರಧಾನಮಂತ್ರಿಗಳು, ಕಾಶ್ಮೀರದ ಬಗೆಗೆ, ಆದಷ್ಟೂ ಅದರ ವಿಲೀನಕ್ಕೆ ಸಂಬಂಧಿಸಿದಂತೆ ಮಾತನಾಡದಿರುವುದು ಅತ್ಯವಶ್ಯಕವಾಗಿದೆ. ಆಕ್ರಮಣವನ್ನು ತೆರವು ಮಾಡುವುದರ ಮೇಲೆ ಅವರು ಒತ್ತುಹಾಕಲಿ, ಪಟ್ಟುಹಿಡಿಯಲಿ. ಕೆಲವು ವರದಿಗಳು ಮತ್ತು ಕೆಲವು ಜನರ ಚಟುವಟಿಕೆಗಳಿಂದಾಗಿ, ಈ ಮಾತುಕತೆಗಳ ಸಂಭವನೀಯ ಪರಿಣಾಮದ ಬಗೆಗೆ ಜನರ ಮನಸ್ಸಿನಲ್ಲಿ ಭಯ, ಆತಂಕಗಳು ಮನೆಮಾಡಿವೆ. ಕಾಶ್ಮೀರದಲ್ಲಿ ಭಾರತದ ಸಾರ್ವಭೌಮ ಹಕ್ಕು ಅಧಿಕಾರಗಳ ಅತಿಕ್ರಮಣ,

ಉಲ್ಲಂಘನಗಳಿಗೆ ಯಾವುದೇ ರೀತಿಯಲ್ಲಿಯೂ ಸಮ್ಮತಿಸುವುದಿಲ್ಲವೆಂಬ ಖಂಡಿತವಾದ ಯಾವುದೇ ಷರತ್ತಿಲ್ಲದ ಭರವಸೆಯನ್ನು ನಾವು ಪ್ರಧಾನಮಂತ್ರಿಯವರಿಂದ ಒತ್ತಾಯಪೂರ್ವಕ ಬೇಡುತ್ತೇವೆ. ಈ ಸಂಬಂಧದಲ್ಲಿ ಪಾಕ್‌ಆಕ್ರಮಿತ ಕಾಶ್ಮೀರದಲ್ಲಿರುವ ಮಂಗಳಾ ಅಣೆಕಟ್ಟಿಗೆ ಸಂಬಂಧಿಸಿದಂತೆ ಇರುವುದೆಂದು ವರದಿಯಾಗಿರುವ ಒಂದು ನಿಬಂಧನೆಯ ಬಗೆಗೆ, ಕಾಲುವೆ ನೀರಿನ ಒಪ್ಪಂದದತ್ತ ಗಮನಹರಿಸಬೇಕಾಗಿದೆ. ಈ ನಿಬಂಧನೆಯನ್ನು ತೆಗೆದುಹಾಕುವ ತನಕ ಪ್ರಧಾನಮಂತ್ರಿಯವರು ಈ ಒಪ್ಪಂದಕ್ಕೆ ಸಹಿ ಹಾಕಬಾರದು. ಆ ಪ್ರದೇಶದಲ್ಲಿ ಅಣೆಕಟ್ಟನ್ನು ನಿರ್ಮಿಸಲು ಪಾಕಿಸ್ತಾನದ ಹಕ್ಕನ್ನು ನಾವು ಒಪ್ಪಿದರೆ, ಇದಕ್ಕೆ ಸಂಬಂಧಿಸಿದಂತೆ ನಮ್ಮ ಮುಂಚಿನ ಪ್ರತಿಭಟನೆಗೆ ಅರ್ಥವೇ ಇಲ್ಲದಂತಾಗುತ್ತದೆ. ಕಾನೂನುಬದ್ಧವಾಗಿ ಭಾರತದ ಪ್ರದೇಶವಾಗಿರುವುದರ ಮೇಲೆ ವಾಸ್ತವವಾಗಿಯೂ ನಾವು ನಮ್ಮ ಹಕ್ಕನ್ನು ಬಿಟ್ಟುಕೊಟ್ಟಂತೆ ಆಗುತ್ತದೆ ಅದು.

ಅವರು ಕೂಡ ಜಾಗರೂಕರಾಗಿರಬೇಕು, 'ಸರ್ಕಾರವು' ಭೂದಾಜ ಎಂದು ಭೂಮಿಯನ್ನು ಕೊಡಲು ಹೊರಟಿರುವಾಗ, ಜನರು ಮಾತ್ರವೇ ದೇಶದ ಐಕ್ಯತೆ ಮತ್ತು ಸಮಗ್ರತೆಯ ರಕ್ಷಕರಾಗಬಲ್ಲರು. ರಾಷ್ಟ್ರದ ನಂಬಿಕೆಯ ಯಾವುದೇ ದ್ರೋಹವನ್ನು ಸಹಿಸುವುದಿಲ್ಲವೆಂದು ನಾವು ಸ್ಪಷ್ಟವಾಗಿ ಸರ್ಕಾರಕ್ಕೆ ತಿಳಿಸೋಣ. ಅದು ಬೆರುಬರಿ ಅಥವಾ ಕಾಶ್ಮೀರವಾಗಬಹುದು. ಅಕ್ಸಾಯಿ ಚಿನ್ ಅಥವಾ ಬಾರಾಹೊಟಿಯಾಗಬಹುದು ಸರ್ಕಾರವು ಅವುಗಳನ್ನು ರಕ್ಷಿಸಬೇಕು ಮತ್ತು ಉಳಿಸಿಕೊಳ್ಳಬೇಕು ಮತ್ತು ರಾಷ್ಟ್ರೀಯ ಪ್ರದೇಶಗಳನ್ನು ಅಡವಿಡಬಾರದು ಮತ್ತು ಅವನ್ನು ಬಿಟ್ಟುಕೊಡಬಾರದು.

(೧೯೬೦ರ ಸೆಪ್ಟೆಂಬರ್ ೧೨)



# ವಿದೇಶಾಂಗ ವ್ಯವಹಾರಗಳು

## ಪಶ್ಚಿಮದ ಕೆಲವು ಪ್ರಭಾವಗಳು

ಯು.ಎಸ್.ಎ., ಯು.ಕೆ., ಜರ್ಮನಿ ಮತ್ತು ಪೂರ್ವ ಆಫ್ರಿಕಾಗಳ ನನ್ನ ಪ್ರವಾಸದಿಂದ ನನ್ನ ದೇಶಕ್ಕೆ ಹಿಂದಿರುಗಿ ಸುಮಾರು ಒಂದು ತಿಂಗಳಾಯಿತು. ಈ ಒಂದು ತಿಂಗಳ ಅವಧಿಯಲ್ಲಿ ನಾನು ಹೋದ ಕಡೆಗಳಲ್ಲೆಲ್ಲಾ ವಿದೇಶಗಳಲ್ಲಿನ ನನ್ನ ಅನುಭವಗಳ ಬಗೆಗೆ, ಪರೀಕ್ಷಕ ಪ್ರಶ್ನೆಗಳನ್ನು ಹಾಗೂ ಆ ದೇಶಗಳು ಭಾರತದ ಬಗೆಗೆ ತಾಳಿರುವ ಮನೋಧರ್ಮದ ಬಗೆಗೆ ಕೇಳಲಾಗುತ್ತಿದೆ. ಇಂತಹದೊಂದು ಪ್ರವಾಸದ ನಂತರ ನಿಮ್ಮ ದೃಷ್ಟಿಕೋನಗಳ ಮತ್ತು ಅಭಿಪ್ರಾಯಗಳ ಬಗೆಗೆ ಬರೆಯುವುದು ಒಂದು ಸಂಪ್ರದಾಯವೇ ಆಗಿಬಿಟ್ಟಿರುವುದರಿಂದಾಗಿ ಅನೇಕ ಸ್ನೇಹಿತರು ಮತ್ತು ಸಹೋದ್ಯೋಗಿಗಳಿಂದ ಈ ವಿಳಂಬದ ಬಗೆಗೆ ಒಂದೇ ಸಮನೆ ದೂರುಗಳು ಬರುತ್ತಿವೆ. ಅವರಲ್ಲಿ ನಾನು ಕ್ಷಮಾಪಣೆ ಕೇಳಲು ಮತ್ತು ವಿವರಣೆ ನೀಡಲು ಬದ್ಧನಾಗಿದ್ದೇನೆ.

ಇತರ ಸಂಘಟನಾ ಕಾರ್ಯಗಳಲ್ಲಿ ಮಗ್ನತೆಯಿಂದಿರಬೇಕಾಗಿರುವುದರ ಜೊತೆಗೆ, ಒಂದು ರೀತಿಯ ಹಿಂಜರಿಕೆಯ ಭಾವನೆಯೂ ಈ ವಿಳಂಬಕ್ಕೆ ಕಾರಣವಾಗಿದೆ. ಪಾಶ್ಚಾತ್ಯ ದೇಶಗಳಲ್ಲಿನ ಜೀವನ ವಿಪರೀತ ವೇಗವಾದದ್ದು, ಇದಕ್ಕೆ ಶಿಖರವಿಟ್ಟಂತೆ, ನಾಲ್ಕು ಮುಖ್ಯ ದೇಶಗಳನ್ನು ಪ್ರವಾಸ ಮಾಡಿ ಮುಗಿಸಲು ನನ್ನ ವಶದಲ್ಲಿದ್ದುದು ಒಂಬತ್ತು ವಾರಗಳಿಗಿಂತಲೂ ಕಡಿಮೆ ಅವಧಿ. ನಾನು ಸ್ವಲ್ಪ ಮುಂಚೆ ಹೊರಟಿದ್ದಿದ್ದರೆ, ಕಡೆಯಪಕ್ಷ ಮೂರು ವಾರದಷ್ಟು ಅವಧಿಯನ್ನಾದರೂ ನನಗೆ ಹೆಚ್ಚಿಗೆ ನೀಡಿರುತ್ತಿತ್ತು. ಆಗ ಮತ್ತಷ್ಟು ದೇಶಗಳನ್ನು ಅಥವಾ ಸ್ಥಳಗಳನ್ನು ವೀಕ್ಷಿಸಿ ಬರಬಹುದಾಗಿತ್ತು ಹಾಗೂ ಇಡಿಯ ಪ್ರವಾಸದ ಕಾರ್ಯಕ್ರಮವನ್ನು ಆತುರವಿಲ್ಲದೆ ಏರ್ಪಾಟು ಮಾಡಿಕೊಳ್ಳಬಹುದಾಗಿತ್ತು. ಏನೇ ಆದರೂ, ವಿದೇಶೀ ರಾಷ್ಟ್ರಗಳನ್ನು ದಾಟಿ ಹೋಗಲು ಉದ್ದೇಶಿಸುವ ಪ್ರವಾಸಿಗೆ, ಸರ್ಕಾರೀ ವಲಯದಿಂದ ನಿಬಂಧನೆಗಳ ಹಾಗೂ ಕೆಂಪುಪಟ್ಟಿಗಳ ಅನೇಕ ಅಡಚಣೆಗಳು ಭಾರತದಲ್ಲಿ ಚಾಲ್ತಿಯಲ್ಲಿವೆ. ಅನಿರೀಕ್ಷಿತವಾಗಿ– ಅಥವಾ, ಬಹುಶಃ ನಾನು ಅದನ್ನು ನಿರೀಕ್ಷಿಸಿರಬೇಕಾಗಿತ್ತು– ಅದು ಹೆಚ್ಚು ಸಮಯ ತೆಗೆದುಕೊಂಡಿತು ಮತ್ತು ಮುಂಚಿನ ವೇಳಾಪಟ್ಟಿ ತಪಸೀಲು ಕಾರ್ಯಕ್ರಮಗಳನ್ನು

ಪಲ್ಲಟಿಸಿತು, ಪರಿಣಾಮವಾಗಿ ಇಡಿಯ ಪ್ರವಾಸವನ್ನು ನಿಯಮಿತ ಕಾಲಾವಧಿಗೆ ತುರುಕಬೇಕಾಯಿತು.

ಬೇರೆ ಬೇರೆ ದೇಶಗಳಲ್ಲಿ ಆತಿಥೇಯರಿಂದ ಏರ್ಪಡಿಸಲ್ಪಟ್ಟಿದ್ದ ಕಾರ್ಯಕ್ರಮಗಳ ಜೊತೆಗೆ, ಭಾರತೀಯ ಸ್ನೇಹಿತರಿಂದ, ಹಲವಾರು ಪ್ರದೇಶಗಳಲ್ಲಿ ಗೊತ್ತುಪಡಿಸಿದ್ದ ನಿಗದಿತ ಭೇಟಿಯ ಕಾರ್ಯಕ್ರಮಗಳಿದ್ದವು. ಪರಿಣಾಮವಾಗಿ, ಅದೆಷ್ಟು ಶೀಘ್ರಗತಿಯಲ್ಲಿ ಒಂದರ ನಂತರ ಒಂದರಂತೆ ಕಾರ್ಯಕ್ರಮಗಳು ಹಿಂಬಾಲಿಸಿದವೆಂದರೆ, ಅವುಗಳಲ್ಲಿ ಯಾವುದೇ ಒಂದರ ಬಗೆಗೂ ವಿಶಿಷ್ಟವಾಗಿ ಗಮನವನ್ನು ಕೇಂದ್ರೀಕರಿಸುವುದು ಕಷ್ಟವಾಯಿತು. ಅಲ್ಲದೇ, ಅವುಗಳ ಲಕ್ಷಣಗಳು ತೀರಾ ವಿಭಿನ್ನವಾಗಿದ್ದು ಸಂಸ್ಕರಿಸದಿದ್ದ ಚಲನಚಿತ್ರದ ಸುರುಳಿಯಂತೆ, ಘಟನೆಗಳು ಒಂದು ರೀತಿಯ ಅಸ್ಥಿರ, ಕ್ಷಣಭಂಗುರ ಪ್ರಭಾವವನ್ನು ಉಂಟುಮಾಡಿತು. ಹಾಗಾಗಿ, ಯಾವುದೇ ರೀತಿಯ ಅಧಿಕೃತ ಹೇಳಿಕೆಯನ್ನಾಗಲೀ ಅಥವಾ ಪರಿಸ್ಥಿತಿಯ ಸಂಪೂರ್ಣ ವಿಶ್ಲೇಷಣೆಯನ್ನಾಗಲೀ ನನ್ನಿಂದ ನಿರೀಕ್ಷಿಸುವವರು ಅತೃಪ್ತರಾಗಬೇಕಾಗುತ್ತದೆ. ವಿವರವಾದ ವರ್ಣನೆಗಳ ಬಗೆಗೆ ನನಗೆ ಇರುವ ಜುಗುಪ್ಸೆಯು ಅವರ ಅತೃಪ್ತಿ ಮತ್ತಷ್ಟು ಹೆಚ್ಚಿಸುವುದು. ಆದ್ದರಿಂದ ಇಲ್ಲಿ ಅಭಿವ್ಯಕ್ತಗೊಂಡಿರುವ ಅಭಿಪ್ರಾಯಗಳು, ಕೇವಲ ಸಾಧಾರಣ ಮತ್ತು ಶೀಘ್ರವಾದ ನೋಟವನ್ನು ಮಾತ್ರ ಪಡೆಯಲು ಅವಕಾಶಪಡೆದವನ, ಸಾಂದರ್ಭಿಕ ವೀಕ್ಷಣೆಗಳು ಮಾತ್ರ ಎಂದು ನೋಡುವಂತೆ ನಾನು ಓದುಗರನ್ನು ಒತ್ತಾಯಿಸುತ್ತೇನೆ.

ಈ ಎಲ್ಲ ದೇಶಗಳಲ್ಲಿಯೂ ಭಾರತದ ಬಗೆಗೆ, ಸೌಹಾರ್ದದ ನಿಧಿಯನ್ನೇ ನಾನು ಕಂಡೆ. ನಮ್ಮ ಅಭಿಪ್ರಾಯದಿಂದ ಭಿನ್ನವಾಗಿರುವಲ್ಲಿಯೂ ಕೂಡ, ನಮ್ಮ ದೃಷ್ಟಿಕೋನವನ್ನು ಮೆಚ್ಚುವ, ಪ್ರಶಂಸಿಸುವ ಅಭಿಲಾಷೆ ಅಲ್ಲಿದೆ. ಆದರೂ, ಸಾಮಾನ್ಯ ಮನುಷ್ಯರಲ್ಲಿ ಇನ್ನೂ ಈಗಲೂ ಭಾರತದ ಬಗೆಗೆ ಅಗಾಧವಾದ ಅಜ್ಞಾನವಿರುವುದು ಮಿಸ್ ಮೇಯೋ ಮತ್ತು ಅವಳ ಕುಲದವರು ನೀಡಿರುವ ಭಾರತದ ವಿಕೃತ ಚಿತ್ರಣವೂ ಇನ್ನೂ ಅಸ್ತಿತ್ವದಲ್ಲಿರುವುದು ದುರದೃಷ್ಟಕರ. ಹಾವಾಡಿಗರ, ಉದ್ದ ಗಡ್ಡ ಮತ್ತು ಜಟೆಕಟ್ಟಿರುವ ಕೂದಲ ಯೋಗಿ, ಮತ್ತು ಬಂಜಾರ (ಲಂಬಾಣಿಗರು) ಸುಂದರಿಯ ಚಿತ್ರಗಳು ವ್ಯಾಪಕವಾಗಿ ಪ್ರಚಾರದಲ್ಲಿದ್ದು, ಅನೇಕ ಜನರಿಗೆ, ಇವು ಭಾರತೀಯ ಜೀವನದ ಕೆಲವು ಸಾಮಾನ್ಯವಲ್ಲದ ಕೆಲವು ಲಕ್ಷಣಗಳನ್ನು ಪ್ರತಿನಿಧಿಸುತ್ತವೆ ಎಂಬುದು ತಿಳಿದೇ ಇಲ್ಲ.

ಸಂಯುಕ್ತ ಸಂಸ್ಥಾನಗಳಲ್ಲಿ, ಶ್ರೀ ವಿ.ಕೆ.ಕೃಷ್ಣಮೆನನ್ ಮತ್ತು ಜಾನ್ ಫಾಸ್ಟರ್ ಡಲ್ಲೇಸ್‌ರಿಂದ ಉಂಟಾದ, ರಾಜಕೀಯ ಪೂರ್ವಗ್ರಹಗಳಿವೆ. ರಾಜಕೀಯ ಪಕ್ಷಪಾತಗಳು ಪತ್ರಿಕಾರಂಗದಲ್ಲಿ ಅಭಿರುಚಿಗಳನ್ನು ಮೂಡಿಸಿವೆ, ಅದರ ಮೂಲಕ, ಜನರಿಗೂ ಕೂಡ. ಮತ್ತು ಇತ್ತೀಚೆಗೆ ಹಿಮಾಲಯದ ಗಡಿಯಲ್ಲಿ ಕಮ್ಯೂನಿಸ್ಟ್



ಚೀನಾದಿಂದ ನಡೆದ ಅಗಾಧ ಆಕ್ರಮಣದನಂತರ ಮತ್ತು ಪಾಕಿಸ್ತಾನವು ಆ ದೇಶದೊಡನೆ (ಚೀನಾದೊಡನೆ) ಸ್ನೇಹಸಲಿಗೆಗಳಿಂದ ವರ್ತಿಸುತ್ತಿರುವುದನ್ನು ನೋಡಿದ ನಂತರ, ಕೆಲವರು ಭಾರತದ ಪರಿಸ್ಥಿತಿಯನ್ನು ಸ್ವಲ್ಪ ಹೆಚ್ಚು ವಸ್ತುನಿಷ್ಠವಾಗಿ ನೋಡಲು ಆರಂಭಿಸಿದ್ದಾರೆ.

ನಮ್ಮ ಪ್ರಚಾರತಂತ್ರ ಕೂಡ ತೀರಾ ಕಳಪೆಯಾಗಿದೆ. ಪ್ರಚಾರದ ಹೊಣೆ ನಿರ್ವಹಿಸುತ್ತಿರುವ ನಮ್ಮ ಜನರ ಕಷ್ಟಗಳ ಅರಿವು ನಮಗಿದೆ. ಆದರೆ ಇದೇ ಕಾರಣಕ್ಕಾಗಿ ನಮ್ಮ ಅಭಿಪ್ರಾಯಗಳನ್ನು ವ್ಯಾಪಕಗೊಳಿಸುವುದಕ್ಕಾಗಿ, ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕಾಗಿದೆ. ಪಾಕಿಸ್ತಾನವು ಸಂಯುಕ್ತ ಸಂಸ್ಥಾನಗಳ ರಕ್ಷಣಾ ಪಡೆಯ ಮಿತ್ರನಾಗಿರುವುದರಿಂದಾಗಿ (ಮಿಲಿಟರಿ ಅಲೀ) ನಿಶ್ಚಿತವಾಗಿಯೇ ಅದು ನಮಗಿಂತಲೂ ಹೆಚ್ಚಿನ ಅನುಕೂಲ ಸ್ಥಿತಿಯಲ್ಲಿದೆ; ಆದರೆ ಈ ಕೊರತೆಯನ್ನು ಸುಲಭವಾಗಿ ನಾವು ಪರಿಹರಿಸಿಕೊಳ್ಳಬಹುದಾಗಿದ್ದಿತು. ಏಕೆಂದರೆ, ತರ್ಕ ಮತ್ತು ಸತ್ಯ ಎರಡೂ ಯಾವಾಗಲೂ ನಮ್ಮ ಪಕ್ಷದಲ್ಲಿಯೇ ಇವೆ. ಅದೂ ಅಲ್ಲದೇ, ನಾವು ಯಾವುದೇ ರಕ್ಷಣಾ ಒಪ್ಪಂದಕ್ಕೆ ಸೇರದಿದ್ದರೂ, ಸಂಯುಕ್ತ ಸಂಸ್ಥಾನಗಳ ಜನರ ಬಗೆಗೆ ನಿಜವಾದ– ಪರಿಶುದ್ಧವಾದ– ಸ್ನೇಹ ಮತ್ತು ಗೌರವಗಳಿದ್ದವು. ಈ ಭಾವನೆಯನ್ನು ಸಮರ್ಪಕವಾದ ರೀತಿಯಲ್ಲಿ ಚಾಲಕಶಕ್ತಿಯಾಗಿ ಬಳಸಿಕೊಂಡಿದ್ದರೆ, ನಮ್ಮ ಪರಿಸ್ಥಿತಿಯನ್ನು ಹದಗೆಡಿಸಿರುವಂತಹ ತಪ್ಪು ಅರ್ಥಗಳು, ಅಪಾರ್ಥಗಳು ಅಲ್ಲಿ ಇರುತ್ತಿರಲಿಲ್ಲ.

ಅಮೆರಿಕದ ಪ್ರಜೆಗಳಿಗೆ ಒಂದು ಡಾಲರಿನ ಹೆಚ್ಚಿಗೆ ತೆರಿಗೆ ನೀಡಬೇಕಾಗುತ್ತದೆಂಬ ವಾಸ್ತವತೆಯ ನಡುವೆಯೂ, ಭಾರತ ಮತ್ತು ಇತರ ಎಲ್ಲಾ ಅಭಿವೃದ್ಧಿ ಹೊಂದದಿರುವ ದೇಶಗಳಿಗೆ ನೆರವು ನೀಡಬೇಕೆನ್ನುವ ಅವಶ್ಯಕತೆಯ ಸಾಮಾನ್ಯ ಅರಿವು ಅಲ್ಲಿನ ಜನರಲ್ಲಿದೆ. ನಮ್ಮ ಸಮಸ್ಯೆಗಳ ಬಗೆಗೆ ಅವರಲ್ಲಿ ಸಹಾನುಭೂತಿಯೂ ಇದೆ ಮತ್ತು ನಾವು ಆ ಸಮಸ್ಯೆಗಳಿಂದ ಆಚೆ ಬರಲು, ಅವರು ತಮಗೆ ಸಾಧ್ಯವಾದ ಎಲ್ಲ ನೆರವನ್ನೂ ನೀಡಲು ಇಚ್ಛಿಸುತ್ತಾರೆ. ಇದು ವ್ಯಾಪಕವಾಗಿ ಹರಡಿರುವ ಭಾವನೆ ಮತ್ತು (ಅಮೆರಿಕನ್) ಕಾಂಗ್ರೆಸ್ಸಿನಿಂದ ಕಾಲಕಾಲಕ್ಕೆ ಮಾಡಲ್ಪಡುತ್ತಿರುವ ವಿದೇಶೀ ನೆರವಿನ ಕಡಿತವು ಖಂಡಿತವಾಗಿಯೂ ಅಲ್ಲಿನ ಜನಗಳ ಅಭಿಪ್ರಾಯವನ್ನು ಸರಿಯಾಗಿ ಪ್ರತಿಬಿಂಬಿಸುವುದಿಲ್ಲ. ಇದು ಕೇವಲ ಕಾಕತಾಳೀಯವಿರಬಹುದು, ಆದರೆ, ಕಾಂಗ್ರೆಸ್ಸಿನ ನೀತಿಯ ಬಗೆಗೆ ಅಸಮ್ಮತಿಯನ್ನು ವ್ಯಕ್ತಪಡಿಸದೇ ಇದ್ದ ಒಬ್ಬನೇ ಒಬ್ಬ ವ್ಯಕ್ತಿಯನ್ನೂ ನಾನು ಭೇಟಿ ಮಾಡಲಿಲ್ಲ.

ಕೆಲವು ಭಾಗಗಳಲ್ಲಿ ತಮ್ಮ ನೆರವಿಗೆ ಪ್ರತಿಯಾಗಿ ಭಾರತದಿಂದ ಏನನ್ನಾದರೂ ಪಡೆಯಬೇಕೆಂಬ ಅಭಿಲಾಷೆಯೂ ಇದೆ. ಒಬ್ಬ ಅಮೆರಿಕದ ಪ್ರೊಫೆಸರ್ ಒಪ್ಪಿಕೊಂಡಂತೆ, ಸಂಯುಕ್ತ ಸಂಸ್ಥಾನಗಳು ಭಾರತಕ್ಕೆ ತನ್ನ ಐಹಿಕ, ಲೌಕಿಕ

ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯ ನೀಡಿದರೆ, ಅದಕ್ಕೆ ಬದಲಾಗಿ ಭಾರತವು ಸಂಯುಕ್ತ ಸಂಸ್ಥಾನಗಳ ಜನರಿಗೆ ತಮ್ಮ ಬಿಗಿದ ನರಗಳನ್ನು ಸಡಿಲಿನ ಸಾಂತ್ವ ಪಡಿಸಿಕೊಳ್ಳುವುದನ್ನು ಭಾರತವು ಕಲಿಸಿಕೊಡಬೇಕು. ಖಂಡಿತವಾಗಿಯೂ ಪರಸ್ಪರ ಪೂರಕವಾಗುವಂತಹ ಅನೇಕ ಸಂಗತಿಗಳು ಎರಡೂ ದೇಶಗಳಲ್ಲಿ ಇವೆ ಮತ್ತು ಈ ವಿಷಯದಲ್ಲಿ ಸರಿಯಾದ ಕ್ರಮವನ್ನು ತೆಗೆದುಕೊಂಡರೆ, ಅದು ಕೇವಲ ಪರಸ್ಪರ ಸಹಾಯ ಮತ್ತು ಪ್ರಯೋಜನವನ್ನು ಮಾತ್ರ ಉಂಟು ಮಾಡುವುದಿಲ್ಲ. ಆದರೆ ಜೊತೆಗೆ ಎರಡು ರೀತಿಯ ಜೀವನಗಳ ಮಾದರಿಯಲ್ಲಿ ಸಮನ್ವಯವನ್ನು ತರಬಲ್ಲದು. ಇದು ಸಮೃದ್ಧ ಮತ್ತು ಸಂತೃಪ್ತ ಮಾನವತೆಯ ವಿಕಾಸಕ್ಕೆ ಅತ್ಯಂಥ ಅವಶ್ಯಕವಾದುದಾಗಿದೆ.

ಸಂಯುಕ್ತ ಸಂಸ್ಥಾನಗಳು, ವಿಶ್ವದಲ್ಲಿನ ತನ್ನ ಸ್ಥಾನಮಾನಗಳ ಮತ್ತು ಅದರ ಪರಿಣಾಮವಾದ ಹೊಣೆಗಳ ಬಗೆಗೆ ಅರಿತಿರುವುದನ್ನು ಸುಲಭವಾಗಿ ತಿಳಿಯಬಹುದು ಮತ್ತು ಅನುಭವಿಸಬಹುದು. ಅದರ ಬಹುತೇಕ ನೀತಿ, ನಿರ್ಧಾರಗಳು ಕೆಲವು ಖಚಿತವಾದ, ಅರ್ಥವ್ಯವಸ್ಥೆ, ರಕ್ಷಣೆ ಅಥವಾ ರಾಜಕೀಯ ಅನುಕೂಲಗಳ ಆಧಾರದ ಮೇಲೆ ರೂಪುಗೊಂಡಿವೆ; ಆದರೆ ಜನರು ತಮ್ಮ ಸತತವಾದ ಬೆಂಬಲವನ್ನು, ಈ ನಿರ್ಧಾರಗಳಿಗೆ ಉಳಿಸಿಕೊಳ್ಳುವುದಕ್ಕೆ ಇವುಗಳೇ ಮೂಲಭೂತವಾದ ಭಾವನೆಗಳಲ್ಲ. ವಿಶೇಷವಾಗಿ ಎರಡನೆಯ ಮಹಾಯುದ್ಧದನಂತರ, ಅಮೇರಿಕದ ಜನರ ಮನೋಧರ್ಮದಲ್ಲಿ ನಿರ್ದಿಷ್ಟವಾಗಿಯೂ ಒಂದು ಕ್ರಾಂತಿಯಾಗಿದೆ. ಅಂತಹದೊಂದು ಪ್ರಬಲವಾದ, ಮಣಿಸುವಂತಹ ಪ್ರಭಾವದ ಒತ್ತಡದ ಅಡಿಯಲ್ಲಿ, ಸರ್ಕಾರವು ಇತರ ರಾಷ್ಟ್ರಗಳ ಬಗೆಗೆ ಒಂದು ರೀತಿಯ ದರ್ಪ, ಪ್ರತಿಷ್ಠೆಗಳ ಭಾವನೆಯನ್ನು ತಳೆಯಬಹುದೆಂಬ 'ಬ್ರಿಟಿಷರು' ಬಿಳಿಯ ಮನುಷ್ಯನ ಜವಾಬ್ದಾರಿ– ಎಂದು ಭಾವಿಸಿದಂತೆ– ಭಯ, ಆತಂಕಗಳು ಕೆಲವರಲ್ಲಿ ಮನೆಮಾಡಿವೆ. ಆದರೆ, ಬದಲಾದ ಪರಿಸ್ಥಿತಿಗಳು, ಚಾರಿತ್ರ್ಯ ಮತ್ತು ಪರಂಪರೆಗಳಲ್ಲಿನ ವ್ಯತ್ಯಾಸಗಳು ಇವುಗಳಿಂದಾಗಿ ಮತ್ತು ಸಂಯುಕ್ತ ಸಂಸ್ಥಾನಗಳು ತಮ್ಮ ದೇಶದಲ್ಲಿ ಹೊಂದಿರುವ ಪ್ರಗತಿಯ ಬಗೆಗಿನ ಅಗಾಧ ಸಾಮರ್ಥ್ಯಗಳಿಂದಾಗಿ, ಆಂಗ್ಲೋ–ಸಾಕ್ಸನ್ ಜನಾಂಗದ ಇತಿಹಾಸವು ಪುನರಾವರ್ತಿಸುವ ಸಾಧ್ಯತೆ ಇಲ್ಲವೆಂದು ನಾನು ಭಾವಿಸುತ್ತೇನೆ.

ದೀರ್ಘಕಾಲದ ತನಕ ವಸಾಹತು ಆಳ್ವಿಕೆಯಲ್ಲಿ ಮೋಡಿಗೊಳಗಾದಂತೆ, ಅಧೀನರಾಗಿದ್ದ ಜನರು, ಸಹಜವಾಗಿಯೇ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು– ಅದೃಷ್ಟ ಪರೀಕ್ಷೆ ಮಾಡಿಕೊಳ್ಳಲು– ಪ್ರಯತ್ನಿಸುವುದನ್ನು ಬಯಸುವುದಿಲ್ಲ. ಆದರೆ, ಯಾವುದೇ ಎರಡು ರಾಷ್ಟ್ರಗಳ ನಡುವೆ ಆ ದೇಶಗಳು ಮತ್ತೆ ತಲೆಯೆತ್ತಿ ನಿಲ್ಲುವಂತಹ ಮೂಲಚೈತನ್ಯವನ್ನು ಅರ್ಥಮಾಡಿಕೊಳ್ಳುವ ಮತ್ತು ಪ್ರಶಂಸಿಸುವ ಮೂಲಕ, ಗಟ್ಟಿ ಆಧಾರದ ಮೇಲೆ ಸಂಬಂಧಗಳನ್ನು ನಿರ್ಮಾಣ ಮಾಡಿಕೊಳ್ಳುವುದು, ಸಮಯಸಾಧಕ



ಅಥವಾ ಸಮಯೋಚಿತ ಆಧಾರದ ಮೇಲೆ ಸಂಬಂಧಗಳನ್ನು ನಿರ್ಮಿಸಿಕೊಳ್ಳುವುದು ಅಪೇಕ್ಷಣೀಯವೂ, ಅಗತ್ಯವೂ ಆಗಿದೆ. ಸಂಯುಕ್ತ ಸಂಸ್ಥಾನಗಳ ಭೌತಿಕ ಅಭಿವೃದ್ಧಿ, ಉನ್ನತಿ ಹಾಗೂ ಸಂಪತ್ತುಗಳಿಗಿಂತಲೂ ಹೆಚ್ಚಾಗಿ ಪುನರುಜ್ಜೀವನಗೊಳ್ಳುವಂತಹ ಅದರ ಈ ಭಾವನೆ, ಚೈತನ್ಯಗಳೇ ಅವುಗಳ ಎಲ್ಲ ಕಾರ್ಯಚಟುವಟಿಕೆಗಳಿಗೆ ಉದ್ದೇಶವನ್ನು ನೀಡಿರುವಂತೆ ತೋರುತ್ತದೆ. ಕ್ಯೂಬಾದಲ್ಲಿ ಪ್ರಾಕೃತಿಕ ವಿಪತ್ತಿಗೆ ಒಳಗಾದವರಿಗೆ ನೆರವು ನೀಡಬೇಕೆಂಬ ಅವರ ಅಭಿಲಾಷೆ ಅಥವಾ ಯು.ಎಸ್.ಎಸ್.ಆರ್. ಮತ್ತು ಇತರ ಪೂರ್ವಯೂರೋಪಿನ ರಾಷ್ಟ್ರಗಳಿಗೆ ಗೋಧಿಯನ್ನು ಸರಬರಾಜು ಮಾಡಬೇಕೆನ್ನುವ ತೀರ್ಮಾನ ಇವೆಲ್ಲದರ ಹಿಂದೆಯೂ ಇದೇ ಭಾವನೆಯನ್ನು ಗುರುತಿಸಬಹುದು. ಭಾರತದ ಸಂಕಷ್ಟದ ಸಮಯದಲ್ಲಿ, ಯಾವುದೇ ಹಿಡಿತವಿಲ್ಲದೆ ಸಹಾಯ ಕೂಡ ಜನರ ಈ ಪ್ರಧಾನ ಅಭಿಲಾಷೆಯ ಅನುಮತಿಯನ್ನು ಪಡೆದಿತ್ತು. ಈ ಭಾವನೆಯು ಸಮರ್ಪಕವಾದ ಹಾಗೂ ಪ್ರಯೋಜನಕಾರೀ ಮಾರ್ಗಗಳನ್ನು ಅಭಿವ್ಯಕ್ತಿಗೆ ಕಂಡುಕೊಂಡರೆ, ಅದು ಬೇರೆ ರಾಷ್ಟ್ರಗಳಿಗೂ ದೊಡ್ಡ ಸಂಪತ್ತಾಗುತ್ತದೆ ಮತ್ತು ಸಂಯುಕ್ತ ಸಂಸ್ಥಾನಗಳ ವ್ಯಕ್ತಿತ್ವವು ಮತ್ತಷ್ಟು ಬೆಳೆಯಲು, ಅಭಿವೃದ್ಧಿ ಹೊಂದಲು ಅದು ತನ್ನದೇ ರೀತಿಯಲ್ಲಿ ಸಹಾಯಮಾಡುತ್ತದೆ.

(೧೯೬೩ ಡಿಸೆಂಬರ್ ೩೦)

# ವಿದೇಶಾಂಗ ನೀತಿ ಮತ್ತು ರಾಷ್ಟ್ರರಕ್ಷಣೆ

ಕಳೆದ ತಿಂಗಳು ಭೂಪಾಲಿನಲ್ಲಿ ನಡೆದ ಭಾರತೀಯ ಜನಸಂಘದ ಸಮಾವೇಶವು, ಭಾಗವಹಿಸಿದ್ದ ಪ್ರತಿನಿಧಿಗಳಿಗೆ, ಅವಶ್ಯಕವೆನಿಸಿದರೆ, ಚೀನಾದ ಆಕ್ರಮಣದ ಹಿನ್ನೆಲೆಯಲ್ಲಿ, ಪಕ್ಷದ ಕಾರ್ಯನೀತಿ ಹಾಗೂ ಕಾರ್ಯಕ್ರಮಗಳ, ಮರುಮೌಲ್ಯಮಾಪನ ಹಾಗೂ ಮರುಹೊಂದಾಣಿಕೆಯ ಮನೋಧರ್ಮಗಳ ಬಗೆಗೆ ಆಲೋಚಿಸಲು ಅವಕಾಶವನ್ನು ಒದಗಿಸಿತು. ಮುಖ್ಯವಾಗಿ ಇದೇ ಉದ್ದೇಶದಿಂದಲೇ ಇಂದೋರಿನಲ್ಲಿ, ಮುಂಚೆ ನಡೆಸಬೇಕೆಂದಿದ್ದ ಬೃಹತ್ ಸಮಾವೇಶದ ವಿಚಾರವನ್ನು ಬದಲಾಯಿಸಲಾಯಿತು. ಸಂಖ್ಯೆಯ ಅಗಾಧತೆಯಿಂದಾಗಿ ವಿಷಯಗಳ ಬಗೆಗೆ ಗಂಭೀರವಾಗಿ ಆಲೋಚಿಸಲು, ಚರ್ಚಿಸಲು ಕಷ್ಟವಾಗುತ್ತದೆ. ಇಲ್ಲಿಯೂ ಪ್ರತಿನಿಧಿಗಳ ಸಂಖ್ಯೆಯು ನಿರೀಕ್ಷೆಗಿಂತ ಹೆಚ್ಚಾಗಿದ್ದು, ಸುಮಾರು ೧,೩೦೦ ರಷ್ಟಿತ್ತು. ಆದರೂ, ಆ ಸಂಖ್ಯೆಯು ಅಚ್ಚುಕಟ್ಟಾಗಿ ನಿರ್ವಹಿಸಬಹುದಾದ ಪರಿಮಿತಿಯಲ್ಲಿತ್ತು. ಅದೂ ಅಲ್ಲದೆ, ಪ್ರತಿನಿಧಿಗಳು ಪ್ರಸಕ್ತ ಪರಿಸ್ಥಿತಿಯ ಬಗೆಗೆ ಅಸಾಧಾರಣ ಜಾಗೃತಿಯನ್ನು ಪ್ರದರ್ಶಿಸಿದರು ಮತ್ತು ಅವರು ತಮ್ಮ ಹೊಣೆಗಾರಿಕೆಯ ಬಗೆಗೆ ಅರಿವುಳ್ಳವರಾಗಿದ್ದು, ಅತ್ಯಂತ ರಚನಾತ್ಮಕ ವಿಧಾನದಲ್ಲಿ ಪ್ರತಿಸ್ಪಂದಿಸಿದರು. ಅವರ ಇತ್ಯಾತ್ಮಕ ಹಾಗೂ ಸಹಕಾರಪೂರ್ಣ ವಿಧಾನದಿಂದಲೇ ಕಾರ್ಯನೀತಿಯ ಎಲ್ಲ ಅಂಶಗಳನ್ನೂ ಸಂಪೂರ್ಣವಾಗಿ ಚರ್ಚಿಸಲು ಸಾಧ್ಯವಾಯಿತು ಮತ್ತು ಬಹುತೇಕ ಎಲ್ಲ ಠರಾವುಗಳನ್ನೂ ನಿರ್ಣಯ ಸರ್ವಾನುಮತದಿಂದ ಒಪ್ಪಲಾಯಿತು. ಪ್ರಸಿದ್ಧ ಕಾನೂನುತಜ್ಞರು, ಕಾನೂನು ನಿರ್ಮಾಪಕರು ಮತ್ತು ಕಾನೂನು ವ್ಯಾಖ್ಯಾನಕಾರರ ಪ್ರಕಾರ ಮುಖ್ಯವೆಂದು ತೋರುವ ತಾಂತ್ರಿಕತೆಗಳಿಗೆ, ಚರ್ಚೆಯ ಉಸಿರು ಕಟ್ಟಿಸಲು ಅವಕಾಶ ನೀಡಲಿಲ್ಲ. ಈ ರೀತಿಯ ರಾಜಕೀಯ ಸಮಾವೇಶದಲ್ಲಿ ಮುಕ್ತ ಹಾಗೂ ನೇರವಾದ, ದೃಷ್ಟಿಕೋನಗಳ ವಿನಿಮಯದ ಅವಶ್ಯಕತೆಯಿರುತ್ತದೆ. ಹಾಗಾದಾಗ ಕಾರ್ಯಕರ್ತರು ಇಂತಹ ದೃಷ್ಟಿಕೋನಗಳ ಮಹತ್ವವನ್ನು ತಾವೂ ಮನಗಾಣುತ್ತಾರೆ ಮತ್ತು ಇದರಿಂದ ದೇಶಾದ್ಯಂತ ಜನ ಇದರ ಬಗೆಗೆ ಮನಗಾಣಿಸುತ್ತಾರೆ. ವಿಷಯಗಳ ಸಮಿತಿಯಲ್ಲಿನ ಚರ್ಚೆಯು ಈ ಉದ್ದೇಶವನ್ನು ಬಹುಮಟ್ಟಿಗೆ ಸಾಧಿಸಿತು. ಅಧಿವೇಶನದ ಸ್ಥಳವನ್ನು ಭೂಪಾಲಿಗೆ ಬದಲಾಯಿಸುವ ಅವರ ವಿವೇಕಯುತ ನಿರ್ಧಾರಕ್ಕಾಗಿ ಮಧ್ಯಪ್ರದೇಶದ ಜನಸಂಘ ಮತ್ತು ಅದರ ಮಹಾಕಾರ್ಯದರ್ಶಿ ಕುಶಭಾವು ಠಾಕ್ರೆ



ಅವರನ್ನು ವಿಶೇಷವಾಗಿ ಅಭಿನಂದಿಸಬೇಕಾಗಿದೆ. ನಗರದ ಗದ್ದಲದಿಂದ ದೂರವಾಗಿದ್ದು ಸುಂದರ ದೃಶ್ಯಾವಳಿಗಳನ್ನು ತೋರುತ್ತಿದ್ದ, ಶಾಸನಸಭೆಯ ವಿಶ್ರಾಂತಿಗೃಹಗಳು ಈ ಉದ್ದೇಶಕ್ಕೆ ಅತ್ಯಂತ ಸೂಕ್ತವಾಗಿದ್ದವು.

ಚೀನಾದ ಆಕ್ರಮಣವು, ಭಾರತೀಯ ಜನಸಂಘಕ್ಕೆ ದಿಢೀರನೆ ಬಂದೆರಗಿದ ಆಶ್ಚರ್ಯವಾಗಿರಲಿಲ್ಲ. ಡ್ರಾಗನ್‌ನ ಕುತಂತ್ರದ ಬಗೆಗೆ ನಮಗೆ ಅರಿವಿದ್ದಿತು ಮತ್ತು ಅದರ ಬಗೆಗೆ ಮತ್ತು ದೇಶಕ್ಕೆ ಸಮೀಪಿಸುತ್ತಿರುವ ಅಪಾಯದ ಬಗೆಗೆ ನಾವು ಸರ್ಕಾರಕ್ಕೆ ಒಂದೆಸಮನೆ ಎಚ್ಚರಿಸುತ್ತಲೇ ಇದ್ದೆವು. ತನ್ನ ಕಾರ್ಯನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವಾಗ ಜನಸಂಘವು ಈ ಸಂಭವನೀಯ ಸಂಗತಿಯನ್ನು ಪರಿಗಣಿಸಿತ್ತು. ಆದ್ದರಿಂದಲೇ, ಭೂಪಾಲಿನಲ್ಲಿ ಅಂಗೀಕೃತವಾದ ಯಾವುದೇ ಠರಾವುಗಳೂ, ಸಂಘದ ಹಿಂದಿನ ಕಾರ್ಯನೀತಿಗಳಿಂದ ಯಾವುದೇ ಬೇರ್ಪಡೆಯನ್ನೂ ಸೂಚಿಸುವುದಿಲ್ಲ. ಜನಸಂಘದ ನಿಲುವಿನ ಮರುಮೌಲ್ಯಮಾಪನ ಮತ್ತು ಮರುಹೇಳಿಕೆಗಳು ಮಾತ್ರ ಅಲ್ಲಿ ಇದ್ದಿತು. ಹೊಸದೇನಾದರೂ ಅಲ್ಲಿ ಇದ್ದಿದ್ದೇ ಆದರೆ ಅದು ವಿಶೇಷವಾಗಿ ಪ್ರಸ್ತುತ ಸಂದರ್ಭಕ್ಕೆ ಸಂಬಂಧಿಸಿದಂತೆ ಪಕ್ಷದ ಕಾರ್ಯಕ್ರಮವನ್ನು ಹೆಚ್ಚು ವಿವರವಾಗಿ ಚರ್ಚಿಸುವುದು ಮಾತ್ರ. A. Bomb ಅನ್ನು ತಯಾರಿಸುವ ಪ್ರಯತ್ನದ ಬಗೆಗೆ, ಸರ್ಕಾರಕ್ಕೆ ಮಾಡಬೇಕಾದ ಶಿಫಾರಸ್ಸು ವಿಶೇಷವಾಗಿ ದಾಖಲಾಗಬೇಕಾಗಿದೆ (ಶ್ರೀ ರಾಮಚಂದ್ರ ಬಡೆಯವರ ತಿದ್ದುಪಡಿ, ಏಕೆಂದರೆ ವಾರಣಾಸಿಯ ಸಮಾವೇಶದಲ್ಲಿ, ಭಾರತೀಯ ಪ್ರತಿನಿಧಿಸಭಾ ಅಂತಹ ಸಲಹೆಯನ್ನು ತಿರಸ್ಕರಿಸಿತ್ತು. ನಮ್ಮ ಬಾಗಿಲುಗಳಲ್ಲಿ ಬಂದು ನಿಂತ ಹಳದಿ ಅಪಾಯದಿಂದಾಗಿ, ಆಗ, ಅವುಗಳ ಜೊತೆ ಪರಿಶೀಲಿಸಲಾದ ಅನೇಕ ವ್ಯಾಪಕ ವಿಷಯಗಳು ತಮ್ಮ ಮಹತ್ವವನ್ನು ಕಳೆದುಕೊಂಡಂತೆ ತೋರುತ್ತದೆ.

ಕಾರ್ಯಕಲಾಪಗಳು ಮತ್ತು ನಿರ್ಣಯಗಳು ಪತ್ರಿಕೆಗಳಲ್ಲಿ ಸಾಕಷ್ಟು ಉತ್ತಮವಾಗಿ ವರದಿಯಾಗಿವೆ. ಆದಾಗ್ಯೂ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಪರಸ್ಪರ ವಿರುದ್ಧವಾದ ಒಂಬತ್ತು ವರದಿಗಳು ಬಂದಿವೆ ಮತ್ತು ಅವುಗಳ ಆಧಾರದ ಮೇಲೆ ಕೆಲವು ಪ್ರಮುಖ, ಮುಖಂಡ, ಲೇಖಕರು, ಜನಸಂಘದಲ್ಲಿ ಪರಸ್ಪರ ವಿರೋಧವಾದ ಹಾಗೂ ಬೇರೆ ಬೇರೆ ಮಾರ್ಗಗಳ ದೃಷ್ಟಿಕೋನ ಅಸ್ತಿತ್ವದಲ್ಲಿದೆಯೆಂದು ತೋರಿಸಲು ಪ್ರಯತ್ನಿಸಿದ್ದಾರೆ. ಜನಸಂಘವು ಒಂದು ಪ್ರಜಾಸತ್ತಾತ್ಮಕ ಸಂಘಟನೆಯಾಗಿದ್ದು, ಅದು ಬಹಳ ಕಠಿಣವಾದ ನಿಯಮಾನುಸರಣೆಯನ್ನು ಬಯಸುವುದಿಲ್ಲ, ಅದೂ ವಿಶೇಷವಾಗಿ ಕಾರ್ಯನೀತಿಯ ನಿರ್ಣಯಗಳು ಇನ್ನೂ ರೂಪುಗೊಳ್ಳುವ ಹಂತದಲ್ಲಿರುವಾಗ, ಆದರೆ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ, ಈ ತಪ್ಪುಗ್ರಹಿಕೆಯ ಭಿನ್ನಾಭಿಪ್ರಾಯಗಳು ಕೇವಲ ತೋರಿಕೆಯವು, ಸತ್ಯವಾದದ್ದಲ್ಲ ಎಂದು ನಿಶ್ಚಯವಾಗಿ ಹೇಳಬಹುದು. ಸರ್ಕಾರದ ಪ್ರಸ್ತುತ ಕಾರ್ಯನೀತಿಯನ್ನು

ಟೀಕಿಸುವುದರ ಮೇಲಿನ ಟೀಕೆಯು ಬದಲಾಗುವ ಮಹತ್ವದಿಂದಾಗಿ ಈ ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಯಾವುದಾದರೂ ಒಂದು ವಿಶಿಷ್ಟ ಸಂದರ್ಭವು, ಪಕ್ಷದ ವಿದೇಶಾಂಗ ನೀತಿಯ ಇತಾತ್ಮಕವಾದ ಖಚಿತ ಮರುನಿರೂಪಣೆಯನ್ನು ಒತ್ತಾಯಿಸದಿದ್ದರೆ, ಜನರು ಕೆಲವು ನಿರ್ದಿಷ್ಟ ಟೀಕೆಗಳ ಆಧಾರದ ಮೇಲೆ ಕೆಲವು ಊಹೆಗಳನ್ನು ರೂಪಿಸಿಕೊಳ್ಳುತ್ತಾರೆ– ದುರದೃಷ್ಟವಶಾತ್ ಈಗಿನ ಸಂದರ್ಭದಲ್ಲಿ ಅದು ಯಾವಾಗಲೂ ಸಮರ್ಪಕವಾಗಿಲ್ಲ– ಈ ಸಂಬಂಧದಲ್ಲಿ ಜನಸಂಘದ ಅಭಿಪ್ರಾಯಗಳನ್ನು, ಅದು ಕಾರ್ಯಕಾರಿ ಸಮಿತಿ ಮತ್ತು ಅಧೀನ ಸಮಿತಿಗಳಲ್ಲಿ ಸರ್ವಾನುಮತದಿಂದ ಅನುಮೋದಿಸಲ್ಪಟ್ಟ ಅದರ ನಿರ್ಣಯಗಳ ಆಧಾರದ ಮೇಲೆ ತೀರ್ಮಾನಿಸುವುದು ಉತ್ತಮ. ಪತ್ರಿಕೆಗಳಲ್ಲಿ ಪರಸ್ಪರ ವಿರೋಧವೆನ್ನಿಸುವ ವರದಿಗಳು ಇದ್ದರೂ – ಈ ವರದಿಗಳು, ಇನ್ನೂ ಸಬ್ಜೆಕ್ಟ್ಸ್ ಕಮಿಟಿಗಳಲ್ಲಿ ಠರಾವುಗಳು ಚರ್ಚಿಸಲ್ಪಡುತ್ತಿದ್ದಾಗಲೇ ಪ್ರಕಟವಾಗಿದ್ದಂಥವು – ಪ್ರತಿನಿಧಿಗಳಿಗೆ ಸಂಬಂಧಿಸಿದಂತೆ ಯಾವುದೇ ಭಿನ್ನಾಭಿಪ್ರಾಯಗಳೂ ಇರಲಿಲ್ಲ. ವಿವಾದಾಸ್ಪದವೆನ್ನಲಾಗುವ ಅಲಿಪ್ತತೆ, ಹೊಂದಾಣಿಕೆ ಅಥವಾ ಅಲಿಪ್ತತೆಯ ವಿಷಯದ ಬಗೆಗೆ ಯಾರೊಬ್ಬರೂ ಯಾವುದೇ ತಿದ್ದುಪಡಿಯನ್ನು ಸೂಚಿಸಲಿಲ್ಲ.

ಚೀನಾದಿಂದ ಆಕ್ರಮಣವಾದಾಗಿನಿಂದೂ ದೇಶದ ವಿದೇಶಾಂಗ ನೀತಿಗಿಂತಲೂ ಹೆಚ್ಚಾಗಿ ಬೇರೆ ಯಾವ ವಿಷಯವೂ ಹೆಚ್ಚು ಚರ್ಚಿಸಲ್ಪಟ್ಟಿಲ್ಲ. ರಕ್ಷಣಾ ಕಾರ್ಯನೀತಿ ಕೂಡಾ ಹಿಂದೆ ಬಿದ್ದಿದೆ. ಈ ಚರ್ಚೆಯು ಮೊದಲನೆಯದಾಗಿ, ರಕ್ಷಣಾ ತಂತ್ರವು, ಮುಖ್ಯವಾಗಿ, ದೇಶದ ವಿದೇಶಾಂಗ ನೀತಿಯನ್ನು ಅವಲಂಬಿಸಿರುತ್ತದೆ ಎಂಬ ತಪ್ಪುಗ್ರಹಿಕೆಯ ಕಲ್ಪನೆಯಿಂದ ಹುಟ್ಟಿದೆ. ಎರಡನೆಯದಾಗಿ, ಪ್ರಸಕ್ತ ಕ್ಲಿಷ್ಟ ಪರಿಸ್ಥಿತಿಯ ಉಪಯೋಗವನ್ನು ಪಡೆದುಕೊಂಡು ನಮ್ಮ ಪಕ್ಷಪಾತ, ಒಲವುಗಳಿಗೆ ತಮ್ಮನ್ನು ಸಂಪೂರ್ಣವಾಗಿ ಬದಲಾಯಿಸಿಕೊಳ್ಳಲು ಬಯಸುವ ನಿರ್ದಿಷ್ಟ ಆಸಕ್ತ ಪಕ್ಷಗಳ ಅಭಿಲಾಷೆಯಿಂದಾಗಿ, ಈ ಮುಖ್ಯ ವಿಷಯವನ್ನು ನೇತ್ಯಾತ್ಮಕ ದೃಷ್ಟಿಕೋನದಿಂದ ನೋಡುವಂತಹ ಕೆಲವು ಜನರೂ ಇದ್ದಾರೆ. ನಾವು ನಮ್ಮ ಹೊರದೇಶದ ಸಂಬಂಧಗಳ ಅಗಾಧ ವಿಸ್ತಾರವನ್ನು ಒಂದೇ ಒಂದು ಪದದಲ್ಲಿ ಅಂದರೆ, ಅಲಿಪ್ತತೆ ಅಥವಾ ಲಿಪ್ತತೆ ಎಂಬುದರಲ್ಲಿ ವಿವರಿಸಲು ಪ್ರಯತ್ನಿಸಿರುವುದರಿಂದಲೂ ಗೊಂದಲಗಳು ಸೃಷ್ಟಿಯಾಗಿವೆ. ಈ ಪದಗಳು ವಿಶಿಷ್ಟ ಪರಿಕಲ್ಪನೆಯನ್ನು, ವಿಶಿಷ್ಟ ಸಂದರ್ಭದಲ್ಲಿ ಪ್ರತಿನಿಧಿಸುತ್ತವೆ ಎನ್ನುವುದನ್ನು ನಾವು ಮರೆಯುತ್ತೇವೆ. ನಾವು ಸಾಧಾರಣೀಕರಣದ ದೋಷವನ್ನು ಮಾಡದಿರೋಣ. ಒಂದು ಕ್ರಿಯಾಶೀಲ ಸನ್ನಿವೇಶದಲ್ಲಿ, ಸ್ಥಾಯೀ ಅಥವಾ ಸ್ಥಗಿತ ವಿಚಾರಗಳಿಗೆ ಅಂಟಿಕೊಂಡಿರುವುದರಿಂದ ಏನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ. ಅದೂ ಅಲ್ಲದೇ ವಿದೇಶಾಂಗ ನೀತಿಯು ಬೇರೆ ಯಾವುದೇ ಕಾರ್ಯನೀತಿಯಂತೆ ಒಂದು ಪಂಥವಾಗಲಾರದು. ಬದಲಾಗುತ್ತಿರುವ ಸನ್ನಿವೇಶಗಳಿಗೆ



ಸೂಕ್ತವಾಗುವಂತೆ ಅದನ್ನು ಅಳವಡಿಸಿಕೊಳ್ಳಬೇಕಾಗಿದೆ.

ಒಂದು ದೇಶದ ವಿದೇಶಾಂಗ ನೀತಿಯು, ಆ ದೇಶದ ಜ್ಞಾನದ ಅರಿವಿನಿಂದ ಉಂಟಾದ ಸ್ವಹಿತ ರಕ್ಷಣೆಯ ಏಕ ಉದ್ದೇಶದಿಂದ ರೂಪುಗೊಳ್ಳಬೇಕೆಂದು ಭಾರತೀಯ ಜನಸಂಘವು ನಂಬುತ್ತದೆ. ಆ ನೀತಿಯು ವಾಸ್ತವವಾಗಿರಬೇಕು ಮತ್ತು ಪ್ರಪಂಚದ ಸರ್ವೇಸಾಮಾನ್ಯವಾದ ಸ್ವಭಾವವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಜನಸಂಘವು ಯಾವಾಗಲೂ ದೇಶದ ರಕ್ಷಣೆಗೆ ಆದ್ಯತೆಯನ್ನು ನೀಡಿರುವುದರಿಂದ, ಈ ಉದ್ದೇಶವನ್ನು ಸಾಧಿಸುವಂತಹ ವಿದೇಶಾಂಗ ನೀತಿಯು ರೂಪುಗೊಳ್ಳಬೇಕೆಂದು ಸಂಘವು ಭಾವಿಸುತ್ತದೆ. ವಿದೇಶಾಂಗ ನೀತಿಯ ಕೇವಲ ಜಾಣತನದ ಕುತಂತ್ರ, ಕೌಶಲ್ಯಗಳಿಂದ, ಯಾವುದೇ ದೇಶವನ್ನು– ಭಾರತವನ್ನು ಖಂಡಿತವಾಗಿಯೂ– ರಕ್ಷಿಸಲು ಸಾಧ್ಯವಿಲ್ಲವೆಂದು ಜನಸಂಘಕ್ಕೆ ತಿಳಿದಿದೆ.

ಒಂದು ದೇಶದ ಮೇಲೆ ಆಕ್ರಮಣವಾಗುವುದು, ಆ ದೇಶದ ವಿದೇಶಾಂಗನೀತಿಯ ವೈಫಲ್ಯವನ್ನು ಸೂಚಿಸುತ್ತದೆ ಎಂದು ಪರಿಗಣಿಸುವವರು, ವಿದೇಶಾಂಗ ನೀತಿಯ ಮೇಲೆ ಬಹಳ ನಂಬಿಕೆ ಇಡುವಂತೆ ತೋರುತ್ತದೆ. ಕಮ್ಯೂನಿಸ್ಟ್ ಚೀನಾದೊಂದಿಗೆ ಪಂಚಶೀಲ ಒಪ್ಪಂದ ಮಾಡಿಕೊಂಡ ಕಾರಣದಿಂದ ರಕ್ಷಣಾ ದಳ ನಿರ್ಮಾಣವನ್ನು ನಿರ್ಲಕ್ಷಿಸಿ, ಭಾರತ ಸರ್ಕಾರವು ಮಾಡಿದಂತಹ ತಪ್ಪನ್ನೇ ಅವರು ಕೂಡ ಮಾಡುತ್ತಿದ್ದಾರೆ. ಸರ್ಕಾರವು ಅವಾಸ್ತವ ಪ್ರಪಂಚದಲ್ಲಿ ಬದುಕುತ್ತಿದ್ದರೆ, ಅದರ ಟೀಕಾಕಾರರೂ ಕೂಡ ಅಂತಹುದೇ ತಪ್ಪುಗ್ರಹಿಕೆಯ ಕಲ್ಪನೆಗಳನ್ನು ಹಂಚಿಕೊಂಡಿರುವಂತೆ ತೋರುತ್ತದೆ.

ಎರಡನೆಯ ಮಹಾಯುದ್ಧ ಅವಧಿಯಲ್ಲಿ ನೌಕಾದಳದ ಅಡ್ಮಿರಲ್ ಆಗಿದ್ದ ಲಾರ್ಡ್ ಚಾಟ್‌ಫೀಲ್ಡ್ ಬರೆದಿರುವ “ಡಿಫೆನ್ಸ್ ಆಫ್ ದಿ ಎಂಪೈರ್” ಎಂಬ ಲೇಖನದ ಈ ಕೆಳಗಿನ ಉದ್ಧೃತ ಭಾಗವು ಈ ಅಸಮತೋಲನವನ್ನು ಸರಿಪಡಿಸಿಕೊಳ್ಳಲು ನೆರವಾಗುವುದು:

“ವಿದೇಶಾಂಗ ನೀತಿಗೂ ರಕ್ಷಣೆಗೂ ನಡುವೆ ಇರುವ ಸಂಬಂಧವನ್ನು ಅತಿಯಾಗಿ ಉತ್ಪ್ರೇಕ್ಷಿಸುವ ಪ್ರವೃತ್ತಿಯು ಕಂಡುಬರುತ್ತದೆ. ಮೊದಲನೆಯ ಮಹಾಯುದ್ಧದ ನಂತರ, ಮುಂದೆ ಬರಲಿರುವ ದೀರ್ಘಕಾಲದತನಕ ಶಾಂತಿ ಒಪ್ಪಂದಗಳು ಪ್ರಪಂಚದ ವಿದೇಶಾಂಗ ನೀತಿಯನ್ನು ನಿರ್ಧರಿಸುವಂತೆ ಕಂಡುಬಂದಿದ್ದರಿಂದ, ಪರಿಣಾಮವಾಗಿ ಯುದ್ಧಕ್ಕೆ ಬೇಕಾಗುವ ನಮ್ಮ ರಕ್ಷಣಾಬಲವನ್ನೂ, ರಾಷ್ಟ್ರೀಯ ಮತ್ತು ಸಾಮ್ರಾಜ್ಯದ ಅಥವಾ ಪರಮಾಧಿಕಾರದ ಸಂಘಟನೆಗಳನ್ನೂ ನಾವು ಅಲಕ್ಷಿಸಿದೆವು. ಆದರೆ, ಪ್ರಪಂಚದ ಪರಿಸ್ಥಿತಿಯು ಎಷ್ಟೇ ತೃಪ್ತಿಕರವಾಗಿ ಕಂಡು ಬಂದರೂ, ನಾವು ಯಾವಾಗಲೂ ಸಾಕಷ್ಟು ಶಕ್ತರಾಗಿ ಉಳಿಯಬೇಕು. ವಿದೇಶಾಂಗ ನೀತಿಯ ಬಗೆಗೆ ನಿರ್ಧಾರಗಳು ಯಾವ ಕ್ಷಣದಲ್ಲಾದರೂ ಹುಟ್ಟಬಹುದು ಮತ್ತು ತತ್‌ಕ್ಷಣದ

ನಿರ್ಧಾರಗಳ ಅವಶ್ಯಕತೆಯನ್ನು ಬೇಡಬಹುದು; ರಕ್ಷಣೆಗೆ ಸಂಬಂಧಿಸಿದ ತೀರ್ಮಾನಗಳನ್ನು ದಿಢೀರನೆ ಮಾಡಲಾಗುವುದಿಲ್ಲ. ಏಕೆಂದರೆ, ನಿಮ್ಮ ಶಕ್ತಿಯನ್ನು, ಸಾಮರ್ಥ್ಯವನ್ನು ಬದಲಾಯಿಸಲು ದೀರ್ಘಕಾಲ ಬೇಕಾಗುತ್ತದೆ. ರಕ್ಷಣಾ ತಂತ್ರಗಳು (ಯೋಜನೆಗಳು) ಆದ್ದರಿಂದ, ಬಹಳ ಮುಂಚೆಯೇ ಆಲೋಚಿಸಬೇಕಾದಂತಹುವು."

ನಾವು ಸಮರ್ಪಕವಾಗಿ ದೇಶದ ರಕ್ಷಣೆಗೆ ಸಿದ್ಧತೆಯನ್ನು ಮಾಡಿಕೊಳ್ಳದೇ ಇದ್ದರೆ, ಅದು ವಿದೇಶಾಂಗ ನೀತಿಯ ದೋಷವಲ್ಲ. ನಮಗೆ ನೆರವಿನ ಅವಶ್ಯಕತೆಯು ಕಂಡುಬಂದಾಗ, ಇದೇ ವಿದೇಶಾಂಗ ನೀತಿಯು, ನಾವು ಮಿತ್ರರಾಷ್ಟ್ರಗಳಿಂದ ಅಗಾಧವಾದ ರಕ್ಷಣಾ ನೆರವನ್ನು (ಮಿಲಿಟರಿ ನೆರವನ್ನು) ತೆಗೆದುಕೊಳ್ಳುವುದರಿಂದ ನಮ್ಮನ್ನು ತಡೆಯಲಿಲ್ಲ ಮತ್ತು ಈಗ ಪ್ರಸಕ್ತ ನೀತಿಯು ಬದಲಾಯಿಲಸ್ಪಲ್ಪಟ್ಟು, ಸರ್ಕಾರವು ಈಗಲೂ ತನ್ನ ದೇಶದ ರಕ್ಷಣಾಬಲದ ನಿರ್ಮಾಣವನ್ನು ನಿರ್ಲಕ್ಷಿಸುವುದನ್ನು ಮುಂದುವರೆಸಿದರೆ, ಇನ್ನು ಮುಂದೆ ಯಾವುದೇ ಆಕ್ರಮಣವಿರುವುದಿಲ್ಲ ಎಂದಾಗಲೀ ಅಥವಾ ಒಂದು ವೇಳೆ ಆಕ್ರಮಣವಾದರೆ, ಅದನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲಾಗುತ್ತದೆ ಎಂದಾಗಲೀ, ಯಾರಾದರೂ ಭರವಸೆ ನೀಡಬಹುದೇ? ವಿದೇಶಾಂಗ ನೀತಿಯು ರಕ್ಷಣಾ ನೀತಿಯನ್ನು ಆಕ್ರಮಿಸಲಾರದು, ಆದರೆ ಅದು ರಕ್ಷಣಾನೀತಿಗೆ ಪೂರಕವಾಗಬಲ್ಲದು.

ಅಲಿಪ್ತ ನೀತಿಯ – ತಾಟಸ್ಥ್ಯ ಧೋರಣೆಯ – ವಿವಾದಾತ್ಮಕ ವಿಷಯವೂ ಕೂಡ ಪರಿಗಣಿಸಲ್ಪಡಬೇಕಾಗಿದೆ. ಈ ಪದಬಗೆಗೆ ಅತಿಶ್ರದ್ಧೆಯನ್ನು ತೋರುವವರೂ ಇದ್ದಾರೆ, ಆ ಪದವು ಒಂದು ಗೂಟದಂತಿದ್ದು, ಅದರ ಸುತ್ತಲೂ ವಿದೇಶಾಂಗ ನೀತಿಯ ಹೊರರಚನೆಯು ಸುತ್ತುತ್ತಿರುತ್ತದೆಂದು ಅವರು ಭಾವಿಸುತ್ತಾರೆ. ಅಂತಹುದೇನೂ ಇಲ್ಲ. ತಾಟಸ್ಥ್ಯಧೋರಣೆ – ಅಲಿಪ್ತ ನೀತಿಂ–ಯು ಎರಡು ಶಕ್ತಿಗಳ ಒಕ್ಕೂಟದ ಸಂದರ್ಭದಲ್ಲಿ ಮಾತ್ರ ಮಹತ್ವಪೂರ್ಣವಾಗುತ್ತದೆ. ಆದರೆ ಕಳೆದ ದಶಕದ ಹಾದಿಯಲ್ಲಿ ಅನೇಕ ಹೊಸ ಶಕ್ತಿಗಳು ಹಠಾತ್ತನೆ ತಲೆದೋರಿವೆ ಮತ್ತು ಹೊಸ ಹೊಂದಾಣಿಕೆಗಳು ರೂಪಪಡೆದಿವೆ. ಸಂಯುಕ್ತ ಸಂಸ್ಥಾನಗಳು (ಯು.ಎಸ್.ಎ.) ಮತ್ತು ಯು.ಎಸ್.ಎಸ್.ಆರ್.ಗಳ ಅನುಪಸ್ಥಿತಿಯಲ್ಲಿ ಈ ಹೊಸ ಕೂಟಗಳು ಮಹತ್ವಪೂರ್ಣವಾದ ಪ್ರಮಾಣವನ್ನೇನು ಪಡೆದಿಲ್ಲವೆನ್ನುವುದು ನಿಜ. ಆದರೆ ಅವುಗಳ ವ್ಯಾಪ್ತಿಯನ್ನು ಅಲ್ಲಗಳೆಯಲಾಗುವುದಿಲ್ಲ. ಅಲಿಪ್ತರು ಮತ್ತು ಲಿಪ್ತರು ಎಲ್ಲರನ್ನೂ ಒಳಗೊಂಡಿರುವಂತಹುದು ಆಫ್ರೋ–ಏಷಿಯನ್ ಒಕ್ಕೂಟ.

ಏಷಿಯಾದ ಮತ್ತು ವಿಶ್ವದ ಶಾಂತಿಗೆ ಭಯ ಒಡ್ಡುತ್ತಿರುವ ಕಮ್ಯೂನಿಸ್ಟ್ ಚೀನಾ ಕೂಡ ಒಂದು ಹೊಸ ಆಕ್ರಮಣಶೀಲ ಶಕ್ತಿ. ಈ ಹೊಸ ಆಪತ್ತಿನ (ಕೇಡು) ಬಗೆಗೆ ಹಳೆಯ ದೃಷ್ಟಿಕೋನದಿಂದ ನೋಡುವುದು ಮುತ್ಸದ್ದಿತನವಾಗುವುದಿಲ್ಲ. ಹಾಗಾದಲ್ಲಿ ಚೀನಾದೊಡನೆ ಯುದ್ಧವು ಎರಡು ಒಕ್ಕೂಟಗಳು ಒಂದರೊಡನೊಂದು



ಘರ್ಷಿಸುವಂತಹ ವಿಶ್ವಸಮರವಾಗುವುದು. ಅದು ನಮ್ಮ ಅನುಕೂಲಕ್ಕಾಗಲೀ ಅಥವಾ ಪ್ರಪಂಚದ ಸಹಾಯಕ್ಕಾಗಲೀ ಆಗುವುದೇ? ಅದು ನಮ್ಮ ನೆಲದ ಮೇಲಕ್ಕೆ ವಿಶ್ವಯುದ್ಧವನ್ನು ಕರೆತಂದಂತೆ ಆಗುವುದು. ಅಂತಹದೊಂದು ದುರಂತಕ್ಕೆ ನಾವು ಸಿದ್ಧರಿದ್ದರೂ, ಯುದ್ಧ ಮತ್ತು ಶಾಂತಿ ಎರಡರ ಮೊದಲ ಹೆಜ್ಜೆಯು ಯು.ಎಸ್.ಎ. ಮತ್ತು ಯು.ಎಸ್.ಎಸ್.ಆರ್.ಗಳಿಗೇ ವರ್ಗಾಯಿಸಲ್ಪಡುವುದು ಮತ್ತು ಯಾರಾದರೂ 'ಒಬ್ಬ ಛೇಂಬರ್‌ಲೇನ್' ಮತ್ತೊಂದು 'ಮ್ಯೂನಿಚ್' ಕಾಯಿದೆ ಮಾಡಲು ನಿರ್ಧರಿಸಿದರೆ, ಬಡಪಾಯಿ ಜೆಕೊಸ್ಲೋವೇಕಿಯದಂತೆ, ಅಸಹಾಯಕರಾಗಿ ಸುಮ್ಮನೆ ವೀಕ್ಷಿಸುವುದನ್ನು ಬಿಟ್ಟು ನಾವು ಬೇರೆ ಏನು ತಾನೇ ಮಾಡಬಹುದು?

ಆದ್ದರಿಂದ, ಸಾಧ್ಯವಾದಮಟ್ಟಿಗೂ ಈ ಸಂಘರ್ಷಕ್ಕೆ ಸಂಬಂಧಿಸಿದಂತೆ, ಎರಡೂ ಒಕ್ಕೂಟಗಳನ್ನು (ಬಣಗಳನ್ನು) ದೂರವಿಡುವುದು ಅವಶ್ಯಕವಾಗಿದೆ. ನಾವು ಹೊಸದೊಂದು ಹೊಂದಾಣಿಕೆಯನ್ನು (ಲಿಪ್ತತೆ) ರೂಪಿಸೋಣ. ಅದಕ್ಕೆ ಅಂಟಿಕೊಂಡಿರುವ ವಿಶಿಷ್ಟ ಅರ್ಥದಿಂದಾಗಿ alignment- ಲಿಪ್ತತೆ ಎಂಬ ಪದವನ್ನು ನಿವಾರಿಸೋಣ ಮತ್ತು ಅದನ್ನು ನಾವು ಹೊಸ ಮೈತ್ರಿ (ಒಕ್ಕೂಟ) ಅಥವಾ ಹೊಸ ಸಂಘ, ಸಂಸ್ಥೆ ಎಂದು ಬೇಕಾದರೆ ಕರೆಯೋಣ. ಈ ಹೊಸ ಸಂಬಂಧದಲ್ಲಿ ಮತ್ತು ಜಂಟಿ ಪ್ರಯತ್ನದಲ್ಲಿ, ತಟಸ್ಥ ಅಥವಾ ತಟಸ್ಥವಲ್ಲದ ಎಲ್ಲ ರಾಷ್ಟ್ರಗಳನ್ನೂ ಆಹ್ವಾನಿಸೋಣ. ಸ್ವತಂತ್ರ ಪಕ್ಷದ ನಾಯಕರಾದ ಶ್ರೀ ಎನ್.ಜಿ.ರಂಗಾ ಅವರು ಸೋವಿಯೆಟ್ ರಷ್ಯವನ್ನು ಕೂಡ, ಮಿತ್ರರಾಷ್ಟ್ರವಾಗಿ ನಮ್ಮನ್ನು ಸೇರುವಂತೆ ಆಹ್ವಾನಿಸಬಹುದು ಎಂದು ಹೇಳಿರುವುದಾಗಿ ವರದಿಯಾಗಿದೆ. ನಾವು ಹಳೆಯ ಲಿಪ್ತತೆಗೆ (alignment) ಅಂಟಿಕೊಂಡಿದ್ದರೆ, ಖಂಡಿತವಾಗಿಯೂ ಇದು ಸಾಧ್ಯವಾಗುವುದಿಲ್ಲ. ಆ ವಿಷಯಕ್ಕೆ ಸಂಬಂಧಿಸಿದಂತೆಯಾದರೂ, ನಮ್ಮ ನೀತಿಯು ಅಲಿಪ್ತ (ತಟಸ್ಥ) ನೀತಿಯಾಗಿಯೇ ಮುಂದುವರೆಯುತ್ತದೆ. ಆದರೆ ನಮ್ಮ ಈ ಹೊಸ ಸಂಬಂಧದಲ್ಲಿ ನಾವು ನಿಶ್ಚಿತವಾಗಿಯೂ ಪಾಶ್ಚಿಮಾತ್ಯ ಪ್ರಪಂಚದೊಂದಿಗೆ ಸಂಬಂಧ ಹೊಂದಿರುತ್ತೇವೆ. ಏಕೆಂದರೆ, ವಿಸ್ತಾರವಾದೀ ಚೀನಾ ಮತ್ತು ಕೆಲವು ಕಮ್ಯೂನಿಸ್ಟ್ ದೇಶಗಳಿಂದಾಗುವ ಅಪಾಯವನ್ನು ಅರ್ಥಮಾಡಿಸಬಹುದಾದ, ವಿಶೇಷವಾಗಿ ಕೆಲವು ಅಲಿಪ್ತ (ತಟಸ್ಥ) ರಾಷ್ಟ್ರಗಳೊಡನೆ, ವಿಶೇಷವಾಗಿ ಏಷ್ಯಾದೊಡನೆ ಸೇರಿ ನಮಗೆ ನೆರವು ನೀಡುವ ಇಚ್ಛೆಯನ್ನು ಅವು ಸೂಚಿಸಿವೆ, ಆದರೆ ಆ ರಾಷ್ಟ್ರಗಳು ಚೀನಾದ ಆಕ್ರಮಣ ನೀತಿಯನ್ನು ಅಸಮ್ಮತಿಸಿದರೆ ಮಾತ್ರ, ಪ್ರಜಾಸತ್ತಾತ್ಮಕವಾದ ಪಶ್ಚಿಮ ಮತ್ತು ಕಮ್ಯೂನಿಸ್ಟ್ ರಷ್ಯಾಗಳು, ನಾಜ಼ೀ ಜರ್ಮನಿಯನ್ನು ಸೋಲಿಸಲು ಒಂದಾಗಬಹುದಾದರೆ, ಈ ಮೇಲಿನ ಸಂಬಂಧದ ಬಗೆಗಿನ ವಿಚಾರವನ್ನು, ಸ್ವಾನುಕೂಲವಾದ ಯೋಚನೆ, ಬಯಸಿದಂತಹ ಆಲೋಚನೆ, ಪೊಳ್ಳುವಿಚಾರಗಳೆಂದು ಸುಮ್ಮನೆ ತಳ್ಳಿಹಾಕಲು ಸಾಧ್ಯವಿಲ್ಲ. ಆದ್ದರಿಂದ, ಹೊಸ

ಹೊಸ ಮಿತ್ರರು, ಹೊಸ ಹೊಸ ತಟಸ್ಥರೂ ಇರುತ್ತಾರೆ. ಒಂದು ವೇಳೆ ಕಮ್ಯೂನಿಸ್ಟ್ ರಾಷ್ಟ್ರಗಳು ತಟಸ್ಥವಾಗಿ ಉಳಿದರೂ ಅದು ನಮಗೆ ಲಾಭವೇ ಆಗುತ್ತದೆ. ಈ ನಿಟ್ಟಿನಲ್ಲಿ ಜನಸಂಘವು ಸ್ವಲ್ಪವಾದರೂ ಪ್ರಯತ್ನಿಸುವಂತೆ ಆಗ್ರಹ ಮಾಡಿದೆ. ಚೀನಾದ ಆಕ್ರಮಣದ ಈ ಸಂದರ್ಭದಲ್ಲಿ ತಾಟಸ್ಥ್ಯ ನೀತಿಯ ಪ್ರಶ್ನೆಯೇ ಇಲ್ಲವೆಂದು ಪ್ರಧಾನ ಮಂತ್ರಿಯವರು ಸಹ ಹೇಳಿದ್ದಾರೆ. ಈ ವಿಧಾನವು ಕಾರ್ಯರೂಪಕ್ಕೆ ಬರಲು ಕ್ರಮಕೈಗೊಳ್ಳಬೇಕಾಗಿದೆ.

ಈ ಸನ್ನಿವೇಶವು ಸರ್ಕಾರದ ಚೀನಾ ನೀತಿಯಲ್ಲಿ ಸಂಪೂರ್ಣ ಬದಲಾವಣೆಯನ್ನು ಒತ್ತಾಯಿಸುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಜನಸಂಘವು ಹೀಗೆ ಒತ್ತಾಯಿಸುತ್ತಿದೆ–

೧. ಚೀನಾದೊಡನೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಳ್ಳುವುದು.
೨. ಟಿಬೆಟಿನ ಮೇಲೆ ಚೀನಾದ ಊಳಿಗಮಾನ್ಯ ಸಾರ್ವಭೌಮತ್ವದ ಮನ್ನಣೆಯನ್ನು ರದ್ದುಗೊಳಿಸುವುದು, ಮತ್ತು
೩. ಟಿಬೆಟಿನ, ರಾಜಕೀಯ ವಲಸಿಗ ಸರ್ಕಾರವೆಂದು ದಲೈಲಾಮಾರ ಸರ್ಕಾರಕ್ಕೆ ಮನ್ನಣೆ ನೀಡುವುದು ಮತ್ತು ಟಿಬೆಟಿನ ವಿಮುಕ್ತಿಗಾಗಿ ಎಲ್ಲ ಸಹಾಯವನ್ನು ಒದಗಿಸುವುದು.

ಯಾವುದೇ ಕಾರ್ಯನೀತಿಯ ಸಮಗ್ರ ಭಾಗವು ಅದನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ. ಸಮರ್ಪಕವಾಗಿ ಸೂತ್ರೀಕರಣಗೊಂಡಿದ್ದೇ ಆಗಿದ್ದರು ಕೂಡ, ಸರಿಯಾಗಿ ಪ್ರಸ್ತುತಪಡಿಸಿದ ಮತ್ತು ಕಾರ್ಯಗತ ಮಾಡದ ವಿದೇಶಾಂಗ ನೀತಿಯು ವಿಫಲವಾಗುತ್ತದೆ. ಇಲ್ಲಿಯೇ ನಮ್ಮ ತಪ್ಪುಗಳು, ಅಚಾತುರ್ಯಗಳು ತೀರಾ ಗಂಭೀರವೂ ವಿಷಮವೂ ಆಗಿರುವುದು. ವಿದೇಶಗಳಲ್ಲಿನ ನಮ್ಮ ವಕ್ತಾರರು ನಮ್ಮ ನೀತಿಗೆ, ಸೋವಿಯೆಟ್ ಪರ ಎಂಬ ಪೂರ್ವಗ್ರಹ ಭಾವನೆಯನ್ನು ನೀಡಿದರು. ಹಾಗೆಯೇ ನಮ್ಮ ವಿಷಯವನ್ನು ನಾವು ಚೀನಾ ಅಥವಾ ಪಾಕಿಸ್ತಾನದ ವಿರುದ್ಧವಾಗಿ ಮಂಡಿಸಲು ಸಾಧ್ಯವಿಲ್ಲದವರಾಗಿದ್ದೇವೆ. ನಮ್ಮ ರಾಜಕಾರಣದ ಉಪಕರಣಗಳನ್ನು ಸರಿಯಾದ ರೀತಿಯಲ್ಲಿ ಸಜ್ಜುಗೊಳಿಸಿಕೊಂಡರೆ, ಮೂಲಭೂತವಾದ ನೀತಿಗಳನ್ನು ಯಾವುದೇ ರೀತಿಯಲ್ಲಿ ಬದಲಾಯಿಸದೇ ನಾವು ಖಂಡಿತವಾಗಿ ಫಲಿತಾಂಶಗಳನ್ನು ಪಡೆಯಬಹುದೆಂದು ಜನಸಂಘವು ಭಾವಿಸುತ್ತದೆ.

(೧೯೬೫, ಫೆಬ್ರವರಿ ೪)



## ಕಾಂಗೋ ಮತ್ತು ಬೆರೂಬಾರಿಯ ಬಗೆಗೆ

ಲೋಕಸಭೆಯ ಸುಮಾರು ನೂರು ಸದಸ್ಯರು, ಬಹುತೇಕ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು ವಿಶ್ವಸಂಸ್ಥೆಗೆ (ಸಂಯುಕ್ತ ರಾಷ್ಟ್ರಗಳಿಗೆ) ಮತ್ತು ವಿಶ್ವ ಸಂಸತ್ತುಗಳಿಗೆ, (Parliaments of the World) ಕಾಂಗೋದ ಪ್ರಧಾನಿ, ಮಿ॥ ಲುಮುಂಬಾರನ್ನು ತಕ್ಷಣ ಬಿಡುಗಡೆ ಮಾಡಬೇಕೆಂಬ ಮನವಿಯನ್ನು ಸಲ್ಲಿಸಿದ್ದಾರೆ. ಮುಂದುವರೆದು ಅವರು ಇತರ ರಾಷ್ಟ್ರಗಳ ಸಂಸತ್ತಿನ ಸದಸ್ಯರುಗಳು ತಮ್ಮ ಸರ್ಕಾರಗಳೊಡನೆ, "ಕಾಂಗೋದ ಪರಿಸ್ಥಿತಿಯು ಮತ್ತಷ್ಟು ಹದಗೆಡುವುದನ್ನು ತಡೆಯಲು, ಕಾಂಗೋದ ನ್ಯಾಯಸಮ್ಮತವಾದ ಲೋಕಸಭೆಯು (ಸಂಸತ್ತು) ಕಾರ್ಯನಿರ್ವಹಿಸಲು ಅನುವು ಮಾಡುವುದು, ಕರ್ನಲ್ ಮೊಬುಟುನ ಶಸ್ತ್ರಸನ್ನದ್ಧ ಗುಂಪನ್ನು ತತ್‌ಕ್ಷಣ ವಿಸರ್ಜಿಸುವುದು, ಬೆಲ್ಜಿಯಂನ ಎಲ್ಲ ವ್ಯಕ್ತಿಗಳನ್ನೂ ಕಾಂಗೋದಿಂದ ಉಚ್ಚಾಟಿಸುವುದು ಮತ್ತು ಬೆಲ್ಜಿಯಜ ಮತ್ತು ಇತರ ವಿದೇಶಿ ಮಧ್ಯಸ್ಥಿಕೆಗಳಿಗೆ ಕಾಂಗೋದಲ್ಲಿ ಇತಿಶ್ರೀ ಹೇಳುವುದು" ಈ ವಿಷಯಗಳ ಬಗೆಗೆ ಪ್ರಭಾವ ಬೀರಬೇಕೆಂದು ಕೇಳಿಕೊಂಡಿದ್ದಾರೆ. ಈ ಸದಸ್ಯರು ಈ ಮನವಿಯನ್ನು ಸಲ್ಲಿಸುತ್ತಿದ್ದ ಸಮಯದಲ್ಲಿಯೇ ಸರಿಯಾಗಿ, ಬೆರುಬಾರಿಯ ಜನರ ನಿಯೋಗವು, ಬೆರುಬಾರಿಯ ೧೨,೦೦೦ ಜನರನ್ನು "ವಿದೇಶೀ ಅಧಿಕಾರದ ಕಠಿಣ ನಡವಳಿಕೆ, ವರ್ತನೆಗಳಿಗೆ ಒಪ್ಪಿಸುವುದರಿಂದ ಮತ್ತು ಅವರು ದೈವದ ಅಥವಾ ಧರ್ಮಶಾಸ್ತ್ರಜ್ಞರ ಆಡಳಿತದ ರಾಜ್ಯದ ಕೈಲಿ ಕೊನೆಯಿಂರದ ದುಃಖ ಯಾತನೆ ಮತ್ತು ಶಿಕ್ಷೆಗೆ ಒಳಗಾಗುವುದರಿಂದ" ರಕ್ಷಿಸಬೇಕೆಂದು ಒಂದು ಜ್ಞಾಪನಪತ್ರವನ್ನು ಸಲ್ಲಿಸುತ್ತಿತ್ತು.

ಮಿ॥ ಲುಮುಂಬಾರ ಬಿಡುಗಡೆಯನ್ನು ಪಡೆಯುವುದಕ್ಕಾಗಿ ಸಂಸತ್ತಿನ ಸದಸ್ಯರಿಗೆ ಮಾನವಿಯ ಕಾರಣಗಳನ್ನು ಹೊರತು ಬೇರೆ ಏನಾದರೂ ಕಾರಣವಿದೆಯೋ ಇಲ್ಲವೋ ನಮಗೆ ತಿಳಿದಿಲ್ಲ. ಆದರೆ, ಬೆರುಬಾರಿಯ ಜನರು, ತಮ್ಮನ್ನು ತೋಳಗಳಿಗೆ ಎಸೆಯದಂತೆ ಸಂಸತ್ತಿನ ಸದಸ್ಯರ ಬಳಿಗೆ ಮನವಿಯನ್ನು ಹಿಡಿದುಬರುವುದು ಖಂಡಿತವಾಗಿಯೂ ಹೆಚ್ಚಿನ ಸಮರ್ಥನೆಯನ್ನು ಒತ್ತಾಯಿಸುತ್ತದೆ. ವಿಶ್ವದ ಸಂಸತ್ತುಗಳು ಈ ವಿಷಯದಲ್ಲಿ ಒಂದು ರೀತಿಯ ನೈತಿಕ ಪ್ರಭಾವವನ್ನು ಮಾತ್ರ ಪ್ರಯೋಗಿಸಬಲ್ಲದು, ಆದರೆ ಭಾರತದ ಸಂಸತ್ತು ಖಚಿತವಾದ, ಸ್ಪಷ್ಟ ಮತ್ತು ಸಂಪೂರ್ಣವಾಗಿ ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಂಡು, ಮನವಿಗಾರರಿಗೆ ನ್ಯಾಯ

ಸಿಗುವಂತೆ ನೋಡಿಕೊಳ್ಳಬಹುದು. ಆದರೆ, ಸಂಸತ್ತಿನ ಈ ಸದಸ್ಯರು ತಮ್ಮ ಹೊಣೆಗಾರಿಕೆಯ ಬಗೆಗೆ ಜಾಗೃತರಾಗುತ್ತಾರೆಂಬುವುದರ ಬಗೆಗೆ ಭರವಸೆಯಿಲ್ಲ. ಅವರು ಬೆರುಬಾರಿಯ ಜನರ ಬಗೆಗಿಂತಲೂ ಮಿ॥ ಲುಮುಂಬಾರ ಬಗೆಗೆ ಹೆಚ್ಚು ಸಹಾನುಭೂತಿ ಹೊಂದಿದ್ದಾರೆ. ಕರ್ನಲ್ ಮೊಬುಟುನ ಸಿಪಾಯಿಗಳು ಅನುಚಿತವಾಗಿ, ಅಸಭ್ಯವಾಗಿ ವರ್ತಿಸಿದಾಗ, ಈ ಸದಸ್ಯರ ಹೃದಯಗಳು ರಕ್ತ ಸುರಿಸುತ್ತವೆ. ಆದರೆ ಭಾರತೀಯ ಪ್ರಜೆಗಳು, ಪಾಕಿಸ್ತಾನಿಗಳಿಂದ ಎಲ್ಲ ರೀತಿಯ ಅಪಮಾನಕರವಾದ ವರ್ತನೆಗಳಿಗೆ ಒಳಗಾದಾಗ ಅದೂ ಆ ರಾಜ್ಯಕ್ಕೆ ವರ್ಗಾಯಿಸಲ್ಪಡುವುದರ ಮೂಲಕ ಅವರು ನಿರಾಸಕ್ತಿಯಿಂದ ನೋಡಬಲ್ಲರು. ಎಂತಹ ಅಪಮಾನಕರವಾದ ವ್ಯತ್ಯಾಸ!

ಇಡಿಯ ರಾಷ್ಟ್ರವೇ, ಬೆರುಬಾರಿ ವರ್ಗಾವಣೆಯನ್ನು ಉಗ್ರವಾಗಿ ಪ್ರತಿರೋಧಿಸಿದರೂ, ಪಂಡಿತ ನೆಹರೂ ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸಲು ನಿರ್ಧರಿಸಿದ್ದಾರೆ. ಸಾಂವಿಧಾನಿಕ ಪರಿಮಿತಿಗಳನ್ನು ಅವರು ಲೆಕ್ಕಿಸುವುದೇ ಇಲ್ಲ. ಅವರ ಅಸಾಂವಿಧಾನಿಕ ಕಾರ್ಯಗಳನ್ನು ಮಾನ್ಯ ಮಾಡುವುದಕ್ಕಾಗಿ ಸಂವಿಧಾನವನ್ನು ತಿದ್ದಬಹುದು. ವಿದೇಶೀ ಪತ್ರಿಕಾ ವಲಯದ ಟೀಕೆಗಳು, ಅವರನ್ನು ತಮ್ಮ ವಾಗ್ದಾನವನ್ನು ಕಾರ್ಯಗತಗೊಳಿಸುವಲ್ಲಿ ದುಪ್ಪಟ್ಟು ದೃಢ ಮನಸ್ಕರನ್ನಾಗಿ ಮಾಡಿವೆಯೆಂದು ತಿಳಿದುಬಂದಿದೆ. ಆದ್ದರಿಂದ ನಮ್ಮ ಸರ್ಕಾರದ ಕಾರ್ಯನೀತಿಯು, ರಾಷ್ಟ್ರದಲ್ಲಿರುವ ಯಾರಿಂದಲೂ ನಿರ್ಧರಿಸಲ್ಪಡುವುದಿಲ್ಲ. ಅದು ನಿರ್ಧರಿಸಲ್ಪಡುವುದು ವಿದೇಶಗಳ ಮುಖಂಡ– ಬರಹಗಾರರಿಂದ. ಸಾರ್ವಭೌಮತ್ವವು ಜನರ ಕೈಗಳಲ್ಲಲ್ಲ ಆದರೆ, 'ಮ್ಯಾಂಚೆಸ್ಟರ್ ಗಾರ್ಡಿಯನ್' ಮತ್ತು 'ಅಮೆರಿಕನ್ ಟೈಮ್ಸ್' ಹಿಡಿತದಲ್ಲಿ ಭದ್ರವಾಗಿದೆ. ವಿದೇಶೀ ಪ್ರಭಾವಗಳಿಗೆ ಅತಿಸುಲಭವಾಗಿ ಒಳಗಾಗುವುದು. ಸ್ವಾತಂತ್ರ್ಯಗಳ ಮೇಲೂ ಕೂಡ ಉಳಿದಿರುವಂತಹ ಮಾನಸಿಕ ಗುಲಾಮಗಿರಿಯನ್ನು ತೋರಿಸುತ್ತದೆ.

ಕಲ್ಕತ್ತಾ ಹೈಕೋರ್ಟ್‌ನ ನ್ಯಾಯಾಧೀಶರಾದ ಮಿ॥ ಸಿನ್ಹಾ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರ ಮೇಲೆ, ನಿರ್ಮಲ್ ಬೋಸ್ ಸಲ್ಲಿಸಿದ್ದ ಅರ್ಜಿಯ ತೀರ್ಮಾನದಲ್ಲಿ ಹೀಗೆ ಹೇಳಿದ್ದರು: "ಒಬ್ಬ ಪ್ರಜೆಯು (ನಾಗರಿಕನು) ಒಂದು ಬೆಳಗ್ಗೆ ಎಚ್ಚರಗೊಂಡಾಗ ತಾನು ಮತ್ತು ತನ್ನದಾಗಿದ್ದ ಎಲ್ಲವೂ, ತನ್ನ ಅರಿವು, ಒಪ್ಪಿಗೆಗಳಿಲ್ಲದೇ ಯಾವುದೋ ಒಂದು ವಿದೇಶೀ ಅಧಿಕಾರಕ್ಕೆ ದೈಹಿಕವಾಗಿ ಹಸ್ತಾಂತರ ಮಾಡಲ್ಪಟ್ಟಿದ್ದೇನೆ ಎಂದು ಕಂಡುಕೊಳ್ಳುತ್ತಾನೆ ಎಂಬಂತಹ ಸ್ಥಿತಿಯನ್ನು ಸಂವಿಧಾನವು ಚಿಂತಿಸುತ್ತದೆ ಎನ್ನುವುದನ್ನು ನನಗೆ ಯೋಚಿಸಲೂ ಸಾಧ್ಯವಿಲ್ಲವೆನಿಸುತ್ತದೆ." ಆದರೆ, ಯೋಚಿಸಲು ಸಾಧ್ಯವಾದದ್ದು, ಉದಾರವಾದ ಕಾಂಗ್ರೆಸ್ ಸರ್ಕಾರದ ಆಶ್ರಯದಲ್ಲಿ, ಭಾರತದಲ್ಲಿ ನಡೆಯಲಿದೆ.

ತಿದ್ದುಪಡಿಯನ್ನು ತಂದಿರುವ ರೀತಿಯು ಕೂಡ ಸರ್ಕಾರಕ್ಕೆ ಜನರನ್ನು ಎದುರಿಸಲು ಧೈರ್ಯವಿಲ್ಲವೆಂಬುದನ್ನು ತೋರಿಸುತ್ತದೆ. ಪಶ್ಚಿಮ ಬಂಗಾಳದಲ್ಲಿ



ನಡೆದ ಘಟನೆ, ಮತ್ತು ಡಾ. ಬಿ.ಸಿ.ರಾಯ್ ಅವರು ಪಕ್ಷವನ್ನು ಬದಲಾಯಿಸಿದ ಅಪಮಾನಕರ ರೀತಿ ಇವು ಕಾಂಗ್ರೆಸಿನವರು ಅಳುಕು, ಧರ್ಮಭೀತಿಗಳಿಲ್ಲದೇ, ಏನು ಮಾಡುವುದಕ್ಕೂ ಸಿದ್ಧರಿರುತ್ತಾರೆಂಬುದನ್ನು ತೋರಿಸುತ್ತದೆ. ಪಶ್ಚಿಮ ಬಂಗಾಳದ ವಿಧಾನ ಸಭೆಯ ವಿಶೇಷಾಧಿಕಾರವು – ಸದಸ್ಯರು ಸುಪ್ರೀಮ್ ಕೋರ್ಟಿಗೆ ಹೋಗಲು ನಿರ್ಣಯ ಮಂಡಿಸುವ ಅವರ ಅವಕಾಶವನ್ನು ಕಸಿದುಕೊಳ್ಳುವುದಕ್ಕಾಗಿ ಮಾತ್ರ– ಸರ್ಕಾರದ ವಾದಮಂಡನೆ ತೀರಾ ದುರ್ಬಲವಾಗಿದೆಯೆಂಬುದನ್ನು ತೋರಿಸುತ್ತದೆ. ಈ ದೇಶದ ಪರಮೋಚ್ಚ ನ್ಯಾಯ ಮಂಡಳಿಯ ತೀರ್ಮಾನವನ್ನು ಎದುರಿಸಲು ಅವರು ಇನ್ನೂ ಸಿದ್ಧರಾಗಿಲ್ಲ.

ಪಶ್ಚಿಮಬಂಗಾಳದ ವಿಧಾನಸಭೆಯು ಸಂವಿಧಾನದ ತಿದ್ದುಪಡಿ ಮಸೂದೆಯನ್ನು ಸರ್ವಾನುಮತದಿಂದ, ಅದು 'ಅಸಾಂವಿಧಾನಿಕ' ಎಂಬ ಟೀಕೆಯೊಡನೆ ಹಿಂದುರಿಗಿಸಿದನಂತರ, ಪಶ್ಚಿಮಬಂಗಾಳ ಸರ್ಕಾರವು, ಪರಮೋಚ್ಚ ನ್ಯಾಯಾಲಯಕ್ಕೆ, ಈ ವಿಷಯದಲ್ಲಿ ವಿಧಾನಸಭೆಯ ಯಾವುದೇ ತೀರ್ಮಾನವಿಲ್ಲದೆ, ಅಹವಾಲು ಸಲ್ಲಿಸಲು ತನ್ನ ಗೌರವಕ್ಕೆ ಬದ್ಧವಾಗಿದೆ. ಅದೇನಾದರೂ ಹಾಗೆ ಮಾಡುವಲ್ಲಿ ವಿಫಲವಾದರೆ, ವಿಧಾನಸಭೆಯನ್ನು ಕಡೆಗಣಿಸಿದಂತೆ ಆಗುತ್ತದೆ.

ಯೂನಿಯನ್ ಸರ್ಕಾರವು, ಮಸೂದೆಯು ಪ್ರಸಕ್ತ ಅಧಿವೇಶನದಲ್ಲಿ ಸಭೆಯ ಮುಂದೆ ಬರಲಾರದೆಂದು ಮುಂಚೆ ಸೂಚಿಸಿತ್ತು. ಆದರೆ, ಬೆರುಬಾರಿಗೆ ಸಂಬಂಧಿಸಿದಂತೆ ನೆಹ್ರೂ–ನೂನ್ ಒಪ್ಪಂದವನ್ನು ಸುಧಾರಿಸಲು ಪಾಕಿಸ್ತಾನ ನಿರಾಕರಿಸಿದನಂತರ ಸರ್ಕಾರವು ಇದ್ದಕ್ಕಿದ್ದಂತೆಯೇ ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲಿಯೇ ಮಸೂದೆಯನ್ನು ಪ್ರಸ್ತಾವಿಸಲು ನಿರ್ಧರಿಸಿತು. ಪಾಕಿಸ್ತಾನದ ಮನೋಧರ್ಮದಲ್ಲಿ ಬದಲಾವಣೆಯ ಭರವಸೆಯನ್ನು ಆಶಿಸುತ್ತಿದ್ದವರು ತಮ್ಮನ್ನು ತಾವು ತಿದ್ದಿಕೊಳ್ಳಬೇಕು. ಪಂಡಿತ ನೆಹರೂ ಅವರನ್ನು ಅವರ ಈಗಿನ ಮುಜುಗರದ ಸನ್ನಿವೇಶದಲ್ಲಿ ಅವರಿಗೆ ನೆರವು ನೀಡುವ ಬದಲು ಪಾಕಿಸ್ತಾನವು ಅವರನ್ನು ಮತ್ತಷ್ಟು ಇಕ್ಕಟ್ಟಿನ ಪರಿಸ್ಥಿತಿಗೆ ತಳ್ಳಲು ಪ್ರಯತ್ನಿಸುತ್ತಿದೆ. ಅಧ್ಯಕ್ಷ ಅಯೂಬ್‌ರ ಇತ್ತೀಚಿನ ಮಾತುಗಳು, ಈ ವಿಷಯಕ್ಕೆ ಸಂಬಂಧಿಸಿದಂತೆ, ಪೈಶಾಚಿಕ ಛಾಯೆಯನ್ನು ಒಳಗೊಂಡಿದೆ. ಅವರು ಕಟುವ್ಯಂಗ್ಯದ ಮಾತನ್ನಾಡಿದ್ದಾರೆ ಮತ್ತು ಪ್ರಧಾನಮಂತ್ರಿ ನೆಹರೂ ಅವರ ಮುಜುಗರದ ಬಗೆಗೆ ಹಿರಿಹಿರಿ ಹಿಗ್ಗಲು ಬಯಸುತ್ತಾರೆ. ಷೇಕ್ಸ್‌ಪಿಯರ್‌ನ ಯೆಹೂದಿಯಂತೆ (ಜ್ಯೂ) ಅವರು ತಮ್ಮ ಪಾಲಿನ ಒಂದು ಪೌಂಡು ಮಾಂಸವನ್ನು ಪಡೆಯಲು ಒತ್ತಾಯಿಸುತ್ತಾರೆ. ಅವರಿಗೆ ಅಂತಹುದೇ ಪಾಠ ಕಲಿಸುವ ಅವಶ್ಯಕತೆಯಿದೆ.

ಒಂದು ದೇಶದ ಸಂವಿಧಾನದ ನಿಬಂಧನೆಗಳನ್ನು ಉಲ್ಲಂಘಿಸುವಂತಹ ಒಪ್ಪಂದಕ್ಕೆ ಅಂತರಾಷ್ಟ್ರೀಯ ಕಾನೂನಿನಲ್ಲಿ ಯಾವುದೇ ಮಾನ್ಯತೆ, ಮೌಲ್ಯ ಇರುವುದಿಲ್ಲ.

ಸಂವಿಧಾನದ ತಿದ್ದುಪಡಿ ಕೂಡ ಪೂರ್ವಾನ್ವಯದ ಪರಿಣಾಮವನ್ನು ಪಡೆಯುವುದಿಲ್ಲ. ಪ್ರಧಾನಮಂತ್ರಿಗಳು, ವಾಸ್ತವವಾಗಿ, ಈ ವಿಷಯದಲ್ಲಿ ತಾವು ಅಸಹಾಯಕರೆಂದು ಪಾಕಿಸ್ತಾನದ ಅಧ್ಯಕ್ಷರಿಗೆ ಹೇಳಿಬಿಡಬೇಕಾಗಿತ್ತು. ಪ್ರಜಾಸತ್ತಾತ್ಮಕ ನಾಯಕರಾಗಿ, ಹಾಗೂ ಸಂವಿಧಾನಾತ್ಮಕ ಸ್ವರೂಪದ ಸಮರ್ಥಕರಾಗಿ ಇದು ಅವರ ಗೌರವ ಪ್ರತಿಷ್ಠೆಗಳನ್ನು ಎತ್ತಿಹಿಡಿಯುತ್ತಿತ್ತು. ಸಂವಿಧಾನದ ಶಬ್ದಗಳನ್ನು ತಿದ್ದುಪಡಿ ಮಾಡುವ ಮೂಲಕ, ಸಂವಿಧಾನದ ಉದ್ದೇಶ, ಧ್ಯೇಯಗಳನ್ನು ಬುಡಮೇಲು ಮಾಡುವ ಅವರ ಪ್ರಯತ್ನಗಳಿಗಿಂತಲೂ, ಅದು ಅವರನ್ನು ಪ್ರಪಂಚದ ದೃಷ್ಟಿಯಲ್ಲಿ ಮೇಲೇರಿಸುತ್ತಿತ್ತು. ಈ ವಿಷಯವು ಅಲ್ಲಿಗೇ ಮುಕ್ತಾಯವಾಗಬೇಕು. ಆ ಕಾರಣದಿಂದಾಗಿ ಪಾಕಿಸ್ತಾನವು ಒಪ್ಪಂದವನ್ನು ರದ್ದುಪಡಿಸಿದರೆ, ನಮಗೆ ಯಾವ ನಷ್ಟವೂ ಇಲ್ಲ.

ಪ್ರಧಾನಮಂತ್ರಿಗಳು ತಿದ್ದುಪಡಿಯ ಮೇಲೆ ಪಟ್ಟು ಹಿಡಿಯುವುದಾದಲ್ಲಿ, ಆ ವಿಷಯವು ಬಹಳ ಮುಖ್ಯವೂ ಮತ್ತು ಸೂಕ್ಷ್ಮವೂ ಆಗಿದ್ದು, ಆ ಮಸೂದೆಯ ಮೇಲೆ ಮುಕ್ತ ಮತದಾನವಿರಬೇಕು. ಮುಂಚೆ, ಅಂತಹ ಮತದಾನಕ್ಕೆ ಭಾಷೆಯ ಪ್ರಶ್ನೆಯ ಮೇಲೆ ಅನುಮತಿಸಲಾಗಿತ್ತು. ಆದರೆ ಕಾಂಗ್ರೆಸ್ ಪಕ್ಷವು ಈಗಾಗಲೇ ವ್ಹಿಪ್‌ಅನ್ನು ಜಾರಿ ಮಾಡಿದೆ. ಸಂಸತ್ತಿನ ಕಾಂಗ್ರೆಸ್ ಪಕ್ಷದ ಸದಸ್ಯರು, ಪ್ರತಿಷ್ಠೆ ಮತ್ತು ನಿಷ್ಠೆಗಳ, ಮಿಥ್ಯಾಪ್ರಜ್ಞೆಗೆ ಬಲಿಯಾಗುವುದರ ಬದಲಿಗೆ ವ್ಹಿಪ್ ಅನ್ನು ನಿರ್ಲಕ್ಷಿಸಿ ತಮ್ಮ ಅಂತಃಸಾಕ್ಷಿಯ ಆದೇಶಕ್ಕೆ ಅನುಗುಣವಾಗಿ ಮತ ಚಲಾಯಿಸಿದರೆ, ಜನರ ದೃಷ್ಟಿಯಲ್ಲಿ ತಮ್ಮ ಗೌರವವನ್ನು ಹೆಚ್ಚಿಸಿಕೊಳ್ಳುತ್ತಾರೆ. ಭಾರತದ ಗೌರವ, ಪ್ರತಿಷ್ಠೆಗಳು ಅದರ ಸಮಗ್ರತೆಯನ್ನು ಉಳಿಸಿಕೊಳ್ಳುವುದರಲ್ಲಿ ಇವೆಯೇ ವಿನಃ ಅದನ್ನು ಸ್ವಲ್ಪ ಸ್ವಲ್ಪವಾಗಿ ಛಿದ್ರಗೊಳಿಸುವುದರಲ್ಲಿ ಅಲ್ಲ. ಈ ಮಸೂದೆಯ ವಿರುದ್ಧವಾಗಿ ಮತಚಲಾಯಿಸುವ ಮೂಲಕ ಈ ಸದಸ್ಯರು ಭಾರತದ ಜನರು ಮತ್ತು ಅವರ ಪ್ರತಿನಿಧಿಗಳು, ತಮ್ಮ ಮಾತೃಭೂಮಿಯ ಒಂದೊಂದು ಅಂಗುಲವನ್ನೂ ಎಷ್ಟು ಗಾಢವಾಗಿ ಪ್ರೀತಿಸುತ್ತಾರೆಂಬುದನ್ನು ಈ ಜಗತ್ತಿಗೆ ಸಾಬೀತುಮಾಡುತ್ತಾರೆ. ಅದು ನಮ್ಮ ರಾಷ್ಟ್ರೀಯತೆಯ ಪ್ರದರ್ಶನವಾಗುತ್ತದೆ. ಇಂತಹ ಒಂದು ಕಾರ್ಯವು ಆಕ್ರಮಣಕಾರೀ ಸೈನ್ಯವನ್ನು ಹತ್ತಿರ ಬರದಂತೆ ತಡೆದು ನಿಲ್ಲಿಸುತ್ತದೆ ಮತ್ತು ರಾಷ್ಟ್ರದ ಶತ್ರುಗಳ ಕೇಡು, ಕುತಂತ್ರಗಳನ್ನು ವಿಫಲಗೊಳಿಸುತ್ತದೆ. ಒಂದು ವೇಳೆ, ಈ ಸದಸ್ಯರು, ಮಸೂದೆಯ ಪರವಾಗಿ ಮತ ಚಲಾಯಿಸಿದರೆ, ಅವರು ಸ್ವತಂತ್ರವಾದ ಪ್ರಜಾಸತ್ತಾತ್ಮಕ ಮತ್ತು ಸಾರ್ವಭೌಮ ಪ್ರಜೆಗಳನ್ನು ಪ್ರತಿನಿಧಿಸುವಂತಹ ಹಕ್ಕನ್ನು ಕಳೆದುಕೊಳ್ಳುತ್ತಾರೆ.

ವೈಯಕ್ತಿಕ ಇಚ್ಛೆಗಿಂತಲೂ ಹೆಚ್ಚಾಗಿ ಜನರ ಸಂಕಲ್ಪವು ಮೇಲುಗೈಯಾಗಲಿ ಈ ಮಸೂದೆಯ ಮೇಲಿನ ಮತಚಲಾವಣೆಯು, ಇಂತಹ ಬೃಹತ್, ಸಂಖ್ಯೆಯ ಬಹುಮತವನ್ನು ಸಂಸತ್ತಿನಲ್ಲಿ ಹೊಂದಿರುವ ಕಾಂಗ್ರೆಸ್ಸಿಗರ ಕೈಲಿ ಭಾರತದ ಭವಿಷ್ಯವು



ಸುರಕ್ಷಿತವಾಗಿರುತ್ತದೆಯೇ ಎಂಬುದನ್ನು ತೋರಿಸುತ್ತದೆ. ಪ್ರತಿಯೊಬ್ಬ ಗೌರವಾನ್ವಿತ ಸದಸ್ಯನ ಪ್ರಾಮಾಣಿಕತೆ, ನಿಯತ್ತುಗಳು ಇಂದು ಪಣಕ್ಕಿಡಲ್ಪಟ್ಟಿವೆ. ಈ ಒಂದು ಗುಣವಾಚಕಕ್ಕೆ ಈ ಹೆಸರಿಗೆ ಅವರು ಅರ್ಹರೇ ಎಂಬುದನ್ನು ನೋಡಬೇಕಾಗಿದೆ.

# ಭಾರತ ಮತ್ತು ಸಾಮ್ರಾಜ್ಞಿ

ಈವರೆಗೆ ಅನೇಕ ಸಾರಿ, ವಿದೇಶೀ ರಾಜ್ಯಗಳ ಮುಖಂಡರುಗಳನ್ನು, ಪ್ರಭುಗಳನ್ನು ಸ್ವಾಗತಿಸುವ ಸಂದರ್ಭಗಳನ್ನು ಹೊಸದಿಲ್ಲಿಯು ನಿರ್ವಹಿಸಿದೆ. ಮಹಾರಾಣಿ ಎರಡನೆಯ ಎಲಿಜೆಬೆತ್ ಅಂತಹ ಮೊದಲ ಗಣ್ಯವ್ಯಕ್ತಿಯೇನಲ್ಲ. ಅನುಕ್ರಮವಾಗಿ ತಮ್ಮ ತಮ್ಮ ಅಧಿಕಾರದ ಅವಧಿಗಳಲ್ಲಿ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಮಿ॥ ಐಸೆನ್ ಹೋವರ್, ಯು.ಎಸ್.ಎಸ್.ಆರ್.ನ ಮುಖ್ಯಸ್ಥರಾದ ಮಾರ್ಷಲ್ ಬುಲ್ಗಾನಿನ್ ಮತ್ತು ಮಿ॥ ವೊರೊಷಿಲೋವ್ ಅವರುಗಳು ಕೂಡ ಇಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಅವರಿಗೆ ನೀಡಿದಂತಹ ಸ್ವಾಗತಗಳು ಕೂಡ ಅದ್ದೂರಿಯಾದ ಪ್ರಮಾಣದಲ್ಲಿಯೇ ಇದ್ದವು. ಮಹಾರಾಣಿಗೆ ಏರ್ಪಡಿಸಿರುವ ಉತ್ಸಾಹಪೂರ್ಣ ಸ್ವಾಗತವನ್ನು ಮತ್ತಷ್ಟು ವೈಭವಪೂರ್ಣ ಸಂಗತಿಯಾಗಿ ಏರ್ಪಾಟುಮಾಡಲಾಗಿದೆ. ಹಿಂದಿನ ಕಾರ್ಯ ನಿರ್ವಹಣೆಗಿಂತಲೂ, ಮತ್ತಷ್ಟು ಈ ಬಾರಿ ಉತ್ತಮಪಡಿಸಬೇಕೆಂಬ, ಸರಳವಾದ ಅಭಿಲಾಷೆಯಿಂದ ಇದನ್ನು ಕೈಗೊಂಡಿರುವುದಾದರೆ, ಇದರ ಬಗೆಗೆ ಯಾವುದೇ ಆಕ್ಷೇಪಣೆಯೂ ಇರುತ್ತಿರಲಿಲ್ಲ. ಇಂತಹ ಪ್ರಯತ್ನವನ್ನು ಪ್ರಶಂಸಿಸಬಹುದಾಗಿತ್ತು. ಎರಡನೇ ಎಲಿಜಬೆತ್ ಕೇವಲ ಒಂದು ರಾಜ್ಯದ ಮುಖ್ಯಸ್ಥೆಯಲ್ಲ, ಅವರು ಮಹಾರಾಣಿ ಕೂಡ ಎಂಬುದನ್ನು ಮರೆಯಲಾಗುವುದಿಲ್ಲ. ಸರಳತೆಯನ್ನು ಮೆಚ್ಚುವವರೆಂದು, ಅವರನ್ನು ಎಷ್ಟೇ ವರ್ಣಿಸಿದರೂ, ಮತ್ತು ಹಾಗೆಯೇ ಇರುವರೆಂದು ಭಾವಿಸಿದರು ಕೂಡ, ಅವರು ರಾಜ್ಯದ ಬೇರೆ ಮುಖಂಡರಿಗಿಂತಲೂ ಹೆಚ್ಚಾಗಿ, ವಿಶೇಷವಾಗಿ ಗಣರಾಜ್ಯದ ಮುಖ್ಯಸ್ಥರಿಗಿಂತಲೂ ಹೆಚ್ಚಾಗಿ, ಅವರು ಅಧಿಕ ವೈಭವಕ್ಕೆ ಅಭ್ಯಸ್ಥರಾಗಿರುವವರು. ಅವರು ಮಹಿಳೆಯೆಂಬ ವಾಸ್ತವವು ಸ್ವಾಗತಗಳಲ್ಲಿ ಅಧಿಕ ವೈಭವವನ್ನು ನಿರೀಕ್ಷಿಸುವುದು ಕೂಡ ಸ್ವಲ್ಪಮಟ್ಟಿಗೆ ಸಹಜವೇ. ಆದರೆ ಇದರ ಜೊತೆಗೇ ಮಹಾರಾಣಿಯ ಬಗೆಗೆ ಭಾರತ ಸರ್ಕಾರದ ವರ್ತನೆಯು ಬೇರೆ ಬೇರೆ ಆಲೋಚನೆಗಳಿಂದ, ಲೆಕ್ಕಾಚಾರಗಳಿಂದ ನಿರ್ಧರಿತವಾಗಿದೆಯೆನಿಸುತ್ತದೆ.

ಎಲಿಜಬೆತ್ ಮಹಾರಾಣಿಯು ಕೇವಲ ಇಂಗ್ಲೆಂಡಿನ ರಾಣಿ ಮಾತ್ರ ಅಲ್ಲ. ಆದರೆ ಕಾಮನ್‌ವೆಲ್ತ್ ರಾಷ್ಟ್ರಗಳ ಒಕ್ಕೂಟದ ಮುಖ್ಯಸ್ಥೆ ಕೂಡ. ಭಾರತವೂ ಕಾಮನ್‌ವೆಲ್ತ್ ಒಕ್ಕೂಟದ ಸದಸ್ಯರಾಷ್ಟ್ರ. ಆದ್ದರಿಂದ ಮಹಾರಾಣಿಗೆ ಏರ್ಪಡಿಸುವ



ಸ್ವಾಗತವು ಅವರ ಸ್ಥಾನಕ್ಕೆ ಯೋಗ್ಯವೂ ಸೂಕ್ತವೂ ಆಗುವಂತಿರಬೇಕು. ಇಲ್ಲಿ ಸಂಗತವಾಗುವ ಪ್ರಶ್ನೆಯೆಂದರೆ, ಭಾರತ ಮತ್ತು ಗ್ರೇಟ್ ಬ್ರಿಟನ್‌ಗಳ ನಡುವೆ ಕಾಮನ್‌ವೆಲ್ತ್ ಒಕ್ಕೂಟದ ಸದಸ್ಯರಾಗಿ ಇರುವಂತಹ ಯಥಾರ್ಥವಾದ ಅಥವಾ ನಿಷ್ಕೃಷ್ಟವಾದ ಸಂಬಂಧಗಳೇನು? ಅಂತಹ ಸೂಕ್ತವಾದಂತಹ ಸ್ವಾಗತದ ಪರಿಮಿತಿ (ಎಲ್ಲೆ)ಯು ಯಾವುದೆಂಬುದನ್ನು ಈ ಪ್ರಶ್ನೆಯ ಆಧಾರದ ಮೇಲೆ ತೀರ್ಮಾನಿಸಲು ಸಾಧ್ಯವಾಗುತ್ತದೆ.

ಕಾಮನ್‌ವೆಲ್ತ್ ಎಂಬುವುದರ ಯಾವುದೇ ಸಮರ್ಪಕ ವಿವರಣೆಯೂ ಲಭ್ಯವಿಲ್ಲ. ಸಂವಿಧಾನಾತ್ಮಕವಾಗಿ ಅದೊಂದು ಅಸ್ಪಷ್ಟ ಕಲ್ಪನೆ. ಭಾರತವು ಗಣರಾಜ್ಯವಾಗುವುದಕ್ಕೆ ಮುಂಚೆ ಮತ್ತು ಕಾಮನ್‌ವೆಲ್ತ್‌ನ ಸದಸ್ಯತ್ವವನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆ, ಈ ಕಲ್ಪನೆಯು, ೧೯೨೬ರಲ್ಲಿ ಬಾಲ್‌ಫೋರ್ ಘೋಷಣೆಯ ಮೂಲಕ ಹೀಗೆ ಘೋಷಿಸಲ್ಪಟ್ಟಿತ್ತು: “ಅವುಗಳು (ಕಾಮನ್‌ವೆಲ್ತ್‌ನ ಸದಸ್ಯ) ಬ್ರಿಟಿಷ್, ಸಾಮ್ರಾಜ್ಯದೊಳಗೆ ಸ್ವಾಯತ್ತ ರಾಷ್ಟ್ರಗಳಾಗಿರುತ್ತವೆ. ಸಮಾನ ಗೌರವ, ಪ್ರತಿಷ್ಠೆಗಳನ್ನು ಪಡೆದಿದ್ದು, ಬ್ರಿಟಿಷ್ ಪ್ರಭುತ್ವಕ್ಕೆ (ಕಿರೀಟಕ್ಕೆ) ಸಾಮಾನ್ಯ ರಾಜನಿಷ್ಠೆಯಿಂದ ಒಂದುಗೂಡಿಸಲ್ಪಟ್ಟಿದ್ದರೂ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್‌ನ ಸದಸ್ಯರಾಗಿ ಪರಸ್ಪರ ಮುಕ್ತವಾಗಿ ಸಂಬಂಧ, ಸಹಕಾರಗಳನ್ನು ಹೊಂದಿದ್ದರೂ, ಆಂತರಿಕ ವಿಷಯಗಳಲ್ಲಿ ಮತ್ತು ವಿದೇಶೀ ಸಂಬಂಧಗಳಲ್ಲಿ ಪರಸ್ಪರ ಒಂದರಿಂದ ಮತ್ತೊಂದು ಸ್ವತಂತ್ರರಾಗಿರುತ್ತವೆ.”

ಕಾಂಗ್ರೆಸ್, ರಾವೀನದಿಯ ದಡದಲ್ಲಿ, ಸಂಪೂರ್ಣ ಸ್ವಾತಂತ್ರ್ಯದ, ಶಪಥ ತೊಟ್ಟಾಗ, ಈ ವಿಚಾರವು ಅದಕ್ಕೆ ಒಪ್ಪಿಗೆಯಾಗಿರಲಿಲ್ಲ. ಅದು ಸಮಾನತೆಯ ಸಂಬಂಧವಾಗಿರಲಿಲ್ಲ. ಆದರೆ, ಅದು ಅಧೀನತೆಯ, ಓಲೈಸುವಂತಹ ಸಂಬಂಧವಾಗಿತ್ತು. ಇಂದಿನ ಕಾಮನ್‌ವೆಲ್ತ್ ಅಂದಿನಕ್ಕಿಂತಲೂ ಬೇರೆಯಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಮೇಲೆ ತಿಳಿಸಿರುವ ಘೋಷಣೆಯಲ್ಲಿನ “ಸ್ವಾಯತ್ತ” ಎಂಬುದು “ಸ್ವತಂತ್ರ” ಎಂದು ಬದಲಾಯಿಸಲಾಗಿದೆ ಹಾಗೂ “ಬ್ರಿಟಿಷ್” ಮತ್ತು “ರಾಜನಿಷ್ಠೆ” ಎಂಬ ಪದಗಳನ್ನು ಕೈಬಿಡಲಾಗಿದೆ ಮತ್ತು “ಬ್ರಿಟಿಷ್ ಕ್ರೌನ್” ಎಂಬುವುದು ಕಾಮನ್‌ವೆಲ್ತ್‌ನ ಮುಖ್ಯಸ್ಥರೆಂದು ಸಮ್ಮತಿಸಲಾಗಿದೆ. “ಆದರೆ ಅದರ ಸದಸ್ಯರುಗಳ” ಸಮಾನ ಸಂಬಂಧದ ಸಂಕೇತವಾಗಿ ಮಾತ್ರ.

ಡಾ. ರಾಧಾಕೃಷ್ಣನ್ ಅವರು ಕಾಮನ್‌ವೆಲ್ತ್‌ನ ಅರ್ಥವನ್ನು “ಸ್ವಾತಂತ್ರ್ಯ” ಮತ್ತು ಅನೌಪಚಾರಿಕ ಸಂಬಂಧ, ಎಂದು ವರ್ಣಿಸಿದ್ದಾರೆ. ಅದು ಆದರ್ಶಗಳ ಪಾಲುಗಾರಿಕೆ, ಅವಲಂಬನದ್ದಲ್ಲ, ಗುರಿಗಳ ಪಾಲುಗಾರಿಕೆ, ನಿಷ್ಠೆಗಳದ್ದಲ್ಲವೆಂದೂ ಮತ್ತು ಅದೊಂದು ಸಮಸ್ಯೆಗಳ ಉತ್ತಮ ತಿಳಿವಳಿಕೆಯನ್ನು ತರಲು ಕೊಡುಗೆ ನೀಡುವ ಸಂಯುಕ್ತ ವಿಚಾರದಂತೆ, ಆದರೆ ಸದಸ್ಯರ ಸ್ವಾತಂತ್ರ್ಯವನ್ನು ಅದು

ಮಿತಿಗೊಳಿಸುವುದಿಲ್ಲವೆಂದೂ ಹೇಳಿದ್ದಾರೆ.

ಆದರೆ, ಮಹಾರಾಣಿಯವರ ಭೇಟಿ ಮತ್ತು ಈ ಸಂದರ್ಭದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ರಾಜಕೀಯ ಶಿಷ್ಟಾಚಾರಗಳು, ಈ ಹೊಸ ಸಂಬಂಧಗಳು ಮೂಲಭೂತವಾಗಿ ಹಿಂದಿನದಕ್ಕಿಂತಲೂ ಬೇರೆಯಾಗಿವೆಯೇ ಎಂಬುದನ್ನು ಮರು ಪರಿಶೀಲಿಸುವಂತೆ ನಮ್ಮನ್ನು ಒತ್ತಾಯಿಸಿದೆ.

ಗಣರಾಜ್ಯ ದಿನದ (ಪೆರೇಡಿನಲ್ಲಿ) ಸಂಚಾರಪಥದಲ್ಲಿ ರಾಣಿಯವರನ್ನು ರಾಷ್ಟ್ರಪತಿಗಳೊಂದಿಗೆ ವೈಭವವಾಗಿ ಜಂಟಿಯಾಗಿ ವಾಹನದಲ್ಲಿ ಕರೆದೊಯ್ಯಲಾಯಿತು. ರಾಷ್ಟ್ರಪತಿ ಭವನದ ಮೇಲೆ ರಾಷ್ಟ್ರಪತಿಯವರ ಬಾವುಟದೊಂದಿಗೆ ರಾಣಿಯ ಧ್ವಜವೂ ಹಾರಾಡುತ್ತಿದೆ. ನಮಗೆ ಸಂಬಂಧಿಸಿದಂತೆ ಹೇಳುವುದಾದರೆ, ಕಾಮನ್‌ವೆಲ್ತ್‌ನ ಮುಖ್ಯಸ್ಥರು ನಮ್ಮ ರಾಷ್ಟ್ರಪತಿಗಳಿಗಿಂತಲೂ ಶ್ರೇಷ್ಠರೋ, ವರಿಷ್ಠರೋ ಅಥವಾ ಅವರಿಗೆ ಸಮಾನರೋ?

ಮಹಾರಾಣಿಯವರಿಗೆ ಯಾರು ಹೇಗೆ ಬಯಸುತ್ತಾರೆಯೋ ಹಾಗೆ ಎಷ್ಟಾದರೂ ಸಾಕಷ್ಟು ಅದ್ದೂರಿಯಾದ ಸ್ವಾಗತಗಳನ್ನು ನೀಡಲಿ. ಆದರೆ ಮಹಾರಾಣಿಯವರು ನಮ್ಮ ಗಣತಂತ್ರ ದಿನದ ಆಚರಣೆಯ ಸಾಂಪ್ರದಾಯಿಕ ರಕ್ಷಣಾದಳದ ಕವಾಯತಿನಲ್ಲಿ ರಾಷ್ಟ್ರಪತಿಯವರೊಂದಿಗೆ ಸಹಭಾಗಿತ್ವವನ್ನು ಪಡೆಯುವುದು ಖಂಡಿತವಾಗಿಯೂ ನಮ್ಮ ಗಣತಂತ್ರದ ಹಾಗೂ ಸ್ವತಂತ್ರ ಸ್ಥಾನಮಾನ ಅಂತಸ್ತುಗಳನ್ನು ಕೆಳಕ್ಕಿಳಿಸಿದಂತೆ. ಮಹಾರಾಣಿಯವರ ಬಗೆಗೆ ನಮ್ಮ ಗೌರವ, ಪ್ರೀತಿಯನ್ನು ವ್ಯಕ್ತಪಡಿಸಲು ಬೇಕಾದಷ್ಟು ದಾರಿಗಳಿರಬಹುದು. ಆದರೆ, ಆ ಉದ್ದೇಶಕ್ಕಾಗಿ, ನಮ್ಮ ಸ್ವತಂತ್ರ ಗಣರಾಜ್ಯದ ಪ್ರಥಮ ಪ್ರಜೆಗೆ ಮಾತ್ರವೇ ಮೀಸಲಿರುವಂತಹ ಸ್ಥಾನವನ್ನು ನಾವು ಎಂದೂ ಬಿಟ್ಟುಕೊಡಬಾರದು. ನಾವು ಹಾಗೆ ಮಾಡಿದ್ದೇ ಆದರೆ, ಕಾಮನ್‌ವೆಲ್ತ್‌ನೊಡನೆ ನಮ್ಮ ಸಂಬಂಧವು ಸಮಾನತೆಯದಲ್ಲ ಅದರೆ ಅಧೀನದ್ದು–ಕೈಕೆಳಗಿನದು. ನಮ್ಮ ಸಾರ್ವಭೌಮತೆಗೆ ಅಂತಹ ಅಂತಸ್ತು ಜುಗುಪ್ಸೆ ತರುವಂತಹುದು. ಅದು ಬದಲಾಗಲೇಬೇಕು.

(೧೯೬೧ರ ಫೆಬ್ರವರಿ ೬)



## ಕಾಮನ್‌ವೆಲ್ತ್‌ನ ಬಗೆಗೆ ಕೆಲವು ಆಲೋಚನೆಗಳು

ಕಾಮನ್‌ವೆಲ್ತ್ ಒಕ್ಕೂಟದ ಪ್ರಧಾನಮಂತ್ರಿಗಳು, ಪಾಕಿಸ್ತಾನದ ಅಧ್ಯಕ್ಷರೂ ಸೇರಿದಂತೆ, ಪರಸ್ಪರ ಭೇಟಿಯಾದರು, ಚರ್ಚಿಸಿದರು ಮತ್ತು ಚದುರಿಹೋದರು. ಅವರು ಯಾವುದರ ಬಗೆಗೂ ಏನನ್ನೂ ನಿರ್ಧರಿಸಲಿಲ್ಲ. ಏಕೆಂದರೆ, ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕಾಮನ್‌ವೆಲ್ತ್‌ನ ಸ್ವಭಾವದಲ್ಲಿಯೇ ಇಲ್ಲ. ಸಮಾವೇಶದ ಅಂತ್ಯದಲ್ಲಿ ಹೊರಬಿದ್ದ ಅಧಿಕೃತ ಸಂಯುಕ್ತ ಪ್ರಕಟಣೆಯು ಕಾಮನ್‌ವೆಲ್ತ್ ಅನ್ನು ಹೀಗೆ ವಿವರಿಸುತ್ತದೆ: "ಅದು ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ಕಾರ್ಯನೀತಿಗಳಿಗೆ ಜವಾಬ್ದಾರರಾಗಿರುವಂತಹ, ಸ್ವತಂತ್ರ ಸಾರ್ವಭೌಮ ರಾಷ್ಟ್ರಗಳ ಒಂದು ಕೂಟ." ಆದ್ದರಿಂದ ಅವುಗಳು ಎಲ್ಲರನ್ನೂ ಅಥವಾ ಯಾವುದೇ ಸದಸ್ಯರನ್ನು ಬದ್ಧಗೊಳಿಸುವಂತಹ ಯಾವ ನಿರ್ಧಾರವನ್ನೂ ತೆಗೆದುಕೊಳ್ಳಲು ಆಗುವುದಿಲ್ಲ. ಹಾಗಿದ್ದಲ್ಲಿ ಕಾಮನ್‌ವೆಲ್ತ್‌ನ ಉದ್ದೇಶವಾದರೂ ಏನು? ಅವರಲ್ಲಿ, ಸಂಬಂಧಗಳ ಯಾವುದೇ ಸಾಮಾನ್ಯವಾದ ಬಂಧವಿರದಿದ್ದಲ್ಲಿ ಅಥವಾ ಸಾಧಾರಣವಾಗಿ ಒಪ್ಪಿತವಾದ ಯಾವುದೇ ಒಂದು ನಿಗದಿತ ತತ್ತ್ವ, ಸಿದ್ಧಾಂತಗಳ ಬಗೆಗೆ ಹೊಣೆ ಬಾಧ್ಯತೆಗಳಿರದಿದ್ದಲ್ಲಿ, ಈ ರಾಷ್ಟ್ರಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಜನರು ಈ ಸಂಬಂಧವನ್ನು ಮುಂದುವರಿಸುವ ಬಗೆಗೆ ಯಾವುದೇ ಸ್ಫೂರ್ತಿ ಅಥವಾ ಉತ್ಸಾಹ ತಳೆಯುವುದಿಲ್ಲ. ಏಕೆಂದರೆ, ಈ ಬಾಂಧವ್ಯವು ಅವರಲ್ಲಿ ಕೇವಲ ಅಹಿತಕರವೂ, ವಿಷಾದಭರಿತವೂ ಆದ ಗತದ ನೆನಪುಗಳನ್ನು ಮಾತ್ರ ಉದ್ದೀಪಿಸುತ್ತದೆಯೇ ಹೊರತು ಪ್ರಕಾಶ ಮಾನವೂ, ಉನ್ನತವೂ ಆದ ಭವಿಷ್ಯದ ಬಗೆಗೆ ಯಾವುದೇ ಭಾವನೆಗಳನ್ನೂ, ಆಕಾಂಕ್ಷೆಗಳನ್ನೂ ಹುಟ್ಟಿಸುವುದಿಲ್ಲ.

ಇಂಗ್ಲೆಂಡಿನ ಮಹಾರಾಣಿಯನ್ನು 'ಅದರ (ಇಂಗ್ಲೆಂಡಿನ) ಸ್ವತಂತ್ರ ಸದಸ್ಯ ರಾಷ್ಟ್ರಗಳ ಮುಕ್ತ ಬಾಂಧವ್ಯದ (ಒಕ್ಕೂಟದ) ಸಂಕೇತವೆಂದೂ, ಹಾಗಾಗಿ ಕಾಮನ್‌ವೆಲ್ತ್‌ನ ಮುಖ್ಯಸ್ಥೆ' ಎಂದೂ ಮನ್ನಿಸಲಾಗಿದೆ. ಆದರೆ, ಕಾಮನ್‌ವೆಲ್ತ್‌ನ ಬಹುತೇಕ ಸದಸ್ಯರಿಗೆ, ಮಹಾರಾಣಿಯ ಜೊತೆಗೆ ಯಾವುದೇ ಭಾವನಾತ್ಮಕ ಸ್ನೇಹ, ವಿಶ್ವಾಸಗಳಿಲ್ಲ. ಅವರು ರಾಜಪ್ರಭುತ್ವವನ್ನು, ಯಾವುದೇ ಸ್ವರೂಪದಲ್ಲಿಯೇ ಆದರೂ, ಪ್ರತಿಗಾಮಿಯೆಂದೇ ಪರಿಗಣಿಸುತ್ತಾರೆ ಮತ್ತು ಆದ್ದರಿಂದಲೇ, ಗಣತಂತ್ರ ಸ್ವರೂಪದ ಸಂವಿಧಾನಾತ್ಮಕ ಸರ್ಕಾರಗಳನ್ನು ಒಪ್ಪಿ ಅಳವಡಿಸಿಕೊಂಡಿದ್ದಾರೆ. ಭೂತಕಾಲದ

ನೆನಪುಗಳು ಹಾಗೂ ವರ್ತಮಾನದ ನಂಬಿಕೆಗಳ ನಡುವೆಯೂ ಅವರು ಮಹಾರಾಣಿಯನ್ನು ಕಾಮನ್‌ವೆಲ್ತ್‌ನ ಮುಖ್ಯಸ್ಥೆ ಎಂದು ಒಪ್ಪಿಕೊಂಡಿರುವಾಗ, ಈ ಒಕ್ಕೂಟವು ಕೆಲವಾದರೂ ಪ್ರಯೋಜನಕಾರಿಯೂ ಉದಾತ್ತವೂ ಆದ ಉದ್ದೇಶಗಳನ್ನು ಸಾಧಿಸಬೇಕು.

ರಾಷ್ಟ್ರಗಳ ಕಾಮನ್‌ವೆಲ್ತ್ ಪ್ರಥಮವಾಗಿ ರೂಪಿಸಲ್ಪಟ್ಟಾಗ ಎಲ್ಲ ಸದಸ್ಯ ರಾಷ್ಟ್ರಗಳೂ, ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಟ್ಟಿದ್ದವೆಂದೂ ಮತ್ತು ಅವುಗಳ ಮುಂದುವರೆದ ಸಂಬಂಧವು ಅನೇಕ ಇತರ ಸಾಮಾನ್ಯ ಅಂಶಗಳನ್ನು ಹೊರತರುವುದೆಂದು ಭಾವಿಸಲಾಗಿತ್ತು. ಆದರೆ ಕಳೆದ ಹನ್ನೆರಡು ವರ್ಷಗಳ ಅವಧಿಯಲ್ಲಿ ಈ ಭರವಸೆಯು ಕೈಗೂಡಲಿಲ್ಲ. ಪಾಕಿಸ್ತಾನವು ಪ್ರಜಾಪ್ರಭುತ್ವಕ್ಕೆ ವಿದಾಯ ಹೇಳಿತು ಮತ್ತು ಮಿಲಿಟರಿ ಸರ್ವಾಧಿಕಾರತ್ವವನ್ನು ಅಳವಡಿಸಿಕೊಂಡಿತು. ಕಾಮನ್‌ವೆಲ್ತ್ ಒಕ್ಕೂಟವು ಅದನ್ನು ಗಣನೆಗೇ ತೆಗೆದುಕೊಳ್ಳಲಿಲ್ಲ. ಪಾಕಿಸ್ತಾನವು ಕಾಮನ್‌ವೆಲ್ತ್‌ನ ಸದಸ್ಯರಾಷ್ಟ್ರವಾಗಿ ಮುಂದುವರೆದಿದೆ. ಇತ್ತೀಚಿನ ಸಮಾವೇಶದಲ್ಲಿ ಬೇರೆ ಎಲ್ಲ ರಾಷ್ಟ್ರಗಳನ್ನೂ ಆ ರಾಷ್ಟ್ರದ ಪ್ರಧಾನ ಮಂತ್ರಿಗಳು ಪ್ರತಿನಿಧಿಸಿದರೆ, ಪಾಕಿಸ್ತಾನವನ್ನು ರಾಷ್ಟ್ರದ ಮುಖ್ಯಸ್ಥ ಪ್ರೆಸಿಡೆಂಟರು ಪ್ರತಿನಿಧಿಸಿದರು. ಆರ್ಥಿಕ ವಿಷಯಗಳಲ್ಲಿ ಕೂಡ ಪಾಕಿಸ್ತಾನವು ಇತರ ಸದಸ್ಯ ರಾಷ್ಟ್ರಗಳನ್ನು ಅನುಸರಿಸಲು ನಿರಾಕರಿಸಿತು. ಕುಸಿಯುತ್ತಿರುವ ಸ್ಟರ್ಲಿಂಗ್‌ನ ಮೀಸಲು ನಿಧಿಯ ಸಂದಿಗ್ಧತೆಯನ್ನು ಎದುರಿಸಲು ಕಾಮನ್‌ವೆಲ್ತ್ ಒಕ್ಕೂಟದ ಇತರ ಎಲ್ಲ ರಾಷ್ಟ್ರಗಳೂ ತಮ್ಮ ನಾಣ್ಯಗಳ ಚಲಾವಣೆಯನ್ನು ಅಮೌಲ್ಯಗೊಳಿಸಿದರೂ, ಪಾಕಿಸ್ತಾನವು, ಅವುಗಳನ್ನು ಅನುಸರಿಸಲು ನಿರಾಕರಿಸಿತು.

ಕಾಮನ್‌ವೆಲ್ತ್‌ಗೆ ತನ್ನ ನಾಗರಿಕರಿಗೆ ಎಲ್ಲ ಸದಸ್ಯ ರಾಷ್ಟ್ರಗಳಲ್ಲಿಯೂ ಸಮಾನ ಅಂತಸ್ತನ್ನು, ಸ್ಥಾನಮಾನಗಳನ್ನು ಕೊಡಲು ಕೂಡ ಸಾಧ್ಯವಾಗಿಲ್ಲ. ರಾಷ್ಟ್ರೀಯವಾಗಿ ಕಾಮನ್‌ವೆಲ್ತ್ ರಾಷ್ಟ್ರದ ನಾಗರಿಕರನ್ನು ಮತ್ತೊಂದು ಸದಸ್ಯ ರಾಷ್ಟ್ರದಲ್ಲಿ ಪರದೇಶದವರಂತೆ ನಡೆಸಿಕೊಳ್ಳಲಾಗುವುದಿಲ್ಲ. ಆದರೆ, ವಾಸ್ತವವಾಗಿ, ಮತ್ತು ಅನೇಕಬಾರಿ ಕಾನೂನಿಗೆ ಅನುಸಾರವಾಗಿ, ನಾಗರಿಕರಿಗೆ, ಬೇರೆ ಬೇರೆ, ದೇಶದಲ್ಲಿ ಬೇರೆ ಬೇರೆ ರೀತಿಯ ವರ್ತನೆಗಳು ಅಸ್ತಿತ್ವದಲ್ಲಿರುತ್ತವೆ. ಪಾಕಿಸ್ತಾನದಲ್ಲಿ ಭಾರತದ ನಾಗರಿಕರನ್ನು ಕಾಮನ್‌ವೆಲ್ತ್ ಕೂಟದ ಬೇರೆ ದೇಶಗಳ ನಾಗರಿಕರಿಗೆ ಸರಿಸಮನಾಗಿ ನಡೆಸಿಕೊಳ್ಳುವುದಿಲ್ಲ. ಬ್ರಿಟಿಷ್ ನಾಗರಿಕರು ಈಗಲೂ ಎಲ್ಲ ಪ್ರದೇಶಗಳಲ್ಲಿಯೂ, ಬೇರೆ ದೇಶಗಳ ನಾಗರಿಕರಿಗೆ ನಿರಾಕರಿಸುವ ವಿಶೇಷ ಸವಲತ್ತುಗಳನ್ನು ಅನುಭವಿಸುತ್ತಾರೆ.

ವರ್ಣಭೇದ ನೀತಿ, ಜನಾಂಗ ದ್ವೇಷ ಇವು ಉದಾಹರಣೆಗೆ ಹೇಳಬೇಕೆಂದರೆ, ಅತ್ಯಂತ ಢಾಳಾಗಿ ಕಾಣುವ ನಿದರ್ಶನಗಳು. ಈ ಪ್ರಶ್ನೆಯನ್ನು ವಿಧ್ಯುಕ್ತವಾಗಿ ಚರ್ಚಿಸಲು ನಿರಾಕರಿಸುವ ಮೂಲಕ ಕಾಮನ್‌ವೆಲ್ತ್ ಒಕ್ಕೂಟದ ಸದಸ್ಯರು,



ಕಾಮನ್‌ವೆಲ್‌ನಲ್ಲಿ, ಮನುಷ್ಯರ ಮತ್ತು ಜನಾಂಗ ರಾಷ್ಟ್ರಗಳ ನಿಜವಾದ 'ಮುಕ್ತ ಬಾಂಧವ್ಯ'ದ ಬಗೆಗೆ ಭರವಸೆ ತಾಳುತ್ತಿದ್ದವರನ್ನು ನಿರಾಸೆಗೊಳಿಸಿದ್ದಾರೆ. ಕಾಮನ್‌ವೆಲ್ತ್ ಯಾವುದೇ ಒಂದು ಆದರ್ಶವನ್ನು ಪ್ರತಿನಿಧಿಸುವುದಿಲ್ಲ. ಆದರೆ ಅಭ್ಯಾಸಬಲದಿಂದ ಬ್ರಿಟಿಷ್ ರಾಜಪ್ರಭುತ್ವದ ಮಾಂತ್ರಿಕ ಪ್ರಭಾವದಿಂದ ಹೊರಗೆ ಬರಲು ಇಚ್ಛಿಸದಿರುವ ಜನರ, ಉದ್ದೇಶರಹಿತವಾದ ಒಂದು ಸ್ನೇಹಕೂಟ ಮಾತ್ರ ಎಂಬುದನ್ನು ಅವರು ತೋರಿಸಿದ್ದಾರೆ.

ಅಧಿಕೃತ ಪ್ರಕಟಣೆಯು ಈ ಹೇಳಿಕೆಯಿಂದ ಕಾಮನ್‌ವೆಲ್ತ್‌ಗೆ ಒಂದು ರೀತಿಯ ಆದರ್ಶದ ಉಡುಗೆ ಉಡಿಸುತ್ತದೆ: "ಎಲ್ಲರ ಮೂಲ ಉದ್ದೇಶವೂ ವಿಶ್ವಶಾಂತಿ ಮತ್ತು ಭದ್ರತೆ. ಆ ಉದ್ದೇಶವನ್ನು ಸಾಧಿಸುವುದಕ್ಕಾಗಿ ತಮ್ಮ ಅಧಿಕಾರದಲ್ಲಿರುವ ಎಲ್ಲವನ್ನೂ ಮಾಡುವುದೇ ಅವರ ಘೋಷಿತ ಉದ್ದೇಶ ಮತ್ತು ಶಾಂತಿಪ್ರಿಯರಾದ ವಿಶ್ವದ ಎಲ್ಲ ರಾಷ್ಟ್ರಗಳೊಡನೆಯೂ, ಆ ಗುರಿಸಾಧನೆಗಾಗಿ ಸಹಕಾರವನ್ನು ಮುಂದುವರಿಸುವುದೇ ಅವರ ಉದ್ದೇಶ.' 'ಇವೆಲ್ಲವೂ ಕೇಳಲು ಬಹಳ ಸೊಗಸಾಗಿರುತ್ತದೆ. ಆದರೆ ಚರ್ವಿತಚರ್ವಣದ ಸಾಧಾರಣ ನುಡಿಗಳಿಂತ ಹೆಚ್ಚೇನೂ ಅಲ್ಲ. ವಿಶ್ವಶಾಂತಿ ಮತ್ತು ಭದ್ರತೆಗಳನ್ನು ಮುಂದುವರೆಸಲು' ಕಾಪಾಡಲು, ಇಲ್ಲಿಯವರೆಗೆ ಕಾಮನ್‌ವೆಲ್ತ್ ಯಾವ ಕ್ರಮಗಳನ್ನು ತೆಗೆದುಕೊಂಡಿದೆ? ಒಂದು ಸದಸ್ಯರಾಷ್ಟ್ರ ಇನ್ನೊಂದು ಸದಸ್ಯ ರಾಷ್ಟ್ರಕ್ಕೆ ವಿರುದ್ಧವಾಗಿ ಮಾಡುವ ಆಕ್ರಮಣವನ್ನು ಅಂತ್ಯಗೊಳಿಸಲು ಅದು ಯಾವ ಕ್ರಮವನ್ನೂ ಕೈಗೊಂಡಿಲ್ಲ, ಅಥವಾ ಒಂದು ಸದಸ್ಯ ರಾಷ್ಟ್ರದ ಮೇಲೆ ಸದಸ್ಯನಲ್ಲದ ರಾಷ್ಟ್ರಶಕ್ತಿಯ ಮುತ್ತಿಗೆಯನ್ನು, ಆಕ್ರಮಣವನ್ನು ನಿವಾರಿಸಲು ಕೂಡ ಯಾವ ಪ್ರಯತ್ನವನ್ನೂ ಕೈಗೊಂಡಿಲ್ಲ. ಕಾಶ್ಮೀರದಲ್ಲಿ ಪಾಕಿಸ್ತಾನವು ಆಕ್ರಮಣಕಾರಿಯಾಗಿಯೇ ಮುಂದುವರಿಯುತ್ತಿದೆ. ಕಾಮನ್‌ವೆಲ್ತ್ ಒಕ್ಕೂಟದ ರಾಷ್ಟ್ರಗಳು ಆಕ್ರಮಣವನ್ನು ಹಿಂತೆಗೆದುಕೊಳ್ಳುವಂತೆ ಅದನ್ನು ಕೇಳಲು, ಕಡೆಯಪಕ್ಷ, ನೈತಿಕ ಒತ್ತಡವನ್ನಾದರೂ ಉಪಯೋಗಿಸಿಲ್ಲ. ಚೀನಾದ ಆಕ್ರಮಣದ ವಿಷಯವು ಸಮಾವೇಶದಲ್ಲಿ ಚರ್ಚಿಸಲ್ಪಟ್ಟಿಲ್ಲ. ನಿಜ, ಭಾರತದ ಪ್ರಧಾನಮಂತ್ರಿಗಳು ಆ ವಿಷಯವನ್ನು ಅಲ್ಲಿ ಎತ್ತಲಿಲ್ಲ. ಆದರೆ, ಮತ್ತೊಂದು ದೇಶವು ಹಾನಿಗೆ, ತೊಂದರೆಗೆ ಒಳಗಾಗಬಾರದೆಂದು ನೋಡುವಂಥ ನೈತಿಕ ಜವಾಬ್ದಾರಿಯಾದರೂ, ಈ ಸದಸ್ಯ ರಾಷ್ಟ್ರಗಳಿಗೆ ಇರಬಾರದೇ? ಕೇಳದೇ ಇರುವ ಸಹಾಯದ ನೀಡಿಕೆಯು ನಮ್ಮ ಸಾರ್ವಭೌಮತ್ವದ ಮೇಲಿನ ಉಲ್ಲಂಘನೆ, ಅತಿಕ್ರಮವೆಂದು ಅರ್ಥಮಾಡಿಕೊಳ್ಳಬಹುದು. ಆದರೆ, ಈ ಆಕ್ರಮಣಕ್ಕಾಗಿ ಅವರು ಚೀನಾವನ್ನು ಖಂಡಿತವಾಗಿಯೂ ಖಂಡಿಸಿ, ದೂಷಿಸಬಹುದಾಗಿತ್ತು. ಲಡಾಖ್‌ನಲ್ಲಿ ಚೀನಾ ಆಕ್ರಮಣಕಾರಿ ಎಂದು ಘೋಷಿಸಲು ತನ್ನ ಸ್ನೇಹಿತರನ್ನು ಕೇಳಲು, ವಿನೀತ ಅರ್ಜಿದಾರನಂತೆ ಹೋಗುವ ಅವಶ್ಯಕತೆ ಭಾರತಕ್ಕೆ ಇರುವುದಿಲ್ಲ. ಈ ವಿಷಯದ

ಬಗೆಗೆ ಭಾರತದ ಮೌನವು, ಭಾರತದ ಪ್ರಧಾನಮಂತ್ರಿಗಳ ಮನವಿಯಿಂದಾಗಿ ಎಂದು ಇದನ್ನು ಅರ್ಥೈಸಲಾಗುವುದಿಲ್ಲ.

ಈ ಸಮಾವೇಶದಲ್ಲಿ ಅರ್ಥವ್ಯವಸ್ಥೆಯ ಬಗೆಗಿನ ಪ್ರಶ್ನೆಗಳನ್ನು ಕೂಡ ಚರ್ಚಿಸಲಾಯಿತು. ಆದರೆ ಅವರೆಲ್ಲರಿಗೂ ಸಂಬಂಧಿಸಿದ ವಿಷಯಗಳ ಬಗೆಗೆ ಕೂಡ ಯಾವುದೇ ಸ್ಪಷ್ಟವಾದ ಕಾರ್ಯನೀತಿಯ ನಿರ್ಧಾರಗಳನ್ನೂ ತೆಗೆದುಕೊಳ್ಳಲಿಲ್ಲ. ಯೂರೋಪಿನ ಸಾಮಾನ್ಯ ಮಾರುಕಟ್ಟೆಯು, ಕಾಮನ್‌ವೆಲ್ತ್ ಒಕ್ಕೂಟದ ರಾಷ್ಟ್ರಗಳ ರಫ್ತು ವ್ಯಾಪಾರದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟುಮಾಡುತ್ತದೆ. ಆದರೆ, ಯೂರೋಪ್ ದೇಶಗಳು 'ದಿ ಗ್ಯಾಟ್' (The GATT) ಸಿದ್ಧಾಂತಗಳನ್ನು ಅನುಸರಿಸಬೇಕು ಎಂಬ ಕಳಕಳಿಯನ್ನೂ, ಭರವಸೆಯನ್ನೂ ವ್ಯಕ್ತಪಡಿಸುವುದಕ್ಕಿಂತಲೂ ಹೆಚ್ಚಾಗಿ, ಸಮಸ್ಯೆಯನ್ನು ಎದುರಿಸಲು ಅವು ಯಾವುದೇ ಒಂದು ಹೊಂದಾಣಿಕೆಯ ಕಾರ್ಯಯೋಜನೆಯ ರೂಪುರೇಷೆಯನ್ನೂ ಅವುಗಳು ತಯಾರಿಸಲು ಸಾಧ್ಯವಾಗಲಿಲ್ಲ. ಏಷಿಯಾ ಮತ್ತು ಆಫ್ರಿಕಾಗಳ, ಅಭಿವೃದ್ಧಿ ಹೊಂದದಿರುವ ದೇಶಗಳ ಅಭಿವೃದ್ಧಿಯ ನೆರವು ನೀಡುವುದರ ಜವಾಬ್ದಾರಿಯನ್ನು ತಪ್ಪಿಸಿಕೊಂಡು ಅದನ್ನು ಅಧಿಕಾರಿಗಳಿಗೆ ಹಾಗೂ ಕಾಮನ್‌ವೆಲ್ತ್ ಆರ್ಥಿಕ ಸಲಹಾಸಮಿತಿಗೆ ವರ್ಗಾಯಿಸಲಾಗಿದೆ. ಅವರು ಒಪ್ಪಿಕೊಂಡಿರುವ ಒಂದೇ ಒಂದು ವಿಷಯವೆಂದರೆ, ಪರಿಣತ ಕೌಶಲ್ಯಗಳು ಮತ್ತು ಅನುಭವದ ವಿನಿಮಯ ಮಾಡಿಕೊಳ್ಳುವುದನ್ನು ಮಾತ್ರ. ಇದು ಮತ್ತಷ್ಟು ಹೆಚ್ಚಿಗೆ ಬ್ರಿಟಿಷ್ ಇಂಜಿನಿಯರುಗಳನ್ನೂ ಮತ್ತು ತಂತ್ರಜ್ಞರನ್ನೂ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಉದ್ಯೋಗಗಳಿಗೆ ನೇಮಿಸಿಕೊಳ್ಳುವುದು ಎಂದು ಅರ್ಥ ಅಷ್ಟೇ.

ಕಾಮನ್‌ವೆಲ್ತ್, ವ್ಯಾವಹಾರಿಕ ಸಮಸ್ಯೆಗಳನ್ನೂ ಮತ್ತು ವಾಸ್ತವವಾದ ಸಂಗತಿಗಳನ್ನು ಪರಿಣಾಮಕಾರಿಯಾದ ರೀತಿಯನ್ನು ನಿಭಾಯಿಸುವ ತಂತ ಸಾಧನಗಳನ್ನು ಕಂಡು ಹಿಡಿಯದೇ ಇದ್ದಲ್ಲಿ, ಅದು ಅಂತರರಾಷ್ಟ್ರೀಯ ಸಹಕಾರದ ಉಪಯುಕ್ತ ಮಾಧ್ಯಮವಾಗಿ ಹೊಸರಹೊಮ್ಮಲಾರದು. ಯು.ಎನ್.ಓ.ದ ವಿವಿಧ (ಏಜೆನ್ಸಿ) ಸಂಸ್ಥೆಗಳಿಗಿಂತಲೂ, ತಾನು ಇನ್ನೂ ಹಿರಿದಾಗಿ ಏನನ್ನಾದರೂ ಅಸಲಿಯಾದದ್ದನ್ನು– ನೀಡಲಿರುವುದಾಗಿ, ಕಾಮನ್‌ವೆಲ್ತ್ ಪುರಾವೆಗಳಿಂದ ತೋರಿಸಿಕೊಡಬೇಕಾಗಿದೆ. ಅದು ಹಾಗೆ ಮಾಡದಿದ್ದಲ್ಲಿ ಅದು ಕೇವಲ ಬ್ರಿಟಿಷ್ ಸಾಮ್ರಾಜ್ಯದ 'ವಿಂಡೋ ಡ್ರೆಸ್ಸಿಂಗ್' [ಗಿರಾಕಿಗಳನ್ನು ಆಕರ್ಷಿಸಲು ಅಂಗಡಿಯಲ್ಲಿ ಕಿಟಕಿಯಲ್ಲಿ ಸರಕುಗಳ ಪ್ರದರ್ಶನ, ಕೆಟ್ಟದ್ದನ್ನು ಮರೆಮಾಚಿ, ಒಳಿತನ್ನು ಮಾತ್ರ ಪ್ರದರ್ಶಿಸುವುದು] ಆಗಿ, ಬ್ರಿಟನ್ನಿನ ಹಾಗೂ ಇತರ ಅನೇಕ ಹೊಸದಾಗಿ ಸ್ವಾತಂತ್ರ್ಯ ಪಡೆದ ದೇಶದ ಜನರನ್ನು ಮೋಸಗೊಳಿಸುವುದಾಗುತ್ತದೆ. ಅದು ಒಂದು ಮಿಥ್ಯಾ ಕಲ್ಪನೆಗಿಂತಲೂ ಹೆಚ್ಚಿನದೇನೂ ಅಲ್ಲವಾಗುತ್ತದೆ. ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿ,



ಸ್ವಾತಂತ್ರ್ಯವನ್ನು ಪಡೆದ ದೇಶಗಳ ರಾಷ್ಟ್ರೀಯ ಗೌರವ ಹೆಮ್ಮೆಗಳನ್ನು ನಷ್ಟ ಮಾಡಿದಂಥ ಮಿಥ್ಯಾಕಲ್ಪನೆ. ಕಾಮನ್‌ವೆಲ್ತ್‌ಗೆ ಒಂದು ಗತಕಾಲವಿದೆ, ನಾವೆಲ್ಲರೂ ಅದನ್ನು ಮರೆಯಲು ಬಯಸುತ್ತೇವೆ. ಆದರೆ, ಯಾವಾಗ ಇದು 'ಸ್ವತಂತ್ರ ಸಾರ್ವಭೌಮ ರಾಷ್ಟ್ರಗಳ ಮುಕ್ತ ಸಂಬಂಧ'ವು ತನಗಾಗಿ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆಯೋ ಆಗ ಮಾತ್ರವೇ ಇದು ಸಾಧ್ಯವಾಗುತ್ತದೆ. (ನಾವು ಕಾಮನ್‌ವೆಲ್ತ್‌ನ ಗತಕಾಲವನ್ನು ಮರೆಯುವುದು.)

(೧೯೬೦ರ ಮೇ ೨೩)

# ಭಾರತ, ನೇಪಾಳ ಮತ್ತು ಪ್ರಜಾಪ್ರಭುತ್ವ

ಡಿಸೆಂಬರ್ ೧೫ರಂದು, ನೇಪಾಳದ ರಾಜರು ಸಂಸತ್ತನ್ನು ವಿಸರ್ಜಿಸಿ ಸಂಪೂರ್ಣ ಅಧಿಕಾರವನ್ನು ವಹಿಸಿಕೊಂಡರು. ಅದೇ ದಿನವೇ ಪ್ರಧಾನ ಮಂತ್ರಿ ಬಿ.ಪಿ. ಕೊಯಿರಾಲಾ ಮತ್ತು ಇತರ ಮಂತ್ರಿಗಳನ್ನು ಬಂಧಿಸಲಾಯಿತು. ಸ್ವಲ್ಪ ಸಮಯದ ನಂತರ, ಬಹುತೇಕ ಇತರ ರಾಜಕೀಯ ನಾಯಕರನ್ನು ಕೂಡ ಸ್ಥಾನಬದ್ಧತೆ (ಸೆರೆಯಲ್ಲಿ) ಯಲ್ಲಿಡಲಾಯಿತು ಮತ್ತು ರಾಜ್ಯದಲ್ಲಿ ಎಲ್ಲ ರಾಜಕೀಯ ಚಟುವಟಿಕೆಗಳ ಮೇಲೂ ಪ್ರತಿಬಂಧಕಾಜ್ಞೆಯನ್ನು ಹೇರಲಾಯಿತು. ಪೋಲಿಸರು ಅವರ ಶೋಧನೆಗೆಂದು ಹೊರಟಾಗ ಕಮ್ಯೂನಿಸ್ಟರು ಭೂಗತರಾಗಿದ್ದಾರೆಂದು ವರದಿಯಾಯಿತು.

ರಾಜನ ಈ ಕಾರ್ಯವು ಎಷ್ಟು ವ್ಯವಸ್ಥಿತವಾಗಿ ಯೋಜಿಸಲ್ಪಟ್ಟಿತ್ತೆಂದರೆ, ಬಹುಮಟ್ಟಿಗೆ ದೇಶದ ಒಳಗೆ ಮತ್ತು ಹೊರಗೆ ಎಲ್ಲ ಕಡೆಯೂ ಈ ಸುದ್ದಿಯು ಆಶ್ಚರ್ಯದಂತೆ ಪ್ರಕಟಗೊಂಡಿತು. ನೇಪಾಳದಲ್ಲಿದ್ದ ಭಾರತದ ರಾಯಭಾರಿಯು, 'ಶಿಕಾರಿ'ಗೆಂದು ಜನರಲ್ ತಿಮ್ಮಯ್ಯನವರೊಂದಿಗೆ ಖಟ್ಮಂಡುವಿಗೆ ಹೋಗಿದ್ದರು. ತಾವು ಕೂಡಾ 'ಶಿಕಾರಿ'ಗೆ ಹೋಗಬೇಕೆಂಬ ಯೋಜನೆ ಹಾಕಿಕೊಂಡಿದ್ದ ನೇಪಾಳದ ಸೈನ್ಯದ ಮುಖ್ಯಸ್ಥರು (Commandero-in-chief) ಕಡೆಯ ಗಳಿಗೆಯಲ್ಲಿ ತಮ್ಮ ಕಾರ್ಯಕ್ರಮವನ್ನು ರದ್ದುಗೊಳಿಸಿದರು. ಆದರೆ ಭಾರತದ ರಾಯಭಾರಿಗಳು ಇದರ ಬಗೆಗೆ ಯಾವುದೇ ಸಂಶಯದ ಸುಳಿವನ್ನೂ ಹೊಂದಲಿಲ್ಲ, ಅಥವಾ ಸಂಶಯ ಪಡಲು ಅವರಿಗೆ ಸಾಧ್ಯವಾಗಲಿಲ್ಲ. ಮುಕ್ತ ಮತ್ತು ಅತಿಮಾತಿನ (ವಾಚಾಳಿತನದ) ನಮ್ಮ ವಿದೇಶಾಂಗ ನೀತಿಯ ಪರಂಪರೆಗೆ ಅನುಸಾರವಾಗಿ, ಬೇರೆಯವರ ವ್ಯವಹಾರದಲ್ಲಿ ಮೂಗು ತೂರಿಸುವುದಾಗಲಿ, ತಲೆಹಾಕಿಕೊಂಡು ಹೋಗುವುದಾಗಲೀ, ಅವರಿಗೆ ಸಂಬಂಧಿಸಿದುದಾಗಿರಲಿಲ್ಲ. ಇತರ ದೇಶದ ರಾಯಭಾರಿಗಳು ಕೂಡ ಇದಕ್ಕಿಂತಲೂ ಉತ್ತಮ ಪರಿಸ್ಥಿತಿಯಲ್ಲಿ ಇರಲಿಲ್ಲ. ಈ ಸಂಪೂರ್ಣ ಘಟನೆಯ ಬಗೆಗೆ, ಅವರ ವಿದೇಶೀ ಮಂತ್ರಿಗಳಿಗಾಗಲೀ ಅಥವಾ ಸ್ವತಃ ತಮಗೇ ಆಗಲೀ ಏನಾದರೂ ಸುದ್ದಿಯು ತಿಳಿದಿದ್ದರೆ, ಅವರು ಎಚ್ಚರಿಕೆಯಿಂದ ಮೌನವಾಗಿದ್ದು ಬಿಟ್ಟಿದ್ದಾರೆ. ಇಂತಹ ವಿಷಯದಲ್ಲಿ ಅತ್ಯಂತ ಅಸಾಮಾನ್ಯವಾದ, ಆದರೆ ಸಾಧಾರಣವಾಗಿ ಇದೆಯೆಂದು ಹೇಳುವ ಮುನ್ನರಿವು ಅಥವಾ ಪೂರ್ವಜ್ಞಾನದ ಬಡಾಯಿ



ಕೊಚ್ಚಿಕೊಳ್ಳುವುದಕ್ಕಿಂತಲೂ ತಾವು ಏನೂ ಗೊತ್ತಿರದ ಮೂಢರು, ದಡ್ಡರು ಎನಿಸಿಕೊಳ್ಳುವುದನ್ನೇ ಅವರು ಹೆಚ್ಚು ಇಷ್ಟಪಡುತ್ತಾರೆ.

ಎಲ್ಲ ವಿಧದ ಅಭಿಪ್ರಾಯವುಳ್ಳ ಜನರ ಬಂಧನ, ಎಲ್ಲ ರೀತಿಯ ರಾಜಕೀಯ ಚಟುವಟಿಕೆಗಳನ್ನೂ ಆಚ್ಛಾದಿಸುವಂತಹ ನಿಷೇಧ (blanket ban–ಕಂಬಳಿ ಮುಚ್ಚುವ ನಿಷೇಧ) ಮತ್ತು ಯಾವುದೇ ವಿದೇಶೀ ಶಕ್ತಿಗೂ ಘಟನೆಗಳ ಮುನ್ನರಿವು ಇಲ್ಲದಿರುವುದು ಇವೆಲ್ಲವೂ ರಾಜನ ಕಾರ್ಯದ ಸುತ್ತಲೂ ನಿಗೂಢತೆಯ ಮುಸುಕನ್ನು ಕವುಚಿದೆ. ಅಧಿಕೃತ ಪ್ರಕಟಣೆಗಳಿಂದ ಹೊರಬಿದ್ದಿರುವ, ಅಷ್ಟಷ್ಟು ತುಣುಕು ಸಮಾಚಾರಗಳನ್ನು ಹೊರತುಪಡಿಸಿದರೆ, ಇಂತಹ ತೀವ್ರವಾದ (ಉಗ್ರವಾದ) ಕ್ರಮವನ್ನು ತೆಗೆದುಕೊಳ್ಳುವಂತೆ ರಾಜನನ್ನು ಪ್ರಚೋದಿಸಿದ ಸಕಾರಣವಾದ ಉದ್ದೇಶಗಳ ಬಗೆಗೆ ಏನೂ ತಿಳಿದಿಲ್ಲ. ಯಾವುದೇ ವಿದೇಶೀ ಕೈವಾಡವೂ ಇಲ್ಲವೆಂಬುದನ್ನು ಖಚಿತವಾಗಿ ಹೇಳಬಹುದು. ವಿದೇಶೀ ಶಕ್ತಿಗಳ ಹಸ್ತಕ್ಷೇಪದ ಪ್ರಯತ್ನವನ್ನು ವಿಫಲಗೊಳಿಸುವ ಉದ್ದೇಶ ಹೊಂದಿತ್ತು ರಾಜನ ಈ ಕಾರ್ಯ ಎಂದು ಹೇಳಲು ಇದು ಇನ್ನೂ ತೀರಾ ಮುಂಚೆ ಎನಿಸುತ್ತದೆ. ಆದಾಗ್ಯೂ, ಕೊಯಿರಾಲ ಸರ್ಕಾರವು ಯಾವುದೇ ಇತರ ಸಂಸ್ಥೆಗಳ ಚಿತಾವಣೆಯಿಂದ ಕಾರ್ಯನಿರ್ವಹಿಸುತ್ತಿದ್ದಲ್ಲಿ. ಆ ಮಂತ್ರಿಮಂಡಲದ ರದ್ದತಿ ಹಾಗೂ ಬಂಧನದ ನಂತರ, ಸಂಬಂಧಿಸಿದ ವಲಯಗಳಲ್ಲಿ ಏನಾದರೂ ಪ್ರತಿಕ್ರಿಯೆಗಳಿರುತ್ತಿದ್ದವು. ರಾಜ್ಯದಲ್ಲಿ, ಕಮ್ಯೂನಿಸ್ಟರ ಮತ್ತು ಇತರ ಗುಂಪುಗಳ ಪ್ರತಿಕ್ರಿಯೆಗಳು ಕೂಡ ತೀರಾ ಮಂದವಾಗಿವೆ. ಅವರು ಭಯವಿಹ್ವಲರಾಗಿದ್ದಾರೆ ಅಥವಾ ಅವರು ನಿರ್ದಿಷ್ಟವಾಗಿ ಬೇಟೆಯಾಡಲ್ಪಟ್ಟಿಲ್ಲ ಅಥವಾ ಕಾಡಿಸಲ್ಪಟ್ಟಿಲ್ಲ. ಎಲ್ಲರೂ ಒಂದೇ ಹಣೆಬರಹವನ್ನು ಅನುಭವಿಸುತ್ತಿದ್ದಾರೆ. ಒಬ್ಬನೂ ಕೂಡಾ ಪರಿಸ್ಥಿತಿಯ ಬಗೆಗೆ ಮತ್ತೊಬ್ಬನಿಗಿಂತಲೂ ಹೆಚ್ಚು ಕಿರಿಕಿರಿ, ಹಸಿನೋವನ್ನು ಅನುಭವಿಸುತ್ತಿಲ್ಲ.

ಎಲ್ಲ ರಾಜಕೀಯ ಪಕ್ಷಗಳ ದಮನವು ಇದು. ಯಾವುದೇ ಒಬ್ಬ ವ್ಯಕ್ತಿಯ ಅಥವಾ ಒಂದು ಗುಂಪಿನ ವೈಫಲ್ಯ ಅಥವಾ ತೀವ್ರವಾದ ಕೊರತೆಗಳ ಪ್ರಶ್ನೆಯಲ್ಲ, ರಾಜನನ್ನು ಇಂತಹ ತುರ್ತುಕ್ರಮ ತೆಗೆದುಕೊಳ್ಳಲು ಪ್ರೋತ್ಸಾಹಿಸಿರುವುದು. ಆದರೆ, ತನ್ನ ದೇಶದಲ್ಲಿ ಪ್ರಜಾಸತ್ತಾತ್ಮಕ ಸ್ವರೂಪದ ಸರ್ಕಾರಕ್ಕೆ ಇತಿಶ್ರೀ ಹಾಡುವ ಅವರಲ್ಲಿರುವ ಅಭಿಲಾಷೆ ಎಂಬ ಭಾವನೆಯು ರಾಜ್ಯದ ಹೊರಗಡೆ ಸೃಷ್ಟಿಯಾಗಿದೆ. ನೇಪಾಳದಲ್ಲಿ ಪ್ರಜಾಪ್ರಭುತ್ವದ ಹಿನ್ನಡೆಯ ಬಗೆಗೆ ಮಾತನಾಡಿದಾಗ ಪಂಡಿತ ನೆಹರೂ ಈ ಭಾವನೆಯನ್ನು ವ್ಯಕ್ತಪಡಿಸಿದರು. ಆದಾಗ್ಯೂ, ಸಂವಿಧಾನವನ್ನು ರೂಪಿಸಿದ್ದು ಮತ್ತು ಚುನಾಯಿತ ಸರ್ಕಾರವು ಅಧಿಕಾರಕ್ಕೆ ಬರಲು ಎಡೆಮಾಡಿಕೊಟ್ಟು ರಂಗವನ್ನು ಸಿದ್ಧಪಡಿಸಿದ್ದು ಈ ರಾಜರೇ ಎಂಬುದನ್ನು ನಾವು ಮರೆಯಬಾರದು. ಅವರು ಈ ಹಂತದಲ್ಲಿ ಇಂತಹ ಅಸಾಮಾನ್ಯವಾದ ಕ್ರಮಕೈಗೊಳ್ಳಲು ನಿರ್ಧರಿಸಿದ್ದಾರೆಂದರೆ,

ಅದಕ್ಕೆ ಕಾರಣವು ಸಂಪೂರ್ಣ ರಾಜಪ್ರಭುತ್ವವನ್ನು ಸ್ಥಾಪಿಸಬೇಕೆಂಬ ಆವೇಗಯುಕ್ತ ಅಭಿಲಾಷೆಗಿಂತಲೂ ಹೆಚ್ಚಾಗಿ, ಖಂಡಿತವಾಗಿಯೂ ಇದನ್ನು ಬೇರೆ ಯಾವುದೋ ಗಂಭೀರವಾದ ಉದ್ದೇಶಕ್ಕಾಗಿ ಎಂದು ಆರೋಪಿಸಬಹುದು. ಅಲ್ಲದೇ, ಈಗಾಗಲೇ, ನೇಪಾಳದಲ್ಲಿ ಅರ್ಧ ಡಝನ್‌ಗಿಂತಲೂ ಹೆಚ್ಚು ಪ್ರಧಾನಮಂತ್ರಿಗಳಾಗಿದ್ದಾರೆ ಮತ್ತು ಬಹುತೇಕ, ರಾಜ್ಯದ ಎಲ್ಲ ಮುಖ್ಯ ವ್ಯಕ್ತಿಗಳೂ, ಸರದಿಯಂತೆ ಆ ಹುದ್ದೆಯನ್ನು ನಿರ್ವಹಿಸಿದ್ದಾರೆ ಎಂಬುದನ್ನು ನಾವು ಮರೆಯಲಾಗುವುದಿಲ್ಲ. ಶ್ರೀ ಬಿ.ಪಿ. ಕೊಯಿರಾಲಾ ಅವರನ್ನು ವಜಾ ಮಾಡಿದ ನಂತರ, ಸಂಸತ್ತಿನ ವಿಶ್ವಾಸ, ನಂಬಿಕೆಗಳನ್ನು ಗಳಿಸುವಂತಹ ಮತ್ತೊಬ್ಬ ಪ್ರಧಾನ ಮಂತ್ರಿಯನ್ನು ಗುರುತಿಸುವುದು ಸುಲಭವಾಗಿಲ್ಲ. ಈ ಪರಿಸ್ಥಿತಿಯಲ್ಲಿ ಬಹುಶಃ ರಾಜರಿಗೆ ಬೇರೆ ಯಾವ ದಾರಿಯೂ ಉಳಿದಿರಲಿಲ್ಲ.

ಪ್ರಜಾಪ್ರಭುತ್ವವನ್ನು ಪ್ರೀತಿಸುವ ಯಾವುದೇ ವ್ಯಕ್ತಿಯ ಮೊದಲ ಪ್ರತಿಕ್ರಿಯೆಯು ಈ ಘಟನೆಗಳ ಬಗೆಗೆ ವಿಷಾದವೇ ಆಗಿರುತ್ತದೆ. ಆದರೆ ಈ ವಿಷಾದನೀಯ ಕ್ರಮಕ್ಕೆ ಯಾವುದೇ ಹೊಣೆಯನ್ನು ನಿರ್ಧರಿಸಲು, ಈ ಹಂತದಲ್ಲಿ ಸಾಧ್ಯವೂ ಇಲ್ಲ ಮತ್ತು ಅದು ವಿವೇಕಪೂರ್ಣ ಕ್ರಮವೂ ಅಲ್ಲ. ತಮ್ಮ ವೈಯಕ್ತಿಕ ಅಧಿಕಾರವನ್ನು ಸ್ಥಾಪಿಸುವುದಕ್ಕಾಗಿ ರಾಜರು ಈ ಕ್ರಮ ತೆಗೆದುಕೊಂಡರೇ ಅಥವಾ ಜನರು ಮತ್ತು ರಾಜ್ಯದ ಬಗೆಗೆ ತಮ್ಮ ಕರ್ತವ್ಯವನ್ನು ನಿರ್ವಹಿಸಲೆಂದು ಈ ಕ್ರಮತೆಗೆದುಕೊಂಡರೇ ಎಂದು ಹೇಳುವುದು ಕಷ್ಟವಾಗಿದೆ. ಭಾರತದಮಟ್ಟಿಗೆ ಹೇಳುವುದಾದರೆ, ನೇಪಾಳದೊಡನೆ ನಾವು ಅತ್ಯಂತ ನಿಕಟ ಸಂಬಂಧಗಳನ್ನು ಹೊಂದಿದ್ದೇವೆ. ಮತ್ತು ನಾವು ಯಾವುದೇ ವ್ಯಕ್ತಿತ್ವಗಳಿಂದಾಗಲೀ ಅಥವಾ ನಿರ್ದಿಷ್ಟ ಸ್ವರೂಪದ ಸರ್ಕಾರದಿಂದಾಗಲೀ ಬದ್ಧರಾಗಿಲ್ಲ. ಈ ವಿಷಯದಲ್ಲಿ ತೀರ್ಮಾನಿಸುವುದು ನೇಪಾಳದ ಜನರಿಗೆ ಬಿಟ್ಟಿರುವ ವಿಚಾರ. ನೇಪಾಳದ ಎಲ್ಲ ರೀತಿಯ ಸರ್ಕಾರಗಳೊಡನೆಯೂ ನಾವು ಸ್ನೇಹದಿಂದಿರುವುದನ್ನು ಮುಂದುವರೆಸುತ್ತೇವೆ. ಅದು, ಅವರು ಎಲ್ಲಿಯವರೆಗೂ ನಮ್ಮ ಸ್ನೇಹಕ್ಕೆ ಪ್ರತಿಸ್ನೇಹ ತೋರಿಸಿ ಪ್ರತಿಸ್ಪಂದಿಸುವರೋ ಅಲ್ಲಿಯತನಕ.

ವಿದೇಶಾಂಗ ವಿಷಯಗಳ ಚರ್ಚೆ ನಡೆದ ಅವಧಿಯಲ್ಲಿ ರಾಜ್ಯಸಭೆಯಲ್ಲಿನ ಪ್ರಧಾನಮಂತ್ರಿಗಳ ಹೇಳಿಕೆಗಳು ಹೆಚ್ಚು ಸಂತೋಷದಾಯಕವಾಗಿಲ್ಲ. ಕೊಯಿರಾಲ ಸರ್ಕಾರದ ಕಾರ್ಯಗಳನ್ನೂ, ನೀತಿಗಳನ್ನೂ, ನಾವು ಏಕೆ ಒಪ್ಪಿಕೊಳ್ಳಲು ಪ್ರಯತ್ನಿಸಬೇಕು? ಅಲ್ಲದೇ, ಯಾವುದೇ ಸೈದ್ಧಾಂತಿಕ ಮತ್ತು ವ್ಯಾವಹಾರಿಕ ಆಧಾರದ ಮೇಲೆ ನಾವು ಯಾವುದೇ ಬೇರೆ ದೇಶಗಳೊಡನೆ ನಮ್ಮ ಸಂಬಂಧವನ್ನು ಸೂತ್ರೀಕರಿಸಿಕೊಳ್ಳುವುದಿಲ್ಲ. ನಾವು ಪ್ರಜಾಪ್ರಭುತ್ವಗಳೊಂದಿಗೆ ಹಾಗೂ ಸರ್ವಾಧಿಕಾರೀ ಪ್ರಭುತ್ವಗಳೊಂದಿಗೆ ಸ್ನೇಹಪೂರ್ಣ ಸಂಬಂಧಗಳನ್ನು ಹೊಂದಿದ್ದೇವೆ. ಪಾಕಿಸ್ತಾನದಲ್ಲಿ ಸಂಸತ್ತಿನ ರದ್ದತಿಯನ್ನಾಗಲೀ, ಈಜಿಪ್ಟ್ ಮತ್ತು ಬರ್ಮಾದಲ್ಲಿನ ದಿಢೀರ್ ಮಿಲಿಟರಿ ಕ್ರಾಂತಿಯನ್ನಾಗಲೀ ನಾವು ಮನಸ್ಸಿಗೆ ತೆಗೆದುಕೊಳ್ಳಲಿಲ್ಲ. ಗಣತಂತ್ರ ದಿನಾಚರಣೆಯ



ದಿನ ತನ್ನ ದೇಶದ ಸ್ವಾಮಿನಿಷ್ಠೆಯನ್ನು ಚಕ್ರವರ್ತಿಗೆ ಪ್ರದರ್ಶಿಸಲು ಆಯೋಜಿಸುತ್ತಿರುವ ಸರ್ಕಾರವು ರಾಜಪ್ರಭುತ್ವದ ಕಾರ್ಯವನ್ನು 'ಸೈದ್ಧಾಂತಿಕ' ನೆಲೆಯಲ್ಲಿ ಹೇಗೆ ಇಷ್ಟಪಡದಿರಲು ಸಾಧ್ಯ? ನೇಪಾಳಕ್ಕೆ ನಮ್ಮ ಶ್ರೇಷ್ಠ ಶುಭಾಶಯಗಳು ಮತ್ತು ನೇಪಾಳದ ರಾಜರು ಭಾರತದ ಜನತೆ ಮತ್ತು ಸರ್ಕಾರದಿಂದ ಅತ್ಯಂತ ಹೆಚ್ಚಿನ ಗಮನವನ್ನೂ ಮತ್ತು ಗೌರವವನ್ನು ಪಡೆಯುವುದು ಮುಂದುವರಿಯಬೇಕು.

(೧೯೬೩ರ ಡಿಸೆಂಬರ್ ೨೬)

## ಭಾಷೆ

## ಸಂಸ್ಕೃತಮಯ ಹಿಂದೀ ಏಕೆ?

ಯೂನಿಯನ್ ಮತ್ತು ಅಂತರರಾಜ್ಯಗಳ ನಡುವಿನ ವ್ಯವಹಾರಕ್ಕಾಗಿ, ಒಂದು ದೇಶೀಯ ಭಾಷೆಯನ್ನು ಆಡಳಿತದ ಉದ್ದೇಶಗಳಿಗಾಗಿ ಅಳವಡಿಸಿಕೊಳ್ಳುವ ಅಂತಿಮ ಧ್ಯೇಯವನ್ನು ಕುರಿತ ಆಡಳಿತ ಭಾಷಾ ಆಯೋಗದ ವರದಿಯ ಬಗೆಗೆ ಲೋಕಸಭೆಯಲ್ಲಿ ನಡೆದ ಚರ್ಚೆಯು, ಹೆಚ್ಚುಕಡಿಮೆ, ಈ ವಿಷಯದ ಬಗೆಗೆ ಒಮ್ಮತವನ್ನು ಪ್ರಕಟಿಸಿತು. ಸಂವಿಧಾನದಿಂದ ಸಮ್ಮತಿಸಲ್ಪಟ್ಟಂತೆ. ಹಿಂದಿಯು ಮಾತ್ರವೇ ಅಂತಹ ಭಾಷೆಯಾಗಬಹುದು ಎನ್ನುವುದು ಕೂಡ ಯಾರಿಂದಲೂ ಪ್ರಶ್ನಿಸಲ್ಪಡಲಿಲ್ಲ. ಇಂಗ್ಲಿಷ್ ಕೂಡ, ಉರ್ದು ಮತ್ತು ಸಂಸ್ಕೃತಗಳಂತೆ– ಬೇರೆ ಭಾರತೀಯ ಭಾಷೆಗಳಂತೆ– ಭಾರತೀಯ ಭಾಷೆಯೇ ಎನ್ನುವ ಕೋರಿಕೆಯು ಕೂಡ, ಬೇರೆ ಯಾರಿಂದಲೂ ಅಲ್ಲ, ಗಣತಂತ್ರ ಪರಿಷತ್ತಿನ ಶ್ರೀ ಸುರೇಂದ್ರ ಮಹಂತಿಯವರಿಂದ ಮಂಡಿಸಲ್ಪಟ್ಟಿತು. ಅವರ ವಾದಸರಣಿಯು, ಗಣತಂತ್ರ ಪರಿಷತ್ತಿನ (ಹಿಂದಿನ) ಮಾಜಿ ಅಧ್ಯಕ್ಷರೂ ಪಾರ್ಲಿಮೆಂಟರಿ ಕಮಿಷನ್‌ನಲ್ಲಿ ಪರಿಷತ್ತಿನ ನಾಮಿನಿಯೂ ಆಗಿದ್ದ ದಿವಂಗತ ಶ್ರೀ ಪಿ.ಸಿ.ಭಾಂಜ್ ದೇವೊ ಅವರ ನಿಲುವಿಗೆ ವಿರುದ್ಧವಾಗಿದೆ. ಶ್ರೀ ಭಾಂಜ್ ದೇವೊ ಅವರು ಈ ವರದಿಗೆ ಅಸಮ್ಮತಿಯ ಟಿಪ್ಪಣಿಯನ್ನು ಲಗತ್ತಿಸಿದ್ದಾರೆ. ಶ್ರೀ ಮಹಂತಿಯವರು ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆನಿಸುತ್ತದೆ.

ಆದರೆ, ಈ ಅಂತಿಮ ಧ್ಯೇಯವನ್ನು ಯಾವ ಮಾರ್ಗದ ಮೂಲಕ ಮತ್ತು ಯಾವ ವೇಗದಲ್ಲಿ ಸಾಧಿಸಬೇಕೆಂಬ ವಿಷಯಕ್ಕೆ ಬಂದಾಗ, ವ್ಯಾಪಕವಾದ ವಿಭಿನ್ನ ದೃಷ್ಟಿಕೋನಗಳು ಕಂಡುಬರುತ್ತವೆ. ಇದು ಅಸಹಜವೇನಲ್ಲ. ಅಂತಹ ವ್ಯತ್ಯಾಸಗಳು, ವಿವರಗಳ ಬಗೆಗೆ ಅಲ್ಲಿ ಇರಲೇಬೇಕಾಗಿದೆ. ಆದಾಗ್ಯೂ, ಆ ಧ್ಯೇಯವನ್ನು ಸಾಧಿಸಬೇಕೆಂಬ ಅಭಿಲಾಷೆಯು ನಮಗಿದ್ದಲ್ಲಿ. ಈ ಸಮಾನವಾದ ಸಿದ್ಧಿಯ ಬಹುವಿಧ ಅಂಶಗಳನ್ನು, ಅನೇಕ ಮಾರ್ಗಗಳು ಮತ್ತು ಸಾಧನಗಳು ಸಂಪದ್ಭರಿತವನ್ನಾಗಿ ಮಾಡುವುದು. ಆದರೆ, ಯಾವುದೇ ಪೂರ್ವಗ್ರಹ ಅಥವಾ ಗೊಂದಲವಿಲ್ಲದೇ ನಾವು ನಮ್ಮನ್ನು ಈ ಕಷ್ಟಸಾಧ್ಯವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದರ ಅವಶ್ಯಕತೆಯಿದೆ. ಇತ್ತೀಚೆಗೆ, ಹಿಂದಿ ಮಾತನಾಡದಿರುವ ಜನರಲ್ಲಿ, ಹಿಂದಿಯು



ಆಡಳಿತ ಭಾಷೆ (ರಾಷ್ಟ್ರ ಭಾಷೆಯಾಗಿ) ಯಾಗಿ ಬಂದಲ್ಲಿ, ಸಮಗ್ರ ಭಾರತದ ಸೇವೆಯ ಹುದ್ದೆಗಳಲ್ಲಿ ಅವರು ಆಯ್ಕೆಗೊಳ್ಳುವ ಅವಕಾಶಗಳು ಕಡಿಮೆಯಾಗುವುವು ಎಂಬ ಒಂದು ರೀತಿಯ ಭಯವು ಬೆಳೆದಿದೆ. ಅಂತಹ ಭಯ ಆತಂಕಗಳನ್ನು ಪ್ರಧಾನಮಂತ್ರಿಯವರ ಭರವಸೆಗಳು ಅವರ ಚಿಂತೆಯನ್ನು ಬಗೆಹರಿಸಿ, ಅವರ ಮನಸ್ಸನ್ನು ನೆಮ್ಮದಿಗೊಳಿಸುವುದೆಂದು ನಾನು ಆಲೋಚಿಸುತ್ತೇನೆ. ವಾಸ್ತವವಾಗಿ, ಅಖಿಲ ಭಾರತದ ಸೇವೆಗೆ ಆಯ್ಕೆಯಾಗಲು, ಅದಕ್ಕೆ ಸಂಬಂಧಿಸಿದಂತೆ, ಹಿಂದಿ ಭಾಷಾಜ್ಞಾನವನ್ನು ಎಂದಿಗೂ ಅವಶ್ಯಕವೆಂದು ಪರಿಗಣಿಸಬಾರದು. ಆದರೆ, ಆಯ್ಕೆಯಾದ ನಂತರ, ಉದ್ಯೋಗಿಗಳಿಗೆ ಹಿಂದಿಭಾಷೆಯಲ್ಲಿ ವ್ಯವಹರಿಸಲು ಸಾಧ್ಯವಾಗುವಂತಹ ಜ್ಞಾನವನ್ನು ನೀಡಲು ಏರ್ಪಾಟುಗಳನ್ನು ಮಾಡಬೇಕು. ಪ್ರಾದೇಶಿಕ ಭಾಷೆಗಳ ಮಾಧ್ಯಮಗಳ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಬೇಕು. ತೀವ್ರತೆಯನ್ನು ಕಡಿಮೆಗೊಳಿಸುವ ತೊಂದರೆಗಳನ್ನು ನಿವಾರಿಸಬಹುದು.

ಭವಿಷ್ಯದಲ್ಲಿ ಅಖಿಲ ಭಾರತ ಸೇವೆಗಳಿಗೆ ಆಯ್ಕೆಯಾಗುವ ಆತಂಕವನ್ನು ಒಮ್ಮೆ ಪರಿಹರಿಸಿದರೆ, ಹಿಂದಿಯನ್ನು ಪರಿಚಯಿಸಲು ಯಾವ ವಿರೋಧವೂ ಇರುವುದಿಲ್ಲ. ಅದರ ಪರಿಚಯದ ಗತಿ ಹಾಗೂ ವಿಧಾನಗಳು, ಪ್ರಾಯೋಗಿಕ ಕಾರ್ಯಕ್ರಮದ್ದೇ ವಿನಾ, ಯಾವುದೇ ಕಾರ್ಯನೀತಿ ಅಥವಾ ಸಿದ್ಧಾಂತಗಳದ್ದಲ್ಲ. ಈ ವ್ಯಾವಹಾರಿಕ ಪರಿಗಣನೆಯು– ತತ್‌ಕ್ಷಣವೇ– ಹಠಾತ್ ಬದಲಾವಣೆಗೆ ಬದಲಾಗಿ, ಚುನಾವಣಾ ಕ್ಷೇತ್ರದ ಅಂಗವಾದ ವಿಧಾನಸಭೆಯು ಹದಿನೈದು ವರ್ಷಗಳ ಕಾಲಮಿತಿಯನ್ನು ನಿಗದಿಪಡಿಸುವಂತೆ ಮಾಡಿದೆ. ಈ ದಿನಾಂಕದ ರೇಖೆ–ಮಿತಿಯ ನಂತರವೂ, ಏನಾದರೂ ವಿಶೇಷ ತೊಂದರೆಗಳು ಉಂಟಾದಲ್ಲಿ, ನಿರ್ದಿಷ್ಟ ಉದ್ದೇಶಗಳಿಗೆ ಆಂಗ್ಲಭಾಷೆಯ ಉಪಯೋಗವನ್ನು ಮುಂದುವರೆಸಲು ಲೋಕಸಭೆಗೆ ಅಧಿಕಾರ ನೀಡಲಾಗಿದೆ. ಹಿಂದಿ ಭಾಷೆಯ ಬಗೆಗೆ ಉತ್ಸಾಹ ತಳೆದವರೆಂದು ಹೇಳಿಕೊಳ್ಳುವವರು ಈ ಹೇಳಿಕೆಯಲ್ಲಿನ ನಿಬಂಧನೆಗಳನ್ನು ತೆಗೆದು ಹಾಕುವಂತೆ ಎಂದೂ ಬೇಡಿಕೆಯನ್ನು ಇಟ್ಟಿಲ್ಲ. ಅದು ಎಂದಾದರೂ ತನ್ನ ಧ್ವನಿಯನ್ನು ಎತ್ತಿದ್ದೇ ಆದರೆ, ಅದು ಮೌಲಾನಾ ಅಬ್ದುಲ್ ಕಲಾಮ್ ಆಜ಼ಾದರ ಮಾರ್ಗದರ್ಶನದಲ್ಲಿ ಈ ಸಂವಿಧಾನಾತ್ಮಕ ನಿಬಂಧನೆಗಳನ್ನು ಕಡೆಗಣಿಸಲು ಪ್ರಯತ್ನಿಸುತ್ತಿದ್ದ ಯೂನಿಯನ್ ಶಿಕ್ಷಣ ಮಂತ್ರಾಲಯದ ವಿರುದ್ಧ ಮಾತ್ರ. ಯೂನಿಯನ್ ಸರ್ಕಾರವು ಹಿಂದಿ ಭಾಷೆಯನ್ನು ಆಡಳಿತಾತ್ಮಕ ವ್ಯವಹಾರಕ್ಕೆ ಸೂಕ್ತ ಮಾಧ್ಯಮವನ್ನಾಗಿ ಮಾಡಲು ಸಂವಿಧಾನವು, ಖಚಿತವಾಗಿ ಕಡ್ಡಾಯಗೊಳಿಸಿದೆ. ಬಹಳ ಹೆಚ್ಚಿನ ಪ್ರಮಾಣದ ಕಾರ್ಯವನ್ನು ಈಗಾಗಲೇ ಮಾಡಲಾಗಿದೆ ಮತ್ತು ಹೊಸ ಪಾರಿಭಾಷಿಕ ಪದಾವಳಿಗಳನ್ನು ಸಿದ್ಧಪಡಿಸುವ ಕಾರ್ಯವು ವಿವಿಧ ವಿದ್ವಾಂಸರಿಂದ ಮತ್ತು ರಾಜ್ಯ ಸರ್ಕಾರಗಳಿಂದ ನಡೆಯುತ್ತಿದ್ದು, ಮುಂದುವರೆಯುತ್ತಿದೆ. ಅವರ ಕೆಲಸಗಳಲ್ಲಿ

ಸಂಘಟನೆಯ ಅವಶ್ಯಕತೆಯಿದೆ. ಇಂತಹ ಸಂಘಟನೆಯ ಕೊರತೆಯಿಂದಾಗಿ ಒಂದೇ ಆಂಗ್ಲಭಾಷೆಯ ಪದಕ್ಕೆ, ಬೇರೆ ಬೇರೆ ಹಿಂದಿ ರಾಜ್ಯಗಳಲ್ಲಿ ಬೇರೆ ಬೇರೆ ಹಿಂದಿ ಭಾಷೆಯ ಪದಗಳನ್ನು ಉಪಯೋಗಿಸಲಾಗುತ್ತಿದೆ. ಮುಂಬೈ ಮತ್ತು ಯು.ಪಿ.ಯಲ್ಲಿ ಎರಡು ರೀತಿಯ ನಾಗರಿಲಿಪಿಗಳು ಉಪಯೋಗಿಸಲ್ಪಡುತ್ತಿವೆ. ಇವೆಲ್ಲವೂ ಗೊಂದಲಕ್ಕೆ ಎಡೆಮಾಡುತ್ತದೆ. ಹಿಂದಿ ಭಾಷೆ ತಿಳಿದವರಿಗೆ ಕೂಡ ಇದು ಹಿಂದಿಯನ್ನು ಅರ್ಥವಾಗದಂತೆ ಮಾಡಬಹುದು.

ಆಂಗ್ಲಭಾಷೆಯಿಂದ ಹಿಂದಿಭಾಷೆಗೆ ಬದಲಾಗುತ್ತಿರುವ ಈ ರಾಜ್ಯಗಳ ಪ್ರಗತಿಯನ್ನು ನಿಲ್ಲಿಸುವಂತೆ ನಾವು ಖಂಡಿತ ಕೇಳಲು ಆಗುವುದಿಲ್ಲ. ಈ ತೊಂದರೆಯನ್ನು, ಹಿಂದಿಭಾಷೆಯಲ್ಲದ ರಾಜ್ಯಗಳು ಎದುರಿಸುತ್ತಿಲ್ಲ. ಈ ಎಲ್ಲ ಕಡೆಯೂ ಒಂದು ಪ್ರಾಂತೀಯ ಭಾಷೆಗೆ ಒಂದು ರಾಜ್ಯವಿದೆ. ಆದ್ದರಿಂದ ಒಂದು, ಎರಡು ಅಥವಾ ಹೆಚ್ಚಿನ ರಾಜ್ಯಗಳ ಸಂಘಟನೆಯ ಅವಶ್ಯಕತೆಯಿಲ್ಲ. ಆದರೆ, ಹಿಂದಿ ರಾಜ್ಯಗಳಿಗೆ ಸಂಬಂಧಿಸಿದಂತೆ, ಈ ಸಂಘಟನೆಯು ಕಡ್ಡಾಯವಾಗಿದೆ. ಅದೂ ಅಲ್ಲದೆ, ಹಿಂದಿಯು ಅಖಿಲ ಭಾರತದ ಭಾಷೆಯಾಗಿರುವುದರಿಂದ ಅದು ಇತರ ಪ್ರಾಂತೀಯ ಭಾಷೆಗಳ ಶಬ್ದಸಂಪತ್ತನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಭಾರತದ ಎಲ್ಲ ಭಾಷೆಗಳಿಗೂ ಸಾಮಾನ್ಯ ಪದಗಳನ್ನು ನಿಗದಿಪಡಿಸಲು ಒಂದು ಕೇಂದ್ರ ಸಮಿತಿಯಿದ್ದರೆ ಮಾತ್ರ ಇದು ಸಾಧ್ಯವಾಗುತ್ತದೆ. ಈ ಒಂದು ಸರಳ ಸಂಗತಿಗಾಗಿ ನಾವು ಇಷ್ಟು ವರ್ಷಗಳವರೆಗೂ ಕಾದಿದ್ದೇವೆ. ಕೇಂದ್ರವು ಇದನ್ನು ಸುಲಭವಾಗಿ ಮಾಡಬಹುದಾಗಿತ್ತು. ಆದರೆ ಸರ್ಕಾರವು ಈ ಶಿಫಾರಸನ್ನು ಕಾರ್ಯಗತ ಮಾಡುವುದೋ ಇಲ್ಲವೋ ಎನ್ನುವುದು ನಮಗೆ ತಿಳಿದಿಲ್ಲ.

ಈ ವಿಷಯದ ಬಗೆಗೆ ಬಹಳಷ್ಟು ಗೊಂದಲವಿದೆ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಧಾನಮಂತ್ರಿಗಳು ಎಲ್ಲರಿಗಿಂತಲೂ ಅತ್ಯಂತ ಹೆಚ್ಚು ಗೊಂದಲಕ್ಕೆ ಒಳಗಾದವರಂತೆ ಕಾಣಿಸುತ್ತಾರೆ. ಹೊಸ ತಾಂತ್ರಿಕ ಪದಗಳನ್ನು ಸಿದ್ಧಪಡಿಸಬಾರದು ಅಥವಾ ಅವನ್ನು ಸೃಷ್ಟಿಸಬಾರದು ಆದರೆ ಅವು ತಮ್ಮಷ್ಟಕ್ಕೇ ಕ್ರಮೇಣ ಅರಳಬೇಕು (ವಿಕಸಿಸಬೇಕು) ಎಂದು ಅವರು ಭಾವಿಸುತ್ತಾರೆ. ಲೋಕಸಭೆಯ ಅವರ ಭಾಷಣದಲ್ಲಿ ಅವರು ಹೀಗೆ ಹೇಳಿದರು: "ದುಡ್ಡು ಹಾಕಿದರೆ ವಸ್ತುಗಳು ಆಚೆಬರುವಂತೆ, ಹಿಂದಿಯ ಪದಗಳನ್ನು ಭಾಷಾಂತರಿಸುವಂತಹ 'ಸ್ಲಾಟ್ ಮೆಷೀನಿ'ನಂತಹ ವ್ಯವಹಾರವು ಅವಾಸ್ತವ, ಕೃತಕ, ಭ್ರಮಾತ್ಮಕ, ಅಸಂಗತ ಹಾಗೂ ಹಾಸ್ಯಾಸ್ಪದ ವಿಚಾರ. ಇಂತಹದೊಂದು ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಯಾರಾದರೂ, ಮಾಡಬಹುದಾದುದೆಂದರೆ, ತನ್ನನ್ನು ತಾನು ಒಂದು ಉಕ್ಕಿನ ಚೌಕಟ್ಟಿಗೆ ಮಿತಿಗೊಳಿಸಿಕೊಂಡು ಕೆಲವು ಶ್ಲೋಕಗಳನ್ನು ಪಠಿಸುವುದೇ ಹೊರತು ಮತ್ತೇನನ್ನೂ ಮಾಡುವುದಲ್ಲ ಅವರ ಆಕ್ಷೇಪಣೆಯ ದೀರ್ಘಭಾಷಣವು (ನಿಂದಾ ಭಾಷಣವು) ನಿಸ್ಸಂದೇಹವಾಗಿ ಸಂಸ್ಕೃತ ಭಾಷೆ ಹಾಗೂ ವಿದ್ವಾಂಸರ ವಿರುದ್ಧವಾಗಿದೆ. ಅವರು ಸಂಸ್ಕೃತವನ್ನು ಇಷ್ಟಪಡುವುದಿಲ್ಲ. ನಾವು ಸಂಸ್ಕೃತವನ್ನು ಬಿಟ್ಟುಬಿಟ್ಟರೆ ಎಲ್ಲ ಪ್ರಾದೇಶಿಕ ಭಾಷೆಗಳ ಹೊಸ ಪಾರಿಭಾಷಿಕ ಶಬ್ದಗಳಿಗೆ ಸಮಾನ ಆಧಾರ, ತಳಹದಿ ಯಾವುದಿರುತ್ತದೆ? ಈಗ ಬಳಕೆಯಲ್ಲಿರುವ ಪದಗಳು ಆಂಗ್ಲಭಾಷೆಯವು. ನಾವು ಅವುಗಳನ್ನು ಮುಂದುವರೆಸಿದರೆ, ಅವುಗಳ ಬದಲಾವಣೆಯ ಪ್ರಶ್ನೆಯೇ ಇರುವುದಿಲ್ಲ. ಆಗ ಕೇವಲ ಕೆಲವು ಸರ್ವನಾಮಗಳು ಕ್ರಿಯಾಪದಗಳನ್ನು ಮಾತ್ರ ಬದಲಾಯಿಸುವುದು ಎಂದಾಗುತ್ತದೆ, ಪರ್ಷಿಯನ್ ಭಾಷೆಯಿಂದ ಉರ್ದುಭಾಷೆಯನ್ನು ವಿಕಸಿಸಲು ಮೊಘಲರು ಮಾಡಿದಂತೆ ಇದು. ಪರ್ಷಿಯನ್ ಭಾಷೆಯಿಂದ ತುಂಬಿದ್ದ ಹಿಂದಿಯು ಉದ್ದೇಶವನ್ನು ಈಡೇರಿಸಲಿಲ್ಲ. ಆಂಗ್ಲಭಾಷೆಯಿಂದ ತುಂಬಿದ ಹಿಂದಿಯೂ ಉದ್ದೇಶ ಪೂರೈಸುವುದಿಲ್ಲ. ಅರೆಶಿಕ್ಷಿತರಾದ ನಗರದ ಜನರು ಆ ಭಾಷೆಯಲ್ಲಿ ಮಾತನಾಡಬಹುದು. ಆದರೆ ಆ ಭಾಷೆಯನ್ನು ಆಡಳಿತದಲ್ಲಿಯಾಗಲೀ ಸಾಹಿತ್ಯಕ ಕೃತಿಯಲ್ಲಿಯಾಗಲೀ ಉಪಯೋಗಿಸಲು ಸಾಧ್ಯವಿಲ್ಲ.



ಅನೇಕ ವಿದೇಶೀ ಪದಗಳು ಸಂಪೂರ್ಣವಾಗಿ ನಮ್ಮದೇ ಭಾಷೆಗಳ ಭಾಗವಾಗಿ ಹೋಗಿವೆ ಎಂಬುದು ನಿಜ. ಅವುಗಳ ಬಳಕೆಯನ್ನು ನಿಷೇಧಿಸಲು ಯಾರೂ ಬಯಸುವುದಿಲ್ಲ. ಆದರೆ ಅವುಗಳನ್ನು ಸಾಮಾನ್ಯ ಮಾತುಕತೆಗಳಲ್ಲಿ ಅಥವಾ ಲಘು ಸಾಹಿತ್ಯಕೃತಿಗಳಲ್ಲಿ ಮಾತ್ರ ಬಳಸಬಹುದು. ಕಾನೂನು ಹಾಗೂ ವೈಜ್ಞಾನಿಕ ಮುಂತಾದ ಶಾಸ್ತ್ರಗ್ರಂಥಗಳಿಗೆ ನಮಗೆ ವೈಜ್ಞಾನಿಕ ಆಧಾರದ ಪಾರಿಭಾಷಿಕ ಶಬ್ದಗಳ ಅವಶ್ಯಕತೆಯಿದೆ. ನಾವು (ನ್ಯಾಯಾಧೀಶ) ಎಂಬ ಪದವನ್ನು ಉಪಯೋಗಿಸಬಹುದು. 'Judge' ಆದರೆ 'Judiciary' (ನ್ಯಾಯಾಂಗ, ನ್ಯಾಯ ಇಲಾಖೆ), 'Judicial' (ನ್ಯಾಯಾಲಯದ, ನ್ಯಾಯ ತೀರ್ಮಾನದ ಇತ್ಯಾದಿ) 'Judgement' (ತೀರ್ಪು, ನಿರ್ಣಯ), 'Judgeship', 'Judicature', 'Judicious', 'adjudge', 'adjudicate', 'prejudge', 'prejudice', 'Justice', 'Justiciable', 'Justiciary', 'Justify', 'Justificalion', 'Justificatory', 'Justifiability', 'Justificative', 'Juri', 'Juror', 'Jurisdiction', 'Juridical', 'Jurist', 'Jurisprudence' – ಈ ಎಲ್ಲ ಮಿತ್ರ ಪದಗಳೂ ಸಮಾನ ಬೇರಿನಿಂದ ಮೂಲದಿಂದ ಉದ್ಭವಿಸಿರುವುವು. ಹಿಂದಿ ಭಾಷೆಯನ್ನು ಆಡಳಿತಾತ್ಮಕ ಉದ್ದೇಶಗಳಿಗೆ, ಶಾಸಕಾಂಗ ಮತ್ತು ಕಾರ್ಯಾಂಗದ ವ್ಯವಹಾರಗಳಿಗೆ ನೀವು ಉಪಯೋಗಿಸಬೇಕಾದರೆ, ನ್ಯಾಯಾಂಗದ ಸಂಗತಿಯನ್ನು ನಿರ್ವಹಿಸಬೇಕಾದರೆ, ಮೇಲೆ ಕಾಣಿಸಿರುವ ಪದಗಳನ್ನೆಲ್ಲವನ್ನೂ ನೀವು ಉಪಯೋಗಿಸಬೇಕಾಗುವುದು. 'ಜಡ್ಜ್' ಎನ್ನುವ ಪದ ಮಾತ್ರ ಸಾಮಾನ್ಯವಾಗಿ ಅರ್ಥವಾಗುವಂತಹ ಪದ. ಆದರೆ ನಾವು ಈ ಮೇಲೆ ಕಾಣಿಸಿರುವ ಎಲ್ಲ ಪದಗಳನ್ನೂ ಹಿಂದಿಯಲ್ಲಿ ಉಪಯೋಗಿಸಿದರೆ, ಅದು ಯಾರಿಗೂ ಏನೂ ಅರ್ಥವಾಗುವುದಿಲ್ಲ. ಇಂತಹ ಎಲ್ಲ ಸಂಬಂಧಿತ

ಪರಿಕಲ್ಪನೆಗಳಿಗೆಲ್ಲ ಸಂಸ್ಕೃತ ಮೂಲದಿಂದ ಉದ್ಭವಿಸಿದ ಪದಗಳನ್ನು ಹುಡುಕಿಕೊಟ್ಟಿರುವುದು ಡಾ. ರಘುವೀರ ಅವರ ದೋಷವಲ್ಲ. ಕೆಲವು ಪದಗಳ ಬಗೆಗೆ ಯಾರಾದರೂ ಅಸಮ್ಮತಿಸಬಹುದು. ಆದರೆ ಪಾರಿಭಾಷಿಕತೆಯ ಪರಿಕಲ್ಪನೆಯಿರುವ ಯಾರು ಕೂಡ ಅವರ ಆಧಾರವನ್ನು ಪ್ರಶ್ನಿಸುವುದಿಲ್ಲ. ರಘುವೀರ ಅವರನ್ನು ಗೇಲಿ ಮಾಡುವುದರ ಮೂಲಕ ಪ್ರಧಾನ ಮಂತ್ರಿಯವರು, ಈ ವಿಷಯದ ಬಗೆಗೆ ತಮ್ಮ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ.

ಹೊಸ ಪದಗಳನ್ನು ಸೃಷ್ಟಿಸಬಾರದು. ಆದರೆ ಅವು ಸಾಮಾನ್ಯ ಜನರಿಂದಲೇ ಹುಟ್ಟಿ ವಿಕಸಿತಗೊಳ್ಳಬೇಕು ಎಂದು ಕೂಡ ಪ್ರಧಾನ ಮಂತ್ರಿಯವರು ಹೇಳಿದ್ದಾರೆ. ಹೊಸಪದಗಳು ಸಾಮಾನ್ಯ ಜನರಿಂದಲೇ ಚಲಾವಣೆಗೆ ಬರುತ್ತವೆ ಎಂಬುದು ಸತ್ಯ ಮತ್ತು ಬೇರೆ ಯಾವುದೇ ಜೀವಂತ ಭಾಷೆಯಲ್ಲಿರುವಂತೆ ಹಿಂದಿಯಲ್ಲಿಯೂ ಅಂತಹ ಪದಗಳು ವಿಪುಲವಾಗಿವೆ. ಆದರೆ ಅವುಗಳಲ್ಲಿ ಅನೇಕ ಪದಗಳು, ಹಿಂದಿ ಭಾಷೆಯು ಉದ್ದೇಶಿಸಿರುವಂತಹ ಧ್ಯೇಯವನ್ನು ಪೂರೈಸುವುದಿಲ್ಲ. 'ಗವರ್ನರ್' ಅನ್ನು 'ಲಾಟ್ ಸಾಹಿಬ್' ಎಂದೂ 'ಪ್ರೆಸಿಡೆಂಟ್'ರನ್ನು 'ಬರಾಲಾಟ್' ಎಂದೂ ಸಂಬೋಧಿಸುವುದನ್ನು 'ಮರ್ಯಾದಾ' ಪೂರ್ವಕವಾದ ರಾಜ್ಯಪಾಲ, ರಾಷ್ಟ್ರಪತಿ ಎನ್ನುವುದರ ಬದಲು ಪಂಡಿತ ನೆಹರೂ ಇಷ್ಟಪಡುವರೇ? 'ಲೋಕಸಭಾ' ಮತ್ತು 'ರಾಜ್ಯಸಭಾ' ಮುಂತಾದ ಈಗ ಚಿರಪರಿಚಿತವಾಗಿರುವ ಪದಗಳು ವಿಕಸಿತಗೊಂಡಂತಹವಲ್ಲ. ಆದರೆ ಪಂಡಿತ ನೆಹರೂ ಅವರು ಪರಿಹಾಸ ಮಾಡಿದಂತಹ 'ಸ್ಲಾಟ್ ಮೆಷೀನ್' ಸೂತ್ರದಿಂದ ಸೃಷ್ಟಿಸಲ್ಪಟ್ಟಂತಹ ಪದಗಳು. ಮೊದಮೊದಲು ಅವುಗಳ ಹೆಸರುಗಳು ಹೊಸದು ಹಾಗೂ ಅಪರಿಚಿತವೆನ್ನುವಂತೆ ಕೇಳಿಸಿದವು. ಆದರೆ ಈಗಾಗಲೇ ಅವು ಪರಿಚಿತ, ವಾಡಿಕೆಯ ಪದಗಳಾಗಿವೆ, ಎಂದಿನಿಂದಲೋ ನಾವು ಆ ಪದಗಳನ್ನು ಪಡೆದಿದ್ದೆವೆನಿಸುತ್ತದೆ! ಪಂಡಿತ ನೆಹರೂ ಕೂಡ ಉಪಯೋಗಿಸುವ ಅಂತಹ ಬೇಕಾದಷ್ಟು ಪದಗಳಿವೆ. ಆ ಪದಗಳು ಸಾಮಾನ್ಯ ಮನುಷ್ಯನಿಂದ ಬಂದಿಲ್ಲ. ಆದರೆ ಡಾ. ರಘುವೀರ ಮತ್ತು ಇತರ ವಿದ್ವಾಂಸರಿಂದ ಬಂದಿರುವಂಥವು.

ಭಾಷೆಯ ಸರಳತೆಯ ಬಗೆಗೂ ಸ್ವಲ್ಪ ಗೊಂದಲವಿದೆ. ಭಾಷೆ ಸರಳವಾಗಿರಬೇಕು ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ, ಸರಳತೆಯ ಮಾನದಂಡ, ಒರೆಗಲ್ಲು ಯಾವುದು? ಅದು (ಭಾಷೆಯು) ಅತ್ಯಂತ ಹೆಚ್ಚಿನ ಸಂಖ್ಯೆಯ ಜನರಿಗೆ ಅರ್ಥವಾಗಬೇಕು. ಅದೇ ನಮ್ಮ ಲಕ್ಷ್ಯವಾದಲ್ಲಿ ಹಿಂದಿ ಭಾಷೆಯನ್ನು ಸಂಸ್ಕೃತೀಕರಣಗೊಳಿಸಬೇಕು. ಗಾಂಧೀಜಿಯವರು ಪ್ರತಿಪಾದಿಸಿದಂತೆ ಅದು 'ಹಿಂದುಸ್ತಾನಿ' ಆಗಲಾರದು. ವಾಸ್ತವವಾಗಿ ಗಾಂಧೀಜಿಯು 'ಹಿಂದುಸ್ತಾನಿ'ಯನ್ನು ಅಳವಡಿಸಿಕೊಂಡಿದ್ದು ಅದರ ಸರಳತೆಗಾಗಿ ಅಲ್ಲ. ಆದರೆ, ಹಿಂದಿ ಮತ್ತು ಉರ್ದು ಮಿಶ್ರವಾದ ಒಂದು ಕೃತಕಭಾಷೆಯನ್ನು ಸೃಷ್ಟಿಸುವ ಮೂಲಕ, ಮುಸ್ಲಿಮರನ್ನು



ಸಂತುಷ್ಟಿಪಡಿಸುವುದಕ್ಕಾಗಿ. ಆದರೆ, ಆ ಹಿಂದೂಸ್ತಾನಿ ಭಾಷೆಯ ಎಲ್ಲಿಯೂ ಮಾತನಾಡುವುದೂ ಇಲ್ಲ ಮತ್ತು ಅದು ಅರ್ಥವಾಗುವುದೂ ಇಲ್ಲ. ಪಂಡಿತ ನೆಹರೂ ಅವರ ಹಿಂದಿಯು ವಿಂಧ್ಯಪರ್ವತಗಳ ದಕ್ಷಿಣಕ್ಕಿರುವ ಪ್ರದೇಶಗಳಲ್ಲಿ ಅರ್ಥವಾಗುವುದಿಲ್ಲ ಮತ್ತು ಮೌಲಾನಾ ಆಜಾದ್‌ರ ಹಿಂದೂಸ್ತಾನಿಯು ಉತ್ತರ ಪ್ರದೇಶದಲ್ಲಿಯೇ ಅರ್ಥವಾಗುತ್ತಿರಲಿಲ್ಲ. ಉರ್ದು ಭಾಷೆಯಲ್ಲಿ ಶಿಕ್ಷಣ ಪಡೆದವರು ಯಾವಾಗಲೂ ಸಂಸ್ಕೃತ ಆಧಾರದ ಹಿಂದಿಯು ಕಠಿಣ ಎಂದು ಭಾವಿಸುವರು. ಆದರೆ ದೇಶದ ಉಳಿದ ಎಲ್ಲ ಜನರಿಗೆ ಅದು ಸುಲಭವೆನಿಸುವುದು. ಕಳೆದ ವರ್ಷ 'ಪ್ಲಾನೆಟೋರಿಯಂ' ಪದಕ್ಕೆ 'ಕೃತ್ರಿಮ ನಭೋಮಂಡಲ' ಎಂಬ ಪದದಿಂದ ಪಂಡಿತ ನೆಹರೂ ಕಿರಿಕಿರಿಗೊಂಡರು. ಆದರೆ ಅವರಿಗೆ ಸುಲಭವಾದ ಬೇರೆ ಯಾವುದೇ ಪದವನ್ನೂ ಸೂಚಿಸಲಾಗಲಿಲ್ಲ. ಅವರ ಪರ್ಷಿಯನ್ ಸಮಾನಾರ್ಥಕ ಪದವು ಇನ್ನೂ ಹೆಚ್ಚು ಕಠಿಣವಾಗಿರುತ್ತಿತ್ತು.

ಮತ್ತೊಂದು ದಿನ, ನ್ಯಾಯಾಸ್ಥಾನದ ನ್ಯಾಯಾಧೀಶರೊಬ್ಬರು. ತಮ್ಮ ತೀರ್ಪಿನಲ್ಲಿ ಉಪಯೋಗಿಸಿದ ಕಷ್ಟಕರವಾದ ಹಿಂದಿಭಾಷೆಯ ಬಗೆಗೆ ಅಲಹಾಬಾದ್ ಶ್ರೇಷ್ಠ: "ನ್ಯಾಯಾಲಯವು ಆಕ್ಷೇಪಿಸಿತು. ಈ ಕಷ್ಟಕರವಾದ ಹಿಂದಿಭಾಷೆಗೆ ಉದಾಹರಣೆಯಾಗಿ ಒಂದು ಪದಗುಚ್ಛವನ್ನು ಉದ್ಧರಿಸಲಾಯಿತು." "ಅನ್ಯ ಪುರುಷೋಂಕೆ ವಿರುದ್ಧ ಆರೋಪ್ ಹೈ." ಈ ಹಿಂದಿಭಾಷೆಗೆ ಬದಲಾಗಿ, ಇದುವರೆಗೂ ನ್ಯಾಯಾಧೀಶರು ಹೀಘೆ ಬರೆಯುತ್ತಿದ್ದರು: "ದಿಗರ್ ಅಷ್‌ಖಾಸ್ ಕೆ ಖಿಲಾಫ್ ಇಲ್‌ಜ಼ಾಮ್ ಹೈ" ಮತ್ತು ಇದನ್ನು ಹೈಕೋರ್ಟಿನ ನ್ಯಾಯಾಧೀಶರು ಅರ್ಥಮಾಡಿಕೊಳ್ಳಲಾಗಲಿಲ್ಲ. ಇಡಿಯ ದೇಶದಲ್ಲಿ ಅಥವಾ ಕೇವಲ ಉತ್ತರ ಪ್ರದೇಶದಲ್ಲಿ ಮಾತ್ರ ನಾವು ಜನಾಭಿಪ್ರಾಯವನ್ನು ಸಂಗ್ರಹಿಸಿದರೆ, 'ಕಠಿಣ ಹಿಂದಿಭಾಷೆ'ಯನ್ನು ಅರ್ಥ ಮಾಡಿಕೊಳ್ಳುವವರು ಅಸಂಖ್ಯರಿರುತ್ತಾರೆ. ಹಿಂದಿಯು ಅಖಿಲ ಭಾರತದ ಭಾಷೆಯಾಗಿ ಅಭಿವೃದ್ಧಿಗೊಳ್ಳಬೇಕಾದರೆ, ಅದನ್ನು ಪರ್ಷಿಯನ್‌ಭೂಯಿಷ್ಠವನ್ನಾಗಿ ಮಾಡಬಾರದು (ಪರ್ಷಿಯನೀಕರಣಗೊಳಿಸಬಾರದು). ಹಿಂದಿಭಾಷೆಯವರಲ್ಲದವರ ಮೇಲೆ ಹಿಂದಿಯನ್ನು ಹೊರಿಸಲು – ಸಂಪೂರ್ಣವಾಗಿ ವಿದೇಶೀ ಎನಿಸುವ ಭಾಷೆಯನ್ನು– ಸಿದ್ಧವಾಗಿರುವವರು ಹಾಗೂ ಮಿಶ್ರತಳಿಯ ಹಿಂದೂಸ್ತಾನಿಯ ಪರ ವಕಾಲತ್ತು ವಹಿಸುತ್ತಿರುವವರು, ಹಿಂದಿಭಾಷೆಯ ಉತ್ಸಾಹಿಗಳೆಂದು ಹೇಳಿಕೊಳ್ಳುವವರಿಗಿಂತಲೂ ಹಿಂದಿ ಭಾಷೆಗೆ ಹೆಚ್ಚು ಹಾನಿಯನ್ನು ಉಂಟುಮಾಡಿದ್ದಾರೆ. ಏಕೆಂದರೆ, ಹಿಂದಿಭಾಷೆಯಿಲ್ಲದ ಜನರು, ಈ ಭಾಷೆಯ ಪ್ರತಿಯೊಂದು ಪದವನ್ನೂ ಹೊಸದಾಗಿ ಕಲಿಯಬೇಕಾಗಿದೆ. ಅದು ಕೂಡ ತಮ್ಮ ಭಾಷೆಯಲ್ಲಿ, ಸಂಬಂಧಿಸಿದ ಅಂತಹುದೇ ಒಂದು ಪದ ಇರದಿರುವಾಗ. ಆದರೆ ಪವಿತ್ರವಾದ ಸಂಸ್ಕೃತೀಕರಣಗೊಂಡ ಹಿಂದಿಯಲ್ಲಿ ಅಂತಹ ಸಮಸ್ಯೆಯಿರುವುದಿಲ್ಲ.

(೧೯೫೯ರ ಸೆಪ್ಟೆಂಬರ್ ೧೪)

# ಸ್ವಭಾಷಾ ಮತ್ತು ಸುಭಾಷಾ

ಭಾರತದಲ್ಲಿ ಆಂಗ್ಲಭಾಷೆಯನ್ನು ದೃಢವಾಗಿ ಬೆಂಬಲಿಸುವ ಅನುಯಾಯಿಗಳು ಸೋಲುವ ಕದನದಲ್ಲಿ ಹೋರಾಡುತ್ತಿರಬಹುದು. ಆದರೆ ಅವರು ದೇಶದ ಭಾಷಾ ಅವಶ್ಯಕತೆಗಳ ಬಗೆಗೆ ಸಾಕಷ್ಟು ಗೊಂದಲವನ್ನು ಸೃಷ್ಟಿಸುವುದರಲ್ಲಿ ಯಶಸ್ವಿಗಳಾಗಿದ್ದಾರೆ. ಫ್ರಾಂಕ್ ಆಂಥೋನಿಯ ಆಂಗ್ಲಭಾಷೆ ಕೂಡ ಬೇರೆ ಭಾಷೆಗಳಂತೆ ಭಾರತೀಯ ಭಾಷೆಯೇ ಎಂಬ ವಾದವನ್ನು ಬೆಂಬಲಿಸುವವರು. ಶ್ರೀ ಸಿ. ರಾಜಗೋಪಾಲಾಚಾರಿಯವರನ್ನು ಹೊರತುಪಡಿಸಿ, ಬೇರೆ ಯಾರೂ ಇಲ್ಲವೆನ್ನಬಹುದಾದರೂ, ಆಂಗ್ಲಭಾಷೆಯನ್ನು ಉಳಿಸಿಕೊಳ್ಳಲು ಇಷ್ಟಪಡುವವರ ಸಂಖ್ಯೆ ಸಾಕಷ್ಟು ಗಣನೀಯವಾಗಿಯೇ ಇದೆ. ಇವರಲ್ಲಿ ಕೆಲವರು ಹಿಂದಿ ಭಾಷೆಯ ಬಗೆಗಿನ ಹಗೆತನ ವಿರೋಧಗಳಿಂದ ಪ್ರೇರಿತರಾಗಿದ್ದಾರೆ. ಅಂತಹವರು ಹಿಂದಿಯ ಬದಲು ಬೇರೆ ಯಾವುದೇ ಭಾಷೆಯಾದರೂ ಹೆಚ್ಚು ಇಷ್ಟಪಡುತ್ತಾರೆ. ಅವರು ಎಲ್ಲ ವಿಧದ ವಿಸ್ತಾರವಾದ ವಾದಸರಣಿಗಳನ್ನು ಪ್ರಸ್ತಾಪಿಸುತ್ತಾ ಹಿಂದಿ ಮಾತನಾಡದವರ ಹಿಂದಿ ಮಾತೃಭಾಷೆಯಲ್ಲದವರ– ಭಾವನೆಗಳೊಂದಿಗೆ ಆಟವಾಡುವುದನ್ನು ಮುಂದುವರೆಸುತ್ತಾರೆ. ಆಂಗ್ಲಭಾಷೆಯನ್ನು ತೆಗೆದು ಹಾಕಿದರೆ– ತಮ್ಮ ಭಾಷೆಯು ಉಳಿಯುವುದಿಲ್ಲವೆಂದು ಅವರು ತಮ್ಮ ಜನರಿಗೆ ಮನದಟ್ಟುಮಾಡಲು ಪ್ರಯತ್ನಿಸುತ್ತಾರೆ.

ವಾಸ್ತವ ಸಂಗತಿಯೆಂದರೆ, ಇಂಗ್ಲಿಷ್‌ಗೆ ವಿರುದ್ಧವಾದ ಕದನವು 'ಹಿಂದೀವಾಲಾ'ಗಳ ವಿರುದ್ಧದ ಕದನವಲ್ಲ. ಅದು ಅಖಿಲ ಭಾರತ ಪ್ರಾಂತೀಯ ಭಾಷೆಗಳ ಸಮಾನಕಾರಣಕ್ಕಾಗಿ ನಡೆಸುವ ಹೋರಾಟ. ಬ್ರಿಟಿಷಿನವರು ತಮ್ಮ ಆಳ್ವಿಕೆಯನ್ನು ಬಲಪಡಿಸುವುದಕ್ಕಾಗಿ 'ಭೇದ ತಂದು ಹಾಕಿ ಆಳು' (divide etimpera) ಎನ್ನುವ ಒಡೆದು ಆಳುವ ನೀತಿಯನ್ನು ಅನುಸರಿಸಿದ್ದರೆ, ಆಂಗ್ಲಭಾಷೆಯನ್ನು ಬೆಂಬಲಿಸುತ್ತಿರುವವರು ಈ ವಿದೇಶೀ ಭಾಷೆಯನ್ನು ಇಲ್ಲಿ ಶಾಶ್ವತಗೊಳಿಸಲು ಅದೇ ನೀತಿಯನ್ನು ಅನುಸರಿಸುತ್ತಿದ್ದಾರೆ. ಆಂಗ್ಲಭಾಷೆಯು ಇಲ್ಲಿಂದ ಹೋದರೆ ಅದರ ಸ್ಥಾನವನ್ನು ಕೇವಲ ಹಿಂದಿಭಾಷೆ ಮಾತ್ರವೇ ತೆಗೆದುಕೊಳ್ಳುವುದಿಲ್ಲ. ಆದರೆ ಹಿಂದಿ ಮತ್ತು ಪ್ರಾಂತ್ಯ ಭಾಷೆಗಳು ಜಂಟಿಯಾಗಿ ಆ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತವೆ. ಆಂಗ್ಲಭಾಷೆಯು ಇಲ್ಲಿ ಉಳಿದುಕೊಂಡರೆ ಭಾರತದ



ಯಾವ ಭಾಷೆಯೂ ಅಭಿವೃದ್ಧಿಯಾಗುವುದಿಲ್ಲ. ತಮಿಳು, ಬಂಗಾಳಿ ಮತ್ತು ಇತರ ಭಾಷೆಗಳನ್ನು ಕ್ರಮವಾಗಿ ಅವುಗಳ ಪ್ರದೇಶಗಳಿಂದ ಸ್ಥಳಾಂತರಿಸಿದ್ದು ಹಿಂದಿ ಭಾಷೆಯೇನು? ಕೇರಳದಲ್ಲಿನ ಶಾಸಕಾಂಗ ಮತ್ತು ಆಡಳಿತಾತ್ಮಕ ಕಾರ್ಯಗಳು ಮಲಯಾಳಂಗೆ ಬದಲಿಗೆ ಹಿಂದಿಯಲ್ಲಿ ನಡೆಯುವುದೆಂದು ಯಾರೂ ಭಾವಿಸುವುದಿಲ್ಲ. ಆದರೆ ಆಂಗ್ಲಭಾಷೆಯನ್ನು ಹೊರದೂಡಿದಲ್ಲದೇ ಮಲಯಾಳಂ ಆ ಸ್ಥಾನಕ್ಕೆ ಬರಲು ಸಾಧ್ಯವಾಗುವುದಿಲ್ಲ.

ಅಖಿಲ ಭಾರತ ಮಟ್ಟದಲ್ಲಿ ಆಂಗ್ಲಭಾಷೆಯ ಸ್ಥಾನವನ್ನು ಹಿಂದಿಯು ಆಕ್ರಮಿಸಿಕೊಳ್ಳುತ್ತದೆ ಎನ್ನುವುದು ನಿಜ. ಆ ಸ್ಥಾನವನ್ನು ಭಾರತದ ಯಾವುದೇ ಒಂದು ಇತರ ಭಾಷೆಗೂ ಕೊಡಬಹುದಾಗಿತ್ತು. ಆದರೆ ಕೆಲವು ನಿರ್ದಿಷ್ಟ ಕಾರಣಗಳಿಂದಾಗಿ ಹಿಂದಿಯನ್ನು, ಸರ್ವಸಾಮಾನ್ಯ ಆಡುಭಾಷೆಯ ಸೂಕ್ತ ಮಾಧ್ಯಮವಾಗಿ ಪರಿಗಣಿಸಲಾಯಿತು. ವಾಸ್ತವವಾಗಿ, ಸಂವಿಧಾನವು ಮಂಜೂರು ಮಾಡುವ ಮೊದಲೇ ಅದು ಆ ಸ್ಥಾನವನ್ನು ಆಕ್ರಮಿಸಿಕೊಂಡಿತ್ತು. ಸಂಸ್ಕೃತ ಭಾಷೆಯು ಪಂಡಿತರ, ಸಂಭಾವಿತರ ಸಮಾಜದಲ್ಲಿನ ಗಣ್ಯರ ಸಂಪರ್ಕ, ವ್ಯವಹಾರ ಭಾಷೆಯಾಗಿ ಉಪಯೋಗಿಸಲ್ಪಟ್ಟರೆ, ಹಿಂದಿಯು ಸಾಮಾನ್ಯ ಮನುಷ್ಯನ ವ್ಯವಹಾರದ ಉದ್ದೇಶವನ್ನು ಪೂರೈಸಿತು. ಮಧ್ಯಕಾಲೀನ ಅವಧಿಯಲ್ಲಿ ಸಾಧುಗಳು ಮುಕ್ತವಾಗಿಯೂ ಮತ್ತು ಹೆಚ್ಚುಹೆಚ್ಚಾಗಿಯೂ ಆ ಭಾಷೆಯನ್ನು ಬಳಸಿದರು. ತಮ್ಮ ಮಾತೃಭಾಷೆಯು ಹಿಂದಿ ಆಗಿರದಿದ್ದರೂ ಅವರು ರಚಿಸಿದ ಅಸಂಖ್ಯಾತ ಹಿಂದಿ ರಚನೆಗಳನ್ನು, ಕೃತಿಗಳನ್ನು ಕಾಣುತ್ತೇವೆ.

ಅಲ್ಲದೆ, ನಮ್ಮ ಸ್ವಾತಂತ್ರ್ಯ ಸಂಘರ್ಷದ ದೀರ್ಘ ಅವಧಿಯಲ್ಲಿ ಕೂಡ, ಅಂತರ್ ಸಂಪರ್ಕ, ವ್ಯವಹಾರಗಳಿಗೆ ಹಿಂದಿಯು ಸಹಜ ವಾಹಕವಾಗಿ ಕಾರ್ಯ ನಿರ್ವಹಿಸಿದೆ. ಛತ್ರಪತಿ ಶಿವಾಜಿಯ ಬಗೆಗೆ ಗೀತೆಗಳನ್ನು ಭೂಷಣ್ ಹಿಂದಿಭಾಷೆಯಲ್ಲಿ ರಚಿಸಿದರು. ಗುರು ಗೋವಿಂದ ಸಿಂಗರು ತಮ್ಮ ಬೆಂಬಲಿಗರಿಗೆ ಹಿಂದಿಯಲ್ಲಿ ಆಸಕ್ತಿಯಿಂದ ಬುದ್ಧಿಹೇಳಿ ಪ್ರೇರೇಪಿಸಿದರು. ೧೮೫೭ರಲ್ಲಿ ಬ್ರಿಟಿಷರನ್ನು ಪದಚ್ಯುತಿಗೊಳಿಸುವ ಪಿತೂರಿಯು ಹಿಂದಿಯಲ್ಲಿ ರೂಪುತಾಳಿತು. ಸ್ವಾಮಿ ದಯಾನಂದರು ರಾಷ್ಟ್ರಕ್ಕೆ ನೀಡಿದ ಚೈತನ್ಯಪೂರ್ಣ ಕರೆಯು ಹಿಂದಿ ಮಾಧ್ಯಮದಿಂದಲೇ ಆಗಿತ್ತು. ಬ್ರಿಟಿಷರ ವಿರುದ್ಧ ಶಾಂತಿಯಿಂದ ದಂಗೆಯೇಳುವಂತೆ ಅವರಲ್ಲಿ ಉತ್ಸಾಹ ತುಂಬಲು, ಗಾಂಧೀಜಿ ಕೂಡ ಹಿಂದಿಯನ್ನೇ ಸೂಕ್ತ ವಾಹಕವಾಗಿ ಅಳವಡಿಸಿಕೊಂಡರು. ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಭಾಷೆಯು ಐರ್ಲೆಂಡ್‌ನಲ್ಲಿ ಭಾಷೆ ವಹಿಸಿದಷ್ಟೇ ಪಾತ್ರವನ್ನೂ ವಹಿಸಿತ್ತು.

ಸಂವಿಧಾನವು ಹಿಂದಿಯನ್ನು ಯೂನಿಯನ್‌ನ ಆಡಳಿತ–ಅಧಿಕೃತ– ಭಾಷೆಯೆಂದು, ಸಾಮಾನ್ಯವಾಗಿ ಜನಪ್ರಿಯವಾಗಿರುವ, ಅಂದರೆ, ರಾಷ್ಟ್ರಭಾಷೆ ಎಂಬ

ಅಭಿವ್ಯಕ್ತಿಯ ಬದಲಾಗಿ, ವಿವರಿಸಿದ್ದರೆ, ಅದು ಉಳಿದ ಪ್ರಾಂತೀಯ ಭಾಷೆಗಳ ಬಗೆಗೆ ಇರುವ ತಪ್ಪುಕಲ್ಪನೆಗಳನ್ನು ಹೋಗಲಾಡಿಸಿ, ಆ ಭಾಷೆಗಳು ಕೂಡ ಸಮಾನವಾಗಿ ರಾಷ್ಟ್ರಭಾಷೆಗಳೇ ಎಂದು ತೋರಿಸುವುದಕ್ಕಾಗಿ. ರಾಷ್ಟ್ರೀಯತೆ ಎಂಬುವುದು ಶ್ರೇಷ್ಠಗುಣ ಮಟ್ಟದ ಪರಿಕಲ್ಪನೆಯೇ ವಿನಾ, ಅದು ಅಳೆಯಬಹುದಾದ ಗಾತ್ರ, ಪರಿಮಾಣಗಳನ್ನು ಉಳ್ಳದ್ದಲ್ಲ. ಪ್ರಾದೇಶಿಕ ರಾಷ್ಟ್ರೀಯತೆಯ ವಿಚಾರದ ಅರಿವಿನಲ್ಲಿ ಬೆಳೆದವರಿಗೆ ಇದನ್ನು ಗ್ರಹಿಸಲು ಕಷ್ಟವಾಗಬಹುದು. ಭಾಷೆಗೆ ಸಂಬಂಧಿಸಿದಂತೆ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದಂತೆ ನೀರಸವಾದ ಏಕರೂಪತೆಯನ್ನು ಹೊರಿಸದೆಯೂ, ರಾಷ್ಟ್ರೀಯ ಏಕತೆಯನ್ನು ಹೇಗೆ ರಕ್ಷಿಸಿಕೊಳ್ಳಬಹುದು ಎನ್ನುವುದನ್ನು ಕೂಡ ಅಂತಹ ಜನರು ಅರ್ಥಮಾಡಿಕೊಳ್ಳಲಾರರು. ಹಾಗಿದ್ದರೂ, ಯಾವುದೇ ವ್ಯಕ್ತಿಯು ಹಿಂದಿಭಾಷೆಯನ್ನು ವಿರೋಧಿಸಿ, ಆಂಗ್ಲಭಾಷೆಯ ಬಗೆಗೆ ಅದರ ಪರವಾಗಿ ವಕಾಲತ್ತು ವಹಿಸಿದರೂ, ಅದು ಆವು ವ್ಯಕ್ತಿಯ ರಾಷ್ಟ್ರೀಯ ಪ್ರಜ್ಞೆಯ ಮೇಲೆ ಪರಿಣಾಮ ಬೀರುವುದಿಲ್ಲ ಎನ್ನುವಂತೆ, ಸಂವಿಧಾನದ ಅಭಿವ್ಯಕ್ತಿಯು ಜನರನ್ನು ತಪ್ಪುದಾರಿಗೆ ಎಳೆದಿದೆ. ಅವರಿಗೆ ಆಡಳಿತಾತ್ಮಕ ಉದ್ದೇಶಗಳು ತೀರಾ ಸಾಮಾನ್ಯ ಸಂಗತಿಗಳು. ಅವು ಯಾವುದೇ ಭಾಷೆಯ ಮೂಲಕವಾದರೂ ವ್ಯವಹರಿಲ್ಪಡಬಹುದು ಮತ್ತು ಆಂಗ್ಲಭಾಷೆಯ ಬಳಕೆಯೇ ಮುಂದುವರೆದರೂ ಯಾವುದೇ ಚಿಂತೆಯಿಲ್ಲ. ಇದು ಭಾಷಾ ಪ್ರಶ್ನೆಯ ಬಗೆಗೆ ಉತ್ಸಾಹಹೀನ ಮನೋಧರ್ಮದಲ್ಲಿ ಪರಿಣಮಿಸಿದೆ. ಪ್ರಾಯೋಗಿಕ ಪರಿಗಣನೆಗಳಿಂದಾಗಿ ಉಂಟಾದ ಹೊಂದಾಣಿಕೆ, ರಾಜಿಗಳು ಕೂಡ, ಬದಲಾವಣೆಯ ಉತ್ಸಾಹವನ್ನು ಸೌಮ್ಯಗೊಳಿಸಿವೆ. ಆಂಗ್ಲ ಭಾಷೆಯು ಹೋಗಬೇಕು ಎನ್ನುವುದಾದರೆ, ಅದು ನಮ್ಮ ರಾಷ್ಟ್ರೀಯ ಆತ್ಮಗೌರವದ ಪ್ರಜ್ಞೆಯನ್ನು ತೃಪ್ತಿಗೊಳಿಸುವುದಕ್ಕಾಗಿ ಎಂಬುದನ್ನು ನಾವು ಜ್ಞಾಪಿಸಿಕೊಳ್ಳಬೇಕು. ಅದ್ದರಿಂದ ಆಂಗ್ಲಭಾಷೆಯ ಗುಣ, ಉಪಯೋಗಗಳ ಬಗೆಗೆ, ಸಮಾರೋಪ ಭಾಷಣ ಮಾಡಿದರೆ ಏನೂ ಉಪಯೋಗವಿಲ್ಲ. ಅದರಿಂದ ಎಷ್ಟೇ ಪ್ರಯೋಜನವಿದ್ದರೂ ನಾವು ಆಂಗ್ಲರ ಆಳ್ವಿಕೆಯನ್ನಂತೂ ಉಳಿಸಿಕೊಳ್ಳುವಂತಿರಲಿಲ್ಲವಲ್ಲ! ಸ್ವರಾಜ್ಯದ ದಾಹವನ್ನು ಸುರಾಜ್ಯವು ತಣಿಸಲಾರದು ಎಂಬುದು ಬ್ರಿಟಿಷ್ ಪರವಾದ ಘಟಕಗಳಿಗೆ, ಸ್ವಾತಂತ್ರ್ಯ ಹೋರಾಟದ ಮೊದಲ ದಿನಗಳಲ್ಲಿ ನಮ್ಮ ಉತ್ತರವಾಗಿತ್ತು. ಇವತ್ತು ಕೂಡಾ ಸ್ವಭಾಷೆಯ ಅಗತ್ಯವು ಸುಭಾಷೆಯಿಂದ ಈಡೇರಲಾಗುವುದಿಲ್ಲ.

ಫ್ರಾಂಕ್ ಆಂಥೋನಿಯ ವಾದಸರಣಿಯು ಮತ್ತೆ ಮೂಡಿಬರುತ್ತದೆ. ಆಂಗ್ಲಭಾಷೆಯು ನಮ್ಮ ಭಾಷೆಯೇ? 'ಹೌದು' ಎನ್ನುತ್ತಾರೆ ಅವರು. ಮೊದಲನೆಯದಾಗಿ, ಕಳೆದ ನೂರೈವತ್ತು ವರ್ಷಗಳ ಉಪಯೋಗದಿಂದಾಗಿ, ಆ ಭಾಷೆಯು ನಮ್ಮ ರಾಷ್ಟ್ರೀಯ ವ್ಯಕ್ತಿತ್ವದ ಒಂದು ಅವಿಭಾಜ್ಯ ಅಂಗವಾಗಿದೆ.



ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ, ದೇಶದ ನಾಯಕರು, ಆಂಗ್ಲಭಾಷೆಯ ಮೂಲಕ, ಅವರಿಗೆ ಕೊಡಲ್ಪಟ್ಟ ಆದರ್ಶಗಳನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಮೌಲ್ಯಗಳ ಬಗೆಗಿನ ನಮ್ಮ ತೀರ್ಮಾನಗಳು ಆಂಗ್ಲಭಾಷೆಯಿಂದ ಉದ್ಭವಿಸಿವೆ. ಪರಿಸ್ಥಿತಿಯ ಬಗೆಗೆ ಫ್ರಾಂಕ ಆಂಥೋನಿಯವರ ಅಭಿಪ್ರಾಯಗಳು ಸರಿಯಾಗಿಯೇ ಇವೆ. ಆದರೆ ಇವು ಆಂಗ್ಲಭಾಷೆಯನ್ನು ಭಾರತೀಯ ಭಾಷೆಯನ್ನಾಗಿ ಮಾಡಲಾರವು.

ನಮ್ಮ ರಾಷ್ಟ್ರೀಯ ಜೀವನವು ಆಂಗ್ಲಭಾಷೆಯಿಂದ ಉದ್ಭವಿಸಿದ ಆದರ್ಶಗಳಿಂದ ಮಾರ್ಗದರ್ಶನ ಮಾಡಲ್ಪಟ್ಟು, ಅದಕ್ಕನುಗುಣವಾಗಿ ಯೋಜಿತಗೊಳ್ಳುತ್ತಿದ್ದರೆ, ಅದು ನಮ್ಮ ಮಾನಸಿಕ ಗುಲಾಮಗಿರಿಯ ಚಿಹ್ನೆ. ಎಷ್ಟು ಬೇಗ ನಾವು ಅದರಿಂದ ಬಿಡಿಸಿಕೊಂಡರೆ ಅಷ್ಟು ಹೆಚ್ಚು ಉತ್ತಮ. ಈ ಆದರ್ಶಗಳನ್ನು ಪ್ರತಿಪಾದಿಸುವುದರಿಂದ ಮತ್ತು ಪ್ರೋತ್ಸಾಹಿಸುವುದರಿಂದ ನಾವು ನಮ್ಮ ರಾಷ್ಟ್ರೀಯ ಅಸ್ತಿತ್ವವನ್ನು ಸಾಧಿಸಲಾರೆವು. ನಾವು ಪಾಶ್ಚಾತ್ಯರನ್ನು ಕೇವಲ ಅನುಕರಿಸಬಹುದು ಅಷ್ಟೆ. ಆದರೆ ಅವರ ಮಾರ್ಗ ಮತ್ತು ವಿಧಾನಗಳನ್ನು ಅನುಸರಿಸುವುದರಿಂದ ನಾವು ನಮ್ಮತನವನ್ನು ಉಳಿಸಿಕೊಂಡು ನಾವೇ ಆಗಿರಲು ಸಾಧ್ಯವಾಗುವುದಿಲ್ಲ. ಆಂಗ್ಲಭಾಷೆಯು ಮುಂದುವರಿಯುವ ತನಕ, ನಮ್ಮ ಸ್ವಂತ ಸಾಂಸ್ಕೃತಿಕ ನವೋದಯದ, ಜೀವದಾಯಿನಿ ಹೊಸಗಾಳಿಯನ್ನು ನಾವು ಉಸಿರಾಡಲು ಸಾಧ್ಯವಿಲ್ಲ. ಆಧುನಿಕ ವೈಜ್ಞಾನಿಕ ಅರಿವಿಗೆ ಪ್ರವೇಶವನ್ನು ಕಳೆದುಕೊಳ್ಳುವ ಅಪಾಯದ ಎದುರಿನಲ್ಲಿಯೂ ನಾವು ನಮ್ಮನ್ನು ವಿದೇಶೀ ಭಾಷೆಯ ಹಿಡಿತದಿಂದ ಬಿಡಿಸಿಕೊಳ್ಳಬೇಕು. ಆಂಗ್ಲಭಾಷೆಯ ಮೂಲಕ ಪಶ್ಚಿಮವನ್ನು ಅನುಸರಿಸಿ ನಾವು ನೀಡುವ ಯಾವುದಾದರೂ ಕೊಡುಗೆಗಿಂತಲೂ, ನಮ್ಮದೇ ಭಾಷೆಗಳ ಮೂಲಕ ನಾವು ನೀಡುವ ಕೊಡುಗೆಯು ನಮಗೂ ಮತ್ತು ಜಗತ್ತಿಗೂ ಹೆಚ್ಚು ಮೌಲ್ಯಯುಕ್ತವಾಗಿರುತ್ತದೆ.

ಆಂಗ್ಲಭಾಷೆಯು ಅಲ್ಪಸಂಖ್ಯಾತರ ಅಂದರೆ, ಆಂಗ್ಲೊ–ಇಂಡಿಯನ್‌ರ ಭಾಷೆಯಾಗಿರುವುದರಿಂದ ಸಂವಿಧಾನದಲ್ಲಿ ಅದಕ್ಕೆ ಒಂದು ಸ್ಥಾನವಿರಬೇಕೆಂದು ಫ್ರಾಂಕ್ ಆಂಥೋನಿ ಅಭಿಪ್ರಾಯ ಪಡುತ್ತಾರೆ. ಶ್ರೀ ಆಂಥೋನಿ ತಾವು ಇಲ್ಲಿಯ ರಾಷ್ಟ್ರೀಯರೆಂದು ಭಾವಿಸುವುದಾದರೆ, ಅವರು ಅಲ್ಪಸಂಖ್ಯಾತರು, ಬಹುಸಂಖ್ಯಾತರು ಎಂಬ ಮಾತುಗಳಲ್ಲಿ ಆಲೋಚಿಸುವುದನ್ನು ನಿಲ್ಲಿಸಬೇಕು. ಅಲ್ಲದೇ ಈ ದ್ವಂದ್ವವು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಸೀಮಿತಗೊಂಡ ಉದ್ದೇಶವನ್ನು ಹೊಂದಿದೆ. ಅದನ್ನು ನಮ್ಮ ಇಡಿಯ ರಾಷ್ಟ್ರಜೀವನವನ್ನು ಉಪದ್ರವಗೊಳಿಸುವಷ್ಟು ವಿಸ್ತರಿಸಲಾಗದು. ನಾವು ಹಾಗೇನಾದರೂ ಮಾಡಿದಲ್ಲಿ, ನಾವು ವರ್ಗೀಕರಣದ ಆಧಾರವನ್ನು ಬದಲಾಯಿಸುತ್ತಾ ಹೋದಂತೆ, ಅನೇಕ ಸಂಖ್ಯೆಯ ಅಲ್ಪಸಂಖ್ಯಾತರು ಅಸ್ತಿತ್ವಕ್ಕೆ ಬರುತ್ತಾರೆ. ಪರಿಣಾಮವಾಗಿ ಪ್ರತಿಯೊಬ್ಬನೂ ಒಂದಲ್ಲ ಒಂದು ಅಲ್ಪಸಂಖ್ಯಾತ ವರ್ಗಕ್ಕೆ ಸೇರುತ್ತಾನೆ. ಧಾರ್ಮಿಕ ಅಲ್ಪಸಂಖ್ಯಾತರು, ಭಾಷಾ ಅಲ್ಪಸಂಖ್ಯಾತರು,

ರಾಜಕೀಯ ಅಲ್ಪಸಂಖ್ಯಾತರು, ಜನಾಂಗೀಯ ಅಲ್ಪಸಂಖ್ಯಾತರು, ವೃತ್ತಿಯಿಂದಾಗಿ ಅಲ್ಪಸಂಖ್ಯಾತರು ಮುಂತಾಗಿ ಅನೇಕ ರೀತಿಯ ಅಲ್ಪಸಂಖ್ಯಾತರು ಇರುತ್ತಾರೆ. ಎರಡನೆಯದಾಗಿ, ಆಂಗ್ಲೊ–ಇಂಡಿಯನ್ ಸಮುದಾಯವು ಆಂಗ್ಲಭಾಷೆಯನ್ನು ಮಾತನಾಡುತ್ತಿದ್ದಲ್ಲಿ, ಅವರು ತಾವು ವಾಸಿಸುತ್ತಿರುವ ಜನರ ನಡುವೆ ಇರಬೇಕಾದರೆ, ಅವರೊಡನೆ ಒಂದಾಗಿ ಬದುಕಬೇಕಾದರೆ, ಆ ಭಾಷೆಯನ್ನು ಬಿಡಬೇಕು. ವಾಸ್ತವವಾಗಿ, ಅವರಿಗೆ ಅನುಕೂಲಕರವಾದ ಭಾಷೆಯು ಹಿಂದಿ ಅಥವಾ ಅವರು ಕರೆಯುವಂತೆ ಹಿಂದುಸ್ತಾನಿ. ಅವರು ಆಂಗ್ಲಭಾಷೆಯನ್ನು ಮಾತನಾಡುವುದಾದರೆ, ಅದು ಅವರು ಸಾಮಾನ್ಯವಾಗಿ ಕಾನ್ವೆಂಟ್‌ಗಳಲ್ಲಿ ಪಡೆಯುವ ಶಿಕ್ಷಣದಿಂದಾಗಿ. ಆ ರೀತಿಯಲ್ಲಿ ನೋಡಿದರೆ, ಆಂಗ್ಲೊ–ಇಂಡಿಯನ್ ಅಲ್ಲದ ಅಂತಹ ಕಾನ್ವೆಂಟ್‌ಗಳಲ್ಲಿ ಕಲಿಯುತ್ತಿರುವ ಮಕ್ಕಳು ಕೂಡ ಆಂಗ್ಲಭಾಷೆಯನ್ನೇ ಮಾತನಾಡುತ್ತಾರೆ. ಇದು ಆ ಶಾಲೆಗಳು ಉಂಟುಮಾಡುವ ರಾಷ್ಟ್ರೀಯತೆಯನ್ನು ಹಾಳುಮಾಡುವ ಪ್ರಭಾವ. ಆ ಅಭ್ಯಾಸವನ್ನು ಬಿಟ್ಟುಬಿಡುವಂತೆ ಮತ್ತು ಪ್ರಸ್ತುತ ಸಮಯಕ್ಕೆ ಹೊಂದಿಕೊಂಡಿರುವಂತೆ ಅವರಿಗೆ ಹೇಳುವುದನ್ನು ಬಿಟ್ಟು, ನಾವು ಎಲ್ಲ ಜನರ ಮೇಲೂ, ಅವರದಲ್ಲದ ಭಾಷೆಯನ್ನು ಹೊರಿಸಲಾಗುವುದಿಲ್ಲ. ಅದೂ ಅಲ್ಲದೆ ಆಂಗ್ಲೊ–ಇಂಡಿಯನ್ ಸಮುದಾಯವು ಒಂದು ವಿಶೇಷ ಪರಿಸ್ಥಿತಿಯಿಂದಾಗಿ ಅಸ್ತಿತ್ವಕ್ಕೆ ಬಂದಿತು ಎನ್ನವುದನ್ನು ಕೂಡ ಗಮನಿಸಬೇಕು. ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ಅವರು ಎಲ್ಲ ಸವಲತ್ತುಗಳನ್ನೂ ಅನುಭವಿಸಿದರು. ಬ್ರಿಟಿಷ್ ಪ್ರಭುಗಳು ಬಿಟ್ಟು ಹೋಗುವ ಸಂದರ್ಭದಲ್ಲಿ ಈ ಸವಲತ್ತುಗಳಲ್ಲಿ ಕೆಲವು ಹತ್ತು ವರ್ಷಗಳವರೆಗೂ, ಸಂವಿಧಾನದಿಂದ ಖಾತರಿಯನ್ನು ನೀಡಲಾಗಿತ್ತು. ಶ್ರೀ ಫ್ರಾಂಕ್ ಆಂಥೋನಿಯವರು, ಈ ಹತ್ತು ವರ್ಷಗಳ ಅವಧಿಯು ಮುಗಿಯುವುದಕ್ಕೆ ಮುಂಚೆ, ತಮ್ಮ ಸಮುದಾಯವನ್ನು ಇಲ್ಲಿಯ ಸಾಮಾನ್ಯ ಜನರಂತೆ ಬದುಕಲು ತಯಾರು ಮಾಡಬೇಕಾಗಿತ್ತು. ರಾಷ್ಟ್ರವಿರೋಧಿ ನಡೆಯನ್ನು ಆರಂಭಿಸುವುದರಿಂದ ಹೀಗೆ ಇಡಿಯ ಸಮುದಾಯವನ್ನು ಕೀಳುಮಾಡುವುದು ಶ್ರೀ ಆಂಥೋನಿಯವರಿಗೆ ಶೋಭಿಸುವುದಿಲ್ಲ. ಇಂಗ್ಲಿಷ್ ಅನ್ನು ಆ ಸಮುದಾಯದ ಮಾತೃಭಾಷೆ ಎಂದು ಕರೆಯುವುದರ ಬಗೆಗೆ, ನಾನು ಸಂವಿಧಾನದಲ್ಲಿ ಆಂಗ್ಲೊ–ಇಂಡಿಯನ್* ಎಂಬುದಕ್ಕೆ ಕೊಟ್ಟಿರುವ ವಿವರಣೆ, ವ್ಯಾಖ್ಯಾನಗಳನ್ನು ಉಲ್ಲೇಖಿಸಿ, ಅವರ ಸಿಡಿಗುಂಡನ್ನು ಅವರೇ ಹಾರಿಸಿಕೊಳ್ಳಲು ಬಿಡುತ್ತೇನೆ.

---

* ೩೬೬ನೆಯ ಆರ್ಟಿಕಲ್, ಆಂಗ್ಲೊ–ಇಂಡಿಯನ್ ಎಂಬುದರ ಅರ್ಥವನ್ನು ಹೀಗೆ ವ್ಯಾಖ್ಯಾನಿಸುತ್ತದೆ: "ವ್ಯಕ್ತಿಯ ತಂದೆ, ಅಥವಾ ಯಾವುದೇ ಒಬ್ಬ ಇತರ ಪುರುಷ, ಪೂರ್ವಜರಲ್ಲಿ ಯೂರೋಪಿಯನ್ ಮೂಲದವರಾಗಿದ್ದು, ಆದರೆ ಭಾರತದ ಪ್ರದೇಶದಲ್ಲಿ ವಾಸಿಸುತ್ತಿದ್ದು, ಅಥವಾ ಅಂತಹ ಪ್ರದೇಶದ ಒಳಗೆ ಜನಿಸಿದ್ದು, ಮತ್ತು ತಂದೆತಾಯಿಯರು ಸಹಜವಾಗಿ



ಶ್ರೀ ಆಂಥೋನಿಯವರಿಂದ ಮಂಡಿಸಲ್ಪಟ್ಟ ಠರಾವು, ಎಂಟನೆಯ ಷೆಡ್ಯೂಲಿನಲ್ಲಿ ನಮೂದಿಸಲ್ಪಟ್ಟಿರುವ ಭಾಷೆಗಳಲ್ಲಿ ಒಂದಾಗಿ ಸೇರಿಸುವಂತೆ ಪ್ರತಿಪಾದಿಸುತ್ತದೆ. ಈ ಪ್ರಸ್ತಾಪವು ಹಿಂದಿ ಮತ್ತು ಇತರ ಭಾಷೆಗಳಿಗೆ ಸಂಬಂಧಿಸಿದಂತೆ ಸಂವಿಧಾನಾತ್ಮಕ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಯನ್ನೂ ಸೂಚಿಸುವುದಿಲ್ಲವೆಂದು ಅವರ ಬೆಂಬಲಿಗರು ಹೇಳುತ್ತಾರೆ. ಈ ವಾದಸರಣಿಯು ಕೇವಲ ಜನರನ್ನು ವಂಚಿಸುವುದಕ್ಕೆ ಮಾತ್ರ. ಎಂಟನೆಯ ಷೆಡ್ಯೂಲಿನ ತಿದ್ದುಪಡಿಯ ಮೂಲಕ ಆಂಗ್ಲಭಾಷೆಯನ್ನು ಭಾರತೀಯ ಭಾಷೆಗಳ ಪಟ್ಟಿಗೆ ಸೇರಿಸಲು ಅನುಮತಿಸಿದರೆ, ಇದು ಕಡೆಗೆ ಒಂದು ದಿನ, ಆಂಗ್ಲಭಾಷೆಯೊಂದೇ ಯೂನಿಯನ್‌ನ ಆಡಳಿತ (ಅಧಿಕೃತ) ಭಾಷೆ ಎಂದೂ ಅದನ್ನು ಉಳಿಸಿಕೊಳ್ಳಲು ಮತ್ತಷ್ಟು ವಾದ ಮಾಡಲು ಅನುಕೂಲವಾಗುತ್ತದೆ. ಪ್ರಚಾರದಲ್ಲಿರುವ ಆಂಗ್ಲಪದಗಳನ್ನು ಉಳಿಸಿಕೊಳ್ಳಬಹುದಾದರೂ, ಇತರ ಭಾರತೀಯ ಭಾಷೆಗಳಂತೆ, ಆಂಗ್ಲಭಾಷೆಯು ಹಿಂದಿಯ ಅಭಿವೃದ್ಧಿಯು ಆಧಾರವಾಗಿರುವ ಉದ್ದೇಶವನ್ನು ಪೂರೈಸಲಾರದು. ಆಂಗ್ಲ ಪದಗಳನ್ನು ಅವುಗಳ ವಿಶಿಷ್ಟತೆಯೊಂದಿಗೆ ಹಸ್ತಕ್ಷೇಪ ಮಾಡದೆ ಹಿಂದಿಯೊಳಗೆ ಸಂಪೂರ್ಣವಾಗಿ ಹಸ್ತಗತ ಮಾಡಿಕೊಳ್ಳಲಾಗುವುದಿಲ್ಲ. ಹಿಂದಿಯಲ್ಲಿ ಸೈಕಲ್ ಎಂಬ ಪದದ ಬಳಕೆಯನ್ನು ಮುಂದುವರೆಸುವುದು ಬೇರೆ ವಿಷಯ. ಆದರೆ ನಾವು ಸೈಕ್ಲಿಸ್ಟ್, ಸೈಕ್ಲಿಕ್, ಎನ್‌ಸೈಕ್ಲಿಕ್, ಸೈಕ್ಲೊಸ್ಟೈಲ್ ಮುಂತಾದ ಪದಗಳನ್ನೂ ಉಪಯೋಗಿಸಲಾಗುವುದಿಲ್ಲ. ವಾಸ್ತವವಾಗಿ ಹೇಳಬೇಕೆಂದರೆ, ತಾಂತ್ರಿಕ ಮತ್ತು ಕಾನೂನಿನ ವಿಷಯಗಳಿಗೆ ಸೂಕ್ತ ಪದಗಳನ್ನು ನಾವು ಕಂಡುಕೊಳ್ಳಬೇಕಾದರೆ ನಾವು ಸಂಸ್ಕೃತಕ್ಕೆ ಮೊರೆಹೋಗಬೇಕು. ನಾವು ಆಂಗ್ಲಪದಗಳನ್ನೇ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಅವು ಕೇವಲ ಒಂಟಿಯಾಗಿ ಬರುವುದಿಲ್ಲ, ತಮ್ಮ ಇಡಿಯ ಕುಟುಂಬ ವರ್ಗದೊಡನೆ ಬರುತ್ತವೆ.

(೧೯೫೯ರ ಮೇ ೧೧)

---

ಅಲ್ಲಿಯೇ ವಾಸಿಸುವರಾಗಿದ್ದು, ಮತ್ತು ತಾತ್ಕಾಲಿಕ ಉದ್ದೇಶಗಳಿಗೆ ಮಾತ್ರ ಅಲ್ಲಿ ವಾಸಿಸುವವರಾಗಿರದಿದ್ದಲ್ಲಿ ಅಂತಹವನು ಆಂಗ್ಲೊ–ಇಂಡಿಯನ್ ಆಗುತ್ತಾನೆ."

# ಚೀಣಾ ಆಕ್ರಮಣದ ಪಾಠಗಳು : ನಾವು ಏನನ್ನಾದರೂ ಕಲಿತಿದ್ದೇವೆಯೆ?

ಕಳೆದ ವರ್ಷ NEFA ಮತ್ತು ಲಡಾಖ್‌ಗಳಲ್ಲಿ ನಮ್ಮ ರಕ್ಷಣೆಯ ತೀವ್ರ ಕುಸಿತದ ಬಗೆಗಿನ ತನಿಖಾ ವರದಿಯನ್ನು ಸಂಸತ್ತಿನಿಂದಲೂ ಮತ್ತು ಜನರಿಂದಲೂ ತಡೆಹಿಡಿದಿಟ್ಟಿರುವ ರಕ್ಷಣಾ ಸಚಿವರು, ಪ್ರಸಕ್ತ ಸನ್ನಿವೇಶಕ್ಕೆ ಉದ್ದೇಶಿಸಿರುವಂತೆ, ತನಿಖೆಯ ಸ್ಥೂಲವಿವರಗಳಿಗೆ ಸಂಬಂಧಿಸಿದಂತೆ ಹೇಳಿಕೆಯನ್ನು ನೀಡಿದ್ದಾರೆ. ಆ ಹೇಳಿಕೆಯ ಪ್ರಕಾರ, ಆ ತನಿಖೆಯ ಉದ್ದೇಶವು ಯಾರ ಬಗೆಗೂ ಅಪಪ್ರಚಾರ ಮಾಡುವುದಾಗಲೀ, ದೋಷ ಹುಡುಕುವುದಾಗಲೀ ಆಗಿರಲಿಲ್ಲ. ಆದರೆ ಪಾಠಗಳನ್ನು ಕಲಿಯುವುದಾಗಿತ್ತು. ಆದ್ದರಿಂದ, ಯಾವುದೇ ಜವಾಬ್ದಾರಿಯನ್ನು ನಿರ್ದಿಷ್ಟವಾಗಿ ಬೆರಳುಮಾಡಿ ತೋರಿಸುವುದಕ್ಕಿಂತಲೂ ವರದಿಯು ಕೇವಲ ಅಸ್ಪಷ್ಟವಾಗಿ ಸಾಮಾನ್ಯೀಕರಿಸಿರುವಂತೆ ತೋರುತ್ತದೆ. ವಿಷಯದ ಇಂತಹ ಬೀಸುಚಲನೆಯಂಥ ವಿಸ್ತಾರದ ಪರಿಶೀಲನೆಯು, ಕೆಲವರನ್ನು ರಕ್ಷಿಸುತ್ತಲೇ ಎಲ್ಲರನ್ನೂ ದೋಷಿಗಳನ್ನಾಗಿಸುತ್ತದೆ. ಅಲಕ್ಷ್ಯ ಹಾಗೂ ಉದಾಸೀನ ಮಾಡಿದವರು ಶಿಕ್ಷೆಗೆ ಒಳಪಡದೇ ಇರುವುದರಿಂದಾಗಿ ಅದು ಕರ್ತವ್ಯನಿಷ್ಠರ ಮೇಲೆ ನಿರುತ್ಸಾಹದಾಯಕ ಪರಿಣಾಮವನ್ನುಂಟುಮಾಡಬಹುದು. ಉದಾಸೀನಮಾಡಿದವರು ಶಿಕ್ಷೆಗೊಳಪಡದಿರುವುದು ವಿಶೇಷವಾಗಿ ಅವರು ಪಶ್ಚಾತ್ತಾಪ ಪಡದಿದ್ದರೆ ಅದರಿಂದ ಯಾವ ಪಾಠವನ್ನೂ ಕಲಿಯಲು ಸಾಧ್ಯವಿಲ್ಲ. ಅಪರಾಧಿಯನ್ನು ರಕ್ಷಿಸುವ ಯಾವ ಪ್ರಯತ್ನವನ್ನೂ ಮಾಡುವುದಿಲ್ಲವೆಂದು ನಾವು ಆಶಿಸುತ್ತೇವೆ.

ರಕ್ಷಣಾ ಸಚಿವರ ಹೇಳಿಕೆಯಲ್ಲಿ ಪ್ರಕಟಗೊಂಡಿರುವಂತೆ, ವರದಿಯು ಮೊದಲು ಹೇಳದೇ ಇದ್ದ ಏನನ್ನೂ ಹೇಳುವುದಿಲ್ಲ. ರಕ್ಷಣಾದಳವು ಎದುರಿಸಬೇಕಾಗಿದ್ದ, ಭೂಪ್ರದೇಶದ ಕಷ್ಟಕಠಿಣತೆಗಳು, ಸಾಧನಗಳ ಕೊರತೆ, ಸಂಖ್ಯಾಬಲದ ಕೊರತೆ, ದಿಢೀರ್ ಆಕ್ರಮಣ ಮುಂತಾದವು ಅಧಿಕೃತ ವಕ್ತಾರರ ಪ್ರಕಾರ ನಮ್ಮ ಹಿನ್ನಡೆಗಳಿಗೆ ಕಾರಣಗಳಾಗಿದ್ದವು. ಆದರೆ ಜನರು ಬೇರೆಯೇ ಏನನ್ನೋ ಹೆಚ್ಚಾಗಿ ಸಂದೇಹಿಸಿದ್ದರು ಮತ್ತು ತನಿಖೆಯು ಅತ್ಯಂತ ಉನ್ನತ ಮಟ್ಟದವರಲ್ಲಿನ ಮುನ್ನೋಟ, ದೂರದೃಷ್ಟಿಗಳ ಕೊರತೆಯನ್ನು ಪ್ರಕಟಪಡಿಸಿದೆ. ಅಲ್ಲದೆ, ಉನ್ನತ ರಕ್ಷಣಾ ಅಧಿಕಾರಿಗಳು, ಕೆಳ ಹಾಗೂ ಸ್ಥಳೀಯ ಮಟ್ಟದಲ್ಲಿ,



ಕಾರ್ಯಕಾರಿ ನಿರ್ವಹಣೆಗಳಲ್ಲಿ ಮಧ್ಯೆ ತಲೆ ಹಾಕುತ್ತಿದ್ದುದಾಗಿ ವರದಿಯು ಆಪಾದಿಸಿದೆ. ಇವೆಲ್ಲವು ಹೇಳಿಕೆಯ ಪ್ರಕಾರ, ಸ್ಥಾಪಿತಗೊಂಡಿದ್ದ ನಿಯಮ ಮತ್ತು ಕಾರ್ಯವಿಧಾನದಿಂದ ಅಡ್ಡಸರಿಯುವುದಾಗಿತ್ತು.

ರಕ್ಷಣೆಯ ಕಾರ್ಯನೀತಿಯನ್ನು ರೂಪಿಸುವವರು ರಕ್ಷಣಾಬಲಕ್ಕೆ ಸಮರ್ಪಕ ನಿರ್ದೇಶನ ನೀಡುವುದರಲ್ಲಿ ವಿಫಲರಾಗಿರುವುದಕ್ಕಾಗಿ. ತನಿಖೆಯು ಅವರನ್ನು ಖಚಿತವಾಗಿ ದೋಷಿಗಳಾಗಿಸುತ್ತದೆ. ಆ ಹೇಳಿಕೆಯು ಹೀಗೆ ಹೇಳುತ್ತದೆ: "ಅತ್ಯಂತ ದೊಡ್ಡದಾದ ಹಾಗೂ ಅತ್ಯುತ್ತಮವಾಗಿ ಸುಸಜ್ಜಿತಗೊಂಡಿರುವ ಸೈನ್ಯಗಳಿಗೂ ಕೂಡಾ ಸರ್ಕಾರದಿಂದ– ಸರ್ಕಾರದ ಸಾಧನಗಳಾಗಿರುವ ಅವುಗಳಿಗೆ– ಸಮರ್ಪಕ ಮಾರ್ಗದರ್ಶನ ಮತ್ತು ಮುಖ್ಯ ಆದೇಶಗಳ ಅವಶ್ಯಕತೆಯಿರುತ್ತದೆ." ಖಂಡಿತವಾಗಿಯೂ, ಮಿಲಿಟರಿಯಲ್ಲಿ ಸರ್ಕಾರ ತಪ್ಪು ಮಾಡಿರುವುದು. ಶ್ರೀ ವಿ.ಕೆ. ಕೃಷ್ಣಮೆನನರು ಮುಖ್ಯಸ್ಥರಾಗಿದ್ದ ರಕ್ಷಣಾ ಮಂತ್ರಾಲಯ ಮತ್ತು ಸರ್ಕಾರ ಕಮ್ಯೂನಿಸ್ಟ್ ಚೀನಾದೊಡನೆ ಯಾವುದೇ ಯುದ್ಧವಾಗಬಹುದೆಂಬ ಸಾಧ್ಯತೆಯನ್ನೇ ತಳ್ಳಿಹಾಕಿದ್ದವು. ಪರಿಣಾಮವಾಗಿ, ರಕ್ಷಣಾಬಲವು ಈ ಕಠಿಣ ಕಾರ್ಯಕ್ಕೆ ಸಿದ್ಧವಾಗಿರಲಿಲ್ಲ. ಈ ದುಸ್ತರ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಆದರೆ, ಅವರು ತಮ್ಮ ಸಂಪನ್ಮೂಲಗಳನ್ನು ಒಟ್ಟುಗೂಡಿಸಿಕೊಂಡು, ತಮ್ಮ ಸೈನ್ಯಗಳ ಹಿನ್ನಡೆಯನ್ನು ಮತ್ತೆ ದಂಡಯಾತ್ರೆಗೆ ಮುನ್ನಡೆಸುವುದಕ್ಕೆ ಮುಂಚೆಯೇ, ಈ ಅಪಮಾನಕರವಾದ, ಯುದ್ಧವಿರಾಮವನ್ನು ಒಪ್ಪಿಕೊಳ್ಳಲಾಯಿತು. ಹಾಗಾಗಿ ನಮ್ಮ ರಕ್ಷಣಾ ಬಲಗಳಿಗೆ ಅಂಟಿಕೊಂಡು ಮುಂದುವರೆಯುತ್ತಿರುವ ಕಳಂಕಕ್ಕೆ ಸರ್ಕಾರವೇ ಜವಾಬ್ದಾರಿಯಾಗಿದೆ.

ಈ ವಿಷಯದಲ್ಲಿ ಹಿಂದಿನ ಅನುಭವಗಳಿಂದ ಸರ್ಕಾರವು ಯಾವುದೇ ಪಾಠ ಕಲಿತಿರುವ ಚಿಹ್ನೆಗಳಿಲ್ಲ. ಕಮ್ಯುನಿಸ್ಟ್ ಚೀನಾದೊಡನೆ ಯುದ್ಧ ಮಾಡುವ ಬಗೆಗೆ ರಕ್ಷಣಾ ಬಲಗಳಿಗೆ ಏನಾದರೂ ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗಿದೆಯೇ? ಪ್ರಧಾನಮಂತ್ರಿಯವರ ಹೇಳಿಕೆಗಳು ಅಸ್ಪಷ್ಟವಾಗಿದ್ದು, ವಿಷಯವನ್ನು ಮತ್ತಷ್ಟು ಮಬ್ಬು ಮಾಡುತ್ತವೆ. ಶತ್ರುವಿನಿಂದ ನಮ್ಮ ಭೂಪ್ರದೇಶವನ್ನು ಹಿಂದಕ್ಕೆ ಕಿತ್ತುಕೊಳ್ಳಲು ಆರಂಭದ ಪ್ರಯತ್ನಗಳನ್ನು ಮಾಡುವುದರ ಬದಲು ಪ್ರಧಾನಮಂತ್ರಿಗಳು, ಚೀನಾದ ಕುತಂತ್ರದ ಬಗೆಗೆ ೧೯೬೨ರಲ್ಲಿ ಇದ್ದಷ್ಟೇ ಸಂದೇಹದಿಂದ ೧೯೬೩ರಲ್ಲಿಯೂ ಇದ್ದಾರೆ. ವಿದೇಶಾಂಗ ವಿಷಯಗಳ ಮೇಲಿನ ರಾಜ್ಯ ಸಭೆಯ ಚರ್ಚೆಯಲ್ಲಿಯೂ, ಕಮ್ಯುನಿಸ್ಟ್ ಚೀನಾದೊಂದಿಗೆ "ಗಡಿಯ ವ್ಯತ್ಯಾಸವನ್ನು" ಶಾಂತಿಯುತ ಮಾರ್ಗಗಳಿಂದ ತೀರ್ಮಾನಿಸಿಕೊಳ್ಳುವೆವು ಎಂದು ರಾಜ್ಯಸಭೆಯ ಅವರು ಹೇಳುವುದನ್ನು ಮುಂದುವರೆಸಿದರು. ಭಾರತ ಸರ್ಕಾರವು ಇನ್ನೂ ಕೂಡ ಕೊಲಂಬೊ ಪ್ರಸ್ತಾವನೆಗಳಿಗೆ

ಅಂಟಿಕೊಂಡಿದೆ ಮತ್ತು, "ಒಬ್ಬ ವ್ಯಕ್ತಿ ಅಥವಾ ಹಲವು ವ್ಯಕ್ತಿಗಳ ಗುಂಪಿನೊಂದಿಗೆ ಮಧ್ಯಸ್ಥಿಕೆಗೆ ಅಥವಾ ಪಂಚಾಯಿತಿ ತೀರ್ಮಾನಕ್ಕೆ ಸಹ ಸಿದ್ಧವಾಗಿದೆ." ಇವೆಲ್ಲವೂ (–ರಕ್ಷಣಾ ಮಂತ್ರಾಲಯದ–) ಮಿಲಿಟರಿ ರೀತಿಯ ಆಲೋಚನೆಗಳಲ್ಲ ಮತ್ತು ಇವು ಮಾನಸಿಕವಾಗಿಯಾಗಲೀ, ದೈಹಿಕವಾಗಿಯಾಗಲೀ, ದೇಶವನ್ನು ಮತ್ತು ಶಸ್ತ್ರ ಸನ್ನದ್ಧ ಸೈನ್ಯಗಳನ್ನು ಚೀನಾದಿಂದ ಬಂದಿರುವ ವಿಪತ್ತನ್ನು ಎದುರಿಸಲು ಸಮರ್ಥಗೊಳಿಸಲಾರವು.

ರಕ್ಷಣಾ ಸಚಿವರ ಹೇಳಿಕೆ ಕೂಡ, ಸರ್ಕಾರದ ಕಾರ್ಯ ನೀತಿಯಲ್ಲಿರುವ ಅನಿಶ್ಚಿತತೆಯನ್ನು ಹೊರಗೆಡಹುತ್ತದೆ. ಕಳೆದ ನವೆಂಬರಿನಲ್ಲಿ ಕುಪ್ರಸಿದ್ಧಿ ಪಡೆದ ಪ್ರಸಿದ್ಧ ನಾಲ್ಕನೆಯ ವಿಭಾಗವನ್ನು ಅದರ ದುಷ್ಕೀರ್ತಿಯಿಂದ ಸ್ವಚ್ಛಗೊಳಿಸಲು ನೀಡಿದ ಹೇಳಿಕೆಯಲ್ಲಿ ರಕ್ಷಣಾ ಸಚಿವರು ಈ ಭರವಸೆಯನ್ನು ವ್ಯಕ್ತಪಡಿಸಿದರು: ಪ್ರಸಿದ್ಧವಾದ ಈ ನಾಲ್ಕನೆಯ ವಿಭಾಗವು, ಮುಂದೆ ನಮ್ಮ ದೇಶದ ವಿರುದ್ಧ ಆಕ್ರಮಣಗಳಾದರೆ, ಇನ್ನೂ ಹೆಚ್ಚಿನ ಯುದ್ಧಗಳಲ್ಲಿ ಜಯಗಳಿಸಲು ಅಸ್ತಿತ್ವದಲ್ಲಿರುತ್ತದೆ. ಹೀಗೆ, ಮುಕ್ತಿಯ ಅಥವಾ ಪಾಪ ಪರಿಹಾರದ ಭರವಸೆಯು ನಮ್ಮ ಭಾಗದ ಯಾವುದೇ ಇತ್ಯಾತ್ಮಕ ಕಾರ್ಯ ವಿಧಾನದಲ್ಲಿಲ್ಲ. ಆದರೆ, ಒಂದು ವೇಳೆ ಚೀನಿಯರು ಮತ್ತೆ ಆಕ್ರಮಣ ಮಾಡಲು ಆಯ್ಕೆ ಮಾಡಿದರೆ, ಮಾತ್ರ. (ಈ ಭರವಸೆಯು ಕೈಗೂಡುವುದು ಸಾಧ್ಯ ಎನ್ನುವ ಅರ್ಥದಲ್ಲಿ).

ಈ ಎಲ್ಲವೂ, ಕಳೆದ ವರ್ಷದ ಅಪಮಾನಕರ ಘಟನೆಗಳನ್ನು ನಿರ್ಲಕ್ಷಿಸಿರುವುದಕ್ಕೆ ಸಮನಾಗಿರುತ್ತದೆ. ಕಳೆದುಹೋಗಿರುವ ನಮ್ಮ ಭೂ ಪ್ರದೇಶಗಳನ್ನಾಗಲೀ, ಕಳೆದುಹೋಗಿರುವ ನಮ್ಮ ಗೌರವವನ್ನಾಗಲೀ ಮತ್ತೆ ಸಂಪಾದಿಸುವ ಯಾವುದೇ ಅಭಿಲಾಷೆಯೂ ನಮ್ಮ ಸರ್ಕಾರಕ್ಕೆ ಇರುವಂತೆ ತೋರುವುದಿಲ್ಲ. ಕಳೆದ ನವೆಂಬರ್‌ನಲ್ಲಿ ಅವರು ತೆಗೆದುಕೊಂಡ ನಿಲುವಿನಿಂದ ಇದು ಮುಖ್ಯವಾದ ಇಳಿತದ ಘಟ್ಟವೆನ್ನಬಹುದು. ಮಾಜಿ ರಕ್ಷಣಾ ಸಚಿವರ ಕೆಟ್ಟ ಪ್ರಭಾವದಲ್ಲಿ ಸರ್ಕಾರ ತೆಗೆದುಕೊಂಡ ನಿಲುವೇ ಇದಾಗಿದೆ. ಈ ನಿಲುವು ಬದಲಾಗದೇ, ಸರ್ಕಾರದ ರಕ್ಷಣಾ ಕಾರ್ಯನೀತಿಯು ಉದ್ದೇಶಪೂರ್ಣವೂ, ಅರ್ಥಪೂರ್ಣವೂ ಆಗುವುದಿಲ್ಲ. ಇದು ಜನರನ್ನು ಸ್ಫೂರ್ತಿಗೊಳಿಸುವುದಿಲ್ಲ. ಶ್ರೀ ವೈ. ಬಿ. ಚವ್ಹಾನ್ ಅವರು ರಕ್ಷಣಾ ಮಂತ್ರಾಲಯದ ಅಧಿಕಾರ ವಹಿಸಿಕೊಳ್ಳುವಾಗ ಈ ನಾಡಿನ ಪರಂಪರೆಯನ್ನು ಉದ್ಧರಿಸಿದ್ದರು. ಅವರು ಅದಕ್ಕೆ ಅನುಗುಣವಾಗಿ ವರ್ತಿಸಲಿ.

ಪ್ರಧಾನಮಂತ್ರಿಗಳು, ಚೀನಾ ಮತ್ತು ಪಾಕಿಸ್ತಾನಗಳ ಜೊತೆ ವರ್ತಿಸುವಾಗ, ಎರಡು ಮಟ್ಟಗಳನ್ನು ಅನುಸರಿಸುವುದು ಆಶ್ಚರ್ಯಕರವಾಗಿದೆ. ಪಾಕಿಸ್ತಾನದ ಹೆಚ್ಚುತ್ತಿರುವ ನಂಬಿಕೆದ್ರೋಹವನ್ನು ಸರಿಯಾಗಿ ಗಮನಿಸುತ್ತಾರೆ ಮತ್ತು ಹೀಗೆ



ಹೇಳುತ್ತಾರೆ: "ಈಗ ಇರುವ ಸನ್ನಿವೇಶಗಳಲ್ಲಿ ಇದು ಸ್ಪಷ್ಟವಾಗುತ್ತದೆ. ಏನೆಂದರೆ, ಪಾಕಿಸ್ತಾನವು ಹೆಚ್ಚು ಹೆಚ್ಚಾಗಿ ಚೀನಾದೊಡನೆ ಬಾಂಧವ್ಯ ಬೆಳೆಸುತ್ತಿದ್ದರೆ, ಪಾಕಿಸ್ತಾನದೊಡನೆ ತೃಪ್ತಿಕರವಾದ ಒಡಂಬಡಿಕೆಯ ಯಾವ ಭರವಸೆಯೂ ಇರುವುದಿಲ್ಲ." ತೃಪ್ತಿಕರವಾದ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಗುವುದಕ್ಕೆ ಮುಂಚೆ ಪಾಕಿಸ್ತಾನದ ಸಂಪೂರ್ಣ ದೃಷ್ಟಿಕೋನವು ಬದಲಾಗಬೇಕೆಂದು ಅವರು ಭಾವಿಸುತ್ತಾರೆ.

ಈ ವಿಷಯದಲ್ಲಿ ಪಾಕಿಸ್ತಾನದ ಅಪರಾಧವೂ ಚೀನಾದಷ್ಟೆ ಇದೆ. ಪಾಕಿಸ್ತಾನವು ಭಾರತದ ಬಗೆಗಿನ ಹಗೆತನದಿಂದಾಗಿ, ಚೀನಾದೊಡನೆ ಆಟವಾಡುತ್ತಿದ್ದರೆ, ಚೀನಾ ಕೂಡ ಸರದಿಯಂತೆ ಪಾಕಿಸ್ತಾನದೊಡನೆ ಸೇರಿಕೊಳ್ಳುತ್ತಿದೆ. ನಿಶ್ಚಯವಾಗಿಯೂ ನಾವು ಯಾವುದಾದರೂ ಒಡಂಬಡಿಕೆ ಮಾಡಿಕೊಳ್ಳುವುದಕ್ಕೆ ಮುನ್ನ ಅದರ ಮನೋಧರ್ಮವೂ ಬದಲಾಗಬೇಕು. ಆದ್ದರಿಂದ ಪಾಕಿಸ್ತಾನದೊಡನೆ ಮಾಡಿರುವಂತೆ ಪ್ರಧಾನಮಂತ್ರಿಗಳು ಚೀನಾದೊಡನೆ ಕೂಡ ಯಾವುದೇ ಮಾತುಕತೆಗಳನ್ನು ವರ್ಜಿಸಿಬಿಡಬಾರದೇ? ಕೇವಲ ಅದು ಮಾತ್ರ ಗೌರವಪೂರ್ಣವೂ ವಾಸ್ತವವೂ ಆಗಿರುತ್ತದೆ.

(೧೯೬೩ರ ಸೆಪ್ಟೆಂಬರ್ ೯)

## ಮೆನನ್ ಹೋಗಲೇಬೇಕು

ರಕ್ಷಣಾಬಲ ಮತ್ತು ದೇಶದ ಸುರಕ್ಷತೆಯ ಬಗೆಗೆ ಪೂರ್ವಗ್ರಹಪೀಡಿತ ಹೇಳಿಕೆಗಳನ್ನು ನೀಡಿದ್ದಕ್ಕಾಗಿ, ಪ್ರಧಾನಮಂತ್ರಿಯವರು, ತಮ್ಮ ಮಾಸಿಕ ಪತ್ರಿಕಾಗೋಷ್ಠಿಯಲ್ಲಿ ರಕ್ಷಣಾಸಚಿವರನ್ನು ಮತ್ತೆ ಸಮರ್ಥಿಸಬೇಕಾಯಿತು. ಭಾರತದ ರಕ್ಷಣಾ ದಳಗಳು ಶಕ್ತವಾಗಿದ್ದರೂ ಚೀನಾದ ಅಪಾಯ, ಭೀತಿಯನ್ನು ಎದುರಿಸುವಷ್ಟು ಸಮರ್ಪಕವಾಗಿಲ್ಲ ಎಂದು ಶ್ರೀ ಕೃಷ್ಣ ಮೆನನ್‌ರು ಹೇಳಿದರೆಂದು ವರದಿಯಾಗಿದೆ. ಮತ್ತೂ ಒಂದು ಸಂದರ್ಭದಲ್ಲಿ, ಮೊದಲು ಸಂವಿಧಾನದ ತಿದ್ದುಪಡಿಯಾಗದೇ ಸರ್ಕಾರವು ಭಾರತದ ಭೂಪ್ರದೇಶಗಳ ಹಕ್ಕನ್ನು ಚೀನಾ ಅಥವಾ ಪಾಕಿಸ್ತಾನಕ್ಕೆ ಬಿಟ್ಟುಕೊಡಲು ಸಾಧ್ಯವಿಲ್ಲವೆಂದೂ ಅವರು ಹೇಳಿದ್ದಾರೆ. ಈ ಹೇಳಿಕೆಗಳಲ್ಲಿ ಆಕ್ಷೇಪಾರ್ಹವಾದದ್ದೇನನ್ನು ಪ್ರಧಾನಮಂತ್ರಿಯವರು ಗುರುತಿಸಿಲ್ಲ. ನಮ್ಮ ರಕ್ಷಣಾ ಬಲಗಳಲ್ಲಿರುವ ಅಸಮರ್ಪಕತೆಯ ಬಗೆಗೆ ಉಲ್ಲೇಖಿಸುವುದರ ಮೂಲಕ ರಕ್ಷಣಾ ಸಚಿವರು ಜನತೆಯು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದಾರೆ ಮಾತ್ರ ಎಂದು ಪ್ರಧಾನಿಯವರ ಅಭಿಪ್ರಾಯ.

ಇನ್ನು ಎರಡನೆಯ ಹೇಳಿಕೆಯ ಬಗೆಗೆ, ಪ್ರಧಾನಮಂತ್ರಿಯವರ ಉತ್ತರವು ಅಶುಭಕರವೆನ್ನುವಷ್ಟು, ಭೀತರಾಗುವಷ್ಟು ಅಸ್ಪಷ್ಟವಾಗಿತ್ತು. ಅವರು ಹೇಳಿದರು. “ಈ ಪ್ರಕ್ರಿಯೆಗಳಿಲ್ಲದೆ ಯಾರೂ ಇದನ್ನು ಮಾಡಲಾರರು, ಯಾವ ಸರ್ಕಾರವೂ ಇದನ್ನು ಮಾಡಲಾರದು. ಅಂತಿಮವಾಗಿ ಇದು ಎರಡು ರಾಷ್ಟ್ರಗಳ ನಡುವಿನ ಪ್ರಶ್ನೆ. ಬೇಕಾದರೆ ಇದು ದೀರ್ಘಕಾಲದ, ತುಲನಾತ್ಮಕ, ಅಥವಾ ಪರಸ್ಪರ ಶಕ್ತಿಯ ಪ್ರಶ್ನೆ.”

ರಾಷ್ಟ್ರದ ಬಲವರ್ಧನೆಗೆ ತಮ್ಮ ಕೊಡುಗೆಯನ್ನು ಸೇರಿಸುವಂತೆ ಜನರನ್ನು ಒತ್ತಾಯಿಸುವುದು ಒಂದು ವಿಷಯ. ಆದರೆ, ನಮ್ಮ ರಕ್ಷಣಾಬಲವು ಚೀನಾ ಆಕ್ರಮಣದ ಅಪಾಯವನ್ನು ಎದುರಿಸಲು ಅಸಮರ್ಪಕವಾಗಿದೆ ಎಂದು ಹೇಳುವುದು ಬೇರೆಯೇ ವಿಷಯವಾಗಿದೆ. ಇಂತಹ ಹೇಳಿಕೆಯು ಜನರ ಹಾಗೂ ಸೈನ್ಯದ ನೈತಿಕ ಧೈರ್ಯ, ಸ್ಥೈರ್ಯಗಳನ್ನು ಬುಡಮೇಲು ಮಾಡುವುದರಲ್ಲಿ ಪರಿಣಮಿಸುತ್ತದೆ. ಆ ಸಂಗತಿಯು ಸತ್ಯವಾದದ್ದೇ ಆಗಿದ್ದರೂ ಯಾವುದೇ ರಕ್ಷಣಾಮಂತ್ರಿಯು, ಅಂತಹ ಅಭಿಪ್ರಾಯಗಳನ್ನು ಗೌರವಪೂರ್ಣವಾಗಿ ಅಭಿವ್ಯಕ್ತಿಸುವುದಿಲ್ಲ. ನಮ್ಮದೇ ದೇಶಕ್ಕೆ ಸಂಬಂಧಿಸಿದಂತೆ,



ನಾವು ವಾಸ್ತವತೆಯ ಆಧಾರದ ಮೇಲೆ ಮತ್ತು ಈ ಮುನ್ನ ಪ್ರಧಾನಮಂತ್ರಿಗಳು ಮತ್ತು ಯೂನಿಯನ್ನಿನ ಗೃಹಸಚಿವರು ನೀಡಿದ ಹೇಳಿಕೆಯ ಆಧಾರಗಳ ಮೇಲೆ ನಾವು ತಿಳಿದಿರುವ ವಿಷಯವೆಂದರೆ, ನಮ್ಮ ರಕ್ಷಣಾ ಬಲಗಳ ಅಸಮರ್ಪಕತೆಯಲ್ಲ. ಆದರೆ, ಸರ್ಕಾರದ ತುಷ್ಟೀಕರಣ ನೀತಿ, ನಮ್ಮ ಶಸ್ತ್ರ ಸನ್ನದ್ಧ ಯೋಧರನ್ನು ಹತೋಟಿಯಲ್ಲಿಡುತ್ತಿದೆ ಎಂದು. ಆ ಯೋಧರು ದಂಡಯಾತ್ರೆಯನ್ನು ಮುಂದುವರೆಸಲು ಅನುಮತಿಸಿದರೆ, ಆ ಭೂಪ್ರದೇಶದಲ್ಲಿನ ಕಡು ಕಷ್ಟ ಕಾರ್ಪಣ್ಯಗಳು, ಕೊರೆವ ಚಳಿಯ ಹವೆಗಳ ನಡುವೆ ಕೂಡ ಅವರು ಪಾಕಿಸ್ತಾನದವರನ್ನು ಕಾಶ್ಮೀರದಿಂದಾಚೆಗೆ, ಯುದ್ಧವಿರಾಮ ರೇಖೆಯಿಂದಾಚೆಗೆ ನೂಕಿದಂತೆ, ಚೀನಿಯರನ್ನು ಸಹ ಸುಲಭವಾಗಿ ಗಡಿಯಿಂದಾಚೆಗೆ ನೂಕುತ್ತಾರೆ. ಆದರೆ ರಕ್ಷಣಾಸಚಿವರು ಈ ಹೇಳಿಕೆಯನ್ನು ನೀಡಿದಾಗ, ಅವರು ಈ ಹಿಂದೆ, ಚೀನಿಯರನ್ನು ಲಡಾಖ್‌ನಿಂದ ಹೊರಕ್ಕೆ ಓಡಿಸಲು ದೈಹಿಕ ಬಲವನ್ನು ಉಪಯೋಗಿಸದಂತೆ ಭಾರತ ಸರ್ಕಾರವನ್ನು ಬದ್ಧಗೊಳಿಸಿದ್ದಂತೆ (ಕಟ್ಟುಬೀಳಿಸಿದ್ದಂತೆ) ಈಗಲೂ ಚೀನಿಯರಿಗೆ ಸುಳುಹು ನೀಡಲು ಖಂಡಿತವಾಗಿಯೂ ಬಯಸಿದ್ದರು.

ಚೀನಾ ಅಥವಾ ಪಾಕಿಸ್ತಾನಕ್ಕೆ ಕೂಡ ಭೂಪ್ರದೇಶದ ಹಕ್ಕನ್ನು ಬಿಟ್ಟುಕೊಡುವ ಸರ್ಕಾರದ ಅಧಿಕಾರದ ಬಗೆಗಿನ, ಎರಡನೆಯ ಅಭಿಪ್ರಾಯದ (ರಕ್ಷಣಾಸಚಿವರ) ಬಗೆಗೆ ಕೂಡ ಪ್ರಧಾನಮಂತ್ರಿಗಳ ಉತ್ತರವು ಆತಂಕಕಾರಿಯೂ, ಅಶುಭವೆನಿಸುವಂತಹುದು ಆಗಿದೆ. ಪ್ರಧಾನಮಂತ್ರಿಗಳು ಈ ರಾಷ್ಟ್ರಗಳಿಗೆ ಯಾವುದೇ ಭೂಪ್ರದೇಶದ ಹಕ್ಕನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲವೆಂದು, ನಿಖರವಾಗಿ ಯಾವುದೇ ಮುಚ್ಚುಮರೆಯಿರದೇ ಹೇಳಿಲ್ಲ. ಅದಕ್ಕೆ ಬದಲಾಗಿ ರಕ್ಷಣಾಸಚಿವರು ಹೇಳಿದನ್ನೇ ಅವರು ಬೇರೆ ಪದಗಳಲ್ಲಿ ಹೇಳಿದ್ದಾರೆ ಅಷ್ಟೆ. ಸರ್ಕಾರವು ಭಾರತದ ಪ್ರದೇಶಗಳನ್ನು ವರ್ಗಾಯಿಸಲಾರದೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯೇ. ಸರ್ಕಾರದ ಈ ಅಧಿಕಾರದ ಮೇಲೆ ಸಂವಿಧಾನದ ನಿರ್ಬಂಧವಿರುವುದರ ಬಗೆಗೆ ತಿಳಿದಿರದ (ಅಜ್ಞಾನದಲ್ಲಿರುವ) ವ್ಯಕ್ತಿ ಯಾರಾದರೂ ಇರುವುದಾದರೆ ಅದು ಸ್ವತಃ ಪ್ರಧಾನಮಂತ್ರಿಯವರು. ಅವರ ಈ ಅಜ್ಞಾನದಿಂದಲ್ಲದೇ, ಬೆರುಬಾರಿ ಮತ್ತು ದೇಶದ ಇತರ ಭಾಗಗಳನ್ನು ನೆಹರು–ನೂನ್ ಒಪ್ಪಂದದಡಿಯಲ್ಲಿ ಪಾಕಿಸ್ತಾನಕ್ಕೆ ವರ್ಗಾವಣೆ ಮಾಡಲು ಅವರು ಒಪ್ಪುತ್ತಿರಲಿಲ್ಲ. ಪ್ರಧಾನಮಂತ್ರಿಯವರು ಈ ವಿಷಯದಲ್ಲಿ ಸರ್ವಶಕ್ತರಲ್ಲವೆಂದು ಜ್ಞಾಪಿಸಲು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅವಶ್ಯಕತೆಯುಂಟಾಯಿತು. ಆದರೆ, ಈ ರೀತಿಯ ಪ್ರಕ್ರಿಯೆ, ಕಾರ್ಯವಿಧಾನಗಳಿಲ್ಲದೇ ಯಾವ ಸರ್ಕಾರವೂ ಹಾಗೆ ಮಾಡಲಾಗುವುದಿಲ್ಲ ಎಂದು ಅವರು ಹೇಳುವಾಗ, ಇಂತಹ ಯಾವುದೋ ವರ್ಗಾವಣೆಯ ಬಗೆಗೆ ಅವರು ಯೋಚಿಸುತ್ತಿದ್ದಾರೆ ಎಂದು ತೋರುತ್ತದೆ. ಮತ್ತು ಮುಂದೆ, ಎರಡೂ ರಾಷ್ಟ್ರಗಳ ತುಲನಾತ್ಮಕ ಶಕ್ತಿಯನ್ನು

ಕುರಿತು ಅವರು ಮಾತನಾಡುವಾಗ, ನಿಶ್ಚಯವಾಗಿಯೂ, ಅಂತಹ ವರ್ಗಾವಣೆಯು ಅನಿವಾರ್ಯವಲ್ಲದೇ ಬೇರೇನೂ ಅಲ್ಲ ಎಂಬ ಅಭಿಪ್ರಾಯವನ್ನು ಜನರಲ್ಲಿ ಮೂಡಿಸಲು ಬಯಸುತ್ತಾರೆ. ಕೆಲವು ಪ್ರದೇಶಗಳನ್ನು ಪಾಕಿಸ್ತಾನಕ್ಕೆ ವರ್ಗಾವಣೆ ಮಾಡುವುದರ ಬಗೆಗೆ ಉಲ್ಲೇಖಿಸಿರುವುದಕ್ಕೆ ಅವರಿಗೆ ಏನಾದರೂ ಸಮರ್ಥನೆ ಸಿಗಬಹುದು. ಏಕೆಂದರೆ, ಅದು ಸರ್ವೋಚ್ಚ ನ್ಯಾಯಾಲಯಕ್ಕೆ ಸಂಬಂಧಪಟ್ಟ ವಸ್ತುವಿನ ವಿಷಯವಾಗಿದೆ. ಆದರೆ ಈ ಸಂದರ್ಭದಲ್ಲಿ ಚೀನಾವನ್ನು ಏಕೆ ಉಲ್ಲೇಖಿಸಬೇಕು? ಚೀನಾಕ್ಕೂ ಯಾವುದಾದರೂ ಪ್ರದೇಶಗಳನ್ನು ವರ್ಗಾವಣೆ ಮಾಡುವ ಪ್ರಶ್ನೆ ಇತ್ತೇನು? ಪ್ರಧಾನಮಂತ್ರಿಗಳು, ರಕ್ಷಣಾಸಚಿವರ ಹೇಳಿಕೆಯನ್ನು ಸಾರಾಸಗಟಾಗಿ ಖಂಡಿಸಬೇಕಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ.

ಪ್ರಧಾನಮಂತ್ರಿಗಳು ಸಮರ್ಥಿಸಬೇಕಾದ ಅಥವಾ ಹೇಗಾದರೂ ಅವರನ್ನು ಕಾಪಾಡುವಂತಹ ಹೇಳಿಕೆಗಳನ್ನು ರಕ್ಷಣಾಸಚಿವರು ಅನೇಕ ಬಾರಿ ನೀಡುತ್ತಲೇ ಇದ್ದಾರೆ. ಜನರು ಇದರ ಬಗೆಗೆ ವಿರೋಧ ಆಕ್ಷೇಪಣೆಗಳನ್ನು ಮಾಡುತ್ತಲೇ ಇದ್ದಾರೆ. ಮೆನನ್‌ರು ಇಂತಹ ಹೇಳಿಕೆಗಳನ್ನು ಪ್ರಮಾದದಿಂದಾಗಲೀ, ಅನುದ್ದಿಷ್ಟತೆಯಿಂದಾಗಲೀ ನೀಡುತ್ತಾರೆಂದು ಹೇಳಲಾಗುವುದಿಲ್ಲ. ತಮ್ಮ ಆಂಗ್ಲಭಾಷೆಯ ಪ್ರಭುತ್ವಕ್ಕಾಗಿ ಅವರು ಪ್ರಸಿದ್ಧರಾಗಿದ್ದಾರೆ. ಆಲೋಚನೆ ಮಾಡದೆಯೇ ಹೇಳಿಕೆಗಳನ್ನು ನೀಡುತ್ತಾರೆಂದು ಅವರನ್ನು ಆಪಾದಿಸುವಂತಿಲ್ಲ. ಒಂದು ನಿಗದಿತ ಯೋಜನೆಯಿಂದ ಮತ್ತು ಉದ್ದೇಶಪೂರ್ವಕವಾಗಿ ಅವರು ಹೀಗೆ ಮಾಡುತ್ತಾರೆ ಎನ್ನುವುದು ಒಂದೇ ನಾವು ತಲುಪಬಹುದಾದ ತೀರ್ಮಾನ. ಪ್ರಧಾನಮಂತ್ರಿಗಳು ಈಗಾಗಲೇ ಆಲೋಚಿಸಿರುವುದನ್ನೇ ಅವರು ಹೇಳುತ್ತಾರೆಯೋ ಅಥವಾ ಪ್ರಧಾನಮಂತ್ರಿಗಳನ್ನು ಒಂದು ನಿರ್ದಿಷ್ಟ ಕಾರ್ಯಮಾರ್ಗಕ್ಕೆ ಬಂಧಿಸಲು ಮಾತ್ರ ಹಾಗೆ ಮಾಡುತ್ತಾರೆಯೋ ಎಂದು ಹೇಳುವುದು ಕಷ್ಟ. ಕಾರಣಗಳು ಯಾವುದೇ ಇರಲಿ, ಸರ್ಕಾರಕ್ಕೆ ಅಪಾಯಕಾರಿಯಾಗುವಂತಹ ಸ್ಥಿತಿಯನ್ನು ಸೃಷ್ಟಿಸಿರುವ ಅನೇಕ ಸಂದರ್ಭಗಳಿವೆ. ದೇಶದ ಹಿತಾಸಕ್ತಿಗಳನ್ನು ಸುರಕ್ಷಿತಗೊಳಿಸುವ ಬದಲಿಗೆ, ಅವರು ಅವುಗಳನ್ನು ಬುಡಮೇಲುಮಾಡುತ್ತಿರುವರೆಂಬ ನಂಬಿಕೆಯನ್ನು ಅವರ ಹೇಳಿಕೆಗಳು ದೃಢಪಡಿಸುತ್ತವೆ.

ರಕ್ಷಣಾಸಚಿವರನ್ನು ತಮ್ಮ ಹೊಣೆಗಳಿಂದ ಮುಕ್ತಿಗೊಳಿಸಬೇಕೆಂದು ಜನರು ದೀರ್ಘಕಾಲದಿಂದಲೂ ಒತ್ತಾಯಿಸುತ್ತಿದ್ದಾರೆ. ಮುಂಚೆ, ಈ ವಿಷಯದಲ್ಲಿ, ಜನರ ಅಭಿಲಾಷೆಯನ್ನು ಕಾಲಕ್ರಮದಲ್ಲಿ ಪೂರೈಸುವ ಭಾವನೆಯನ್ನು ಪ್ರಧಾನಮಂತ್ರಿಗಳು ವ್ಯಕ್ತಪಡಿಸಿದ್ದರು. ರಕ್ಷಣಾಮಂತ್ರಾಲಯವೂ ಎರಡು ಭಾಗಗಳಾಗಿ ವಿಭಜಿಸಲ್ಪಡುವುದೆಂದೂ, ಶ್ರೀ ವಿ.ಕೆ. ಕೃಷ್ಣಮೆನನ್‌ರು ರಕ್ಷಣಾ ಉತ್ಪಾದನಾ ವಿಭಾಗವನ್ನು ನಿರ್ವಹಿಸುತ್ತಾರೆಂದು ಒಂದು ವರದಿ ಕೂಡ ಇದ್ದಿತು. ಆದರೆ, ಅಂತಹ ವರದಿಗೆ



ಯಾವ ಆಧಾರವೂ ಇಲ್ಲವೆಂದು ಪ್ರಧಾನಮಂತ್ರಿಗಳು ಈಗ ಹೇಳಿದ್ದಾರೆ. ಅಂದರೆ, ರಕ್ಷಣಾ ಸಚಿವರು ತಮ್ಮ ಈಗಿನ ಸಚಿವ ಖಾತೆಯನ್ನು ನಿರ್ವಹಿಸುವುದನ್ನು ಮುಂದುವರಿಸುತ್ತಾರೆ ಎಂದು ಅರ್ಥ. ಪ್ರಧಾನಮಂತ್ರಿಗಳು ಈ ವಿಷಯದಲ್ಲಿ ಜನರ ಭಾವನೆಗಳನ್ನು ಸತತವಾಗಿ ನಿರ್ಲಕ್ಷ್ಯ ಮಾಡುತ್ತಿರುವುದು ದುರದೃಷ್ಟಕರ. ಜನರ ಭಾವನೆಗಳ ಇನ್ನೂ ಹೆಚ್ಚು ಶಕ್ತಿಯುತ ಅಭಿವ್ಯಕ್ತಿಗಾಗಿ ಅವರು ಕಾಯುತ್ತಿರುವಂತೆ ತೋರುತ್ತದೆ. ಜಪಾನಿನಲ್ಲಿ ಒಬ್ಬ ಪ್ರಧಾನಮಂತ್ರಿಯು ರಾಜೀನಾಮೆ ಕೊಡುವಂತೆ ಮಾಡಬಹುದಾದರೆ, ಮತ್ತು ಕೇರಳದಲ್ಲಿ ಇಡಿಯ ಮಂತ್ರಿಮಂಡಲವೇ ರಾಜಿನಾಮೆ ಕೊಡುವಂತೆ ಮಾಡಬಹುದಾದರೆ, ಒಬ್ಬ ಅನಪೇಕ್ಷಿತ ಮಂತ್ರಿಯನ್ನು ಅವರ ಹುದ್ದೆಯಿಂದ ಒತ್ತಾಯಪೂರ್ವಕವಾಗಿ ತೆಗೆದುಹಾಕುವುದು ಜನರಿಗೆ ಕಷ್ಟವಾಗುವುದಿಲ್ಲ. ಅವರು ಚಳವಳಿಯ ಮಾರ್ಗ ಹಿಡಿಯುವುದಕ್ಕೆ ಕಾರಣ, ಉತ್ತರದ ಗಡಿಯಲ್ಲಿನ ಆಕ್ರಮಣದಿಂದಾಗಿ ಈ ವಿಷಯವು ಸೂಕ್ಷ್ಮವಾಗಿರುವುದೇ ಆಗಿದೆ. ಆದರೆ ಅಂತಹ ಆಕ್ರಮಣವನ್ನು ಎದುರಿಸಬೇಕಾದ ಅವಶ್ಯಕತೆಗಳೇ, ಕಮ್ಯುನಿಸ್ಟ್ ಒಲವಿನ ಆರೋಪಗಳಿಂದಾಗಿ, ರಾಷ್ಟ್ರಕ್ಕೆ ಹಾಗೂ ಸೈನ್ಯಗಳಿಗೆ ಮಾರ್ಗದರ್ಶನ ನೀಡಲು ಸೂಕ್ತರಾಗಿಲ್ಲದ, ಮತ್ತು ಕಮ್ಯುನಿಸ್ಟ್ ಚೀನಾದ ವಿಸ್ತರಣವಾದೀ ಮತ್ತು ಆಕ್ರಮಣಕಾರೀ ತಂತ್ರಗಳನ್ನು ತಡೆಯಲು ಸೂಕ್ತರಾಗಿಲ್ಲದ ರಕ್ಷಣಾಸಚಿವರನ್ನು ಕೈಬಿಡುವಂತೆ, ತೆಗೆದುಹಾಕುವಂತೆ ಜನರನ್ನು ಚಳವಳಿಯ ಮೊರೆಹೋಗುವಂತೆ ಒತ್ತಾಯಿಸಬಹುದು. ಈ ಮುಖ್ಯ ವಿಚಾರದಲ್ಲಿ ಪ್ರಧಾನಮಂತ್ರಿಗಳು ಜನರ ತಾಳ್ಮೆ ಪರೀಕ್ಷಿಸದಿರಲಿ.

(೧೯೬೦ರ ಜುಲೈ ೪)

## ನಾವು ಹೊಂದಾಣಿಕೆ ಮಾಡಿಕೊಳ್ಳಬೇಕೇ?

ಕಮ್ಯುನಿಸ್ಟ್ ಚೀನಾದ ಆಕ್ರಮಣಕಾರೀ ವಿಸ್ತರಣಾ ನೀತಿಯು, ದಕ್ಷಿಣ ಏಷಿಯಾ ರಾಷ್ಟ್ರಗಳಿಗೆ ರಾಷ್ಟ್ರೀಯ ರಕ್ಷಣಾ ಸಮಸ್ಯೆಗಳನ್ನು ಸೃಷ್ಟಿಸಿರುವುದು ಮಾತ್ರವಲ್ಲದೇ, ಸೋವಿಯತ್ ಮತ್ತು ಪಾಶ್ಚಿಮಾತ್ಯ ಬಣಗಳ ಜಂಟಿ ಪ್ರಯತ್ನಗಳಿಂದ ಅಂತಾರಾಷ್ಟ್ರೀಯ ಜಗತ್ತಿನಲ್ಲಿ ಸೃಷ್ಟಿಸಲ್ಪಟ್ಟಿರುವ ವಾತಾವರಣವನ್ನೇ ಕಲುಷಿತಗೊಳಿಸಿದೆ. ರಷ್ಯಾ ಮತ್ತು ಅಮೇರಿಕಾಗಳು ಎಚ್ಚರಿಕೆಯಿಂದ, ಕಟ್ಟುನಿಟ್ಟಾಗಿ ಶೃಂಗಸಭೆಯನ್ನು ಯಶಸ್ವಿಗೊಳಿಸಲು ಪ್ರಯತ್ನಿಸುತ್ತಿದ್ದರೆ, ಅವರ ಮಿತ್ರರಾಷ್ಟ್ರಗಳಾದ ಚೀನಾ ಮತ್ತು ಫ್ರಾನ್ಸ್‌ಗಳು ಯಾವುದೇ ಶೃಂಗಸಭೆಯನ್ನು ಅರ್ಥಹೀನಗೊಳಿಸುವಂತಹ ಕಾರ್ಯನೀತಿಯನ್ನು ಅನುಸರಿಸುತ್ತಿವೆ.

ಶೃಂಗಸಭೆಯ ಉಪಯುಕ್ತತೆಯನ್ನು ನಾವು ಗುರುತಿಸಿ ಅದಕ್ಕೆ ಮನ್ನಣೆ ನೀಡುವೆವಾದರೂ, –ಶೀತಲಯುದ್ಧದ ಕಾರ್ಯಾಚರಣೆಗಳ ಮೂಲಕ ಉಂಟಾಗಿರುವ ಬಿಕ್ಕಟ್ಟುಗಳನ್ನು ಸಡಿಲಗೊಳಿಸುವಲ್ಲಿ. ಅವು ಸ್ವಲ್ಪವಾದರೂ ಸಹಾಯ ಮಾಡಬಹುದು– ಶಾಶ್ವತವಾದ ವಿಶ್ವಶಾಂತಿಯನ್ನು ಗಳಿಸಿಕೊಳ್ಳಲು ಉದ್ದೇಶಿತವಾದ ಯಾವುದೇ ಅಂತಾರಾಷ್ಟ್ರೀಯ ಸಮಾವೇಶಗಳ ನಿಜವಾದ ಲಾಭ ಮತ್ತು ಉಪಯೋಗಗಳ ಬಗೆಗೆ ನಾವು ಹೆಚ್ಚು ಆಶಾವಾದಿಗಳಾಗಿರುವುದಿಲ್ಲ. ವಿಶ್ವದ ಪ್ರಸಕ್ತ ರಾಜಕೀಯ ಭೂಪಟವು. U.N.ನ (United Nations) ಪ್ರಣಾಳಿಕೆಯ ಸಿದ್ಧಾಂತದೊಡನೆ ಹೊಂದಿಕೊಂಡಾಗಲೀ, ಅಥವಾ ಮಾನವ ಜನಸಂಖ್ಯೆಯ ನಿಜವಾದ ಪ್ರತಿನಿಧಿಯಂತಾಗಲೀ ಇಲ್ಲ. ತಮ್ಮ ತಮ್ಮ ಪ್ರತಿಭೆಗೆ ಅನುಸಾರವಾಗಿ ಅಭಿವೃದ್ಧಿ ಹೊಂದುವ ಮೂಲಭೂತ ಸ್ವಾತಂತ್ರ್ಯದಿಂದ ವಂಚಿತರಾದ ಅಗಾಧ ಸಂಖ್ಯೆಯ ಜನರಿದ್ದಾರೆ. ನಾಗರಿಕ ಜನತೆಯನ್ನು ಪ್ರತಿನಿಧಿಸುತ್ತೇವೆಂದು ಹಕ್ಕು ಸಾಧಿಸುವ ಸರ್ಕಾರಗಳಿವೆ, ಆದರೆ ಅವುಗಳು ತೈಮೂರ್ ಮತ್ತು ಚೆಂಗಿಜ್ ಖಾನ್‌ರ ಹೆಜ್ಜೆ ಜಾಡಿನಲ್ಲಿಯೇ ನಡೆಯುತ್ತಿವೆ. ಮನುಷ್ಯ ಮನುಷ್ಯನ ನಡುವೆ ಸಮಾನತೆಯು ಎಲ್ಲಿಯೂ ಕಂಡುಬರುವುದಿಲ್ಲ ಮತ್ತು ಕೆಲವು ದೇಶಗಳಲ್ಲಂತೂ ಅದರ ಬಗೆಗೆ ಮಾತನಾಡುವುದೇ ಅಪರಾಧವಾಗಿದೆ. ವರ್ಣ ವಿಭೇದ ನೀತಿಯನ್ನು ಪಾಶ್ಚಾತ್ಯ ಪ್ರಪಂಚದ ಪ್ರಜಾಸತ್ತಾತ್ಮಕ ಪ್ರಜ್ಞೆಯು ಹೇಗೆ ತಾನೇ ಸಹಿಸಬಲ್ಲದು? ಆದರೆ, ವಸಾಹತೀಕರಣ, ಜನಾಂಗೀಯ ಪ್ರತ್ಯೇಕತೆ, ಶೋಷಣೆ, ಮತ್ತು ನಿರಂಕುಶ ಪ್ರಭುತ್ವಗಳು ಮುಂದುವರಿಯುತ್ತವೆ ಮತ್ತು ವಿಶ್ವ ನಾಯಕರು ತಮ್ಮ ಅಂತಃ ಸಾಕ್ಷಿಯ ಅಳು,



ಮುಜುಗರಗಳನ್ನು ಶಾಶ್ವತವಾದ ಶಾಂತಿ ಮತ್ತು ಸಮೃದ್ಧ ಜಗತ್ತಿನ ಗಂಭೀರವಾದ ಪೋಷಣೆಗಳಿಂದ ಸಾಂತ್ವನಗೊಳಿಸಿಕೊಳ್ಳುತ್ತಿದ್ದಾರೆ. ಇವೆಲ್ಲವೂ ದಮನಕ್ಕೊಳಗಾದ, ದಲಿತ ಮತ್ತು ದಬ್ಬಾಳಿಕೆಗೊಳಾದ ಹಾಗೂ ಗುಲಾಮಗಿರಿಗೊಳಪಟ್ಟ ಮಾನವತೆಯ ಮೇಲೆ ಯಾವ ಪ್ರಭಾವವನ್ನೂ ಉಂಟುಮಾಡುವುದಿಲ್ಲ. ತಮ್ಮ ಆಸೆಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವುದರತ್ತ ಕೊಂಡೊಯ್ಯದಿದ್ದರೆ, ಈ ಶೃಂಗಸಮ್ಮೇಳನ, ಸಮಾವೇಶಗಳ ನಿರ್ಣಯಗಳಿಂದ ಅವರು ಬದ್ಧರಾಗಿರುವುದಿಲ್ಲ. ಆಫ್ರಿಕಾದ ಜನರು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುವುದನ್ನು ನಿಲ್ಲಿಸಬೇಕು, ಮತ್ತು ಸ್ವತಂತ್ರ ವಿಶ್ವವು ಹಂಗೇರಿ ಮತ್ತು ಇತರ ದೇಶಗಳಲ್ಲಿ ರಷ್ಯದ ಕುಕೃತ್ಯಗಳನ್ನು– ಅಪರಾಧಗಳನ್ನು– ಕಾನೂನುಬದ್ಧಗೊಳಿಸಬೇಕು. ಆಲ್ಜೀರಿಯಾದಲ್ಲಿ ಫ್ರಾನ್ಸ್‌ನ, ಕೆನ್ಯಾದಲ್ಲಿ ಬ್ರಿಟನ್‌ನ ಮತ್ತು ಟಿಬೆಟ್ಟಿನಲ್ಲಿ ಚೀನಾದ ಕೃತ್ಯಗಳನ್ನು ಕಾನೂನುಬದ್ಧಗೊಳಿಸಬೇಕು ಎನ್ನುವುದು ಶೃಂಗ ಸಮ್ಮೇಳನದ ಅರ್ಥವೆನ್ನುವುದಾದರೆ, ಅದು ಮಾನವ ಜನಾಂಗದ ವಿರುದ್ಧ ಪಿತೂರಿಯಲ್ಲದೇ ಬೇರೆ ಏನೂ ಅಲ್ಲ ಹಾಗೂ ಅದು ಹಿಂಸೆಗೊಳಗಾದ ದೇಶಗಳಿಂದ ಎಂದೂ ಗೌರವಿಸಲ್ಪಡದ, ಡಕಾಯತ ರಾಷ್ಟ್ರಗಳ ಮಧ್ಯದ ಒಪ್ಪಂದವಾಗುತ್ತದೆ.

ಆದ್ದರಿಂದ ಭಾರತೀಯ ಜನಸಂಘವು, ಅಂತಾರಾಷ್ಟ್ರೀಯ ಪರಿಸ್ಥಿತಿಯ ಬಗೆಗೆ ತೆಗೆದುಕೊಂಡ ತನ್ನ ಠರಾವಿನಲ್ಲಿ ಶೃಂಗಸಮ್ಮೇಳನದ ಈ ಅಂಶದ ಬಗೆಗೆ ಗಮನ ಸೆಳೆದಿದೆ. ಆಫ್ರಿಕಾದಲ್ಲಿ ಸ್ವತಂತ್ರ ರಾಷ್ಟ್ರಗಳ ಹೊರಹೊಮ್ಮುವಿಕೆಯು ಈ ಉದ್ದೇಶದೊಂದಿಗೆ ಹೊಂದಿಕೆಯಾಗಿದ್ದು ಜನಸಂಘವು ತನ್ನ ಹೃತ್ಪೂರ್ವಕ ಶುಭಾಶಯಗಳನ್ನು ಆ ರಾಷ್ಟ್ರಗಳಿಗೆ ಕೋರುತ್ತದೆ. ವಿಶ್ವಶಾಂತಿಯನ್ನು ಕಾಪಾಡುವುದಕ್ಕಾಗಿ ಮತ್ತು ಗುಲಾಮಗಿರಿಯಲ್ಲಿರುವ ರಾಷ್ಟ್ರಗಳಿಗೆ ಸಮಾನತೆ ಮತ್ತು ಸ್ವಾತಂತ್ರ್ಯಗಳನ್ನು ಗಳಿಸಿಕೊಡುವುದಕ್ಕಾಗಿ UNO ಅನ್ನು ಪರಿಣಾಮಕಾರೀ ಸಾಧನವನ್ನಾಗಿ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಜನಸಂಘವು ಹಕ್ಕೊತ್ತಾಯ ಮಾಡಿದೆ. ವಿಶ್ವದ ಎಲ್ಲ ರಾಷ್ಟ್ರಗಳೂ ಅದರಲ್ಲಿ ನಿಜವಾಗಿ ಪ್ರಾತಿನಿಧ್ಯ ಹೊಂದದಿದ್ದರೆ, UNO ತನ್ನ ಹೆಸರು ಅಧಿಕಾರಗಳನ್ನು ಖಂಡಿತ ಉಳಿಸಿಕೊಳ್ಳಲಾರದು. UN ಪ್ರಣಾಳಿಕೆಯಲ್ಲಿ ಪರಿಷ್ಕರಣೆಯ ಅಗತ್ಯವಿದೆ. ಆದರೆ ಅದನ್ನು ಪರಿಷ್ಕರಿಸುವ ಯಾವುದೇ ಪ್ರಯತ್ನವು UNO ಅನ್ನು ಅಸಮಗ್ರತೆಯೆಡೆಗೆ ಒಯ್ಯಬಹುದೆಂಬ ಭೀತಿಯಿಂದ ವ್ಯಕ್ತಪಡಿಸಲ್ಪಟ್ಟಿದೆ. ಹೌದು, ಹಾಗಿದ್ದರೂ ಇರಬಹುದು. ಆದರೆ ಲೀಗ್ ಆಫ್ ನೇಷನ್ಸ್‌ನ ಇತಿಹಾಸವು ಮರುಕಳಿಸುವಂತೆ UNO ಅನ್ನು ಬಿಡುವುದರಿಂದ ಯಾವ ಉಪಯೋಗವೂ ಆಗುವುದಿಲ್ಲ. ಪ್ರಣಾಳಿಕೆಯನ್ನು ಯಶಸ್ವಿಯಾಗಿ ತಿದ್ದುಪಡಿ ಮಾಡಿ ಪರಿಷ್ಕರಿಸುವುದರಲ್ಲಿ ನಾಯಕರ ಮುತ್ಸದ್ದಿತನದ ಪರೀಕ್ಷೆ ಇದೆ. ಲಿಂಕನ್ ಹೋರಾಡಿದ್ದು ಕೇವಲ ಸಂಯುಕ್ತ ಸಂಸ್ಥಾನಗಳ ಮನುಷ್ಯನ ಸ್ವಾತಂತ್ರ್ಯಕ್ಕೋಸ್ಕರ ಮಾತ್ರವಲ್ಲ, ಆದರೆ, ಇಡಿಯ ಪ್ರಪಂಚಕ್ಕೆ ಎಂಬುದನ್ನು ಐಸೆನ್ ಹೋವರ್ ಅರಿತುಕೊಂಡರೆ, ಅದು ಅಸಾಧ್ಯವಾಗಲಾರದು.

ಮ್ಯಾಕ್‌ಮಿಲನ್ ತಾನು ಪ್ರತಿನಿಧಿಸುವುದು ಕೇವಲ ಕಿಪ್ಲಿಂಗ್ ಯುಗದ ಮೊಂಡು ಸಂಪ್ರದಾಯವಾದಿಗಳನ್ನು ಅಲ್ಲ ಆದರೆ ತನ್ನ ಸ್ವಇಚ್ಛೆಯಿಂದ, ಸಾಂವಿಧಾನಿಕ ರೀತಿಯಲ್ಲಿ ಒಂದರ ನಂತರ ಒಂದರಂತೆ ಹಲವಾರು ರಾಷ್ಟ್ರಗಳಿಗೆ ಸ್ವಾತಂತ್ರ್ಯವನ್ನು ನೀಡುವಂತಹ, ಅರಿವು ತುಂಬಿದ ಜನಾಂಗವನ್ನು ಎಂದು ತೋರಿಸಬಲ್ಲವನಾದರೆ, ಮತ್ತು ಗುಲಾಮರು ಮತ್ತು ಸಂಕಷ್ಟದಲ್ಲಿರುವ ಜನರ ಬಗೆಗೆ ಕಮ್ಯುನಿಸ್ಟ್ ಪ್ರಪಂಚದ ಸಹಾನುಭೂತಿಯು ಅವರನ್ನು ತನ್ನ ಪಕ್ಷಕ್ಕೆ ಒಲಿಸಿಕೊಳ್ಳಲು ಮಾಡುವ ರಾಜಕೀಯ ತಂತ್ರವಲ್ಲವೆಂದೂ ಆದರೆ, ಕಮ್ಯುನಿಸಂನ ನಿಜವಾದ ಸ್ವಭಾವದ ಅಭಿವ್ಯಕ್ತಿಯೆಂದೂ ಮತ್ತು ಆದ್ದರಿಂದ ಅದರ ಆಶ್ರಯಕ್ಕೆ ಬರುವ ರಾಷ್ಟ್ರಗಳು ಕೂಡ ಅದೇ ಸ್ವಾತಂತ್ರ್ಯ ಮತ್ತು ಗೌರವಪೂರ್ಣ ವರ್ತನೆಗೆ ಅಧಿಕಾರ ಹೊಂದಿರುತ್ತವೆಯೆಂದೂ ಕ್ರುಶ್ಚೆವ್ ಸ್ಥಾಪಿಸಬಹುದಾದರೆ, ಇಂಥ ಯಶಸ್ವೀ ತಿದ್ದುಪಡಿಯು ಅಸಾಧ್ಯವಾಗಲಾರದು. ಇದನ್ನು ಸಾಧಿಸುವುದಾದರೆ ಅಣ್ವಸ್ತ್ರಗಳ ಅಥವಾ ಇತರ ಯಾವುದೇ ಆಯುಧಗಳ ವಿನಾಶದ ಸಂದರ್ಭವೇ ಬರುವುದಿಲ್ಲ ಮತ್ತು ನಿಜವಾದ ನಿಶ್ಶಸ್ತ್ರೀಕರಣದ ಸಾಧ್ಯತೆಯು ಖಚಿತವಾಗುತ್ತದೆ.

ಇನ್ನು ನಮ್ಮದೇ ಸಮಸ್ಯೆಗಳಿಗೆ ಬಂದಾಗ ನಾವು ಒಂದು ಕರಾಳ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ ಮತ್ತು ನಮ್ಮ ವಿದೇಶಾಂಗ ನೀತಿಯ ಬಗೆಗೆ ಹೆಚ್ಚು ಗೊಂದಲಗಳನ್ನು ಹೊಂದಿದ್ದೇವೆ. ಭಾರತವೂ ತಾನು ತಾಟಸ್ಥ್ಯ ನೀತಿಯನ್ನು (ಅಲಿಪ್ತ ನೀತಿಯನ್ನು) ಅನುಸರಿಸುವುದಾಗಿ ಹೇಳಿಕೊಂಡಿದೆ. ಪ್ರಧಾನಮಂತ್ರಿಗಳಿಗೆ ಇದನ್ನು ತಾಟಸ್ಥ್ಯನೀತಿ ಎಂದು ಕರೆಯಲು ಇಷ್ಟವಿಲ್ಲ. ಏಕೆಂದರೆ, ಅವರು ಈ ಜಗತ್ತಿನ ನಾಟಕದ ಕೇವಲ ಪ್ರೇಕ್ಷಕರಾಗಲು ಸಿದ್ಧರಿಲ್ಲ. ಇಂದಿನ ಜಗತ್ತಿನಲ್ಲಿ ನಾವು ಬೇರೆ ಎಂಬ ನಿಯಮಗಳಲ್ಲಿ ಅರ್ಥದಲ್ಲಿ ಯೋಚಿಸಲು ಸಾಧ್ಯವಿಲ್ಲ ಎನ್ನುವುದು ಸತ್ಯ. ಬಹುಮಟ್ಟಿಗೆ ನಾವು ಒಂದು ಪ್ರಕ್ಷುಬ್ಧತೆಯ ಮಧ್ಯದಲ್ಲಿದ್ದೇವೆ, ಮತ್ತು ಈ ಜಗತ್ತಿನ ಮುಖ್ಯ ಬೆಳವಣಿಗೆಗಳು ನಮ್ಮ ಮೇಲೆ ಪರಿಣಾಮ ಮಾಡಿದಾಗ, ಅವುಗಳನ್ನು ನಮ್ಮ ಅನುಕೂಲಕ್ಕೆ ಅನುಗುಣವಾಗಿ ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳದಿದ್ದರೆ ಅದು ನಿಜವಾಗಿಯೂ ಬುದ್ಧಿವಂತಿಕೆಯಾಗುವುದಿಲ್ಲ. ಆದರೆ, ರಾಜಿಯಾಗಲು ಸಾಧ್ಯವಾಗದಷ್ಟು ತೀಕ್ಷ್ಣವಾಗಿ ಎರಡು ಭಾಗಗಳಾಗಿ ವಿಭಜಿತಗೊಂಡಿರುವ ವಿಶ್ವದಲ್ಲಿ ಪ್ರಧಾನಮಂತ್ರಿಯವರು ಹೇಳಿರುವಂತಹ ಕ್ರಿಯಾಶೀಲ ತಟಸ್ಥ ನೀತಿಯನ್ನು ಕಾರ್ಯರೂಪಕ್ಕೆ ತರಲು ಅತ್ಯಂತ ಹೆಚ್ಚಿನ ದಕ್ಷತೆ ಸಾಮರ್ಥ್ಯಗಳುಳ್ಳ ವ್ಯಕ್ತಿಯ ಅವಶ್ಯಕತೆ ಇದೆ. ಯಾವುದೇ ನೀತಿಯನ್ನು ಕಾರ್ಯಗತಗೊಳಿಸುವುದಕ್ಕಿಂತಲೂ ಅದನ್ನು ಟೀಕಿಸುವುದು ಯಾವಾಗಲೂ ಹೆಚ್ಚು ಸುಲಭವೆಂದು ಒಪ್ಪಿದರೂ, ನಮ್ಮ ಪ್ರಯತ್ನಗಳಲ್ಲಿ ನಾವು ಯಶಸ್ವಿಯಾಗಿಲ್ಲವೆನ್ನುವುದನ್ನು ಸಾರ್ವತ್ರಿಕವಾಗಿ ಒಪ್ಪಲಾಗಿದೆ. ನಮ್ಮ ವಿದೇಶಾಂಗ ನೀತಿಯ ವಕ್ತಾರನಾಗಿ ನಾವು



ಅನರ್ಹ ವ್ಯಕ್ತಿಯನ್ನು (ಸೂಕ್ತನಾಗಿಲ್ಲದವನನ್ನು) ಆಯ್ಕೆ ಮಾಡಿದುದೇ ಕಾರಣವೆಂಬ ಭಾವನೆಯು ಎಲ್ಲ ಕಡೆಯೂ ಇದೆ. ಶ್ರೀ. ವಿ.ಕೆ. ಕೃಷ್ಣಮೆನನ್‌ರ ಯೋಗ್ಯತೆಯನ್ನಾಗಲೀ, ಗುಣಮಟ್ಟವನ್ನಾಗಲೀ ನಾನು ಕಡಿಮೆ ಅಂದಾಜುಮಾಡುವುದಿಲ್ಲ. ಒಂದು ಸಮಯದಲ್ಲಿ ಅವರು ದೇಶಕ್ಕೆ ಅತ್ಯಂತ ಉಪಯುಕ್ತ ವ್ಯಕ್ತಿಯಾಗಿದ್ದಿರಬಹುದು, ಮತ್ತು ಸರ್ ಗಿರಿಜಾ ಶಂಕರ್ ಬಾಜ್‌ಪಾಯ್‌ರ ಮರಣಾನಂತರ ಅಂತಾರಾಷ್ಟ್ರೀಯ ವಿಚಾರಗಳ ನೇರ ಮಾಹಿತಿಯನ್ನು ಒದಗಿಸುವುದರಲ್ಲಿ ಸಹಾಯ ಮಾಡಿರಬಹುದು. ಆದರೆ, ದುರದೃಷ್ಟವಶಾತ್, ಇಂದು ಅವರು ವಿವಾದಾತ್ಮಕ ವ್ಯಕ್ತಿಯಾಗಿಬಿಟ್ಟಿದ್ದಾರೆ. ಹಾಗಾಗಿ, ಅಲಿಪ್ತ ನೀತಿಯನ್ನು ಕಾರ್ಯರೂಪಕ್ಕೆ ತರಲು ಅವಶ್ಯಕವಾದಂತಹ ವ್ಯಕ್ತಿಯಾಗಿ ಉಳಿದಿಲ್ಲ. ಅವರ ಕಮ್ಯುನಿಸ್ಟ್ ಒಲವು ರಹಸ್ಯವಾಗಿ ಉಳಿದಿಲ್ಲ. ಅವರ ಮಾನಸಿಕ ಪ್ರವೃತ್ತಿಯಲ್ಲಿನ ದೌರ್ಬಲ್ಯವನ್ನು ಪ್ರಧಾನಮಂತ್ರಿಗಳೂ ಗುರುತಿಸಿದ್ದಾರೆ. ಆದ್ದರಿಂದ ದೇಶದ ಅಂತಾರಾಷ್ಟ್ರೀಯ ವಿದೇಶಾಂಗ ನೀತಿಯ ಹಿತದೃಷ್ಟಿಯಿಂದ ಅವರು (ಮೆನನ್‌ರು) ತಮ್ಮನ್ನು ತಾವು ಭಾರತ ಸರ್ಕಾರದಿಂದಲೂ, ವಿದೇಶಾಂಗ ವ್ಯವಹಾರ ಇಲಾಖೆಯಿಂದಲೂ, ಬೇರ್ಪಡಿಸಿಕೊಳ್ಳುವಂತೆ ಗಮನಿಸಿಕೊಳ್ಳಬೇಕು.

ಅಲಿಪ್ತ ನೀತಿಯನ್ನು ಅನುಸರಿಸಲು ನಾವು ನಿರ್ಧರಿಸಿದ್ದೇವೆ. ಆದರೆ ಈ ನೀತಿಯನ್ನು ಸಮರ್ಥಿಸುವ, ಆತಂಕ, ಕಾಳಜಿಗಳಲ್ಲಿ ಪ್ರಧಾನಮಂತ್ರಿಗಳು ಅನೇಕ ವೇಳೆ ಅದಕ್ಕೆ ತಾತ್ವಿಕ ಆಧಾರ ನೀಡಲು ಪ್ರಯತ್ನಿಸಿದ್ದಾರೆ. ನಾವು ಭಾರತೀಯರು ಒಂದು ರೀತಿಯಲ್ಲಿ ತತ್ತ್ವಶಾಸ್ತ್ರದ ಬಗೆಗೆ ದೌರ್ಬಲ್ಯ ಹೊಂದಿದ್ದೇವೆ, ಆದ್ದರಿಂದ ಇಂತಹ ಚರ್ಚಾಸ್ಪದ ವಿಷಯಗಳಿಂದ ಪ್ರಭಾವಿತರಾಗುತ್ತೇವೆ. ಇದರ ಪರಿಣಾಮವಾಗಿ ನೆಹರು ಅವರ ವಿದೇಶಾಂಗ ನೀತಿಗೆ ಒಂದು ರೀತಿಯ ಭಾವಾತಿರೇಕದ ಬೆಂಬಲ ಮತ್ತು ಆ ನೀತಿಯನ್ನು ಸಮ್ಮತಿಸುವುದರಲ್ಲಿ ಇರಬೇಕಾದ ನಮ್ಮ ಜವಾಬ್ದಾರಿಯ ಅರಿವು ಇಲ್ಲದಿರುವುದೇ ಆಗಿದೆ. ಮತ್ತು ಹಲವಾರು ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಎದುರಿಸುತ್ತಿರುವಾಗ, ಅಲಿಪ್ತನೀತಿಯ ವಿರೋಧಿಗಳು, ಜನರನ್ನು ತಮ್ಮ ಬಣಕ್ಕೆ ಎಳೆದುಕೊಳ್ಳುವುದಕ್ಕೋಸ್ಕರ ಸುಲಭವಾಗಿ ರಾಷ್ಟ್ರೀಯ ಭಾವನೆಗಳನ್ನು ಲಾಭಕರವಾಗಿ ಬಳಸಿಕೊಳ್ಳಬಹುದು. ಆದ್ದರಿಂದ ನಮ್ಮ ವಿದೇಶಾಂಗ ನೀತಿಗಳನ್ನು ಸಮರ್ಪಕವಾಗಿ ಪ್ರತಿಪಾದಿಸುವ ಮತ್ತು ಅದನ್ನು ಅಳವಡಿಸಿಕೊಳ್ಳುವುದಕ್ಕೆ ಸೂಕ್ತ ಕಾರಣಗಳನ್ನು ವಿವರಿಸುವುದು ಅತ್ಯವಶ್ಯಕವಾಗಿದೆ.

ಒಂದು ದೇಶದ ವಿದೇಶಾಂಗ ನೀತಿಯು, ಆ ದೇಶದ ಅರಿವಿನ ವಿಕಸನದಿಂದ ಮೂಡಿದ ಸ್ವಹಿತ ದೃಷ್ಟಿಯ ಆಧಾರದ ಮೇಲೆ ರೂಪಿಸಲ್ಪಡಬೇಕೆಂದು ಭಾರತೀಯ ಜನಸಂಘವು ಯಾವಾಗಲೂ ನಂಬಿದೆ. ಅದು ಯಾವಾಗಲೂ ಒಂದು ನೀತಿಯೇ ವಿನಾ ಸಿದ್ಧಾಂತವಲ್ಲ. ಆದ್ದರಿಂದ ದೇಶದ ಹಿತಾಸಕ್ತಿಗಳು ಒತ್ತಾಯಿಸಿದರೆ ಅದನ್ನು ಬದಲಾಯಿಸಬಹುದು. ನಾವು ಅಲಿಪ್ತನೀತಿಯನ್ನು ಅನುಸರಿಸಿದ್ದೇವೆಯಾದರೆ,

ಅದು ನಮ್ಮ ಹಿತಾಸಕ್ತಿಗಳನ್ನು ಉತ್ತಮವಾಗಿ ನಿರ್ವಹಿಸುತ್ತದೆಯೆಂಬ ಕಾರಣಕ್ಕಾಗಿ. ಅದನ್ನು ಅನುಷ್ಠಾನ ಮಾಡಿದವರು ಅದರಿಂದ ದೇಶಕ್ಕೆ ಪರಮಾವಧಿ ಪ್ರಯೋಜನವನ್ನು ಗಳಿಸಲು ಸಾಧ್ಯವಾಗಲಿಲ್ಲವೆಂಬುದು ಬೇರೆಯೇ ಮಾತು. ಇಂದಿಗೂ ನಮ್ಮ ಗಡಿಗಳು ಅಪಾಯದ ಭೀತಿಗೊಳಗಾದಾಗ ಅಲಿಪ್ತ ನೀತಿಯು ನಮ್ಮ ಹಿತಾಸಕ್ತಿಗಳನ್ನು ಅತ್ಯುತ್ತಮವಾಗಿ ಕಾಯುತ್ತದೆಂದು ನಾವು ಭಾವಿಸುತ್ತೇವೆ. ಲಿಪ್ತತೆ–ಹೊಂದಾಣಿಕೆಯ ವಿಷಯಗಳನ್ನು ಸಂಕೀರ್ಣಗೊಳಿಸುತ್ತದೆ. ನಾವು ಅಲಿಪ್ತತೆಯ ಬಗೆಗೆ ಮಾತನಾಡುವಾಗ, ಸಹಜವಾಗಿಯೇ, ನಾವು ನಮ್ಮದೇ ಬಲದ ಮೇಲೆ, ಮತ್ತು ಅಂತಾರಾಷ್ಟ್ರೀಯ ಪರಿಸ್ಥಿತಿಯ ಸಾಮಾನ್ಯ ಸುಧಾರಣೆಯ ಆಧಾರದ ಮೇಲೆ ನಮ್ಮ ಹಿತಾಸಕ್ತಿಗಳನ್ನು ಸಮರ್ಥಿಸಿಕೊಳ್ಳಬಹುದು ಎಂದು ಭಾವಿಸಲಾಗುತ್ತದೆ. ಈ ಅಂಶದ ಬಗೆಗೆ ಸಂದೇಹ, ಅಧೈರ್ಯ ತೋರುವಂಥ ಕೆಲವು ಜನರೂ ಇದ್ದಾರೆ. ನಮ್ಮ ವಿರುದ್ಧವಾಗಿ ಆಕ್ರಮಣ ನಡೆಸಿರುವ ಶಕ್ತಿಗಳ ಬಗೆಗೆ ಹೆದರಿದ್ದಾರೆ. ಈ ಶಕ್ತಿಗಳೇ ಪಾಕಿಸ್ತಾನ ಮತ್ತು ಚೀನಾ. ಇವೆರಡೂ ಬೇರೆ ಬೇರೆಯ ಶಕ್ತಿಕ್ಕೂಟಗಳಿಗೆ ಸೇರುತ್ತವೆ. ಯಾವುದಾದರೂ ಒಂದು ಬಣವನ್ನು ಸೇರುವುದರ ಮೂಲಕ, ಈ ಎರಡೂ ಶಕ್ತಿಗಳ ಸವಾಲನ್ನು ನಾವು ಹೇಗೆ ಎದುರಿಸಲು ಸಾಧ್ಯವಾಗುತ್ತದೆ? ಅಲ್ಲದೇ, ಒಂದು ಬಣದ ಅಥವಾ ಮತ್ತೊಂದು ಬಣದ ಅಪಾಯವು ಹೆಚ್ಚಾದಂತೆಲ್ಲಾ, ಕಾಲದಿಂದ ಕಾಲಕ್ಕೆ ನಾವು ಸಕಾರಣವಾಗಿ ನಮ್ಮ ಸದಸ್ಯತ್ವವನ್ನು ಬದಲಾಯಿಸುತ್ತಾ ಹೋಗುವುದೂ ಸಾಧ್ಯವಾಗುವುದಿಲ್ಲ. ಇಂದು, ಈ ಎರಡೂ ರಾಷ್ಟ್ರಗಳು ನಮ್ಮ ಭೂಪ್ರದೇಶದೊಳಕ್ಕೆ ಅತಿಕ್ರಮಿಸಿವೆ. ಚೀನಾವು ಲಡಾಖ್‌ನ ಗಡಿಯನ್ನು ದಾಟಿ, ಭಾರತದೊಳಕ್ಕೆ ನುಗ್ಗಿ ಬಂದಿರುವಾಗ, ಪಾಕಿಸ್ತಾನವು ಜಮ್ಮು–ಕಾಶ್ಮೀರದ ಮೂರನೆಯ ಒಂದು ಭಾಗವನ್ನು ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿರುವುದನ್ನು ಮುಂದುವರೆಸುತ್ತಿದೆ. ಪಾಕಿಸ್ತಾನದೊಡನೆ ನಾವು ನ್ಯಾಯಬದ್ಧವಾಗಿ ಯುದ್ಧ ಮಾಡುತ್ತಿದ್ದೇವೆ ಮತ್ತು ನಮ್ಮ ಸಾರ್ವಭೌಮತ್ವ ಮತ್ತು ಲಡಾಖ್ ಮೇಲಿನ ನಮ್ಮ ನ್ಯಾಯಯುತ ಹಕ್ಕುಗಳನ್ನು ಕಾರ್ಯತಃ ವಾಸ್ತವವಾಗಿ ಬಿಟ್ಟುಕೊಡುವಮೂಲಕ (ಅದು ನ್ಯಾಯವೋ ಅನ್ಯಾಯವೋ), ಚೀನಾದೊಡನೆ ಕಾನೂನಿಗೆ ಅನುಸಾರವಾಗಿ ಯುದ್ಧ ಮಾಡುವುದನ್ನು ನಾವು ತಪ್ಪಿಸಿದ್ದೇವೆ. ಚೀನಾದ ಆಕ್ರಮಣ ಕೃತ್ಯಗಳ ಅರಿವು ಇನ್ನೂ ಇರದಿದ್ದಾಗ, ಧರ್ಮಯುದ್ಧಗಳ ಕೂಗು ಪಾಕಿಸ್ತಾನದಲ್ಲಿನ ದಿನನಿತ್ಯದ ಸಂಗತಿಗಳಾಗಿದ್ದಾಗ, ನಾವು ಸೋವಿಯತ್ ಒಕ್ಕೂಟವನ್ನೂ ಸೇರಿಕೊಳ್ಳಬೇಕೆಂದು ಪ್ರತಿಪಾದಿಸಿದ ಅನೇಕ ಜನರು ಈ ದೇಶದಲ್ಲಿದ್ದರು. ಈಗ ಚೀನಾದ ಆಕ್ರಮಣವು ಪತ್ರಿಕೆಗಳ ತಲೆಬರಹಗಳಲ್ಲಿ ರಾರಾಜಿಸುತ್ತಿರುವಾಗ, ಸಹಾಯಕ್ಕಾಗಿ ಅಮೇರಿಕದತ್ತ ಧಾವಿಸಬೇಕೆಂದು ಜನರು ಒತ್ತಾಯಿಸುತ್ತಿದ್ದಾರೆ. ಈ ಎರಡೂ ನೆರೆಯ ರಾಷ್ಟ್ರಗಳಿಂದ ಸರ್ವಕಾಲದಲ್ಲೂ



ಇರುವ ಅಪಾಯವನ್ನು ಅರಿಯುವುದಕ್ಕಿಂತಲೂ ಹೆಚ್ಚಾಗಿ ಈ ಜನರು ಪತ್ರಿಕಾ ತಲೆಬರಹಗಳಿಂದ, ಅಲ್ಲಲ್ಲಿ, ಕ್ವಚಿತ್ತಾಗಿ ನಡೆಯುವ ಕೃತ್ಯಗಳಿಂದ ಪ್ರಭಾವಿತರಾಗಿದ್ದಾರೆ. ಶಾಶ್ವತವಾದ ರಕ್ಷಣೆಯ ಕ್ರಮಗಳ ಬಗೆಗೆ ನಾವು ಆಲೋಚಿಸೋಣ. ಇಂತಹ ಸಂಕೀರ್ಣ ಸನ್ನಿವೇಶದಲ್ಲಿ ಅಲಿಪ್ತ ನೀತಿಯನ್ನು ತ್ಯಜಿಸಲಾಗುವುದಿಲ್ಲ.

ಹಾಗಿದ್ದರೂ, ಒಂದು ಅಥವಾ ಮತ್ತೊಂದು ರಾಷ್ಟ್ರವನ್ನು ಅಸಂತುಷ್ಟಪಡಿಸುವ ಭಯದ ಆಧಾರದ ಮೇಲೆ ಮುಂದುವರಿದರೆ, ಅಲಿಪ್ತನೀತಿಯು ಯಶಸ್ವಿಯಾಗುವುದಿಲ್ಲ ಎನ್ನುವುದನ್ನು ಮನಗಾಣಬೇಕು. ಹಾಗೆ ಆದಾಗ, ಅಲಿಪ್ತ ನೀತಿಯೆಂದರೆ, ಒಂದು ರಾಷ್ಟ್ರ ಅಥವಾ ಮತ್ತೊಂದು ರಾಷ್ಟ್ರವನ್ನು ತುಷ್ಟೀಕರಣಗೊಳಿಸುವುದಾಗುತ್ತದೆ. ಪ್ರಸಕ್ತ ಸಂದರ್ಭದಲ್ಲಿ, ಒಂದರ ನಂತರ ಮತ್ತೊಂದರಂತೆ ಎರಡೂ ರಾಷ್ಟ್ರಗಳ ತುಷ್ಟೀಕರಣವಾಗಿದೆ. ಟಿಬೆಟಿನಲ್ಲಿ ಚೀನಾಕ್ಕೆ ನಮ್ಮ ಹಕ್ಕುಗಳನ್ನು ಅಧಿಕಾರವನ್ನು ಬಿಟ್ಟುಕೊಟ್ಟೆವು ಮತ್ತು ಚೀನಾದಿಂದ ನಮ್ಮ ಭೂಪ್ರದೇಶದ ಸ್ವಾಧೀನವನ್ನು, ಕೇವಲ ಪಾಕಿಸ್ತಾನದಿಂದ ಬಂದ ಅಪಾಯವನ್ನು ಎದುರಿಸಲು ಸಹಿಸಿಕೊಂಡೆವು. ಈಗ ನಾವು ಪಾಕಿಸ್ತಾನವನ್ನು ತುಷ್ಟೀಕರಿಸುತ್ತಿದ್ದೇವೆ, ನಾವು ಚೀನಾದೊಡನೆ ಪರಿಣಾಮಕಾರಿಯಾಗಿ ವರ್ತಿಸಬಹುದೆಂಬ ಉದ್ದೇಶದಿಂದ. ಆದರೆ ವಾಸ್ತವವಾಗಿ ನಾವು ಯಾವುದೇ ಒಂದು ರಾಷ್ಟ್ರದೊಡನೆಯೂ ಪರಿಣಾಮಕಾರಿಯಾಗಿ ವರ್ತಿಸಲು ಸಮರ್ಥರಾಗಿಲ್ಲ. ಬದಲಿಗೆ, ಅವರು ತಮಗೆ ಸಾಧ್ಯವಾದಷ್ಟು ಉತ್ತಮವಾದ ನಿಬಂಧನೆಗಳನ್ನು ಪಡೆದುಕೊಳ್ಳಲು ನಮ್ಮ ಕಷ್ಟ, ತೊಂದರೆಗಳನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ೧೯೫೪ರ ಚೀನಾ–ಭಾರತ ಒಪ್ಪಂದ ಮತ್ತು ಈಗಿನ ಭಾರತ–ಪಾಕಿಸ್ತಾನದ ಗಡಿ ಒಪ್ಪಂದ ಈ ಅಂಶದ ಉದಾಹರಣೆಗಳು. ಅಲಿಪ್ತ ನೀತಿಯು ಪ್ರಯೋಜನಕಾರಿಯಾಗಬೇಕಾದರೆ ಅದಕ್ಕೆ ಒಂದು ದೃಢವಾದ ಮತ್ತು ದಿಟ್ಟವಾದ ಕಾರ್ಯನೀತಿಯ ಅಗತ್ಯವಿದೆ. ಮತ್ತು ಅದು ದೃಢ ವಿಶ್ವಾಸ ಹಾಗೂ ಶಕ್ತಿ, ಸಾಮರ್ಥ್ಯಗಳನ್ನು ಬಯಸುತ್ತದೆ. ಕೇವಲ, ಸಶಕ್ತ ಹಾಗೂ ಸ್ವಾವಲಂಬಿ ಭಾರತ ಮಾತ್ರ ತನ್ನ ಹಿತಾಸಕ್ತಿಗಳನ್ನು ರಕ್ಷಿಸಿ, ಉಳಿಸಿ ಪ್ರೋತ್ಸಾಹ ನೀಡಿ ಬೆಳೆಸಬಲ್ಲುದು. ಈ ಗುರಿಯ ಸಾಧನೆಗೆ ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕು.

ಅಲಿಪ್ತತೆಯನ್ನು ಒಂದು ಕಾರ್ಯನೀತಿ ಎಂದು ನಾವು ಮಾತನಾಡುವಾಗ ನಾವು ಯಾವುದೇ ಸೈದ್ಧಾಂತಿಕ ಪರಿಗಣನೆಯನ್ನು ಅಲ್ಲಿ ತರಬೇಕಾಗಿಲ್ಲ. ಈ ನೀತಿಯು ಕಮ್ಯುನಿಸಂ ಬಗೆಗಿನ ವಿರೋಧದೊಡನೆಯಾಗಲೀ, ಪ್ರಜಾಪ್ರಭುತ್ವದೊಡನೆ ಪ್ರೇಮದಿಂದಾಗಲೀ ಯಾವುದೇ ರೀತಿಯಲ್ಲಿಯೂ ಸಂಬಂಧಿಸಿಲ್ಲ. ಸೈದ್ಧಾಂತಿಕ ಆಧಾರದ ಮೇಲೆ, ಆಳವಿಲ್ಲದ ಮೇಲು ಮೇಲಿನ ನೋಟಕ್ಕೆ ಭಾರತ ಮತ್ತು ಪಾಶ್ಚಾತ್ಯ ಜಗತ್ತಿನ ನಡುವೆ ಸಾಕಷ್ಟು ಸಾಮಾನ್ಯ ಸಂಗತಿಗಳಿವೆ ಎಂದು ತೋರಬಹುದು. ಆದರೆ, ಈ ಪ್ರಜಾಸತ್ತಾತ್ಮಕ ರಾಷ್ಟ್ರಗಳು ತಮ್ಮ ವಿದೇಶಾಂಗ

ನೀತಿಯನ್ನು ಯಾವುದೇ ಸೈದ್ಧಾಂತಿಕ ಆಧಾರದ ಮೇಲೆ ಸೂತ್ರೀಕರಣಗೊಳಿಸುವುದಿಲ್ಲವೆಂಬುದನ್ನು ನಾವು ನೆನಪಿನಲ್ಲಿಡಬೇಕು. ಅವುಗಳು ಕೇವಲ ತಮ್ಮ ರಾಷ್ಟ್ರಗಳಲ್ಲಿ ಮಾತ್ರ ಪ್ರಜಾಪ್ರಭುತ್ವದ ಬಗೆಗೆ ಚಿಂತಿಸುತ್ತಾರೆ. ಉಳಿದದ್ದಕ್ಕೆ ಸಂಬಂಧಿಸಿದಂತೆ, ತಮ್ಮ ಹಿತಾಸಕ್ತಿಗಳು ಸಾಧ್ಯವಾದಷ್ಟು ಉತ್ತಮವಾಗಿ ರಕ್ಷಿಸಲ್ಪಡಬೇಕೆಂಬುದರ ಬಗೆಗೆ ಜಾಗೃತೆ ವಹಿಸುತ್ತಾರೆ. ಇದೇ ಕಾರಣದಿಂದಲೇ ಅವು ಸರ್ವಾಧಿಕಾರಿ, ಹಾಗೂ ಅಲ್ಲಾಡಿಸುತ್ತಿರುವ ಆಡಳಿತಗಳನ್ನು ಅನೇಕ ಸಂಖ್ಯೆಯ ದೇಶಗಳಲ್ಲಿ ಬೆಂಬಲಿಸಿವೆ. ಕಮ್ಯುನಿಸಂನೊಂದಿಗೆ ಅವುಗಳ ವಿರೋಧ ಕೂಡ ಅವರ ವಿದೇಶಾಂಗ ನೀತಿಯೊಂದಿಗೆ ಯಾವ ರೀತಿಯಲ್ಲಿಯೂ ಸಂಬಂಧಿಸಿಲ್ಲ. ಉದಾಹರಣೆಗೆ, ಬಹಿರಂಗವಾಗಿಯೇ ಕಮ್ಯುನಿಸ್ಟ್ ರಾಷ್ಟ್ರವಾದ ಯುಗೋಸ್ಲೇವಿಯಾ, ಯಾವಾಗಲೂ ಅವುಗಳಿಂದ ಬೆಂಬಲ ಪಡೆದಿದೆ.

ನಮ್ಮ ದೇಶದಲ್ಲಿ ನಾವು ಕಮ್ಯುನಿಸಂನೊಂದಿಗೆ ಹೋರಾಡಬೇಕಾಗಿದೆ ಎಂದು ಪ್ರಧಾನಮಂತ್ರಿಗಳು ಹೇಳಿದ್ದು ಸಮರ್ಪಕವಾಗಿದೆ. ಆದರೆ, ಅದು ನಮ್ಮ ದೇಶದಲ್ಲಿಯೇ ಇರುವ ಅಂತರರಾಷ್ಟ್ರೀಯ ಕಮ್ಯುನಿಸಂ ಒಡ್ಡುತ್ತಿರುವ ಅಪಾಯಗಳಿಗೆ ನಮ್ಮನ್ನು ಕುರುಡಾಗಿ ಮಾಡಬಾರದು. ನಮ್ಮ ರಾಷ್ಟ್ರೀಯ ಜೀವನದಲ್ಲಿ ಛಿದ್ರವನ್ನು ಕೊರೆಯಲು ಅಂತರರಾಷ್ಟ್ರೀಯ ಕಮ್ಯುನಿಸಂಗೆ ಅವಕಾಶ ನೀಡದಂತೆ ನಾವು ನಮ್ಮ ಅಲಿಪ್ತ ಸ್ಥಾನಮಾನವನ್ನು ನಿರ್ವಹಿಸಬಹುದು. ಕರ್ನಲ್ ನಾಸೆರ್ ಇದೇ ನೀತಿಯನ್ನು ಅನುಸರಿಸಿದ್ದಾರೆ. ಈ ದೇಶದಲ್ಲಿನ ಕಮ್ಯುನಿಸ್ಟರ ಬಗೆಗೆ ಪ್ರಧಾನಮಂತ್ರಿಗಳ ಧೋರಣೆಯು ಅನವಶ್ಯಕವಾಗಿ, ದೇಶದೊಳಗಣ ಸಂಗತಿಗಳಿಗೆ, ವಿದೇಶಾಂಗ ನೀತಿಯನ್ನು ಪ್ರಾಯೋಜಿಸಿದೆ.

(೧೯೬೦ರ ಫೆಬ್ರವರಿ, ೨೨)



## ಸರ್ಕಾರ ಜನರಲ್ಲಿ ವಿಶ್ವಾಸವಿಡಲಿ

ಸೈನ್ಯಗಳನ್ನು ತೆರವು ಮಾಡುವುದು ಮತ್ತು ಸಂಧಾನಗಳ ಬಗೆಗೆ ಚೀನಾದ ಸಲಹೆಗಳ ಬಗೆಗೆ ಭಾರತದ ಭಾವನೆಗಳನ್ನು ಲೋಕಸಭೆಗೆ ವಿವರಿಸುವುದನ್ನು ಪ್ರಧಾನಮಂತ್ರಿಗಳು ಮತ್ತೆ ಕಡೆಗಣಿಸಿದ್ದಾರೆ. ಶ್ರೀ ಚೌ. ಎನ್. ಲಾಯ್‌ರ ಪತ್ರವನ್ನು ನವೆಂಬರ್ ೭ರಂದು ಪಡೆಯಲಾಯಿತು. ಮತ್ತು ನವೆಂಬರ್ ೧೬ರಂದು ಲೋಕಸಭೆಯು ಸೇರಿದ ದಿನ, ಆ ಪತ್ರವನ್ನು ದೆಹಲಿಯಲ್ಲಿ ಚೀನಾದ ರಾಯಭಾರಿಗೆ ಹಸ್ತಾಂತರಿಸಲಾಯಿತು. ಚೀನಾದ ಪತ್ರಕ್ಕೆ ಸ್ವಲ್ಪ ತಡವಾಗಿ ಉತ್ತರಿಸಬಹುದಾಗಿತ್ತು. ಏಕೆಂದರೆ ಪ್ರಧಾನಮಂತ್ರಿಗಳಿಗೆ ಹಲವಾರು ನಿಗದಿತ ಕಾರ್ಯಕ್ರಮಗಳಿದ್ದವು, ಅಲ್ಲದೇ ಅವರು, ಜನರಿಂದ ದೂರದಲ್ಲಿ ಡೆಹರಾಡೂನ್‌ನಲ್ಲಿ ತಮ್ಮ ಜನ್ಮದಿನವನ್ನು ಆಚರಿಸಿಕೊಳ್ಳಲು ನಿರ್ಧರಿಸಿದ್ದರು. ಜನಪ್ರತಿನಿಧಿಗಳು ಸರ್ಕಾರಕ್ಕೆ ತಮ್ಮ ಅಭಿಪ್ರಾಯವನ್ನು ತಿಳಿಸಲು ಅವಕಾಶ ಆಗುವಂತೆ ಈ ಉತ್ತರ ನೀಡುವುದನ್ನು ಕೆಲವು ದಿನಗಳ ತನಕ ಮುಂದೂಡಬಹುದಾಗಿತ್ತು.

ಇತ್ತೀಚಿನ ಹಲವು ಬದಲಾವಣೆಗಳ ಹೊರತಾಗಿಯೂ, ಈ ವಿಷಯದ ಬಗೆಗೆ, ರಾಷ್ಟ್ರದ ಭಾವನೆಗಳಿಗೂ, ಸರ್ಕಾರದ ಕಾರ್ಯನೀತಿಗೂ ನಡುವೆ ಅಗಲವಾದ ಕಂದಕವೊಂದು ಸೃಷ್ಟಿಯಾಗಿದೆ ಎನ್ನುವುದನ್ನು ಹೇಳುವ ಅವಶ್ಯಕತೆಯೇ ಇಲ್ಲ. ಯಾವುದೇ ಪ್ರಜಾಸತ್ತಾತ್ಮಕ ಸರ್ಕಾರವೂ ಜನರನ್ನು ಅಲಕ್ಷಿಸಲು ಸಮರ್ಥವಾಗಲಾರದು. ಅದು ಕೂಡ, ಸರ್ವಪ್ರಯತ್ನ ಮತ್ತು ಸಂಪೂರ್ಣ ರಾಷ್ಟ್ರೀಯ ಐಕ್ಯತೆಯ ಅವಶ್ಯಕತೆಯಿರುವ ವಿಷಯದ ಬಗೆಗಂತೂ ಸಾಧ್ಯವೇ ಇಲ್ಲ. ಆದರೆ ಸರ್ಕಾರವು ಜನರನ್ನು ಅನುಸರಿಸಲು ನಿರಂತರವಾಗಿ ನಿರಾಕರಿಸುತ್ತಿದೆ. ಬದಲಾಗಿ ಸರ್ಕಾರವು, ಚರ್ಚೆಗವಕಾಶವಿಲ್ಲದಂತೆ ಮಾಡಿ ಮುಗಿಸಿ ಲೋಕಸಭೆಯನ್ನು ಎದುರಿಸುವುದರಲ್ಲಿ ತೀವ್ರ ಆಸಕ್ತಿ ತಳೆದಿದೆ.

ಸರ್ಕಾರದ ಈ ಧೋರಣೆಯು ಜನರಲ್ಲಿ ಅತೃಪ್ತಿಯ ಬೆಳವಣಿಗೆಗೆ ಕಾರಣವಾಗಿದೆ. ಕೇವಲ ಪ್ರತಿಪಕ್ಷ ಮಾತ್ರವಲ್ಲ, ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷವು ಕೂಡ, ಈ ಧೋರಣೆಯಿಂದ ಅಸಮಾಧಾನಗೊಂಡಿದೆ, ಮತ್ತು ಅದು ಸರಿಯಾಗಿಯೇ ಇದೆ. ಕಾಂಗ್ರೆಸ್‌ನ ಸದಸ್ಯರು ಕೂಡ ಸರ್ಕಾರಕ್ಕೆ ಕನಿಕರ ತೋರಿಸಿಲ್ಲ ಮತ್ತು ಅದರ ದುರ್ಬಲ, ಅವಾಸ್ತವದಿಂದ ಚೀನಾ ನೀತಿಯ ಬಗೆಗೆ ಮುಚ್ಚುಮರೆಯಿಲ್ಲದೇ

ಟೀಕಿಸುತ್ತಿದ್ದಾರೆ. ಪಕ್ಷದ ಖಾಸಗಿ ಸಭೆಗಳಲ್ಲಿ ಈ ನೀತಿಯನ್ನು ರೂಪಿಸಿದವರ ಮೇಲೆ ಆಕ್ರೋಶಗಳು ಉಕ್ಕಿಹರಿಯುತ್ತಿವೆ. ಲೋಕಸಭೆಯ ಪ್ರಾರಂಭದ ದಿನ ಪಕ್ಷವು ಎಂದೂ ಇರದಿದ್ದಂತಹ ಕೋಲಾಹಲದ ಸಭೆಯನ್ನು ಎದುರಿಸಿತು. ಪಂಡಿತ ನೆಹರೂ ಅವರಿಗೆ ಕೂಡ ಟೀಕಾಕಾರರನ್ನು ಸುಮ್ಮನಾಗಿಸುವುದು ಸಾಧ್ಯವಾಗಲಿಲ್ಲ. ಅಲ್ಲಿ ನಡೆದ ಚರ್ಚೆಗಳು ಪತ್ರಿಕೆಗಳಿಗೆ ಮುಕ್ತವಾಗಿರಲಿಲ್ಲ ಮತ್ತು ಅಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರಿಗೂ, ಸಭೆಯಲ್ಲಿ ಏನು ನಡೆಯಿತೆಂಬುದನ್ನು, ಅದರಲ್ಲಿಯೂ ವಿಶೇಷವಾಗಿ ಪ್ರಧಾನಮಂತ್ರಿಗಳ ಭಾಷಣದ ಅಂಶಗಳನ್ನು ಎಲ್ಲಿಯೂ ಯಾರಿಗೂ ಹೊರಗೆಡಹಬಾರದೆಂದು ರಹಸ್ಯ ಪ್ರಮಾಣವಚನವನ್ನು ಬೋಧಿಸಲಾಯಿತು. ತಮ್ಮ ಈ ನಿಲುವಿಗೆ ಒಪ್ಪದಿದ್ದರೆ, ತಾವು ರಾಜೀನಾಮೆ ಕೊಡುವುದಾಗಿ ಬೆದರಿಸಿದ್ದರೆಂದು ನಂಬಲಾಗಿದೆ. ಅವರು ಈಗಾಗಲೇ ತಮ್ಮ ಈ ದೃಷ್ಟಿಕೋನವನ್ನು ದೂರದರ್ಶನದ ಸಂದರ್ಶನವೊಂದರಲ್ಲಿ ಅಮೇರಿಕ ಬಾತ್ಮಿದಾರನೊಂದಿಗೆ ಅಭಿವ್ಯಕ್ತಪಡಿಸಿದ್ದರೆಂದು ವರದಿಯಾಗಿದೆ. "ಈ ಪ್ರಧಾನಮಂತ್ರಿಯ ಹುದ್ದೆಯನ್ನು ನಾನು ತ್ಯಜಿಸಿದರೆ, ನನಗೂ ಮತ್ತು ದೇಶಕ್ಕೂ ಒಳ್ಳೆಯದಾಗುವುದು" ಎಂದು ಅವರು ಭಾವಿಸಿದ್ದರು.

ಈಗ, ಸದ್ಯದಲ್ಲಿ, ಈ ಕ್ಲಿಷ್ಟ ಪರಿಸ್ಥಿತಿಯಲ್ಲಿ ಪ್ರಧಾನಮಂತ್ರಿಗಳ ಸಂಭಾವ್ಯವಾದ ಅಥವಾ ಸುದ್ದಿಯಾಗಿರುವ ನಿವೃತ್ತಿಯ ಪರಿಣಾಮಗಳ ಒಳಿತು–ಕೆಡುಕುಗಳನ್ನು ಚರ್ಚಿಸಲು ಇಚ್ಛಿಸುವುದಿಲ್ಲ. ಆದರೆ ಈ ಮುಖ್ಯ ಪ್ರಶ್ನೆಯ ಬಗೆಗೆ ನಾಯಕತ್ವ ಮತ್ತು ಜನತೆಯ ನಡುವೆ ಬೆಳೆಯುತ್ತಿರುವ ವೈಮನಸ್ಯವನ್ನು, ಅಪಾಯವನ್ನು ಗಮನಿಸಿ, ನಮ್ಮದೇ ಜವಾಬ್ದಾರಿಯಲ್ಲಿ ಅಲಕ್ಷಿಸಬಹುದು ಅಥವಾ ಕಡಿಮೆಮಾಡಬಹುದು. ಯಾವುದೇ ಒಂದು ನೀತಿಯ ಸಮರ್ಪಕತೆ ಅಥವಾ ಹಾಗಿರದಿರುವುದಕ್ಕೆ, ನಾವು ಯಾವಾಗಲೂ ವಾದಮಾಡಬಹುದು. ಕದನಗಳಲ್ಲಿ ಜಯಗಳಿಸುವುದು ಚರ್ಚೆಯಲ್ಲ, ಆದರೆ ಮುಂದೆ ಬರುವ ಭೀಕರ ಪರಿಸ್ಥಿತಿಯು ತಂದೊಡ್ಡುವ ಪರೀಕ್ಷೆಗಳನ್ನು, ತಲ್ಲಣ ಪ್ರಕ್ಷುಬ್ಧತೆಗಳೆಲ್ಲವನ್ನೂ ತಡೆದು ಸಹಿಸಿಕೊಳ್ಳುವಂತಹ ಜನರ ಸಮರ್ಪಣಾಭಾವ ಮತ್ತು ದೃಢನಿರ್ಧಾರ. 'ಸಮರ್ಪಕ'ವೆಂದು ಹೇಳಲಾಗುತ್ತಿರುವ ಸರ್ಕಾರದ ನೀತಿಯು ರಾಷ್ಟ್ರೀಯ ಸಂಕಲ್ಪ ಶಕ್ತಿಯನ್ನು ದುರ್ಬಲಗೊಳಿಸುವುದಾದಲ್ಲಿ ಅಥವಾ ಅದರ ನೈತಿಕ ಸ್ಥೈರ್ಯವನ್ನು ಒಳಗಿನಿಂದ ಕೊರೆಯುವುದಾದಲ್ಲಿ ಒಂದು 'ತಪ್ಪು' ಹೆಜ್ಜೆಯನ್ನು ಇಡುವುದೇ ಉತ್ತಮ. ಅಂತಿಮ ವಿಶ್ಲೇಷಣೆಯಲ್ಲಿ ಜನತೆ ಯಾವಾಗಲೂ ನ್ಯಾಯವಾಗಿರುತ್ತದೆ. ಮತ್ತು ಜನರೇ ಗೆಲ್ಲಬೇಕು. ನಮ್ಮ ಶ್ರೇಷ್ಠತೆ ಮತ್ತು ಜ್ಞಾನದ ತಪ್ಪು ತಿಳಿವಳಿಕೆಯಲ್ಲಿ ಜನರನ್ನು ಅಲ್ಲಗಳೆಯದಿರೋಣ ಮತ್ತು ಅವರನ್ನು ಅಮುಖ್ಯರು ಎಂದು ಪರಿಗಣಿಸದಿರೋಣ.

ಚೀನಾದ ಬಗೆಗೆ ಕಾರ್ಯನೀತಿಯನ್ನು ರೂಪಿಸಿ ಸೂತ್ರಬದ್ಧಗೊಳಿಸುವಲ್ಲಿ



ಸರ್ಕಾರವು ಜನರ ಮಾರ್ಗದರ್ಶನವನ್ನು ಕೋರಿದರೆ, ಅದು ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸುವುದಷ್ಟೆ ಅಲ್ಲ, ಜೊತೆಗೆ ಕಳೆದ ಹತ್ತು ವರ್ಷಗಳಿಂದಲೂ ದುರ್ಬಲಗೊಳ್ಳುತ್ತಿರುವ ಚಿಹ್ನೆಯನ್ನು ತೋರಿಸುತ್ತಿರುವ ರಾಷ್ಟ್ರೀಯ ಐಕ್ಯತೆಯನ್ನು ರೂಪಿಸಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ರಾಷ್ಟ್ರಗಳು ಯುದ್ಧದಲ್ಲಿ ಬದುಕುತ್ತವೆ ಮತ್ತು ಶಾಂತಿಯಲ್ಲಿ ಸಾಯುತ್ತವೆ ಎಂಬುದನ್ನು ಯುರೋಪಿನ ಬಗೆಗೆ ಹೇಳಿದ್ದರು ಕೂಡ ಅದು ಸಾರ್ವತ್ರಿಕವಾಗಿ ಅನ್ವಯವಾಗುತ್ತದೆ. ಭಾರತದಲ್ಲಿ ನಾವು ಯಾವಾಗಲೂ ಸಂಸ್ಕೃತಿ ಮತ್ತು ಧರ್ಮದ ಇತ್ಯಾತ್ಮಕ ಅಂಶಗಳ ಮೇಲೆ ಹೆಚ್ಚು ಅವಲಂಬಿಸಿದ್ದೇವೆ ಮತ್ತು ಅವು ಜನರಿಗೆ ಸಾಮಾನ್ಯ ರಾಷ್ಟ್ರೀಯತೆ ಮತ್ತು ಅರ್ಥಪೂರ್ಣ ಜೀವನವನ್ನು ಕೊಡುತ್ತವೆಂದುಕೊಂಡಿರುವುದು ಸತ್ಯ. ಆದರೆ ಈಚೆಗೆ, ವಿದೇಶೀ ವಿಚಾರಗಳು ಮತ್ತು ಆದರ್ಶಗಳ ಹೆಚ್ಚುವಿಕೆಯಿಂದಾಗಿ, ಆಧಾರಸೂತ್ರವಾಗಿರುವಂತಹ ಆ ಐಕ್ಯತೆಯು, ದೃಷ್ಟಿಗೋಚರವಾಗಿ ಸಾಮಾನ್ಯವಾಗಿ ಅರ್ಥವಾಗುವಂತಹ ಸ್ವರೂಪದಲ್ಲಿ ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳುವುದಿಲ್ಲ. ರಾಜಕೀಯ ಕ್ಷೇತ್ರವು ಹೆಚ್ಚಾಗಿ ಪ್ರಾಂತೀಯ, ವಿಭಾಗೀಯ ಮತ್ತು ವೈಯಕ್ತಿಕವಾಗಿದೆ. ಕ್ಲಿಷ್ಟ ಪರಿಸ್ಥಿತಿಯಲ್ಲಿ ಈ ಕ್ಷುಲ್ಲಕ ಭಾವನೆಗಳನ್ನು ಮೀರಬಹುದು. ಆದರೆ, ಪ್ರಧಾನಮಂತ್ರಿಯವರಿಂದ ರಾಷ್ಟ್ರೀಯ ಐಕ್ಯತೆಗೆ ಕರೆಗಳು ಬಂದಿದ್ದಾಗ್ಯೂ, ಕಾಂಗ್ರೆಸ್ಸಿನವರು ರಾಷ್ಟ್ರೀಯ ಸಂಗತಿಗಳಿಗೆ ಗಮನಕೊಡುವುದಕ್ಕಿಂತಲೂ ಹೆಚ್ಚಾಗಿ, ತಮ್ಮದೇ ಗುಂಪಿನ ಜಗಳ ಕಚ್ಚಾಟಗಳಲ್ಲಿ ನಿರತರಾಗಿರುವುದು ಆಶ್ಚರ್ಯವೆನಿಸುತ್ತದೆ. ಅವರಪಾಲಿಗೆ ಚೀನೀಯರ ಮುತ್ತಿಗೆಯು ಪ್ರಮುಖವಾದದ್ದೇನಲ್ಲ. ಚೀನೀಯರನ್ನು ದೇಶದಿಂದ ಹೊರಕ್ಕೆ ಅಟ್ಟುವ ಬದಲಿಗೆ ಅವರು ಪಕ್ಷದ ಚುನಾವಣೆಗಳಲ್ಲಿ ತಮ್ಮ ಪ್ರತಿಸ್ಪರ್ಧಿಗಳನ್ನು ಸೋಲಿಸಿ ಮಣ್ಣು ಮುಕ್ಕಿಸಲು ಹೆಚ್ಚು ಕಾತರರಾಗಿದ್ದಾರೆ. ಸರ್ಕಾರದ ನೀತಿನಿರ್ಮಾಣದಲ್ಲಿ ಅವರು ಭಾಗವಹಿಸುವ ಯಾವುದೇ ತಿಳಿವಳಿಕೆಯಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಸರ್ಕಾರದ ನೀತಿಯನ್ನು ಅವರು ಅನುಮೋದಿಸುವುದಾದರೆ ಅದು ಹೆಚ್ಚಾಗಿ ಅಸಹಾಯಕತೆ ಮತ್ತು ತಾಂತ್ರಿಕ ಕಾರಣಗಳಿಂದ ಅಷ್ಟೇ ಹೊರತು ಈ ನೀತಿಗಳ ಸಮರ್ಪಕತೆಯ ಬಗೆಗೆ ಯಾವುದೆ ದೃಢವಿಶ್ವಾಸ ಅಥವಾ ನಂಬಿಕೆಗಳಿಂದಲ್ಲ. ಈ ಮಾನಸಿಕ ಜಡತ್ವವನ್ನು ನಿವಾರಿಸುವುದು ಅವಶ್ಯವಾಗಿದೆ ಮತ್ತು ಇಡಿಯ ರಾಷ್ಟ್ರವನ್ನು ಕ್ರಿಯಾಶೀಲಗೊಳಿಸಬೇಕಾಗಿದೆ. ಅದು ತತ್‌ಕ್ಷಣವೇ ನಮ್ಮನ್ನು ವಿಜಯದತ್ತ ಕರೆದೊಯ್ಯುತ್ತದೆ. ಇದನ್ನು ಸಾಧಿಸಲು ಹೆಚ್ಚು ಪ್ರಯತ್ನವಾಗಲೀ, ಭಾರಿ ಯೋಜನೆಗಳಾಗಲೀ ಅಗತ್ಯವಿಲ್ಲ. ಸರ್ಕಾರ ಮತ್ತು ಪ್ರಧಾನಮಂತ್ರಿಗಳೇ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದನ್ನು ಕಲಿಯಬೇಕು. ಮತ್ತು ಪ್ರಜಾಪ್ರಭುತ್ವದ ಸಾಂಸ್ಥಿಕ ಏರ್ಪಾಟುಗಳನ್ನು ಕಾರ್ಯ ನೀತಿಯನ್ನು ಅಲಕ್ಷಿಸಬಾರದು.

(೧೯೫೯ ನವೆಂಬರ್, ೨೩)

# ಚೀಣಾದ ಆಕ್ರಮಣ ಮತ್ತು ಭಾರತ ಸರ್ಕಾರ

ಚೀನಾದ ಪ್ರಧಾನಿಗೆ ನಮ್ಮ ಪ್ರಧಾನಮಂತ್ರಿಗಳು ಬರೆದ ಕಡೆಯ ಪತ್ರವು ಹೆಚ್ಚು ಭರವಸೆಯನ್ನು ನೀಡದಿದ್ದರೂ, ಹಿಂದಿನ ಸಂಪರ್ಕಕ್ಕಿಂತಲೂ ಸ್ವಲ್ಪ ಸುಧಾರಣೆಯನ್ನು ಉಂಟುಮಾಡಿತ್ತು. ಆ ಪತ್ರದ ಧ್ವನಿಯು ದೃಢವಾಗಿತ್ತು ಮತ್ತು ಹಲವು ಸಂದರ್ಭಗಳಲ್ಲಿ ಅವರ ವಾದಸರಣಿಯು ಸಮರ್ಪಕವಾಗಿದ್ದು, ಭೌಗೋಳಿಕ ವಾಸ್ತವತೆ, ಐತಿಹಾಸಿಕ ದಾಖಲೆಗಳು, ಒಪ್ಪಂದಗಳು ಮತ್ತು ಸಾಮಾಜಿಕ ನಡವಳಿಕೆ, ಸಂಪ್ರದಾಯಗಳನ್ನು ಆಧರಿಸಿತ್ತು. ಚೀನೀಯರು ಲೊಂಗ್‌ಜು ಮತ್ತು NEFA ಯಲ್ಲಿನ ಭಾರತದ ಬಾಹ್ಯರಕ್ಷಣ ಸ್ಥಾನಗಳನ್ನೂ ಮತ್ತು ಪೂರ್ವ ಲಡಾಖ್ ಅನ್ನು ಕಾನೂನುಬಾಹಿರವಾಗಿ ಆಕ್ರಮಿಸಿಕೊಳ್ಳುವುದನ್ನು ಮುಂದುವರಿಸುತ್ತಿರುವ ತನಕವೂ, ಚೀನಾದೊಡನೆ ಗಡಿವಿವಾದದ ಬಗೆಗೆ ಯಾವುದೇ ಸಂಧಾನದ ಮಾತುಕತೆಯನ್ನು ನಡೆಸುವುದು ಸಾಧ್ಯವಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ಚೀನೀಯರಿಗೆ ಪ್ರಪ್ರಥಮ ಬಾರಿಗೆ ಹೇಳಲಾಗಿತ್ತು. ಪತ್ರದ ಕರಡುಪ್ರತಿಯನ್ನು ಸಿದ್ಧಗೊಳಿಸುವಾಗ ಮತ್ತಷ್ಟು ಗಮನ ತೆಗೆದುಕೊಂಡು ನಿಗಾವಹಿಸಿದ್ದಿದ್ದರೆ ಭಾಷೆಯ ನಿಖರತೆ ಮತ್ತು ಚೀನೀಯರು ಎಲ್ಲಿ ಎಲ್ಲಿ ಅತಿಕ್ರಮಿಸಿದ್ದರು ಎಂಬ ವಿವರಗಳ ಕೊರತೆಯನ್ನು ನಿವಾರಿಸಬಹುದಾಗಿತ್ತು. ಆದಾಗ್ಯೂ, ಚೀನಾದವರು ರಸ್ತೆಯನ್ನು ನಿರ್ಮಿಸಿ ಕೊಂಡಿರುವ ಅಕ್ಸಾಯ್‌ಚಿನ್ ಪ್ರದೇಶದಿಂದ ತಮ್ಮ ಆಕ್ರಮಣವನ್ನು ತೆರವು ಮಾಡುವಂತೆ ಮಾಡಬೇಕಾಗಿದ್ದ ಒತ್ತಾಯಪೂರ್ವಕ ಹಕ್ಕಿನ ಬೇಡಿಕೆಯನ್ನು ಕೈಬಿಟ್ಟಿರುವುದು ಉದ್ದೇಶಪೂರ್ವಕವೆಂದು ತೋರುತ್ತದೆ. ಆ ಪ್ರದೇಶದಲ್ಲಿ ಭಾರತ ಸರ್ಕಾರವು ತನ್ನ ಹಕ್ಕುಗಳಿಗಾಗಿ ಒತ್ತಾಯಿಸಲು ಇಷ್ಟಪಡುತ್ತಿಲ್ಲವೆಂಬ ನಿರ್ಣಯಕ್ಕೆ ಬರಬೇಕಾಗುತ್ತದೆ. ಇದು ಕುತೂಹಲವನ್ನೂ ಕೆರಳಿಸುತ್ತದೆ.

ಇದುವರೆಗೂ ಚೀನಾವು ಆಕ್ರಮಿಸಿಕೊಂಡಿರುವ ಭಾರತದ ಭೂಪ್ರದೇಶದಿಂದ ಚೀನಾವನ್ನು ಹೊರಕ್ಕೆ ಅಟ್ಟಲು ಭಾರತವು ಸೈನ್ಯವನ್ನು ಉಪಯೋಗಿಸುವುದಿಲ್ಲ ಎಂಬ ಪ್ರಧಾನಮಂತ್ರಿಯವರ ಇತ್ತೀಚಿನ ಘೋಷಣೆಯು, ಆ ಪತ್ರದ ಉತ್ತಮ ಪರಿಣಾಮವನ್ನು ತಟಸ್ಥಗೊಳಿಸಿದೆ. ಸಮಸ್ಯೆಗಳಿಗೆ ರಾಜಕಿಯ ಪರಿಹಾರವನ್ನು ಹುಡುಕುತ್ತಿರುವಾಗ, 'ಮಿಲಿಟರಿ' ಕಾರ್ಯಾಚರಣೆ ಕೈಗೊಳ್ಳುವುದು ಭಾರತದ ಪಾಲಿಗೆ ಬೇಜವಾಬ್ದಾರಿ ವರ್ತನೆಯಾಗುತ್ತದೆಂದು ಪಂಡಿತ ನೆಹರೂ ಭಾವಿಸುತ್ತಾರೆ. ಜವಾಬ್ದಾರಿ



ಎನ್ನುವುದು, ನಿಷ್ಕ್ರೀಯತೆ ಮತ್ತು ಶರಣಾಗತಿ ಇವುಗಳ ಸಮನಾರ್ಥಕ ಪದವಾಗಿದ್ದರೆ, ಪಂಡಿತ್ ನೆಹರೂ ಅವರನ್ನು ಸಂಪೂರ್ಣವಾಗಿ ಸಮರ್ಥಿಸಬಹುದು. ಆದರೆ, ಕಾನೂನುಬಾಹಿರವಾಗಿ ದೇಶದೊಳನುಗ್ಗುವ ಆಕ್ರಮಣಕಾರರನ್ನು ಬಲಪ್ರಯೋಗದಿಂದ ಹಿಮ್ಮೆಟ್ಟಿಸುವುದು ಜವಾಬ್ದಾರಿಯುತವಾಗಿ ವರ್ತಿಸುವುದೇ ವಿನಾ ಬೇಜವಾಬ್ದಾರಿತನದಿಂದಲ್ಲ. ಚೀನೀಯರು ಭಾರತದ ಹೊರ ರಕ್ಷಣಾ ಠಾಣೆಗಳನ್ನು ತಪ್ಪುಗ್ರಹಿಕೆಯಿಂದೇನೂ ವಶಪಡಿಸಿಕೊಳ್ಳಲಿಲ್ಲ. ನಮ್ಮದೇ ಪ್ರಯತ್ನಗಳಿಂದ ಆ ಪ್ರದೇಶವನ್ನು ಮತ್ತೆ ಹಿಂದಕ್ಕೆ ಪಡೆಯಲು ಪಂಡಿತ್ ನೆಹರೂ ಸಿದ್ಧರಾಗಿರದಿದ್ದರೆ, ಮುಂದೆ ಯಾವುದೇ ಆಕ್ರಮಣವನ್ನು ತಡೆಗಟ್ಟಲಾಗುವುದು, ಪ್ರತಿಭಟಿಸಲಾಗುವುದು, ಎಂದು ಚೀನೀಯರಿಗೆ ಅವರು ನೀಡಿದ ಎಚ್ಚರಿಕೆಗೆ ಯಾವುದೇ ಅರ್ಥವೂ ಇರುವುದಿಲ್ಲ. ಈಗಾಗಲೇ ಅಪರಾಧವನ್ನು ಮಾಡಲ್ಪಟ್ಟಿರುವ ಕಡೆಯಲ್ಲಿ, ರಕ್ಷಣೆಗೆ ಬಲಪ್ರಯೋಗವನ್ನು ತ್ಯಜಿಸುವ ಮೂಲಕ ಅವರ ಮಾತುಗಳು ಎಲ್ಲ ಅರ್ಥವನ್ನು ಕಳೆದುಕೊಂಡಿವೆ. ಎಲ್ಲ ಶರಣಾಗತಿಗಳಿಗೂ ಎಲ್ಲ ಒಪ್ಪಿಸುವಿಕೆಗಳಿಗೂ ಬೆಂಬಲವಾಗಿರುವ ಸ್ಥಾಯೀ ವಾದಸರಣಿಯೆಂದರೆ, ಬಲಪ್ರಯೋಗವು ಯುದ್ಧಕ್ಕೆ ದಾರಿಮಾಡಬಹುದು ಎನ್ನುವುದು. ನಾಳೆ ಚೀನಾ ಏನಾದರೂ ಮತ್ತೆ ಆಕ್ರಮಣ ಮಾಡಿದರೆ ತಮ್ಮ ಎಚ್ಚರಿಕೆಯ ಅನುಸಾರ, ಪಂಡಿತ ನೆಹರೂ, ಚೀನೀಯರ ಸವಾಲನ್ನು ಎದುರಿಸಲು ಭಾರತದ ರಕ್ಷಣಾಬಲವನ್ನು ಉಪಯೋಗಿಸುವರೇ? ಸರಿ, ಹಾಗಿದ್ದರೆ, ಅದು ಯುದ್ಧಕ್ಕೆ ದಾರಿ ಮಾಡಬಹುದು. ಹಾಗಾದರೆ, ಅದು ಬೇಜವಾಬ್ದಾರಿತನದಿಂದ ವರ್ತಿಸುವುದಾಗುವುದಿಲ್ಲವೇ? ಇದು, ಪ್ರೌಢ ಹಾಗೂ ಪರಿಪಕ್ವವಾದ ವಿಶಾಲ ಭಾರತಕ್ಕೂ ಒಪ್ಪುವಂತಹದೇ?

'ರಾಜಕೀಯ' ಮತ್ತು 'ಮಿಲಿಟರಿ' ಇತ್ಯರ್ಥಗಳು ಎಂಬ ಪದಗಳನ್ನು ಪಂಡಿತ ನೆಹರೂ, ಅವೆರಡೂ ಪರಸ್ಪರ ಪ್ರತ್ಯೇಕ ಪದಗಳೆಂಬಂತೆ ಉಪಯೋಗಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಮಿಲಿಟರಿ ನಡೆಗಳು ರಾಜಕೀಯ ಇತ್ಯರ್ಥಕ್ಕೆ – ಒಪ್ಪಂದಕ್ಕೆ– ಸಹಾಯ ಮಾಡುತ್ತವೆ. ಅದು ನ್ಯಾಯಾಂಗದ ಇತ್ಯರ್ಥವಾಗಿದ್ದಿದ್ದರೆ, ವಿಷಯವು ಬೇರೆಯೇ ರೀತಿಯಾದಾಗಿರುತ್ತಿತ್ತು. ನಾವು ನ್ಯಾಯಾಲಯದಲ್ಲಿ ದೂರು ದಾಖಲು ಮಾಡಿಲ್ಲ. ಹಾಗಿದ್ದರೆ, ವಿಷಯವು ನ್ಯಾಯಾಂಗದ ಪರಿಶೀಲನೆಯಲ್ಲಿರುತ್ತಿದ್ದುದರಿಂದಾಗಿ ನಮ್ಮ ಭಾಗದ ಯಾವುದೇ ಕಾರ್ಯವೂ ಅನುಚಿತವಾಗುತ್ತಿತ್ತು. ಅಂತಾರಾಷ್ಟ್ರೀಯ ಸಮಸ್ಯೆಗಳೊಡನೆ ವ್ಯವಹರಿಸಲು ನಾವು ರಾಷ್ಟ್ರೀಯ ಕಾನೂನುಗಳನ್ನು ಅನ್ವಯಿಸುತ್ತಿದ್ದೇವೆ ಎಂದು ತೋರುತ್ತದೆ. ನಮ್ಮ ಉತ್ತರದ ಗಡಿಗಳಲ್ಲಿ ನಾವು ನಮ್ಮ ಸೈನ್ಯಗಳ ವ್ಯೂಹ ರಚಿಸಿದಾಗ, ಇದು ಚೀನಾದವರ ಸಾಹಸಪ್ರವೃತ್ತಿಯನ್ನು ಹತ್ತಿಕ್ಕುವುದರಲ್ಲಿ ಸತ್ಪರಿಣಾಮಉಂಟುಮಾಡುವುದೆಂದು ನಾವು ಅರಿತೆವು. ಲೊಂಗ್‌ಜುವನ್ನು ಮತ್ತೆ ವಶಕ್ಕೆ ತೆಗೆದುಕೊಳ್ಳುವುದು ನಾವು ನಮ್ಮ ಗಡಿಗಳನ್ನು

ನಿಜವಾಗಿಯೂ ರಕ್ಷಿಸಿಕೊಳ್ಳಲು ಬಯಸುತ್ತೇವೆಂದು ರುಜುವಾತುಮಾಡುತ್ತದೆ. ಪಂಡಿತ ನೆಹರೂ ಅವರನ್ನು ಈ ಹೇಳಿಕೆ ನೀಡುವಂತೆ ಪ್ರೇರೇಪಿಸಿದುದಾದರೂ ಏನು ಎಂಬುದಕ್ಕೆ ನಮಗೆ ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ. ನಿಜ ಹೇಳಬೇಕೆಂದರೆ ಶ್ರೀ ವಿ.ಕೆ. ಕೃಷ್ಣ ಮೆನನ್‌ರು, ಈ ವಿಷಯದಲ್ಲಿ, ಪ್ರಧಾನಮಂತ್ರಿಯವರನ್ನು ಹಿಂದೆ ಹಾಕಿ ತಾವೇ ಮೊದಲು ಪ್ರಯೋಜನ ಪಡೆದರು. ಪ್ರಧಾನಮಂತ್ರಿಯವರು ಪತ್ರಿಕಾಗೋಷ್ಠಿಯಲ್ಲಿ ತಮ್ಮ ಮನಸ್ಸನ್ನು ತೆರೆದಿಡುವುದಕ್ಕೂ ಮೊದಲೇ, ಮೆನನ್‌ರು, ಅಮೆರಿಕಾದಲ್ಲಿ ಈ ಘೋಷಣೆಯನ್ನು ಮಾಡಿಬಿಟ್ಟಿದ್ದರು. ಪ್ರಧಾನಮಂತ್ರಿಯರ ದೃಢವಾದ ಧ್ವನಿ ಧೋರಣೆಗಳನ್ನು ದುರ್ಬಲಗೊಳಿಸಲು ಇದು ಶ್ರೀ ವಿ.ಕೆ. ಕೃಷ್ಣ ಮೆನನ್‌ರ ತಂತ್ರವಾಗಿತ್ತೇ? ಅವರು ಏಕೆ ಅಸಭ್ಯವಾದ ಆತುರದಿಂದ, ನಿಯಮವನ್ನು ಮೀರಿ, ಭಾರತವು ತಾನು ಕಳೆದುಕೊಂಡಿದ್ದ ಭೂಪ್ರದೇಶಗಳನ್ನು ಮತ್ತೆ ಪಡೆದುಕೊಳ್ಳಲು ಸೈನ್ಯವನ್ನು– ಬಲವನ್ನು– ಉಪಯೋಗಿಸದಂತೆ, ಭಾರತವನ್ನು ಬದ್ಧಗೊಳಿಸಬೇಕಾಗಿತ್ತು? ವಿದೇಶಿ ಆಕ್ರಮಣಕಾರೀ ಶಕ್ತಿಗಳೊಂದಿಗೆ ಸಂಪರ್ಕಕ್ಕೇ ಬರದೆ ದೇಶವನ್ನು ರಕ್ಷಿಸಲು ಬಯಸುವ ರಕ್ಷಣಾ ಮಂತ್ರಿಗಳ ಮಾತುಗಳನ್ನು ಪ್ರಧಾನಮಂತ್ರಿಗಳು ಪ್ರತಿಧ್ವನಿಸಬೇಕಾಯಿತು. ಭಾರತ ಸರ್ಕಾರದ ಕಾರ್ಯನೀತಿಯನ್ನು ನಿರ್ಧರಿಸುವವರು ಯಾರು? ಪ್ರಧಾನ ಮಂತ್ರಿಗಳೋ ಅಥವಾ ವಿ.ಕೆ. ಕೃಷ್ಣಮೆನನ್‌ರೋ? ಈ ವಿಷಯದಲ್ಲಿ ಶ್ರೀ ಮೆನನ್‌ರು ನಮ್ಮ ಚೀನಾ ನೀತಿಯನ್ನು ಬುಡಮೇಲು ಮಾಡುವುದನ್ನು ಮಾತ್ರ ಸಾಧಿಸಿದ್ದಾರೆ ಮತ್ತು ತಮ್ಮ ಭಾಷಣದ ಮೂಲಕ ಭಾರತದ ಬಹಳ ಸಮರ್ಥವಾದ ಪ್ರತಿಭಟನೆಯನ್ನು ದಾಖಲಿಸಿದ್ದರೂ, ಚೀನಾ ಅದರ ಬಗೆಗೆ ಹೆದರಬೇಕಾಗಿಲ್ಲವೆಂಬ ಭರವಸೆಯನ್ನು ಚೀನಾಕ್ಕೆ ನೀಡಿದ್ದಾರೆ.

ಗಡಿವಿವಾದವನ್ನು ನಾವು ಶಾಂತಿಯುತವಾಗಿ ಇತ್ಯರ್ಥ ಮಾಡಿಕೊಳ್ಳಲು ಬಯಸುತ್ತೇವೆ, ಮತ್ತು ಇದು ಖಚಿತವಾಗಿಯೂ ದೊಡ್ಡ ಮಟ್ಟದ ಹೊಂದಾಣಿಕೆಗಳಿಗೆ ಸಂಬಂಧಿಸಿದೆ. ಆದರೆ, ಇದುವರೆಗೂ ಸಣ್ಣಪುಟ್ಟ ಹೊಂದಾಣಿಕೆಗಳಿಗೆ ಸಂಬಂಧಿಸಿದಂತೆ, ಚೀನಾವು ಯಾವುದೇ ಒಪ್ಪಂದ ಅಥವಾ ಇತ್ಯರ್ಥಕ್ಕೆ ಒಲವು ತೋರುವಂತೆ ಕಂಡುಬರುವುದಿಲ್ಲ. ಏಕೆಂದರೆ ಗಡಿಗಳ ವೈಜ್ಞಾನಿಕ ಗುರುತಿಸುವಿಕೆ– ನಿರ್ಣಯಗಳನ್ನು– ನಿರ್ವಹಿಸಿದುದಾದರೆ, ಚೀನಾವು ಈಗಾಗಲೇ ಆಕ್ರಮಿಸಿಕೊಂಡಿರುವ ಪ್ರದೇಶಗಳನ್ನು ತೆರವು ಮಾಡಬೇಕಾಗುತ್ತದೆ. ತಾನು ಈಗಾಗಲೇ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿರುವುದನ್ನು ತಾನೇಕೆ ಕಳೆದುಕೊಳ್ಳಲು ಬಯಸಬೇಕು, ಅದೂ ವಿಶೇಷವಾಗಿ, ಯಾವುದೇ ಬಲಪ್ರಯೋಗದಿಂದಲೂ ತಾನು ಅವುಗಳನ್ನು ಕಳೆದುಕೊಳ್ಳುವುದಿಲ್ಲವೆಂದು ತಿಳಿದಿರುವಾಗ? ಈಗಾಗಲೇ ನಾವು ಕಳವಳಗೊಂಡಿರುವಂತೆ ಪಂಡಿತ ನೆಹರೂ ಅವರ ಪ್ರಕಾರ, ಮ್ಯಾಕ್‌ಮಹೋನ್ ರೇಖೆಯ ಮತ್ತೊಂದು ಪಕ್ಕದಲ್ಲಿರುವ ತಾಮೊಡೆನ್ ಅನ್ನು ನಾವು ಈಗಾಗಲೇ ಬಿಟ್ಟುಕೊಟ್ಟಿದ್ದೇವೆ. ಹಾಗಾಗಿ ಸಂಧಾನದ ಇತ್ಯರ್ಥಕ್ಕೆ ಬರುವ ಮೂಲಕ ಚೀನಾವು ಏನನ್ನೂ ಗಳಿಸುವಂತಿಲ್ಲ ಮತ್ತು ಸಂಧಾನವನ್ನು ನಿರಾಕರಿಸುವುದರಿಂದ ಏನನ್ನೂ ಕಳೆದುಕೊಳ್ಳುವಂತೆಯೂ ಇಲ್ಲ. ನಮ್ಮ ಸ್ನೇಹ ಮತ್ತು ಬೆಂಬಲಗಳು ಚೀನಾಕ್ಕೆ ಇವೆ. UNOದಲ್ಲಿ ಚೀನಾದ ಪರ ವಾದಿಸುತ್ತೇವೆ. ಟಿಬೆಟಿನ ಧೈರ್ಯಕ್ಕೆ ನಿರಂತರವಾಗಿ ದ್ರೋಹವೆಸಗುವ ಮೂಲಕ ನಾವು ಕೂಡ ಬಹುಮಟ್ಟಿಗೆ ಚೀನಾದ ಹಾದಿಯನ್ನೇ ಹಿಡಿದಿದ್ದೇವೆ. ನಮ್ಮ ಆಂತರಿಕ ವಿಷಯಗಳಲ್ಲಿ ಚೀನಾದ ಪರವಿರುವ ಮತ್ತು ಭಾರತ ವಿರೋಧೀ ಶಕ್ತಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದನ್ನು ಮುಂದುವರಿಸುತ್ತೇವೆ. ಈ ಶಕ್ತಿಗಳು ಮ್ಯಾಕ್‌ಮಹೋನ್ ರೇಖೆಯನ್ನು ಮನ್ನಿಸಲು ಅಥವಾ ಚೀನಾವನ್ನು ಆಕ್ರಮಣಕಾರಿ ಎಂದು ಕರೆಯಲು ನಿರಾಕರಿಸುತ್ತವೆ. ಚೀನಾ – ಭಾರತ ಸ್ನೇಹದ ಹೆಸರಿನಲ್ಲಿ ಅವು ನ್ಯಾಯಸಮ್ಮತವಾದ ರಾಷ್ಟ್ರೀಯ ಹಿತಾಸಕ್ತಿಗಳನ್ನು ತ್ಯಜಿಸಲು ಮತು ವಿಶಾಲವಾದ ನಮ್ಮ ಭೂಪ್ರದೇಶದ ತುಣುಕುಗಳನ್ನು ಬಿಟ್ಟುಕೊಡಲು, ಜನರಲ್ಲಿ ಗೊಂದಲ ಉಂಟುಮಾಡಲು, ಮತ್ತು ಅರಾಜಕ ಪರಿಸ್ಥಿತಿಯನ್ನು ಸೃಷ್ಟಿಸಲು ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಬುಡಮೇಲು ಮಾಡಲು ವಾದಮಾಡುತ್ತವೆ. ಇಂತಹ ಪರಿಸ್ಥಿತಿಗಳಲ್ಲಿ ಚೀನಾದ ಕಮ್ಯುನಿಸ್ಟ್ ಸರ್ಕಾರವನ್ನು ಶಾಂತಿಯುತ ಒಪ್ಪಂದಕ್ಕೆ ಬರುವಂತೆ ಮತ್ತು ಆಕ್ರಮಣವನ್ನು ತೆರವು ಮಾಡುವಂತೆ ಒತ್ತಾಯ ಮಾಡುವಂತಹದು ಯಾವುದಿದೆ? ಸದ್ಯದ ಭವಿಷ್ಯದಲ್ಲಿ ಚೀನಾ ನಮ್ಮ ಗಡಿಗಳನ್ನು ಉಲ್ಲಂಘಿಸಲಾರದು. ಅದು ತನ್ನ ಕಾಲಕ್ಕಾಗಿ ಕಾಯಬಹುದು ಮತ್ತು ಆಕ್ರಮಣವನ್ನು ಮಾಡಲು ಸಮರ್ಪಕವಾದ ಕ್ಷಣವನ್ನು ಆರಿಸಿಕೊಳ್ಳಬಹುದು.

"ಭಾರತ ಮತ್ತು ಚೀನಾದ ನಡುವಿನ ಗಡಿವಿವಾದವನ್ನು ಬಗೆಹರಿಸಿಕೊಳ್ಳಲು ಸಾಕಷ್ಟು ಗಣನೀಯವಾದ ಸಮಯದ ಅವಶ್ಯಕತೆಯಿದೆ" ಎಂದು ಪ್ರಧಾನಮಂತ್ರಿಯವರು ಹೇಳಿದ್ದಾರೆ. ಸಹಜವಾಗಿಯೇ ಈ ಎಲ್ಲ ಅವಧಿಯಲ್ಲಿಯೂ ಈ ಪ್ರಕ್ಷುಬ್ಧತೆಯು ಮುಂದುವರೆಯುತ್ತದೆ ಮತ್ತು ರಕ್ಷಣಾ ಬಲಗಳು ಕ್ರಿಯಾಶೀಲವಾಗಿ ಕಾಯುತ್ತಿದ್ದು ನಮ್ಮ ಗಡಿಗಳನ್ನು ರಕ್ಷಿಸಬೇಕು. ಮುಂದುವರೆಯುವ ಈ ಸತತ ಪ್ರಕ್ಷುಬ್ಧತೆಯು ಖಂಡಿತವಾಗಿಯೂ ಶಾಂತಿಯ ಧ್ಯೇಯವನ್ನು ಹಾಳುಮಾಡುತ್ತದೆ. ಉತ್ತರದ ಗಡಿಯ ಉದ್ದಕ್ಕೂ ರಕ್ಷಣಾ ಬಲದ ವ್ಯೂಹ ರಚಿಸುವುದೆಂದರೆ, ಅತ್ಯಂತ ಭಾರಿ ಮತ್ತು ಮತ್ತೆ ಮತ್ತೆ ಮಾಡಬೇಕಾದ ವೆಚ್ಚಕ್ಕೆ ಎಡೆಯಾಗುತ್ತದೆ. ಆದಷ್ಟು ಶೀಘ್ರವಾದ ಪರಿಹಾರವು ನಮ್ಮ ಹಿತಾಸಕ್ತಿಗೆ ಪೂರಕವಾಗುತ್ತದೆ. ಇನ್ನೂ ಮುಂದಿನ ದಿನಾಂಕದ ತನಕ ನಾವು ಈ ವಿಷಯವನ್ನು ಮುಂದೂಡಲಾಗುವುದಿಲ್ಲ. ಚೀನಾದ ಮೇಲೆ ಯಾವುದಾದರೂ ಒಂದು ರೀತಿಯ ಒತ್ತಡ ತಂದು ಅದು ಕಾನೂನು ಬಾಹಿರವಾಗಿ ಆಕ್ರಮಿಸಿಕೊಂಡಿರುವ ಪ್ರದೇಶದಿಂದ ಓಡಿಸಿದ್ದೇ ಆದರೆ ಇದು

ಖಂಡಿತ ಸಾಧ್ಯವಾಗುತ್ತದೆ. ಪ್ರತಿಭಟನೆಯ ಬರಹಗಳಾಗಲೀ ಪೋರ್ಚುಗಲ್ ಗೋವಾವನ್ನಾಗಲೀ ಪಾಕಿಸ್ತಾನವು ತುಕೆರ್‌ಗ್ರಾಮ್ ಅನ್ನಾಗಲೀ ಬಿಟ್ಟು ಹೋಗುವಂತೆ ಮಾಡಲಿಲ್ಲ. ಪ್ರತಿಭಟನೆಯ ಅಡಿಯಲ್ಲಿಯೇ ನಮ್ಮ ಭೂಪ್ರದೇಶವನ್ನು ಚೀನಿಯರು ಆಕ್ರಮಿಸಿಕೊಂಡಿರುವ ಸಂಗತಿಯೊಂದಿಗೆ, ಭಾರತ ತನ್ನನ್ನು ತಾನು ರಾಜಿ ಮಾಡಿಕೊಂಡುಬಿಟ್ಟಿದೆ. ಈ ಔಪಚಾರಿಕ ಪ್ರತಿಭಟನೆಗಳು ಯಾವುದಾದರೂ ಮುಂದಿನ ಸರ್ಕಾರಕ್ಕೆ ಈ ಪ್ರದೇಶಗಳನ್ನು ಹಿಂದಕ್ಕೆ ಪಡೆಯುವುದರಲ್ಲಿ ನೆರವಾಗಬಹುದೆಂದು ನನಗೆ ತೋರುತ್ತದೆ. ಈಗ ಸದ್ಯಕ್ಕೆ ಪ್ರಸಕ್ತ ಸರ್ಕಾರಕ್ಕೆ ಸಂಬಂಧಿಸಿದಂತೆ ಈ ಪ್ರದೇಶಗಳನ್ನು, ಎಲ್ಲ ವ್ಯಾವಹಾರಿಕ ಉದ್ದೇಶಗಳಿಗೂ, ಭಾರತದ ಭೂಪಟದಿಂದ ಅಳಿಸಿಹಾಕಬೇಕು. ಪ್ರಧಾನಮಂತ್ರಿಯವರ ಭಾವಾವೇಶವಿಲ್ಲದ ಭಾಷಣಗಳು ಮತ್ತು ಶಬ್ದಾಡಂಬರದ ಪದಗಳು ಕೇವಲ ಜನರನ್ನು ಭ್ರಮೆಗೊಳಪಡಿಸಲು ಮತ್ತು ಅವರು ನಷ್ಟವನ್ನು ಮರೆಯಲು ಸಹಾಯ ಮಾಡುವ ಉದ್ದೇಶ ಹೊಂದಿವೆ.

(೧೯೫೯ರ ಅಕ್ಟೋಬರ್ ೧೯)



## "ಅಂಗುಲದಿಂದ ಅಥವಾ ಮೈಲಿಯಿಂದ"

ಎಂದಿನಂತೆಯೇ, ಚೀಣಾ ಆಕ್ರಮಣ ವಿಷಯದಲ್ಲಿ ವ್ಯವಹರಿಸುವಾಗ ಪ್ರಧಾನಮಂತ್ರಿಗಳು ತಮ್ಮ ಸ್ವಾಭಾವಿಕ ದುರ್ಬಲ ಮನೋವೃತ್ತಿಯನ್ನು ಪ್ರದರ್ಶಿಸಿದ್ದಾರೆ. ಈಶಾನ್ಯ ಭಾಗದ ಸೀಮಾರೇಖೆಯ ರಕ್ಷಣೆಯನ್ನು ಮಿಲಿಟರಿ ಅಧೀನಕ್ಕೆ ಹಸ್ತಾಂತರಿಸಿತ್ತೆಂದೂ, ಮತ್ತು ಭಾರತವು ತನ್ನ ಭೂಪ್ರದೇಶದ ಪ್ರತಿಯೊಂದು ಅಂಗುಲವನ್ನೂ ರಕ್ಷಿಸಿಕೊಳ್ಳುತ್ತದೆ ಎಂದು ಅವರು ಮೊದಲು ಘೋಷಿಸಿದಾಗ ಉನ್ನತವಾದ ಭರವಸೆಗಳು ಮೂಡಿದ್ದವು. ಸರ್ಕಾರವು ತಮ್ಮ ಕರ್ತವ್ಯದ ಬಗೆಗೆ ಪ್ರಜ್ಞೆಯುಳ್ಳವರಾಗಿದ್ದಾರೆಂದೂ ಮತ್ತು ದೇಶದ ಸಮಗ್ರತೆ ಮತ್ತು ಗೌರವಗಳು ಇವರ ಕೈಲಿ ಸುರಕ್ಷಿತವಾಗಿರುತ್ತವೆಂದು ಪರಿಗಣಿಸಬಹುದೆಂದೂ ಜನರು ಭಾವಿಸಿದರು. ಆದರೆ, ಪ್ರಧಾನಮಂತ್ರಿಗಳು ನಂತರ ನೀಡಿದ ಹೇಳಿಕೆಗಳು ಈ ಎಲ್ಲ ಭರವಸೆಗಳನ್ನೂ ಹುಸಿಮಾಡಿವೆ. ತಮ್ಮ ಮಾಸಿಕ ಪತ್ರಿಕಾಗೋಷ್ಠಿಯಲ್ಲಿಯೂ ಮತ್ತು ಸಂಸತ್ತಿನ ಎರಡೂ ಸದನಗಳ ಚರ್ಚೆಯಲ್ಲಿಯೂ. ಈ ಪ್ರಶ್ನೆಗೆ ಸಂಬಂಧಿಸಿದಂತೆ ಅವರು ಸಾರ್ವತ್ರಿಕವಾಗಿ ಅಭಿವ್ಯಕ್ತಿ ನೀಡಿದ್ದಾರೆ. ಈ ಸಂದರ್ಭಗಳಲ್ಲಿ ಕ್ರಮೇಣ ಅವರು ತಮ್ಮ ಮೊದಲಿನ ಅಭಿಪ್ರಾಯದಿಂದ ಹಿಮ್ಮೆಟ್ಟಿದರು. ಅವರು ಸುಂದರವಾದ ಹಾಗೂ ಪತ್ರಿಕೆಗಳಲ್ಲಿ ತಲೆಬರಹಗಳಾಗಬಲ್ಲಂತಹ ಪದಗುಚ್ಛಗುಚ್ಛಗಳನ್ನು ಬಳಸಿದ್ದರೂ ಸಹಿತ ಅವರ ಭಾಷಣಗಳು ದಯನೀಯವಾಗಿವೆ ಹಾಗೂ ಜುಗುಪ್ಸೆ ಹುಟ್ಟಿಸುವಂತಹವಾಗಿದೆ. ಅವರ ಒಂದೊಂದು ದಿಟ್ಟ ಹೇಳಿಕೆಗೂ ಸೇರಿಸಲ್ಪಟ್ಟಿರುವ ವಾಕ್ಯಾಂಶಗಳು, ಷರತ್ತುಗಳು, ಇವೆಲ್ಲವನ್ನೂ, ನಿಷ್ಪ್ರಯೋಜಕವೂ ಪ್ರಭಾವಹೀನವೂ ಆಗುವಂತೆ ಮಾಡಿ ಯಾವುದೇ ವ್ಯಾವಹಾರಿಕ ಮೌಲ್ಯವಿರದಂತೆ ಮಾಡುತ್ತವೆ.

ಗಡಿವಿವಾದದ ಮಾತುಕತೆಗಳಿಗೆ ಮುನ್ನ ಆಕ್ರಮಣ ಪೂರ್ವದಲ್ಲಿದ್ದ ಯಥಾಸ್ಥಿತಿಯನ್ನು ಮುಂದುರಿಸಬೇಕೆಂದು ಪ್ರಧಾನಮಂತ್ರಿಗಳು ರಾಜ್ಯಸಭೆಯಲ್ಲಿ ಹೇಳಿದರು. ಆದರೆ, ಭಾರತ ಸರ್ಕಾರವು ಕಳೆದುಕೊಂಡಿರುವ ತನ್ನ ಭೂಪ್ರದೇಶಗಳನ್ನು ಮರುಸ್ವಾಧೀನಪಡಿಸಿಕೊಳ್ಳಲು ಚೀನಾ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದರ ಹೊರತು ಬೇರೆ ಯಾವ ಕ್ರಮಗಳನ್ನೂ ತೆಗೆದುಕೊಳ್ಳುವುದಿಲ್ಲವೆಂದು ಅವರು ಲೋಕಸಭೆಯಲ್ಲಿ ಸ್ಪಷ್ಟವಾಗಿ ಹೇಳಿದರು. ಚೀನಾದ ಆಕ್ರಮಣಕ್ಕೆ ಮುನ್ನ ಇದ್ದಂತಹ ಯಥಾಸ್ಥಿತಿಯು ಖಂಡಿತವಾಗಿಯೂ ಪುನಃಸ್ವಾಧೀನಕ್ಕೆ ಬರುವುದಿಲ್ಲ. ಒಂದು

ಕಡೆ ಭಾರತವು ತನ್ನ ನಿಲುವಿನಲ್ಲಿ ದೃಢವಾಗಿತ್ತೆಂದು ಪ್ರಧಾನಮಂತ್ರಿಯವರು ಘೋಷಿಸುತ್ತಿದ್ದರೆ ಮತ್ತೊಂದು ಕಡೆ ಲೋಕಸಭೆಯಲ್ಲಿ ಅವರೇ ತಾಳ್ಮೆ, ಸಹನೆಗಳ ಸಲಹೆ ನೀಡುತ್ತಾ, ದೃಢತೆಗೂ ಮಿತಿಗಳಿರುತ್ತವೆಂದೂ ಹೇಳುತ್ತಿದ್ದರು. ನಿಜವಾಗಿಯೂ, ಎಲ್ಲ ವಿಷಯಗಳಿಗೂ ಮಿತಿಗಳಿವೆ. ಆದರೆ, ದುರದೃಷ್ಟವಶಾತ್ ಪ್ರಧಾನಮಂತ್ರಿಗಳ ಪರಿಮಿತಿಗಳು ಆರಂಭಬಿಂದುವಿನಲ್ಲಿಯೇ ನಿಂತಿವೆ. ಯಾರು ಕೂಡ ಚೀನಾದೊಡನೆ ಪೂರ್ಣ ಪ್ರಮಾಣದ ಯುದ್ಧ ಸಲಹೆ ಮಾಡಿಲ್ಲ. ಆದರೆ, ಒಳನುಗ್ಗಿ ಬಂದವರನ್ನು ಬಲವಂತವಾಗಿ ಹೊರದೂಡಲಾದರೂ ನಾವು ಸ್ವಲ್ಪ ಬಲವನ್ನು ಉಪಯೋಗಿಸಬಾರದೇ? ಕಮ್ಯುನಿಸ್ಟರು ಈ ಆಕ್ರಮಣಕಾರೀ ಒಳನುಗ್ಗುವಿಕೆಯನ್ನು ಸಣ್ಣ, ಕ್ಷುಲ್ಲಕ ಘಟನೆಗಳು ಎಂದು ವರ್ಣಿಸಿದ್ದಾರೆ. ಹೌದು, ಭಾರತ ಸರ್ಕಾರ ಕೂಡ ಕೇವಲ ಪ್ರತೀಕಾರದ ಮತ್ತು ಪುನಃಸ್ವಾಧೀನದ ಕ್ರಮಗಳಾಗಿ ಇಂತಹವೇ ಸಣ್ಣ, ಕ್ಷುಲ್ಲಕ ಘಟನೆಗಳಲ್ಲಿ ತೊಡಗಿಕೊಂಡರೆ, ಅದು ಯಾರಿಗೂ ಆತಂಕವನ್ನು ಉಂಟುಮಾಡಬಾರದು. ಭಾರತೀಯ ಪ್ರದೇಶದ ಮೈಲುಗಟ್ಟಲೆ ಭೂಮಿಯನ್ನು ಅಕ್ರಮವಾಗಿ ವಶಪಡಿಸಿಕೊಂಡಿದ್ದರೂ, ಬಹಳ ಉನ್ನತವಾದ ಮತ್ತು ಪ್ರಶಂಸನೀಯವಾದ ಪಂಚಶೀಲತತ್ತ್ವಗಳಲ್ಲಿ ಚೀನಾದ ನಂಬಿಕೆಯು ಸ್ವಲ್ಪವೂ ಅಲುಗಾಡಿಲ್ಲ. ಹಾಗಿದ್ದ ಮೇಲೆ, ಆಹ್ವಾನಿಸದೆಯೇ ಬಂದಿರುವ ಚೀನಾದ ಸ್ನೇಹಿತರನ್ನು ಸುಮ್ಮನೆ ಹಿಮಾಲಯದ ಮತ್ತೊಂದು ಪಾರ್ಶ್ವಕ್ಕೆ ತಳ್ಳಿದರೆ, ಈ ಆದರ್ಶದಿಂದ, ನಮ್ಮ ಮಟ್ಟಿಗೆ ಬೇರೆ ಮಾರ್ಗ, ಅಡ್ಡದಾರಿ ಹಿಡಿದಂತೆ ಹೇಗಾಗುತ್ತದೆ? ಅದು ಹಾಗಾಗುವುದಿಲ್ಲ. ಅದು ಯುದ್ಧವೆಂದು ಅರ್ಥ ಬರುವುದಿಲ್ಲ. ಪಂಚಶೀಲವನ್ನು ಉಳಿಸಿ ರಕ್ಷಿಸಿಕೊಳ್ಳಬೇಕಾದರೆ, ಮ್ಯಾಕ್‌ಮಹೊನ್ ರೇಖೆಯಿಂದ ಅದು ಅಡ್ಡದಾರಿ ಹಿಡಿಯಲು ಬಿಡಬಾರದು. ಪಂಚಶೀಲದ ವಿಧಿಸೂತ್ರಗಳು ನಮ್ಮ ಸ್ನೇಹಿತರ ತಪ್ಪುಗಳನ್ನು ಅಚಾತುರ್ಯಗಳನ್ನು ತಿದ್ದಬೇಕೆಂದು ಒತ್ತಾಯಿಸುತ್ತವೆ.

ಇಂತಹದೊಂದು ವ್ಯಾವಹಾರಿಕ ಕ್ರಮವನ್ನು ತೆಗೆದುಕೊಳ್ಳುವ ಬದಲು ವಾಸ್ತವವಾಗಿ, ಚೀನಾದ ಸೈನ್ಯದ ಸಿಬ್ಬಂದಿಯು ಭಾರತದ ಪ್ರದೇಶಕ್ಕೆ ಬರುವ ಮೊದಲು ಇಲ್ಲದಿದ್ದ 'ವ್ಯಾಜ್ಯ'ವನ್ನು ಬಗೆ ಹರಿಸಲು ಪಂಡಿತ ನೆಹರೂ ಅವರು ಎಲ್ಲ ರೀತಿಯ ಸಲಹೆಗಳನ್ನು ನೀಡಿದ್ದಾರೆ. ಅವರು ಪಂಚಾಯಿತಿಯ ಮಧ್ಯಸ್ಥಿಕೆಯನ್ನು ಕೂಡ ಒಪ್ಪಿಕೊಳ್ಳುವ ಮಟ್ಟಕ್ಕೆ ತಲುಪಿದ್ದಾರೆ. ಇದಕ್ಕೆ ಮುಂಚೆ, ಅಂತಾರಾಷ್ಟ್ರೀಯ ವ್ಯಾಜ್ಯಗಳಲ್ಲಿ ಪಂಚಾಯಿತಿ ಮಧ್ಯಸ್ಥಿಕೆಗಳ ಸಲಹೆಯನ್ನು ಪಂಡಿತ ನೆಹರು ನಿರಾಕರಿಸಿದ್ದುದನ್ನು ಇಲ್ಲಿ ಸ್ಮರಿಸಬಹುದು. ದೇಶದ ಹಿತಾಸಕ್ತಿ ಮತ್ತು ಗೌರವಗಳು, ಇಲ್ಲದಿರುವ ಗಡಿ ವಿವಾದದ ಪರಿಹಾರವನ್ನೆಲ್ಲ ಒತ್ತಾಯದಿಂದ ಕೇಳುವುದು, ಇದುವರೆಗೂ ಸಂಬಂಧಿಸಿದಂತೆ–, ಆದರೆ ಚೀನಾದಿಂದ ನಡೆದಿರುವ ಗಡಿಯ ಉಲ್ಲಂಘನೆಗಳ ಬಗೆಗೆ.



ಆದಾಗ್ಯೂ, ಪ್ರಧಾನಮಂತ್ರಿಗಳು ದೇಶದ ಪ್ರಾದೇಶಿಕ ಸಮಗ್ರತೆಯ ಬಗೆಗೆ ಹೆಚ್ಚೇನೂ ವಿಶೇಷವಾಗಿ ಕಾಳಜಿ ಹೊಂದಿಲ್ಲವೆಂದು ತೋರುತ್ತದೆ. ಒಂದು ಮೈಲಿಯಷ್ಟು ಪ್ರದೇಶ ನಮ್ಮಲ್ಲಿ ಉಳಿಯುತ್ತದೆಯೋ ಅಥವಾ ಚೀನಾಕ್ಕೆ ಸೇರುತ್ತದೆಯೋ ಎಂಬುದು ಅಷ್ಟೇನು ಗಮನಾರ್ಹವಾದದ್ದಲ್ಲ ಎಂದು ಅವರು ಹೇಳುವಾಗ, ಪ್ರಾದೇಶಿಕ ಸಮಗ್ರತೆಯ ಸಮರ್ಪಕವಾದ ಮತ್ತು ದೇಶಪ್ರೇಮದ ಗ್ರಹಿಕೆಯ ಕೊರತೆಯನ್ನು ಪ್ರದರ್ಶಿಸುತ್ತಾರೆ. ಸಮಗ್ರತೆ ಎನ್ನುವುದನ್ನು ಹಂತಹಂತವಾಗಿ ಅಳೆಯುವುದಕ್ಕಾಗಲೀ, ರಕ್ಷಿಸುವುದಕ್ಕಾಗಲೀ ಆಗುವುದಿಲ್ಲ. "ಪಥದಿಂದ ಹೊರಗಿರುವುದು, ಎಂದರೆ ಪಥದಿಂದ ಹೊರಗೆ ಅಷ್ಟೇ, ಒಂದು ಅಂಗುಲವಾಗಬಹುದು ಅಥವಾ ಒಂದು ಮೈಲಿಯಾಗಬಹುದು" ಇದು ಷಾವಿಯನ್ ಅಭಿವ್ಯಕ್ತಿ ಮತ್ತು ನಂಬಿಕೆ ಹಾಗೂ ಪ್ರಾಮಾಣಿಕತೆಗಳ ಇಂತಹ ಸಂದರ್ಭಗಳಲ್ಲಿ ಒಂದು ಅಂಗುಲ ಕೂಡ ಗಮನಾರ್ಹವಾಗುತ್ತದೆ ಎನ್ನುವುದಕ್ಕೆ ಹೆಚ್ಚು ಒತ್ತುನೀಡುತ್ತದೆ. ಗಡಿ ಪ್ರದೇಶದಲ್ಲಿ ಕೇವಲ ಮೈಲಿಗಳ ಹೊಂದಾಣಿಕೆ ಮಾಡಿಕೊಳ್ಳಲು ಸಿದ್ಧನಿದ್ದೇನೆ, ಆದರೆ, ಚೀನಾದ ಭೂಪಟದಲ್ಲಿ ತೋರಿಸಿರುವ ವಿಶಾಲ ಭೂಪ್ರದೇಶದ ತುಣುಕನ್ನಲ್ಲ ಎಂದು ಹೇಳುವಾಗ ಪಂಡಿತ ನೆಹರೂ ತೀರಾ ದುರ್ಬಲ ವಾದವನ್ನು ಮಂಡಿಸುತ್ತಾರೆ. ಒಂದೇ ಒಂದು ಮೈಲಿಯನ್ನು ರಕ್ಷಿಸಲು ಸಾಧ್ಯವಿಲ್ಲದ ವ್ಯಕ್ತಿಯು ನೂರಾರು ಮೈಲಿಗಳನ್ನು ಹೇಗೆ ತಾನೇ ರಕ್ಷಿಸಲು ಸಾಧ್ಯ? ಪುರಾತನ ಗಾದೆಯ" ಪೆನ್ನಿಗಳಿಗೆ ಗಮನ ನೀಡಿದರೆ, ಪೌಂಡ್ ತನಗೆ ತಾನೇ ಉಳಿಯುತ್ತದೆ" ಎನ್ನುವ ಮಾತುಗಳು, ಈ ಸಂದರ್ಭಕ್ಕೆ ಅನ್ವಯವಾಗುತ್ತದೆ. ನಮ್ಮ ಭೂಪ್ರದೇಶದ ಬಗೆಗೆ ಪಂಡಿತ ನೆಹರೂ ಇಷ್ಟು ಹಗುರವಾಗಿ ಮಾತನಾಡಿದರೆ, ಭಾರತದ ಪವಿತ್ರ ಭೂಮಿಯನ್ನು ಅತಿಕ್ರಮಣದಿಂದ ಕಬಳಿಸಿ ಅಪವಿತ್ರಗೊಳಿಸುವವರಿಂದ ರಕ್ಷಿಸುವುದಕ್ಕಾಗಿ, ದೇಶದ ರಕ್ಷಣಾದಳದಲ್ಲಿರುವ ವೀರ ಯೋಧರು ತಮ್ಮ ಪ್ರಾಣಗಳನ್ನು ಬಲಿದಾನ ಮಾಡಬೇಕೆಂದು ಅವರು ಹೇಗೆ ನಿರೀಕ್ಷಿಸುತ್ತಾರೆ ಮತ್ತು ಹೋರಾಟಕ್ಕೆ, ಯುದ್ಧಕ್ಕೆ ಇಳಿದಾಗ ಯಾರೂ ಕೇವಲ ಕೆಲವು ಮೈಲಿಗಳಿಗೋಸ್ಕರ ಹೋರಾಡುವುದಿಲ್ಲ. ಆದರೆ ನಮ್ಮ ಭೂಪ್ರದೇಶದ ಒಂದೊಂದು ತುಣುಕಿಗೂ ಹೋರಾಡುತ್ತಾರೆ. ಅಂಗುಲ ಅಂಗುಲವಾಗಿ ನೀವು ಗಳಿಸುತ್ತೀರಿ ಅಥವಾ ಕಳೆದುಕೊಳ್ಳುತ್ತೀರಿ. ಎರಡನೆಯ ಮಹಾಯುದ್ಧದ ಅವಧಿಯಲ್ಲಿ ರಷ್ಯನ್ನರು ಸ್ಟಾಲಿನ್‌ಗ್ರಾಡ್‌ನ ಪ್ರತಿಯೊಂದು ಕೋಣೆಯಲ್ಲಿ, ಮಹಡಿಯಲ್ಲಿ ಕಟ್ಟಡಗಳಲ್ಲಿ, ಜರ್ಮನರೊಡನೆ, ಕಣಕಣದಲ್ಲಿಯೂ ಹೋರಾಡಿದರು. ತಿಂಗಳುಗಳತನಕ ಯುದ್ಧ ಮುಂದುವರೆಯಿತು. ಆದರೂ ಜರ್ಮನರು ನಗರವನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಪ್ರಧಾನಮಂತ್ರಿಯವರ ಇಂತಹ ಹೇಳಿಕೆಗಳಿಂದ ಸ್ಫೂರ್ತಿಗೊಂಡಿದ್ದಕ್ಕಿಂತಲೂ ಸಂಪೂರ್ಣವಾಗಿ ವಿಭಿನ್ನವಾದಂತಹ ದೃಷ್ಟಿಕೋನದ ಅವಶ್ಯಕತೆಯಿದೆ ಅಂತಹದೊಂದು ಮನೋಧರ್ಮಕ್ಕೆ. ಪ್ರಧಾನಮಂತ್ರಿಯವರು

ಹೇಳಿದ "ಭೂಪ್ರದೇಶದ ಕೆಲವು ಮೈಲಿಗಳು, ಈ ಪಾರ್ಶ್ವಕ್ಕೆ ಅಥವಾ ಆ ಪಾರ್ಶ್ವಕ್ಕೆ ಆದರೆ, ಅದರಿಂದ ಭಾರತಕ್ಕಾಗಲೀ, ಚೀಣಾಕ್ಕಾಗಲೀ ಯಾವುದೇ ಬಾಧಕವಿಲ್ಲ" ಎನ್ನುವಂತಹ ಮಾತುಗಳಲ್ಲ. ಚೀನಾಕ್ಕೆ ಸಂಬಂಧಿಸಿದಂತೆ, ಅದು ಇದುವರೆಗೂ ಪ್ರಕಟಿಸಿರುವಂತೆ, ಅದಕ್ಕೆ ಈ 'ಮೈಲಿಗಳು' ಬಹಳ ಅರ್ಥಪೂರ್ಣ, ಮುಖ್ಯ ಎನಿಸುತ್ತವೆ. ಹಾಗಿಲ್ಲದಿದ್ದರೆ ನಮ್ಮ ಪ್ರಧಾನಮಂತ್ರಿಗಳು "ಬಂಜರು ಮತ್ತು ವಾಸಯೋಗ್ಯವಲ್ಲದ್ದು ಒಂದು ಎಸಳು ಹುಲ್ಲು ಕೂಡ ಬೆಳೆಯುವುದಿಲ್ಲ" ಎನ್ನುವ ಪ್ರದೇಶಗಳನ್ನು ಚೀಣಾ ಏಕೆ ಆಕ್ರಮಿಸಿಕೊಳ್ಳಬೇಕಾಗಿತ್ತು?

ಮೂರು ಘಟ್ಟಗಳಲ್ಲಿ ಆಕ್ರಮಣ ನಡೆದಿದೆ. ಅವೆಂದರೆ, NEFA ನಲ್ಲಿ ಲೋಂಗ್‌ಜು, U.P. ನಲ್ಲಿ ಬಾರಾಹೋಟಿ ಮತ್ತು ಕಾಶ್ಮೀರದಲ್ಲಿ ಲಡಾಖ್. ಪ್ರಧಾನಮಂತ್ರಿಗಳು ಇದುವರೆಗೂ ಕೇವಲ ಒಂದೇ ಒಂದು ಮಾತ್ರ ನಿಷ್ಕೃಷ್ಟವಾಗಿ ಗುರುತಿಸಿದ್ದಾರೆ. ಲಡಾಖ್‌ಗೆ ಸಂಬಂಧಿಸಿದಂತೆ, ಅದನ್ನು ಪ್ರಾಯೇಣ, ಕಾರ್ಯತಃ ಆ ಪ್ರದೇಶವನ್ನು ಚೀನಾಕ್ಕೆ ಒಪ್ಪಿಸಿಬಿಟ್ಟಿದ್ದಾರೆ. ಎರಡು ವರ್ಷಗಳ ಹಿಂದೆಯೇ ಆಕ್ರಮಣ ನಡೆದಿತ್ತಾದರೂ, ಆ ಸವಾಲನ್ನು ಎದುರಿಸಲು ಪ್ರಧಾನಮಂತ್ರಿಯವರು ಯಾವುದೇ ವ್ಯಾವಹಾರಿಕ ಕ್ರಮಗಳನ್ನು ತೆಗೆದುಕೊಂಡಿಲ್ಲ! ತಮ್ಮ ಈಚಿನ ಹೇಳಿಕೆಗಳಲ್ಲಿ ಕೂಡ ಆ ವಿಷಯವನ್ನು ಬೆಂಬತ್ತಿ ಮುಂದುವರಿಸುವ ಯಾವುದೇ ಅಭಿಲಾಷೆಯನ್ನು ಅವರು ತೋರಿಸಿಲ್ಲ. ಎದರು ಪಕ್ಷದ ಅರ್ಧಕ್ಕೂ ಹೆಚ್ಚಿನ ಬೇಡಿಕೆಗಳಿಗೆ ಒಪ್ಪಿದನಂತರವೇ, ಅವರು ಯಾವಾಗಲೂ, ಸಂಧಾನದ ಮಾತುಕತೆಗಳನ್ನು ಆರಂಭಿಸುತ್ತಾರೆ. ಈ ರೀತಿಯ ಪ್ರತಿಬಂಧದಿಂದಾಗಿ ಭಾರತವು ಯಾವಾಗಲೂ ನಷ್ಟಹೊಂದುತ್ತದೆ. ಗಡಿ ಉಲ್ಲಂಘನೆಯನ್ನೂ, ಸಂಧಾನ ಮಾತುಕತೆಗಳು ಮುಂದುವರೆಸುವುದೆಂದರೆ, ನಮಗೆ ಅದು ನಷ್ಟವಾಗುತ್ತದೆ. ಕ್ರಮೇಣ ಕೆಲವು ವರ್ಷಗಳ ಅವಧಿಯಲ್ಲಿ, ನಾವು ಶಾಂತಿಮಾರ್ಗದಿಂದ, ಕೇವಲ ಗಜಗಳು ಅಥವಾ ಒಂದೆರಡು ಮೈಲಿಗಳನ್ನಲ್ಲ, ಆದರೆ ನಮ್ಮ ಭೂಪ್ರದೇಶದ ವಿಶಾಲ ತುಣುಕುಗಳನ್ನು ವಿಸ್ತರಣವಾದಿ ನೆರೆಯವನಿಗೆ, ಕಳೆದುಕೊಳ್ಳುತ್ತೇವೆ. ಈ ರೀತಿಯ "ಶಾಂತಿಯುತ ಒಪ್ಪಂದ" ಗಳಿಗೆ ಸ್ವಲ್ಪವಾದರೂ ಮಿತಿಯಿರಲಿ. ಏಕೆಂದರೆ, ಇದು ನಮಗೆ ಯುದ್ಧದಷ್ಟೇ ಬೆಲೆ ತೆರುವಂತಹದು ಮತ್ತು ದುಬಾರಿಯಾದದ್ದೂ ಆಗುತ್ತದೆ.

ಪಂಡಿತ ನೆಹರೂ ಅವರ ಮನೋಧರ್ಮದಲ್ಲಿನ ಬದಲಾವಣೆಯು ಅವರಿಗೆ ಸ್ವಭಾವಸಹಜವಾದ ದೌರ್ಬಲ್ಯ, ಪುಕ್ಕಲುತನಗಳಿಗೆ ಅನುಗುಣವಾಗಿದ್ದರೂ, ಅದು ನೇರವಾಗಿ, ಚೀನಾದ ಕಠಿಣಗೊಂಡ ಮನೋಧರ್ಮದ ಪರಿಣಾಮವಾಗಿದೆ. ಟಿಬೆಟಿನ ವಿಷಯದಲ್ಲಿ ಕೂಡ ನಾವು ಇದನ್ನು ನೋಡಿದೆವು. ಚೀನಾದ ಸೈನ್ಯಗಳು ಟಿಬೆಟ್‌ನ್ನು ಕ್ಷಿಪ್ರವಾಗಿ ಆಕ್ರಮಿಸಿದಾಗ ಪಂಡಿತ ನೆಹರೂ, ಚೀನಾದ ಕಾರ್ಯವನ್ನು ಖಂಡಿಸಿದರು. ಅವರ ಮೊದಲ ಹಾಗೂ ಉದಾತ್ತ ಪ್ರತಿಕ್ರಿಯೆಯು ಅಭಿವ್ಯಕ್ತಿಯನ್ನು ಕಂಡಿತು.



ಆದರೆ ಚೀನಿಯರು ಸೆಟೆದುನಿಂತು ಬಿಗಿ ಮನೋಭಾವ ತಾಳಿದಾಗ, ಅವರು ದಲೈಲಾಮರನ್ನು ನಡುನೀರಿನಲ್ಲಿ ಕೈಬಿಟ್ಟರು. ಮತ್ತು ಈಗ ಈ ವಿಷಯವನ್ನು U.N.O. ಗೆ ತೆಗೆದುಕೊಂಡು ಹೋಗುವ ದಲೈಲಾಮಾರ ಪ್ರಯತ್ನಗಳಿಗೂ ಕೂಡ ವಿರೋಧ ತೋರಿದ್ದಾರೆ. ನಮ್ಮದೇ ಗಡಿಯ ಸಂದರ್ಭಗಳಲ್ಲಿಯೂ ಕೂಡ, ಹೋರಾಟ, ಸಂಘರ್ಷಗಳ ಬಗೆಗೆ ಭಯಂಕರವಾಗಿ ಹೆದರುವ ಪಂಡಿತ ನೆಹರೂ ಚೀನೀಯರ ಮನೋಭಾವವು ಕಠಿಣಗೊಳ್ಳುವುದು ಹೆಚ್ಚಿದಂತೆಲ್ಲಾ, ಕೆಳಕ್ಕಿಳಿದಿದ್ದಾರೆ.

ಮೊದಲ ಯಶಸ್ಸನ್ನು ಸಾಧಿಸಿದ ನಂತರ U.S.S.R.ನ ಮಾರ್ಗದರ್ಶನದಲ್ಲಿ ಚೀನಿಯರು ಕೂಡ, ಗಡಿ ವಿವಾದಗಳ ಶಾಂತಿಯುತ ಒಪ್ಪಂದದ ನಿರ್ಣಯವನ್ನು ಮಂಡಿಸಿದ್ದಾರೆ. ಆದರೆ, ಅವರು ಭಾರತವು ಚೀನಾದ ಭೂಪ್ರದೇಶಗಳನ್ನು ಆಕ್ರಮಿಸಿಕೊಂಡಿದೆ ಎಂದು ಆಪಾದಿಸಿರುವುದಲ್ಲದೇ, ಭಾರತವು ಆ ಪ್ರದೇಶಗಳಿಂದ ಹಿಂದಿರುಗಬೇಕೆಂದೂ ಹಕ್ಕೊತ್ತಾಯ ಮಾಡಿದ್ದಾರೆ. ದುರದೃಷ್ಟವಶಾತ್, ಚೀನಾವು ನಿರ್ದಿಷ್ಟವಾಗಿ ಯಾವ ಪ್ರದೇಶಗಳ ಬಗೆಗೆ ಹೇಳುತ್ತಿದೆಯೆನ್ನುವುದು ಈ ದೇಶದಲ್ಲಿ ಯಾರಿಗೂ ತಿಳಿದಿಲ್ಲ. ಚೀನಾದ ಕಮ್ಯುನಿಸ್ಟ್ ಸರ್ಕಾರವು ಖಂಡಿತವಾಗಿಯೂ ತನ್ನದೇ ಹಕ್ಕೊತ್ತಾಯಗಳ ಮೇಲೆ, ಲಾಭದ ವ್ಯಾಪಾರ ಕುದುರಿಸಿಕೊಳ್ಳಲು ಪ್ರಯತ್ನಿಸುತ್ತದೆ.

ಪೀಕಿಂಗ್‌ನಲ್ಲಿನ ಕೇಂದ್ರ ಕಾಂಗ್ರೆಸ್‌ನ ನಿರ್ಣಯ ಕೂಡ, ಚೀನಾ ವಿರೋಧೀ ಚಳುವಳಿ ಎಂದು ಹೇಳಲಾಗುವುದನ್ನು ಭಾರತದ ಬಲಪಕ್ಷಗಳು ನಿಲ್ಲಿಸಬೇಕೆಂದು ಒತ್ತಾಯಮಾಡುತ್ತದೆ. ಚೀನಾದ ಆಕ್ರಮಣಕಾರೀ ತಂತ್ರಗಳ ಮತ್ತು ಕೃತ್ಯಗಳ ಬಗೆಗೆ, ನಮ್ಮ ಕಾಳಜಿ, ಆತಂಕಗಳಿಗೆ ಧ್ವನಿಕೊಡುವುದನ್ನು ಚೀನಾವಿರುದ್ಧದ ಚಳವಳಿ ಎಂದು ಪರಿಗಣಿಸುವುದಾದರೆ, ಕಮ್ಯುನಿಸ್ಟರನ್ನು ಹೊರತುಪಡಿಸಿ, ಸಂಪೂರ್ಣ ಭಾರತವು ಇದರಲ್ಲಿ ಭಾಗವಹಿಸುತ್ತಿದೆ. ಇನ್ನೂ ಅದಕ್ಕೆ ಗೊತ್ತಿರದಿದ್ದಲ್ಲಿ, ಭಾರತವು ಪ್ರಜಾಸತ್ತಾತ್ಮಕ ಮತ್ತು ಕಮ್ಯುನಿಸ್ಟ್ ಅಲ್ಲದ ರಾಷ್ಟ್ರ ಎನ್ನುವುದನ್ನು ಚೀನಾಕ್ಕೆ ಹೇಳಬೇಕಾಗಿದೆ. ಇಲ್ಲಿರುವ ಜನರಿಗೆ ಪ್ರತಿಕ್ರಿಯಿಸುವ ಹಕ್ಕು ಇದೆ ಮತ್ತು ಜನರು ತೋರುವ ಮಾರ್ಗದಲ್ಲಿ ಸರ್ಕಾರವು ನಡೆಯಬೇಕೆಂದು ನಿರೀಕ್ಷಿಸಲಾಗುತ್ತದೆ. ಇದು 'ಜನರ ಸರ್ಕಾರವು' ಜನರಿಗೆ ಮಾರ್ಗದರ್ಶನ ಮಾಡುವ ಚೀನಾದ ಪದ್ಧತಿ, ಅಭ್ಯಾಸಗಳಿಗೆ ವಿರುದ್ಧವಾದದ್ದು. ಪೀಕಿಂಗ್ ಸರ್ಕಾರವು, ಕಮ್ಯುನಿಸ್ಟರನ್ನು ಹೊರತುಪಡಿಸಿ ಇದೇ ದೇಶವನ್ನು 'ಬಲಪಂಥೀಯ' ಎಂದು ಕರೆದಿದೆ. ತಮ್ಮನ್ನು ತಾವು ಎಡಪಂಥೀಯರು ಎಂದು ಹೆಮ್ಮೆಪಟ್ಟುಕೊಂಡು, ಎಡಪಂಥೀಯರ ಐಕ್ಯತೆ ಎಂಬ ಹೆಸರಿನಲ್ಲಿ ಕಮ್ಯುನಿಸ್ಟರ ಶೋಷಣೆಯ ನಡೆಗೆ ಬಲಿಯಾಗುವವರು, ಈಗ ನಡುನೀರಿನಲ್ಲಿ ಬಿಡಲ್ಪಟ್ಟಿದ್ದಾರೆ. ಸ್ವದೇಶದ ಬಗೆಗೆ ನಂಬಿಕೆದ್ರೋಹ, ವಿಶ್ವಾಸಘಾತಕತನಗಳೇ ಎಡಪಂಥದ ನಿಜಬಣ್ಣ ಎಂದು ತೋರುತ್ತದೆ.

ಪ್ರಾಸಂಗಿಕವಾಗಿ, ಕಾಮ್ರೇಡ್ ಡಾಂಗೆಯವರು ಲೋಕಸಭೆಯ ತಮ್ಮ ಭಾಷಣದಲ್ಲಿ ಚೀನಾದ ಕೇಂದ್ರ ಕಾಂಗ್ರೆಸ್‌ನ ನಿರ್ಣಯವನ್ನು ಅದರ ಸಂಪೂರ್ಣ ವಿವರ ಮತ್ತು ವಿಷಯಗಳೊಡನೆ ಮುಂದಾಗಿಯೇ ಸೂಚಿಸಿದರು. ಆದರೆ ಇದು ಪ್ರಾಸಂಗಿಕವಾಗಿಯೇ? ಅವರು ಆ ನಿರ್ಣಯವನ್ನು ಮಂಜೂರು ಮಾಡುವ ಮೊದಲೇ ನಮಗೆ ಚೀನಿಯರ ದೃಷ್ಟಿಕೋನ ಅಭಿಪ್ರಾಯಗಳು ತಿಳಿದಿದ್ದವು.

(೧೯೫೯ರ ಸೆಪ್ಟೆಂಬರ್ ೨೧)



## ಚೀಣಾದ ಬೆದರಿಕೆ ಮತ್ತು ಸಿ.ಪಿ.ಐ. (C.P.I)

ಟಿಬೆಟ್ಟಿನಲ್ಲಿನ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ, ಕಾರ್ಯನೀತಿಯ ಬಗೆಗೆ ಪ್ರಧಾನಮಂತ್ರಿಯವರ ಇತ್ತೀಚಿನ ಖಚಿತ ಘೋಷಣೆಯು ಅತ್ಯಂತ ನಿರಾಶಾದಾಯಕವಾಗಿದೆ. ಅದು ಎಲ್ಲ ನೀರಿಕ್ಷೆಗಳನ್ನೂ ಹುಸಿಗೊಳಿಸಿದೆ ಹಾಗೂ, ಟಿಬೆಟ್‌ನ ಸ್ವಾತಂತ್ರ್ಯವನ್ನೂ ಮತ್ತು ಭಾರತದ ಹಿತಾಸಕ್ತಿಗಳನ್ನು ಕಡೆಗಣಿಸಿ, ಅಪಕಾರ ಮಾಡುತ್ತದೆ. ದಲೈಲಾಮ ಮತ್ತು ನಿರಾಶ್ರಿತರ ಗುಂಪಿಗೆ ಆಶ್ರಯ ನೀಡುವ ಮೂಲಕ ನಾವು ಟಿಬೆಟ್‌ನ ಸ್ವಾತಂತ್ರ್ಯವನ್ನೂ ಗಳಿಸಲಾರೆವು ಅಥವಾ ಭಾರತದ ಜನರ ಭಾವನೆಗಳನ್ನು ತೃಪ್ತಿಪಡಿಸಲಾರೆವು. ಈ ವಿಷಯದಲ್ಲಿ ಮತ್ತಷ್ಟು ಧೈರ್ಯವಾದ, ದಿಟ್ಟವಾದ ನೀತಿಯನ್ನು ಅಳವಡಿಸಿಕೊಳ್ಳಬೇಕಾಗಿದೆ. ಚೀನಾ ಸಾಮ್ರಾಜ್ಯವಾದಿಗಳಿಗೆ ವಿರುದ್ಧವಾಗಿ ತಮ್ಮ ಜನರ ಸಂಘರ್ಷದಲ್ಲಿ, ದಲೈಲಾಮ ಅವರ ಜನರನ್ನು ನಿರ್ದೇಶಿಸಲು ಮತ್ತು ಮುನ್ನಡೆಸಲು ಅನುಮತಿಸಬೇಕು.

ಭಾರತದ ಕಮ್ಯುನಿಸ್ಟ್ ಪಕ್ಷವು, ಚೀನಾದೊಡನೆ ಭಾರತದ ಜನತೆಯ ಶಾಂತಿ ಮತ್ತು ಸ್ನೇಹದ ಸಹಜಭಾವನೆಗಳನ್ನು ತನ್ನ ಲಾಭಕ್ಕೆ ಉಪಯೋಗಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಟಿಬೆಟ್‌ನ ಜನರ ಧೈರ್ಯದ ದ್ರೋಹ ಮತ್ತು ಕಮ್ಯುನಿಸ್ಟ್ ಚೀನಾ ಆಕ್ರಮಣದ ಸಮರ್ಥನೆ ಇವುಗಳೇ ಭಾರತ ಚೀನಾ ಸ್ನೇಹದ ಬೆಲೆಯಾಗುವುದಾದರೆ, ಅದು ಅಂತಹ ತ್ಯಾಗಕ್ಕೆ ಅರ್ಹವಲ್ಲ. ನಿಜ ಹೇಳಬೇಕೆಂದರೆ, ಏಷ್ಯಾದಲ್ಲಿ ಶಾಶ್ವತ ಶಾಂತಿಗಾಗಿಯೂ ಮತ್ತು ಭಾರತ ಚೀನಾದ ನಡುವೆ ಸ್ನೇಹಕ್ಕಾಗಿಯೂ ಸ್ವತಂತ್ರ ಟಿಬೆಟಿನ ಅಸ್ತಿತ್ವ ಅತ್ಯವಶ್ಯಕವಾದದ್ದು. ಪರಸ್ಪರ ವಿಶ್ವಾಸ ಮತ್ತು ಸೌಹಾರ್ದಗಳಿಗೆ ಸಹಕಾರಿಯಾಗುವಂತಹ ವಾತಾವರಣವು ಇರಲು ಸಾಧ್ಯವೇ ಇಲ್ಲ. ಕಾರಣ, ಚೀನಾವು ಈಗಾಗಲೇ ತನ್ನ ಕಿಡಿಗೇಡಿತನದ ನಕ್ಷಾಶಾಸ್ತ್ರದಿಂದ ನಮ್ಮ ಮನಸ್ಸುಗಳಲ್ಲಿ ಗಂಭೀರವಾದ ಸಂದೇಹಗಳನ್ನು ಸೃಷ್ಟಿಸಿದೆ. ಭಾರತದ ಸಮರ್ಥ ನೀತಿಯು ಟಿಬೆಟ್‌ನವರು ತಮ್ಮ ಕಳೆದುಹೋದ ಸ್ವಾತಂತ್ರ್ಯವನ್ನು ಮತ್ತೆ ಗಳಿಸಲು ನೆರವಾಗುವುದಲ್ಲದೇ, ಚೀನಾದ ಆಕ್ರಮಣಕಾರೀ ತಂತ್ರಗಳಿಗೂ ಅದು ತಡೆಯೊಡ್ಡುವುದು. ಭಾರತದಿಂದ, ವಿಧೇಯ, ತಗ್ಗಿಬಗ್ಗಿ ನಡೆಯುವ ಮನೋಭಾವವನ್ನು ಕೇಳುವವರು, 'ಎರಡು ಸಮಾನ ರಾಷ್ಟ್ರಗಳ ನಡುವಿನ ಗೌರವಪೂರ್ಣ ಸಂಬಂಧಗಳಿಗಾಗಿ ಬೆಂಬಲ ನೀಡುವುದಿಲ್ಲ. ಆದರೆ, ಆದರೆ ಅಂತಿಮವಾಗಿ ಕಮ್ಯುನಿಸ್ಟ್

ಪ್ರಪಂಚದಿಂದ ಭಾರತವು ಗುಲಾಮಗಿರಿಗೆ ಒಳಪಡುವುದನ್ನು ಬೆಂಬಲಿಸುತ್ತಾರೆ.'

ಟಿಬೆಟಿನ ಬೆಳವಣಿಗೆಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ಭಾರತೀಯ ಕಮ್ಯುನಿಸ್ಟ್ ಪಕ್ಷವು ಅನುಸರಿಸಿದ ನೀತಿಗಳು ಆ ಪಕ್ಷದ ಅ-ಭಾರತೀಯ ಸ್ವಭಾವವನ್ನು ಮತ್ತೆ ಬಯಲುಮಾಡಿದೆ. ಟಿಬೆಟಿನ ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಗಳು ಯಾವುದಾದರೂ ಆಗಿರಲಿ, ಅವುಗಳನ್ನು ಬಲಪೂರ್ವಕವಾಗಿ ಬದಲಾಯಿಸಲು, ಹೊರಗಿನವರಿಗೆ ಯಾವ ಹಕ್ಕೂ ಇಲ್ಲ. ದಲೈಲಾಮಾರ ಸರ್ಕಾರದ ಪ್ರತಿಗಾಮಿ ಸ್ವಭಾವದ ಆರೋಪದ ಮೇಲೆ, ಚೀನಾ ಟಿಬೆಟಿನ ಆಕ್ರಮಣವನ್ನು, ಭಾರತದ ಕಮ್ಯುನಿಸ್ಟರು, ಚೀನಾವನ್ನು ಪ್ರತಿಧ್ವನಿಸುತ್ತಾ ಸಮರ್ಥಿಸುವುದಾದರೆ, ಅವರು ಅಂತಹ ಆಕ್ರಮಣವನ್ನು ಭಾರತದಲ್ಲಿ ಕೂಡ ಸ್ವಾಗತಿಸುಬಹುದು, ಅದೂ ಅವರು ಭಾರತದ ಸರ್ಕಾರವು 'ಪ್ರತಿಗಾಮಿ'ಯಾಗಿ ಮುಂದುವರಿಯುತ್ತಿದೆಯೆಂದು ಅವರು ಭಾವಿಸಿದರೆ. ಅದು ತೀರಾ ನೀಚತನದ ದ್ರೋಹವಲ್ಲದೆ ಮತ್ತೇನೂ ಅಲ್ಲ. ಎಂದಾದರೂ ಒಂದು ದಿನ ಭಾರತದ ಸ್ವಾತಂತ್ರ್ಯ ಮತ್ತು ಭದ್ರತೆಗಳನ್ನು ತೀವ್ರವಾಗಿ ಬುಡಮೇಲು ಮಾಡುವಂತಹ ಸಾಮರ್ಥ್ಯವನ್ನು ಅವರು ಬೆಳೆಸಿಕೊಳ್ಳಲು ಬಿಡದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ದೇಶಾಭಿಮಾನಿ ಭಾರತೀಯನ ಕರ್ತವ್ಯವಾಗಿದೆ.

(೧೯೫೯ರ ಮೇ ೨೫)



## ಟಿಬೆಟ್‌ನ ಸ್ವಾತಂತ್ರ್ಯದಲ್ಲಿ ಭಾರತದ ಹೊಣೆ

ದಲೈಲಾ ಅವರು ಮಸ್ಸೂರಿಯನ್ನು ತಲುಪಿ ಬಿರ್ಲಾ ನಿವಾಸ್‌ನಲ್ಲಿ ನೆಮ್ಮದಿಯಾಗಿ ನೆಲೆ ನಿಂತಿರುವುದರಿಂದಾಗಿ ಈಗ, ಅವರು ಚೀನಾದ ಕಮ್ಯುನಿಸ್ಟ್ ಸೇನೆಯ ಹಿಡಿತದಿಂದ ತಪ್ಪಿಸಿಕೊಂಡು ಬಂದುದರಿಂದ ಆರಂಭಿಸಿ, ಭಾರತದಲ್ಲಿ ಆಶ್ರಯಕ್ಕಾಗಿ ನಾಟಕೀಯ ಮತ್ತು ಕೋಲಾಹಲಕರವಾದ ಪ್ರಸಂಗದ ಭಾಗವು ಮುಗಿದಿದೆ. ಮುಸ್ಸೌರಿಗೆ ಹೋಗುವ ಹಾದಿಯಲ್ಲಿ ಅವರು ಹೋದ ಕಡೆಯಲ್ಲೆಲ್ಲಾ ಜನರು ಅವರಿಗೆ ಸ್ನೇಹ ಮತ್ತು ಉತ್ಸಾಹಪೂರ್ಣ ಸ್ವಾಗತ ಕೋರಿದರು, ಟಿಬೆಟ್‌ನ ನಾಯಕನ ಬಗೆಗೆ ಭಾರತೀಯರು ಹೊಂದಿರುವ, ಈ ಮಹತ್ತಾದ ಪ್ರೇಮ ಮತ್ತು ಗೌರವಕ್ಕಾಗಿ ಮತ್ತು ಅದನ್ನು ಸ್ವಯಂಪ್ರೇರಿತ ಉತ್ಸಾಹಪೂರ್ಣವಾಗಿ ವ್ಯಕ್ತಪಡಿಸಿರುವುದಕ್ಕಾಗಿ ಅವರು ಭಾವಪೂರ್ಣರಾಗಿದ್ದಾರೆ. ಜನರ ಈ ಉತ್ಸಾಹಕ್ಕೆ ಕಾರಣ ಭಾರತೀಯ ಆತ್ಮಗಳ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಭಾವನೆಗಳು ಮತ್ತು ದಲೈಲಾಮಾರವರ ಕೇಸರಿವಸ್ತ್ರಗಳು ಎಂದು ಹಲವರು ವ್ಯಾಖ್ಯಾನಿಸಬಹುದು. ವಿಷಯದ ಈ ಅಂಶವನ್ನು ಅಲಕ್ಷಿಸಲೂ ಸಾಧ್ಯವಿಲ್ಲ ಅಥವಾ ಕನಿಷ್ಠ ಪ್ರಮಾಣಕ್ಕೆ ಇಳಿಸಲೂ ಸಾಧ್ಯವಿಲ್ಲ. ಆದರೆ ಜನರಿಗೆ ಅಂತಹ ತೀವ್ರವಾದ ಭಾವನೆಗಳಿರುವುದಕ್ಕೆ ಕಾರಣ, ಮುಖ್ಯವಾಗಿ ಶಾಂತಿಯುತವಾದ ಟಿಬೆಟ್‌ನ ಜನರ ಜಗೆಗೆ ನಮ್ಮ ಕಾಳಜಿ ಮತ್ತು ಕಮ್ಯುನಿಸ್ಟರು ವರ್ತಿಸಿರುವ ರೀತಿಯ ಬಗ್ಗೆ ನಮ್ಮ ಆಳವಾದ ಅಸಮಾಧಾನ, ಕ್ರೋಧಗಳು. ಅಲ್ಲದೇ ನಮ್ಮ ಸುರಕ್ಷತೆ ಮತ್ತು ಭದ್ರತೆಯ ಬಗೆಗೆ, ಇಣುಕುತ್ತಿರುವ, ಪ್ರಚ್ಛನ್ನ ಅಪಾಯದದ ಬಗೆಗೆ ಹೆಚ್ಚುತ್ತಿರುವ ಅರಿವು ಕೂಡ ಜನರು ಸಾವಿರ ಸಾವಿರಗಟ್ಟಳೆಯಲ್ಲಿ, ನಮ್ಮದೇ ಸಂಕಷ್ಟಗಳೊಡನೆ, ಆಪ್ತವಾಗಿ ಸಂಬಂಧಿಸಿದಂತೆ ಯಾತನೆಗಳನ್ನು ಅನುಭವಿಸಿರುವ ವ್ಯಕ್ತಿಯ ಸುತ್ತಲೂ ಗುಂಪುಗೂಡುವಂತೆ ಮಾಡಿರಲೂಬಹುದು. ಆದ್ದರಿಂದ, ಜನರು ಕಾತರರಾಗಿ, ದಲೈಲಾಮಾ ಮತ್ತು ಭಾರತ ಸರ್ಕಾರದ ಕ್ರಮಗಳ ಬಗೆಗೆ ನಿರೀಕ್ಷಿಸುವುದು ಸಹಜವೇ ಆಗಿದೆ.

ದಲೈಲಾಮಾರವರನ್ನು ತಾವು ಭೇಟಿ ಮಾಡುವುದಕ್ಕೂ ಮೊದಲೇ ಪ್ರಧಾನಮಂತ್ರಿಗಳು ದಲೈಲಾಮಾ ಅವರು ಯಾವ ರೀತಿ ವರ್ತಿಸಬೇಕೆಂದು ತಾವು ಬಯಸುವುದಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, ದಲೈಲಾಮಾ ಅವರು ತಮ್ಮ ಧಾರ್ಮಿಕ

ಚಟುವಟಿಕೆಗಳನ್ನು ನಡೆಸುವುದಕ್ಕೆ ಸ್ವತಂತ್ರರಿರುತ್ತಾರೆಂದು, ಪಂಡಿತ ನೆಹರೂ ಹೇಳಿದರು, "ಇತರ ರಾಷ್ಟ್ರಗಳಿಗೆ ತೊಂದರೆಯನ್ನುಂಟುಮಾಡುವ ವಿದೇಶೀಯರ ಚಟುವಟಿಕೆಗಳನ್ನು ಮಿತಿಗೊಳಿಸುವುದು, ಯಾವುದೇ ಒಂದು ದೇಶದ ಸಾಧಾರಣ ಹಕ್ಕು ಆಗಿತ್ತು" ಎಂದು ಅವರು ಅಭಿಪ್ರಾಯಪಟ್ಟರು. ನಾವು ಅವಶ್ಯಕವೆಂದು ಬಯಸುವ ನಿರ್ಬಂಧಗಳನ್ನು ಹೇರುವ ನಮ್ಮ ಹಕ್ಕನ್ನು ಯಾರು ಕೂಡ ವಾಸ್ತವವಾಗಿ, ಇಚ್ಛಿಸುವುದಿಲ್ಲ, ಅಥವಾ ಪ್ರಶ್ನಿಸುವುದಿಲ್ಲ. ಆದರೆ ನಮಗೆ ಇರುವ ಅವಶ್ಯಕತೆಯಾದರೂ ಏನು ಎನ್ನುವುದು ಮುಖ್ಯ ಪ್ರಶ್ನೆಯಾಗಿದೆ.

ಈ ವಿಷಯದಲ್ಲಿ ಭಾರತವು ಅತ್ಯಂತ ನಾಜೂಕದ ಪರಿಸ್ಥಿತಿಯೊಡನೆ ಮುಖಾಮುಖಿಯಾಗಿದೆ. ಚೀಣಾವು ಮಿತ್ರರಾಷ್ಟ್ರವಾಗಿದೆ. ಹಿಂದೆಯೂ ನಾವು ಮಿತ್ರರಾಗಿದ್ದೆವು ಮತ್ತು ಭವಿಷ್ಯದಲ್ಲಿಯೂ ಹಾಗೆಯೇ ಮುಂದುವರೆಯಲು ಬಯಸುತ್ತೇವೆ. ಜೊತೆಗೆ, ಎರಡೂ ರಾಷ್ಟ್ರಗಳ ಸಾಂಸ್ಕೃತಿಕ ಪರಂಪರೆ ಮತ್ತು ವಿಶ್ವ ಶಾಂತಿಯನ್ನು ರಕ್ಷಿಸುವ ಅಗತ್ಯತೆ ಕೂಡ ಅದನ್ನೇ ಬೇಡುತ್ತದೆ. ಯು.ಎಸ್.ಎ ಮತ್ತು ಯು.ಎಸ್.ಎಸ್.ಆರ್. ಗಳ ಜೊತೆಗೆ ಅಗಾಧ ಸಂಪನ್ಮೂಲಗಳನ್ನು ಮತ್ತು ಅಪಾರ ಜನಸಂಖ್ಯೆಯನ್ನು ಹೊಂದಿದ್ದು ಅತೀ ಶೀಘ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಚೀನಾ ಮತ್ತು ಭಾರತಗಳು ಬರುವ ವರ್ಷಗಳಲ್ಲಿ "ವಿಶ್ವಶಾಂತಿಯ ವಿಶೇಷವಾಗಿ ಏಷಿಯಾದಲ್ಲಿನ ಶಾಂತಿಯ ಹಣೆಬರಹಗಳನ್ನು ಬಹುಮಟ್ಟಿಗೆ ರೂಪಿಸುತ್ತವೆ" ಎಂದು ಪ್ರಧಾನಮಂತ್ರಿಗಳು ವಾದಿಸುತ್ತಾರೆ. ಆದ್ದರಿಂದ ಏಷ್ಯಾದ ಈ ಎರಡು ರಾಷ್ಟ್ರಗಳ ನಡುವೆ ಸ್ನೇಹ ಪರಂಪರೆಯು ಅಸ್ತಿತ್ವದಲ್ಲಿದ್ದರೆ, ಈ ಗುರಿಯನ್ನು ಬಹುಮಟ್ಟಿಗೆ ಸಾಧಿಸಬಹುದಾಗಿದೆ ಅವರು ಭಾವಿಸುತ್ತಾರೆ.

ಈ ಸ್ನೇಹಪರಂಪರೆಯನ್ನು ಸ್ಥಾಪಿಸುವುದಕ್ಕಾಗಿ ಅವರು ಕೆಲವು ಬಾರಿ ಚೀನಾವನ್ನು ಸಂತೋಷಗೊಳಿಸಲು ಮತ್ತು ತುಷ್ಟೀಕರಿಸಲು ನಿಯಮ ಮೀರಿ ಹೋಗುತ್ತಾರೆ. ಹೊಸದಾಗಿ ರೂಪುಗೊಂಡು ಚೀನಾದ ಕಮ್ಯುನಿಸ್ಟ್ ಸರ್ಕಾರವು ಯಾವುದೇ ಮಿತ್ರರಿಲ್ಲದೇ ಬೇರ್ಪಡಿಸಲ್ಪಟ್ಟಿದ್ದಾಗ, ಮತ್ತು ಚೀನಾದ ಕಮ್ಯುನಿಸ್ಟ್ ಪಕ್ಷದೊಳಗೆ ವ್ಯವಸ್ಥಿತವಾಗಿ ಸೇರಿಕೊಂಡಿದ್ದ ವಿದೇಶೀ ದಳ್ಳಾಳಿಗಳ ಒಂದು ದಂಡಿನ ಸರ್ಕಾರ ಅದು ಎಂದು ಬಹಳ ಜನರು ಭಾವಿಸಿದ್ದ, ಮತ್ತು ಚೀನಾ-ಜಪಾನ್ ನಡುವಿನ ಯುದ್ಧದ ವಿಶಿಷ್ಟ ಸಂದರ್ಭಗಳೆಂದು ಸಹಾಯ ಪಡೆದ, ಚಿಯಾಂಗ್-ಕೈ-ಷೇಕ್‌ರ ಭ್ರಷ್ಟ ಹಾಗೂ ಅದಕ್ಷ ಆಡಳಿತ ಹಾಗೂ ಅನೇಕ ಯುದ್ಧತಂತ್ರಗಳಿಂದ, ಜನಗಳ ಹೆಸರಿನಲ್ಲಿ ಯಶಸ್ವಿಯಾಗಿ ಹಕ್ಕಿಲ್ಲದೆಯೂ ಅಧಿಕಾರವನ್ನು ಆಕ್ರಮಿಸಿಕೊಂಡ ಸರ್ಕಾರಕ್ಕೆ ಮನ್ನಣೆ ನೀಡಲು ಮತ್ತು ಅದನ್ನು ಪ್ರಪಂಚಕ್ಕೆ ಶಿಫಾರಸು ಮಾಡಲು ಪಂಡಿತ ನೆಹರೂ ಮುಂದೆ ಬಂದರು. ಪಾಶ್ಚಿಮಾತ್ಯ ಶಕ್ತಿಬಣದ ಅನೇಕ ರಾಷ್ಟ್ರಗಳು ವಿರೋಧಿಸಿದಾಗ್ಯೂ, ಯು.ಎನ್.ಓ. ದಲ್ಲಿ ಮತ್ತು ವಿಶ್ವದ ಇತರ ಅನೇಕ ಸಂಸ್ಥೆಗಳಲ್ಲಿ



ಭಾರತದ ಪ್ರತಿನಿಧಿಗಳನ್ನು ಕಾಲಮಾನದ ಭೇದವಿಲ್ಲದೆ ಕಮ್ಯುನಿಸ್ಟ್ ಚೀನಾಕ್ಕೆ ಸ್ಥಾನ ನೀಡಲು ಒತ್ತಾಯಿಸುವಂತೆ ಅನುಮತಿಸಲಾಯಿತು. ಇವೆಲ್ಲವನ್ನೂ ಸ್ನೇಹಶಿಲವಾದ ನೆರೆರಾಷ್ಟ್ರದ ಉತ್ತಮ ಕಾರಣದ ಬೆಂಬಲಕ್ಕಾಗಿ, ಪರೋಪಕಾರದ ನೆಲೆಯಿಂದಾಗಿ ಮಾಡಲಾಯಿತು.

ಆದರೆ, ಈ ಪರೋಪಕಾರ ನಿಸ್ವಾರ್ಥತೆಗಳು ಕೇವಲ ಭಾರತಕ್ಕೆ ನಿಷ್ಠವಾಗುವಂತೆ ಮಾತ್ರ ಆಚರಿಸಬೇಕಾದ ತತ್ತ್ವಗಳೆಂಬುದನ್ನು ಟಿಬೆಟ್ ಪ್ರಸಂಗವು ಪರಿಚಯಿಸಿತು. ವಿದೇಶಾಂಗ ನೀತಿಯನ್ನು ಅನುಸರಿಸುವುದರಲ್ಲಿ ಖ್ಯಾತಿ ಪಡೆಯದಿರುವ ಪಂಡಿತ ನೆಹರೂ ತಿಳಿವಿನಿಂದ ಅರಳಿದ ರಾಷ್ಟ್ರದ ಸ್ವಹಿತಾಸಕ್ತಿಗಳನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ವಿಷತುಂಬಿದ ಹೊಸ ಪಂಚಶೀಲ ಸಿದ್ಧಾಂತವನ್ನು ಪ್ರಪಂಚದಲ್ಲೆಲ್ಲಾ ಬಾಜಾಬಜಂತ್ರಿಯಿಂದೆಂಬಂತೆ ಘೋಷಿಸಿದಾಗ ಅವರು ತೀರಾ ಸುಲಭವಾಗಿ ಟಿಬೆಟ್‌ನ ಮೇಲಿನ ಸರ್ವಾಧಿಕಾರದ ಬಗೆಗಿನ ಚೀನಾದ ಚಾಲಾಕಿ-ಭ್ರಮಾತ್ಮಕ ಸೂಕ್ತ ಸಿದ್ಧಾಂತಗಳಿಗೆ ಬಲಿಬಿದ್ದರು. ಬಹುಶಃ, ವಿಕೃತ ರಾಕ್ಷಸಾಕಾರದ ಡ್ರ್ಯಾಗನ್ ಅನ್ನು ಸಂತುಷ್ಟಿಪಡಿಸುವುದಕ್ಕಾಗಿ ಉದಾತ್ತ ಧ್ಯೇಯವನ್ನು ತೀರಾ ಹೀನವಾಗಿ ಬಿಟ್ಟುಕೊಟ್ಟಿದ್ದ ಪಂಡಿತ ನೆಹರೂ ಅವರ ಅಂತಃ ಸಾಕ್ಷಿಯನ್ನು ಸಮಾಧಾನಗೊಳಿಸಲು ಯಾವುದಾದರೂ ಒಂದು ನೆಪವನ್ನು ಒದಗಿಸುವ ಸಲುವಾಗಿ ಚೀನಾ ಟಿಬೆಟ್‌ನ ಸ್ವಾಯತ್ತತೆಯನ್ನು ಉಳಿಸಲು ಒಪ್ಪಿತ್ತು. ಆದರೆ ಸರ್ವಾಧಿಕಾರೀ ಆಡಳಿತದೊಡನೆ ಒಂದಾದ ಸರ್ಕಾರವು ಬಹುಕಾಲದತನಕ ಮೋಸಗೊಳಿಸುವ ಮುಖವಾಡವನ್ನು ಉಳಿಸಿಕೊಳ್ಳಲು ಸಾಧ್ಯವಿರಲಿಲ್ಲ. ಚೀನೀಯರು ತಮ್ಮ "ಸುಧಾರಣೆ" ಎನಿಸಿಕೊಳ್ಳುವುದನ್ನು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಪರಿಚಯಿಸಿದಾಗ, ಟಿಬೆಟಿನ ಸ್ವಾಯತ್ತತೆಯು ಸಂಪೂರ್ಣವಾಗಿ ಕಣಕಣವಾಗಿ ಪುಡಿಯಾಯಿತು. ಅತ್ಯಂತ ಅಗಾಧವಾದ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಶ್ರದ್ಧೆ ಹೊಂದಿದ್ದ ಜನರು ಸಂಪೂರ್ಣವಾಗಿ ಭೌತಿಕವಾದಿಗಳಾದ ವಿದೇಶೀಯರ ಪದ್ಧತಿ ಸಂಪ್ರದಾಯಗಳೊಡನೆ ಹೇಗೆ ತಾನೇ ಸಹಬಾಳ್ವೆ ನಡೆಸಲು ಸಾಧ್ಯವಾಗುತ್ತಿತ್ತು? ಜನರ ಸಾಮುದಾಯಿಕ ಅಭಿವೃದ್ಧಿಯ ಪರಿಸರದಿಂದ ದೂರವೇ ಉಳಿದ ಚೀನಿಯರು ಟಿಬೆಟಿನಲ್ಲಿ ಸ್ವಾಯತ್ತ ಆಡಳಿತವನ್ನು ಕೂಡ ನಿರ್ವಹಿಸಲಾಗಲಿಲ್ಲ. ಕಚೇರಿಗಳು ಮತ್ತು ಇಲಾಖೆಗಳಲ್ಲಿ ಚೀನಿಯರೇ ನೇಮಿಸಲ್ಪಟ್ಟಿದ್ದರು ಮತ್ತು ಸಹಕಾರ ಕೃಷಿಯನ್ನು ಪರಿಚಯಿಸುವ ಮೂಲಕ ವಿಸ್ತಾರವಾದ ಬಯಲು ಪ್ರದೇಶಗಳನ್ನು ವಶಕ್ಕೆ ತೆಗೆದುಕೊಂಡು ಹೆಚ್ಚುವರಿಯಾದ ಚೀನೀಯರ ಜನಸಂಖ್ಯೆಯನ್ನು ಅಲ್ಲಿ ನೆಲೆಗೊಳಿಸಲಾಯಿತು. ಈ ರೀತಿಯ ಪರಿಸ್ಥಿತಿಯಲ್ಲಿ ಘರ್ಷಣೆಯ ಅನಿವಾರ್ಯವಾಗಿತ್ತು.

ಭಾರತ ಸರ್ಕಾರ ಏನು ಮಾಡಬೇಕು? ಇದೊಂದು ವಿವಾದಾತ್ಮಕ ವಿಷಯ. ದಲೈಲಾಮಾರವರಿಗೆ ಆಶ್ರಯವನ್ನು ಕೊಟ್ಟಿರುವುದರಿಂದಾಗಿ ತಾವು ತೃಪ್ತರಾಗಿದ್ದರೆಂದು

ಪಂಡಿತ ನೆಹರೂ ಅವರ ಇತ್ತೀಚಿನ ಹೇಳಿಕೆಗಳು ತೋರಿಸುತ್ತವೆ. ಅವರು ಧಾರ್ಮಿಕ ಮುಖಂಡರಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರೆಸಬಹುದು. ಆದರೆ ಅದು ಉದ್ದೇಶಿತ ಕಾರ್ಯ ಸಾಧಿಸಲು ಸಮರ್ಥವಾಗುವುದೇ? ಭಾರತದ ಭೂಮಿಯ ಮೇಲೆ ಆಕ್ರಮಣಕಾರರ ಮಿಲಿಟರಿ ಶಕ್ತಿಯು ಇದ್ದರೂ ದೇಶದ ಭೂಪ್ರದೇಶದ ವಿಶಿಷ್ಟತೆಯಿಂದಾಗಿ ಕ್ರಿಯಾಶಾಲಿಗಳಾಗಿರುವುದನ್ನು ಮುಂದುವರಿಸುತ್ತಾರೆಂದು ಪರಿಗಣಿಸಲಾಗಿರುವ ಟಿಬೆಟಿನ ಗೆರಿಲ್ಲಾಗಳಿಗೆ ಭಾರತೀಯ ನೆಲದ ಮೇಲೆ ದಲೈಲಾಮಾರ ಉಪಸ್ಥಿತಿಯೇ ಕೇಂದ್ರಬಿಂದು ಆಕರ್ಷಣೆಯ ಕೇಂದ್ರವಾಗುತ್ತದೆ. ಇದು ಪೀಕಿಂಗ್‌ಗೆ ಸ್ವಲ್ಪ ತಲೆನೋವಾಗಿ ಪರಿಣಮಿಸುತ್ತದೆ. ಆದರೆ ಸದಾ ಸ್ವಾತಂತ್ರ್ಯವನ್ನು, ಸ್ವಯಮಾಧಿಕಾರವನ್ನು ಟಿಬೆಟಿನ ಜನರಿಗೆ ಗಳಿಸಿಕೊಡಲು ಸಾಧ್ಯವಾಗುವುದಿಲ್ಲ.

ಭಾರತಕ್ಕೆ ಈ ವಿಷಯದಲ್ಲಿ ತನ್ನದೇ ಆದ ಹೊಣೆಯಿದೆ. ಟಿಬೆಟಿನ ಸ್ವಾಯುತ್ತತೆಯು ನಮಗೆ ಅತ್ಯಂತ ಮುಖ್ಯವಾಗಿದೆ. ನಾವು ಅದನ್ನು ಗಳಿಸಿಕೊಡಲಾಗದಿದ್ದಲ್ಲಿ ಕೇವಲ ನಮ್ಮ ಸ್ವಾತಂತ್ರ್ಯ ಮತ್ತು ಸಮಗ್ರತೆಗಳಿಗೆ ಅಪಾಯದ ಹೆದರಿಕೆಯಲ್ಲದೇ ನಮಗೆ ಅಲಿಪ್ತ ನೀತಿಯನ್ನು ಮುಂದುವರಿಸುವುದು ಬಹುಮಟ್ಟಿಗೆ ಸಾಧ್ಯವಾಗಲಾರದು. ಇಲ್ಲಿಯವರೆಗೂ ಚೀನಾದ ಉದ್ದೇಶಗಳ ಬಗೆಗೆ ಹೇಳಬೇಕೆಂದರೆ ಅದು ಚೆನ್ನಾಗಿ ತಿಳಿದಿದೆ. ಈಗಾಗಲೇ ಚೀನವು "ಭೂಪಟದ ಆಕ್ರಮಣವನ್ನು" ಮಾಡಿ ಆಗಿದೆ. ಚೀನಾ ಮತ್ತು ಇತರ ಏಷ್ಯಾ ರಾಷ್ಟ್ರಗಳ ನಡುವಿನ ಎಲ್ಲೆಯನ್ನು ಗೊತ್ತುಪಡಿಸದಿರುವ ಗಡಿಗಳನ್ನು ಶಾಂತಿಯುತ ಸಂಧಾನಗಳಿಂದ ತೀರ್ಮಾನ ಮಾಡಿಕೊಳ್ಳಬೇಕೆಂಬ ಸಲಹೆಯೊಡನೆ ಈಗ ಚೌಎನ್ ಲಾಯ್ ಮುಂದೆ ಬಂದಿದ್ದಾರೆಂದು ವರದಿಯಾಗಿದೆ. ಭಾರತ ಮತ್ತು ಟಿಬೆಟಿನ ಗಡಿರೇಖೆಯನ್ನು ರೂಪಿಸುವ ಮ್ಯಾಕ್‌ಮಹೋನ್ ರೇಖೆಯನ್ನು ಚೀನಾ ಖಂಡಿತವಾಗಿಯೂ ಮನ್ನಿಸುವುದಿಲ್ಲ. ಎರಡೂ ದೇಶಗಳ ನಡುವೆ ವೈಮನಸ್ಯದ ಬೀಜಗಳನ್ನು ಬಿತ್ತಿದ್ದು ಆಗಿ ಹೋಗಿದೆ ಮತ್ತು ಯಾವುದೇ ಸಮಯದಲ್ಲಾದರೂ ಭಾರತದ ಗ್ರಾಮಗಳನ್ನು ಲೂಟಿ ಮಾಡುವಂತೆ ಚೀನಾದ ಜನರ ಸರ್ಕಾರವು ತನ್ನ "ಸ್ವಾತಂತ್ರ್ಯಗೊಳಿಸುವ" ಗುಂಪಿಗೆ ನಿರ್ದೇಶನ ನೀಡಬಹುದಾಗಿದೆ. ಅಲ್ಮೋರ ಜಿಲ್ಲೆಯಲ್ಲಿನ ಕೆಲವು ಯುದ್ಧದ ವ್ಯೂಹರಚನೆಯಲ್ಲಿ ಮುಖ್ಯವೆನಿಸುವ ಕೆಲವು ಗ್ರಾಮಗಳನ್ನು ಚೀನೀಯರು ಈಗಾಗಲೇ ಆಕ್ರಮಿಸಿಕೊಂಡಿದ್ದಾರೆಂದು ಪಂಡಿತ ನೆಹರೂ ಒಪ್ಪಿಕೊಂಡಿದ್ದಾರೆ. ಆದರೆ ಇದುವರೆಗೂ ಪಂಡಿತ ನೆಹರೂ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ.

ಭಾರತವಲ್ಲದೇ ನೇಪಾಳ, ಭೂತಾನ ಮತ್ತು ಸಿಕ್ಕಿಂಗಳ ಮೇಲೂ ಚೀನವು ತನ್ನ ದುರಾಸೆಯ ಕಣ್ಣುಗಳನ್ನು ಹಾಕಿದೆ. ಸ್ವತಂತ್ರ ರಾಜ್ಯವಾಗಿರುವ ನೇಪಾಳವು ತನ್ನ ರಕ್ಷಣೆಗೆ ತಾನೇ ಜವಾಬ್ದಾರಿಯುಳ್ಳದಾಗಿದೆ. ನೇಪಾಳದ ಭವಿಷ್ಯದ ರಕ್ಷಣೆಯ ಬಗೆಗೆ ಅದರ ಆಡಳಿತಗಾರರಲ್ಲಿ ಟಿಬೆಟಿನಲ್ಲಿನ ಕಮ್ಯುನಿಸ್ಟ್ ಚೀನಾದ ಚಟುವಟಿಕೆಗಳು



ಗಂಭೀರ ಪ್ರಶ್ನೆಗಳನ್ನು ಮೂಡಿಸಿದೆ. ಕಮ್ಯುನಿಸ್ಟ್ ಆಕ್ರಮಣವಾದ ಸಂದರ್ಭದಲ್ಲಿ ನೇಪಾಳದ ರಾಜರು ಪಂಡಿತ ನೆಹರೂ ಅವರಿಂದ ಸಕ್ರಿಯ ಸಹಾಯ ಪಡೆಯುವ ಭರವಸೆ ಹೊಂದಿದ್ದಾರೆ. ಅದು ವಿಫಲವಾದಲ್ಲಿ ತನ್ನ ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ನೇಪಾಳವು SEATOಅನ್ನು ಸೇರಬೇಕೆನ್ನುವ ತನ್ನ ಅಪೇಕ್ಷೆಯನ್ನು ಪರಿಶೀಲಿಸುವುದು ಎಂದು ಪಾಕಿಸ್ತಾನದ ವಾರ್ತಾಪತ್ರಿಕೆಯಲ್ಲಿ ವರದಿಯಾಗಿರುವ ಸುದ್ದಿಯ ಬಗೆಗೆ ನಾವು ಯಾವುದೇ ಮಹತ್ವವನ್ನಾದರೂ ಕೊಡಬಹುದು. ಈ ವಿಷಯದ ಬಗೆಗೆ ಪಂಡಿತ ನೆಹರೂ ಏನು ಹೇಳುತ್ತಾರೆ? ಮೂಲಭೂತ ಕಾರಣಗಳ ಮೇಲೆ ಮಿಲಿಟರಿ ಒಪ್ಪಂದಗಳಿಗೆ ಅವರ ವಿರೋಧದಿಂದಾಗಿ ನೇಪಾಳಕ್ಕೆ ಯಾವುದೇ ನಿಖರವಾದ ಭರವಸೆಗಳನ್ನು ನೀಡಲು ಅವರು ನಿರಾಕರಿಸಬಹುದು. ಒಂದು ವೇಳೆ ಅವರೇನಾದರೂ ಒಪ್ಪಿಕೊಂಡರೆ ಈಗಾಗಲೇ ಪಾಕಿಸ್ತಾನದ ಆಕ್ರಮಣಕಾರೀ ತಂತ್ರಗಳನ್ನು ಕೂಡ ಎದುರಿಸಲಾರದಷ್ಟು ಕೆಳಮಟ್ಟ ತಲುಪಿರುವ ಮತ್ತು ಅಸಮರ್ಪಕವಾಗಿರುವ ನಮ್ಮ ರಕ್ಷಣಾದಳದ ಸಾಮರ್ಥ್ಯವನ್ನು ಹೆಚ್ಚಿಸುವ ಮಾರ್ಗವನ್ನೂ ಸಾಧನವನ್ನೂ ಅವರು ಪರಿಶೀಲಿಸಬೇಕಾಗಿದೆ.

ನೇಪಾಳವೇನಾದರೂ ಅಮೆರಿಕಾದ ಒಕ್ಕೂಟಕ್ಕೆ ಹೋದರೆ ಅದು ಭಾರತದ ವಿದೇಶಾಂಗ ನೀತಿಯನ್ನು ಮಹತ್ವಪೂರ್ಣವಾಗಿ ಪ್ರಭಾವಿಸುತ್ತದೆ. ಪಂಡಿತ ನೆಹರೂ ಕಮ್ಯುನಿಸ್ಟ್ ಚೀನಾವನ್ನು ಅಸಂತುಷ್ಟಗೊಳಿಸುವಂತಹುದೇನನ್ನೂ ಮಾಡಲು ಇಷ್ಟ ಪಡದೆ ಇರಬಹುದು ಆದರೆ ಚೀನಾದ ಮನೋಭಾವವು ಪಂಡಿತ ನೆಹರೂ ಏನನ್ನು ಹೇಳುತ್ತಾರೆ ಎನ್ನುವುದರ ಮೇಲಲ್ಲ, ಆದರೆ ತನಗೆ ಯಾವುದು ಸೂಕ್ತವಾಗುತ್ತದೆಯೋ ಅದನ್ನು ಅವಲಂಬಿಸಿರುತ್ತದೆ. UAR ಮಾಹಿತಿ ಇಲಾಖೆಯಿಂದ ಪ್ರಕಟಗೊಂಡಿರುವ ಒಂದು ಕಿರುಹೊತ್ತಿಗೆಯ ಸೂಕ್ತವಾಗಿ ಬರೆಯುತ್ತದೆ: "ಬಹಳ ವರ್ಷಗಳ ಹಿಂದೆ ನೆಹರೂ ಮತ್ತು ನಾಸೆರ್ ಬಾನ್‌ಡುಂಗ್ ಚಳುವಳಿಯನ್ನು ಮುನ್ನಡೆಸಿದರು. ಆಗ ಕಮ್ಯುನಿಸ್ಟ್ ವಾರ್ತಾಪತ್ರಿಕೆಗಳು ನೆಹರೂ ಅವರನ್ನೂ ಶಾಂತಿ ಪ್ರಿಯ ಮನುಷ್ಯನೆಂದು ಪ್ರಶಂಸಿಸುತ್ತಿದ್ದವು. ಈಗ ಅವರು ತಮ್ಮ ಉಪಯುಕ್ತತೆಯನ್ನು ಕಳೆದುಕೊಂಡಿದ್ದಾರೆಂದು ಮಾಸ್ಕೋ ಭಾವಿಸುತ್ತದೆ.....

"ಹಾಗಾಗಿ ಭಾರತದಲ್ಲಿ ಕಮ್ಯುನಿಸ್ಟ್ ನೆಲೆಯನ್ನು ಸ್ಥಾಪಿಸುವ ವಿಚಾರವು ಹೊರಹೊಮ್ಮಿದೆ ಮತ್ತು ನೆಹರೂ ಅವರ ವಿರುದ್ಧ ಪ್ರಚಾರವನ್ನು ಹರಡಲು ಸ್ಥಳೀಯ ಕಮ್ಯುನಿಸ್ಟರಿಗೆ ಹಣ ಒದಗಿಸಲಾಗುತ್ತದೆ."

ಈ ಯೋಜನೆಯಿಂದಾಗಿ ಭಾರತದೊಂದಿಗೆ ಸಂಘರ್ಷದ ವಿಷಯಗಳನ್ನು ನಿವಾರಿಸುವಲ್ಲಿ ಪೀಕಿಂಗ್ ಅಷ್ಟೇನೂ ವಿಶಿಷ್ಟ ಆಸಕ್ತಿ ತಳೆದಿರುವಂತೆ ತೋರುವುದಿಲ್ಲ. ಟಿಬೆಟ್ ವಿಷಯದ ಬಗೆಗೆ ಪಂಡಿತ ನೆಹರೂ ಅವರು ವಾಸ್ತವವಾಗಿ ಉದಾಸೀನದ ನೀತಿಯನ್ನು ಅಳವಡಿಸಿಕೊಂಡಿದ್ದಾಗ್ಯೂ ಪೀಕಿಂಗ್ ಭಾರತವನ್ನು ಸಹಾಪರಾಧಿತ್ವಕ್ಕಾಗಿ

ದೂಷಿಸುವುದನ್ನು ಮುಂದುವರಿಸುತ್ತಿದೆ. ಚೀನಾದ ವಾರ್ತಾ ಏಜೆನ್ಸಿಯ ಪ್ರಕಾರ ದಲೈಲಾಮಾರ ಹೇಳಿಕೆಯು ಭಾರತದ ವಿದೇಶ ವ್ಯವಹಾರ ಮಂತ್ರಾಲಯದ ಒಬ್ಬ ಅಧಿಕಾರಿಯಿಂದ ಸಿದ್ಧಪಡಿಸಿರುವುದಾಗಿದೆ. ಕಾಲಿಂಪಾಂಗ್ ವಿದ್ರೋಹದ ಸ್ಥಳ ಎಂಬ ಆಪಾದನೆಯನ್ನು ಅವರು ಹಿಂತೆಗೆದುಕೊಂಡಿಲ್ಲ. ಚೀನಾದವರಿಂದ ಕಾಶ್ಮೀರ ಮತ್ತು ನಾಗಾಲ್ಯಾಂಡ್‌ಗಳ ವಿಷಯವನ್ನು ಎತ್ತುವ ಮುಸುಕಿನ ಮರೆಯ ಬೆದರಿಕೆಯು ಕೂಡ ಒಡ್ಡಲ್ಪಟ್ಟಿತ್ತು. ಚೀನಾವು ತೊಂದರೆ ಮಾಡಲೆಂದೇ ಹೊರಟಿದೆ ಎನ್ನುವುದಕ್ಕೆ ಇದು ನಿದರ್ಶನವಾಗುತ್ತದೆ. ಪಂಡಿತ ನೆಹರೂ ಅವರ ಆಶಯಗಳು ಇದನ್ನು ತಡೆಯಲಾರವು.

ಟಿಬೆಟಿನ ಸ್ವಾಯತ್ತತೆಯ ಬಗೆಗೆ ಸಶಕ್ತ, ಸಮರ್ಥವಾದ ಮತ್ತು ನಿಖರವಾದ ನಿಲುವು ಮಾತ್ರ ಚೀನಾವನ್ನು ಸರಿದಾರಿಗೆ ತರಬಹುದು. ಇಂತಹದೊಂದು ನಿರ್ಧಾರದ ನಿಲುವು ಎರಡೂ ರಾಷ್ಟ್ರಗಳ ನಡುವೆ ಸ್ನೇಹವನ್ನು ಉಳಿಸಿಕೊಳ್ಳುವುದಕ್ಕೂ ಅವಶ್ಯಕವಾಗುತ್ತದೆ. ಪರಸ್ಪರ ವಿಶ್ವಾಸ ಮತ್ತು ಗೌರವ, ಸಮಾನತೆ ಹಾಗೂ ಪರಸ್ಪರ ಪ್ರಯೋಜನಗಳ ನೆಲೆಗಟ್ಟಿನ ಮೇಲೆ ಸ್ನೇಹ ಆಧರಿಸಬೇಕೇ ವಿನಾ ಪರಸ್ಪರರಲ್ಲಿರುವ ವಿಭಿನ್ನತೆ, ಭಿನ್ನಾಭಿಪ್ರಾಯಗಳನ್ನು ಗುರುತಿಸಲು ಇರುವ ಸಂಕೋಚದಿಂದಾಗಿ ಮೂಡುವ ಭಯ, ತಪ್ಪುಗ್ರಹಿಕೆಗಳು ಹಾಗೂ ಮುಕ್ತವಾಗಿ ರಾಜಿ ಮಾಡಿಕೊಳ್ಳಲು ಇರುವ ಹಿಂಜರಿಕೆಗಳ ಮೇಲಲ್ಲ.

ಆದ್ದರಿಂದ, ಸ್ವಾತಂತ್ರ್ಯಕ್ಕಾಗಿ ಹೋರಡುವ ತಮ್ಮ ಜನರನ್ನು ನಿರ್ದೇಶಿಸಲು ದಲೈಲಾಮಾರವರಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸಬೇಕು. ಭಾರತದ ಜನರು ಇದನ್ನೇ ಬಯಸುತ್ತಾರೆ. ಪಂಡಿತ ನೆಹರೂ ಈ ನೀತಿಯನ್ನು ಅನುಸರಿಸುವುದರಲ್ಲಿ ವಿಫಲರಾದರೆ ಅವರು ಈ ವಿಷಯದಲ್ಲಿ ರಾಷ್ಟ್ರೀಯ ಭಾವನೆಗಳು ಮತ್ತು ಜನರ ಮನೋಭಾವಗಳ ಪ್ರವಾಹದಿಂದ ತಮ್ಮನ್ನು ತಾವು ಕತ್ತರಿಸಿಕೊಂಡು ಬೇರೆಯಾಗುತ್ತಾರೆ. ಈ ನೀತಿಯು ಹಲವಾರು ಅಪಾಯಗಳನ್ನೊಳಗೊಂಡಿದೆ ಎನ್ನುವುದನ್ನು ಒಪ್ಪಿಕೊಳ್ಳಲಾಗಿದೆ. ಆದರೆ ನಾವು ಅದನ್ನು ಸಹಿಸಿಕೊಳ್ಳಬೇಕಾಗಿದೆ. ನಾವೇನಾದರೂ ಈಗ ಹಿಂಜರಿದದ್ದೇ ಆದರೆ ಭವಿಷ್ಯದಲ್ಲಿ ನಮ್ಮ ನೀತಿಯಲ್ಲಿ ಮೂಲಭೂತ ಬದಲಾವಣೆಗಳನ್ನೊಳಗೊಂಡಂತೆ ಮತ್ತೂ ಹೆಚ್ಚಿನ ಅಪಾಯಗಳನ್ನು ಎದುರಿಸಬೇಕಾಗುತ್ತದೆ.

(೧೯೫೯ರ ಏಪ್ರಿಲ್ ೨೭)



# ಸಂಸದೀಯ ಪ್ರಜಾಪ್ರಭುತ್ವ
# ಚುನಾವಣಾ ಕಾನೂನಿನ ಬಗ್ಗೆ ಕೆಲವು ಆಲೋಚನೆಗಳು

ದೇಶದಲ್ಲಿನ ಚುನಾವಣಾ ನಿಯಮವನ್ನು ತಿದ್ದುಪಡಿ ಮಾಡುವುದಕ್ಕಾಗಿ ಚುನಾವಣಾ ಆಯೋಗವು ತನ್ನ ಮೂರನೆಯ ಸಾರ್ವತ್ರಿಕ ಚುನಾವಣೆಗಳ ಬಗೆಗಿನ ವರದಿಯಲ್ಲಿ ಅನೇಕ ಶಿಫಾರಸುಗಳನ್ನು ಮಾಡಿದೆ. ಚುನಾವಣಾ ನ್ಯಾಯಮಂಡಳಿಯನ್ನು ರದ್ದುಮಾಡುವಂತೆ ಸಲಹೆ ನೀಡಿ ಸರ್ಕಾರವು ಈಗಾಗಲೇ ಈ ಶಿಫಾರಸುಗಳನ್ನು ಒಪ್ಪಿಕೊಂಡಿದೆ. ಯಾವುದಾದರೂ ಚುನಾವಣೆಗೆ ಸಂಬಂಧಿಸಿದ ಅರ್ಜಿಯಿದ್ದಲ್ಲಿ ಅದು ರಾಜ್ಯದ ಹೈಕೋರ್ಟಿನ ಮುಂದೆ ಮಂಡಿಸಲ್ಪಡಬೇಕು ಮತ್ತು ಖಾಯಂ ನ್ಯಾಯಾಧೀಶದಿಂದ ವಿಚಾರಣೆಗೆ ಒಳಪಡಬೇಕು. ಅರ್ಜಿಗಳ ವಿಲೇವಾರಿಗೆ ತಗಲುತ್ತಿರುವ ಸಮಯವನ್ನು ಈ ಸಲಹೆಯು ಕಡಿಮೆ ಮಾಡಬಹುದು ಆದರೆ ಅದು ಅರ್ಜಿದಾರನ ಮತ್ತು ಪ್ರತಿವಾದಿಯ ಖರ್ಚು–ವೆಚ್ಚಗಳನ್ನು ಹೆಚ್ಚಿಸುತ್ತದೆ. ಶ್ರೇಷ್ಠ ನ್ಯಾಯಾಲಯಗಳಲ್ಲಿ ಈಗಿರುವ ಹೆಚ್ಚು ಕಾರ್ಯಭಾರ ಮತ್ತು ತೀರ್ಮಾನವಾಗದೇ ಉಳಿದಿರುವ ವ್ಯಾಜ್ಯಗಳನ್ನು ಪರಿಗಣಿಸುವಾಗ ಅರ್ಜಿಗಳು ಶೀಘ್ರವಾಗಿ ತೀರ್ಮಾನಿಸಲ್ಪಡುತ್ತವೆ ಎಂಬುವುದೂ ಅನುಮಾನವೇ ಆಗಿದೆ.

ಸರ್ಕಾರವು ಇನ್ನೂ ಇತರ ಶಿಫಾರಸುಗಳನ್ನೂ ಪರಿಶೀಲಿಸಬೇಕಾಗಿದೆ. ಈ ಶಿಫಾರಸುಗಳನ್ನು ಮಾಡುವುದರಲ್ಲಿ ಆಯೋಗವು ಎರಡು ಮುಖ್ಯ ವಿಷಯಗಳನ್ನು ಗಣನೆಗೆ ತಂದುಕೊಂಡು ಅದರಿಂದ ಮಾರ್ಗದರ್ಶನ ಪಡೆದಿದೆ. ಅವೆಂದರೆ ಚುನಾವಣೆಗಳನ್ನು ಕಡಿಮೆ ವೆಚ್ಚದಲ್ಲಿ ಮತ್ತು ನ್ಯಾಯಯುತವಾಗಿ ನಿರ್ವಹಿಸಲು ಸಾಧ್ಯವಾಗುವಂತೆ ಮಾಡುವುದು ಮತ್ತು ಎರಡನೆಯದಾಗಿ, ಪಕ್ಷಗಳ ಸಂಖ್ಯೆಯನ್ನು ಕಡಿಮೆ ಮಾಡಿ ಅಂತಿಮವಾಗಿ ಎರಡು ಪಕ್ಷದ ವ್ಯವಸ್ಥೆಯು ಹೊರಹೊಮ್ಮುವಂತೆ ಮಾಡುವುದು. ಮೊದಲನೆಯ ಉದ್ದೇಶಕ್ಕೆ ಸಂಬಂಧಿಸಿದಂತೆ ಎರಡು ಬೇರೆ ಬೇರೆ ಅಭಿಪ್ರಾಯಗಳು ಇರುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಎರಡನೆಯ ಉದ್ದೇಶವು ಚುನಾವಣಾ ನಿಯಮದ ಯಾವುದೇ ಕುಶಲ ನಿರ್ವಹಣೆಯ ಮೂಲಕವೂ ಸಾಧಿಸಲ್ಪಡುವ ಸಾಧ್ಯವಿಲ್ಲ. ಮತದಾರರು ಎರಡು ಪಕ್ಷಗಳಿಗಿಂತಲೂ ಹೆಚ್ಚು ಪಕ್ಷಗಳಿಗೆ ಮತ ನೀಡುವುದಾದರೆ ಚುನಾವಣೆಯ ಫಲಿತಾಂಶಗಳನ್ನು ಬಲಾತ್ಕಾರದಿಂದ

ಏಕರೂಪತೆ ತರುವ ಮೂಲಕ ವಿಕೃತಗೊಳಿಸುವುದಕ್ಕಿಂತಲೂ ಸಂಸತ್ತಿನ ವ್ಯವಸ್ಥೆಯನ್ನು ಅಂತಹ ಬಹುಪಕ್ಷಗಳ ರಾಜ್ಯಾಡಳಿತ ಕ್ರಮಕ್ಕೆ ಅಳವಡಿಸುವುದು ಉತ್ತಮ.

ಲೋಕಸಭಾ ಚುನಾವಣೆಯ ಸ್ಪರ್ಧಿಸುವ ಅಭ್ಯರ್ಥಿಯ ಠೇವಣಿ ಹಣವನ್ನು ೫೦೦ ರೂಪಾಯಿಗಳಿಂದ ೧೫೦೦ ರೂಪಾಯಿಗಳಿಗೂ ಮತ್ತು ವಿಧಾನಸಭೆಗೆ ಸ್ಪರ್ಧಿಸುವ ಅಭ್ಯರ್ಥಿಯ ಠೇವಣಿ ಹಣವನ್ನು ೨೫೦ ರೂಪಾಯಿಗಳಿಂದ ೭೫೦ ರೂಪಾಯಿಗಳಿಗೂ ಹೆಚ್ಚಿಸಬೇಕೆಂದು ಮಾಡಿರುವ ಸಲಹೆಯು ಅಭ್ಯರ್ಥಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಮಾಡಲ್ಪಟ್ಟಿದೆ, ಆದರೆ ಇದು ನ್ಯಾಯವಲ್ಲ. ಇದು ಹೆಚ್ಚು ಬಡವರಾದವರನ್ನೂ ಚುನಾವಣೆಗಳಿಂದ ಹೆದರಿಸಿ ದೂರವಿಟ್ಟಂತೆಯೇ ಆಗುತ್ತದೆ. ಅಭ್ಯರ್ಥಿಗಳ ಸಂಖ್ಯೆಯನ್ನು ಇಂತಹ ಕೃತಕ ವಿಧಾನಗಳಿಂದ ಕಡಿಮೆ ಮಾಡಲಾಗುವುದಿಲ್ಲ. ರಾಜಕೀಯ ಪಕ್ಷಗಳ ಸಂಘಟನೆಯಿಂದ ಈ ಸಂಖ್ಯೆಯು ತನಗೆ ತಾನೇ ಕಡಿಮೆಯಾಗುತ್ತದೆ. ಈಗಲೂ ಕಾಂಗ್ರೆಸ್ ಅಲ್ಲದ ಪಕ್ಷಗಳು ಸಮರ್ಥವಾಗಿ ಹೊರಹೊಮ್ಮಿದಾಗ ಅಲ್ಲೆಲ್ಲಾ ಬಹುಕೋನ ಸ್ಪರ್ಧೆಗಳು ಇಲ್ಲವೇ ಇಲ್ಲ.

ಚುನಾವಣಾ ವೆಚ್ಚವನ್ನು ಕಡಿತಗೊಳಿಸುವ ದೃಷ್ಟಿಯಿಂದ ಅನೇಕ ಸಲಹೆಗಳನ್ನು ಮಾಡಲಾಗಿದೆ. ಚುನಾವಣೆಯ ಪ್ರಚಾರದ ಅವಧಿಯು ಹದಿನೈದು ದಿನಗಳಿಗೆ ಮಿತಿಗೊಳ್ಳಬೇಕಾಗಿದೆ. ಇದು ಖಂಡಿತವಾಗಿಯು ವೆಚ್ಚದ ಸ್ವಲ್ಪ ಭಾಗವನ್ನಾದರೂ ಕಡಿಮೆ ಮಾಡುತ್ತದೆ. ಅಭ್ಯರ್ಥಿಗಳ ಮೋಟಾರು ವಾಹನಗಳ ಬಳಕೆಯ ಸಂಖ್ಯೆಯು ವಿಧಾನ ಸಭೆಯ ಚುನಾವಣಾ ಕ್ಷೇತ್ರಕ್ಕೆ ಮೂರು ವಾಹನಗಳೆಂದೂ, ಲೋಕಸಭೆಯ ಚುನಾವಣಾ ಕ್ಷೇತ್ರಕ್ಕೆ ಆರು ವಾಹನಗಳೆಂದೂ ನಿಗದಿಪಡಿಸಲು ಸಲಹೆ ಮಾಡಲಾಗಿದೆ. ಈ ರೀತಿಯ ಸಾರಾಸಗಟು ನಿಬಂಧನೆಯು ಸಮರ್ಪಕವಾದ ಸಾರಿಗೆ ಸೌಕರ್ಯಗಳು ಇಲ್ಲದಿರುವ ಪ್ರದೇಶಗಳಲ್ಲಿ ತೊಂದರೆಗಳನ್ನು ಉಂಟುಮಾಡಬಹುದು. ವಿರಳ ಜನಸಂಖ್ಯೆ ಇರುವ ಪ್ರದೇಶಗಳಲ್ಲಿಯೂ ಇದು ಸರಿಯಾಗಿ ಜನರನ್ನು ಮುಟ್ಟಲು ಈ ನಿಷೇಧವು ಅಡ್ಡಿಯಾಗಬಹುದು. ಅಲ್ಲದೇ ಈಗಾಗಲೇ ಸ್ವಂತ ವಾಹನಗಳನ್ನು ಹೊಂದಿರುವ, ಸಾಧನ ವ್ಯವಸ್ಥೆ ಹೊಂದಿರುವ ಜನರ ವಿಷಯದಲ್ಲಿ ಈ ನಿಬಂಧನೆಯನ್ನು ಒತ್ತಾಯದಿಂದ ಹೇರುವುದು ಕಠಿಣವಾಗಬಹುದು.

ಮೆರವಣಿಗೆಗಳು, ಪ್ರದರ್ಶನಗಳು ಭಾರೀ ಗಾತ್ರದ ಬಣ್ಣದ ಕಾಗದಗಳ ಪಟ್ಟಿಗಳು ಮತ್ತು ಧ್ವಜಗಳ ಪ್ರಕಟಣೆಗಳನ್ನು ನಿಷೇಧಿಸಬೇಕೆಂಬ ಸಲಹೆಯೂ ಇದೆ. ಹೆದ್ದಾರಿಗಳಲ್ಲಿ ಸಂಚಾರೀ ಧ್ವನಿವರ್ಧಕಗಳ ಉಪಯೋಗವನ್ನು ಕೂಡ ನಿಷೇಧಿಸುವಂತೆ ಕೋರಬೇಕಾಗಿದೆ. ಈ ಎಲ್ಲ ಸಲಹೆಗಳು ವೆಚ್ಚವನ್ನು ಕಡಿಮೆ ಮಾಡುವುದಲ್ಲದೇ, ಚುನಾವಣಾ ಪ್ರಕ್ರಿಯೆಗೆ ಗಂಭೀರತೆ ಮತ್ತು ತಾರ್ಕಿಕತೆಗಳನ್ನು ತರುವುವು. ಇದನ್ನು ಒಪ್ಪಿಕೊಳ್ಳಬೇಕಾಗಿದೆ. ಮತದಾರರನ್ನು ಮತಗಟ್ಟೆಗಳಿಗೆ



ಕೊಂಡೊಯ್ಯಲು ವಾಹನಗಳ ಉಪಯೋಗವನ್ನು 'ಸಂಜ್ಞೇಯ ಅಪರಾಧ' ವೆಂದು ಪರಿಗಣಿಸುವಂತೆಯೂ ಸಲಹೆ ನೀಡಲಾಗಿದೆ. ಈ ಪರಿಸ್ಥಿತಿಯಲ್ಲಿ ಇದು ಯಾವುದೇ ವ್ಯತ್ಯಾಸವನ್ನು ಮಾಡಲಾರದೆಂದು ನಾನು ಭಾವಿಸುತ್ತೇನೆ. ಇದು ವ್ಯಾಪಕವಾಗಿ ಪ್ರಚಲಿತವಿರುವ ಭ್ರಷ್ಟ ಪದ್ಧತಿಯಾಗಿದೆ. ಸೂಚಿಸಲ್ಪಟ್ಟಿರುವ ಸುಧಾರಣೆಯು ಪೊಲೀಸ್ ಅಧಿಕಾರಿಗಳಿಂದ ಕಿರಿಕಿರಿ, ತೊಂದರೆಗಳಿಗೆ ಎಡೆ ಮಾಡಬಹುದು. ಆದರೆ ಈ ನಿರ್ಬಂಧವನ್ನು ಒತ್ತಾಯಪೂರ್ವಕವಾಗಿ ಜಾರಿಗೆ ತರಲು ಆರಕ್ಷಣಾದಳದ ಶಕ್ತಿ ಸಾಕಾಗುವುದಿಲ್ಲ. ಇದಕ್ಕೆ ಬದಲಾಗಿ ಮತಗಟ್ಟೆಗಳು ಸಂಖ್ಯೆಯನ್ನು ಹೆಚ್ಚಿಸಬೇಕು. ಅದರಿಂದಾಗಿ ಯಾವುದೇ ಮತಗಟ್ಟೆಯೂ ಕೇಂದ್ರ ಒಂದು ಹಳ್ಳಿಯಿಂದ ಒಂದು ಮೈಲಿಗಿಂತಲೂ ಹೆಚ್ಚು ದೂರದಲ್ಲಿರುವುದಿಲ್ಲ. ಸಂಚಾರೀ ಮತಗಟ್ಟೆಗಳ ವಿಚಾರವನ್ನು ಪರಿಗಣಿಸಬಹುದು. ಈ ಕೆಲವು ಸಲಹೆಗಳ ಆಧಾರದ ಮೇಲೆ ಮಾಡುವ ತಿದ್ದುಪಡಿಗಳ ಜೊತೆಗೆ, ವಿವಿಧ ರಾಜಕೀಯ ಪಕ್ಷಗಳಿಗೆ ಚಿಹ್ನೆಗಳನ್ನು ನಿಗದಿಪಡಿಸಲು ಕೆಲವು ತೃಪ್ತಿಕರ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾದ ಅವಶ್ಯಕತೆಯಿದೆ. ಕಾಲಕಾಲಕ್ಕೆ ಈ ವಿಷಯದಲ್ಲಿ, ಚುನಾವಣಾ ಆಯೋಗವು ಬದಲಾವಣೆಗಳನ್ನು ಮಾಡುತ್ತಿದೆ. ಈಗಿನ ಪರಿಸ್ಥಿತಿಯ ತೃಪ್ತಿಕರ ಎಂಬುದರಿಂದ ದೂರವೇ ಉಳಿದಿದೆ. ದೇಶಾದ್ಯಂತ ಗುರುತಿಸಲ್ಪಡುವ ಕಾಂಗ್ರೆಸ್ ಪಕ್ಷವನ್ನು ಹೊರತುಪಡಿಸಿ, ಗೋವಾ ಒಂದನ್ನುಳಿದು, ಬೇರೆ ಎಲ್ಲ ಪಕ್ಷಗಳೂ ಪ್ರತಿಕೂಲ ಪರಿಸ್ಥಿತಿಯಲ್ಲಿರುವಂತೆ ಭಾವಿಸುತ್ತವೆ. ಈ ವಿಧಾನವು ಬದಲಾಗುವ ಅವಶ್ಯಕತೆಯಿದೆ.

ಪ್ರಸಕ್ತ ಕಾರ್ಯವಿಧಾನದಂತೆ ಪಕ್ಷಗಳನ್ನು ರಾಜ್ಯದ ಆಧಾರದ ಮೇಲೆ ಗುರುತಿಸಲಾಗುತ್ತಿದೆ. ಯಾವುದೇ ಒಂದು ಪಕ್ಷವೂ ಅಖಿಲ ಭಾರತ ಮಟ್ಟದಲ್ಲಿ ಗುರುತಿಸಲ್ಪಟ್ಟಿಲ್ಲ. ೧೯೬೨ರ ಚುನಾವಣೆಯಲ್ಲಿ ಒಂದು ರಾಜ್ಯದಲ್ಲಿ ನಾಲ್ಕು ಪ್ರತಿಶತ ಅರ್ಹಮತಗಳನ್ನು ಗಳಿಸಿದ (Valid Vote) ಪಕ್ಷವನ್ನು ಆ ರಾಜ್ಯದಲ್ಲಿ ಮನ್ನಣೆ ಮಾಡಲಾಗಿದೆ. ಪರ್ಸಂಟೇಜನ್ನು ಲೆಕ್ಕಮಾಡುವಾಗ, ಠೇವಣಿಗಳನ್ನು ಕಳೆದುಕೊಂಡ ಅಭ್ಯರ್ಥಿಗಳ ಮತಗಳನ್ನು ಲೆಕ್ಕ ಮಾಡಲಾಗಿಲ್ಲ. ಒಂದು ಪಕ್ಷವು ಮಾನ್ಯತೆ ಪಡೆದ ಪಕ್ಷವಾಗಿದ್ದಲ್ಲಿ ಮಾತ್ರ ಪಕ್ಷಕ್ಕೆ ಚಿಹ್ನೆಗಳನ್ನು ಮೀಸಲಿಡಲಾಗುತ್ತದೆ. ಅದು ಮಾನ್ಯತೆ ಪಡೆದ ಪಕ್ಷವಾಗದಿದ್ದರೆ ಅದರ ಅಭ್ಯರ್ಥಿಗಳನ್ನು ಸ್ವತಂತ್ರ ಅಭ್ಯರ್ಥಿಗಳು ಎಂದು ಪರಿಗಣಿಸಬೇಕಾಗುತ್ತದೆ ಮತ್ತು ಪಕ್ಷದ ಚಿಹ್ನೆಯನ್ನು ಒಳಗೊಳ್ಳದಿರುವ, ಮುಕ್ತ ಚಿಹ್ನೆಗಳ ಪಟ್ಟಿಯಿಂದ ಅವರಿಗೆ ಯಾವುದಾದರೂ ಒಂದು ಚಿಹ್ನೆಯನ್ನು ನಿಗದಿಪಡಿಸಲಾಗುತ್ತದೆ. ಆದ್ದರಿಂದ ಪಕ್ಷದ ಚಿಹ್ನೆಗಳು ಆ ಪಕ್ಷಗಳು ಮಾನ್ಯತೆ ಪಡೆದಿರುವ ರಾಜ್ಯಗಳಿಗೆ ಪರಿಮಿತವಾಗುತ್ತದೆ. ಮದ್ರಾಸ್ ಅಥವಾ ಮೈಸೂರಿನಲ್ಲಿ 'ದೀಪ'ದ ಚಿಹ್ನೆಯಾಗಲೀ, ಗೋವಾದಲ್ಲಿ 'ಜೋಡೆತ್ತು'ಗಳ ಚಿಹ್ನೆಯಾಗಲೀ ಇರುವುದಿಲ್ಲ.

ಇದು ಸಂಪೂರ್ಣವಾಗಿ ಒಂದು ಹೊಸ ವ್ಯವಸ್ಥೆಯಾಗಿದೆ. ಹಿಂದಿನ ಮೂರು ಸಾರ್ವತ್ರಿಕ ಚುನಾವಣೆಗಳಲ್ಲಿ ರೂಢಿಯಲ್ಲಿದ್ದುದರಿಂದ ಇದು ಬೇರೆಯೇ ಆಗಿದೆ. ರಾಜಕೀಯ ಪಕ್ಷಗಳಿಂದ ಅವುಗಳ ಚಿಹ್ನೆಗಳನ್ನು ಕಿತ್ತುಕೊಳ್ಳುವುದಲ್ಲದೇ ಇದು ಇತರ ತೊಂದರೆಗಳನ್ನು ಕೂಡ ಉಂಟುಮಾಡಿದೆ.

ಜನಸಂಘವು ಮಾನ್ಯತೆ ಪಡೆಯದಿರುವ ರಾಜ್ಯಗಳ ಕೆಲವು ಉಪಚುನಾವಣೆಗಳಲ್ಲಿ ಅದರ ಅಭ್ಯರ್ಥಿಗಳು 'ದೀಪ'ದ ಚಿಹ್ನೆಯನ್ನು ಪಡೆಯಲು ಆಗಲಿಲ್ಲ. ಈ ವಾಸ್ತವವನ್ನು ಇತರ ಅಭ್ಯರ್ಥಿಗಳು ತಮ್ಮ ಲಾಭಕ್ಕಾಗಿ ಬಳಸಿಕೊಂಡರು. ಜನಸಂಘದ ಅಭ್ಯರ್ಥಿಗಳು, ಜನಸಂಘದವರಲ್ಲವೆಂದು ಅವರು ವ್ಯಾಪಕವಾಗಿ ಪ್ರಸಾರ ಮಾಡಿದರು. ಅವರು B.J.S. (ಭಾರತೀಯ ಜನಸಂಘ) ಅಭ್ಯರ್ಥಿಗಳಾಗಿದ್ದಿದ್ದರೆ, ಅವರು 'ದೀಪ'ದ ಚಿಹ್ನೆಯನ್ನು ಪಡೆದಿರುತ್ತಿದ್ದರು ಎಂದು ಪ್ರಚಾರ ಮಾಡಿದರು. ಮೂರು ಸಾರ್ವತ್ರಿಕ ಚುನಾವಣೆಗಳಲ್ಲಿಯೂ ಜನಸಂಘವು 'ದೀಪ'ದ ಚಿಹ್ನೆಯೊಂದಿಗೆ ಹೋರಾಡಿದ್ದುದರಿಂದ, ಪಕ್ಷವು ಸಾಕಷ್ಟು ಮತದಾರರ ಬೆಂಬಲವನ್ನು ಪಡೆಯದಿದ್ದ ಪ್ರದೇಶಗಳಲ್ಲಿ ಕೂಡ ವ್ಯಾಪಕವಾಗಿ ಈ ಚಿಹ್ನೆಯು ಜನಸಂಘದ್ದೆಂದು ತಿಳಿದಿತ್ತು. ಜನಸಂಘವನ್ನಾಗಲೀ, ಅಥವಾ ಯಾವುದೇ ಪಕ್ಷವನ್ನಾಗಲೀ, ಅವುಗಳ ವಿಶಿಷ್ಟ ಚಿಹ್ನೆಗಳಿಂದ ಬೇರ್ಪಡಿಸುವುದೆಂದರೆ ಹಿಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಅವು ಮಾಡಿರುವ ಪೂರ್ವಸಿದ್ಧತೆಗಳನ್ನೆಲ್ಲಾ ಹಾಳು ಮಾಡಿದಂತೆ.

ಹಿಂದಿನ ಚುನಾವಣೆಗಳ ಫಲಿತಾಂಶದ ಆಧಾರದ ಮೇಲೆ ಚಿಹ್ನೆಗಳನ್ನು ಮೀಸಲಿಡುವುದೆಂದರೆ, ಅದು ಹಿಂದಿನ ನಾಲ್ಕು ವರ್ಷಗಳ ಅವಧಿಯಲ್ಲಿ, ಪಕ್ಷದ ಕಾರ್ಯ ಕಾರ್ಯವಿಧಾನಗಳಿಂದಾಗಿ ಉಂಟಾಗಿರುವ ಬದಲಾವಣೆಗಳನ್ನು ಪರಿಗಣನೆಗೆ ತಂದುಕೊಳ್ಳುವುದಿಲ್ಲ. ಇದುವರೆಗೂ ಕಮ್ಯುನಿಸ್ಟರು P.S.P., S.P. ಮತ್ತು ಸ್ವತಂತ್ರ ಪಕ್ಷಗಳಿಗೆ ಸಂಬಂಧಿಸಿದಂತೆ, ಎಲ್ಲ ರೀತಿಯ ಒಂದುಗೂಡುವಿಕೆಗಳು, ಬೇರ್ಪಡೆಗಳೂ ಇವೆ. ಆಯೋಗವು ಇದನ್ನು ಗಮನಿಸದೆ, ಮತ್ತು ಕಾಲಕಾಲಕ್ಕೆ ಈ ಪಕ್ಷಗಳ ಮೀಸಲಿಟ್ಟ ಚಿಹ್ನೆಗಳ ಪಟ್ಟಿಯನ್ನು ಪರಿಷ್ಕರಿಸುತ್ತಿದೆ. ಭಾರತೀಯ ಜನಸಂಘವು ಅಂತಹ ಯಾವುದೇ ಬದಲಾವಣೆಗೂ ಪಕ್ಕಾಗಿಲ್ಲ ನಿಜ. ಆದರೆ, ಹಿಂದಿನ ಬಾರಿ ಗುರುತಿಲ್ಪಡದಿದ್ದ ರಾಜ್ಯಗಳಲ್ಲೆಲ್ಲಾ ಅದು ಈಗ ತನ್ನ ಸಂಘಟನೆಗಳನ್ನು ಹೆಚ್ಚಾಗಿ ವಿಸ್ತರಿಸಿದೆ ಮತ್ತು ಶಕ್ತಗೊಳಿಸಿದೆ. ಮೂರನೆಯ ಸಾರ್ವತ್ರಿಕ ಚುನಾವಣೆಗೆ ಮೊದಲು ಆಯೋಗವು ಬದಲಾದ ಪರಿಸ್ಥಿತಿಯನ್ನು ಗಮನಕ್ಕೆ ತಂದುಕೊಂಡಿತು. ಮತ್ತು ಆಗ ಹೊಸದಾಗಿ ಉದಯಿಸಿದ್ದ ಸ್ವತಂತ್ರ ಪಕ್ಷಕ್ಕೆ ಚಿಹ್ನೆಯನ್ನು ಒದಗಿಸಿತ್ತು. ಕಾರ್ಯದಲ್ಲಿ ಹೆಚ್ಚಳ ಮತ್ತು ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಜನಸಂಘವು ನಿಲ್ಲಿಸಲು ಉದ್ದೇಶಿಸಿರುವ ಅಭ್ಯರ್ಥಿಗಳ ಸಂಖ್ಯೆ ಇವುಗಳನ್ನು ಗಮನಕ್ಕೆ



ತಂದುಕೊಂಡರೆ, ಜನಸಂಘವು ಇನ್ನೂ ಅನೇಕ ರಾಜ್ಯಗಳಲ್ಲಿ ಮಾನ್ಯತೆ ಪಡೆಯುತ್ತದೆ.

ಇಂತಹುದೇ ಹಕ್ಕೊತ್ತಾಯಗಳನ್ನು ಬೇರೆ ಪಕ್ಷಗಳು ಮುಂದಿಡಬಹುದು. ಆದ್ದರಿಂದ ಮೀಸಲು ಚಿಹ್ನೆಗಳನ್ನು ನಿರಂತರವಾಗಿ ಪರಿಷ್ಕರಿಸುವ ಅಗತ್ಯ ಬೀಳಬಹುದು. ಈ ತೊಂದರೆಯನ್ನು ತಪ್ಪಿಸುವುದಕ್ಕೆ, ಮೂರನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಅಳವಡಿಸಿಕೊಂಡಿದ್ದ ವ್ಯವಸ್ಥೆಯನ್ನೇ ಮುಂದುವರೆಸುವಂತೆ ನಾವು ಸೂಚಿಸುತ್ತೇವೆ. ಮೀಸಲುಚಿಹ್ನೆಗಳ ಜೊತೆಗೆ ಮಾನ್ಯತೆ ಪಡೆದ ಪಕ್ಷವೂ ಮತದಾರರ ಪಟ್ಟಿಯ ಉಚಿತ ಪ್ರತಿಗಳನ್ನು ಪಡೆಯುತ್ತದೆ. ಈ ಎರಡನೆಯ ಸವಲತ್ತಿಗೆ ಸಂಬಂಧಿಸಿದಂತೆ ಇದು ಮಾನ್ಯತೆ ಪಡೆದ ಪಕ್ಷಗಳಿಗೆ ಮಾತ್ರ ಸೀಮಿತಗೊಳಿಸಬಹುದು. ಆದರೆ, ಚಿಹ್ನೆಗಳ ಮೀಸಲು ಮಾತ್ರ ಪಕ್ಷವು ಮುಂಬರುವ ಚುನಾವಣೆಗಳಲ್ಲಿ ಆಯೋಜಿಸಿಕೊಂಡಿರುವ ಕಾರ್ಯಗಳಿಗೆ ಸಂಬಂಧಿಸಿರಬೇಕೇ ವಿನಾ, ಹಿಂದಿನ ಚುನಾವಣೆಗಳಲ್ಲಿನ ಅದರ ಕಾರ್ಯನಿರ್ವಹಣೆಯನ್ನು ಆಧರಿಸಿರಬಾರದು. ಭಾರತದಲ್ಲಿ ಮೂರನೆಯ ಸಾರ್ವತ್ರಿಕ ಚುನಾವಣೆಗಳ ಬಗೆಗಿನ ತನ್ನ ವರದಿಯ ಒಂದನೇ ಸಂಪುಟದ, ೩೦ನೇ ಪುಟದಲ್ಲಿ ಹೀಗೆ ಬರೆಯುತ್ತದೆ: "ಮೀಸಲು ಮುಕ್ತ ಚಿಹ್ನೆಗಳನ್ನು ನಿಗದಿಪಡಿಸುವ ಹಿಂದಿನ ನಿಯಮಗಳ ಪ್ರಕಾರ, ಒಂದು ಪಕ್ಷಕ್ಕೆ ಒಂದು ಅಥವಾ ಎರಡು ರಾಜ್ಯಗಳಲ್ಲಿ ಮಾತ್ರ ಮೀಸಲಿರುವ ಚಿಹ್ನೆಯು, ಬೇರೆ ಯಾವುದೇ ರಾಜ್ಯದಲ್ಲಿಯೂ ಯಾವುದೇ ಅಭ್ಯರ್ಥಿಗೂ ಮುಕ್ತ ಚಿಹ್ನೆಯಾಗಿಯೂ ದೊರಕುವುದಿಲ್ಲ. ಮಾನ್ಯತೆ ಪಡೆದ ಕೆಲವು ಪಕ್ಷಗಳು, ತಾವು ಮಾನ್ಯತೆ ಪಡೆಯದಿದ್ದ ಅನೇಕ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ಹೇಳಿದ್ದು, ತಮ್ಮ ಚಿಹ್ನೆಯನ್ನು ಆ ರಾಜ್ಯಗಳಲ್ಲಿ ಹೊಂದದಿರುವುದು ಚುನಾವಣೆಯ ಉದ್ದೇಶಗಳಿಗೆ ಹೆಚ್ಚಿನ ತೊಂದರೆಯುಂಟಾಗಿದೆಯೆಂಬ ಆಧಾರದ ಮೇಲೆ ಈ ನಿರ್ಬಂಧಕ್ಕೆ ಆಕ್ಷೇಪಿಸಿದರು. ಇದು ನ್ಯಾಯೋಚಿತವಾದ ಅಸಮಾಧಾನವೆಂದು ತೋರಿತು, ಮತ್ತು ಪಕ್ಷದ ಚಿಹ್ನೆಯನ್ನು ಇತರ ರಾಜ್ಯಗಳಲ್ಲಿ ಕೂಡ ಪಕ್ಷದ ಅಭ್ಯರ್ಥಿಗಳಿಗೆ ದೊರಕಿಸಿಕೊಡಬೇಕು, ಎಂದು ಆಯೋಗವು ಭಾವಿಸಿತು. ಆದರೆ, ಪಕ್ಷವು ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸುವುದು ಅಪೇಕ್ಷಣೀಯ ಎಂದು ಆಯೋಗವು ಭಾವಿಸುವುದಾದರೆ ಮಾತ್ರ."

ಪಕ್ಷಗಳ ಅಸಮಾಧಾನವು ನ್ಯಾಯಯುಕ್ತವಾದದ್ದು ಎಂದು ಭಾವಿಸಿದ್ದ ಆಯೋಗವು ತಾನು ಯಾವ ನಿಯಮಗಳ ವಿರುದ್ಧ ಈ ಅಸಮಾಧಾನವು ನ್ಯಾಯೋಚಿತ ಎಂದಿತ್ತೋ ಅದಕ್ಕೂ ಹೆಚ್ಚಾಗಿಯೇ ಆಯೋಗವು ಹಿಮ್ಮರಳಿದುದು ಆಶ್ಚರ್ಯವಾಗಿದೆ.

ಪಕ್ಷಗಳ ಅಸಮಾಧಾನವನ್ನು ಪರಿಹರಿಸುವುದಕ್ಕಾಗಿ, ಪಕ್ಷದ ಚಿಹ್ನೆಗಳನ್ನು ಆಯೋಗವು ಮುಕ್ತ ಚಿಹ್ನೆಗಳ ಪಟ್ಟಿಯಲ್ಲಿ ಅಳವಡಿಸಿತ್ತು ಮತ್ತು ಈ ಚಿಹ್ನೆಗಳನ್ನು

ನಿಗದಿಪಡಿಸುವುದಕ್ಕೆ ಈ ಮುಂದಿನ ನಿಯಮಗಳನ್ನು ಪ್ರಕಟಿಸಿತ್ತು:

೧. ಪಕ್ಷವು ಅಭ್ಯರ್ಥಿಯನ್ನು ಚುನಾವಣಾ ಕ್ಷೇತ್ರದಲ್ಲಿ ನಿಲ್ಲಿಸಿದರೆ (ಲೋಕಸಭೆಯಾಗಬಹುದು ಅಥವಾ ವಿಧಾನಸಭೆ), ಬೇರೆ ಎಲ್ಲ ಅಭ್ಯರ್ಥಿಗಳಿಗಿಂತಲೂ ಆ ಪಕ್ಷದ ಅಭ್ಯರ್ಥಿಗೆ ರಿಯಾಯಿತಿ ತೋರಿ ಪಕ್ಷದ ಚಿಹ್ನೆಯನ್ನು ನೀಡಲಾಗುವುದು.

೨. ಒಂದು ಪಕ್ಷವು ಲೋಕಸಭೆಯ ಚುನಾವಣಾ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿದರೆ, ಆ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಯಾವುದೇ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗೆ, ಆ ಅಭ್ಯರ್ಥಿಯು ಅದೇ ಪಕ್ಷಕ್ಕೆ(ಲೋಕಸಭೆಗೆ ಸ್ಪರ್ದಿಸಿರುವ ಪಕ್ಷದ ಅಭ್ಯರ್ಥಿ) ಸೇರಿದ್ದರೆ ವಿನಾ, ಪಕ್ಷದ ಚಿಹ್ನೆಯನ್ನು ಕೊಡಲಾಗುವುದಿಲ್ಲ.

೩. ಒಂದು ಪಕ್ಷವು ವಿಧಾನಸಭೆಯ ಚುನಾವಣಾ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿದರೆ, ಆ ಪಕ್ಷವು ವಿಧಾನಸಭೆಯ ಚುನಾವಣಾ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿದರೆ, ಆ ಪಕ್ಷದ ಚಿಹ್ನೆಯನ್ನು, ಆ ಅಭ್ಯರ್ಥಿಯೂ ಅದೇ ಪಕ್ಷಕ್ಕೆ ಸೇರಿದವನಾಗಿದ್ದ ಹೊರತೂ, ಲೋಕಸಭೆಯ ಚುನಾವಣಾ ಕ್ಷೇತ್ರದ ಯಾವುದೇ ಅಭ್ಯರ್ಥಿಗೂ ನೀಡಲಾಗುವುದಿಲ್ಲ.

ಪಕ್ಷದ ಅಭ್ಯರ್ಥಿಗಳಿಗೆ, ಪಕ್ಷದ ಚಿಹ್ನೆಯು ದೊರಕುವುದನ್ನು ಖಚಿತಗೊಳಿಸುವುದಕ್ಕಾಗಿ ಈ ಕಾರ್ಯವಿಧಾನವನ್ನು ನಿಗದಿಪಡಿಸಲಾಯಿತು. ಮತ್ತೊಂದೆಡೆ ಪಕ್ಷದ ಯಾವ ಅಭ್ಯರ್ಥಿಯೂ ನಿಲ್ಲದಿದ್ದ ಕಡೆ ಸ್ವತಂತ್ರ ಅಭ್ಯರ್ಥಿಗಳಿಗಾಗಿ ಈ ಚಿಹ್ನೆಗಳನ್ನು ಮುಕ್ತವಾಗಿ ಇಡುವುದಕ್ಕಾಗಿಯೂ, ಈ ವಿಧಾನವನ್ನು ನಿಗದಿ ಪಡಿಸಲಾಯಿತು. ಆದಾಗ್ಯೂ, ಆಯೋಗದ ವರದಿಯ ಪ್ರಕಾರ "ಬಹಳಷ್ಟು ಜನ ಸ್ವತಂತ್ರ ಅಭ್ಯರ್ಥಿಗಳು ತಮಗೆ ಯಾವುದೇ ಪಕ್ಷದ ಚಿಹ್ನೆಯನ್ನು ನಿಗದಿಪಡಿಸುವುದನ್ನು ಇಷ್ಟಪಡಲಿಲ್ಲ. ಪಕ್ಷದ ಚಿಹ್ನೆಗಳನ್ನು ಮುಕ್ತ ಚಿಹ್ನೆಗಳ ಪಟ್ಟಿಯಲ್ಲಿ ಸೇರಿಸಿದುದರಿಂದ ಖಂಡಿತವಾಗಿಯೂ ಯಾವುದೇ ಉದ್ದೇಶವೂ ಸಾಧಿಸಲಿಲ್ಲ. ಆದ್ದರಿಂದ, ಪಕ್ಷದ ಚಿಹ್ನೆಗಳಿಗೆ ಸಂಬಂಧಿಸಿದಂತೆ ಒಂದು ಸರಳ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಬೇಕು ಮತ್ತು ದೇಶಾದ್ಯಂತವೂ ಮೀಸಲು ಚಿಹ್ನೆಗಳಾಗಿರಬೇಕು.

ಈಗ ಸದ್ಯದಲ್ಲಿ ಕೇವಲ ಏಳು ಪಕ್ಷಗಳಿವೆ. ಅವೆಂದರೆ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯ(ರೈಟ್) ಮತ್ತು ಕಮ್ಯುನಿಸ್ಟ್ ಪಾರ್ಟಿ(ಮಾರ್ಕ್ಸಿಸ್ಟ್), ಪ್ರಜಾ ಸೋಷಿಯಲಿಸ್ಟ್ ಪಾರ್ಟಿ, ಸ್ವತಂತ್ರ ಪಾರ್ಟಿ, ಸಂಯುಕ್ತ ಸೋಷಿಯಲಿಸ್ಟ್ ಪಾರ್ಟಿ ಮತ್ತು ಭಾರತೀಯ ಜನಸಂಘ– ಇವು ಅಖಿಲ ಭಾರತೀಯ ಲಕ್ಷಣಗಳನ್ನು ಹೇಳಿಕೊಳ್ಳಬಹುದು, ಇವುಗಳ ಚಿಹ್ನೆಗಳು ಎಲ್ಲಾ ರಾಜ್ಯಗಳಲ್ಲಿಯೂ



ಮೀಸಲು ಚಿಹ್ನೆಗಳಾಗಿರಬೇಕು. ಇನ್ನು ಉಳಿದ ಪಕ್ಷಗಳಿಗೆ ಸಂಬಂಧಿಸಿದಂತೆ, ಅವು ನಿರ್ದಿಷ್ಟ ರಾಜ್ಯಗಳಿಗೆ ಸೀಮಿತವಾಗಿವೆ, ಆದರೆ, ಅವುಗಳಲ್ಲಿ ಯಾವುದಾದರೂ ಒಂದು ಪಕ್ಷವು ಬೇರೆ ಯಾವುದೇ ರಾಜ್ಯದಲ್ಲಿ ಸಾಕಷ್ಟು ಹೆಚ್ಚು ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸಿರುವುದಾಗಿ ಹಕ್ಕೊತ್ತಾಯ ಮಾಡಿದರೆ ಆಯೋಗವು ಸೂಕ್ತವಾದ ನಿಬಂಧನೆಗಳನ್ನು ಮಾಡಬಹುದು.

(೧೯೬೦ರ ಏಪ್ರಿಲ್ ೧೦)

# ರಾಜಕೀಯ ಪಕ್ಷಗಳಿಗೆ ನೀತಿಸಂಹಿತೆ

ಭಾರತದಲ್ಲಿನ ರಾಜಕೀಯ ಪಕ್ಷಗಳಿಗೆ ಒಂದು ನೀತಿಸಂಹಿತೆಯನ್ನು ರೂಪಿಸುವ ದೀರ್ಘಕಾಲದ ಅವಶ್ಯಕತೆಯನ್ನು ಪೂರ್ತಿ ಮಾಡುವ ಸಲುವಾಗಿ ಇದುವರೆಗೂ ಅನೇಕ ಸಮಾವೇಶಗಳನ್ನು ಏರ್ಪಡಿಸಲಾಗಿದೆ. ಇಂತಹ ಸಭೆಗಳಲ್ಲಿ ಕೆಲವು ತಾತ್ಕಾಲಿಕ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು. ಈ ಸಂಹಿತೆಯ ವ್ಯಾಪ್ತಿ ಮತ್ತು ಲಕ್ಷಣಗಳು ಇನ್ನು ನಿರ್ಧರಿತವಾಗಬೇಕೆಂಬುದು ವಿವೇಚನಾಪೂರ್ಣ ವರದಿಗಳಿಂದ ತಿಳಿದುಬರುತ್ತದೆ. ಅ ಸಭೆಗಳಲ್ಲಿ ತೆಗೆದುಕೊಳ್ಳುತ್ತಿರುವ ಹಲವಾರು ನಿರ್ಧಾರಗಳಿಗೆ ಅಂಟಿಕೊಂಡಿರಲು ನೈತಿಕ ಹೊಣೆಯನ್ನು ಉಳಿದು ಬೇರೆ ಯಾವುದೇ ಹೊಣೆಯೂ ಇಲ್ಲ. ಆದಾಗ್ಯೂ ಜನರು ಸಮರ್ಪಕ ರೀತಿಯಲ್ಲಿ ಸುಶಿಕ್ಷಿತರಾದರೆ, ಅವರು ರಾಜಕೀಯ ಪಕ್ಷಗಳ ಮೇಲೆ ಖಂಡಿತ ಪ್ರಭಾವ ಬೀರಬಲ್ಲರು. ಮತ್ತು ಅದರಿಂದ ಉದ್ದೇಶಪೂರ್ವಕವಾಗಿ ನೀತಿಸಂಹಿತೆಯನ್ನು ಉಲ್ಲಂಘಿಸುವ ಅವಕಾಶಗಳನ್ನು ಕಡಿಮೆ ಮಾಡಲು ಸಹಾಯಮಾಡಬಹುದು.

ಅತ್ಯಂತ ಹಳೆಯದೂ, ವಿಶಾಲವಾದುದೂ ಆಗಿರುವ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷದ ಮೇಲೆ ಈಗ ಜನರ ಮತ್ತು ಉಳಿದ ರಾಜಕೀಯ ಪಕ್ಷಗಳ ಮುಂದೆ ಉದಾಹರಣೆಯನ್ನು ಸ್ಥಾಪಿಸುವ ಜವಾಬ್ದಾರಿಯು ನಿಂತಿದೆ. ದುರದೃಷ್ಟವಶಾತ್ ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ಸಿಗರ ರಾಜಕೀಯ ನೀತಿ–ನಡವಳಿಕೆಯು ಅನುಕರಣಾಯೋಗ್ಯವಾಗಿಲ್ಲ. ಕಾಂಗ್ರೆಸ್ ಪಕ್ಷದಿಂದ, ಪಕ್ಷಾಂತರ ಮಾಡಿಕೊಂಡು ಬಂದು ರೂಪುಗೊಂಡ ಪಕ್ಷಗಳು ಸಹ ಅಂತಹದೇ ವ್ಯಾಧಿಯಿಂದ ಬಳಲುತ್ತವೆ. ಏಕೆಂದರೆ ,ವಿಶೇಷವಾಗಿ, ಕಾಂಗ್ರೆಸ್ಸನ್ನು ಬಿಟ್ಟು ಬಂದವರು ಎಂದೂ ವೈಚಾರಿಕತೆಯ ನೆಲೆಗಟ್ಟಿನಲ್ಲಿ ಬಿಟ್ಟುಬಂದಿರುವುದಿಲ್ಲ. ಆದ್ದರಿಂದ ದೇಶದಲ್ಲಿ ಸ್ವಾಸ್ಥ್ಯಪೂರ್ಣವಾದ ಮತ್ತು ರಾಜಕೀಯ ಪ್ರಜಾಸತ್ತೆಯ ಉತ್ತಮ ಸಂಘಟನೆಗೆ ಮಾರ್ಗದರ್ಶನ ಮಾಡುವಂತಹ ನೀತಿಸಂಹಿತೆಯನ್ನು ನಿರ್ಮಿಸಲು ಕಾಂಗ್ರೆಸ್ ಅಲ್ಲದ ಪಕ್ಷಗಳು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುವುದು ಅವಶ್ಯಕವಾಗಿದೆ. ಇದುವರೆಗೂ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸಿಗರು ಮಾಡಿರುವ ಬಹಳಷ್ಟನ್ನು ಅವರು ನಿಷ್ಫಲಗೊಳಿಸಬೇಕಾಗುವ ಅವಶ್ಯಕತೆಯಿದೆ. ಈ ಸಭೆಗಳಲ್ಲಿ ತೆಗೆದುಕೊಂಡಿರುವ



ಕೆಲವು ತೀರ್ಮಾನಗಳು ಕೇವಲ ಕಾಂಗ್ರೆಸ್ ಮತ್ತು ಅದರ ಸದಸ್ಯರಿಗೆ ಮಾತ್ರ ಪ್ರಯೋಜನ ಉಂಟು ಮಾಡಲು ಉದ್ದೇಶಿಸಿರುವಂತಹವಾಗಿದೆ. ಉದಾಹರಣೆಗೆ, ಒಂದು ಪಕ್ಷದಿಂದ ಟಿಕೆಟ್ ನಿರಾಕರಿಸಲ್ಪಟ್ಟವನಿಗೆ ಬೇರೆ ಪಕ್ಷದಿಂದ ಟಿಕೇಟು ಕೊಡದಿರುವುದು ಅಥವಾ ವೈಯುಕ್ತಿಕ ಮತ್ತು ಖಾಸಗಿ ದೋಷಗಳು, ತಪ್ಪುಗಳನ್ನು ಉಲ್ಲೇಖಿಸುವುದನ್ನು ಬಿಟ್ಟು, ಟೀಕೆಗಳ ಆಕ್ರಮಣವನ್ನು ಕೇವಲ ಪಕ್ಷದ ನೀತಿಯ ಬಗೆಗೆ ಮಾತ್ರ ಸೀಮಿತಗೊಳಿಸಿಕೊಳ್ಳುವುದು. ಆದಾಗ್ಯೂ ಈ ವಿಷಯಗಳಲ್ಲಿ ಕಾಂಗ್ರೆಸ್ಸನ್ನು ಒತ್ತಾಯಿಸುವುದು ಕೂಡ ಯೋಗ್ಯವಾಗಿರುತ್ತದೆ. ಏಕೆಂದರೆ, ಅದು ತನ್ನ ಸ್ವಂತ ವ್ಯವಹಾರಗಳನ್ನು ನೇರ್ಪಡಿಸಿಕೊಂಡರೆ, ಅದರ ಫಲಿತಾಂಶವು ರಾಷ್ಟ್ರದ ಸಾಮಾನ್ಯ ರಾಜಕೀಯ ಸ್ವಾಸ್ಥ್ಯದ ಮೇಲೆ ಕೂಡ, ಹಿತಕರವಾದ ಆರೋಗ್ಯಕರವಾದ ಪರಿಣಾಮವನ್ನು ಉಂಟುಮಾಡುವುದು.

ಅರ್ಜಿಗಳಿಂದ ಸಾಮೂಹಿಕ ಸತ್ಯಾಗ್ರಹದತನಕ, ಧರಣಿಗಳಿಂದ ಒತ್ತಾಯದ ಉಪವಾಸಗಳ ತನಕ, ಎಲ್ಲವೂ ಇಂದಿನ ದೈನಂದಿನ ಪರಿಸ್ಥಿತಿಯಾಗಿದೆ. ಅನೇಕ ಬಾರಿ ಪ್ರಜಾಭಿಪ್ರಾಯ ಅಥವಾ ಮತದಾರರ ನೇರ ತೀರ್ಪು ಇವುಗಳ ಬಗೆಗೂ ಮಾತುಗಳು ಕೇಳಿಬರುತ್ತವೆ. ಕೆಲವರು, ವಿಶೇಷವಾಗಿ ಕಮ್ಯುನಿಸ್ಟರು, ಹಿಂಸಾ ವಿಧಾನವನ್ನು ಕೂಡ ತಳ್ಳಿಹಾಕುವುದಿಲ್ಲ.

ಸರ್ಕಾರದ ತೀರ್ಮಾನಗಳನ್ನು ಪ್ರಭಾವಿಸುವುದರಲ್ಲಿ ರಾಜಕೀಯ ಪಕ್ಷಗಳು ಅನುಸರಿಸುವ ಮಾರ್ಗದ ಬಗೆಗೆ ಕೂಡ ನಡವಳಿಕೆಯ ನೀತಿಸಂಹಿತೆಯನ್ನು ರೂಪಿಸಬೇಕಾದ ಅಗತ್ಯವಿದೆ. ಇಂದಿನ ನಮ್ಮ ರಾಜಕೀಯ ಮತ್ತು ಸಾರ್ವತ್ರಿಕ ಜೀವನವು, ಸ್ವಾತಂತ್ರ್ಯ ಸಂಗ್ರಾಮದ ವಿಸ್ತರಣವಾಗಿದೆ. ಆದ್ದರಿಂದ, ನಾವು ವಿದೇಶೀ ಆಡಳಿತಗಾರರಿಗೆ ವಿರುದ್ಧವಾಗಿ ಬಳಸಿದ ಮಾರ್ಗಗಳ ನೆರವು ಪಡೆಯುವುದನ್ನೇ ಸಾಮಾನ್ಯವಾಗಿ ಜನರು ನ್ಯಾಯೋಚಿತವೆಂದು ಪರಿಗಣಿಸುತ್ತಾರೆ. ತಮ್ಮ ಅಸಮಾಧಾನ, ಸಂಕಷ್ಟಗಳ ಪರಿಹಾರಕ್ಕಾಗಿ, ಸಂಘರ್ಷ ಮಾಡುತ್ತಿರುವ ಜನತೆಯ ಬಗೆಗೆ, ಆಡಳಿತವ ಕೂಡ ತನ್ನ ದೃಷ್ಟಿಕೋನದಲ್ಲಿ ಯಾವುದೇ ಗಮನಾರ್ಹ ಬದಲಾವಣೆಯನ್ನೂ ತೋರಿಸಿಲ್ಲ. ಜನರು ಪ್ರಾರಂಭಿಸುವ ಯಾವುದೇ ಚಳವಳಿಯನ್ನು ದಮನಿಸಲು ಸರ್ಕಾರವು ಕೂಡ ಸ್ವಲ್ಪವೂ ಹಿಂಜರಿಯದೆ ತತ್‌ಕ್ಷಣವೇ, ತನ್ನ ಅಧೀನದಲ್ಲಿರುವ ಎಲ್ಲ ಬಲವನ್ನು ಉಪಯೋಗಿಸುತ್ತದೆ. ಜನರನ್ನು ದಮನಿಸುವುದರಲ್ಲಿ ವಿಫಲವಾದ ಮೇಲೆ ಮಾತ್ರ ಸರ್ಕಾರವು ಅವರ ಬೇಡಿಕೆಗಳನ್ನು ಆಲಿಸಲು ಯೋಚಿಸುತ್ತದೆ. ಹೀಗೆ ಪ್ರತಿಯೊಂದು ಚಳವಳಿಯೂ, ಸರ್ಕಾರದ ಸ್ಥಾನವನ್ನು ಸಂಧಾನ ಮಾಡಿಕೊಳ್ಳುವಂತಹ ಪರಿಸ್ಥಿತಿಗೆ ತಂದಿಡುತ್ತದೆ. ಒಂದು ಪಕ್ಷದ ಸರ್ಕಾರವಿರುವುದರಿಂದ, ಪಕ್ಷದ ಹಿತಾಸಕ್ತಿಗಳು ಕೂಡ ಇಲ್ಲಿ ಕೆಲಸ ಮಾಡುತ್ತವೆ. ಹಾಗಾಗಿ, ಜನರ ಬೇಡಿಕೆಗಳನ್ನು ಸರ್ಕಾರ ಒಪ್ಪಿಕೊಂಡರೂ ಅದರಲ್ಲಿ ಯಾವ ಘನತೆಯೂ ಇರುವುದಿಲ್ಲ. ಇದರ

ಹಿಂದೆ ಅಸಮಾಧಾನದ ಕಹಿಜಾಡು ಉಳಿದುಕೊಳ್ಳುತ್ತದೆ. ಹೀಗಾಗಿ ಜನರ ಪಾಲಿಗೆ ಕ್ರಮೇಣ ಸರ್ಕಾರವು ತಾವು ಭೀತರಾಗಬೇಕಾದ ಸೈತಾನನ ಸಂಕೇತವಾಗುತ್ತದೆ. ಜನತೆ ಮತ್ತು ಸರ್ಕಾರದ ನಡುವಿನ ಒಡಕು ವಿಸ್ತಾರವಾಗುತ್ತಿದೆ. ಇದು ಸಂತೋಷಪಡುವ ಪರಿಸ್ಥಿತಿಯಲ್ಲ.

ಕೆಲವು ನಿರ್ದಿಷ್ಟ ಸಂಗತಿಗಳ ಬಗೆಗೆ ಜನರ ಅಭಿಪ್ರಾಯಗಳನ್ನು ಅಭಿವ್ಯಕ್ತಿಸುವ ಸಂಬಂಧದಲ್ಲಿ ಸರ್ಕಾರ ಹಾಗೂ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಎಲ್ಲ ರಾಜಕೀಯ ಪಕ್ಷಗಳೂ ಒಂದು ಸರ್ವಸಮ್ಮತವಾಗುವ ನೀತಿ ಸಂಹಿತೆಯನ್ನು ಅಳವಡಿಸಿಕೊಳ್ಳಲಿ. ಗೋಹತ್ಯೆಯ ನಿಷೇಧಕ್ಕಾಗಿ ಒತ್ತಾಯಿಸಿದ ಎರಡು ಕೋಟಿಗೂ ಹೆಚ್ಚು ಹಸ್ತಾಕ್ಷರಗಳನ್ನು ಕಸದ ಬುಟ್ಟಿಗೆ ಸರ್ಕಾರ ಎಸೆಯುತ್ತದೆ. ಆದರೆ, ಅದೇ ವಿಷಯದಲ್ಲಿ ಸತ್ಯಾಗ್ರಹಕ್ಕೆ ಮಣಿಯುತ್ತದೆ ಎಂದರೆ ಅದು ಸರ್ಕಾರದ ಪ್ರಜಾಸತ್ತಾತ್ಮಕ ಪ್ರಜ್ಞೆಗೆ ಸ್ವಲ್ಪವೂ ಗೌರವ ತರುವುದಿಲ್ಲ. ಪ್ರಧಾನಮಂತ್ರಿಗಳು ಏನೇ ಹೇಳಿದರೂ, ಪೊಟ್ಟಿ ಶ್ರೀರಾಮುಲು ಅವರ ಉಪವಾಸ ಮತ್ತು ಅವರ ಮರಣಾನಂತರ ನಡೆದ ವ್ಯಾಪಕವಾದ ಬುಡಮೇಲುಕೃತ್ಯಗಳು ಮತ್ತು ಹಿಂಸಾಚಾರಗಳ ನೇರ ಪರಿಣಾಮವೇ ಆಂಧ್ರಪ್ರದೇಶದ ಹುಟ್ಟಿಗೆ ಕಾರಣವೆಂದು ಸಾಮಾನ್ಯ ಭಾವನೆಯು ಎಲ್ಲರಲ್ಲಿಯೂ ಇದೆ. ಈ ಭಾವನೆಯನ್ನು ತೊಡೆದು ಹಾಕಬೇಕಾಗಿದೆ. ಉಪವಾಸ ಮಾಡುತ್ತಿರುವ ಅಕಾಲಿ ನಾಯಕರ ಬಗೆಗೆ ಕಠಿಣ ಮನೋಭಾವ, ವರ್ತನೆಗಳನ್ನು ತಾಳುವ ಮೂಲಕ, ಪ್ರಧಾನಮಂತ್ರಿಯವರು ಈಗ ಹಾಗೆ ಮಾಡುತ್ತಿರುವಂತೆ ತೋರುತ್ತದೆ. ಮಾಸ್ಟರ್ ತಾರಾಸಿಂಗ್ ಏನಾದರೂ ಮರಣ ಹೊಂದಿದರೆ, ಸರ್ಕಾರವು ಜನರ ಈ ಭಾವನೆಯನ್ನು ತೀರಾ ಹೆಚ್ಚು ಬೆಲೆಕೊಟ್ಟು ತೊಡೆದುಹಾಕುವಂತಾಗುತ್ತದೆ. ಇಂತಹ ಉಪವಾಸ ಮತ್ತು ಸತ್ಯಾಗ್ರಹಗಳ ಸಂದರ್ಭಗಳು ಬರದಂತೆ ಏನಾದರೂ ಇತ್ಯಾತ್ಮಕ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಿ. ಎರಡು ಚುನಾವಣೆಗಳ ನಡುವೆ ಯಾವ ವಿಷಯಗಳ ಬಗೆಗೆ ಚಳವಳಿ ಮಾಡಬಹುದೆಂಬುದನ್ನು ನಾವೆಲ್ಲರೂ ನಿರ್ಧರಿಸೋಣ.

ಸಾರ್ವತ್ರಿಕ ಚುನಾವಣೆಯ ಅವಧಿಯಲ್ಲಿ, ಕೇವಲ ನಗಣ್ಯವಾದ ವಿಷಯಗಳನ್ನು ಸರ್ಕಾರದ ಜವಾಬ್ದಾರಿಗೆ ಬಿಟ್ಟು ಮುಖ್ಯವಾದ ವಿಷಯಗಳನ್ನು ಜನರ ತೀರ್ಮಾನಕ್ಕೆ ಬಿಡಬೇಕು. ಚುನಾವಣೆಯ ಮೂಲಕ ಸರ್ಕಾರವನ್ನು ಬದಲಾಯಿಸುವ ವಿಧಾನ ಒಂದನ್ನು ಹೊರತು ಪಡಿಸಿ, ಬೇರೆ ಯಾವುದೇ ವಿಧಾನದಿಂದಲೂ ಸರ್ಕಾರದ ಕಾರ್ಯನೀತಿಯಲ್ಲಿ ಪ್ರಮುಖ ಬದಲಾವಣೆಗಾಗಿ ಒತ್ತಾಯಮಾಡುವುದು ಪ್ರಜಾಪ್ರಭುತ್ವಕ್ಕೆ ವಿರೋಧವಾದ ಕ್ರಮವಾಗುತ್ತದೆ.

(೧೯೬೧ರ ಸೆಪ್ಟಂಬರ್ ೪)



## ಕಾಂಗ್ರೆಸ್ ಮತ್ತು ಪ್ರಜಾಪ್ರಭುತ್ವ

ನಾವು ಸಂಸದೀಯ ಸ್ವರೂಪದ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿದ್ದೇವೆ. ಸಂವಿಧಾನದ ಅಡಿಯಲ್ಲಿ ಎರಡು ಸಾರ್ವತ್ರಿಕ ಚುನಾವಣೆಗಳು ನಡೆದಿವೆ ಮತ್ತು ಮೂರನೆಯದು ಇನ್ನು ಸ್ವಲ್ಪ ಕಾಲದಲ್ಲಿಯೇ ನಡೆಯಲಿದೆ. ಆದರೆ ಕೇವಲ ಸಂಸತ್ತನ್ನು ರಚಿಸುವುದರಿಂದಾಗಲೀ ಅಥವಾ ಅದು ಒಂದು ಚುನಾಯಿತ ಘಟಕ ಎಂಬ ವಾಸ್ತವತೆಯಾಗಲೀ, ಸಂಸದೀಯ ಪ್ರಜಾಪ್ರಭುತ್ವವು ಅಸ್ತಿತ್ವದಲ್ಲಿದೆಯೆಂಬ ಅರ್ಥ ಕೊಡುವುದಿಲ್ಲ. ಇವುಗಳು ಏನಿದ್ದರೂ ಕೇವಲ ಬಾಹ್ಯಸ್ವರೂಪಗಳು ಮತ್ತು ಯಾರು ತಮ್ಮ ಅಭ್ಯರ್ಥಿಗಳಾಗಿ ನಿಲ್ಲುತ್ತಾರೆಯೋ ಮತ್ತು ಅವರ ಪ್ರತಿನಿಧಿಗಳಾಗಿ ಆಯ್ಕೆ ಮಾಡಲ್ಪಡುತ್ತಾರೆಯೋ ಅವರಲ್ಲಿ ಪ್ರಜಾಪ್ರಭುತ್ವದ ಯಶಸ್ವೀ ಕಾರ್ಯನಿರ್ವಹಣೆಗೆ ಅಗತ್ಯವಾದ ಒಳಸತ್ವ ಅಥವಾ ಒಳಗಿನ ಮನೋಧರ್ಮದ ಕೊರತೆಯಿದ್ದಾಗ ಈ ಬಾಹ್ಯಸ್ವರೂಪಗಳು ತಮ್ಮ ಪ್ರಾಮುಖ್ಯತೆ ಮತ್ತು ಮಹತ್ವಗಳನ್ನು ಕಳೆದುಕೊಳ್ಳುತ್ತವೆ. ದೇಶದಲ್ಲಿನ ಮತದಾರರು– ವಿಶ್ವದಲ್ಲಿಯೇ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುವವರು – ಚುನಾವಣೆಗಳಲ್ಲಿ ತೀವ್ರ ಆಸಕ್ತಿ ತಳೆದರು ಮತ್ತು ಚುನಾವಣೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿದರು ಎನ್ನುವುದು ಸತ್ಯ. ಇಡಿಯ ಕಾರ್ಯ ಪ್ರಕ್ರಿಯೆಯು ಶಾಂತಿರೀತಿಯಲ್ಲಿದ್ದಿತು. ಆದರೆ ಇದರಿಂದ ಪ್ರಜಾಪ್ರಭುತ್ವವು ಭಾರತದಲ್ಲಿ ಸುರಕ್ಷಿತವಾಗಿದೆ ಎಂದು ಅರ್ಥವಲ್ಲ. ಭಾರತದ ಜನರು ಮೂಲಭೂತವಾಗಿ ಪ್ರಜಾಸತ್ತಾತ್ಮಕ ಹಾಗೂ ಶಾಂತಿಪ್ರಿಯರು ಎಂಬುದನ್ನು ಮಾತ್ರ ಇದು ತೋರಿಸುತ್ತದೆ.

ಆದರೆ, ಜನರಿಗಿಂತಲೂ ಹೆಚ್ಚಾಗಿ, ಅಧಿಕಾರವನ್ನು ಅನುಭವಿಸುತ್ತಿರುವವರ ಮತ್ತು ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸುವವರ ನಂಬಿಕೆ ಮತ್ತು ಶ್ರದ್ಧೆಗಳು ದೇಶದಲ್ಲಿ ಪ್ರಜಾಪ್ರಭುತ್ವದ ಪ್ರಗತಿಯನ್ನು ಸುಗಮಗೊಳಿಸುತ್ತದೆ ಮತ್ತು ಪ್ರಸಕ್ತ ಅಸ್ತಿತ್ವದಲ್ಲಿರುವ ಸಂಸ್ಥೆಗಳನ್ನು, ಜನರ ಆಶೋತ್ತರಗಳನ್ನು ಕಾರ್ಯರೂಪಕ್ಕೆ ತರುವ ಪರಿಣಾಮಕಾರೀ ಸಾಧನಗಳಾಗುತ್ತವೆ. ಇಂತಹ ಶ್ರದ್ಧೆ, ನಂಬಿಕೆಗಳು ಇರುತ್ತವೆಂದು ಪರಿಗಣಿಸುವ ಪ್ರವೃತ್ತಿಗೆ ಹೊಂದಿಕೊಂಡುಬಿಟ್ಟಿರುತ್ತೇವೆ. ಆದರೆ ನಮ್ಮ ಈ ಊಹೆಗಳು ಸರಿಯಾಗಿ ಇರದಿರಬಹುದು. ಮತ್ತು ಹಾಗಾಗಿ, ನಾವು ಹತಾಶರಾಗಿ ನಮ್ಮ ಅರಿವಿಗೇ ಬಾರದಂತೆ, ಸಿಕ್ಕಿಹಾಕಿಕೊಳ್ಳದಿರಬೇಕಾದರೆ, ರಾಜಕೀಯ ಪರಿಸ್ಥಿತಿಯನ್ನು ಸಮರ್ಪಕವಾಗಿ ಮೌಲ್ಯಮಾಪನ ಮತ್ತು ವಿಶ್ಲೇಷಣೆ ಮಾಡುವುದು

ಉತ್ತಮ. ನಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಉಳಿಸಿಕೊಳ್ಳಲು ಮತ್ತು ರಕ್ಷಿಸಿಕೊಳ್ಳಲು ನಾವು ಸಮರ್ಪಕವಾದ ಪರಿಹಾರಕ್ರಮಗಳನ್ನು ಕೈಗೊಳ್ಳುವುದರಲ್ಲಿ ವಿಫಲರಾಗಬಾರದು.

ಸ್ವಾತಂತ್ರ್ಯದ ಆಗಮನ ಮತ್ತು ಸಂವಿಧಾನದ ಘೋಷಣೆಗಳ ನಡುವಿನ ಅಂತರವನ್ನು ದೇಶ ವಿಭಜನೆಯಿಂದ ಮೂಡಿಬಂದ ಸಮಸ್ಯೆಗಳು, ಅಧಿಕಾರದ ಹಸ್ತಾಂತರ, ಮತ್ತು ರಾಜ್ಯಗಳ ಏಕೀಕರಣ ಮುಂತಾದ ವಿಶೇಷ ಕ್ರಮಗಳಿಗೆ ಅವಶ್ಯಕವಾಗಿದ್ದ, ಅಸಾಧಾರಣವಾದ ಅವಧಿ ಎಂದು ಬಿಟ್ಟುಬಿಡಬಹುದು. ಆದರೆ ಆನಂತರ ಅಧಿಕಾರದಲ್ಲಿರುವ ಪಕ್ಷವು ವರ್ತಿಸಿರುವ ರೀತಿಯನ್ನು ಪರೀಕ್ಷಿಸುವ ಅಗತ್ಯವಿದೆ ಮತ್ತು ಪ್ರಜಾಪ್ರಭುತ್ವದಲ್ಲಿ ತಮ್ಮ ನಂಬಿಕೆ ತೋರಿಸಬಹುದಾದ ಯಾವುದೇ ಪುರಾವೆಯನ್ನೂ ನೀಡಿಲ್ಲವೆನ್ನುವುದನ್ನು ಗಮನಿಸುವಂತೆ ನಮ್ಮನ್ನು ಒತ್ತಾಯಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಘಟನೆಗಳು ವಿರುದ್ಧ ದಿಕ್ಕಿಗೆ ಬೊಟ್ಟು ಮಾಡುತ್ತವೆ.

ಡಾ. ಶ್ಯಾಮಾ ಪ್ರಸಾದ್ ಮುಖರ್ಜಿಯವರಂತಹ, ಘನತೆ, ಸ್ಥಾನಮಾನಗಳುಳ್ಳ ಸಂಸತ್ ಸದಸ್ಯರು ಬಂಧನದಲ್ಲಿದ್ದಾಗ ನಿಗೂಢ ಸನ್ನಿವೇಶಗಳಲ್ಲಿ ಮರಣ ಹೊಂದಿದರೆಂಬುದು ಮತ್ತು ಆ ಇಡೀ ಪ್ರಕರಣವು ವಿಚಾರಣೆಯೇ ಇಲ್ಲದೇ ಮುಗಿದುಹೋಗಿದ್ದು ದೇಶದಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಬಗೆಗೆ ತೀವ್ರವಾದ ಭಯ ಆತಂಕಗಳನ್ನು ಸೃಷ್ಟಿಸಿದಂತಹ ಕಣ್ಣುಚುಚ್ಚುವ ಉಗ್ರ ಘಟನೆಯಾಗಿತ್ತು. ಸಂಸದೀಯ ವ್ಯವಸ್ಥೆಯೆಂದರೆ, ಚರ್ಚೆಗಳ ಮೂಲಕ ಸರ್ಕಾರ ಮತ್ತು ಅಧಿಕಾರದಲ್ಲಿರುವವರು ಯಾವಾಗಲೂ ವಿರೋಧಿಯ ದೃಷ್ಟಿಕೋನವನ್ನು ಪರಿಗಣಿಸಲು ಹಾಗೂ ಒಪ್ಪಲು ಸಿದ್ಧರಿರಬೇಕು. ಈ ವ್ಯವಸ್ಥೆಯಲ್ಲಿದ್ದ ತಮ್ಮ ಪ್ರಖರ ಶ್ರದ್ಧೆಯಿಂದಾಗಿ ಡಾ. ಮುಖರ್ಜಿಯವರು, ಪ್ರಜಾಪರಿಷತ್ತಿನ ಸತ್ಯಾಗ್ರಹದಿಂದ ಉದ್ಭವಿಸುತ್ತಿರುವ ವಿಷಯ–ಸಮಸ್ಯೆಗಳ ಬಗೆಗೆ ಚರ್ಚಿಸಲು ಪದೇ ಪದೇ ಪ್ರಧಾನಿಯವರೊಂದಿಗೆ ಭೇಟಿಗಾಗಿ ಮನವಿ ಮಾಡಿಕೊಂಡರು. ಆದರೆ, ವಾಸ್ತವವಾಗಿ ಪ್ರತಿಪಕ್ಷದ ನಾಯಕರಾಗಿದ್ದಂತಹ ಮುಖರ್ಜಿಯವರೊಡನೆ ಕಾಶ್ಮೀರದ ಪ್ರಶ್ನೆಯನ್ನು ಚರ್ಚಿಸಲು ಹಾಗೂ ಅವರನ್ನು ಭೇಟಿಮಾಡಲು ಪ್ರಧಾನಮಂತ್ರಿಗಳು ನಿರಾಕರಿಸಿದರು. ತಿಳಿಯದ ಅಜ್ಞಾನಿಗಳು, ಪ್ರಧಾನಿಯವರ ಈ ನಿರ್ಧಾರಕ್ಕೆ ಸಂಸತ್ತಿನಲ್ಲಿ ಬಹುಮತದ ಬೆಂಬಲವಿತ್ತೆಂದು ವಾದಿಸಬಹುದು. ಆದರೆ ಸಂಸದೀಯ ವ್ಯವಸ್ಥೆಯಲ್ಲಿ ಬಹುಮತ ಪಡೆದ ಪಕ್ಷವು ಸರ್ಕಾರವನ್ನು ರಚಿಸುತ್ತದೆ ಅಷ್ಟೆ. ದೇಶವು ಸರ್ಕಾರದಿಂದಲ್ಲ, ಸಂಸತ್ತಿನಿಂದ ಆಳಲ್ಪಡುತ್ತದೆ. ಈ ರೀತಿಯಲ್ಲಿ ಸಂಸತ್ತು ತನ್ನ ಜವಾಬ್ದಾರಿ, ಕರ್ತವ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲು, ಪ್ರತಿಪಕ್ಷವ ಕೂಡ ತನ್ನ ಕೊಡುಗೆ ನೀಡುತ್ತದೆ. ಈ ಒಂದು ವಾಸ್ತವ ಸಂಗತಿಯಿರದಿದ್ದರೆ ದೇಶದ್ರೋಹಕ್ಕೂ ಪ್ರತಿಪಕ್ಷಕ್ಕೂ ನಡುವೆ ಯಾವುದೇ ವ್ಯತ್ಯಾಸವೂ ಇರುತ್ತಿರಲಿಲ್ಲ.

ಪಶ್ಚಿಮ ಏಷಿಯಾ ದೇಶದ ಸಾರ್ವಭೌಮರೊಬ್ಬರು ಬ್ರಿಟನ್‌ಗೆ ಭೇಟಿ



ನೀಡಿದ್ದಾಗ ಪ್ರತಿಪಕ್ಷದ ನಾಯಕರನ್ನು ಅವರಿಗೆ ಪರಿಚಯಿಸಲಾಯಿತು. ತಮಗೆ ಸರ್ಕಾರದ ಬೊಕ್ಕಸದಿಂದ ಹಣ ನೀಡಲಾಗುತ್ತದೆಂದು ಅವರು ಆ ಸಾರ್ವಭೌಮರಿಗೆ ತಿಳಿಸಿದಾಗ ಆ ಸಂದರ್ಶಕರು ಗೊಂದಲಗೊಂಡರು. ಸರ್ಕಾರವನ್ನು ವಿರೋಧಿಸುವಂತಹ ವ್ಯಕ್ತಿಯನ್ನು ಸರ್ಕಾರದ ಬೊಕ್ಕಸದಿಂದ ಹೇಗೆ ಹಣ ನೀಡಿ ಸುಸ್ಥಿತಿಯಲ್ಲಿಡಬಹುದೆಂಬುದನ್ನು ಅವರಿಗೆ ಅರ್ಥ ಮಾಡಿಕೊಳ್ಳಲು ಆಗಲಿಲ್ಲ. "ಅಂತಹ ವ್ಯಕ್ತಿಯನ್ನು ನಾವು ಗುಂಡಿಕ್ಕಿ ಸಾಯಿಸುವುದನ್ನು ಹೆಚ್ಚು ಬಯಸುತ್ತೇವೆ" ಎಂದು ಅವರ ಉದ್ಗರಿಸಿದರು. ಆದರೆ. ಯು.ಕೆ. ಯ ಸಾರ್ವಭೌಮ ಸರ್ಕಾರವು ಸಾರ್ವಭೌಮರ ವಿರೋಧಪಕ್ಷವನ್ನು ಹೊಂದಿದೆ. ಸರ್ಕಾರವು ಪ್ರತಿಪಕ್ಷವನ್ನು ಕೇವಲ ಸಹಿಸುವುದಷ್ಟೇ ಅಲ್ಲ, ಅದನ್ನು ನಂಬುತ್ತದೆ ಕೂಡ. ಭಾರತದಲ್ಲಿ ಅಧಿಕಾರದಲ್ಲಿರುವ ಪಕ್ಷವು ಪ್ರತಿಪಕ್ಷವನ್ನು ಅದು ಎಲ್ಲಿಯ ತನಕವೂ ತನ್ನ ಅಧಿಕಾರಕ್ಕೆ ಅಪಾಯ ತರುವುದಿಲ್ಲವೋ ಅಲ್ಲಿಯವರೆಗೂ ಸಹಿಸುತ್ತದೆ. ಆದರೆ ಅದನ್ನು ನಂಬುವುದಿಲ್ಲ.

ಪ್ರಜಾಪ್ರಭುತ್ವವು ಅಧಿಕಾರದೊಡನೆ ಉನ್ನತ ಮಟ್ಟದ ನಿರಾಸಕ್ತಿಯನ್ನು ಬಯಸುತ್ತದೆ. ಶ್ರೀರಾಮ ಪ್ರಭುವಿನಂತೆ, ಪ್ರಜಾಪ್ರಭುತ್ವದ ರಾಜಕಾರಣಿಗಳು, ಕರ್ತವ್ಯದ ಕರೆ ಬಂದಾಗ ಅಧಿಕಾರ ವಹಿಸಿಕೊಳ್ಳಲು ಸಿದ್ಧರಾಗಿರಬೇಕು ಮತ್ತು ಅಧಿಕಾರವನ್ನು ತ್ಯಜಿಸುವುದರಿಂದ ಉಂಟಾಗುವ ಭಾರೀ ನಷ್ಟದ ಬಗೆಗೆ ಕಿಂಚಿತ್ತೂ ಚಿಂತಿಸದೆ ಅದನ್ನು ಬಿಟ್ಟುಬಿಡಲೂ ಸಿದ್ಧರಿರಬೇಕು. ಒಬ್ಬ ಒಳ್ಳೆಯ ಕ್ರೀಡಾಪಟುವಿನಂತೆ ಅವನು ವಿಜಯಕ್ಕಾಗಿ ಹೋರಾಡಬೇಕು ಮತ್ತು ಅಪಜಯವನ್ನು ಎದುರಿಸಲು ಸಿದ್ಧನಾಗಿರಬೇಕು. ತನ್ನ ಸೋಲನ್ನು ಘನತೆಯಿಂದ ಅವನು ಒಪ್ಪಿಕೊಳ್ಳಲಾಗದೆ ಅಥವಾ ತನ್ನ ಪ್ರತಿಸ್ಪರ್ಧಿಯನ್ನು ಅಭಿನಂದಿಸದಿದ್ದರೆ ಅವನು ಪ್ರಜಾಪ್ರಭುತ್ವವಾದಿಯಲ್ಲ. ಈ ಮನೋಭಾವದಿಂದಲೇ ಚರ್ಚಿಲ್ ಅವರು ಆಟ್ಲೀಗೆ ಮತ್ತು ಆಟ್ಲೀಯವರು ಎಡೆನ್‌ಗೆ ಅಧಿಕಾರವನ್ನು ಹಸ್ತಾಂತರಿಸಲು ಸಾಧ್ಯವಾದದ್ದು. ಆದರೆ ನಾವು ಭಾರತದಲ್ಲಿ ಕಾಣುತ್ತಿರುವುದೇನು?

ಆದರೆ, ಇಲ್ಲಿ, ಜನರ ತೀರ್ಮಾನದ ಪರಿಣಾಮವಾಗಿ, ಕಾಂಗ್ರೆಸ್‌ನ ಕೈಗಳಿಂದ ಬೇರೆ ಯಾವುದೇ ಒಂದು ಪಕ್ಷಕ್ಕೆ ಸಂಪೂರ್ಣ ಅಧಿಕಾರದ ಹಸ್ತಾಂತರವಾಗುವ ಪರಿಸ್ಥಿತಿಯು ಇನ್ನೂ ನಿರ್ಮಾಣವಾಗಿಲ್ಲ. ಆದಾಗ್ಯೂ, ಹಲವು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಳಗಳು ಪದಚ್ಯುತಿಗೊಂಡಿವೆ ಮತ್ತು ಕೆಲವು ಪ್ರತಿಷ್ಠೆಯ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಸೋಲನ್ನು ಕಂಡಿವೆ. ಕಾಂಗ್ರೆಸ್ ಮುಖಂಡರಿಂದ ಮತ್ತು ಪ್ರಧಾನಮಂತ್ರಿಗಳಿಂದ ಹೊರಬಿದ್ದಿರುವ ಪ್ರತಿಕ್ರಿಯೆಗಳು ಸಂತೋಷಕರವಾಗಿಲ್ಲ. ಹೊಸದಿಲ್ಲಿಯ ಲೋಕಸಭೆಯ ಮತ್ತು ಕಮಲಾನಗರದ (ದಿಲ್ಲಿ) ಕಾರ್ಪೋರೇಷನ್‌ನ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರಾಜಯದನಂತರ ಅವರು ವರ್ತಿಸಿದ ರೀತಿಯ ಅವರು ತಮ್ಮ ಮಾನಸಿಕ

ಸಮತೋಲನ ಕಳೆದುಕೊಂಡಿರುವುದನ್ನೂ ತೋರಿಸುತ್ತದೆ ಮತ್ತು ಮನಸ್ಸುಗಳ ನಿಜವಾದ ಪ್ರಜಾಸತ್ತಾತ್ಮವಲ್ಲದ ಮನೋಭಾವವನ್ನೂ ಅದು ಪ್ರಕಟಗೊಳಿಸಿದೆ. ಒಂದಲ್ಲ ಒಂದು ಹೇಳಿಕೆಗಳ ಮೇಲೆ ಜನಸಂಘವನ್ನು ನಿಷೇಧಿಸುವ ಮಾತುಗಳು, ಕಾಂಗ್ರೆಸ್ ಮುಖಂಡರು ಪ್ರಜಾಪ್ರಭುತ್ವ ಮತ್ತು ಮೂಲಭೂತ ಹಕ್ಕುಗಳ ಬಗೆಗೆ ಯಾವ ಗೌರವವನ್ನು ಇಟ್ಟುಕೊಂಡಿದ್ದಾರೆ ಎಂಬುದನ್ನು ತೋರಿಸುತ್ತದೆ. ಅಂತಹ ನಿಷೇಧವು ಸಾಧ್ಯವಿಲ್ಲ ಎನ್ನುವುದು ನಿಜ. ಯಾಕೆಂದರೆ, ಆ ಕ್ರಮವು ಕಾಂಗ್ರೆಸ್ಸಿನ ಸ್ಥಾನವನ್ನು ಮತ್ತಷ್ಟು ಕೆಡಿಸುತ್ತದೆ. ಹಾಗಾಗಿ ಅದರ ಯಶಸ್ಸಿನ ಅವಕಾಶಗಳನ್ನು ಹಾಳುಮಾಡುತ್ತದೆ. ಆದರೆ ಅಂತಹದ್ದೊಂದು ವಿಚಾರವು ಮನಸ್ಸಿನಲ್ಲಿ ಮೂಡುವುದೂ ಪ್ರಜಾಪ್ರಭುತ್ವದ ಸಂಪ್ರದಾಯಕ್ಕೆ ವಿರೋಧವಾದದ್ದು. ಜನರಲ್ ಅಯೂಬ್ ಎಲ್ಲ ರಾಜಕೀಯ ಪಕ್ಷಗಳನ್ನೂ ನಿಷೇಧಿಸುವುದಕ್ಕೂ ಮತ್ತು ಪಂಡಿತ ಜವಾಹರ್‌ಲಾಲ್ ನೆಹರೂ ಅವರು ಕೇವಲ ತಮ್ಮ ಆಯ್ಕೆಯ ಪಕ್ಷಗಳನ್ನು ಮಾತ್ರ ಅಸ್ತಿತ್ವದಲ್ಲಿರಲು ಅನುಮತಿಸುವುದಕ್ಕೂ ನಡುವೆ ಯಾವ ವ್ಯತ್ಯಾಸವಿದೆ? ಪ್ರಜಾಪ್ರಭುತ್ವದಲ್ಲಿ ಈ ಆಯ್ಕೆಯು ಜನರದ್ದಾಗಿರುತ್ತದೆ, ಆಳುವವರದ್ದಲ್ಲ. ಆಳುವವರು ಆ ಅಧಿಕಾರವನ್ನು ಚಲಾಯಿಸತೊಡಗಿದರೆ, ಅಲ್ಲಿ ಸರ್ವಾಧಿಕಾರವಿರುತ್ತದೆ, ಪ್ರಜಾಪ್ರಭುತ್ವವಿರುವುದಿಲ್ಲ.

ಜನರಿಂದ ಬೆಂಬಲವಿರುವತನಕವೂ ಪ್ರತಿಯೊಬ್ಬನೂ ತಾನು ಪ್ರಜಾಪ್ರಭುತ್ವವಾದಿ ಎಂದು ಹೇಳಿಕೊಳ್ಳಬಹುದು. ಆದರೆ ಪರಾಜಯ ಹೊಂದಿದಾಗಲೂ, ಪ್ರಜಾಪ್ರಭುತ್ವವಾದಿಯಾಗಿಯೇ ಮುಂದುವರೆಯಲು ಆಳವಾದ ಶ್ರದ್ಧೆಯ ಅವಶ್ಯಕತೆ ಇರುತ್ತದೆ. ತನಗೆ ಕಾಂಗ್ರೆಸ್ ಟೀಕೆಟ್ ಸಿಗುವುದಾದರೆ, ಅಥವಾ ಅಧಿಕಾರವನ್ನು ಹಂಚಿಕೊಳ್ಳುವ ಈ ವಿಶಾಲ ಉದ್ಯಮದಲ್ಲಿ ಎಲ್ಲಿಯಾದರೂ, ಸರಿಯಾದ ಸ್ಥಳ ಮಾಡಿಕೊಟ್ಟರೆ ಕಾಂಗ್ರೆಸ್‌ನವ ವಿಶ್ವಾಸಾರ್ಹ ಕಾಂಗ್ರೆಸ್ಸಿನವನಾಗಿರುತ್ತಾನೆ. ಆದರೆ, ಒಂದು ವೇಳೆ ಅವನಿಗೆ ಕಾಂಗ್ರೆಸ್ ಟಿಕೇಟ್ ನಿರಾಕರಿಸಲ್ಪಟ್ಟರೆ, ಈ ಮಹಾನ್(?) ಸಂಸ್ಥೆಯ ಬಗೆಗೆ ಅವನ ನಿಷ್ಠೆ, ಪ್ರಶಂಸೆಗಳು ಒಂದೇ ಕ್ಷಣದಲ್ಲಿ ಆವಿಯಾಗಿ ಹೋಗುತ್ತದೆ. ತಮ್ಮ ಪರವಾಗಿರುವುದಾದರೆ, ಕಾಂಗ್ರೆಸ್ ಮುಖಂಡರು ಜನರ ತೀರ್ಮಾನದೆದುರು ತಲೆಬಾಗುತ್ತಾರೆ. ಆದರೆ, ಜನರು ತಮ್ಮ ತೀರ್ಮಾನವನ್ನು ಬದಲಾಯಿಸಿದ ಮರುಕ್ಷಣವೇ ಅವರ ಹಾಗೂ ಅವರಿಂದ ಆಯ್ಕೆ ಮಾಡಲ್ಪಟ್ಟ ಪ್ರತಿನಿಧಿಗಳ ಮೇಲೆ ಕಾಯ್ದಿರಿಸಿದ ನಿಂದನಾತ್ಮಕ ಖಂಡನೆಗಳ ಸುರಿಮಳೆಯಾಗುತ್ತದೆ ಮತ್ತು ಜನರು ಕಾಂಗ್ರೆಸ್‌ಗೆ ತಲೆಬಾಗುವಂತೆ ಒತ್ತಾಯಿಸಲು, ಎಲ್ಲ ಕ್ರಮಗಳನ್ನೂ ಸತ್ವಯುಕ್ತವೆಂದು ಪರಿಗಣಿಸಲಾಗುತ್ತದೆ. ಅವರಿಗೆ ಬೇಕಾಗಿರುವುದು ಜನರ ಸರ್ಕಾರವಲ್ಲ, ಆದರೆ ನಂಬಿಕಸ್ಥರಾಗಿ ಅನುಸರಿಸುವ ಜನ ಮತ್ತು ಪ್ರತಿಬಾರಿಯೂ ಕಾಂಗ್ರೆಸ್ ಸರ್ಕಾರಕ್ಕೆ ಮತದಾನ ಮಾಡುವವರು.

ತಮ್ಮ ಈಗಿನ ಮನೋಭಾವದಲ್ಲಿ ಕಾಂಗ್ರೆಸ್‌ನವರು ಪ್ರಜಾಪ್ರಭುತ್ವಕ್ಕೆ ದೊಡ್ಡ



ಅಪಾಯವನ್ನು ಒಡ್ಡುತ್ತಿದ್ದಾರೆ. ಒಂದೇ ಒಂದೂ ಅಪವಾದವಿಲ್ಲ. ಎಲ್ಲ ಸಮಯದಲ್ಲಿಯೂ ಪ್ರಜಾಪ್ರಭುತ್ವವಾದಿ ಎಂದು ಪರಿಗಣಿಸಲಾಗಿದ್ದ ಪಂಡಿತ ನೆಹರೂ ಅವರಿಗೆ ಕೂಡಸ ಈ ಆಪಾದನೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ನಿಜ ಹೇಳಬೇಕೆಂದರೆ ನೆಹರೂ ಅವರ ಹೇಳಿಕೆಗಳು, ಅವರ ಆಲೋಚನೆಗಳು ಕಾಂಗ್ರೆಸ್‌ನ್ನು ಪ್ರಜಾಪ್ರಭುತ್ವದ ವಿರೋಧಿ ದಿಕ್ಕಿನಲ್ಲಿ ಚಲಿಸುವಂತೆ ಮಾಡಿದೆ. ಪ್ರಜಾಪ್ರಭುತ್ವವನ್ನು ಪ್ರೀತಿಸುವ ಪ್ರತಿಯೊಬ್ಬರೂ ಈ ಸಮಸ್ಯೆಗೆ ಗಂಭಿರವಾದ ಆಲೋಚನೆಯನ್ನು ನೀಡಬೇಕು ಮತ್ತು ಪರಿಣಾಮಕಾರಿ ಹಾಗೂ ನಿರ್ಣಾಯಕವಾಗಿ ಕಾಸ್ಟ್ರೋ ಭಾರತದಲ್ಲಿ ಹೊರ ಹೊಮ್ಮುವ ಮೊದಲೇ ಕ್ರಮಕೈಗೊಳ್ಳಬೇಕು.

(೧೯೬೧ರ ಜುಲೈ ೧೦)

# ಪ್ರಜಾಪ್ರಭುತ್ವ ಮತ್ತು ರಾಜಕೀಯ ಪಕ್ಷಗಳು

ಭಾರತದ ಜನರು ಬಹಳಮಟ್ಟಿಗೆ ಪ್ರಜಾಸತ್ತಾತ್ಮಕ ವಿಧಾನದ ಜೀವನವನ್ನೇ ಇಷ್ಟಪಡುತ್ತಾರೆ. ಆದರೆ ಇತ್ತೀಚೆಗೆ ಅನೇಕ ಏಷ್ಯಾ ರಾಷ್ಟ್ರಗಳಲ್ಲಿ ಪ್ರಜಾಸತ್ತಾತ್ಮಕ ಸರ್ಕಾರಗಳ ವೈಫಲ್ಯ, ಅಥವ ದಮನಗಳ ಕಾರಣದಿಂದಾಗಿ ಭಾರತದ ಅನೇಕ ಜನರು, ಈ ದೇಶದಲ್ಲಿ ಪ್ರಜಾಪ್ರಭುತ್ವದ ಭವಿಷ್ಯದ ಬಗೆಗೆ ಆತಂಕಿತಗೊಂಡಿದ್ದಾರೆ. ಹದಗೆಡುತ್ತಿರುವ ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಗಳು ಕೂಡ, ಈಗಿನ ಸಂದಿಗ್ಧ ಪರಿಸ್ಥಿತಿಯನ್ನು (ಕ್ಲಿಷ್ಟ ಪರಿಸ್ಥಿತಿಯನ್ನು) ಯಶಸ್ವಿಯಾಗಿ ಎದುರಿಸುವಲ್ಲಿ ಪ್ರಜಾಪ್ರಭುತ್ವದ ಸಾಮರ್ಥ್ಯದ ಬಗೆಗೆ, ಜನರು ಅನುಮಾನಪಡುವಂತೆ ಮಾಡಿವೆ. “ಇದ್ದುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿದವ” ಅನೇಕ ಜನರು ವಿವೇಚನೆ ಇರದೆ ಪರ್ಯಾಯ ಸ್ವರೂಪದ ಸರ್ಕಾರವನ್ನು ಬಯಸುತ್ತಾರೆ. ಹಾಗೇಯೆ ಪ್ರಜಾಪ್ರಭುತ್ವದಲ್ಲಿ ತಮ್ಮ ದೃಢನಂಬಿಕೆ ಇರುವ ಅನೇಕರು ಈಗ ಭಾರತದಲ್ಲಿ ಪ್ರಚಲಿತವಿರುವ ಪ್ರಜಾಪ್ರಭುತ್ವದ ಸ್ವರೂಪವು ಕೇವಲ ಬ್ರಿಟನ್‌ನಿನ ಸಂಸದೀಯ ಪ್ರಜಾಪ್ರಭುತ್ವದ ಬಾಹ್ಯರೂಪದ ಕ್ಷುಲ್ಲಕ ಅನುಕರಣೆ ಮಾತ್ರ ಎಂದು ಪರಿಗಣಿಸುತ್ತಾರೆ. ಪ್ರಜಾಪ್ರಭುತ್ವದ ನಿಜವಾದ ಗುರಿಯು ಸಾಧಿತವಾಗಬೇಕಾದರೆ ಸಾಂವಿಧಾನಿಕ ಹಾಗೂ ರಾಜಕೀಯ ವ್ಯವಸ್ಥೆಯು ಬೇರೆ ರೀತಿಯಲ್ಲಿಯೇ ರಚಿಸಲ್ಪಡಬೇಕೆಂದು ಬಯಸುತ್ತಾರೆ.

ಸ್ವರೂಪಗಳು ಮತ್ತು ವಿಧಿನಿಯಮಗಳ ಪ್ರಶ್ನೆಗಳು ಮುಖ್ಯವಾಗಿರಬಹುದು. ಆದರೆ ಯಾವುದೇ ಪ್ರಜಾಸತ್ತಾತ್ಮಕ ವ್ಯವಸ್ಥೆಯು ಯಶಸ್ವಿಯಾಗುವ ಭರವಸೆ ತಳೆಯಬೇಕಾದರೆ ಕೆಲವು ನಿರ್ದಿಷ್ಟವಾದ, ಸಾರಭೂತವಾದ ಅವಶ್ಯಕತೆಗಳಿವೆ. ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್‌ರವರು ಒರಿಸ್ಸಾದ ಹೊಸ ವಿಧಾನಸಭಾಭವನದ ಉದ್ಘಾಟನೆಯನ್ನು ನೆರವೇರಿಸಿದ ಸಂದರ್ಭದಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಈ ಪೂರ್ವಭಾವಿ ಅವಶ್ಯಕತೆಗಳ ಬಗೆಗೆ ಸೂಕ್ತವಾಗಿಯೇ ಗಮನ ಸೆಳೆದಿದ್ದಾರೆ. ಶಿಸ್ತುಬದ್ಧ ಪಕ್ಷಗಳು ಮತ್ತು ಸಮರ್ಪಣ ಮನೋಭಾವ ಹಾಗೂ ದೇಶಭಕ್ತಿಯುಳ್ಳ ನಾಯಕತ್ವಗಳು ಒಂದು ದೇಶದಲ್ಲಿನ ಯಶಸ್ವಿಯಾದ ಸಂಸದೀಯ ಪ್ರಜಾಪ್ರಭುತ್ವಕ್ಕೆ ಅತ್ಯವಶ್ಯಕವಾದ ಗುಣಗಳು ಎಂದು ಅವರು ಹೇಳಿದರು. ಹಾಗೇಯೆ, ಮುಕ್ತ ವಾರ್ತಾಪತ್ರಿಕೆಗಳು, ಸ್ವತಂತ್ರ ನ್ಯಾಯಾಂಗ ಮತ್ತು ಸ್ವಚ್ಛ ಹಾಗೂ ದಕ್ಷ ಆಡಳಿತಗಳು ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸಲು ಅಗತ್ಯವೆಂದು ಕೂಡ ಅವರು ಪರಿಗಣಿಸಿದರು.



ಆದಾಗ್ಯೂ, ಪ್ರಜಾಸತ್ತಾತ್ಮಕ ಸರ್ಕಾರದಲ್ಲಿ ಅಂತಿಮ ಅಧಿಕಾರವು ಚುನಾಯಿತ ಪ್ರತಿನಿಧಿಗಳ ಕೈಯಲ್ಲಿ ಇರುವುದರಿಂದ ಬೇರೆ ಎಲ್ಲದಕ್ಕಿಂತಲೂ ಅವರನ್ನು ಹೆಚ್ಚಾಗಿ ಪರಿಗಣಿಸಲಾಗುತ್ತದೆ. ಏಕೆಂದರೆ, ನೇರ ಕ್ರಾಂತಿಗೆ ಜನರು ನಿರ್ಧರಿಸಿ ಸಿದ್ಧರಾಗದಿದ್ದರೆ, ಪತ್ರಿಕೆಗಳು, ನ್ಯಾಯಾಂಗ ಮತ್ತು ಆಡಳಿತಾಂಗಗಳು ಅಧಿಕಾರದಲ್ಲಿರುವ ಪಕ್ಷದ ಇಚ್ಛೆಗೆ ಸಂಶಯಾಸ್ಪದ ರೀತಿಯಲ್ಲಿ ಹೊಂದಿಕೊಳ್ಳುವಂತೆ ಬಲಾತ್ಕರಿಸಲ್ಪಡಬಹುದು. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪತ್ರಿಕೆಗಳ ಬಾಯಿ ಮುಚ್ಚಿಸಬಹುದು, ನ್ಯಾಯಾಲಯಗಳ ಅಧಿಕೃತ ತೀರ್ಪುಗಳನ್ನು ಅಸಿಂಧುಗೊಳಿಸಲು, ಕಾನೂನುಗಳನ್ನು ತಿದ್ದುಪಡಿ ಮಾಡುವ ಮೂಲಕ ನ್ಯಾಯಾಂಗವನ್ನು ದುರ್ಬಲಗೊಳಿಸಬಹುದು ಮತ್ತು ಉನ್ನತ ಮಟ್ಟದಲ್ಲಿರುವ ಭ್ರಷ್ಟ ಮುಖಂಡರಿಂದಾಗಿ ಆಡಳಿತವೂ ಭ್ರಷ್ಟವಾಗಬಹುದು. ಆದ್ದರಿಂದ, ನಮ್ಮ ವ್ಯವಹಾರಗಳನ್ನು ದುರಸ್ತಿ ಮಾಡಿಕೊಳ್ಳಬೇಕಾದರೆ, ಸುಧಾರಿಸಿಕೊಳ್ಳಬೇಕಾದರೆ, ನಮ್ಮ ಗಮನವನ್ನು ರಾಜಕೀಯ ಪಕ್ಷಗಳತ್ತ ತಿರುಗಿಸುವುದು ನಮ್ಮ ಮೊದಲನೆಯ ಕೆಲಸವಾಗಿದೆ.

ಭಾರತದ ರಾಜಕೀಯ ಪಕ್ಷಗಳಿಗೆ ಸಂಬಧಿಸಿದಂತೆ ಬಹಳಷ್ಟು ಅಪೇಕ್ಷಣೀಯ ಸಂಗತಿಗಳಿವೆ. ಈ ವಿಷಯದಲ್ಲಿ ಅತ್ಯಂತ ಕೆಟ್ಟ ಅಪರಾಧಿ ಅಥವಾ ತಪ್ಪಿತಸ್ಥನೆಂದರೆ ಅದೂ ಆಡಳಿತ ಪಕ್ಷವಾಗಿದೆ. ಆದರೆ ಉಳಿದ ಅನೇಕ ಇತರರ ನಡವಳಿಕೆಯೇನೂ ಉತ್ತಮವಾಗಿಲ್ಲ. ಈಗಿನ ರಾಜಕೀಯ ಪಕ್ಷಗಳು ಯಾವುದೇ ಸೈದ್ಧಾಂತಿಕ ಆಧಾರದ ಮೇಲೆ ಸಂಘಟಿತಗೊಂಡಿಲ್ಲ. ಅವು ವೈಯುಕ್ತಿಕ ಅಥವಾ ಗುಂಪುಗಳ ಆಧಾರದ ಮೇಲೆ ಸಂಘಟಿತಗೊಂಡಿವೆ. ಇದಕ್ಕೆ ಸಂಬಂಧಿಸಿದಂತೆ ಡಾ. ರಾಧಾಕೃಷ್ಣನ್ ಹೇಳುತ್ತಾರೆ, “ರಾಜಕಾರಣವೂ ಏನಿದ್ದರೂ ಒಂದು ಗುರಿ ತಲುಪುವ ಸಾಧನ ಮಾತ್ರ; ಪ್ರತಿಯೊಬ್ಬರಿಗೂ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯವು ದೊರಕುವಂತಹ ಏರ್ಪಾಟುಗಳನ್ನು ಅದು ವಿನ್ಯಾಸಗೊಳಿಸುತ್ತದೆ. ಪ್ರಜಾಪ್ರಭುತ್ವವು ತನ್ನ ಕಾರ್ಯ ಚಟುವಟಿಕೆಗಳನ್ನು ಚುನಾಯಿತ ಪ್ರತಿನಿಧಿಗಳು ದುಡ್ಡು ಮತ್ತು ಅಧಿಕಾರಕ್ಕೆ ಕಚ್ಚಾಡಲು ಮತ್ತು ಸ್ಥಾನಕ್ಕಾಗಿ ಮೋಸಮಾಡಲು ಸಹಾಯ ಮಾಡುವುದಕ್ಕೆ ಮಾತ್ರ ಸೀಮಿತವಾದರೆ ಮತ್ತು ರಾಜ್ಯದ ಉದ್ದೇಶಗಳು ಒಂದು ಕ್ರಮವಾಗಿ ಪೂರೈಸಲಾಗದಿದ್ದರೆ ಅಂತಹ ಪ್ರಜಾಪ್ರಭುತ್ವವು ಆ ಹೆಸರಿಗೆ ಯೋಗ್ಯವಾದದ್ದಾಗಿರುವುದಿಲ್ಲ.” ಈ ದೀನ ರಾಜಕಾರಣವು ಸಾಧನವಾಗಿರುವುದು ನಿಂತು ಹೋಗಿದೆ. ಅದು ತಾನೇ ಗುರಿಯಾಗಿಬಿಟ್ಟಿದೆ. ಕೆಲವು ನಿರ್ದಿಷ್ಟ ಸಾಮಾಜಿಕ ಹಾಗೂ ರಾಷ್ಟ್ರೀಯ ಉದ್ದೇಶಗಳನ್ನು ಸಾಧಿಸುವ ಉದ್ದೇಶದಿಂದ ರಾಜಕೀಯ ಅಧಿಕಾರವನ್ನು ಪಡೆಯಬೇಕೆಂಬ ಗುರಿಗಿಂತಲೂ ಹೆಚ್ಚಾಗಿ, ಅಧಿಕಾರದ ರಾಜಕೀಯದಲ್ಲಿ ನಿರತರಾಗಿರುವ ಜನರು ಇಂದು ನಮ್ಮೊಡನೆ ಇದ್ದಾರೆ. ಈ ಕಾರಣದಿಂದಲೇ, ವಿವಿಧ ರಾಜಕೀಯ ಪಕ್ಷಗಳ ಜನರನ್ನು ಸಂಘಟಿಸುವ ಹಾಗೂ ಅವ್ಯವಸ್ಥೆಯೊಳಗಿನಿಂದ ವ್ಯವಸ್ಥೆಯನ್ನು ಸೃಷ್ಟಿಸುವ

ಬದಲು, ಈಗಿರುವ ಗೊಂದಲ ಅರಾಜಕತೆಗಳಿಗೆ ಮತ್ತಷ್ಟನ್ನು ಸೇರಿಸುತ್ತಿದೆ. ಅವುಗಳ ಒಂದೇ ಒಂದು ಗುರಿಯೆಂದರೆ ತಮ್ಮ ಕಡೆಗೆ ಬರುವವರ ದೃಷ್ಟಿಕೋನದ ಬಗೆಗೆ ಸ್ವಲ್ಪವೂ ಚಿಂತಿಸದೆ ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದಾಗಿದೆ.

ಬೇರೆ ಬೇರೆ ರಾಜಕೀಯ ಪಕ್ಷಗಳು ತಮಗಾಗಿ ಒಂದು ಸಿದ್ಧಾಂತವನ್ನು ರೂಪಿಸಿಕೊಳ್ಳಲಿ. ಕೇವಲ ಕೆಲವೂ ಸ್ವಾರ್ಥಸಾಧನೆಯ ಗುರಿಗಾಗಿ ಒಂದಾಗಿ ಸೇರಿದ ಜನರ ವಿವಿಧ ಭಾವನೆಗಳ ಕೇವಲ ಕಲಸುಮೇಲೋಗರವಾಗದಿರಲಿ ಅವರ ಗುಂಪು. ಅದು ಕೇವಲ ಒಂದು ವ್ಯವಹಾರದ ಮುಚ್ಚಳಿಕೆಗಿಂತ ಅಥವಾ ಜಾಯಿಂಟ್ ಸ್ಟಾಕ್ ಕಂಪನಿಯ ಮುಚ್ಚಳಿಕೆಗಿಂತಲೂ ಸ್ವಲ್ಪ ಭಿನ್ನವಾಗಿರಬೇಕು. ಮತ್ತು ಪಕ್ಷದ ತತ್ತ್ವ ಸಿದ್ಧಾಂತಗಳನ್ನು ಕೇವಲ ಪಕ್ಷದ ಪ್ರಣಾಳಿಕೆಯ ಪುಟಗಳಲ್ಲಿ ಬಂಧಿಸಿಡದಿರುವುದು ಅಗತ್ಯವಾಗಿದೆ. ಸದಸ್ಯರು ಅದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅದನ್ನು ಕಾರ್ಯರೂಪಕ್ಕೆ ತರಲು ತಮ್ಮನ್ನು ತಾವು ಸಮರ್ಪಿಸಿಕೊಳ್ಳಬೇಕು.

ಆದರೆ, ಪ್ರತಿಯೊಂದು ಅಥವಾ ಯಾವುದೇ ಒಂದು ಸಿದ್ಧಾಂತವು ಪ್ರಜಾಸತ್ತಾತ್ಮಕ ಯುಗದ ಆಗಮನಕ್ಕೆ ಒಂದು ಪಕ್ಷವನ್ನು ಸೂಕ್ತವಾದ ವಾಹನವನ್ನಾಗಿ ಮಾಡಲಾರದು. ಆ ಸಿದ್ಧಾಂತವು ಪ್ರಜಾಪ್ರಭುತ್ವದ ಭಾವನೆಗಳು, ತತ್ತ್ವ ಮತ್ತು ಆದರ್ಶಗಳಿಗೆ ವಿರೋಧವಾಗಿರಬಾರದು. ವಾಸ್ತವವಾಗಿ ಅನೇಕ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವವು ಅದನ್ನು ಯಾರು ಬುಡಮೇಲು ಮಾಡಲು ಪ್ರಯತ್ನಿಸುವರೋ ಅವರ ಕೈಗೇ ಹೋಗಿದೆ. ಕಮ್ಯುನಿಸ್ಟ್‌ರು ಒಂದು ಸಿದ್ಧಾಂತವನ್ನು ಹೊಂದಿದ್ದಾರೆ ಮತ್ತು ಕೇವಲ ಅಂತಿಮವಾಗಿ ಪ್ರಜಾಪ್ರಭುತ್ವವನ್ನು ಕೊನೆಮಾಡುವುದಕ್ಕೋಸ್ಕರ ತಾವು ಸಹ ಪ್ರಜಾಸತ್ತಾತ್ಮಕ ಮಾರ್ಗವನ್ನೇ ಅನುಸರಿಸುವುದಾಗಿ ಹೇಳಿಕೊಳ್ಳುತ್ತಾರೆ. ಡಾ. ರಾಧಾಕೃಷ್ಣನ್ ಅವರ ಮಾತುಗಳನ್ನು ಉದ್ಧರಿಸುವುದಾದರೆ, “ವ್ಯಕ್ತಿಯ ಘನತೆ ಮತ್ತು ವ್ಯಕ್ತಿಸ್ವಾತಂತ್ರ್ಯಗಳನ್ನು ಪ್ರಜಾಪ್ರಭುತ್ವವು ತನ್ನ ಮೂಲಭೂತ ತತ್ತ್ವವನ್ನಾಗಿಸಿಕೊಂಡಿದೆ. ಮಾನವನ ಇತಿಹಾಸದಲ್ಲಿನ ಎಲ್ಲ ಪ್ರಗತಿಗೂ ಅವನ ಸ್ವತಂತ್ರ ಚೈತನ್ಯವೇ ಜವಾಬ್ದಾರಿಯಾಗಿದೆ. ವ್ಯಕ್ತಿಯನ್ನು ನಾಶಮಾಡುವಂತಹ ಯಾವುದೇ ವ್ಯವಸ್ಥೆಯು ಯಾವುದೇ ಪ್ರಜಾಪ್ರಭುತ್ವಕ್ಕೆ ವಿರೋಧವಾದದ್ದು, ಚರ್ಚೆಗಳು, ಮನ ಒಲಿಸುವಿಕೆ, ಸಂಧಾನ, ರಾಜಿಸೂತ್ರ, ಕೊಡುಕೊಳ್ಳುವಿಕೆಗಳು ಪ್ರಜಾಸತ್ತಾತ್ಮಕ ಜೀವನ ಮಾರ್ಗದ ತಂತ್ರಗಳಾಗಿವೆ.” ಆದರಿಂದ ಮಾನವನ ಘನತೆ ಹಾಗೂ ಸ್ವಾತಂತ್ರ್ಯಗಳಲ್ಲಿ ನಂಬಿಕೆ ಇರದ ಮತ್ತು ನಿಷ್ಠುರ ಹಾಗೂ ಗಡುಸಾದ ಯಾವುದೇ ಸಿದ್ಧಾಂತವೂ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಸೂಕ್ತವಾಗುವುದಿಲ್ಲ.

ಪಕ್ಷದ ಶ್ರೇಣಿ–ದರ್ಜೆಗಳಲ್ಲಿ ಇರಬೇಕಾದ ಶಿಸ್ತಿನ ಪ್ರಶ್ನೆಯು ಕೇವಲ ಪಕ್ಷದ ಸ್ವಾಸ್ಥ್ಯವನ್ನು ಕಾಪಾಡುವುದಕ್ಕೆ ಮಾತ್ರವಲ್ಲ. ಆದರೆ ಸಾಮಾನ್ಯ ಜನರ ಮೇಲೆ



ಅದು ಬೀರುವ ಪ್ರಭಾವದಿಂದಲೂ ಅತ್ಯಂತ ಮುಖ್ಯವಾಗುತ್ತದೆ. ಸರ್ಕಾರವು ಮುಖ್ಯವಾಗಿ ಸಂರಕ್ಷಣೆ ಮತ್ತು ಕಾಪಾಡುವಿಕೆಯ ಸಾಧನವೇ ಹೊರತು ವಿನಾಶದ ಅಥವಾ ಬದಲಾವಣೆಯ ಸಾಧನವಲ್ಲ. ಜನರಲ್ಲಿ ಕಾನೂನಿನ ಬಗೆಗೆ ಗೌರವವನ್ನು ಮೈಗೂಡಿಸಲು, ಕಾನೂನಿನ ರಕ್ಷಕರಾಗಲು ಬಯಸುವ ಪಕ್ಷಗಳು ಈ ದಿಕ್ಕಿನಲ್ಲಿ ತಾವೇ ಒಂದು ಮಾದರಿ–ಉದಾಹರಣೆ–ಯನ್ನು ಸ್ಥಾಪಿಸಬೇಕು. ಪ್ರಜಾಪ್ರಭುತ್ವದ ಸತ್ವವು ಸ್ವಯಂ ಆಡಳಿತದ ಚೈತನ್ಯ ಹಾಗೂ ಅದಕ್ಕೆ ಬೇಕಾದ ಸಾಮರ್ಥ್ಯ. ಪಕ್ಷಗಳು ತಮ್ಮನ್ನು ತಾವು ಆಳಿಕೊಳ್ಳದಿದ್ದರೆ, ಸ್ವಯಂ ಆಡಳಿತ ಅಭಿಲಾಷೆಯನ್ನು ಸಮುದಾಯದಲ್ಲಿ ಮೂಡಿಸುವ ಭರವಸೆಯನ್ನು ಹೇಗೆ ತಳೆಯಲು ಸಾಧ್ಯ? ಒಂದು ಕಡೆ, ವೈಯಕ್ತಿಕ ಸ್ವಾತಂತ್ರ್ಯದ ರಕ್ಷಣೆಯ ಖಾತರಿಯು ಸಮುದಾಯಕ್ಕೆ ಅವಶ್ಯಕವಾದರೆ ಮತ್ತೊಂದೆಡೆ ವ್ಯಕ್ತಿಯು ಸಾರ್ವತ್ರಿಕ ಇಚ್ಛೆಗೆ ತನ್ನನ್ನು ತಾನು ಮನಃಪೂರ್ವಕವಾಗಿ ಮಣಿಸಿಕೊಳ್ಳುವುದು ಕೂಡ ಅಪೇಕ್ಷಣೀಯವಾಗುತ್ತದೆ. ಈ ಶಿಸ್ತಿಗೆ ಒಳಪಡುವಿಕೆಯು ಹೆಚ್ಚಿದಷ್ಟೂ ರಾಜ್ಯದ ಬಲಾತ್ಕಾರದ ಅಧಿಕಾರವು ಕಡಿಮೆಯಾಗುತ್ತದೆ. ರಾಜ್ಯದ ಯಾವುದೇ ಕಾನೂನಿಂದ ಅದರ ವ್ಯವಹಾರಗಳು ನಿಯಂತ್ರಿಸಲ್ಪಟ್ಟಿಲ್ಲದಿದ್ದು, ಆದರೆ, ಪಕ್ಷದ ಘಟಕಗಳ ಸ್ವಇಚ್ಛೆಯಿಂದ ಒಪ್ಪಿಕೊಂಡ ನಿರ್ಧಾರಗಳಿಂದ ನಿಯಂತ್ರಿತವಾದುದ್ದಾದರೆ, ವ್ಯಕ್ತಿಸ್ವಾತಂತ್ರ್ಯ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ಎಷ್ಟು ಉತ್ತಮವಾಗಿ ಸಮತೋಲನದಲ್ಲಿ ಇಡಬಹುದೆಂಬ ಉದಾಹರಣೆಯನ್ನು ಸ್ಥಾಪಿಸಬಹುದು. ಹೀಗಿರುವುದರಿಂದಾಗಿ, ತನ್ನ ಸದಸ್ಯರು ಕಟ್ಟುನಿಟ್ಟಾಗಿ ಪಾಲಿಸುವಂತೆ ಅವರಿಗೆ ನಡವಳಿಕೆಯ ನೀತಿಸಂಹಿತೆಯನ್ನು ಪಕ್ಷಗಳು ವಿಧಿಸಬೇಕಾಗಿರುವುದು ಅಗತ್ಯವಾಗಿದೆ.

ಪ್ರಜಾಪ್ರಭುತ್ವದಲ್ಲಿ ಒಂದಕ್ಕಿಂತಲೂ ಹೆಚ್ಚು ಪಕ್ಷಗಳಿರಬೇಕಾದುದು ಅತ್ಯಂತ ಸಹಜವಾಗಿದೆ. ಈ ಪಕ್ಷಗಳು ಸ್ವಾಸ್ಥ್ಯಪೂರ್ಣ ಸಾಮಾಜಿಕ ನಡವಳಿಕೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾದರೆ ಈ ಪಕ್ಷಗಳು ಒಂದು ರೀತಿಯ ಪಂಚಶೀಲವನ್ನು ಅನುಸರಿಸಬೇಕು. ಸೈದ್ಧಾಂತಿಕ ಆಧಾರದ ಮೇಲೆ ಮಾಡುವ ಪಕ್ಷಾಂತರವನ್ನು ಸಮರ್ಥಿಸಬಹುದು. ಆದರೆ ಬೇರೆ ಆಧಾರಗಳ ಮೇಲೆ ಪಕ್ಷಾಂತರ ಮಾಡಲು ಪಕ್ಷಗಳು ಪ್ರೋತ್ಸಾಹಿಸಬಾರದು. ಯಾವುದೇ ಪಕ್ಷವೂ ಸಂಪೂರ್ಣ ಬಹುಮತ ಪಡೆಯದಿದ್ದಲ್ಲಿ ಅಥವಾ ವ್ಯತ್ಯಾಸವು ತೀರಾ ಕಡಿಮೆಯಿದ್ದಾಗ ಅಧಿಕಾರದಾಹದ ರಾಜಕಾರಣಿಗಳು ಬೇರೆ ಪಕ್ಷಗಳಿಂದ ಬೆಂಬಲಗಳಿಸಲು ಅನುಚಿಕತ ಮಾರ್ಗಗಳನ್ನು ಬಳಸಬಹುದು. ಗ್ರೇಟ್ ಬ್ರಿಟನ್‌ನ ಎರಡು ಪಕ್ಷಗಳ ಸಂಸದೀಯ ವ್ಯವಸ್ಥೆಗಿಂತಲೂ ಸ್ವಲ್ಪ ಬೇರೆಯಾದ ಪದ್ಧತಿ ಸಂಪ್ರದಾಯಗಳನ್ನು ನಾವು ರೂಪಿಸಿಕೊಂಡು ಅಳವಡಿಸಿಕೊಳ್ಳುವುದು ಅತ್ಯವಶ್ಯಕವಾಗಿದೆ. ಇದು ಮಾತ್ರವೇ ದೇಶಕ್ಕೆ ಸ್ಥಿರ ಸರ್ಕಾರವನ್ನು ಕೊಡುತ್ತದೆ ಮತ್ತು ಪಕ್ಷಗಳು ನೀತಿಬಾಹಿರ ರಾಜಕಾರಣಿಗಳರಂಗ–

ಕ್ಷೇತ್ರವಾಗುವುದರಿಂದ ಅವನ್ನು ತಡೆಯುತ್ತದೆ.

ಈ ರೀತಿಯ ಅವಶ್ಯಕವಾಗಿ ಪರಿಗಣಿಸಬೇಕಾದ ಅನೇಕ ವಿಷಯಗಳಿವೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಪಕ್ಷಗಳು ತಮ್ಮ ಜವಾಬ್ದಾರಿಯನ್ನು ಅರಿಯುತ್ತವೆಯೇ? ಅಧಿಕಾರವನ್ನು ವಶಪಡಿಸಿಕೊಳ್ಳುವ ಅವರ ಆತಂಕ ಮತ್ತು ಅವಸರದಲ್ಲಿ ತಾವು ನಿಂತಿರುವ ತಳಪಾಯಗಳನ್ನೇ ಅವರು ನಾಶಮಾಡದಿರಲಿ.

(೧೯೬೧ರ ಫೆಬ್ರವರಿ ೨೭)



# ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ

ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾದ ಡಾ. ಸಂಪೂರ್ಣಾನಂದರು ತಮ್ಮ ಹುದ್ದೆಗೆ ರಾಜೀನಾಮೆ ನೀಡುವ ಮತ್ತು ಸಾರ್ವಜನಿಕ ಜೀವನದಿಂದ ನಿವೃತ್ತಿ ಹೊಂದುವ ತಮ್ಮ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಇದು ಮಂತ್ರಿ ಪದವಿಯಲ್ಲಿರುವವರು ಮತ್ತು ಅತೃಪ್ತರ ಅಥವಾ ರಾಜ್ಯ ಕಾಂಗ್ರೆಸಿಗರ ನಡುವಿನ ಬಹಳ ದೀರ್ಘ ಅವಧಿಯ ಕಲಹ, ಅಸಮಾಧಾನಗಳ ಮುಂದಿನ ಭಾಗವಾಗಿ ಉಂಟಾಗಿರುವ ಫಲಿತಾಂಶ. ಡಾ. ಸಂಪೂರ್ಣಾನಂದ ಅವರು ತಮ್ಮ ಹುದ್ದೆಯನ್ನು ಬಿಟ್ಟುಬಿಡುವಂತೆ ಪಂಡಿತ ನೆಹರೂ ಸಲಹೆ ನೀಡಿದ್ದಾರೆ. ಕಾರಣ, ಇದು ಕಾಂಗ್ರೆಸ್ಸಿಗರ ಶ್ರೇಣಿಯಲ್ಲಿ ಐಕ್ಯತೆಗೆ ದಾರಿಮಾಡಿಕೊಡಬಹುದೆಂಬ ಆಶಯ ಅವರಿಗೆ. ಆದರೆ ಪಂಡಿತ ನೆಹರೂ ಅವರ ವ್ಯಾಧಿನಿರ್ಣಯವಾಗಲೀ, ಅವರು ಸೂಚಿಸಿರುವ ಚಿಕಿತ್ಸೆಯಾಗಲೀ ಎಂದಿನಂತೆಯೇ ದೋಷಪೂರ್ಣವಾಗಿವೆ ನವೆಂಬರ್ ೨೯ರ ಬೆಳಗ್ಗೆ ಹೊಸ ನಾಯಕನ ಆಯ್ಕೆಯ ಕಾರ್ಯಕ್ರಮವು ನಿಗದಿಯಾಗಿದ್ದು ಆಯ್ಕೆ ನಡೆಯಬೇಕಿದ್ದಾಗ, ಪಂಡಿತ ನೆಹರೂ ಸೂಚಿಸಿ ಬೆಂಬಲಿಸಿದವರೆಂದು ವ್ಯಾಪಕ ಪ್ರಚಾರವನ್ನು ನೀಡಿದ್ದರೂ ಶ್ರೀ ಸಿ.ಬಿ. ಗುಪ್ತಾ ಅವರ ಹೆಸರು ಶಾಸಕರ ಸರ್ವಾನುಮತದ ಬೆಂಬಲ ಪಡೆಯಲಾಗಲಿಲ್ಲ. ಕೇಂದ್ರದ ತುರ್ತು ಸಂವಹನದಿಂದಾಗಿ ಚುನಾವಣೆಯನ್ನು ಮುಂದೂಡದಿದ್ದರೆ ಅವರು ಅಂದು ಗೆಲ್ಲಲಾಗುತ್ತಿರಲಿಲ್ಲ, ಎಂದು ಕೆಲವರು ಭಾವಿಸುತ್ತಾರೆ. ಕಾಂಗ್ರೆಸ್‌ನ ಹೈಕಮ್ಯಾಂಡ್, ತನ್ನ ನಾಮಿನಿಯನ್ನು (ನಿರ್ದಿಷ್ಟನಾಮಿ) ಶಾಸಕರ ಮೇಲೆ ಹೊರಿಸುತ್ತದೆಯೇ ಅಥವಾ ತಮ್ಮ ನಾಯಕನನ್ನು ತಾವೇ ಆರಿಸಿಕೊಳ್ಳಲು ಅವರನ್ನು ಸ್ವತಂತ್ರವಾಗಿ ಬಿಡುತ್ತದೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

ಎಂದಿನಂತೆಯೇ, ಈ ಸಂಘರ್ಷವು ಹೆಚ್ಚಾಗಿ ಖಾಸಗೀ ಸ್ವರೂಪದ್ದಾದರೂ ಪ್ರತಿಯೊಂದು ಗುಂಪೂ ಕೂಡ, ಅಧಿಕಾರಕ್ಕಾಗಿ ಇರುವ ತಮ್ಮ ಕ್ಷುಲ್ಲಕ ಆಸೆಗಳನ್ನು ಮರೆಮಾಚಿಕೊಳ್ಳಲು ತತ್ತ್ವ ಸಿದ್ಧಾಂತಗಳನ್ನು ಕಣಕ್ಕೆ ಎಳೆದುತರುತ್ತಿದೆ. ಶ್ರೀ ಸಂಪೂರ್ಣಾನಂದ ಮತ್ತು ಅವರ ಬೆಂಬಲಿಗರು, ಶಾಸಕಾಂಗದ ಗುಂಪು ಸ್ವತಂತ್ರವಾಗಿರಬೇಕೆಂದೂ ಮತ್ತು ಕೇವಲ ಶಾಸಕಾಂಗ ಮತ್ತು ಜನರಿಗೆ ಮಾತ್ರ ಜವಾಬ್ದಾರರಾಗಿರಬೇಕೆಂದು ಅಭಿಪ್ರಾಯ ಹೊಂದಿದ್ದರೆ, ಅತೃಪ್ತರ ಗುಂಪು,

ಶಾಸಕಾಂಗದ ಹೊರಗಿನ ಪಕ್ಷವು, ಅಧಿಕಾರದಲ್ಲಿರುವವರನ್ನು ನಿಯಂತ್ರಿಸಬೇಕೆಂದು ಅಭಿಪ್ರಾಯಪಡುತ್ತದೆ. ಇದೊಂದು ಹಳೆಯ ವಿವಾದ ಮತ್ತು ಈ ಎರಡೂ ವಲಯಗಳ ನಡುವೆ ಯಾವುದೇ ಕಟ್ಟುನಿಟ್ಟಾದ ಸೀಮೆಯನ್ನು ಗುರುತಿಸುವುದು ಕಷ್ಟವಾಗಬಹುದು.

ಈ ಎರಡೂ ಪರಸ್ಪರ ಪೂರ್ತಿ ಪ್ರತ್ಯೇಕವಾಗಿರುವುವೇನೂ ಅಲ್ಲ, ವಿಷಯಗಳು ಕಾರ್ಯಗಳು ಮುಂದುವರೆದಂತೆ, ಸರ್ಕಾರ ಮತ್ತು ಪಕ್ಷಗಳು ಹೆಚ್ಚು ಹೆಚ್ಚಾಗಿ ಗುರುತಿಸಿಕೊಂಡು, ಸಮೀಕರಿಸಿಕೊಳ್ಳುತ್ತಿವೆ. ಪ್ರಸಕ್ತ ಸಂದರ್ಭದಲ್ಲಿ ಡಾ. ಸಂಪೂರ್ಣಾನಂದ ಮತ್ತು ಶ್ರೀ ಸಿ.ಬಿ. ಗುಪ್ತಾ ಇಬ್ಬರ ನಿಲುವಿನಲ್ಲಿಯೂ, ಸ್ವೋಕ್ತಿ ವಿರೋಧದ ಅಂಶವಿದೆ. ಪಕ್ಷದ ಚುನಾವಣೆಗಳು ನಡೆಯುತ್ತಿದ್ದಾಗ, ತಮ್ಮ ಗುಂಪು ಸೋಲನ್ನು ಅನುಭವಿಸಿದರೆ ಅದು ತಮ್ಮ ಮಂತ್ರಿಮಂಡಳದ ವಿರುದ್ಧ ಅವಿಶ್ವಾಸ ಮತ ಮಂಡಿಸಿದಂತೆಯೇ ಅಗುತ್ತದೆಯಾದ್ದರಿಂದ ತಾವು ರಾಜಿನಾಮೆ ನೀಡುವುದಾಗಿ ಪ್ರಕಟಿಸಿದರು. ಅವರು ಖಂಡಿತವಾಗಿಯೂ ವಿಶ್ವಾಸಮತವನ್ನು ಬಯಸಿದ್ದು ವಿಧಾನಸಭೆ (ಶಾಸಕಾಂಗ)ಯಿಂದಲ್ಲ, ಆದರೆ ತಮ್ಮದೇ ಪಕ್ಷದಿಂದ. ಅವರು ಶಾಸಕಾಂಗದ ಗುಂಪನ್ನು ಪಕ್ಷದ ಗುಂಪಿಗೆ ಅಧೀನವಾಗಿಸಿದ್ದರು. ಮಂತ್ರಿಮಂಡಳದಲ್ಲಿರುವರೇನಾದರೂ ರಾಜ್ಯದ ಕಾಂಗ್ರೆಸ್ ಚುನಾವಣೆಯಲ್ಲಿ ಜಯಗಳಿಸಿದರೆ, ಅವರು ಎರಡೂ ವಿಧದಲ್ಲಿ ಲಾಭ ಹೊಂದಬಹುದಾಗಿತ್ತು– ದೋಸೆಯನ್ನು ತಿನ್ನಲೂ ಬಹುದಾಗಿತ್ತು, ಉಳಿಸಿಕೊಳ್ಳಲೂಬಹುದಾಗಿತ್ತು– ಅವರು ಎರಡನ್ನೂ ನಿಯಂತ್ರಿಸಬಹುದಾಗಿತ್ತು ಆದ್ದರಿಂದ ಪಕ್ಷದ ಪಾರಮ್ಯತೆಯ ಉನ್ನತ ತತ್ತ್ವವನ್ನು ಪ್ರತಿಪಾದಿಸುವದರಲ್ಲಿ ಹುದ್ದೆಯನ್ನು–ಅಧಿಕಾರವನ್ನು–ತ್ಯಜಿಸುವ ಅಥವಾ ಬಿಡುವ ಕಾರ್ಯವನ್ನು ಅದು ಒಳಗೊಂಡಿರಲಿಲ್ಲ. ಆದರೆ ಆ ಲೆಕ್ಕಾಚಾರಗಳು ತಲೆಕೆಳಗಾದವು. ರಾಜ್ಯದ ಕಾಂಗ್ರೆಸ್ ಅತೃಪ್ತರ ವಶವಾಯಿತು. ಆದ್ದರಿಂದ, ಶಾಸಕಾಂಗ ಪಕ್ಷವನ್ನು ಮತದಾರರ ಪ್ರತಿನಿಧಿಗಳೆಂದು ದೃಢವಾಗಿ ಸಮರ್ಥಿಸಬೇಕಾದುದು ಅವಶ್ಯಕವಾಯಿತು ಮತ್ತು ಜನರ ಒಂದು ಭಾಗ ಅಥವಾ ಗುಂಪನ್ನಲ್ಲ. ಮೊದಲ ಹೇಳಿಕೆಯನ್ನು ಪಕ್ಷಕ್ಕೆ ಬಿಟ್ಟುಕೊಟ್ಟಿದ್ದರಿಂದ ಅವರು ಅದನ್ನು ಪಾಲಿಸಬೇಕಾಯಿತು.

ಶ್ರೀಗುಪ್ತ ಅವರು, ಪಕ್ಷವು ಶಾಸಕಾಂಗದ ಗುಂಪಿಗೆ ಮಾರ್ಗದರ್ಶನ ಮಾಡಿ ಅದನ್ನು ನಿಯಂತ್ರಿಸಬೇಕೆಂದು ಹೇಳುವಾಗ, ಅವರು ಪಕ್ಷಕ್ಕೆ ರಾಜರನ್ನು ನಿಮಿಸುವ ಪಾತ್ರವನ್ನು ನೀಡುತ್ತಾರೆ– ನಾಯಕರನ್ನು ನಿರ್ಮಿಸುವ ಪಾತ್ರ– ಈ ಪಾತ್ರವು ಪ್ರಸಕ್ತ ಸಮಯದಲ್ಲಿ ಕಾಂಗ್ರೆಸ್ಸಿನಿಂದ ಎಲ್ಲಿಯೂ, ಪದ್ಧತಿಯಲ್ಲಿದ್ದು ನಿರ್ವಹಿಸಲ್ಪಡದಿದ್ದರೂ, ಮುಂಚಿನ ದಿನಗಳಲ್ಲಿ ಖಚಿತವಾಗಿಯೂ, ಬಹಳ ಪರಿಣಾಮಕಾರಿಯಾಗಿಯೂ ನಿರ್ವಹಿಸಲ್ಪಟ್ಟಿತು. ಕಾಂಗ್ರೆಸ್ ಹೈಕಮ್ಯಾಂಡಿನಿಂದ ಮಂತ್ರಿಮಂಡಳಿಗಳು ರೂಪಿಸಲ್ಪಡುತ್ತಿದ್ದವು ಹಾಗೂ ಉರುಳಿಸಲ್ಪಡುತ್ತಿದ್ದವು. ಆದರೆ, ಅಂದಿನಿಂದ ಪರಿಸ್ಥಿತಿಯ ಈಗ ಹೆಚ್ಚು ಬದಲಾವಣೆಯನ್ನು ಹೊಂದಿದೆ. ಕಾಂಗ್ರೆಸ್ ಸರ್ಕಾರವನ್ನು ನಿಯಂತ್ರಿಸುವ



ಯಾವುದೇ ಅಧಿಕಾರವನ್ನು ಕಾಂಗ್ರೆಸ್ ಈಗ ಪಡೆದಿಲ್ಲ. ನೆಹರೂ ಸರ್ಕಾರದ ವಿರುದ್ಧದ ಪ್ರತಿಭಟನೆಯಲ್ಲಿ ಆಚಾರ್ಯ ಕೃಪಲಾನಿಯವರು ಕಾಂಗ್ರೆಸ್ಸಿನ ತಮ್ಮ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಟ್ಟಾಗ, ಎರಡೂ ಪಕ್ಷಗಳ– ಗುಂಪುಗಳ– ಪರಸ್ಪರ ಸ್ಥಾನಗಳ ಪ್ರಶ್ನೆಯು ತೀರ್ಮಾನಗೊಂಡಿತು. ಹಾಗೆಯೇ ರಾಜರ್ಷಿ ಪುರುಷೋತ್ತಮದಾಸ್ ಟಂಡನ್‌ರವರನ್ನು ಒತ್ತಾಯಪೂರ್ವಕವಾಗಿ ಪದವಿಯನ್ನು ತ್ಯಜಿಸುವಂತೆ ಮಾಡಿದಾಗ ಕೂಡ ಈ ಪ್ರಶ್ನೆಯು ತೀರ್ಮಾನವಾಯಿತು. ಕಾಂಗ್ರೆಸ್ ಈಗ ಸರ್ಕಾರವನ್ನು ನಿಯಂತ್ರಿಸುವುದಿಲ್ಲ. ಆದರೆ ಸರ್ಕಾರವು ಈಗ ಕಾಂಗ್ರೆಸ್ ಅನ್ನು ನಿಯಂತ್ರಿಸುತ್ತದೆ. ಈಗ ಕಾಂಗ್ರೆಸ್ ಸರ್ಕಾರವಿಲ್ಲ. ಆದರೆ ಕೇವಲ ಕಾಂಗ್ರೆಸ್ ಸರ್ಕಾರ ಮಾತ್ರ ಇದೆ. ಕಾಂಗ್ರೆಸ್ ಅಧ್ಯಕ್ಷರು ಯಾವಾಗಲೂ ಪ್ರಧಾನಮಂತ್ರಿಗಳ ಅಧೀನರಾಗಿದ್ದು ಅವರ ಅಭಿಪ್ರಾಯಗಳನ್ನು ಅನುಮೋದಿಸುತ್ತಾರೆ.

ಆದರೆ, ಅಖಿಲಭಾರತ ಮಟ್ಟದಲ್ಲಿ ಸತ್ಯವಾದದ್ದು ಯಾವಾಗಲೂ ರಾಜ್ಯ ಮಟ್ಟದಲ್ಲಿಯೂ ನಿಜವಾಗಬೇಕಾಗಿಲ್ಲ. ಇಲ್ಲಿ ಶ್ರೀ ಸಿ.ಬಿ. ಗುಪ್ತಾ ಅವರು ಮಂತ್ರಿಮಂಡಳವು ಕಾಂಗ್ರಸ್ ಅನ್ನು ಅನುಸರಿಸಬೇಕೆಂದು ಬಯಸುತ್ತಾರೆ. ಆದಾಗ್ಯೂ, ಶ್ರೀ ಗುಪ್ತಾ ಅವರು ಸ್ವತಃ ತಾವೇ ಮುಖ್ಯಮಂತ್ರಿಯ ಪದವಿಗೆ ಅಭ್ಯರ್ಥಿಯಾಗಿ ಮುಂದೆಬಂದಾಗ ಖಚಿತವಾಗಿಯೂ, ಅವರು ಕೇವಲ ರಾಜರನ್ನು ನಿರ್ಮಾಣ ಮಾಡುವ ಪಾತ್ರದಿಂದ ಸಂತೃಪ್ತರಾಗಿಲ್ಲ ಆದರೆ ತಾವೇ ರಾಜರಾಗಲು ಬಯಸುತ್ತಾರೆ ಎಂಬ ರಹಸ್ಯವು ಬಯಲಾಗಿತ್ತು. ಮುಂಬಾಗಿಲಿನಿಂದ ಪ್ರವೇಶಿಸಲು ವಿಫಲಗೊಂಡ ಅವರು ಆ ಹುದ್ದೆಗೆ ಹಿಂಬಾಗಿಲಿನಿಂದ ಪ್ರವೇಶಿಸಲು ಇಚ್ಛಿಸುತ್ತಾರೆ. ಖಂಡಿತವಾಗಿಯೂ ಇದು ಬಿಕ್ಕಟ್ಟನ್ನು, ಸಂದಿಗ್ಧವನ್ನು ಪರಿಹರಿಸುವ ಮಾರ್ಗವಲ್ಲ; ಇದು ಬಿಕ್ಕಟ್ಟನ್ನು ಮತ್ತಷ್ಟು ತೀವ್ರಗೊಳಿಸುತ್ತದೆ, ಅಷ್ಟೆ. ಯು.ಪಿ.ಯ ಉದಾಹರಣೆಯನ್ನು ಇತರ ರಾಜ್ಯಗಳೂ ಅನುಸರಿಸಬಹುದಾಗಿದೆ. ಅನೇಕ ರಾಜ್ಯಗಳಲ್ಲಿ ಮಂತ್ರಿಮಂಡಳ ಮತ್ತು ಕಾಂಗ್ರೆಸ್ಸಿನಲ್ಲಿ ವಿರುದ್ಧ ಗುಂಪಿನ ಜನರಿದ್ದಾರೆ. ಶಾಸಕಾಂಗ ಪಕ್ಷವು, ಪಕ್ಷಕ್ಕೆ ಅಧೀನವಾಗಿರುವಂತೆ ಮಾಡುವುದು ಒಂದು ವಿಷಯ ಮತ್ತು ಪಕ್ಷದ ಮುಖಂಡನನ್ನು ಶಾಸಕಾಂಗದ ಮುಖ್ಯಸ್ಥನನ್ನಾಗಿ ಮಾಡುವುದು ಸಂಪೂರ್ಣವಾಗಿ ಬೇರೆಯೇ ವಿಚಾರವಾಗಿದೆ. ಇದನ್ನೇನಾದರೂ ಮಾಡಿದ್ದೇ ಆದರೆ, ದೇಶದಲ್ಲಿ ಪಕ್ಷದ ಸರ್ವಾಧಿಕಾರವಿರುತ್ತದೆ.

ಎರಡೂ ಪಕ್ಷಗಳ ಗುಂಪುಗಳ ಪರಸ್ಪರ ಪ್ರಾಮುಖ್ಯತೆಯ ಪ್ರಶ್ನೆಯು ವ್ಯಾವಹಾರಿಕವಾಗಿದ್ದು ಅದನ್ನು ಯಾವುದೇ ಸೈದ್ಧಾಂತಿಕ ವಿಧಾನದಿಂದ ಪರಿಹರಿಸಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿ ಸೈದ್ಧಾಂತಿಕವಾಗಿ ಜನರ ಅಭಿಲಾಷೆಯೇ ಪರಮೋಚ್ಚವಾದದ್ದು ಮತ್ತು ಅವರ ಪ್ರತಿನಿಧಿಗಳನ್ನು ತಮ್ಮ ಅಂತಃಸಾಕ್ಷಿ ಜನಾಭಿಪ್ರಾಯ ಮತ್ತು ಸಂವಿಧಾನದ ವಿನಾ ಬೇರೆ ಯಾವುದಕ್ಕೂ ಅಧೀನಗೊಳಿಸಬಾರದು. ಆದರೆ,

ಈಗಿನ ಪದ್ಧತಿಯಲ್ಲಿ, ಪಕ್ಷದ ಪ್ರಜಾಪ್ರಭುತ್ವದಲ್ಲಿ, ಪಕ್ಷದ ಬೆಂಬಲದ ಆಧರದ ಮೇಲೆಯೇ ಅಭ್ಯರ್ಥಿಯು ಚುನಾಯಿಸಲ್ಪಡುತ್ತಾನೆ. ಅನೇಕ ಬಾರಿ ಜನರು ಪಕ್ಷದ ವ್ಯಕ್ತಿಗಳಿಗಿಂತಲೂ ಹೆಚ್ಚಾಗಿ ಪಕ್ಷವನ್ನೇ ಬೆಂಬಲಿಸುತ್ತಾರೆ. ವ್ಯಕ್ತಿಯೂ ಕೂಡ ಸ್ವ ಇಚ್ಛೆಯಿಂದಲೇ ಪಕ್ಷದ ಶಿಸ್ತನ್ನು ಒಪ್ಪಿಕೊಳ್ಳುತ್ತಾನೆ. ಆದ್ದರಿಂದ ಪಕ್ಷದ ಆದೇಶಗಳನ್ನು ಅನುಸರಿಸುವುದು ಅನಾನುಕೂಲ, ಕಷ್ಟಕರವೆನಿಸಿದಾಗ ಮಾತ್ರ ಅವನು ಜನರ ಹೆಸರನ್ನು ತರುವಂತಿಲ್ಲ. ವಿಶೇಷವಾಗಿ, ಆಯ್ಕೆಯಾದವರನ್ನು ಹಿಂದಕ್ಕೆ ಕರೆಸಿಕೊಳ್ಳುವ ನಿಬಂಧನೆ ಇರದಿರುವಾಗ, ಅಭ್ಯರ್ಥಿಯ ಆಯ್ಕೆಯ ನಂತರ, ಆ ಶಾಸಕನ ವರ್ತನೆಯನ್ನು ನಡತೆಯನ್ನು ಕೇವಲ ಪಕ್ಷವು ಮಾತ್ರ ನಿಯಂತ್ರಿಸಬಲ್ಲದು. ಮುಂದಿನ ಚುನಾವಣೆಗಳತನಕ ಜನರು ಅಸಹಾಯಕರಾಗುತ್ತಾರೆ.

ಆದರೂ, ಒಂದು ಪಕ್ಷವು ತನ್ನ ಅಧಿಕಾರವನ್ನು ಜನರ ಹಿತಾಸಕ್ತಿಗೆ ಬಳಸಲು ಬಯಸುವುದಾದರೆ, ಅದಕ್ಕೆ ಕೆಳಸ್ತರದ ಮತದಾರರ ಬೆಂಬಲದ ಅವಶ್ಯಕತೆಯಿದೆ (ತೃಣಮೂಲದ ಬೆಂಬಲ). ಪ್ರಸಕ್ತ ಚಿತ್ರಣದಲ್ಲಿ ಎಲ್ಲಿಯೂ ಜನರ ಉಪಸ್ಥಿತಿಯೇ ಕಂಡುಬರುವುದಿಲ್ಲ. ವಾಸ್ತವವಾಗಿ ಜನರನ್ನು ಪ್ರತಿನಿಧಿಸುತ್ತೇವೆಂದು ಹೇಳಿಕೊಳ್ಳುವವರ ಗುಂಪುಗಾರಿಕೆಯ ಘರ್ಷಣೆಗಳಿಂದಾಗಿ ಜನರು ಕಷ್ಟ ಪಡುವಂತೆ ಮಾಡಲಾಗಿದೆ. ಪ್ರಧಾನ ಮಂತ್ರಿಗಳು, ಹದಿನೈದು ದಿನಗಳ ಮುಂಚೆ ಭೂಪಾಲಿನಲ್ಲಿ ಮಾತನಾಡುತ್ತಿದ್ದಾಗ, ತಮ್ಮ ಬೇಸರದ ಹಾಗೂ ಜುಗುಪ್ಸೆಯ ಮನೋಭಾವದಲ್ಲಿ, ಕಾಂಗ್ರೆಸ್ಸನ ವಿಸರ್ಜನೆಯನ್ನು ಸಲಹೆ ಮಾಡಿದ್ದರು. ಈ ಸಂದಿಗ್ಧತೆಯ ಪರಕಾಷ್ಠೆಯನ್ನು ಪರಿಹರಿಸಲಾಗದಿದ್ದರೆ ಪಕ್ಷವು ವಿಸರ್ಜಿಸಲ್ಪಡಬೇಕೆಂಬುದು ಅವರ ಆದೇಶವಾಗಿತ್ತು. ಆದರೆ ಆ ರೀತಿಯ ನಿರಾಶಾ ಮನೋಭಾವದ, ಅಪಜಯದ ಭಾವದ ವಿಧಾನ ಮತ್ತು ವಿಷಣ್ಣ ಮನೋಭಾವದಲ್ಲಿರುವುದು, ದೇಶಕ್ಕೆ ಯಾವ ರೀತಿಯಲ್ಲಿಯೂ ಸಹಾಯ ಮಾಡುವುದಿಲ್ಲ. ವಾಸ್ತವವಾಗಿ ಕಾಂಗ್ರೆಸ್ಸಿನವರು ವಿಸರ್ಜನೆಯ ಆದೇಶಕ್ಕೆ ಸಹಿಹಾಕುವುದಿಲ್ಲ. ಆದರೆ, ಅವರು ನಡೆದುಕೊಳ್ಳುತ್ತಿರುವ ವಿಧಾನದಿಂದಾಗಿ ಅವರು ಅವನತಿ ಮತ್ತು ವಿನಾಶಕ್ಕೆ ದಾರಿ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರು ತಮ್ಮ ಜವಬ್ದಾರಿಯನ್ನು ಅರಿತುಕೊಳ್ಳಲಿ ಮತ್ತು ಅಯೋಗ್ಯರಿಂದ ಶೂನ್ಯವು ತುಂಬಿಕೊಳ್ಳುವುದನ್ನು ಅನುಮತಿಸುವ ಬದಲು, ಜನರಿಗೆ ತಮ್ಮ ಕರ್ತವ್ಯದ ಋಣ ತೀರಿಸಲು ಮುಂದೆ ಬರಲಿ

(೧೯೬೦ರ ಡಿಸೆಂಬರ್ ೫)



## ನಿಮ್ಮ ಮತ :
## (೧) ಸೂಕ್ತ ಅಭ್ಯರ್ಥಿ ಯಾರು?

ಚುನಾವಣಾ ಆಯೋಗದಿಂದ ಈ ಮೊದಲೇ ಪ್ರಕಟಿಸಲ್ಪಟ್ಟಿರುವಂತೆ ಮುಂದಿನ ಚುನಾವಣಾ ಕಾರ್ಯಸೂಚಿಯನ್ನು ಸರ್ಕಾರವು ಸ್ಥಿರಗೊಳಿಸಿದೆ. ಜ್ಯೋತಿಷಿಗಳು ಯಾವುದೇ ಭವಿಷ್ಯ ನುಡಿದರೂ ಈ ಪ್ರಜಾಸತ್ತಾತ್ಮಕ ಮಹಾ ಸವಾಲನ್ನು ಎದುರಿಸಲು ಜನರು ಹಾಗೂ ಪಕ್ಷಗಳು ಗಂಭೀರ ಹಾಗೂ ವ್ಯಾವಹಾರಿಕ ಸಿದ್ಧಾಂತಗಳನ್ನು ಮಾಡಿಕೊಳ್ಳಬೇಕಾಗಿದೆ. ಪಕ್ಷಗಳು ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿವೆ. ಒಳಗುಂಪು, ವೈಷಮ್ಯ ಮತ್ತು ಕೋಮುವಾದಿ ಗುಂಪುಗಳ ಭಿನ್ನಾಭಿಪ್ರಾಯದ ಹಕ್ಕೊತ್ತಾಯಗಳನ್ನು ತೃಪ್ತಿಪಡಿಸಲು ಒಪ್ಪಿವಾಗುವಂತಹ ಸೂತ್ರವನ್ನು ಕಂಡುಹಿಡಿಯುವಲ್ಲಿ ಕೆಲವು ಹಳೆಯ ಪಕ್ಷಗಳು, ವಿಶೇಷವಾಗಿ ಕಾಂಗ್ರೆಸ್, ಹೆಚ್ಚು ತೊಂದರೆಯನ್ನು ಅನುಭವಿಸುತ್ತಿದ್ದರೆ, ಹೊಸ ಪಕ್ಷಗಳು ತಮ್ಮ ಚಿಹ್ನೆಯ ಮೇಲೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಸೂಕ್ತ ಅಭ್ಯರ್ಥಿಗಳನ್ನು ಹುಡುಕಲು ಬಿಡುವಿಲ್ಲದ ಪ್ರಯತ್ನಗಳನ್ನು ಮಾಡಬೇಕಾಗಿದೆ. 'ಸೂಕ್ತ' ಅಭ್ಯರ್ಥಿ ಎನ್ನುವ ಪದವನ್ನು ವಿವರಿಸುವುದಕ್ಕಿಂತಲೂ ಉತ್ತಮವಾಗಿ ಅರ್ಥಮಾಡಿಕೊಳ್ಳುವಂತಹುದು. ಆದಾಗ್ಯೂ ದೇಶದ ಮತ್ತು ಪಕ್ಷಗಳ ರಾಜಕೀಯ ಸ್ವಾಸ್ಥ್ಯದ ಸರಿಯಾದ ಮೌಲ್ಯ ಮಾಪನಕ್ಕಾಗಿ, ಅಂತಹ ಅಭ್ಯರ್ಥಿಯ ಕೆಲವು ಮುಖ್ಯ ಲಕ್ಷಣಗಳನ್ನು ಚರ್ಚಿಸುವುದು ಅಪೇಕ್ಷಣೀಯವಾಗಿದೆ.

ಸಾಮಾನ್ಯ ಮನುಷ್ಯನ ತಿಳಿವಳಿಕೆಯಲ್ಲಿ (ಶ್ರೀಸಾಮಾನ್ಯನ ತಿಳಿವಳಿಕೆಯಲ್ಲಿ) ಸೂಕ್ತ ಅಭ್ಯರ್ಥಿಯೆಂದರೆ, ಅವನು ಶಾಸನಸಭೆಯಲ್ಲಿ ಪಕ್ಷದ ಅಭಿಪ್ರಾಯಗಳನ್ನು ಪ್ರತಿನಿಧಿಸಬಲ್ಲವನಾಗಿರಬೇಕು. ತನ್ನ ಚುನಾವಣಾ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುತ್ತಿರಬೇಕು ಮತ್ತು ಆ ಕ್ಷೇತ್ರದ ಜನರ ಅಭಿಪ್ರಾಯ, ಭಾವನೆಗಳನ್ನು ಪ್ರಸರಿಸಬಲ್ಲವನಾಗಿರಬೇಕು. ಒಬ್ಬ ವ್ಯಕ್ತಿಯಾಗಿ ಅವನು ಜನರಿಗೆ ನಿಷ್ಠನಾಗಿರಬೇಕು ಮತ್ತು ತಾನು ಪ್ರತಿನಿಧಿಸಲು ಬಯಸುತ್ತಿರುವ ಪಕ್ಷಕ್ಕೆ ಆ ಪಕ್ಷದ ಸದಸ್ಯನಾಗಿ ಅವನು ಪಕ್ಷದ ಶಿಸ್ತಿಗೊಳೊಪಟ್ಟಿದ್ದು, ಅದರ ಧ್ಯೇಯಕ್ಕೆ ತನ್ನನ್ನು ತಾನು ಸಮರ್ಪಿಸಿಕೊಳ್ಳಬೇಕು. ಅವನಿಗೆ ಬೇರೆ ಯಾವುದಾದರೂ ಅರ್ಹತೆಗಳಿದ್ದರೆ, ಅವನ ಘನತೆಗೆ ಅವು ಪೂರಕವಾಗಬಹುದು. ಆದರೆ ಸೂಕ್ತತೆಯ ಮೂಲಭೂತ

ಘಟಕಗಳಿಗೆ ಅವು ಪ್ರತಿವಸ್ತುಗಳಾಗಲಾರವು.

ಆದರೆ, ಭಾರತದಲ್ಲಿ ಯಾವ ರಾಜಕೀಯ ಪಕ್ಷವೂ ಈ ಸಂಗತಿಗಳ ಬಗೆಗೆ ಚಿಂತಿಸುವುದಿಲ್ಲ. ತಾನು ಜಯಗಳಿಸಲು ಸಮರ್ಥನಾಗಬೇಕು ಎಂಬುದೊಂದೇ ಅವರು ಗಮನ ಕೊಡುವ ವಿಚಾರವಾಗಿದೆ. ಕುದುರೆಜೂಜಿಗೆ ಹೋಗುವಂತೆ ಅವರಿಗೆ ಯಾವುದೇ ಒಂದು ನಿರ್ದಿಷ್ಟ ಕುದುರೆ ಬಗೆಗೆ ಪ್ರೀತಿಯಿಲ್ಲ. ಜಯಗಳಿಸುವ ಹೆಚ್ಚು ಉತ್ತಮ ಅವಕಾಶವಿರುವ ಕುದುರೆಯ ಮೇಲೆ ಬಾಜಿ ಕಟ್ಟುತ್ತಾರೆ. ಆದರೆ ರಾಜಕೀಯದಲ್ಲಿ ಜಯಶಾಲಿಯಾದೊಡನೆ– ವಿಜೇತನೊಡನೆ–ಯ ಸಂಬಂಧವು ಆಟ ಮುಗಿದ ಮೇಲೆ ಮುಗಿಯುವುದಿಲ್ಲ ಎಂಬುದನ್ನು ಅವರು ಮರೆತುಬಿಡುತ್ತಾರೆ. ಆದರೆ ಅವರು ಮೊದಲಿಂದ ಕಡೆಯವರೆಗೂ, ಎಲ್ಲ ವಿಷಯಗಳಲ್ಲಿಯೂ ಹೊರೆಯನ್ನು ಹೊತ್ತುಕೊಂಡೇ ಸಾಗಬೇಕಾಗಿರುತ್ತದೆ. ಮತ್ತು ಅವನ ಮಧ್ಯಸ್ಥಿಕೆಯ ಮೂಲಕವೇ ಶಾಸಕಾಂಗದ ಸಭೆಯಲ್ಲಿ ಮತ್ತು ಚುನಾವಣಾ ಕ್ಷೇತ್ರದಲ್ಲಿ ಪಕ್ಷವು ಕಾರ್ಯನಿರ್ವಹಿಸಬೇಕಾಗುತ್ತದೆ.

ಇಂದಿನ ಅನೇಕ ರಾಜಕೀಯ ಪಕ್ಷಗಳಲ್ಲಿ ಕೆಳಸ್ತರದ ಮತದಾರರ ಬೆಂಬಲವೇ ಇಲ್ಲ(ತೃಣಮೂಲ ಬೆಂಬಲ). ಒಂದು ಕಾಲದಲ್ಲಿ ಜನರ ಪಕ್ಷವಾಗಿದ್ದ ಕಾಂಗ್ರೆಸ್, ಈಗ ಜನರ ಮೇಲೆ ಯಾವುದೇ ಹಿಡಿತ ಸಾಧಿಸುವುದರಲ್ಲಿ ವಿಫಲವಾಗಿದೆ. ಹೊಸಪಕ್ಷಗಳು ತಮ್ಮನ್ನು ಜನರಿಗೆ ಪ್ರಿಯಗೊಳಿಸಿಕೊಳ್ಳಲು ಕಷ್ಟಪಟ್ಟು ಕೆಲಸ ಮಾಡಬೇಕಾಗಿದೆ. ಇಂತಹ ಪರಿಸ್ಥಿತಿಗಳ ಅಡಿಯಲ್ಲಿ, ಪಕ್ಷದ್ದಕ್ಕಿಂತಲೂ ಬೇರೆಯದಾದ, ಮನವಿಗಳನ್ನೂ ಬೇಡಿಕೆಗಳನ್ನೂ ಮಾಡಬೇಕಾಗಿದೆ. ಈ ಕಾರಣದಿಂದಲೇ ಪ್ರತಿಯೊಂದು ಪಕ್ಷವೂ ಮಾಜಿ ರಾಜರನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಆಳುವ ಮನೆತನದ ಯಾವುದೇ ಒಬ್ಬ ಸದಸ್ಯ ಚುನಾವಣೆಯ ಕಣದಲ್ಲಿದ್ದರೆ, ಮಂತ್ರಿಯೂ ಕೂಡ ವಿರೋಧಿಸಲು– ಸ್ಪರ್ಧಿಸಲು ಹಿಂಜರಿಯುತ್ತಾನೆ. ಅವರೇನಾದರೂ– ರಾಜಮನೆತನಕ್ಕೆ ಸೇರಿದವರು ಕಾಂಗ್ರೆಸ್ಸಿನೊಡನೆ ಒಂದಾಗಲು ಆಯ್ಕೆಮಾಡಿಕೊಂಡರೆ, ವಿರೋಧಪಕ್ಷದ ಎಲ್ಲ ಅಭ್ಯರ್ಥಿಗಳು ತಮ್ಮ ವಿಜಯದ ಅವಕಾಶವು ತೀರ ಕಡಿಮೆಯೆಂದು ಪರಿಗಣಿಸುತ್ತಾರೆ.

ಮಾಜಿ ರಾಜರು (ಆಳಿದವರು) ಚುನಾವಣೆಗಳಲ್ಲಿ ಭಾಗವಹಿಸಲು ಒಬ್ಬ ಪ್ರಜೆಯಾಗಿ ಪ್ರಜೆಯ ಹಕ್ಕನ್ನು ಪಡೆದಿರುತ್ತಾರೆಂದು ಒಪ್ಪಬಹುದಾದರೂ, ಈಗಿನ ಪರಿಸ್ಥಿತಿಯು ಸಂತೋಷದಾಯಕವಾಗಿಲ್ಲವೆಂದು ಒಪ್ಪಿಕೊಳ್ಳಬೇಕಾಗಿದೆ. ಈ ಪರಿಸ್ಥಿತಿಯನ್ನು ಮಾಜಿ ರಾಜರುಗಳಿಂದ ಸುಧಾರಿಸಲು ಸಾಧ್ಯವಾಗುವುದಿಲ್ಲ, ಇದು ಜನರಿಂದ ಮತ್ತು ಅನೇಕ ರಾಜಕೀಯ ಪಕ್ಷಗಳಿಂದ ಸಾಧ್ಯವಾಗುವಂತಹ ಸಂಗತಿ. ಮಾಜಿರಾಜರ ಶ್ರೇಣಿಯನ್ನು ಖಂಡಿತವಾಗಿಯೂ ರಾಜಕಾರಣದಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಆದರೆ ಚುನಾವಣೆಗಳಲ್ಲಿ ಟಿಕೇಟ್‌ನ್ನು ಅವರಿಗೆ ಜನ್ಮದ



ಶ್ರೇಷ್ಠತೆಯಿಂದಲ್ಲ ಆದರೆ ಅರ್ಹತೆಯ ಆಧಾರದ ಮೇಲೆ ನೀಡಬೇಕು. ಮತದಾನ ಎಂಬುದು ಯಾವುದೇ ಅಭ್ಯರ್ಥಿಗೆ ತಾವು ಸಲ್ಲಿಸುವ ಕೃತಜ್ಞತೆಯ ಸಾಧನವಲ್ಲ. ಆದರೆ ತಮ್ಮ ಅಭಿಲಾಷೆಗಳನ್ನು ಈಡೇರಿಸಲು ತಾವು ಅಭ್ಯರ್ಥಿಗೆ ನೀಡಿರುವ ಅಧಿಕಾರ ಎಂಬುದನ್ನು ಜನರು ಅರಿಯಬೇಕು.

ಜಾತಿ ಹಾಗೂ ಕೋಮುವಾದಿ ಪರಿಗಣನೆಗಳು ಅಭ್ಯರ್ಥಿಗಳ ಆಯ್ಕೆಯಲ್ಲಿ ಸಾಕಷ್ಟು ಹೆಚ್ಚಿನ ಪಾತ್ರ ವಹಿಸುತ್ತವೆ. ಈ ಅಂಶದಲ್ಲಿ ಕಾಂಗ್ರೆಸ್ ಅತ್ಯಂತ ಕೆಟ್ಟ ಪಾಪಿ ಎನ್ನಬಹುದು. ಆದರೆ ಇತರ ಪಕ್ಷಗಳೂ ಕೂಡ ಕೆಟ್ಟ ಹೆಸರಿನಿಂದ ತಪ್ಪಿಸಿಕೊಳ್ಳಲಾರವು. ಸ್ವಾಸ್ಥ್ಯಪೂರ್ಣ ಹಾಗೂ ದೃಢವಾದ ಸಂಘಟನೆಯ ಕೊರತೆಯೇ ಇದಕ್ಕೆ ಕೂಡ ಕಾರಣವಾಗಿದೆ. ಜಾತೀಯತೆಯನ್ನು ನಿಂದಿಸುವುದರಿಂದ ಏನೂ ಪ್ರಯೋಜನವಿಲ್ಲ. ಹಾಗೆ ಮಾಡುವವರು ಪರೋಕ್ಷವಾಗಿ ಅದಕ್ಕೆ ಸಹಾಯವನ್ನೇ ಮಾಡುತ್ತಾರೆ. ಭಾರತದಲ್ಲಿ ಪ್ರತಿಯೊಬ್ಬನೂ ಒಂದಲ್ಲ ಒಂದು ಜಾತಿ ಅಥವಾ ಸಮುದಾಯಕ್ಕೆ ಸೇರಿರುತ್ತಾನೆ. ಮತ್ತೊಂದು ಪಕ್ಷವನ್ನು ಅದು ಜಾತೀಯತೆಯಲ್ಲಿ ಅಥವಾ ಕೋಮುವಾದದಲ್ಲಿ ತೊಡಗಿಸಿಕೊಂಡಿದೆಯೆಂದು ಆಪಾದಿಸುವುದರಿಂದ, ನೀವು ಪರೋಕ್ಷವಾಗಿ ಸುಳಿವು ನೀಡುತ್ತೀರಿ ಮತ್ತು ಸಮಾಜದಲ್ಲಿನ ಉಳಿದವರ ಈ ಮನೋಭಾವಗಳಿಗೆ ಅಪ್ರಜ್ಞಾಪೂರ್ವಕವಾಗಿ, ಸೂಕ್ಷ್ಮವಾಗಿ ಮನವಿ ಮಾಡುತ್ತೀರಿ. ಜಾತೀಯ ಭಾವನೆಯನ್ನು ಕೆರಳಿಸಲು ಪ್ರಯತ್ನಿಸಿದ ಅಭ್ಯರ್ಥಿಗಳು ಕಳೆದ ಚುನಾವಣೆಗಳಲ್ಲಿ ವೈಮನಸ್ಯ ವಿರೋಧಗಳನ್ನು ತಂದುಕೊಂಡದ್ದಲ್ಲದೆ ಉಳಿದವರ ಒಗ್ಗಟ್ಟಿನ ವಿರೋಧವನ್ನು ಎದುರಿಸಬೇಕಾಯಿತು. ಇದರಿಂದ ಕೆಟ್ಟ ರೀತಿಯಲ್ಲಿ ಸೋಲನ್ನು ಅನುಭವಿಸಿದರು. ಆದರೂ ರಾಜಕೀಯ ಪಕ್ಷಗಳಲ್ಲಿ ಜಾತಿಯ ಪರಿಗಣನೆಯು ಇನ್ನೂ ಬಹಳ ಪ್ರಮುವಾಗಿಯೇ ಪರಿಶೀಲಿಸಲ್ಪಡುತ್ತದೆ. ಇತರ ಮೂಲಭೂತ ಅರ್ಹತೆಗಳು ಇದ್ದಲ್ಲಿ, ಅಭ್ಯರ್ಥಿಯು ಯಾವ ಜಾತಿಗೆ ಸೇರಿದವನು ಎಂಬುದನ್ನು ನಾನು ಗಮನಿಸುವುದಿಲ್ಲ. ಅವನು ಜಾತಿಯೇ ಇರದ ಮಾನವ ಜೀವಿಯಾಗಿರಲಾರ– ಕಡೆಯ ಪಕ್ಷ ಭಾರತದಲ್ಲಾದರೂ. ಆದರೆ ಚುನಾವಣಾ ಕ್ಷೇತ್ರದಲ್ಲಿ ಸಂಖ್ಯಾಬಲದಲ್ಲಿ ಮೇಲುಗೈಯಾಗಿದ್ದ ಜಾತಿಗೆ ಸೇರಿರದಿದ್ದಕ್ಕಾಗಿ, ಡಾ. ರಾಮಮನೋಹರ ಲೋಹಿಯಾ ಅವರು ಕೂಡ ತಮ್ಮ ಉಮೇದುವಾರಿಕೆಯನ್ನು ಬಿಟ್ಟುಕೊಡಬೇಕಾದ ಮಟ್ಟಕ್ಕೆ ಪರಿಸ್ಥಿತಿಯು ಬೆಳೆದಿದೆಯೆಂದರೆ (ಸ್ವಲ್ಪಕಾಲದ ಹಿಂದೆ ಈ ಘಟನೆಯು ಯು.ಪಿ. ಉಪಚುನಾವಣೆಗಳ ಸಂದರ್ಭದಲ್ಲಿ ನಡೆಯಿತು) ಇದು ಒಂದು ಗಂಭೀರವಾದ ರೋಗದ ಚಿಹ್ನೆಯಾಗಿದೆ.

ಹಿಂದುಳಿದ ಜಾತಿ ಮತ್ತು ವರ್ಗಗಳಿಗೆ ಶೇಕಡಾ ಅರುವತ್ತು ಸ್ಥಾನಗಳನ್ನು ಮೀಸಲಿಡುವ ತಮ್ಮ ವಾಗ್ದಾನದಿಂದ, ಸಾಮಾಜಿಕ ವೈದ್ಯರು ಪ್ರಯತ್ನಿಸುತ್ತಿರುವಂತೆ, ಜಾತಿಯ ಪರಿಗಣನೆಗೆ ಮನವಿಯನ್ನು ಹೆಚ್ಚಿಸುವುದಕ್ಕಿಂತಲೂ, ಇದರಿಂದ ಹೊರಕ್ಕೆ

ಬರುವ ದಾರಿಯೆಂದರೆ ಪಕ್ಷದ ಸಂಘಟನೆಯ ಬಲವರ್ಧನೆ ಮಾಡುವುದೇ ವಿಹಿತವಾಗಿದೆ.

ಅಭ್ಯರ್ಥಿ ಆಯ್ಕೆಯನ್ನು ಪ್ರಭಾವಿಸುವಲ್ಲಿ ಆರ್ಥಿಕ ಸಾಮರ್ಥ್ಯ ಅನುಕೂಲಗಳು ಮತ್ತೊಂದು ದೊಡ್ಡ ಅಂಶವಾಗಿದೆ. ಹಣವನ್ನು ವೆಚ್ಚ ಮಾಡುವ ಸಾಮರ್ಥ್ಯವೊಂದನ್ನು ಉಳಿದು ಬೇರೆ ಯಾವುದೇ ಅರ್ಹತೆಯಿರದ ಅನೇಕ ಜನರಿಗೆ ಟಿಕೇಟ್‌ಗಳನ್ನು ಕೊಡಲಾಗಿದೆ. ಈ ಜನರು ಚುನಾವಣಾ ಸಮಯದಲ್ಲಿ ಕ್ಷೇತ್ರಕ್ಕೆ ಬರುತ್ತಾರೆ ನಂತರ ಐದು ವರ್ಷಗಳ ತನಕ ಕಲ್ಕತ್ತಾ, ಬಾಂಬೆಗಳ ಜನನಿಬಿಡ ಬಸ್ತಿಗಳಲ್ಲಿ, ನಿಶ್ಚೇಷ್ಟಿತರಾಗಿ, ಯಾವುದೇ ಚಟುವಟಿಕೆಗಳಿರದೆ ಒಂದು ರೀತಿಯ ಶಿಶಿರ ಸುಪ್ತಿಯಲ್ಲಿರುತ್ತಾರೆ. ಅವರು ಜನಗಳ ಬಳಿ ಮತಗಳನ್ನು ಪ್ರಾರ್ಥಿಸಲು ಬರುವುದಿಲ್ಲ, ಅವುಗಳನ್ನು ಕೊಂಡುಕೊಳ್ಳಲು ಬರುತ್ತಾರೆ. ಅವರಿಗೆ ಯಾವುದೇ ಬೆಲೆಯಾದರೂ ಅತಿ ಹೆಚ್ಚು ಎನಿಸುವುದಿಲ್ಲ. ಅವರು ಬಯಸುವುದೆಲ್ಲ ಏನಿದ್ದರೂ ಲೋಕಸಭೆಗೆ, ಲಂಚದ ದಾರಿಯಿಂದ, ತಮ್ಮ ಪ್ರವೇಶವನ್ನು ಸುಗಮಗೊಳಿಸಿಕೊಳ್ಳುವುದನ್ನು ಮಾತ್ರ. ಅವರಿಗೆ ಇದೊಂದು ವ್ಯಾವಹಾರಿಕ ಒಪ್ಪಂದ ಮಾತ್ರ. ಕಾಂಗ್ರೆಸ್ಸನ್ನೂ ಒಳಗೊಂಡಂತೆ, ಪಕ್ಷಗಳು ಆರ್ಥಿಕವಾಗಿ ತೀರಾ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿರುವುದರಿಂದ, ಅವುಗಳು ಅಧಿಕಾರ ಮತ್ತು ಕೀರ್ತಿಗಾಗಿ ಆಸೆಪಡುವ ಇಂತಹವರಿಗೆ ಉಪಕಾರ ಮಾಡಲು ಮನಃ ಪೂರ್ತಿಯಾಗಿ ಸಿದ್ಧವಾಗಿರುತ್ತವೆ. ವಿಧಾನಸಭೆಯ ಅಭ್ಯರ್ಥಿಗಳ ಚುನಾವಣಾ ವೆಚ್ಚವನ್ನು ಭರಿಸಲು ವಾಗ್ದಾನ ಮಾಡಿದಲ್ಲಿ, ಕೆಲವು ಲೋಕಸಭಾ ಸ್ಥಾನಗಳನ್ನು ಅವರಿಗೆ ನೀಡುವುದಾಗಿ, ಕಲ್ಕತ್ತಾದ ಕೆಲವು ವಾಣಿಜ್ಯೋದ್ಯಮಿಗಳೊಡನೆ ಕಾಂಗ್ರೆಸ್ ಪಕ್ಷವು ವ್ಯವಹಾರವನ್ನು ಕುದುರಿಸಿಕೊಂಡಿತ್ತು ಎಂದು ವರದಿಯಾಗಿದೆ. ಸ್ವತಂತ್ರ ಪಕ್ಷವು ದಲಾಲ್‌ಸ್ಟ್ರೀಟ್‌ನ ಪಕ್ಷವೆಂದು ಸಾಮಾನ್ಯವಾಗಿ ಆರೋಪಿಸಲಾಗುತ್ತದೆ. ಪಕ್ಷಗಳ ಆರ್ಥಿಕ ಬಿಕ್ಕಟ್ಟು ಅತ್ಯಂತ ತೀಕ್ಷ್ಣವಾದುದರ ಪರಿಣಾಮವಾಗಿ ಗಣತಂತ್ರ ಪರಿಷತ್ತು, ಕೇವಲ ಅದೊಂದೇ ಕಾರಣದಿಂದಾಗಿ ಸ್ವತಂತ್ರ ಪಕ್ಷದೊಡನೆ ವಿಲೀನಗೊಳಿಸಲು ನಿರ್ಧರಿಸಿತು.

ದೇಶದ ರಾಜಕಾರಣಕ್ಕೆ ಈ ಎಲ್ಲ ಅಂಶಗಳು ಅನುಚಿತ ಹಾಗೂ ಆಕ್ಷೇಪಾರ್ಹ ಮಾರ್ಗದರ್ಶನ ನೀಡುವ ಸಾಧ್ಯತೆಯಿದೆ. ಇವುಗಳನ್ನು ಸುಧಾರಿಸಲು ಕ್ರಮಗಳನ್ನು ತೆಗೆದುಕೊಳ್ಳದೇ ಇದ್ದಲ್ಲಿ ಶಕ್ತ ಪ್ರಭಾವೀ ವಲಯಗಳು ದೇಶದ ಶಾಸಕಾಂಗಗಳಲ್ಲಿ ಹೊರ ಹೊಮ್ಮುತ್ತವೆ ಮತ್ತು ಕೇವಲ ಜನರ ಕ್ಷೇಮಾಭಿವೃದ್ಧಿಯನ್ನಾಗಲೀ, ರಾಷ್ಟ್ರೀಯ ಆಸಕ್ತಿಯನ್ನು ಉತ್ತೇಜಿಸುವಂತಹ ಕಾರ್ಯಗಳನ್ನು ವಸ್ತುನಿಷ್ಠ ರೀತಿಯಿಂದ ಕೈಗೊಳ್ಳುವಂತಹ ರಾಜಕೀಯ ನಿರ್ಧಾರಗಳನ್ನಾಗಲೀ ಆಗ ತೆಗೆದುಕೊಳ್ಳಲಾಗುವುದಿಲ್ಲ. ಪ್ರಧಾನ ಪಕ್ಷಗಳಾಗಿ ಅಭಿವೃದ್ಧಿ ಹೊಂದಲು ಬಯಸುವ ಪಕ್ಷಗಳು, ದಿಢೀರ್ ಲಾಭಕ್ಕಾಗಿ, ತಮ್ಮ ತತ್ತ್ವ, ಸಿದ್ಧಾಂತಗಳನ್ನು ತ್ಯಾಗಮಾಡದೇ ಎಚ್ಚರಿಕೆಯಿಂದ ಇರಬೇಕು.



ಜನರಿಗೆ ಕೂಡ ಕರ್ತವ್ಯವಿದೆ. ಅವರು ತಮ್ಮ ಮತಗಳನ್ನು ನ್ಯಾಯಯುತವಾಗಿ ಮತ್ತು ಬುದ್ಧಿವಂತಿಕೆಯಿಂದ ಚಲಾಯಿಸಿದರೆ, ಅವರು ಕೂಡ ರಾಜಕೀಯ ಪಕ್ಷಗಳ ವಿಕೃತಗೊಂಡ ದೃಷ್ಟಿಕೋನವನ್ನು ತಿದ್ದಬಹುದು.

ಮತದಾರನು ಆಕ್ಷೇಪಿಸಬಾರದು, ಗೊಣಗಬಾರದು; ಅವನು ಆಜ್ಞಾಪಿಸಬೇಕು. ಅವನು ಯಾವುದನ್ನೂ ಬಯಸಬಾರದು. ಅವನು ಹಕ್ಕೊತ್ತಾಯದಿಂದ ಕೇಳಬೇಕು. ಅವನು ಗೊಣಗುವುದಾಗಲೀ, ಅಸಹನೆ ಪಡುವುದಾಗಲೀ ಮಾಡಬಾರದು; ಆದರೆ ಅವನು ಮೌಲ್ಯಮಾಪನಮಾಡಿ ತನ್ನನ್ನು ತಾನು ದೃಢವಾಗಿ ಪ್ರತಿಪಾದಿಸಿಕೊಳ್ಳಬೇಕು. ಮತದಾರನು ತಾನು ಒಂದು ತತ್ತ್ವಕ್ಕಾಗಿ, ಸಿದ್ಧಾಂತಕ್ಕಾಗಿ ಮತನೀಡುತ್ತೇನೆಂದೂ ಯಾವುದೇ ಪಕ್ಷಕ್ಕೆ ಅಲ್ಲವೆಂದೂ, ತಾನು ಒಂದು ಪಕ್ಷಕ್ಕಾಗಿ ಮತ ನೀಡುತ್ತೇನೆಂದೂ ಅದರ ಯಾವುದೇ ವ್ಯಕ್ತಿತ್ವಕ್ಕಲ್ಲವೆಂದೂ, ತಾನು ಒಬ್ಬ ವ್ಯಕ್ತಿಗಾಗಿ ಮತ ನೀಡುತ್ತೇನೆ. ಆದರೆ ಅವನ ಹಣಕ್ಕಾಗಿ ಅಲ್ಲವೆಂದೂ ತಿಳಿದುಕೊಳ್ಳಬೇಕು.

ಮತದಾರನು ಧ್ಯೇಯವನ್ನು ಪರಿಗಣಿಸಲಿ, ಜಾತಿಯನ್ನಲ್ಲ; ವಿಜಯಿಯಾದವನ ಜೊತೆಗಿರುವುದಕ್ಕಿಂತಲೂ, ಯೋಗ್ಯನಾದವನನ್ನು ಅನುಸರಿಸಲಿ. ಯೋಗ್ಯನಾದ ಮನುಷ್ಯನನ್ನು ಆರಿಸಿ ಮತ್ತು ನೀವು ಆಯ್ಕೆ ಮಾಡಿದ ವ್ಯಕ್ತಿಯು ವಿಜಯಿಯಾಗುವಂತೆ ನೋಡಿಕೊಳ್ಳಿ. ಅದು ನಿಮ್ಮ ವಿಜಯವಾಗುತ್ತದೆ. ತಾನು ಗೆಲ್ಲುವೆನೆಂಬ ಅಭಿಪ್ರಾಯವನ್ನು ಮೂಡಿಸಿರುವ ಮನುಷ್ಯನನ್ನು, ಅವನ ಸೇನಾನುಚರನಂತೆ– ಕೇವಲ ಅನುಯಾಯಿಯಂತೆ ಹಿಂಬಾಲಿಸಿದರೆ ಚುನಾವಣೆಯ ಪರಿಣಾಮವು ಏನೇ ಆದರೂ ನೀವು ಈಗಾಗಲೇ ಸೋಲನ್ನನುಭವಿಸಿದಂತೆ.

ಮತ ಎಂಬುವುದು ಆತ್ಮಸಾಕ್ಷಿಯ ಸಂಗತಿ. ಅದನ್ನು ಮಾರಬೇಡಿ. ಅದನ್ನು ವಿನಾಶ ಮಾಡಬೇಡಿ. ನೀವು ಮತ ಹಾಕುವಾಗ ಮಹತ್ವಪೂರ್ಣ ನಿರ್ಧಾರವನ್ನು ತೆಗೆದುಕೊಳ್ಳಿ, ದಯವಿಟ್ಟು ಆ ಕ್ಷಣದ ಪ್ರಚೋದನೆಯ ಮೇಲೆ ಮತ ಹಾಕಬೇಡಿ.

ಮತ ಎನ್ನುವುದು ಸಾಮಾಜಿಕವಾಗಿ ಚಲಾಯಿಸಬೇಕಾದ ವೈಯಕ್ತಿಕ ಹಕ್ಕು. ಅದು ನಿಮ್ಮ ಸ್ವಾತಂತ್ರ್ಯವನ್ನು ಸಂಕೇತಿಸುತ್ತದೆ. ಅದನ್ನು ಮುಕ್ತವಾಗಿ, ಸ್ವತಂತ್ರವಾಗಿ ಉಪಯೋಗಿಸಿ. ನೀವು ಒಬ್ಬ ಪ್ರಜಾ ಪ್ರಭುತ್ವವಾದಿಯಾಗಿದ್ದಲ್ಲಿ ನಿಮ್ಮ ಅಂತಃಸಾಕ್ಷಿಯನ್ನು ಹೊರತುಪಡಿಸಿ ಬೇರೆ ಯಾರಿಂದಲೂ ಆದೇಶಿಸಲ್ಪಡಬೇಡಿ. ಜನಗಳಿಗಾಗಿ ನಿಲ್ಲುವ ರಾಜಕೀಯ ಪಕ್ಷಗಳು ಜನರ ಶಕ್ತಿಯ ಮೇಲೆಯೇ ನಿಲ್ಲುತ್ತವೆ. ಅಂತಹ ಪಕ್ಷಗಳನ್ನು ಯಾರೂ ಬಗ್ಗಿಸಬಾರದೆಂಬುದು ಜನರ ಇಚ್ಛೆಯಾದರೆ, ಜನರು ತಮ್ಮ ಶಕ್ತಿಯನ್ನು ಅವುಗಳಿಗೆ ಎರವಲು ಕೊಡಬೇಕು. ರಾಜಕೀಯ ಪಕ್ಷಗಳ ವಾಸ್ತು ಶಿಲ್ಪಿಗಳೇ ಜನರು, ಮತ್ತು ಅವರ ಮೂಲಕವೇ ಪಕ್ಷಗಳ ರಾಜಕೀಯ ಹಣೆಬರಹ.

ತಾವು ಎದುರಿಸುತ್ತಿರುವ ಈ ಮಹಾ ಪರೀಕ್ಷೆಯಲ್ಲಿ ಜನರು ಯಶಸ್ವಿಯಾಗಲಿ.

(೧೯೬೧ರ ಡಿಸೆಂಬರ್. ೪)

# ನಿಮ್ಮ ಮತ :
# (೨) ಅಭ್ಯರ್ಥಿ, ಪಕ್ಷ ಮತ್ತು ಸಿದ್ಧಾಂತ ಎಲ್ಲವೂ ಗಣನೆಗೆ ಬರುತ್ತವೆ

ಈಗ ದ್ವಿಸದಸ್ಯತ್ವದ ಚುನಾವಣಾ ಕ್ಷೇತ್ರಗಳು ವಿಭಜನೆಗೊಂಡಿರುವುದರಿಂದ ನಿಮಗೆ ಲೋಕಸಭೆ ಮತ್ತು ವಿಧಾನಸಭೆಗೆ ಒಂದೊಂದೇ ಮತ ಇರುತ್ತದೆ. ಕಣದಲ್ಲಿರುವ ಅಷ್ಟೊಂದು ಅಭ್ಯರ್ಥಿಗಳಲ್ಲಿ ನೀವು ಒಬ್ಬರನ್ನು ಮಾತ್ರ ಆಯ್ಕೆ ಮಾಡಬೇಕು. ಇದು ಒಂದೇ ಒಂದು ಕ್ರಿಯೆಯಾಗಿದ್ದು, ಇದರಿಂದ ನೀವು ಸ್ಪರ್ಧಾತ್ಮಕ ಹಕ್ಕು ನಿರೀಕ್ಷೆಗಳನ್ನಾಗಲೀ, ಸಂಘರ್ಷಣಾತ್ಮಕ– ವಿರೋಧವಾದ– ಪಕ್ಷಪಾತ, ಇಷ್ಟಗಳನ್ನಾಗಲೀ ತೃಪ್ತಿಪಡಿಸಲು ಸಾಧ್ಯವಿಲ್ಲ. ಅಂತಿಮ ತೀರ್ಮಾನವು, ಅನೇಕ ಅಂಶಗಳ ಜಾಗರೂಕ ಹಾಗೂ ಸಮರ್ಪಕವಾದ ಮೌಲ್ಯಮಾಪನವನ್ನು ಅವಲಂಬಿಸಿರುತ್ತದೆ. ಅಭ್ಯರ್ಥಿ, ಪಕ್ಷ ಮತ್ತು ಅದರ ಸಿದ್ಧಾಂತ ಇವೆಲ್ಲವನ್ನೂ ಪರಿಗಣಿಸಬೇಕಾಗುತ್ತದೆ. ತಾನು ಸೇರಿರುವ ಪಕ್ಷವು ಉತ್ತಮವಾದದ್ದು ಎಂಬ ಒಂದು ಕಾರಣದಿಂದ, ದುಷ್ಟ ಅಭ್ಯರ್ಥಿಯು ಯಾವುದೇ ಉತ್ತೇಜನವನ್ನೂ, ಅಧಿಕ ಮೌಲ್ಯವನ್ನು ಕೇಳಲು ಸಾಧ್ಯವಿಲ್ಲ. ಕೆಡುಕು ಯಾವಾಗಲೂ ಕೆಡುಕೇ ಮತ್ತು ಗಾದೆ ಮಾತಿನ ಕೇಡಿನ ಗಾಳಿಯಂತೆ, ಎಲ್ಲಿಯೂ ಯಾರಿಗೂ ಒಳ್ಳೆಯ ಗಾಳಿಯನ್ನು ಬೀಸಲಾರದು. ಅಂತಹ ವ್ಯಕ್ತಿಗೆ ಟಿಕೆಟ್ ಕೊಡುವುದರಲ್ಲಿ ಪಾರ್ಟಿಯ ಹೈಕಮ್ಯಾಂಡ್ ಪಕ್ಷಪಾತ ನೀತಿಯ ಆಧಾರದ ಮೇಲೆ ಕಾರ್ಯನಿರ್ವಹಿಸಿರಬಹುದು ಅಥವಾ, ಆದಷ್ಟೂ ಒಳ್ಳೆಯ ಉದ್ದೇಶದಿಂದ ಹೇಳಬಹುದಾದರೆ, ಅದು ತನ್ನ ತೀರ್ಮಾನದಲ್ಲಿ ತಪ್ಪು ಮಾಡಿರಬಹುದು. ಅಂತಹ ತಪ್ಪನ್ನು ಸರಿಪಡಿಸುವುದು ಮತದಾರನ ಕರ್ತವ್ಯ.

ಲ್ಯಾಂಪ್‌ಪೋಸ್ಟ್, ಕಾಂಗ್ರೆಸ್ಸಿನ ಚಿಹ್ನೆಯನ್ನು ಹೊತ್ತಿದೆಯೆಂದು ಅದಕ್ಕೇ ಜನರು ಮತ ಹಾಕುತ್ತಿದ್ದ ಕಾಲವೂ ಒಂದಿತ್ತು. ಪ್ರಥಮ ಸಾರ್ವತ್ರಿಕ ಚುನಾವಣೆಗಳಲ್ಲಿ ಆಚಾರ್ಯ ನರೇಂದ್ರದೇವ ಮತ್ತು ಆಚಾರ್ಯ ಕೃಪಲಾನಿಯವರಂತಹ ಧೀಮಂತರೂ, ಪ್ರಬಲರು ಕೂಡ, ಅವರಿಗೆ ಯಾವ ರೀತಿಯಲ್ಲಿಯೂ ಹೋಲಿಕೆಗೆ ಸಾಧ್ಯವಿಲ್ಲದಿದ್ದ, ಕಾಂಗ್ರೆಸ್ಸಿನ ಅಭ್ಯರ್ಥಿಗಳಿಂದ ಪರಾಜಯವನ್ನು ಅನುಭವಿಸಿದರು. ಈಗ ಲ್ಯಾಂಪ್‌ಪೋಸ್ಟಿನ ಯುಗವು ಮುಗಿದಿದೆ. ಆದರೆ ಲೋಲಕವು ಈಗ ಮತ್ತೊಂದು ತುದಿಗೆ ಬಾಗುವ ಸಾಧ್ಯತೆಯಿದೆ. ಇತ್ತೀಚೆಗೆ ಸಭ್ಯಗೃಹಸ್ಥನೊಬ್ಬ ಹೀಗೆ ಹೇಳಿದ್ದ,



"ನಾನು ಒಂದು ಮೈಲಿಕಲ್ಲಿಗಾದರೂ ಮತ ಹಾಕುತ್ತೇನೆ, ಆದರೆ ಕಾಂಗ್ರೆಸ್ಸಿನ ಅಭ್ಯರ್ಥಿಗೆ ಮಾತ್ರ ಮತ ಹಾಕುವುದಿಲ್ಲ. ಕಾಂಗ್ರೆಸ್ಸಿನಲ್ಲಿ ಶ್ರದ್ಧೆ ಇರುವುದೆಂದು ನೀವು 'ಲ್ಯಾಂಪ್‌ಪೋಸ್ಟ್' ಅನ್ನು ಆಯ್ಕೆ ಮಾಡುವುದು, ಕಾಂಗ್ರೆಸ್‌ನ ಬಗೆಗೆ ತೀವ್ರ ಜಿಜುಗುಪ್ಸೆಯಿದೆಯೆಂದು 'ಮೈಲಿಕಲ್ಲನ್ನು' ಆಯ್ಕೆ ಮಾಡುವುದು, ಹೀಗೆ ಮಾಡುವುದರಿಂದ ನೀವು ನಿಜವಾಗಿಯೂ ತಪ್ಪು ಮಾಡುತ್ತೀರಿ. ಅದು ರೋಗಗ್ರಸ್ತ ಮತ್ತು ವಿಕೃತ ಮನಃಸ್ಥಿತಿಯನ್ನು ತೋರಿಸುತ್ತದೆ."

ಕಾಂಗ್ರೆಸ್ ಪಕ್ಷದಲ್ಲಿನ ಅತ್ಯಂತ ಕೆಟ್ಟವನು ಕೂಡ ವಿರೋಧ ಪಕ್ಷದಲ್ಲಿನ ಅತ್ಯುತ್ತಮನಾದವನಿಗಿಂತಲೂ ಹೆಚ್ಚು ಉತ್ತಮನಾಗಿರುತ್ತಾನೆಂದು ಕಾಂಗ್ರೆಸ್ ಅಧ್ಯಕ್ಷರು ಸ್ವಲ್ಪ ದಿನಗಳ ಹಿಂದೆ ಹೇಳಿದ್ದುದಾಗಿ ವರದಿಯಾಗಿದೆ. ಇದು ಮೌಲಾನಾ ಶೌಕತ್ ಅಲಿಯವರು ಹೇಳಿದ್ದ, ಮುಸ್ಲಿಮರಲ್ಲಿ ಅತ್ಯಂತ ಕೆಳದರ್ಜೆಯವನೂ– ಕೀಳಾದವನೂ– ಕೂಡ ತಮ್ಮ ಪಾಲಿಗೆ ಮಹಾತ್ಮ ಗಾಂಧಿಗಿಂತಲೂ ಹೆಚ್ಚು ಉತ್ತಮ ಎಂಬ ಮಾತುಗಳು ನನಗೆ ನೆನಪಾಗುತ್ತವೆ. ಈ ಭಾವನೆಗಳನ್ನು ಯಾರು ಕೂಡ ಸಮರ್ಥಿಸಲು ಸಾಧ್ಯವಿಲ್ಲ. ಪ್ರತಿಕ್ರಿಯೆಯಿಂದಾಗಿ ಮತ್ತಹಾಕುವ ಮತದಾರನೂ ಇದೇ ಗುಂಪಿಗೆ ಸೇರುತ್ತಾನೆ. ಅವನು ತನ್ನ ತೀರ್ಮಾನವು ವ್ಯಾಧಿಗ್ರಸ್ತ ಪ್ರತಿಕ್ರಿಯೆಯಿಂದ ಮಬ್ಬಾಗಲು ಅವಕಾಶ ನೀಡುತ್ತಾನೆ.

ನೀವು 'ಮೈಲಿಕಲ್ಲನ್ನಾಗಲೀ', 'ಲ್ಯಾಂಪ್‌ಪೋಸ್ಟ್' ಅನ್ನಾಗಲೀ ಆಯ್ಕೆ ಮಾಡಬೇಡಿ. ಅವು ನಿಮ್ಮನ್ನು ಪ್ರತಿನಿಧಿಸಲಾರವು. 'ಅವುಗಳು' ಸದನದಲ್ಲಿದ್ದರೆ, ಅದು ನಿಮ್ಮ ಸೂಕ್ಷ್ಮ ವಿವೇಚನೆ ಮತ್ತು ತೀರ್ಮಾನ ಮಾಡುವ ನಿಮ್ಮ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ ನಿಮ್ಮದೇ ಪ್ರತಿನಿಧಿಗಳನ್ನು ಆಯ್ಕೆ ಮಾಡಿ.

ನಿಮಗೆ ಒಬ್ಬ ಉತ್ತಮ ವ್ಯಕ್ತಿಯ ಅವಶ್ಯಕತೆಯಿದೆ. ಆದರೆ ಕೆಟ್ಟ ಪಕ್ಷದಲ್ಲಿರುವ ಉತ್ತಮ ವ್ಯಕ್ತಿಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಲ್ಲ ಎನ್ನುವುದು ಸಾಬೀತಾಗುವುದಿಲ್ಲ. ಎಂತಹ ವೀರಾಧಿವೀರನೂ, ಧೈರ್ಯಸ್ಥನೂ ಆದರೂ ಕೂಡಾ ಮುರಿದ ಮತ್ತು ಮೊಂಡಾದ ಆಯುಧದಿಂದ ಜಯಗಳಿಸಲಾರ. ನನ್ನ ಈ ವಿಚಾರಕ್ಕೆ ರಾಜರ್ಷಿ ಪುರುಷೋತ್ತಮದಾಸ್ ಟಂಡನ್‌ರವರೇ ಸಾಕಷ್ಟು ಉತ್ತಮ ನಿದರ್ಶನವಾಗಿದ್ದಾರೆ.

ಆದರೆ, ಉತ್ತಮ ಪಕ್ಷವಾದರೂ ಯಾವುದು? ನಿಜವಾಗಿಯೂ ಅದು ಕೇವಲ ವ್ಯಕ್ತಿಗಳ ಒಂದು ಸಮೂಹವಲ್ಲ. ಆದರೆ ಅಧಿಕಾರ ಹಿಡಿಯುವ ತನ್ನ ಅಭಿಲಾಷೆಯಿಂದ ಬೇರೆಯಾದ, ವಿಶಿಷ್ಟ ಉದ್ದೇಶದಿಂದ ಅಸ್ತಿತ್ವವುಳ್ಳ ಒಬ್ಬ ವ್ಯಕ್ತಿಯೆಂದು ಪರಿಗಣಿಸಬಹುದಾದ ಸಂಸ್ಥೆ. ಅಂತಹ ಪಕ್ಷದ ಸದಸ್ಯರಿಗೆ ರಾಜಕೀಯ ಅಧಿಕಾರವು ಒಂದು ಮಾರ್ಗ ಅಥವಾ ಸಾಧನವಾಗಬೇಕೇ ವಿನಾಃ ಅದೇ ಗುರಿಯಾಗಿರಬಾರದು. ಪಕ್ಷದ ಸಾಮಾನ್ಯರಲ್ಲಿಯೂ ಒಂದು ಧ್ಯೇಯದ ಬಗೆಗೆ ಸಮರ್ಪಣಾ ಭಾವವಿರಬೇಕು.

ಭಕ್ತಿ ಶ್ರದ್ಧೆಗಳು ಸಮರ್ಪಣಾ ಮನೋಭಾವ ಮತ್ತು ಶಿಸ್ತಿನೆಡೆಗೆ ಕರೆದೊಯ್ಯುತ್ತದೆ. ಶಿಸ್ತು ಎಂದರೆ ಕೆಲವು ಮಾಡು ಅಥವಾ ಮಾಡಬೇಡ ಎನ್ನುವ ಕೆಲವು ಹೊರನಿಯಮಗಳಿಗೆ ವಿಧೇಯನಾಗಿರುವುದಲ್ಲ. ಮೇಲಿನಿಂದ ಶಿಸ್ತನ್ನು ಹೇರಿದಷ್ಟು ಪಕ್ಷದ ಆಂತರಿಕ ಶಕ್ತಿಯು ಕಡಿಮೆಯಾಗುತ್ತದೆ. ಸಮಾಜಕ್ಕೆ ಧರ್ಮವು ಹೇಗೋ ಹಾಗೆ ಪಕ್ಷಕ್ಕೆ ಶಿಸ್ತು ಅತ್ಯವಶ್ಯಕ.

ಶ್ರದ್ಧೆ, ಭಕ್ತಿ ಮತ್ತು ಶಿಸ್ತುಗಳಿದ್ದರೆ, ಪಕ್ಷದೊಳಗೆ ಗುಂಪುಗಳಾಗಲೀ ಭಿನ್ನಾಭಿಪ್ರಾಯಗಳಾಗಲೀ ಇರುವುದಿಲ್ಲ. ಪಕ್ಷದ ಹಿತಾಸಕ್ತಿಗಳು, ಸ್ವಹಿತಾಸಕ್ತಿಗಳ ಅಧೀನವಾದಾಗ ಗುಂಪುಗಾರಿಕೆಯು ಆರಂಭವಾಗುತ್ತದೆ. ಅದು ದುರಭಿಮಾನ ಮತ್ತು ವಿಕೃತ ಮನಸ್ಸಿನ ಸಾಮಾಜಿಕ ಪ್ರಕಟಣೆ ಮಾತ್ರ. ಗುಂಪುಗಾರಿಕೆಯಿಂದ, ವೈಷಮ್ಯದಿಂದ ಪೀಡಿತವಾಗಿರುವ (ವ್ಯಾಪಿಸಿಕೊಂಡಿರುವ) ಪಕ್ಷವು ಪ್ರಭಾವಶೂನ್ಯವಾಗುತ್ತದೆ. ಮತ್ತು ಉತ್ತಮ ಕಾರ್ಯ ನಿರ್ವಹಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ.

ಒಂದು ಉತ್ತಮ ಪಕ್ಷದ ಮೂರನೆಯ ಲಕ್ಷಣವೆಂದರೆ, ಅದು ನಿರ್ದಿಷ್ಟ ಆದರ್ಶಗಳಿಗೆ ಬದ್ಧವಾಗಿರಬೇಕು ಹಾಗೂ ಅದರ ಎಲ್ಲ ಕಾರ್ಯನೀತಿಗಳು ಕೂಡ ಈ ಆದರ್ಶಗಳನ್ನು ಕಾರ್ಯರೂಪಕ್ಕೆ ತರುವ ದೃಷ್ಟಿಯಿಂದ ರೂಪಿಸಲ್ಪಡಬೇಕು. ಆಡಳಿತದ ಸಂಪೂರ್ಣ ಪ್ರಾಯೋಗಿಕ ಕಾರ್ಯಗಳನ್ನು, ಪರಿಸ್ಥಿತಿಯ ಸೈದ್ಧಾಂತಿಕ ವಿಶ್ಲೇಷಣೆಯ ಮೇಲೆ ರೂಪಿಸಿದ ಸೂತ್ರಗಳ ಕಟ್ಟಿಗೆ ಹೊಂದಿಸಲಾಗುವುದಿಲ್ಲ ಎನ್ನುವುದು ನಿಜ. ಆದರೆ ಸಮಯಸಾರ್ಥಕತೆ (ಅನುಕೂಲವಾದಗಳು) ಮತ್ತು ಸ್ವಾರ್ಥಸಾಧಕತೆಗಳು, ಯತಾರ್ಥತೆಯ ಒಬ್ಬ ಆದರ್ಶವಾದಿ ಎಂದು ಒಪ್ಪಿತವಾಗಬಾರದು (ವಾಸ್ತವತೆ), ವಾಸ್ತವವಾದ ಅಥವಾ ಯತಾರ್ಥತೆಯು ಒಬ್ಬ ತತ್ತ್ವಾಧಾರಿತ ವ್ಯಕ್ತಿಯ ಒಬ್ಬ ಧರ್ಮ ಪ್ರಚಾರಕನ ಸದ್ಗುಣ, ಅದು ಅಂತಃಸಾಕ್ಷಿಯಿಲ್ಲದವನ, ಅವಕಾಶವಾದಿಯ ಹಾಗೂ ನಂಬಿಕೆಗಳನ್ನು ತ್ಯಜಿಸುವವನ ಲಕ್ಷಣ ಮತ್ತು ಗುಣವಲ್ಲ. ರಾಜಕೀಯ ಪಕ್ಷಗಳು ಹಾಗೂ ನಾಯಕರು ತಮ್ಮ ನಡವಳಿಕೆಯ ಮೂಲಕ ರಾಜಕೀಯ ಜೀವನದ ಮೌಲ್ಯಗಳನ್ನು ನಿರ್ಧರಿಸುತ್ತಾರೆ. ಪ್ರಜಾಪ್ರಭುತ್ವ ಎನ್ನುವುದು ಕೇವಲ ಚುನಾವಣೆಗಳಲ್ಲ. ಸುಸಂಘಟಿತರಾದ ಜನರು, ಸಮರ್ಪಕವಾಗಿ, ಬಲಿಷ್ಠವಾಗಿ ನಿರ್ಮಾಣಗೊಂಡ ಪಕ್ಷಗಳು ಮತ್ತು ದೃಢವಾಗಿ ಸಂಸ್ಥಾಪಿಸಲ್ಪಟ್ಟ ಸಂಪ್ರದಾಯ ಮತ್ತು ರೂಢಿಗಳು ಇವುಗಳು ಪ್ರಜಾಪ್ರಭುತ್ವಕ್ಕೆ ಅವಶ್ಯಕವಾಗಿವೆ.

ಉತ್ತಮ ಅಭ್ಯರ್ಥಿಗಳ ಗುಂಪನ್ನು (ಘಟಕವನ್ನು) ಪಡೆದಿರುವ ಒಂದು ಉತ್ತಮ ಪಕ್ಷವು ಉತ್ತಮವಾದ ವಾಸ್ತವವಾದ ಕಾರ್ಯಕ್ರಮವನ್ನು ಹೊಂದಿರಬೇಕು. ಹೇಗೆ ಆದರೂ ಕಾರ್ಯಕ್ರಮಗಳನ್ನು ನೆರವೇರಿಸುವುದೇ ಆಗಬೇಕಾಗಿರುವ ಕೆಲಸ.



ಎಲ್ಲ ಅಂಶಗಳಲ್ಲಿಯೂ ಆದರ್ಶನೀಯವಾದದ್ದನ್ನು ಪಡೆಯಲು ಕಷ್ಟವಾಗಬಹುದು. ಆದರೆ ಈ ಮೂರರ ಅತ್ಯಂತ ಅನುಕೂಲಕರವಾದ ಸಂಯೋಜನೆಯನ್ನು ಕಂಡುಕೊಳ್ಳಬಹುದು. ಪರೋಪಕಾರದ ಉದ್ದೇಶಗಳಿಂದ, ನಿಸ್ವಾರ್ಥ ಬುದ್ಧಿಯಿಂದ ಪ್ರೇರಿತರಾದ ಮತ್ತು ಶಿಸ್ತುಬದ್ಧರಾದ, ಸದುದ್ದೇಶಪೂರಿತರಾದ ಜನರು, ಸಂಪೂರ್ಣವಾಗಿ ಒಪ್ಪಲು ಅನರ್ಹವಾದ ಸಿದ್ಧಾಂತಗಳನ್ನು ಆಧರಿಸಿದ ಕಾರ್ಯಕ್ರಮಗಳಾದರೆ, ಅವುಗಳ ಕೊರತೆಯನ್ನು ಬಹುಮಟ್ಟಿಗೆ ತುಂಬಬಲ್ಲರು. ಪಕ್ಷವು ತಪ್ಪುದಾರಿಯಲ್ಲಿ ನಡೆಯುತ್ತಿದ್ದರೆ, ಎಷ್ಟೇ ಪರಿಮಾಣದ ಒಳ್ಳೆತನ, ಸಾಮರ್ಥ್ಯಗಳು ಕೂಡ ವಸ್ತುಸ್ಥಿತಿಯನ್ನು ಸುಧಾರಿಸಲಾರವು. ಮಾರ್ಗ ಯಾವುದೆಂದು ನಿರ್ಧರಿಸಿದನಂತರ ಗತಿಯನ್ನು ವಿಷಯದ ಸರಿಯಾದ ಮತ್ತು ಸಮರ್ಥ ನಿರ್ವಹಣೆಯಿಂದ ಶೀಘ್ರಗೊಳಿಸಬಹುದು.

ಇಲ್ಲಿಯವರೆಗೂ, ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ವೈಯಕ್ತಿಕ ಪ್ರಸಂಗಗಳನ್ನು ಚರ್ಚಿಸಲು ಸಾಧ್ಯವಾಗಿಲ್ಲ. ಅವರನ್ನು ಮತದಾರನೇ ಚೆನ್ನಾಗಿ ಅರಿತಿರುತ್ತಾನೆ. ಇನ್ನು ಪಕ್ಷಗಳ ಸಂಗತಿಗೆ ಬಂದರೆ, ಭಾರತದಲ್ಲಿನ ಅನೇಕ– ಬಹುತೇಕ– ರಾಜಕೀಯ ಪಕ್ಷಗಳು ಪಕ್ಷ ಎನ್ನುವುದರ ವಿವರಣೆಗೆ ಬದ್ಧವಾಗಿರುವುದಿಲ್ಲ ಎನ್ನುವುದು ನಿಜ. ಕಾಂಗ್ರೆಸ್ ಅತ್ಯಂತ ದೊಡ್ಡದು, ವಿಶಾಲವಾದದೂ ಆದ ಪಕ್ಷ. ಆದರೆ, ಅಧಿಕಾರವೊಂದನ್ನು ಬಿಟ್ಟು ಅದು ಬೇರೆ ಯಾವುದೇ ಬಂಧಿಸುವಂತಹ ಸಾಮರ್ಥ್ಯವನ್ನೂ ಪಡೆದಿಲ್ಲ. ಬೇರೆ ಎಲ್ಲ ಪಕ್ಷಗಳಿಗಿಂತಲೂ ಹೆಚ್ಚಾಗಿ ಅದು 'ಮಾಡು' 'ಮಾಡಬೇಡ' ಗಳ ನಿರ್ಬಂಧವನ್ನು ಹೊಂದಿದೆ. ಆದರೆ ಅದರ ಸದಸ್ಯರುಗಳು ಶಿಸ್ತಿನ ಪ್ರಜ್ಞೆಯನ್ನಾಗಲೀ, ಸ್ವಇಚ್ಛೆಯಿಂದ ವಿಧೇಯರಾಗಿರುವ ಒಳ ಒತ್ತಡವನ್ನಾಗಲೀ ಪಡೆದಿಲ್ಲ. ಆದಾಗ್ಯೂ, ಒಂದು ಕೃತಕ ರೀತಿಯಲ್ಲಿ ಅದು ಸಾಕಷ್ಟು ಶಿಸ್ತನ್ನು ಇಲ್ಲಿಯವರೆಗೂ ಮುಂದುವರೆಸಿಕೊಂಡು ಬಂದಿದೆ. ಆದರೆ, ಈ ಒತ್ತಾಯದ ಶಿಸ್ತು ಇನ್ನು ಹೆಚ್ಚು ಕಾಲ ಪರಿಣಾಮಕಾರಿಯಾಗಿ ಉಳಿಯುವುದಿಲ್ಲವೆಂಬ ಚಿಹ್ನೆಗಳು ಕಂಡುಬರುತ್ತಿವೆ.

ಕಾಂಗ್ರೆಸ್ಸಿನೊಳಗಿರುವ ಗುಂಪುಗಾರಿಕಯ ಬಗೆಗೆ ಏನನ್ನೂ ಹೇಳದಿರುವುದೇ ಒಳಿತು. ಜೋಡಿಎತ್ತುಗಳು ಚಿಹ್ನೆಯು, ಪ್ರತಿಯೊಂದು ಸ್ತರದಲ್ಲಿಯೂ ಎರಡು ಗುಂಪುಗಳನ್ನು ಸಂಕೇತಿಸುತ್ತದೆ. ಕೇಂದ್ರದಲ್ಲಿ ಕೂಡ, ಪಕ್ಷದ ಉಪನಾಯಕನಿಗೆ ಸಂಬಂಧಿಸಿದಂತೆ ತೀರ್ಮಾನ ತೆಗೆದುಕೊಳ್ಳಕಲು ಸಾಧ್ಯವಾಗಲಿಲ್ಲವೆಂಬುದು, ತೀವ್ರವಾದ ವ್ಯಾಧಿಯ ಚಿಹ್ನೆಯಾಗಿದೆ.

ಮಾಜಿ ಕಾಂಗ್ರೆಸ್ಸಿಗರಿಂದ ರೂಪುಗೊಂಡಿರುವ ಪಕ್ಷಗಳಿವೆ. ಅವು ಮುಖ್ಯವಾಗಿ ಕಾಂಗ್ರೆಸ್ ವರ್ಗದವರನ್ನು ನೂತನ ಸದಸ್ಯರನ್ನಾಗಿ ನೇಮಿಸಿಕೊಳ್ಳುವುದರ ಮೇಲೆಯೇ ಅವಲಂಬಿಸಿದೆ. ಅವು ನಿರಾಶೆಗೊಂಡವರ ಮತ್ತು ಅತೃಪ್ತಗೊಂಡವರ ಸಮೂಹವನ್ನು

ಒಳಗೊಂಡಿದೆ. ಅವರಿಗೆ ಶಿಸ್ತಿನ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಕಮ್ಯುನಿಸ್ಟ್ ಪಕ್ಷವು ಖಚಿತವಾಗಿಯೂ ಒಂದು ಪಕ್ಷ. ಅದರ ಸಿದ್ಧಾಂತವನ್ನು ಬಿಟ್ಟರೆ, ಅದು ನಿಜವಾಗಿಯೂ ಪ್ರಭಾವಶಾಲಿಯಾಗಿರುತ್ತಿತ್ತು. ತನ್ನ ಪ್ರತ್ಯೇಕ ಪ್ರಾದೇಶಿಕ ಲಕ್ಷಣಗಳಿಂದಾಗಿ ಅಷ್ಟೊಂದು ಸುಸಂಘಟಿತವಾದ ಪಕ್ಷವು ದೇಶಕ್ಕೆ ಹೆಚ್ಚು ಅಪಾಯಕಾರಿಯಾಗುತ್ತದೆ. ಅದನ್ನು ಪ್ರೀತಿಸುವುದಾಗಲೀ, ಬೆಂಬಲಿಸುವುದಾಗಲೀ ಸಾಧ್ಯವಿಲ್ಲ. ಅದನ್ನು ನಿಜಾಯತಿಯನ್ನು ಬಹಿರಂಗಪಡಿಸಬೇಕು ಹಾಗೂ ಅದನ್ನು ಮುಗಿಸಬೇಕು.

ಜನಸಂಘದ ಬಗ್ಗೆ ಹೇಳುವುದಾದರೆ, ಸುಸಂಘಟಿತವಾದ, ಶಿಸ್ತುಬದ್ಧ ಮತ್ತು ಸಮರ್ಪಣಾ ಮನೋಭಾವವುಳ್ಳ ಪಕ್ಷವಾಗಿ ವಿಕಸನ ಹೊಂದಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ನಾನು ಹೇಳಬಯಸುತ್ತೇನೆ. ನಾವು ಈ ಮಾರ್ಗವನ್ನು ಅನುಸರಿಸುತ್ತಿರುವುದಕ್ಕಾಗಿ ಕೆಲವು ಬಾರಿ ಟೀಕಿಸಲ್ಪಟ್ಟಿದ್ದೇವೆ. ಜನಸಂಘವನ್ನು P.S.P. ಮಾದರಿಯ ಅಶಿಸ್ತಿನ ಸಂಘಟನೆಯಾಗಿ ಬೆಳೆಸಲು ಬಯಸಿದ ಕೆಲವರು ನಮ್ಮ ವಿಧಾನವನ್ನು ಇಷ್ಟಪಟ್ಟಿಲ್ಲ. ಆದರೆ ಜನಸಂಘವು ದೃಢವಾಗಿದೆ ಮತ್ತು ಈ ಕಾರಣದಿಂದಾಗಿ, ಈ ಕಡಿಮೆ ಅವಧಿಯಲ್ಲಿ, ಸ್ಪಷ್ಟವಾದ ಯಾವುದೇ ನಷ್ಟಗಳಿಗೆ ಈಡಾಗಿರಬಹುದಾದರೂ, ಒಟ್ಟಿನಲ್ಲಿ ಅದು ತನ್ನ ಸಂಸ್ಥೆಯ ಸ್ವಾಸ್ಥ್ಯವನ್ನು ಕಾಪಾಡಿಕೊಂಡಿದೆ ಮತ್ತು ಎಲ್ಲಕ್ಕಿಂತಲೂ ಮಿಗಿಲಾಗಿ, ಜನರ ಪ್ರೀತಿಗೆ ಪಾತ್ರವಾಗಿದೆ. ದೃಢತೆ ಮತ್ತು ನೈತಿಕತೆ ಸದಾಚಾರಗಳು ಎಲ್ಲ ರೀತಿಯ ಅವಕಾಶವಾದೀ ಘಟಕಗಳನ್ನು ಎಳೆದು ಸೇರಿಸಿಕೊಳ್ಳಲು ಪ್ರಯತ್ನಿಸುವುದಕ್ಕಿಂತಲೂ ಹೆಚ್ಚಾಗಿ ಲಾಭಾಂಶಗಳನ್ನು ನೀಡುತ್ತವೆ.

(೧೯೬೦ರ ಡಿಸೆಂಬರ್ ೧೧)



## ನಿಮ್ಮ ಮತ :
## (೩) ಬದಲಾಗುವವರು ಮತ್ತು ಬದಲಾಗದಿರುವವರು

ಚುನಾವಣಾ ಮೈತ್ರಿಗಳು ಜನರಲ್ಲಿ ಒಂದು ರೀತಿಯ ನಕರಾತ್ಮಕತೆ(ಅಭಾವಾತ್ಮಕತೆ)ಯನ್ನು ಬೆಳೆಸುತ್ತದೆ. ಇದು ಸರಿಯಾದುದಲ್ಲ. ಅವು ಬದಲಾಯಿಸಲಾಗದಂತೆ, ಸೈದ್ಧಾಂತಿಕ ರಾಜಿ–ಹೊಂದಾಣಿಕೆ– ಮತ್ತು ಸ್ವಲ್ಪಮಟ್ಟಿಗೆ ದೇಶದಲ್ಲಿ ಸಮಯಸಾಧಕ, ಸ್ವಾರ್ಥಿಗಳ ಗುಂಪನ್ನು ಒಳಗೊಂಡಿರುತ್ತದೆ. ಅವುಗಳನ್ನು ನಿವಾರಿಸಬೇಕು. ಎಲ್ಲ ರಾಜಕೀಯ ಕಾರ್ಯಚಟುವಟಿಕೆಗಳ ಅಂತಿಮ ಸಿದ್ಧಿಗೆ ಸಂಬಂಧಿಸಿದಂತೆ ಪ್ರಜಾಪ್ರಭುತ್ವವು ನಿರ್ದಿಷ್ಟ ಮಿತಿಗಳನ್ನು ಹೇರುತ್ತದೆ. ಅವೆಂದರೆ, ಅಧಿಕಾರಗ್ರಹಣದ ಬಗೆಗೆ. ಅದು ಬುಲೆಟ್‌ಗಳ ಉಪಯೋಗವನ್ನು ತಿರಸ್ಕರಿಸುತ್ತದೆ. ಆದರೆ, ಮತಗಳ ಯುದ್ಧದಲ್ಲಿ ಎಲ್ಲವನ್ನೂ ನ್ಯಾಯವೆಂದು ಪರಿಗಣಿಸಲಾಗುವುದಿಲ್ಲ.

ಕಾಂಗ್ರೆಸ್ಸನ್ನು ಪರಾಜಯಗೊಳಿಸಲು ಎಲ್ಲ ಪಕ್ಷಗಳ ಸಂಯುಕ್ತ ರಂಗವೊಂದು ಅವಶ್ಯಕವೆಂದು ಆಲೋಚಿಸುವುದು ತಪ್ಪಾಗುತ್ತದೆ. ಕಳೆದ ಚುನಾವಣೆಗಳಲ್ಲಿನ ಮತದಾನದ ವಿಶ್ಲೇಷಣೆಯು ಈ ಮುಕ್ತಾಯಕ್ಕೆ ಕೊಂಡೊಯ್ಯುವುದಿಲ್ಲ. ಜನರ ಭಾವನೆಗಳು ಅತ್ಯಂತ ಉನ್ನತ ಮಟ್ಟಕ್ಕೆ ಏರಿದ ಕೆಲವು ಗಮನಾರ್ಹ ಸಂದರ್ಭಗಳನ್ನು ಹೊರತುಪಡಿಸಿದರೆ, ನೇರ ಸ್ಪರ್ಧೆಗಳಲ್ಲಿ ಕಾಂಗ್ರೆಸ್ಸೇತರ ಅಭ್ಯರ್ಥಿಗಳೇ ಒಟ್ಟಾರೆಯಾಗಿ ಪರಾಜಿತರಾಗಿದ್ದಾರೆ. ನಮಗೆ ಬೇಕಾಗಿರುವುದು ಎಲ್ಲ ವಿರೋಧ ಪಕ್ಷಗಳ ಸಂಯುಕ್ತ ರಂಗವಲ್ಲ. ಆದರೆ ಕಾಂಗ್ರೆಸ್ಸನ್ನು ಸೋಲಿಸಲು ಒಂದೇ ಒಂದು ಪಕ್ಷದ ದೃಢವಾದ ಕಾರ್ಯವಿಧಾನ. ಅಲ್ಪಸಂಖ್ಯಾತರ ಮತಗಳ ಆಧಾರದ ಮೇಲೆ ಕಾಂಗ್ರೆಸ್ ಜಯಗಳಿಸಬಹುದಾದರೆ, ಇತರ ಪಕ್ಷಗಳು ಕೂಡ ಅದೇ ರೀತಿಯಲ್ಲಿ ಜಯ ಗಳಿಸಬಹುದು. ಕಳೆದ ಚುನಾವಣೆಗಳಲ್ಲಿ, ಯಾವುದೇ ಸಂಯುಕ್ತರಂಗವನ್ನು ರೂಪಿಸದೆಯೇ ಕೇರಳದಲ್ಲಿ ಕಮ್ಯುನಿಸ್ಟರು ಕಾಂಗ್ರೆಸ್ಸನ್ನು ಪರಾಜಿತಗೊಳಿಸಿದರು.

ಧ್ರುವೀಕರಣ ಮತ್ತು ಪಕ್ಷಗಳ ಸಂಖ್ಯೆಯನ್ನು ಕಡಿಮೆ ಮಾಡುವ ಅವಶ್ಯಕತೆ ಉಂಟಾಗಬಹುದು. ಆದರೆ ಧ್ರುವೀಕರಣಕ್ಕೆ ಒಂದು ಕೇಂದ್ರದ ಅವಶ್ಯಕತೆಯಿರುತ್ತದೆ. ಇದುವರೆಗೂ ಯಾವುದೇ ಪಕ್ಷವೂ ಆ ಸ್ಥಾನವನ್ನು ಆಕ್ರಮಿಸಿಕೊಳ್ಳುವ ಹಕ್ಕೊತ್ತಾಯ ಮಾಡಲು ಸಾಧ್ಯವಿಲ್ಲ. ಸೈದ್ಧಾಂತಿಕ ನೆಲೆಯ ಮೇಲೆ, ಜನಸಂಘ ಮತ್ತು ಕಮ್ಯುನಿಸ್ಟ್ ಪಕ್ಷಗಳು ಅಂತಹ ಕೇಂದ್ರವನ್ನು ಒದಗಿಸುತ್ತವೆ.

ಮತ್ತು ಅದರ ಸುತ್ತಲೂ ರಾಷ್ಟ್ರೀಯ ಹಾಗೂ ಇತರ ಪ್ರಾದೇಶಿಕ ಪಕ್ಷಗಳು ಒಂದುಗೂಡಬಹುದಾಗಿದೆ. ಸಂಘಟನಾತ್ಮಕವಾಗಿ ಎರಡೂ ಕಡೆಯಿಂದಲೂ ಅನೇಕ ಪಕ್ಷಗಳಿಂದ ಇನ್ನೂ ಆ ಹಕ್ಕು ಸಮ್ಮತಿಸಲ್ಪಟ್ಟಿಲ್ಲ. ಜನರ ಮುಖ್ಯ ಸಂಘಟನೆಯ ಆಧಾರದ ನೆಲೆಯಲ್ಲಿ ಕೆಲಸ ಮಾಡಬಲ್ಲಂತಹ ಪಕ್ಷಗಳ ಪರವಾಗಿ ತಮ್ಮ ಸಮರ್ಥನೆಯನ್ನು ನೀಡುವುದರ ಮೂಲಕ, ಈ ಧ್ರುವೀಕರಣದ ಪ್ರಕ್ರಿಯೆಯನ್ನು ಕೇವಲ ಜನರು ಮಾತ್ರ ಸಾಧಿಸಬಲ್ಲರು. ಆದ್ದರಿಂದ ಅವರು ತಮ್ಮ ಸಾಮರ್ಥ್ಯವನ್ನೂ ಮತಗಳನ್ನೂ ಪೋಲು ಮಾಡದಿರಲಿ.

ಅನೇಕ ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳ ಬಗೆಗೆ ವ್ಯವಹರಿಸುವುದಕ್ಕೆ ಮೊದಲು, ಅವುಗಳ ಸೈದ್ಧಾಂತಿಕ ನೆಲೆ– ಆಧಾರ–ವನ್ನು ಸಾಧಾರಣ ಶಬ್ದಗಳಲ್ಲಿ, ನಿಯಮಗಳಲ್ಲಿ ವಿಶ್ಲೇಷಿಸಿದರೆ ಪ್ರಯೋಜನಕಾರಿಯಾಗುತ್ತದೆ. ಅದು ಮಾತ್ರವೇ ನಾವು ಅಂತರಾರ್ಥವನ್ನು ಗ್ರಹಿಸಲು ಮತ್ತು ಪ್ರಣಾಳಿಕೆಗಳಲ್ಲಿ ರೂಪಿಸಿರುವ ಕಾರ್ಯಕ್ರಮಗಳ ಮತ್ತು ಭರವಸೆಗಳ ಸ್ಥೂಲ ರೂಪರೇಖೆಯನ್ನು ಸರಿಯಾಗಿ ಮೌಲ್ಯಮಾಪನ ಮಾಡಲು ಸಹಾಯಮಾಡುತ್ತದೆ. ವಿವಿಧ ಪಕ್ಷಗಳು ಉಪಯೋಗಿಸುವ ಒಂದೇ ರೀತಿಯ ಪದಗಳು ಮತ್ತು ಪದಗುಚ್ಛಗಳು ಒಂದೇ ಅರ್ಥವನ್ನು ನೀಡಲಾರವು. ಸಾಮಾನ್ಯ ಮನುಷ್ಯನಿಗೆ ಸೊನ್ನೆಯು ಏನೂ ಇಲ್ಲದಿರುವಿಕೆಯನ್ನು ತಿಳಿಸುತ್ತದೆ. ಆದರೆ ಒಬ್ಬ ಗಣಿತಜ್ಞನಿಗೆ ಅದು ಹಾಗಲ್ಲ. ಕಳೆದುಹೋಗಿರುವ ಕೊಂಡಿಗಳನ್ನು ಪಕ್ಷಗಳ ಹಿಂದಿನ ಕಾರ್ಯನಿರ್ವಹಣೆ ಮತ್ತು ಸೈದ್ಧಾಂತಿಕ ದೃಷ್ಟಿಕೋನಗಳಿಂದ ತಿಳಿದುಕೊಳ್ಳಬಹುದು. ಏಕೆಂದರೆ, ಬಹುತೇಕ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳಲ್ಲಿ ದಯನೀಯವಾಗಿ ವಿವರಗಳ ಕೊರತೆಯಿರುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಸಾಮಾನ್ಯವಾಗಿ ಪಕ್ಷಗಳನ್ನು ಎಡಪಂಥ ಮತ್ತು ಬಲಪಂಥ ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಕೂಡ ಈ ಪಾರಿಭಾಷಿಕ ಶಬ್ದವನ್ನು ವಿವಿಧ ರಾಜಕೀಯ ಪಕ್ಷಗಳ ಗುಣ ಲಕ್ಷಣಗಳು ಮತ್ತು ಅವುಗಳ ಧ್ಯೇಯಗಳನ್ನು ತಿಳಿಸಲು ಈಗ ಹೆಚ್ಚಾಗಿ ಬಳಸಲಾಗುತ್ತಿದೆ. ಆದರೆ ಈ ವರ್ಗೀಕರಣವು ಭಾರತದ ರಾಜಕಾರಣದ ಬಗೆಗೆ ಸಮರ್ಪಕವಾದ ಚಿತ್ರಣವನ್ನು ನೀಡುವುದಿಲ್ಲ. ತೀರಾ ಅತಿಯಾದ ಬಲಪಂಥ ಅಥವಾ ತೀರ ಅತಿಯಾದ ಎಡಪಂಥ ಇವುಗಳ ನಡುವೆ ಅನೇಕ ರೀತಿಯಲ್ಲಿ ಛಾಯೆಗಳನ್ನು ಪ್ರತಿನಿಧಿಸುವ ಪಕ್ಷಗಳೂ ಇವೆಯೆಂದು ಮಾತ್ರ ನಾವು ಹೀಗೆ ಹೇಳುತ್ತಿಲ್ಲ. ಆದರೆ, ಈ ಪಕ್ಷಗಳ ಹಲವಾರು ಕಾರ್ಯಕ್ರಮಗಳನ್ನು ಈ ಸಾಂಪ್ರದಾಯಿಕ ಆಧಾರದ ಮೇಲೆ ವರ್ಗೀಕರಿಸುವುದರು ಅಸಾಧ್ಯವಾಗುತ್ತದೆ.

ಸಮಾಜವಾದದ ಆರ್ಥಿಕ ವ್ಯವಸ್ಥೆಯನ್ನು ಬೆಂಬಲಿಸುವವರೆಗೂ, ಕಾಂಗ್ರೆಸ್ಸನ್ನು ಎಡಪಂಥದ ಪಕ್ಷವೆಂದು ಪರಿಗಣಿಸಬಹುದು. ಆದರೆ ಅದು ಪಟ್ಟಭದ್ರ ಹಿತಾಸಕ್ತಿಗಳಿಗೆ



ನೀಡುವ ಹಾಗೂ ಅವುಗಳಿಂದ ಪಡೆಯುವ ಬೆಂಬಲದಿಂದಾಗಿ ಅದು ಸಂಪ್ರದಾಯವಾದಿ ರಂಗನ್ನು ಪಡೆಯುತ್ತದೆ. ಜನಸಂಘವನ್ನು ಬಲಪಂಥ ಪಕ್ಷವೆಂದು ಕರೆಯಬಹುದು. ಏಕೆಂದರೆ ಅದು ಸೈದ್ಧಾಂತಿಕವಾಗಿ ಸಮಾಜದಲ್ಲಿ ನಂಬಿಕೆಯಿಟ್ಟಿಲ್ಲ. ಆದರೆ ಅದರ ಕಾರ್ಯಕ್ರಮ ಮತ್ತು ಅದರ ರೂಪರೇಷೆ, ವಿನ್ಯಾಸಗಳು, ದೇಶದ ತೀವ್ರಗಾಮಿ ಎಂದು ಹೇಳಿಕೊಳ್ಳುತ ಪಕ್ಷಗಳಿಗಿಂತಲೂ ಹೆಚ್ಚು ತೀವ್ರಗಾಮಿಯಾಗಿದೆ.

ನಾವು ಈ ಪಾಶ್ಚಾತ್ಯ ಪಾರಿಭಾಷಿಕ ಶಬ್ದವನ್ನು ಬಿಟ್ಟುಬಿಟ್ಟರೆ ಭಾರತದ ರಾಜಕೀಯ ಪಕ್ಷಗಳನ್ನು ಅವುಗಳ ಸ್ಫೂರ್ತಿಮೂಲದ ಆಧಾರದ ಮೇಲೆ ವರ್ಗೀಕರಿಸಬಹುದು. ಬಹುತೇಕ ಪಕ್ಷಗಳು ಭಾರತದ ರಾಜಕಾರಣವನ್ನು ಕೆಲವು ವಿದೇಶಿ ಮಾದರಿಯಲ್ಲಿ ರೂಪಿಸಲು ಪ್ರಯತ್ನಿಸುತ್ತವೆ. ಅವುಗಳಿಗೆ ಪಾಶ್ಚಾತ್ಯ ರಾಜಕೀಯ ಆಲೋಚನೆಗಳಿಂದ ಸೈದ್ಧಾಂತಿಕ ನೆಲೆಯು ಒದಗಿಸಲ್ಪಟ್ಟಿದೆ. ಕಾಂಗ್ರೆಸ್, ಕಮ್ಯುನಿಸ್ಟ್ P.S.P., ಸಮಾಜವಾದಿ ಮತ್ತು ಸ್ವತಂತ್ರ ಈ ಪಕ್ಷಗಳೆಲ್ಲವೂ ಈ ಗುಂಪಿಗೆ ಸೇರುತ್ತವೆ.

ಈ ಎಲ್ಲ ಪಕ್ಷಗಳ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿದ್ದರೂ, ಅವೆಲ್ಲವೂ ವಿದೇಶೀ ರಾಜಕಾರಣವನ್ನು ಭಾರೀ ಕ್ಷೇತ್ರದಲ್ಲಿ ಪ್ರಕ್ಷೇಪಿಸಲು ಪ್ರಯತ್ನಿಸುತ್ತಾರೆ. ಸ್ವತಂತ್ರವಾಗಿ ಆಲೋಚಿಸಲು ಅಥವಾ ನಮ್ಮ ರಾಷ್ಟ್ರದ ಮೂಲಭೂತ ಚಿಂತನೆಯ ಮೌಲ್ಯಗಳನ್ನು ಪರಿಗಣನೆಗೆ ತೆಗೆದುಕೊಳ್ಳಲು ಅವರು ನಿರಾಕರಿಸುತ್ತಾರೆ. ಈ ಕೆಲವು ಪಕ್ಷಗಳು ಕಟ್ಟಕಡೆಯದಾಗಿ ಸಮ್ಮತಿಸುವುದೆಂದರೆ, ಪಾಶ್ಚಾತ್ಯ ಆದರ್ಶಗಳು ಮತ್ತು ಭಾರತೀಯ ಸಂಸ್ಕೃತಿಯ ಏಕೀಕರಣವನ್ನು ಮಾತ್ರ. ಭಾರತೀಯ ಹಿನ್ನೆಲೆಯಲ್ಲಿ ಪಾಶ್ಚಾತ್ಯ ರಾಜಕೀಯ ಚಿತ್ರವನ್ನು, ಅವರು ಬಯಸುತ್ತಾರೆ. ಭಾರತದ ರಾಜಕೀಯ ಪರಿಸ್ಥಿತಿಯ ವಿಶ್ಲೇಷಣೆಯಲ್ಲಿ ಅವರು ತಡಮಾಡದೆ, ಸ್ವ ಇಚ್ಛೆಯಿಂದ, ಸ್ವಲ್ಪವೂ ಸಂದೇಹವಿಲ್ಲದೇ, ಪ್ರಶ್ನಿಸದೇ, ವಿದೇಶೀ ವಿಶ್ಲೇಷಕರ ಫಲಿತಾಂಶವನ್ನು ಒಪ್ಪಿಕೊಂಡು ಬಿಡುತ್ತಾರೆ. ರಷ್ಯದಲ್ಲಿ ಅಭಿವೃದ್ಧಿಗೊಂಡ ಪರಿಶುದ್ಧವಾದ (ಕಲಬೆರಕೆಯಾಗದ) ಮಾರ್ಕ್ಸಿಸಂ ಅನ್ನು ಇಲ್ಲಿಯ ಕಮ್ಯುನಿಸ್ಟರು ಪ್ರತಿನಿಧಿಸುತ್ತಾರೆ (ಬೆಂಬಲಿಸುತ್ತಾರೆ).

ಕಾಂಗ್ರೆಸ್, P.S.P. ಮತ್ತು ಸಮಾಜವಾದಿ ಎಲ್ಲ ಪಕ್ಷಗಳೂ ರಾಷ್ಟ್ರೀಯ ನಿಷ್ಠೆ ಮತ್ತು ಸಮಾಜವಾದಿ ಆದರ್ಶಗಳ ನಡುವೆ ಸಿಲುಕಿ ಛಿದ್ರಗೊಂಡು ಬೇರೆಬೇರೆಯಾಗಿವೆ. ಆ ಪಕ್ಷಗಳು ಪ್ರಜಾಪ್ರಭುತ್ವವನ್ನು ಕಡೆಗಣಿಸಲು ಸಮರ್ಥವಾಗಿಲ್ಲ ಮತ್ತು ಮಾಡಿ ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಸಿದ್ಧಾಂತಗಳನ್ನು ಒಂದುಗೂಡಿಸಲು ಬಯಸುತ್ತವೆ. ಸ್ವತಂತ್ರ ಪಕ್ಷವು ಸಮಾಜವಾದಕ್ಕೆ ವಿರುದ್ಧವಾಗಿದೆ. ಆದಾಗ್ಯೂ, ವಿಶ್ವಾಸಾರ್ಹವಾಗಿಲ್ಲದಿರುವ ಬಂಡವಾಳಶಾಹಿಯನ್ನು ಬಿಟ್ಟು ಉತ್ತಮವಾದ ಪರ್ಯಾಯ ಒಂದು ಇರಬಹುದೆಂಬುದನ್ನು ಸಮಾಜವಾದವು ತಿಳಿದಿಲ್ಲ. ಮತ್ತೊಂದು ಕಡೆಯಲ್ಲಿ ಭಾರತೀಯ ಸಂಸ್ಕೃತಿ ಮತ್ತು ಜೀವನಗಳ ಶಾಶ್ವತ ಮೌಲ್ಯಗಳಿಂದ ತಮ್ಮ ಸ್ಫೂರ್ತಿಯನ್ನು ಪಡೆದಿರುವ ಮತ್ತು ಪಾಶ್ಚಿಮಾತ್ಯ

ಮಾರ್ಗಗಳನ್ನೂ ಆದರ್ಶಗಳನ್ನೂ ಕುರುಡಾಗಿ ಒಪ್ಪಿಕೊಳ್ಳಲು ಸಿದ್ಧವಾಗಿರದ ಪಕ್ಷಗಳೂ ಇವೆ. ಜನಸಂಘ ಮತ್ತು ರಾಮರಾಜ್ಯ ಪರಿಷತ್ತುಗಳು ಈ ಗುಂಪಿಗೆ ಸೇರುತ್ತವೆ. ಈ ಎರಡರಲ್ಲಿ ರಾಮರಾಜ್ಯ ಪರಿಷತ್ತು ಹೆಚ್ಚು ಸಂಪ್ರದಾಯನಿಷ್ಠ ಮಾದರಿಯನ್ನು ಪ್ರತಿನಿಧಿಸುತ್ತದೆ ಮತ್ತು ಎಲ್ಲ ವಿಧವಾದ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳನ್ನು ವಿರೋಧಿಸುತ್ತದೆ. ಜನಸಂಘವು ದಯಾನಂದ ಮತ್ತು ತಿಲಕರ ಸುಧಾರಣಾ ಪರಂಪರೆಯನ್ನು ಅನುಸರಿಸುತ್ತದೆ. ಕೇವಲ ಸಾಮಾಜಿಕ ಕ್ಷೇತ್ರದಲ್ಲಿ ಮಾತ್ರವಲ್ಲ, ಆದರೆ ಆ ಸುಧಾರಣೆಯನ್ನು ಆರ್ಥಿಕ ವಿಷಯಗಳಿಗೂ ವಿಸ್ತರಿಸಲು ಪ್ರಯತ್ನಿಸುತ್ತದೆ.

ಹೀಗಾಗಿ ನಾವು ಮತ್ತೊಂದು ವರ್ಗೀಕರಣವನ್ನು ಹೊಂದಿದ್ದೇವೆ. ಅದೆಂದರೆ, 'ಬದಲಾಗುವವರು' ಮತ್ತು 'ಬದಲಾಗದವರು' R.R.P. ಮತ್ತು ಸ್ವತಂತ್ರ ಪಕ್ಷಗಳು 'ಬದಲಾಗದವರು'. ಈಗ ಹದಿನಾಲ್ಕು ವರ್ಷಗಳಿಂದ ಉಂಟಾಗಿರುವ ಬದಲಾವಣೆಯ ಕ್ರಮವನ್ನು ಕೂಡ ಅವರು ಹಿಂದಿರುಗಿಸಬಯಸುತ್ತಾರೆ. ಪ್ರಸಕ್ತ ಸಮಯದಲ್ಲಿ ಅಥವಾ ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಸಾಂಸ್ಥಿಕ ವ್ಯವಸ್ಥೆಗಳನ್ನು ಉಳಿಸಿಕೊಳ್ಳಲು ಇಷ್ಟಪಡುತ್ತಾರೆ. ಅವರು ಅವುಗಳಿಗೆ ಪಾವಿತ್ರ್ಯದ ಲೇಪ ಹಚ್ಚುತ್ತಾರೆ. R.R.P. (ರಾಮರಾಜ್ಯ ಪರಿಷತ್ತು)ಯವರು ತಮ್ಮನ್ನು ತಾವು ಹಿಂದುಸ್ಥಾನದ ಅವಿಭಾಜ್ಯ ಅಂಗವೆಂದು ಪರಿಗಣಿಸಿಕೊಂಡರೆ ಸ್ವತಂತ್ರಪಕ್ಷದವರು ತಮ್ಮ ಅಸ್ತಿತ್ವವನ್ನು ಸಂಪ್ರದಾಯವಾದದತ್ತ ಹೋಗುತ್ತಿರುವ ಉದಾರ ಪರಂಪರೆಯ ಆಧಾರದ ಮೇಲೆ ಸಮರ್ಥಿಸಿಕೊಳ್ಳುತ್ತಾರೆ.

ಈಗ ಅಸ್ತಿತ್ವದಲ್ಲಿರುವ ಪರಿಸ್ಥಿತಿ ಬಗೆಗೆ ಇತರ ಪಕ್ಷಗಳೂ ಸಂತೋಷವಾಗಿಲ್ಲ. ಆರ್ಥಿಕ ಮತ್ತು ಇತರ ಸಂಸ್ಥೆಗಳು ಬದಲಾವಣೆ ಹೊಂದುವುದು ಅಪೇಕ್ಷಣೀಯವೆಂದು ಅವರು ಭಾವಿಸಿದರು. ಏಕೆಂದರೆ, ಆ ಸಂಸ್ಥೆಗಳು ಪ್ರಾರಂಭದಲ್ಲಿ ತಾವು ಹೊಂದಿದ್ದಂತಹ ಸತ್ವವನ್ನಾಗಲೀ ಆದರ್ಶವನ್ನಾಗಲೀ ಪ್ರತಿನಿಧಿಸುತ್ತಿಲ್ಲ. ಸಮಾಜವಾದಿಗಳು, ಪಶ್ಚಿಮದಲ್ಲಿನ ತಮ್ಮ ಸೈದ್ಧಾಂತಿಕ ವಿದ್ವಾಂಸರು ಸ್ಥಾಪಿಸಿರುವ ಮಾರ್ಗದಲ್ಲಿ ಬದಲಾವಣೆ ತರಲು ಇಚ್ಛಿಸುತ್ತಾರೆ. ನಮ್ಮ ಪೂರ್ವಜರಿಂದ, ಮಾನವಪ್ರಯತ್ನಗಳಿಗಾಗಿ ಸ್ಥಾಪಿಸಲ್ಪಟ್ಟಿರುವ ತತ್ತ್ವಗಳು ಮತ್ತು ಧ್ಯೇಯಗಳಿಂದ ನಿರ್ಧರಿಸಲ್ಪಟ್ಟಿರುವ ಮಾರ್ಗದಲ್ಲಿ ಜನಸಂಘವು ಇದನ್ನು ತರಲುಬಯಸುತ್ತದೆ. ಆದ್ದರಿಂದ, ಇರುವ ಸ್ಥಿತಿಯನ್ನೇ ಮುಂದುವರಿಸಲು ನೀವು ಬಯಸುತ್ತೀರಾದರೆ, ಸ್ವತಂತ್ರ ಪಕ್ಷಕ್ಕೆ ಮತ ನೀಡಿ; ಪಾಶ್ಚಿಮಾತ್ಯರನ್ನು ಅನುಕರಿಸುವ ಬದಲಾವಣೆ ಬೇಕೆಂದರೆ ಯಾರಾದರೂ ಒಬ್ಬ ಸಮಾಜವಾದಿಯನ್ನು ಆಯ್ಕೆ ಮಾಡಿ; ನೀವು ನಿಮ್ಮ ರಾಷ್ಟ್ರೀಯ ಜೀವನವನ್ನು, ನಿಮ್ಮ ರಾಷ್ಟ್ರದ ಪುರಾತನ ಆದರ್ಶಗಳೊಂದಿಗೆ ಹೊಂದಿಕೊಂಡೂ ಕೂಡ, ಸುಧಾರಣೆ ಮತ್ತು ಆಧುನಿಕರಣಗೊಳ್ಳಬೇಕೆಂದು ಇಚ್ಛಿಸುವಿರಾದರೆ, ಜನಸಂಘವನ್ನು ಬೆಂಬಲಿಸಿ.

(೧೯೬೧ರ ಡಿಸೆಂಬರ್ ೧೧)



# ಜನಸಂಘದ ಅಧಿವೇಶನಗಳು

ಭಾರತೀಯ ಜನಸಂಘದ ಹನ್ನೆರಡನೆಯ ವಾರ್ಷಿಕ ಅಧಿವೇಶನವನ್ನು ಜನವರಿ ೨೩ ಮತ್ತು ೨೪ರಂದು ವಿಜಯವಾಡದಲ್ಲಿ ನಡೆಸಲಾಗುತ್ತದೆ. ನಾನು ಹೋದ ಹೋದ ಕಡೆಗಳಲ್ಲೆಲ್ಲ ಜನಸಂಘದ ಕಾರ್ಯಕರ್ತರು ಮತ್ತು ಜನರಲ್ಲಿ ಇಬ್ಬರಲ್ಲಿಯೂ ಭಾರೀ ಉತ್ಸಾಹವನ್ನು ಕಂಡಿದ್ದೇನೆ. ಇದುವರೆಗೂ ನಡೆದಿರುವ ಪಕ್ಷದ ಒಂದೇ ಒಂದು ಅಧಿವೇಶನದಲ್ಲಿ ಆದರೂ, ಸಂಘಟಕರ ನಿರೀಕ್ಷೆಗಿಂತಲೂ ಹೆಚ್ಚಿನ ಜನರ ಉಪಸ್ಥಿತಿ ಇರದಿದ್ದ ಅಧಿವೇಶನವಿರಲಿಲ್ಲ ಎಂಬುದು ಗಮನಿಸಬೇಕಾದ ಸಂಗತಿ. ಈ ಬಾರಿಯೂ ಕೂಡ ಇದು ಪುನರಾವರ್ತಿಸಿದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ದಿಢೀರನೆ ಉಂಟಾಗಬಹುದಾದ ಅಧಿಕ ಜನರ ನೂಕುನುಗ್ಗಾಟದಿಂದ ತೊಂದರೆಗಳು ಉಂಟಾಗದಂತೆ, ಕಾರ್ಯಕರ್ತರು, ತುರ್ತು ಅವಶ್ಯಕತೆಗಳಿಗೆ ಬೇಕಾಗುವ ಸಿದ್ಧತೆಗಳನ್ನು ಮಾಡಿಕೊಂಡಿರುವುದು ಉತ್ತಮ.

ಜನಸಂಘವು ಬೆಳೆಯುತ್ತಿರುವ ಪಕ್ಷ. ಜನರು ಅದರ ಬಗೆಗೆ ಭಾರೀ ಭರವಸೆ ಹೊಂದಿದ್ದಾರೆ. ನಮ್ಮ ಕಾರ್ಯಕರ್ತರಿಗೆ ತಮ್ಮ ಜವಾಬ್ದಾರಿಯ ಪ್ರಜ್ಞೆಯಿದೆ. ಆದ್ದರಿಂದ ಸಹಜವಾಗಿಯೇ ನಮ್ಮ ರಾಷ್ಟ್ರಜೀವನದಲ್ಲಿ ಎಲ್ಲ ಕಡೆಯೂ ಗಾಢಗೊಳ್ಳುತ್ತಿರುವ ಪ್ರಸಕ್ತ ಸಮಯದ ಕ್ಲಿಷ್ಟ ಪರಿಸ್ಥಿತಿಯಲ್ಲಿ, ತಮ್ಮ ಕರ್ತವ್ಯ, ಹೊಣೆಗಾರಿಕೆಗಳನ್ನು ಅರಿತವರು, ಹಾಗೂ ನಿರಾಶೆ, ನಿಷ್ಕ್ರಿಯತೆಗಳ ವಿಷಣ್ಣಭಾವನೆಗೆ ಒಳಗಾಗದಿರುವವರು ಇಂತಹ ಅಧಿವೇಶನಗಳಲ್ಲಿ ಭಾಗವಹಿಸಲು ಕಾತರರಾಗಿರುತ್ತಾರೆ ಏಕೆಂದರೆ, ಅಲ್ಲಿ ಅವರು ಟಿಪ್ಪಣಿಗಳನ್ನು ಹೋಲಿಸಬಹುದು, ಪರಿಸ್ಥಿತಿಯನ್ನು ಚರ್ಚಿಸಬಹುದು ಮತ್ತು ಭವಿಷ್ಯದಲ್ಲಿನ ತಮ್ಮ ಕಾರ್ಯವಿಧಾನವನ್ನು ನಿರ್ಧರಿಸಬಹುದು. ನಮ್ಮ ದೈನಂದಿನ ಕಾರ್ಯಗತಿಯಲ್ಲಿ ನಾವು ಮುಖ್ಯವಾಗಿ ಸ್ಥಳೀಯ ವಿಷಯಗಳಲ್ಲಿ ವ್ಯಸ್ತರಾಗಿದ್ದು, ಜನರ ಸಣ್ಣಪುಟ್ಟ ತೊಂದರೆಗಳನ್ನು ಪರಿಹರಿಸುವುದರಲ್ಲಿ ನಿರತರಾಗಿರುತ್ತೇವೆ. ಅದು ಕಡಿಮೆ ಮಹತ್ವದ ವಿಷಯವಲ್ಲ. ಆದರೆ ದೇಶದ ನಾಲ್ಕೂ ಮೂಲೆಗಳಿಂದ ಜನರು ಒಟ್ಟುಗೂಡಿದಾಗ ಮಾತ್ರವೇ ರಾಷ್ಟ್ರೀಯ ಪರಿಪ್ರೇಕ್ಷ್ಯದಿಂದ ವಿಷಯಗಳನ್ನು ಪರಿಶೀಲಿಸಬಹುದು. ಇಲ್ಲಿ ಪ್ರಾದೇಶಿಕ ಹಾಗೂ ರಾಷ್ಟ್ರೀಯ ದೃಷ್ಟಿಕೋನಗಳು ಒಂದರೊಡನೆ ಇನ್ನೊಂದು ಬೆಸೆದುಕೊಳ್ಳುತ್ತವೆ. ಮತ್ತು ಒಂದು ಸಮಗ್ರ ದೃಷ್ಟಿಕೋನದ ಬೆಳವಣಿಗೆಯಾಗುತ್ತದೆ. ಇಂದು ನಮ್ಮ

ದೇಶದಲ್ಲಿ ಬಹಳ ಕೊರತೆಯಿರುವುದೆಂದರೆ ಈ ದೃಷ್ಟಿಕೋನದ್ದೇ ಆಗಿದೆ. ವಿಶಾಲ ಪ್ರಪಂಚಕ್ಕೆ ಸಂಪೂರ್ಣ ಕುರುಡಾಗಿರುವಂತಹ ಜನರು ನಮ್ಮಲ್ಲಿದ್ದಾರೆ, ಅಥವಾ ಸ್ವರ್ಗವು ಒಂದು ಕಕ್ಷೆಯಲ್ಲಿ ಸುತ್ತುತ್ತಿದ್ದು ಅದರ ಕೇಂದ್ರಬಿಂದುವು ತಾವೇ ಆಗಿರಬೇಕೆಂದು ಬಯಸುವವರು ಇದ್ದಾರೆ, ಮತ್ತು ಕೆಲವರು ಯಾವಾಗಲೂ ಯಾವುದಾದರೂ ಬೃಹತ್ತಾದದ್ದನ್ನೂ, ಅಸ್ಪಷ್ಟ, ಅಮೂರ್ತವಾದದ್ದನ್ನು ಚಿಂತಿಸುವವರಿದ್ದಾರೆ. ಗಾದೆ ಮಾತಿನಲ್ಲಿ ಖಗೋಳಶಾಸ್ತ್ರಜ್ಞನಂತೆ, ಅವರ ಕಣ್ಣುಗಳು ಯಾವಾಗಲೂ ಆಕಾಶದಲ್ಲಿನ ನಕ್ಷತ್ರಗಳ ಮೇಲೆ ನೆಟ್ಟಿರುತ್ತವೆ. ಮತ್ತು ತಮ್ಮ ಮುಂದೆಯೇ ಚರಂಡಿಯ ಕಡೆ ನೋಡುವುದನ್ನೇ ಅವರು ಮರೆಯುತ್ತಾರೆ. ಅಂತಹವರು ಜೀವನದ ಹೊಲಸಾದ ಹಳ್ಳಗಳಲ್ಲಿ ತಮ್ಮ ಸರ್ವನಾಶವನ್ನು ಕಂಡುಕೊಂಡರೆ ಯಾರೂ ಆಶ್ಚರ್ಯಪಡಬಾರದು ಮತ್ತು ಮರುಗಲೂಬಾರದು. ಈ ಎರಡೂ ಅತಿಗಳನ್ನು ನಾವು ನಿವಾರಿಸಿಕೊಳ್ಳಬೇಕು.

ಈ ಅಧಿವೇಶನವು ದಕ್ಷಿಣದಲ್ಲಿ ನಡೆಯುತ್ತಿರುವುದು ಪ್ರತಿನಿಧಿಗಳ ಆಸಕ್ತಿಗೆ ಮತ್ತಷ್ಟು ಕಾರಣವಾಗಿದೆ. ನಾವು ಬೆಂಗಳೂರಿನಲ್ಲಿ ಒಂದು ವಾರ್ಷಿಕ ಅಧಿವೇಶನವನ್ನು ನಡೆಸಿದ್ದೆವು. ಆದರೆ ಅದು ವ್ಯಾವಹಾರಿಕ ಅಧಿವೇಶನವಾಗಿತ್ತು. ಬೇರೆ ಅಧಿವೇಶನಗಳಲ್ಲಿ ವ್ಯವಹಾರದ ನಿರ್ವಹಣೆಯು ನಡೆಯುವುದಿಲ್ಲವೆಂದಲ್ಲ, ಆದರೆ ಯಾವ ಅಧಿವೇಶನದಲ್ಲಿ ಪ್ರಚಾರ, ಜನರ ಮನಸ್ಸನ್ನು ಸೆಳೆಯುವಂತಹ ಕಾರ್ಯಕ್ರಮಗಳ ಬಗೆಗೆ ಹೆಚ್ಚು ಗಮನ ನೀಡುವುದಿಲ್ಲವೋ ಅಥವಾ ಅಂತಹ ಉದ್ದೇಶಗಳು ಇರುವುದಿಲ್ಲವೋ ಅವುಗಳನ್ನು ವ್ಯವಹಾರದ ಅಧಿವೇಶನಗಳೆನ್ನಲಾಗುತ್ತದೆ. ಆ ದೃಷ್ಟಿಕೋನದಿಂದ ವಿಜಯವಾಡದ ಅಧಿವೇಶನವು ಬೃಹದ್ ರೀತಿಯಲ್ಲಿ ಆಯೋಜಿಸಲ್ಪಟ್ಟಿದೆ ಎಂದು ಹೇಳಬಹುದು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದ ಸಮಯದಲ್ಲಿ ನಾನು ಆಂಧ್ರದಲ್ಲಿದ್ದೆ. ಅಧಿವೇಶನವನ್ನು ಒಂದು ಬೃಹತ್ ಪ್ರದರ್ಶನವನ್ನಾಗಿ ಮಾಡಲು ಇಡಿಯ ಸರ್ಕಾರದ ಆಡಳಿತ ವ್ಯವಸ್ಥೆಯೇ ಸಜ್ಜಾಗಿ ನಿಂತಿತ್ತು. ಹಾಗಿದ್ದರೂ, ಕಾಂಗ್ರೆಸ್ ಅಧ್ಯಕ್ಷರು ಬಂದಾಗ ಅವರು ಮೆರವಣಿಗೆಯನ್ನು ಹೊರಡಿಸಲಾಗಲಿಲ್ಲವೆಂದು ನನಗೆ ತಿಳಿದು ಬಂದಿತು. ಗುಂಟೂರು ಅಧಿವೇಶನದಿಂದ ಬಂದ ಸಭ್ಯಗೃಹಸ್ಥರೊಬ್ಬರು ಹೀಗೆ ಹೇಳಿದರು: "ನಾವು ರಾಜಶಕ್ತಿಯ ಪ್ರದರ್ಶನವನ್ನು ನೋಡಿದ್ದೇವೆ, ಈಗ ವಿಜಯವಾಡದಲ್ಲಿ ಜನಸಂಘದ ಅಧಿವೇಶನದಲ್ಲಿ ಜನಶಕ್ತಿಯು ವ್ಯಕ್ತವಾಗುವುದನ್ನು ಪ್ರಕಟಗೊಳ್ಳುವುದನ್ನು ನೋಡಲಿದ್ದೇವೆ."

ಇದು ಜನರ ಮೇಳೈಸುವಿಕೆಯೇ ವಿನಾ ನಾಯಕರುಗಳ ಸ್ನೇಹಕೂಟವಲ್ಲ. ಸಹಜವಾಗಿಯೇ ಊಟ, ವಸತಿಗಳಿಗೆ ಅದ್ದೂರಿಯ ಅಥವಾ ದುಂದುವೆಚ್ಚದ ಏರ್ಪಾಟುಗಳಿರುವುದಿಲ್ಲ. ಇಡಿಯ ಪ್ರದೇಶದಲ್ಲಿ ಯಾವುದೇ ಆಡಂಬರಕ್ಕೆ



ಅವಕಾಶವಿರುವುದಿಲ್ಲ, ಮತ್ತು ಭಾಷಣಕಾರರಿಗೂ, ಕೇಳುಗರಿಗೂ(ಪ್ರೇಕ್ಷಕರು) ನಡುವೆ ಮತ್ತು ಮುಖಂಡರಿಗೂ ಜನರಿಗೂ ನಡುವೆ ಭಯ ಹುಟ್ಟಿಸುವಂತಹ ದೂರವೂ ಇರುವುದಿಲ್ಲ. ಆದರೆ ಹೆಚ್ಚಿನ ನಿಯಮ, ಕ್ರಮ, ಹೆಚ್ಚಿನ ಶಿಸ್ತು ಮತ್ತು ಹೆಚ್ಚು ಗಂಭೀರ ಚರ್ಚೆಗಳು ಅಲ್ಲಿ ಇರಬೇಕು. ದುಬಾರಿ ವೆಚ್ಚದ ಬೃಹತ್ ಸಮಾವೇಶಗಳನ್ನು ನಡೆಸಿ, ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ತಯಾರಿಕೆಯಂತಹ ಮುಖ್ಯ ಪ್ರಶ್ನೆಗಳನ್ನು ತೀರಾ ಸಾಮಾನ್ಯ ಮತ್ತು ಭಾವಾತಿರೇಕದ ರೀತಿಯಲ್ಲಿ ಇತ್ಯರ್ಥಗೊಳಿಸುವುದನ್ನು ನಿರ್ವಹಿಸಲು ಶಕ್ತರಾಗಿಲ್ಲ.

ದಕ್ಷಿಣದಲ್ಲಿ ಜನಸಂಘಕ್ಕೆ ಆಶ್ರಯವಿಲ್ಲ ಎಂಬ ವ್ಯಾಪಕವಾದ ಅಭಿಪ್ರಾಯವಿದೆ. ನಾವು ದಕ್ಷಿಣದ ಕೆಲವು ಪ್ರದೇಶಗಳಿಗೆ ತಡವಾಗಿ ತಲುಪಿದೆವು ಎಂಬುದು ನಿಜ ಮತ್ತು ಕೆಲವು ವಿಶಿಷ್ಟ ಸಮಸ್ಯೆಗಳಿಂದಾಗಿ ಹಲವು ಪ್ರದೇಶಗಳಲ್ಲಿ ಇನ್ನೂ ಜನಸಂಘವು ಪರಿಗಣಿಸಬಹುದಾದ ಶಕ್ತಿಯಾಗಿಲ್ಲವೆಂಬುದೂ ನಿಜ. ಆದರೆ ಇದು ಸಂಪೂರ್ಣ ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಸತ್ಯವಲ್ಲ. ಜನರ ತಪ್ಪುಭಾವನೆಯನ್ನು ನಾವು ದೂರಮಾಡಬೇಕಾಗಿದೆ. ಈ ಅಧಿವೇಶನವು ಈ ಉದ್ದೇಶವನ್ನು ಸಾಧಿಸಲು ಸಮರ್ಥವಾಗುತ್ತದೆಂದು ನಾನು ಭರವಸೆ ತಾಳುತ್ತೇನೆ. ಜನಸಂಘವು ಅಖಿಲ ಭಾರತೀಯ ಘಟಕ ಎಂಬುದನ್ನು ಜನರು ಅರಿಯಲಿ, ಅದರ ಕಾರ್ಯಕ್ರಮಗಳು ರಾಷ್ಟ್ರೀಯ ಆಕರ್ಷಣೆ ಹೊಂದಿವೆ ಮತ್ತು ದೇಶಾದ್ಯಂತ ಅದರ ಕೆಳಸ್ತರದಿಂದ (ತೃಣಮೂಲದಿಂದ) ಅಭಿವೃದ್ಧಿಗೊಳಿಸುವ ಕಾರ್ಯ ನಡೆಸುತ್ತಿದೆಯೆಂದೂ ಜನರು ಅರಿಯಲಿ.

ಜನವರಿ ೨೫ ಮತ್ತು ೨೬ರಂದು ನಡೆಯಲಿರುವ ಭಾರತೀಯ ಪ್ರತಿನಿಧಿ ಸಭಾದ ಅಧಿವೇಶನದಲ್ಲಿ ಜನಸಂಘದ "ಸಿದ್ಧಾಂತಗಳು ಮತ್ತು ಕಾರ್ಯನೀತಿ" ಕರಡು ಪ್ರತಿಯ ಬಗೆಗೂ ಚರ್ಚಿಸಲಾಗುವುದು ಮತ್ತು ಅದನ್ನು ಅಳವಡಿಸಿಕೊಳ್ಳಲಾಗುವುದು. ಈ ಕರಡುಪ್ರತಿಯನ್ನು ಮೊದಲಬಾರಿ ಸಭಾದ ಗ್ವಾಲಿಯರ್ ಅಧಿವೇಶನದಲ್ಲಿ ಪ್ರಸಾರ ಮಾಡಲಾಗಿತ್ತು. ಆ ಸಮಯದಲ್ಲಿಯೇ ಈ ವಿಷಯವನ್ನು ಸಾರ್ವಜನಿಕರ ಎದುರು ಚರ್ಚೆಗೆ ಮುಕ್ತವಾಗಿ ಇಡಬೇಕೆಂದು ನಿರ್ಧರಿಸಲಾಗಿತ್ತು. ವಿವಿಧ ಸ್ತರಗಳಲ್ಲಿನ ಕಾರ್ಯಕರ್ತರು ಅದರ ಕರಡನ್ನು ಅಧ್ಯಯನ ಮಾಡಿ, ಚರ್ಚಿಸಿ, ತಮ್ಮ ಅಭಿಪ್ರಾಯಗಳನ್ನೂ, ಸಲಹೆಗಳನ್ನೂ ಕೇಂದ್ರ ಕಛೇರಿಗೆ ಕಳಿಸಬೇಕಾಗಿತ್ತು. ಆ ದಸ್ತಾವೇಜಿನ ಪ್ರಾಮುಖ್ಯತೆಯಿಂದಾಗಿ, ಪಕ್ಷಕ್ಕೆ ಸಂಬಂಧಿಸಿರದಿದ್ದ, ಆದರೆ ಚಿಂತನ ಮತ್ತು ಸಂಶೋಧನೆಗಳಲ್ಲಿ ಮುಖಂಡರಾದಂತಹ ಮತ್ತು ಭಾರತೀಯ ಸಂಸ್ಕೃತಿಯಲ್ಲಿ ಆಳವಾದ ಶ್ರದ್ಧೆ ಮತ್ತು ಆಸಕ್ತಿಯುಳ್ಳವರ ಅಭಿಪ್ರಾಯಗಳನ್ನು ಕೋರಲಾಯಿತು. ಆ ದಸ್ತಾವೇಜಿಗೆ ಉತ್ತಮ ಸ್ವಾಗತ ದೊರೆಯಿತು ಮತ್ತು ಗಣನೀಯ ಪ್ರಮಾಣದಲ್ಲಿ ಅನೇಕ ಭಾಗಗಳ ಅಭಿಪ್ರಾಯವನ್ನು ಪಡೆಯಬಹುದಾಯಿತು. ಮೂಲ

ಕರಡನ್ನು ಉತ್ತಮಪಡಿಸುವಲ್ಲಿ ನೆರವಾದ ಎಲ್ಲರಿಗೂ ನಾವು ಕೃತಜ್ಞರಾಗಿದ್ದೇವೆ.

ಸ್ವೀಕರಿಸಿದ ಎಲ್ಲ ಅಭಿಪ್ರಾಯಗಳೊಂದಿಗೆ ಕರಡನ್ನು, ಕಾರ್ಯಕಾರಿಣಿ ಸಮಿತಿಯ ಉಪಸಮಿತಿಯೊಂದು ಪರಿಶೀಲಿಸಿತು. ಕಾರ್ಯಕಾರಿಣಿ ಸಮಿತಿ ಕೂಡ ಅದನ್ನು ಪರಿಶೀಲಿಸಿತು ಮತ್ತು ಡಿಸೆಂಬರ್ ೪, ೫, ೬ರ ತನ್ನ ಪಾಟ್ನಾದ ಅಧಿವೇಶನದಲ್ಲಿ ಅದನ್ನು ಅಳವಡಿಸಿಕೊಂಡಿತು. ಅದರ ಅಂತಿಮ ಹಂತದಲ್ಲಿ ಅದನ್ನು ಒಪ್ಪಿಗೆ ಹಾಗೂ ಅಳವಡಿಕೆಗಾಗಿ ಭಾರತೀಯ ಪ್ರತಿನಿಧಿ ಸಭಾದ ಎದುರಿಗೆ ಮಂಡಿಸಲಾಯಿತು.

ಚರ್ಚೆಯ ಹಂತದಲ್ಲಿ ವಿರೋಧವಾದ, ವಿಮರ್ಶಾತ್ಮಕವಾದ ಮತ್ತು ಸ್ಪಷ್ಟವಾಗಿ ವಿರುದ್ಧ ಅಭಿಪ್ರಾಯಗಳು, ವಿಭಿನ್ನ ಸಂಘಟನೆಗಳ ಸದಸ್ಯರಿಂದ ಅಭಿವ್ಯಕ್ತಗೊಳ್ಳುವುದು ಸಹಜವೇ ಆಗಿದೆ. ನಾವು ನಮ್ಮ ನಿರ್ಣಯಗಳ ಮತ್ತು ಪ್ರಣಾಳಿಕೆಗಳ ಬಗೆಗೆ ಮಾನಸಿಕವಾಗಿ ಚುರುಕಾಗಿಯೂ ಗಂಭೀರವಾಗಿಯೂ ಚಿಂತನೆ ಮಾಡುತ್ತೇವೆಂದು ತೋರಿಸುತ್ತದೆ. ಒಂದು ಅಖಿಲ ಭಾರತೀಯ ಪಕ್ಷದ ಆಫೀಸ್‌ಬೇರರ್ ಒಬ್ಬರು, ತಮ್ಮ ಸಂಸ್ಥೆಯು, ಸಂಪೂರ್ಣ ಸಮಾಜವಾದದಿಂದ ಮುಕ್ತ ಉದ್ಯಮದ ನೀತಿಯವರೆಗೆ ಎಲ್ಲ ನಿರ್ಣಯಗಳ ಮತ್ತು ಪ್ರಣಾಳಿಕೆಯ ದಾಖಲೆಗಳನ್ನು ಹೊಂದಿದೆಯೆಂದು ಹೇಳಿದ್ದುದು ನನ್ನ ನೆನಪಿನಲ್ಲಿದೆ. ನಾವು ನಮ್ಮ ಪಕ್ಷವನ್ನು ಅವರ ಪಕ್ಷದೊಡನೆ ವಿಲೀನಗೊಳಿಸಲು ಒಪ್ಪಿದರೆ, ತನ್ನ ಪಕ್ಷಕ್ಕೆ ಯಾವುದೇ ಕಾರ್ಯಕ್ರಮವನ್ನೂ ಅಳವಡಿಸಿಕೊಳ್ಳಲು ತೊಂದರೆಯಾಗುವುದಿಲ್ಲವೆಂದು ಕೂಡ ಅವರು ಹೇಳಿದ್ದರು.

ಆದರೆ, ಜನಸಂಘದ ಸದಸ್ಯರು ವಿಷಯವನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳುವುದಿಲ್ಲ. ನಾವು ರಾಜಕೀಯದಲ್ಲಿರುವುದು ಯಾವುದೇ ಹುದ್ದೆಯ, ಕಛೇರಿಯ ರೊಟ್ಟಿತುಣುಕಿಗಾಗಿಯಲ್ಲ, ಆದರೆ ಒಂದು ಉದ್ದೇಶಕ್ಕಾಗಿ. ಆದ್ದರಿಂದ, ನಮ್ಮ ಸದಸ್ಯರು ಈ ಕರಡನ್ನು ಗಂಭೀರವಾಗಿ ಪರಿಗಣಿಸಿ ತಮಗೆ ಅನ್ನಿಸಿದ್ದನ್ನು ಧೈರ್ಯವಾಗಿ ಹೇಳಿದ್ದಕ್ಕಾಗಿ ನಾನು ಅತ್ಯಂತ ಹರ್ಷಿತನಾಗಿದ್ದೇನೆ. ಈ ರೀತಿಯಲ್ಲಿ ನಿರ್ಮಾಣಗೊಂಡ ಸಂಸ್ಥೆಯ ಭವಿಷ್ಯವು ಉಜ್ವಲವಾಗಿರುತ್ತದೆ. ಆದರ ಕೈಗಳಲ್ಲಿ ಪ್ರಜಾಪ್ರಭುತ್ವವು ಸುರಕ್ಷಿತವಾಗಿರುತ್ತದೆ ಮುಕ್ತ ಆಲೋಚನೆಗೆ ಸಂಪೂರ್ಣ ಅವಕಾಶದ ಭರವಸೆಯನ್ನು ನೀಡಲಾಗುತ್ತದೆ.

ಕೆಲವು ಪತ್ರಿಕೆಗಳು, ವಿಶೇಷವಾಗಿ ಎಡಪಂಥದ ಪ್ರತಿಕೆಗಳು, ಈ ಆಧಾರದ ಮೇಲೆ ಜನಸಂಘದಲ್ಲಿ ಒಡಕನ್ನು ಕಾಣಲು ಪ್ರಯತ್ನಿಸಿವೆ. ಅದು ಅವರ ಸ್ವಾನುಕೂಲದ ಯೋಚನೆ ಮಾತ್ರ. ಯಾರು ಅಭಿಪ್ರಾಯವನ್ನು ಬದಲಾಯಿಸುವಂತೆ ಮಾಡುವುದಕ್ಕೆ ಒಗ್ಗಿಹೋಗಿದ್ದಾರೆಯೋ (Brain washing )ಮತ್ತು ಕಟ್ಟುನಿಟ್ಟಾಗಿ ಪಕ್ಷಕ್ಕೆ ಹೊಂದಿಕೊಂಡಿರುವುದೊಂದು ಬಿಟ್ಟು ಉಳಿದುದೆಲ್ಲವೂ ಯಾರಿಗೆ ಸಂಪ್ರದಾಯ



ವಿರೋಧವೆನಿಸುತ್ತದೆಯೋ ಅವರು ಮುಕ್ತಮನಸ್ಸುಗಳ ಮಾರ್ಗವನ್ನು ಅರ್ಥಮಾಡಿಕೊಳ್ಳಲಾರರು.

ಆದರೂ ಎಡಪಂಥದ ಪತ್ರಿಕಗಳ ಗೋಬೆಲ್ ಸುಳ್ಳುಗಳು, ನಮ್ಮ ಜಾಗೃತವಾಗಿರದ ಮನಸ್ಸುಗಳ ಮೇಲೆ ಯಾವುದೇ ಪ್ರಭಾವ ಬೀರದಂತೆ ನಾವು ಎಚ್ಚರಿಕೆಯಿಂದಿರಬೇಕು. ನಾವು “ತ್ರಾಯನಾಮ್ ಧೃತನಮ್” ಎಂಬ ಹಳೆಯ ಕಥೆಯನ್ನು ಓದಿದ್ದೇವೆ. ಮೂರು ಜನ ಕಳ್ಳರು ಒಬ್ಬ ಬ್ರಾಹ್ಮಣನು ಹೊತ್ತುಕೊಂಡು ಹೋಗುತ್ತಿದ್ದ ಮೇಕೆಯನ್ನು ಅದು ಮೇಕೆಯಲ್ಲ, ನಾಯಿಯನ್ನು ಹೊತ್ತುಕೊಂಡು ಹೋಗುತ್ತಿದ್ದಾನೆ ಎಂದು ನಂಬಿಸಿದ್ದರಂತೆ. ವಿಜಯವಾಡದ ಈ ಅಧಿವೇಶನವು ದೇಶದ ಒಗ್ಗಟ್ಟು, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಈ ಶತ್ರುಗಳಿಗೆ ಭಾರೀ ನಿರಾಶೆಯನ್ನುಂಟುಮಾಡುವುದು. ಜನಸಂಘವು ತನ್ನ ಸ್ಥಾನವನ್ನು ಎಂದಿನಂತೆಯೇ ಭದ್ರಗೊಳಿಸಿಕೊಂಡು ಶೀಘ್ರದಲ್ಲಿಯೇ ಅವರ ಕನಸುಗಳ ಸಾಕ್ಷಾತ್ಕಾರಕ್ಕೆ ಸೂಕ್ತ ಸಾಧನವಾಗಿ ಹೊರಹೊಮ್ಮುತ್ತದೆ ಎಂದು ಜನರಿಗೆ ಮತ್ತೆ ಭರವಸೆ ನೀಡುತ್ತದೆ.

(೧೯೬೫ರ ಜನವರಿ ೧೧)

# ಸ್ವತಂತ್ರ ಪಕ್ಷ – ಭಾರತೀಯ ಜನಸಂಘ ವಿಲೀನ

ಪಂಜಾಬ್ ಪ್ರದೇಶ ಜನಸಂಘದ ಹನ್ನೆರಡನೆಯ ಸಮ್ಮೇಳನವು ಡಿಸೆಂಬರ್ ೨೬ ಮತ್ತು ೨೭ರಂದು ಚಂಡೀಘಡನಲ್ಲಿ ನಡೆಯಿತು. ಸಮ್ಮೇಳನಕ್ಕೆ ಹಾಜರಾಗಿದ್ದ ಪ್ರತಿನಿಧಿಗಳ ಸಂಖ್ಯೆ, ಅವರ ಆಲೋಚನೆಗಳ ಸ್ವರೂಪ ಮತ್ತು ಸಮ್ಮೇಳನದಲ್ಲಿ ಅವರು ಅನೇಕ ಕಾರ್ಯಕ್ರಮಗಳನ್ನು ನಡೆಸಿದ ರೀತಿ ಇವೆಲ್ಲವು ಇದನ್ನು ಒಂದು ಗಮನಾರ್ಹವಾದ ಅಧಿವೇಶನವನ್ನಾಗಿ ಮಾಡಿತು.

ಕೆಲವು ಪ್ರತಿಪಕ್ಷ ನಾಯಕರ ಉಪಸ್ಥಿತಿಯು ಗಮನ ಸೆಳೆಯುತ್ತಿತ್ತು. ಪಂಜಾಬಿನಲ್ಲಿನ ಕಮ್ಯುನಿಸ್ಟೇತರ ವಿರೋಧಪಕ್ಷಗಳ ಸಂಯುಕ್ತರಂಗವು ಒಂದು ರೀತಿಯ ಸಹಭಾವನೆ ಮತ್ತು ಸಹನೆಯನ್ನು ನಾಯಕತ್ವದವರಲ್ಲಿ ಮೈಗೂಡಿಸಿಕೊಂಡಿದೆ. ಆದ್ದರಿಂದ ಇತರ ರಾಜಕೀಯ ಪಕ್ಷಗಳು ಸಂಘಟಿಸಿರುವ ಸಭೆಗಳಿಗೆ ಹೋಗುವುದನ್ನು ಅವರು ಅನಪೇಕ್ಷಣೀಯ ಎಂದು ಪರಿಗಣಿಸುವುದಿಲ್ಲ. ಈ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರು, ಸ್ವತಂತ್ರ ಪಕ್ಷದ ಮುಖಂಡರೂ, ಪ್ರಸಿದ್ಧ ಅಡ್ವೋಕೇಟರೂ ಆದ ಶ್ರೀ ಚಿರಂಜೀವಲಾಲ್ ಎಂದು ತಿಳಿದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಮತ್ತು ಅಧಿವೇಶನದಲ್ಲಿ ತಮ್ಮ ಆರಂಭ ಭಾಷಣದಲ್ಲಿ ಅವರು ಕೇವಲ ವಿಧ್ಯುಕ್ತ ಸ್ವಾಗತವನ್ನು ಮಾತ್ರ ಕೋರಿ ವಿರಮಿಸಲಿಲ್ಲ. ಆದರೆ, ಸಭಿಕರನ್ನು ಕುರಿತು ಒಂದು ಗಂಟೆಗಿಂತಲೂ ಹೆಚ್ಚಾಗಿ ಮಾತನಾಡಿದರು ಮತ್ತು ಭಾರತ ಹಾಗೂ ಇಡಿಯ ಜಗತ್ತಿನ ರಾಜಕೀಯ ಘಟನೆಗಳನ್ನು ಪೂರ್ಣಪ್ರಮಾಣದಲ್ಲಿ ಸರ್ವೇಕ್ಷಣೆ ಮಾಡಿದರು. ಡಾ. ಬಲದೇವ ಪ್ರಕಾಶರ ಅಧ್ಯಕ್ಷ ಭಾಷಣವು, ಶ್ರೀ ಚಿರಂಜೀವಲಾಲ್‌ರ ಭಾಷಣಕ್ಕೆ ಹೋಲಿಸಿದಾಗ ಅದು ಕೇವಲ ಸ್ವಾಗತ ಭಾಷಣದ ಉಪಸಂಹಾರದಂತೆ ತೋರಿತು. ಬಹುಶಃ ಈ ಸಂಕ್ಷಿಪ್ತತೆಯು ಮೊದಲೇ ಚಡಪಡಿಸುತ್ತಿದ್ದು, ಒಂದಿಷ್ಟು ಪರಿಹಾರಕ್ಕಾಗಿ ಕಾಯುತ್ತಿದ್ದ ಸಭಿಕರಿಗೆ ರಿಯಾಯಿತಿಯಾಗಿದ್ದಿರಬಹುದು. ವೈದ್ಯರಿಗೇ ನಾಡಿಮಿಡಿತ ತಿಳಿಯದಿದ್ದರೆ ಬೇರೆ ಯಾರಿಗೆ ತಾನೇ ತಿಳಿಯಲು ಸಾಧ್ಯ?

ಸ್ವತಂತ್ರ ಪಕ್ಷದ ಪ್ರಧಾನಕಾರ್ಯದರ್ಶಿಗಳಾದ ಸರ್ದಾರ್ ಬಸಂತ ಸಿಂಗರು ಅಧಿವೇಶನದಲ್ಲಿ ಯೋಜನೆಯ ಬಗೆಗೆ ಭಾಷಣ ಮಾಡಿದರು ಮತ್ತು ಎರಡೂ ಪಕ್ಷಗಳು ಒಂದಾಗುವ ಅವಶ್ಯಕತೆಯ ಬಗೆಗೆ ತಮ್ಮ ಭಾಷಣದಲ್ಲಿ ಚಿಂತನೆ ನಡೆಸಿದರು. ಹಾಗೂ ಎರಡೂ ಪಕ್ಷಗಳಲ್ಲಿ ಶೀಘ್ರವೇ ಐಕ್ಯತೆಯುಂಟಾಗುವುದೆಂದು ಆಶಿಸಿದರು.



ಅವರ ಅಭಿಪ್ರಾಯಗಳನ್ನು ಚಪ್ಪಾಳೆಯ ಮೂಲಕ ಸ್ವಾಗತಿಸಲಾಯಿತು. ಎರಡೂ ಪಕ್ಷಗಳು ಒಂದಾಗಬೇಕೆಂದು ಸಾಮಾನ್ಯ ಅಭಿಲಾಷೆ. ಆದರೆ ಬಯಸುವುದು ಸಂಕಲ್ಪ ಮಾಡುವುದಲ್ಲ.

ಇತ್ತೀಚೆಗೆ ನನ್ನ ಪ್ರವಾಸದ ನಿಮಿತ್ತ U.S.A.ಗೆ ಹೊರಟಿದ್ದಾಗ ಹೊಸದಿಲ್ಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಸಣ್ಣದೊಂದು ಸಂತೋಷಕೂಟವನ್ನು ಏರ್ಪಡಿಸಲಾಗಿತ್ತು ಮತ್ತು ಆ ಸಂದರ್ಭದಲ್ಲಿ ಸಭೆಯ ಛೇರ್‌ಮನ್‌ರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸ್ವತಂತ್ರ ಪಕ್ಷದ ಅಧ್ಯಕ್ಷ ಶ್ರೀ ಎನ್.ಜಿ. ರಂಗಾ ಅವರು ಛೇರ್‌ಮನ್‌ರ ಹೇಳಿಕೆಗೆ ಸಂಬಂಧಿಸಿದಂತೆ, ಪ್ರತಿಕ್ರಿಯಿಸುತ್ತಾ, ಐಕ್ಯತೆಯ ಬಗೆಗೆ ಮಾತನಾಡುವುದು ಈಗ ಒಂದು ವೈಖರಿಯಾಗಿದೆಯೆಂದು ಹೇಳಿದರು. ಮುಂದುವರೆದು ಅವರು ಹೇಳಿದರು, ಎರಡು ಪಕ್ಷಗಳಲ್ಲಿ ಅವುಗಳ ದೃಷ್ಟಿಕೋನಗಳು ಮತ್ತು ಕಾರ್ಯನೀತಿಗಳನ್ನು ಬೇರೆ ಮಾಡಿದ್ದಂತಹ ಕಾರಣಗಳು ಅಸ್ತಿತ್ವದಲ್ಲಿರುವವರೆಗೂ ಐಕ್ಯತೆಯು ಸಾಧ್ಯವಾಗುವುದಿಲ್ಲ. ಶ್ರೀ ರಂಗಾ ಅವರು ಹೇಳಿದ್ದರಲ್ಲಿ ಸಾಕಷ್ಟು ಸತ್ವ ಇದೆ. ಜನಸಂಘದ ಅಸ್ತಿತ್ವವಿದ್ದರೂ ಕೂಡ ಸ್ವತಂತ್ರ ಪಕ್ಷವು ರೂಪುಗೊಂಡಿತು ಎಂಬುದು ನಮಗೆ ತಿಳಿದಿದೆ. ಬೇರೆಯೇ ಉದ್ದೇಶಕ್ಕಾಗಿ ಕರೆಯಲ್ಪಟ್ಟಿದ್ದ ಮೊದಲ ಸಭೆಯಲ್ಲಿ ಸ್ವತಂತ್ರ ಪಕ್ಷದ ೨೧ ಅಂಶದ ಕಾರ್ಯಕ್ರಮದ ಕರಡುಪ್ರತಿಯನ್ನು ಪ್ರಸರಿಸಲಾಯಿತು. ಮತ್ತು ಅಂತಹದೊಂದು ಪಕ್ಷವನ್ನು ಸಂಘಟಿಸುವ ಪ್ರಸ್ತಾಪವನ್ನು ಒಪ್ಪಲಾಯಿತು. ಮದ್ರಾಸು ಮತ್ತು ಮೈಸೂರುಗಳಲ್ಲಿ ಅನುಕ್ರಮವಾಗಿ ಪ್ರಾದೇಶಿಕ ಘಟಕಗಳ ಅಧ್ಯಕ್ಷರುಗಳಾಗಿದ್ದ ಶ್ರೀ ವಿ. ರಾಜಗೋಪಾಲಾಚಾರಿ ಮತ್ತು ಶ್ರೀ ಎಂ. ಎ. ವೆಂಕಟರಾವ್ ಅವರುಗಳು ಈಗಾಗಲೇ ಜನರ ಅವಶ್ಯಕತೆಗಳಿಗೆ ಸಾಕಷ್ಟು ಗಣನೀಯವಾಗಿ ಸ್ಪಂದಿಸಿರುವಂತಹ ಪಕ್ಷವು ಅಸ್ತಿತ್ವದಲ್ಲಿದ್ದುದ್ದರಿಂದಾಗಿ ಮತ್ತೊಂದು ಪಕ್ಷವನ್ನು ಸಂಘಟಿಸುವ ಅವಶ್ಯಕತೆಯಿಲ್ಲವೆಂದೂ ಮತ್ತು ಅಲ್ಲಿದ್ದವರೆಲ್ಲರೂ ಆ ಪಕ್ಷವನ್ನು ಸೇರಿ ಅದನ್ನು ಬಲಗೊಳಿಸಲು ಅವರಿಗೆ ಸ್ವಾಗತವಿದೆಯೆಂದೂ ಅಲ್ಲಿ ನೆರೆದಿದ್ದ ಜನರಿಗೆ ಅವರು ಮನವಿ ಮಾಡಿದರು. ಆದಾಗ್ಯೂ ಅಲ್ಲಿ ಉಪಸ್ಥಿತರಿದ್ದ ಇತರ ಮುಖಂಡರು ತಮ್ಮದೇ ಆದ ಒಂದು ಮನೆಯನ್ನು ಕಟ್ಟಿಕೊಳ್ಳಲೇಬೇಕೆಂದು ಆಲೋಚಿಸಿದರು ಮತ್ತು ಅವರು ಹಾಗೆಯೇ ಮಾಡಿದರು.

ಆಗಿನಿಂದಲೂ ಪಕ್ಷವು (B.J.S) ತನ್ನದೇ ಆದ ವಿಶಿಷ್ಟ ಗುಣಗಳ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದೆ. ಸ್ವತಂತ್ರ ಪಕ್ಷದ ಮುಖಂಡರು ಮೊದಲು ತಮ್ಮ ತಮ್ಮಲ್ಲಿ ಚರ್ಚಿಸಿ, ತಮ್ಮನ್ನು ಪ್ರತ್ಯೇಕವಾಗಿ ಸಂಘಟಿಸಿಕೊಳ್ಳಲು ಪ್ರಚೋದಿಸಿದ ಕಾರಣಗಳು ಸಿಂಧುವಾಗಿದ್ದು, ಈಗಲೂ ಅಸ್ತಿತ್ವದಲ್ಲಿದೆಯೆಂದು ನಿರ್ಧರಿಸುವುದಾದರೆ, ಈಗಲೂ ಕೂಡ ಖಂಡಿತವಾಗಿ ಎರಡು ಪಕ್ಷಗಳ ನಡುವೆಯೂ ಐಕ್ಯತೆಯು ಸಾಧ್ಯವಾಗಬಹುದು. ಇದಕ್ಕೆ ಉತ್ತರವು ಹೌದು ಎಂದಾದಲ್ಲಿ, ಐಕ್ಯತೆಯ ಎಲ್ಲ ಪ್ರಸ್ತಾಪಗಳಿಗೂ ಉತ್ತರವು

ನಿಷೇಧಾತ್ಮಕವಾಗಿರುತ್ತದೆ. ಆದರೆ ಪ್ರತ್ಯೇಕ ಅಸ್ತಿತ್ವಕ್ಕೆ ಯಾವುದೇ ಸೂಕ್ತವಾದ (ಸಿಂಧುವಾದ) ಆಧಾರವಿಲ್ಲದಿದ್ದಲ್ಲಿ ನಾವು ಮನಸ್ಸು ಮಾಡಿದರೆ, ಐಕ್ಯತೆಗೆ ಮಾರ್ಗವಿದೆ. ಸರ್ದಾರ್ ಬಸಂತ್‌ಸಿಂಗ್ ಮತ್ತು ಅವರ ರೀತಿಯಲ್ಲಿಯೇ ಆಲೋಚಿಸುವ ಎಲ್ಲರಿಗೂ– ಪಕ್ಷದಲ್ಲಿ ಅಂತಹವರು ಅನೇಕ ಜನರಿದ್ದಾರೆ– ನನ್ನ ಕಳಕಳಿಯ ಪ್ರಾರ್ಥನೆಯೆಂದರೆ ಈ ವಿಷಯದ ಬಗೆಗೆ ಭಾಷಣ ಮಾಡಲು ಜನಸಂಘದ ಅಧಿವೇಶನವು ಸೂಕ್ತವಾದ ಸಾರ್ವಜನಿಕ ವೇದಿಕೆಯಲ್ಲ, ಆದರೆ ಅವರವರ ನಾಯಕತ್ವ ಮಾತ್ರ ಎಂದು.

(೧೯೬೫ರ ಜನವರಿ ೪)



## ಕಾಶ್ಮೀರ, ಜನಸಂಘ ಮತ್ತು ಸ್ವಾತಂತ್ರ್ಯ

ಇಡಿಯ ಜಮ್ಮು ಮತ್ತು ಕಾಶ್ಮೀರ ರಾಜ್ಯಗಳು ನ್ಯಾಯಬದ್ಧವಾಗಿ ಭಾರತಕ್ಕೇ ಸೇರಿದ್ದು ಎಂದು ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಲಂಡನ್ನಿನಲ್ಲಿ ದೃಢವಾಗಿ ಘೋಷಿಸಿದಾಗ, ಕಾಶ್ಮೀರ ವಿಷಯದ ಬಗೆಗೆ ಪಾಕಿಸ್ತಾನದೊಡನೆ ಚರ್ಚೆ ಮಾಡಬೇಕೆಂಬ ಸರ್ಕಾರದ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಎಲ್ಲಿಯವರೆಗೆ ಪಾಕಿಸ್ತಾನವು ಆ ರಾಜ್ಯಗಳ ಬಗೆಗೆ ನಮ್ಮ ನ್ಯಾಯಬದ್ಧ ಹಕ್ಕನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲವೋ ಅಲ್ಲಿಯ ತನಕ ಈ ಪ್ರಶ್ನೆಯ ಮೇಲೆ ಮಾತನಾಡಲು ಭಾರತ ಪಾಕಿಸ್ತಾನಗಳ ನಡುವೆ ಯಾವುದೇ ಸಾಮಾನ್ಯ ನೆಲೆಯೇ ಇಲ್ಲ. ಅನೇಕ ಸಂದರ್ಭಗಳಲ್ಲಿ ಭಾರತ ಸರ್ಕಾರವು ಅಂತಾರಾಷ್ಟ್ರೀಯ ಒತ್ತಡಕ್ಕೆ ಮಣಿದು, ಕಾಶ್ಮೀರದ ವಿಷಯದ ಬಗೆಗೆ ಪಾಕಿಸ್ತಾನದೊಡನೆ ನಮ್ಮ ಮೂಲಭೂತ ನಿಲುವಿಗೆ ಸಂಬಂಧಿಸಿದಂತೆ, ಇದು ಕೇವಲ ಗೊಂದಲಕ್ಕೆಡೆ ಮಾಡಿದೆ ಮತ್ತು ಭಾರತವನ್ನು ಮತ್ತಷ್ಟು ಛಿದ್ರಗೊಳಿಸಲು ಪಿತೂರಿಮಾಡುತ್ತಿರುವ ಶಕ್ತಿಗಳನ್ನು ಪ್ರೋತ್ಸಾಹಿಸಿದೆ. ಅಲ್ಲದೆ, ರಾಜ್ಯದ ಅಭಿವೃದ್ಧಿಯನ್ನು ಇದು ಕುಂಠಿತಗೊಳಿಸಿದೆ. ವಿಲೀನ ಪತ್ರದ ಅಂತಿಮ ತೀರ್ಮಾನವನ್ನು ಮತ್ತು ಅದನ್ನು ಮಾರ್ಪಡಿಸಲು ಸಾಧ್ಯವಿಲ್ಲ ಎನ್ನುವುದನ್ನು ಒಪ್ಪಲು ನಿರಾಕರಿಸುವ ಯಾರೊಡನೆಯೂ ತಾನು ಕಾಶ್ಮೀರದ ಬಗೆಗೆ ಮಾತನಾಡುವುದಿಲ್ಲವೆಂದು ಭಾರತ ಸರ್ಕಾರವು ನಿರ್ಣಾಯಕವಾಗಿ ಘೋಷಿಸಬೇಕು. ಮತ್ತು ಸಂವಿಧಾನದ ೩೭೦ನೆಯ ನಿಯಮವನ್ನು ರದ್ದುಗೊಳಿಸುವ ಅವಶ್ಯಕತೆಯಿದೆ. ಆದರಿಂದ ರಾಜ್ಯವು ಭಾರತದ ಯೂನಿಯನ್‌ನಲ್ಲಿ ಸಮಾನಸ್ಥಾನ ಗಳಿಸಬಹುದು ಮತ್ತು ಕಾಶ್ಮೀರದಲ್ಲಿ ವಾಸಿಸುತ್ತಿರುವ ಭಾರತೀಯ ನಾಗರಿಕರು ನಮ್ಮ ಸಂವಿಧಾನ ನೀಡುವ ಎಲ್ಲ ಬಾಧ್ಯತೆಗ,ಳ ಖಾತರಿಗಳ ಭರವಸೆ ಪಡೆಯಬಹುದು. ಇದು ರಾಜ್ಯದ ಭವಿಷ್ಯದ ಬಗೆಗೆ ಎಲ್ಲ ಊಹಾಪೋಹಗಳನ್ನೂ ಜನಾಭಿಪ್ರಾಯ ಗಳಿಸುವುದನ್ನು, ಅಂತ್ಯ ಮಾಡುತ್ತದೆ.

ಈ ಸಮಸ್ಯೆಗೆ, ಭಾರತದಿಂದ ರಾಜ್ಯವು (ಕಾಶ್ಮೀರವು) ಬೇರ್ಪಡೆಯಾಗಬೇಕೆಂದು ಹೇಳುವವರನ್ನು ಒಳಗೊಂಡಂತೆ ಅನೇಕ ರೀತಿಯ ಪರಿಹಾರಗಳನ್ನು ಪ್ರತಿಪಾದಿಸುತ್ತಿರುವ ಅನೇಕ ಜನರು ದೇಶದೊಳಗಿದ್ದಾರೆ. ಭಾರತದ ಐಕ್ಯತೆ ಮತ್ತು ಸಮಗ್ರತೆಯ ಹಿತಾಸಕ್ತಿಯಿಂದ ಕಾಶ್ಮೀರದ ಪ್ರಶ್ನೆಯನ್ನು ಯು.ಎನ್.ನ ಅಧೀನದಲ್ಲಿಡಬೇಕು ಎಂಬ ರೀತಿಯ ಪ್ರಚಾರವು ಅಪಾಯಕಾರಿ ಎಂಬ ಅರಿವು ಕಡ್ಡಾಯವಾಗಬೇಕಾಗಿದೆ. ನಮ್ಮ ಈ ಸುಂದರವಾದ ಕಣಿವೆಯನ್ನು ನಮ್ಮ ಸೇನಾ ವ್ಯವಸ್ಥೆಯ ವ್ಯೂಹರಚನೆಯ ಈ ಪ್ರದೇಶವನ್ನು ಅಂತಾರಾಷ್ಟ್ರೀಯ ಸಂಘರ್ಷಗಳ

ಜಗಳಗಳ ತಾಣವಾಗಲು, ರಣರಂಗವಾಗಲು ನಾವು ಬಯಸುವುದಿಲ್ಲ. ಯಾವುದೇ ಪರಿಸ್ಥಿತಿಯಲ್ಲಿಯೂ ಕಾಶ್ಮೀರವು ಮತ್ತೊಂದು ಕಾಂಗೋ ಅಥವಾ ಲಾವೋಸ್ ಆಗಲು ಬಿಡುವುದಿಲ್ಲ.

ಪಾಕಿಸ್ತಾನ ಮತ್ತು ಕಾಶ್ಮೀರದ ಬಗೆಗೆ ಜನಸಂಘವು ತನ್ನ ಕಾರ್ಯನೀತಿಯನ್ನು ಬದಲಿಸಿಕೊಳ್ಳದಿದ್ದಲ್ಲಿ, ತಮ್ಮ ಪಕ್ಷವು ಜನ ಸಂಘದೊಡನೆ ಯಾವ ಸಂಪರ್ಕವನ್ನೂ ಹೊಂದುವುದಿಲ್ಲವೆಂದು ಸ್ವತಂತ್ರ ಪಕ್ಷದ ಮಹಾಕಾರ್ಯದರ್ಶಿಗಳಾದ ಶ್ರೀ. ಎಂ. ಆರ್. ಮಸಾನಿಯವರು ಇತ್ತೀಚೆಗೆ ಹೈದರಾಬಾದಿನಲ್ಲಿ ಹೇಳಿದ್ದಾರೆಂದು ವರದಿಯಾಗಿದೆ. ಇಷ್ಟು ಸ್ಪಷ್ಟವಾಗಿ ತಮ್ಮ ಮನಸ್ಸನ್ನು ಪ್ರಕಟಿಸಿರುವುದಕ್ಕಾಗಿ ನಾವು ಶ್ರೀ ಮಸಾನಿಯವರಿಗೆ ಬಹಳ ಆಭಾರಿಗಳಾಗಿದ್ದೇವೆ. ಕಾಶ್ಮೀರ ಮತ್ತು ಪಾಕಿಸ್ತಾನದ ಬಗೆಗೆ ಸ್ವತಂತ್ರ ಪಕ್ಷದ ನಾಯಕರು ತಮ್ಮ ಪ್ರಸಕ್ತ ನಿಲುವನ್ನು ತೆಗೆದುಕೊಂಡಾಗಿನಿಂದಲೂ, ನಮಗೆ ಬಹಳ ಮುಜುಗರವನ್ನುಂಟು ಮಾಡಿದೆ. ಚುನಾವಣಾ ಹೊಂದಾಣಿಕೆಯ ಸಂಬಂಧವಾಗಿ ನಮಗಿದ್ದ ಬದ್ಧತೆಯಿಂದ ನಮ್ಮನ್ನು ಈ ಹೇಳಿಕೆಯು ಮುಕ್ತಗೊಳಿಸಿದೆ. ವಾಸ್ತವವಾಗಿ, ಶ್ರೀ ರಾಜಗೋಪಾಲಾಚಾರಿ ಮತ್ತು ಶ್ರೀ ಮಸಾನಿಯವರು ವ್ಯಕ್ತಪಡಿಸಿದ್ದ ಅಭಿಪ್ರಾಯಗಳು ಅವರ ವೈಯಕ್ತಿಕ ಅಭಿಪ್ರಾಯಗಳೆಂದು ಪಕ್ಷವು ಅದನ್ನು ಅನುಮೋದಿಸಿರಲಿಲ್ಲವೆಂಬುದು ನಮ್ಮ ಮೊದಲ ತಿಳಿವಳಿಕೆಯಾಗಿತ್ತು. ಆದರೆ ಅದಕ್ಕೆ ವಿರುದ್ಧವಾಗಿ ಪಕ್ಷದಲ್ಲಿನ ಬಹುಸಂಖ್ಯಾತ ಸದಸ್ಯರು, ಈ ವಿಷಯದ ಬಗೆಗೆ ಜನಸಂಘದಂತೆ, ಅದೇ ಅಭಿಪ್ರಾಯ ಹೊಂದಿದವರೆಂದು ನಂಬಲಾಯಿತು. ಈ ಬಹುಸಂಖ್ಯೆಯ ಸದಸ್ಯರು ಶ್ರೀ ರಾಜಾಜಿ ಮತ್ತು ಮಸಾನಿಯವರು ಪ್ರತಿಪಾದಿಸಿದ ನೀತಿಯನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಲ್ಪಟ್ಟವರೆಂದು ಈಗ ನಮಗೆ ತೋರುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ಆಕ್ರಮಣಕಾರರಿಗೆ, ಭಾರತೀಯ ಭೂಪ್ರದೇಶವನ್ನು ಅಪಮಾನಕರವಾಗಿ ಬಿಟ್ಟುಕೊಡುವ ನಿಲುವನ್ನು ಸಮರ್ಥಿಸುವ ಶಕ್ತಿಗಳೊಡನೆ ಜನಸಂಘವು ಜೊತೆಗೂಡಲಾರದು ಎನ್ನುವುದು ಸಹಜವೇ ಆಗಿದೆ.

ಚೀನವೋ? ಪಾಕಿಸ್ತಾನವೋ? ಯಾವುದು ಹೆಚ್ಚಿನ ಅಪಾಯಕಾರಿ ಎಂದು ಜನರು ಕೇಳುತ್ತಾರೆ. ಕ್ಷಯರೋಗವೋ, ಪ್ಲೇಗ್ ಮಾರಿಯೋ– ಯಾವುದು ಹೆಚ್ಚು ಕೆಡುಕಾದದ್ದು ಎಂದು ಕೇಳುವಂತಿದೆ ಇದು. ಚೀನಾವು ಭಾರತಕ್ಕಿಂತಲೂ ಬಲಶಾಲಿ; ಭಾರತವು ಪಾಕಿಸ್ತಾನಕ್ಕಿಂತಲೂ ಬಲಶಾಲಿ ಎಂದು ನಂಬಲಾಗಿದೆ. ಮತ್ತು ಚೀನಾ ಏನಾದ್ದರೂ ಭಾರತದ ಮೇಲೆ ಆಕ್ರಮಣ ಮಾಡಿದರೆ, ಪಶ್ಚಿಮದೇಶಗಳು ನಮ್ಮ ನೆರವಿಗೆ ಧಾವಿಸುತ್ತವೆ ಎಂಬ ವಾಸ್ತವ ಸಂಗತಿಯೂ ಇದೆ. ಆದರೆ ಪಾಕಿಸ್ತಾನವೇನಾದರೂ ನಮ್ಮ ಮೇಲೆ ಆಕ್ರಮಣ ನಡೆಸಿದರೆ ನಮ್ಮ ನೆರವಿಗೆ ಬರಲು ಯಾರೂ ಇರುವುದಿಲ್ಲ.

(೧೯೬೪, ಜುಲೈ. ೨೦)



## ಬೆಲೆಯ ನಿಯಂತ್ರಣ

ಕಳೆದ ದಶಕದ ಅವಧಿಯಲ್ಲಿ ಬೆಲೆಗಳ ರೇಖೆಯು ಒಂದೇ ಸಮನೆ ಏರುತ್ತಲೇ ಇದೆ. ಇತ್ತೀಚೆಗಂತೂ ಪರಿಣಾಮಕಾರೀ ಕ್ರಮಗಳನ್ನು ಅಳವಡಿಸಿಕೊಳ್ಳದಿದ್ದಲ್ಲಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಅಪಾಯಕಾರೀ ಪರಿಣಾಮಗಳೆಡೆಗೆ ಕೊಂಡೊಯ್ಯುವಂಥ ನಿರ್ಣಾಯಕ ಮಟ್ಟವನ್ನು ಮುಟ್ಟಿಬಿಟ್ಟಿದೆ. ಸರ್ಕಾರವು ಈಗಲೂ ಸಮಯವನ್ನು ವ್ಯರ್ಥವಾಗಿ ಕಳೆಯುತ್ತಿರುವುದು ದುರದೃಷ್ಟಕರ. ಸರ್ಕಾರವು ಗೊಂದಲಗೊಂಡಿದೆ ಮತ್ತು ಡೋಲಾಯಮಾನ ಸ್ಥಿತಿಯಲ್ಲಿದೆ. ಸರ್ಕಾರದವರ ಹೇಳಿಕೆಗಳು, ಪರಿಸ್ಥಿತಿಯ ಸಮರ್ಪಕ ಮೌಲ್ಯಮಾಪನವನ್ನಾಗಲೀ, ಅಥವಾ ಈಗಿನ ಈ ವ್ಯಾಧಿಯ ಕಾರಣಗಳ ಸರಿಯಾದ ಸೂಕ್ತ ವಿಶ್ಲೇಷಣೆಯನ್ನಾಗಲೀ, ಅಥವಾ ಎಲ್ಲವನ್ನು ಸುಸ್ಥಿತಿಗೊಳಿಸುವ ದೃಢಸಂಕಲ್ಪವನ್ನಾಗಲೀ, ತೋರಿಸುವುದಿಲ್ಲ.

ಪರಿಸ್ಥಿತಿಯನ್ನು ಉತ್ತಮಗೊಳಿಸಲು, ದೀರ್ಘಾವಧಿ ಹಾಗೂ ಸಂಕ್ಷಿಪ್ತ ಅವಧಿಯ ಕ್ರಮಗಳನ್ನು ಈ ಸನ್ನಿವೇಶವು ಕೋರುತ್ತದೆ. ಹೆಚ್ಚುತ್ತಿರುವ ಉತ್ಪಾದನಾರಹಿತ ವೆಚ್ಚವನ್ನು ಭರಿಸುವ ಸಲುವಾಗಿ, ಮಾಡಿಕೊಂಡ ಸರ್ಕಾರದ ಸಾಲದಿಂದಾಗಿ ಉಂಟಾದ ರೂಪಾಯಿಯ ಮೌಲ್ಯದಲ್ಲಿ ಕುಸಿತ ಮತ್ತು ಉತ್ಪಾದನಾ ಕೊರತೆಗಳು ಬೆಲೆಗಳ ಏರಿಕೆಗೆ ಮುಖ್ಯ ಕಾರಣಗಳಾಗಿವೆ. ನಾಲ್ಕನೆಯ ಯೋಜನೆಯನ್ನು ಬೇರೆಯ ವಿಧದಲ್ಲಿ ಕಲ್ಪಿಸಿಕೊಳ್ಳಬೇಕಾಗಿರುವುದಲ್ಲದೇ ಮೂರನೆಯ ಯೋಜನೆಯನ್ನು ಸಹ ಈ ಕುಂದುಕೊರತೆಗಳನ್ನು ಪರಿಹರಿಸುವಂತೆ ಅದಕ್ಕೆ ಹೊಸ ರೂಪ ಕೊಡಬೇಕು. ಸರ್ಕಾರದ ವೆಚ್ಚಗಳನ್ನು ಅತ್ಯಂತ ತೀವ್ರವಾಗಿ ಕಡಿತಗೊಳಿಸಬೇಕು ಮತ್ತು ಅನವಶ್ಯಕವಾದ ಎಲ್ಲ ಯೋಜನೆಗಳನ್ನು ಮುಂದೂಡಬೇಕು. ಯೋಜನೆಯ ಆದ್ಯತೆಗಳು ಬದಲಾಗಬೇಕು ಮತ್ತು ಬೃಹತ್ಪ್ರಮಾಣದ ಆಂತರಿಕ ಉತ್ಪಾದನೆಯ ಮೂಲಕ ಹಾಗೂ ಆಮದುಗಳ ಮೂಲಕ ಗ್ರಾಹಕ ವಸ್ತುಗಳ ಸರಬರಾಜನ್ನು ಹೆಚ್ಚಿಸುವ ಪ್ರಯತ್ನಗಳನ್ನು ತತ್‌ಕ್ಷಣವೇ ಕೈಗೊಳ್ಳಬೇಕು.

ಆಹಾರಧಾನ್ಯಗಳ ವ್ಯಾಪಾರವನ್ನು ಏಕಸ್ವಾಮ್ಯಕ್ಕೊಳಪಡಿಸುವ ಮತ್ತು ರಾಷ್ಟ್ರೀಕರಣಗೊಳಿಸುವ ವಿಚಾರವನ್ನು ಸರ್ಕಾರವು ಬಿಟ್ಟುಬಿಡಬೇಕು. ಅದಕ್ಕೆ ಬದಲಾಗಿ, ಅದು ದೊಡ್ಡಪ್ರಮಾಣದ ವ್ಯಾಪಾರಿಯಂತೆ, ಮಾರುಕಟ್ಟೆಯನ್ನು ಭಾಗಶಃ ಪ್ರವೇಶಿಸಬೇಕು, ಮತ್ತು ಆಹಾರಧಾನ್ಯಗಳ ಸಂಗ್ರಹಣೆ ಹಾಗೂ ವಿತರಣೆಗಾಗಿ

ದೇಶಾದ್ಯಂತ ಸರ್ಕಾರವು ಸಂಸ್ಥೆಗಳನ್ನು ಅಥವಾ ಕಾರ್ಯಾಲಯಗಳನ್ನು ಸ್ಥಾಪಿಸಬೇಕು. ಒಟ್ಟು ವ್ಯಾಪಾರದ ಹತ್ತು ಪರ್ಸೆಂಟ್ ವ್ಯಾಪಾರವನ್ನಾದರೂ ಸರ್ಕಾರವು ನಿರ್ವಹಿಸಲು ಸಾಧ್ಯವಾದರೆ ಅದು ವ್ಯಾಪಾರದ ಪದ್ಧತಿಗಳನ್ನು, ಬೆಲೆಗಳನ್ನು ನಿಯಂತ್ರಿಸಲು ಆಡಳಿತಕ್ಕೆ ಕಾರ್ಯತಂತ್ರದ ಪ್ರಯೋಜನವನ್ನು ನೀಡುತ್ತದೆ. ಸರ್ಕಾರವು ನೇರವಾಗಿ ರೈತರೊಂದಿಗೆ ವ್ಯಾಪಾರದ ಒಪ್ಪಂದಗಳನ್ನು ಮಾಡಿಕೊಳ್ಳಲು ಪ್ರವೇಶಿಸಲು ಮುಂದಾಗಬೇಕು. ಆಗ ಅವರಿಗೆ ನೀಡುವ ಎಲ್ಲ ನೆರವೂ ಕೂಡ ಉತ್ಪಾದನೆಯೊಂದಿಗೆ ಸಂಬಂಧ ಹೊಂದಿರುತ್ತದೆ.

ಸರ್ಕಾರಿ ಉದ್ಯೋಗಿಗಳಿಗೂ, ಮತ್ತು ಸಂಘಟಿತ ಖಾಸಗಿ ವಲಯದವರಿಗೂ ಕೂಡ ಉದ್ಯೋಗದಾತರಿಂದ ಸಹಾಯಧನ ನೀಡಿದಂತಹ ನ್ಯಾಯಬೆಲೆಯ ಅಂಗಡಿಗಳು ಆರಂಭಿಸಲ್ಪಡಬೇಕು. ಹಣದುಬ್ಬರದ ಅಘಾತವನ್ನುಂಟು ಮಾಡುವ ಮತ್ತು ಮೂಲವೇತನಕ್ಕೆ ಹಣ ಸೇರ್ಪಡೆಯಾಗುವುದನ್ನು ತಟಸ್ಥಗೊಳಿಸುವ, ತುಟ್ಟಿಭತ್ಯವನ್ನು ಹೆಚ್ಚಿಸುವುದಕ್ಕಿಂತಲೂ ಈ ಮಾರ್ಗವು ಹೆಚ್ಚು ಉತ್ತಮವಾಗಿದೆ.

ಈಗಿನ ಪರಿಸ್ಥಿತಿಯನ್ನು ಯುದ್ಧ ಸಮಯದಂತೆ ನಿರ್ವಹಿಸಬೇಕಾಗಿರುವಾಗ, ಯಾವುದೇ ಸಮಾಜವಿರೋಧಿ ಗುಂಪುಗಳಾಗಲೀ, ಅಥವಾ ತಮ್ಮ ದುರ್ಮಾರ್ಗಗಳ ಉದ್ದೇಶ ಸಾಧಿಸಿಕೊಳ್ಳಲು, ಅರಾಜಕತೆ ಗೊಂದಲಗಳನ್ನು ಸೃಷ್ಟಿಸಲು ನಿರ್ಧರಿಸಿರುವ ಪಕ್ಷಗಳ ಬಗೆಗೆ ಸರ್ಕಾರವು ವಿಶೇಷ ಎಚ್ಚರ ವಹಿಸಬೇಕು. ಧಾನ್ಯದ ಅಂಗಡಿಗಳನ್ನು ಲೂಟಿ ಮಾಡುವುದನ್ನು ಯಾವುದೇ ಪರಿಸ್ಥಿತಿಯಲ್ಲಿಯೂ ಸಹಿಸಕೂಡದು. ಯಾವುದೇ ಪಕ್ಷಾಭಿಮಾನವಿಲ್ಲದೇ ಸಮಸ್ಯೆಯನ್ನು ನಿರ್ವಹಿಸುವುದಕ್ಕಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಉನ್ನತಸ್ತರಗಳಲ್ಲಿ ಸರ್ವ ಪಕ್ಷಗಳ ಸಮಿತಿಗಳನ್ನು ರಚಿಸಬೇಕು.

(೧೯೬೪ರ ಜುಲೈ ೨೦)



## ಕಾಮರಾಜ್ ಯೋಜನೆಯನ್ನು ಕುರಿತು

ಆಧಿಕಾರ ತ್ಯಜಿಸಬೇಕೆನ್ನುವ ಕಾಮರಾಜ್ ಯೋಜನೆಯಿಂದ ಹರಿತಗೊಂಡ ಪಂಡಿತ್ ನೆಹರೂ ಅವರ ಕೊಡಲಿಯು– ಮೊದಲ ಪ್ರಸಂಗದಲ್ಲಿ– ಸಂದರ್ಭದಲ್ಲಿ, ಅರ್ಧಡಜನ್ ಯೂನಿಯನ್ ಕ್ಯಾಬಿನೆಟ್‌ದರ್ಜೆಯ ಸಚಿವರ ಮೇಲೆ ಮತ್ತು ಅಷ್ಟೇ ಸಂಖ್ಯೆಯಲ್ಲಿ ರಾಜ್ಯಗಳ ಮುಖ್ಯಮಂತ್ರಿಗಳ ಮೇಲೂ ಬಿದ್ದಿದೆ. ಆ ಯೋಜನೆಗೆ ನಿಜವಾಗಿಯೂ ಅಷ್ಟು ಮಹತ್ತಾದ ಸದ್ಗುಣವಿದೆಯೆಂದಾದರೆ ಅದನ್ನು ಯತಿರಾಜ ಯೋಜನೆ ಎಂದು ಹೆಸರಿಸಬೇಕಾಗುತ್ತದೆ. ಕಾಂಗ್ರೆಸ್ಸನ್ನು ನಾಶ ಮಾಡುತ್ತಿರುವ ಒಳಹುಣ್ಣನ್ನು, ಭ್ರಷ್ಟಾಚಾರ ಮತ್ತು ಅಧಿಕಾರದಾಹವನ್ನು ಗುಣಪಡಿಸಲು ಈ ಹೊಣೆಗಾರಿಕೆಯ ಕಾರ್ಯಾಚರಣೆಯನ್ನು ನಡೆಸಲಾಗಿದೆ.

ಈ ಕ್ರಮವು– ನಡೆಯು– ಕ್ರಾಂತಿಕಾರಕವೆಂದು ಹೇಳಿಕೊಳ್ಳಲಾಗಿದೆ. ಖಂಡಿತವಾಗಿಯೂ ಸಂದೇಹವಿಲ್ಲ. ಇದು ಕೋಲಾಹಲವನ್ನುಂಟು ಮಾಡುವ ಸುದ್ದಿಯೇ ಸರಿ. ಆದರೆ ಕೋಲಾಹಲವನ್ನುಂಟು ಮಾಡುವಂತಹುದು ಕ್ರಾಂತಿಯಲ್ಲ, ಹಾಗೂ ಕ್ರಾಂತಿಯು, ಅಗತ್ಯವಾಗಿ ಪ್ರಗತಿಯಾಗಬೇಕಾಗಿಲ್ಲ. ಈ ನಂಬಿಕಸ್ತ ಹನ್ನೆರಡು ಜನರ ನಿರ್ಗಮನವು– ಅಥವಾ ಈ ಹನ್ನೆರಡು ಜನ ಪಾಪಾತ್ಮರ – ನೀವು ಅವರ ಬಗೆಗೆ ಯಾವ ಭಾವದಿಂದ ನೋಡುವಿರಿ ಎನ್ನುವುದನ್ನು ಇದು ಅವಲಂಬಿಸಿದೆ– ಕುಸಿಯುತ್ತಿರುವ ಕಾಂಗ್ರಸ್ಸಿಗೆ ಪ್ರಾಣವಾಯುವನ್ನು ತುಂಬಬಹುದು? ಈ ಹನ್ನೆರಡು ಜನರು ನಿಜವಾಗಿಯೂ ಅಪ್ಪಟ ಸದ್ಗುಣಿಗಳೂ, ಯೋಗ್ಯರೂ ಮತ್ತು ದಕ್ಷ ಆಡಳಿತಗಾರರಾಗಿದ್ದರೆ, ಅವರ ನಿರ್ಗಮನದಿಂದ ಸರ್ಕಾರವು ಮತ್ತಷ್ಟು ಕಳಪೆಯೂ ನತದೃಷ್ಟವೂ ಆಗುತ್ತದೆ. ಮತ್ತು ಇಂತಹ ಸಂದಿಗ್ಧ ಸಮಯದಲ್ಲಿ ದೇಶವು ಅಂತಹದೊಂದು 'ಸೌಭಾಗ್ಯ' ಪಡೆಯಲು ಸಾಧ್ಯವಿಲ್ಲ. ಆದರೆ, ಅವರನ್ನು ಹೊರೆಯೆಂದು ಪರಿಗಣಿಸಿದುದರಿಂದ ಬಿಡುಗಡೆ ಮಾಡಲ್ಪಟ್ಟರು ಎನ್ನುವುದಾದರೆ, ಅವನತಿ ಹೊಂದುತ್ತಿರುವ ಕಾಂಗ್ರೆಸ್ಸಿಗೆ ಅವರು ಯಾವ ಒಳ್ಳೆಯದನ್ನು ತಾನೇ ಮಾಡಲು ಸಾಧ್ಯ? ರೋಗಗ್ರಸ್ತ ರಕ್ತವನ್ನು ಪೂರೈಕೆ ಮಾಡಿದರೆ, ರಕ್ತ ಪಡೆದವನಿಗೆ ವಿನಾಶವನ್ನೇ ತರುತ್ತದೆ.

ಈ ವಿಕ್ಟೋರಿಯಾ ಕ್ರಾಸ್ ಅಥವಾ ಅಶೋಕ ಚಕ್ರದಿಂದ ಅಲಂಕರಿಸಬೇಕಾದ ವೀರರನ್ನು ಆಯ್ಕೆ ಮಾಡಲು ಎ.ಐ.ಸಿ.ಸಿ.ಯು ಪಂಡಿತ್ ನೆಹರು ಅವರಿಗೆ

ಪರಮಾಧಿಕಾರವನ್ನು ನೀಡಿದೆ. ಮೊದಲ ಪಟ್ಟಿಯನ್ನು ಒಪ್ಪಿಸಲು ಅವರು ಹರ್ಷಚಿತ್ತರಾಗಿದ್ದಾರೆ. ಆಯ್ಕೆಯು ವಸ್ತುನಿಷ್ಠವಾಗಿರುತ್ತದೆಯೇ ಎಂಬುದನ್ನು ಯಾರಾದರೂ ಊಹಿಸಬಹುದು. ಈ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರುವವರಲ್ಲಿ ಕೆಲವರು ಅನುಭವಿಸಿರುವ ಆಶ್ಚರ್ಯವು ಅವರ ರಾಜೀನಾಮೆಯನ್ನು ಅಕ್ಷರಶಃ ಪಡೆಯಲಾಗುತ್ತದೆಂದು ಅವರು ತಿಳಿದೇ ಇರಲಿಲ್ಲ ಎಂಬುದನ್ನು ತೋರಿಸುತ್ತದೆ. ಅವರಿಂದ ನಿರೀಕ್ಷಿಸಲ್ಪಟ್ಟಿರುವಂತಹ, ನಿಸ್ವಾರ್ಥ ಮನೋಭಾವದ ಮತ್ತು ಸೇವಾ–ಮನೋಭಾವದ ಉತ್ಸುಕತೆಯಿಂದ ಅವರು ಖಂಡಿತ ತಮಗೆ ಒಪ್ಪಿಸಲ್ಪಟ್ಟಿರುವ ಹೊಸ ನಿಗದಿತ ಕಾರ್ಯಗಳನ್ನು ಒಪ್ಪಿಕೊಳ್ಳಲಾರರು, ಮತ್ತು ಎಪ್ಪತ್ತರ ದಶಕದಲ್ಲಿರುವ ಕಾಂಗ್ರೆಸ್ಸಿಗೆ ನವಜೀವನ ಮತ್ತು ನವಚೈತನ್ಯಗಳನ್ನು ತುಂಬುವ ಕಾರ್ಯವನ್ನು ಮಾಡಲಾರರು. ವಿಶ್ವಾಸ, ನಂಬಿಕೆಗಳ ಕಪಟ ತಂತ್ರಕ್ಕೆ ಅವರು ಬಲಿಪಶುಗಳಾಗಿದ್ದಾರೆ.

ತಮ್ಮ ನಾಯಕರಿಂದ ಕಲ್ಪಿಸಲ್ಪಟ್ಟು, ಸೂತ್ರೀಕರಿಸಲ್ಪಟ್ಟ ಕಾರ್ಯನೀತಿಯ ನಿರ್ವಾಹಕರು ಮಾತ್ರವಾಗಿದ್ದ ಕೆಲವರ ನಿರ್ಗಮನದಿಂದ ಕಾಂಗ್ರೆಸ್ ಸರ್ಕಾರದ ವ್ಯಾಧಿಗಳನ್ನು ಗುಣಪಡಿಸಬಹುದೆಂದು, ತೀರಾ ದಡ್ಡನಾಗಲೀ, ಮುಗ್ಧನಾಗಲೀ, ಸುಲಭವಾಗಿ ವಂಚಿಸಲ್ಪಡುವವನಾಗಲೀ ಮಾತ್ರ ನಂಬಲು ಸಾಧ್ಯ. ಮಂತ್ರಿಗಳನೇಕರು ಆಗಮಿಸಿದ್ದಾರೆ, ನಿರ್ಗಮಿಸಿದ್ದಾರೆ; ಆದರೆ ವಸ್ತುಸ್ಥಿತಿಯಲ್ಲಿ ಮಾತ್ರ ಯಾವುದೇ ಸುಧಾರಣೆಯಾಗಿಲ್ಲ. ಪ್ರಧಾನಮಂತ್ರಿಗಳೊಬ್ಬರನ್ನುಳಿದು ಬೇರೆ ಉಳಿದ ಮಂತ್ರಿಗಳು ಯಾರೂ ಲೆಕ್ಕಕ್ಕಿಲ್ಲವೆಂಬುದು ಸಾಮಾನ್ಯ ತಿಳಿವಳಿಕೆಯಾಗಿದೆ. ಕಾಶ್ಮೀರದ ಅತಂತ್ರ ಸ್ಥಿತಿ, ನೆಹರೂ–ಲಿಯಾಕತ್ ಒಪ್ಪಂದ, ನೆಹರೂ–ನೂನ್ ಒಪ್ಪಂದ, ಪಂಚಶೀಲ ಒಪ್ಪಂದ, ಪಂಚವಾರ್ಷಿಕ ಯೋಜನೆಗಳು, ಸಮಾಜವಾದ ಮಾದರಿಯ ಉದ್ದೇಶಗಳು ಮತ್ತು VOA ವ್ಯವಹಾರ– ಈ ಎಲ್ಲವೂ ಯಾವಾಗಲೂ ಕ್ಯಾಬಿನೆಟ್‌ನಲ್ಲಿ–ಮಂತ್ರಿಮಂಡಲದಲ್ಲಿ ಎಂದೂ ಜಂಟಿ ಹೊಣೆಗಾರಿಕೆ ಇರಲೇ ಇಲ್ಲವೆಂಬುದನ್ನು ತೋರಿಸುತ್ತದೆ. ಇಂದಿಗೂ ಕಾಮರಾಜ್ ಯೋಜನೆ ಮತ್ತು ಪಂಚವಾರ್ಷಿಕ ಯೋಜನೆಗಳ ನಂತರವೂ ಅವುಗಳ ಶಿಲ್ಪಿ ಮತ್ತು ಹಿತಸಾಧಕರು ಉಳಿದುಕೊಂಡಿದ್ದಾರೆ. ಪ್ರಧಾನಮಂತ್ರಿಗಳ ವೈಯಕ್ತಿಕ (ಖಾಸಗಿ) ಪ್ರಾಬಲ್ಯ, ನಿಯಂತ್ರಣಗಳು ಉಳಿದಿವೆ. ಜನರನ್ನು ಮುಳುಗಿಸಿದ ನೀತಿಗಳೂ ಉಳಿದುಕೊಂಡಿವೆ. ಇದಲ್ಲದೇ, ಶ್ರೀ ವಿ.ಎನ್. ಗಾಡ್ಗೀಳ್ ಅವರು ಪರಿಶೀಲಿಸಿರುವಂತೆ, ಇವೆಲ್ಲವೂ ಪ್ರಧಾನಿಯವರಿಗೆ ಮತ್ತಷ್ಟು ಅಧಿಕಾರವನ್ನು ನೀಡುತ್ತವೆ. ಲೋಕಸಭೆಯಲ್ಲಿ ಪಂಡಿತ ನೆಹರೂ ಅವರು ಅವಿಶ್ವಾಸ ಮತ ಗೊತ್ತುವಳಿಯಿಂದ ಕಳೆದುಕೊಳ್ಳಬಹುದಾದಂತಹ ವರ್ಚಸ್ಸನ್ನು ಮತ್ತೆ ಗಳಿಸಿಕೊಡುವುದು ಇವುಗಳ ಉದ್ದೇಶವಾಗಿತ್ತು. ಆದರೆ, ಕಾಂಗ್ರೆಸ್ಸಿನ ಎಲ್ಲ ಯೋಜನೆಗಳಂತೆ, ಈ ಯೋಜನೆ ಕೂಡ ವಿಫಲವಾಗಿರುತ್ತದೆ.

೧೯೪೭ ರಷ್ಟು ಮುಂಚೆಯೇ, ಆಗಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಆಚಾರ್ಯ



ಕೃಪಲಾನಿಯವರು, ಕಾಂಗ್ರೆಸ್ ಸರ್ಕಾರವು, ಕಾಂಗ್ರೆಸ್ ಸಂಸ್ಥೆಗೆ ಅಧೀನವಾಗಿರಬೇಕೆಂದು ಬಯಸಿದ್ದರು. ಆದರೆ ಪಂಡಿತ ನೆಹರೂ ಇದಕ್ಕೆ ಒಪ್ಪಲಿಲ್ಲ. ಗಾಂಧೀಜಿಯವರಿಗೂ ಇದನ್ನು ಒತ್ತಾಯ ಮಾಡಲಾಗಲಿಲ್ಲ. ಹಾಗಾಗಿ ಆಚಾರ್ಯಜೀಯವರು ರಾಜೀನಾಮೆ ನೀಡಬೇಕಾಯಿತು. ಹಾಗಿದ್ದರೂ, ಯಾರು ರಾಜೀನಾಮೆ ಕೊಡಬೇಕು ಎಂಬುದನ್ನು ಆಯ್ಕೆ ಮಾಡುವ ಅಧಿಕಾರವನ್ನು ಎ.ಐ.ಸಿ.ಸಿ. ಯು ಪ್ರಧಾನಮಂತ್ರಿಗಳಿಗೆ ಬದಲಾಗಿ ಕಾಂಗ್ರೆಸ್ ಅಧ್ಯಕ್ಷರಿಗೆ ವಹಿಸಿದ್ದಿದ್ದರೆ, ಪರಿಸ್ಥಿತಿಯು ಬೇರೆಯೇ ಆಗಿರುತ್ತಿತ್ತು. ಎ.ಐ.ಸಿ.ಸಿ.ಯು ಖಂಡಿತವಾಗಿಯೂ ತನ್ನ ಅಧ್ಯಕ್ಷರಲ್ಲಿ ವಿಶ್ವಾಸವನ್ನು ಹೊಂದಿಲ್ಲ, ಅಥವಾ ಅದನ್ನು ಅಭಿವ್ಯಕ್ತಿಸುವ ಧೈರ್ಯ ಅದಕ್ಕಿಲ್ಲ ಮತ್ತು ಎ.ಐ.ಸಿ.ಸಿ. ಗೆ ಕೇವಲ ರಬ್ಬರ್‌ಸ್ಟಾಂಪ್ ಆಗಿರುವುದರ ಹೊರತು ತನ್ನದೇ ಆದ ವ್ಯಕ್ತಿತ್ವವಿರದಿದ್ದಲ್ಲಿ, ಅಥವಾ ಸ್ವತಂತ್ರವಾದ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದಿದ್ದಲ್ಲಿ ಅದರ ನಿರ್ಧಾರಗಳಿಗೆ ಅರ್ಥವೇ ಇಲ್ಲ.

ನಮಗೆ ನಮ್ಮದೇ ಆದ ಸಂದೇಹಗಳಿವೆ. ಹಾಗಿದ್ದರೂ ವಸ್ತುಸ್ಥಿತಿಯನ್ನು ಸುಧಾರಿಸಬೇಕೆನ್ನುವ ಅವರ ಪ್ರಯತ್ನದಲ್ಲಿ ಪ್ರಧಾನಮಂತ್ರಿಗಳಿಗೂ ಮತ್ತು ಅವರ ಸಹೋದ್ಯೋಗಿಗಳಿಗೂ ಯಶಸ್ಸನ್ನು ಕೋರುತ್ತೇವೆ. ಆದರೆ, ಜನರು ನಿರಾತಂಕವಾಗಿ, ನೆಮ್ಮದಿಯಿಂದು ಬಿಟ್ಟು ತಮ್ಮ ಜಾಗರೂಕತೆಯನ್ನು ಸಡಿಲಿಸಬಾರದೆಂದು ನಾವು ಅವರನ್ನು ಎಚ್ಚರಿಸಬಯಸುತ್ತೇವೆ. ದುಶ್ಚಟಕ್ಕೆ ಬಿದ್ದವರನ್ನು ಸುಲಭವಾಗಿ ಅಥಮಾಡಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ, ಆಮೇಲೆ ನಿಂದಿಸುವುದು, ಪಶ್ಚಾತ್ತಾಪ ಪಡುವುದಕ್ಕಿಂತಲೂ, ಜಾಗೃತರಾಗಿ, ಆಯುಧಸನ್ನದ್ಧರಾಗಿರುವುದೇ ಬುದ್ಧಿವಂತಿಕೆ.

(೧೯೬೩ರ ಸೆಪ್ಟಂಬರ್ ೨)

# ಪಂಜಾಬ್ ಮತ್ತು ಪಂಜಾಬೀ

ರಾಜ್ಯದ ಶಾಸಕಾಂಗದಿಂದ ಪಂಜಾಬ್ ವಿಶೇಷ ಭಾಷಾ ಮಸೂದೆಯು ಅಂಗೀಕಾರವಾಗಿದೆ. ಇದೇ ವಿಷಯದ ಮೇಲೆ ಮೊದಲು ಘೋಷಿಸಲ್ಪಟ್ಟದ್ದ ಒಂದು ವಿಧಿಯ (ನಿಬಂಧನೆಯ) ಬದಲಾಗಿ ಇದನ್ನು ಜಾರಿಗೆ ತರಲಾಗಿದೆ. ಉರ್ದು ಮತ್ತು ಇಂಗ್ಲಿಷ್ ಭಾಷೆಗಳ ಬದಲಾಗಿ, ಹಿಂದಿ ಮತ್ತು ಪಂಜಾಬಿ ಭಾಷೆಗಳನ್ನು ಜಿಲ್ಲಾ ಮಟ್ಟದವರೆಗೂ ಆಡಳಿತ ಭಾಷೆಗಳನ್ನಾಗಿ ಪರಿಚಯಿಸಲು ಪ್ರಯತ್ನಿಸುತ್ತಿರುವ ಮಟ್ಟಿಗೆ ಇದೊಂದು ಸ್ವಾಗತಾರ್ಹ ಕ್ರಮವಾಗಿದೆ. ಆದರೆ, ಹಿಂದಿ ಮತ್ತು ಪಂಜಾಬಿಗಳ ನ್ಯಾಯಬದ್ಧ ಸ್ಥಾನವನ್ನು ಆ ಪ್ರಾಂತ್ಯದಲ್ಲಿಯೇ ಅದು ಕಸಿದುಕೊಳ್ಳುವುದರಿಂದಾಗಿ, ಪಂಜಾಬಿನಲ್ಲಿ ಯಾರನ್ನೂ ಅದು ತೃಪ್ತಿಪಡಿಸುವುದಿಲ್ಲ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ, ಸರ್ಕಾರ ಮತ್ತು ಜನರ ನಡುವೆ ಅವರ ಭಾಷೆಯ ಮೂಲಕ ನೇರ ಸಂಪರ್ಕ ಸ್ಥಾಪಿಸುವುದು ಅತ್ಯಗತ್ಯವಾಗಿರುವುದಕ್ಕಿಂತಲೂ ಹೆಚ್ಚಾಗಿ ಈ ಕ್ರಮವು– ಕಾರ್ಯವು– ತುಷ್ಟೀಕರಿಸುವುದಾಗಿದೆ. ಆದ್ದರಿಂದ ಇದು ವಾಸ್ತವ ಸಂಗತಿಗಳನ್ನು ಅಲಕ್ಷಿಸುತ್ತದೆ ಮತ್ತು ಅಧಿಕೃತ ಅಥವಾ ಆಡಳಿತಾತ್ಮಕ ಭಾಷೆಗಳ ಉಪಯೋಗದಲ್ಲಿ ನಿಬಂಧನೆಗಳಲ್ಲಿ ಮನಸ್ವೀ ಹಾಗೂ ಕ್ರಮವಿಲ್ಲದ ಅಂಶಗಳನ್ನು ಪರಿಚಯಿಸುತ್ತದೆ.

ಪಂಜಾಬಿನ ಸಮಸ್ಯೆಯ ಬಗೆಗೆ ಆಲೋಚಿಸುವ ಪ್ರತಿಯೊಬ್ಬರೂ, ಮನಸ್ಸಿನಲ್ಲಿ ಅರಿತಿರಬಹುದಾದ ಒಂದು ಸಂಗತಿಯೆಂದರೆ, ಅನೇಕ ಕಾರಣಗಳಿಂದಾಗಿ ಈ ಪ್ರಾಂತ್ಯವು ದೇಶದ ಬೇರೆ ಕಡೆಗಳಲ್ಲಿ ಅಭಿವೃದ್ಧಿ ಹೊಂದಿರುವಂತಹ, ಭಾಷಾ–ಪ್ರಾಂತ್ಯದ ವಿನ್ಯಾಸವನ್ನು ಪ್ರಸ್ತುತಗೊಳಿಸುವುದಿಲ್ಲ. ಆದ್ದರಿಂದ, ಈ ಪ್ರದೇಶದ ಭಾಷಾ ಸಮಸ್ಯೆಯನ್ನು ಪರಿಹರಿಸಲು ಮಹಾರಾಷ್ಟ್ರ ಮತ್ತು ಆಂಧ್ರಗಳಲ್ಲಿ ಉಪಯೋಗಿಸಿದಂತಹ ಮಾಪಕವನ್ನೇ, ನಿಯಮಗಳನ್ನೇ ಅನ್ವಯಿಸಲು ಸಾಧ್ಯವಿಲ್ಲ. ರಾಜ್ಯವು ಸಂಪೂರ್ಣವಾಗಿ ಏಕಭಾಷೀಯವಾಗಿಲ್ಲ. ಆದರೆ, ಯಾವುದೇ ರೀತಿಯ ಆಧಾರದ ಮೇಲೆಯೂ, ಸರಿಯಾದ ಗುಣಲಕ್ಷಣ, ಸೂತ್ರಗಳಿಂದ ಏಕಭಾಷೀಯ ಪ್ರದೇಶಗಳನ್ನು ಗುರುತಿಸಿ ಭಾಗಮಾಡುವುದೂ ಸಾಧ್ಯವಾಗುವುದಿಲ್ಲ. ಸಾಚಾರ್ ಮತ್ತು ಪ್ರಾದೇಶಿಕ ಸೂತ್ರಗಳು ಹಿಂದಿ ಮತ್ತು ಪಂಜಾಬಿ ಪ್ರದೇಶಗಳ ಗಡಿಗಳನ್ನು ಗುರುತಿಸಲು ಪ್ರಯತ್ನಿಸಿದವು ಮತ್ತು ಅಕಾಲಿದಳವು ಪಂಜಾಬಿ ಸುಬಾಕ್ಕಾಗಿ ಚಳವಳಿ



ಮಾಡುತ್ತಿದೆ. ಇವೆಲ್ಲವುಗಳಿಗೂ ಭಾಷೆಗೆ ಸಂಬಂಧಿಸಿದಂತೆ ಯಾವ ಪ್ರಸ್ತುತತೆಯೂ ಇಲ್ಲ. ಇವೆಲ್ಲವೂ ಕೋಮುವಾದದ ರೇಖೆಗಳ ಮೇಲೆ ರಾಜ್ಯವನ್ನು ವಿಭಜಿಸುವ ಪ್ರಯತ್ನಗಳಾಗಿವೆ.

ವಿಷಯವನ್ನು ವಸ್ತುನಿಷ್ಠವಾದ ರೀತಿಯಲ್ಲಿ ಪರಿಶೀಲಿಸುವುದು ಕಠಿಣವಾಗುವಷ್ಟು ಭಾಷಾವಾರುವಾಗದ, ಜಾತಿವಾದ, ಪ್ರತ್ಯೇಕತಾವಾದಗಳು, ಪಂಜಾಬಿನಲ್ಲಿ ಒಂದರೊಡನೊಂದು ಸೇರಿಕೊಂಡಿವೆ. ಸಿಖ್ಖರು ಮತ್ತು ಸಿಖ್ಖರ ರಾಜ್ಯದ ಪಂಜಾಬಿ ಸುಬಾದೊಡನೆ ಪಂಜಾಬ್ ಅನ್ನು ಜೊತೆಗೂಡಿಸುವ ಪರಿಸ್ಥಿತಿಯುಂಟಾಗಿದೆ. ಅಕಾಲಿ ದಳವು ಪಂಜಾಬಿ ಭಾಷೆಯ ಮತ್ತು ಪಂಜಾಬಿ ಸುಬಾದ ಮಾನ್ಯತೆಗಾಗಿ ಮಾಡುತ್ತಿರುವ ಚಳುವಳಿಗಳು, ಈ ಪ್ರವರ್ತಕರ ನಿಜವಾದ ಉದ್ದೇಶಗಳ ಬಗೆಗೆ ಇರುವ ಸಂದೇಹವನ್ನು ದೃಢಪಡಿಸಿವೆ.

ಪಂಜಾಬಿ ಸುಬಾದ ಬೇಡಿಕೆಯಿಂದ ಬೇರ್ಪಡಿಸಿದರೆ, ಭಾಷಾ ಸಮಸ್ಯೆಯನ್ನು ಅದರ ಸಮರ್ಪಕ ಪರಿಪ್ರೇಕ್ಷ್ಯದಲ್ಲಿ ಪರಿಶೀಲಿಸಬಹುದು. ಈಗಿನ ಪ್ರಸಕ್ತ– ಚಿಕ್ಕದು ಮಾಡಲ್ಪಟ್ಟಿರುವ– ತುಂಡು ಮಾಡಲ್ಪಟ್ಟಿರುವ ಪಂಜಾಬನ್ನು ಮತ್ತಷ್ಟು ವಿಭಜಿಸುವುದಿಲ್ಲವೆಂಬುದನ್ನು ಮೊದಲು ಸ್ಪಷ್ಟಪಡಿಸಬೇಕಾಗಿದೆ. ಅದರ ಯಾವುದೇ ವಿಭಜನೆಯು ಆ ಘಟಕಗಳನ್ನು ಸಮಸ್ಯೆಗಳಿಂದ ತುಂಬಿ, ಕೋಮುವಾದದ ಸಮಸ್ಯೆಯನ್ನು ಪರಿಹರಿಸುವ ಬದಲು ಮತ್ತಷ್ಟು ಉಲ್ಬಣಿಸುವಂತೆ ಮಾಡುತ್ತದೆ. ಪಂಜಾಬಿನ ಈಗಿನ ವಿಸ್ತಾರವನ್ನು, ಗಾತ್ರವನ್ನು ಆರ್ಥಿಕ, ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ಮತ್ತು ಭಾಷಾ ನೆಲೆಗಳಿಂದ ಕೂಡ ಕಿರಿದುಗೊಳಿಸುವುದು ಸಾಧ್ಯವಾಗುವುದಿಲ್ಲ. ಜನರಿಗೆ ಬುದ್ಧಿಗ್ರಾಹ್ಯವಾಗುವ ಹಾಗೆ ಮತ್ತು ಆಡಳಿತದೊಡನೆ ಸುಲಭವಾಗಿ ಸಂವಹಿಸಲು ಸಾಧ್ಯವಾಗುವಂತೆ ಹಾಗೂ ಜನರ ಭಾವನಾತ್ಮಕ ಏಕೀಕರಣಕ್ಕೆ ಎಡೆ ಮಾಡುವಂತೆ, ಪಂಜಾಬು ಈಗ ತಾನಿರುವಂತೆಯೇ, ರಾಜ್ಯದಲ್ಲಿ ಪ್ರಚಲಿತವಿರುವ ಎರಡು ಭಾಷೆಗಳನ್ನು ಬಳಸಬೇಕು. ಹಿಂದಿ ಮತ್ತು ಪಂಜಾಬಿ ಭಾಷೆಗಳು ಕೋಮುವಾದ ಅಥವಾ ಪ್ರಾದೇಶಿಕ ಆಧಾರದ ಮೇಲೆ ಬಳಸಲ್ಪಡುವುದು ಮುಂದುವರಿಯುವ ತನಕವೂ, ಈ ಉದ್ದೇಶಗಳು ಸಾಧಿತವಾಗುವುದಿಲ್ಲ.

ಪಂಜಾಬಿಯನ್ನು ಸಿಖ್ಖರ ಭಾಷೆ ಎಂದು ಕರೆಯುವುದು ಸರಿಯಲ್ಲ. ಸಿಖ್ ಅಲ್ಲದವರು ಕೂಡ ಪಂಜಾಬಿಯನ್ನು ಮಾತನಾಡುವುದಲ್ಲದೇ, ಅವರಲ್ಲಿ ಅನೇಕರು ತಮಗೆ ಗೌರವ ತರುವಂತಹ ಸಾಹಿತ್ಯಕ ಕೊಡುಗೆಗಳನ್ನು ಈ ಭಾಷೆಗೆ ನೀಡಿದ್ದಾರೆ. ಅಕಾಲಿಗಳು ಈ ಭಾಷೆಯನ್ನು ತಮ್ಮ ಪ್ರತ್ಯೇಕತಾ ತಂತ್ರದ ಸಾಧನವನ್ನಾಗಿ ಬಳಸದೇ ಇದ್ದಿದ್ದರೆ, ತಮ್ಮ ಮಾತೃಭಾಷೆಯನ್ನು ಮತ್ತಷ್ಟು ಶ್ರೀಮಂತಗೊಳಿಸಲು, ಹೆಚ್ಚು ಹೆಚ್ಚು ಸಿಖ್ ಅಲ್ಲದವರು ಮುಂದೆ ಬರುತ್ತಿದ್ದರು. ಆದಾಗ್ಯೂ, ತಾವು ಪಂಜಾಬಿಯನ್ನೇ ಮಾತನಾಡಿದರು ಕೂಡ, ಒಂದು ಭಾಷೆಯು ಉಪಯೋಗವಾಗಬಹುದಾದ ಎಲ್ಲ

ಉದ್ದೇಶಗಳಿಗೂ ಹಿಂದಿಯನ್ನೇ ಬಳಸುತ್ತಾರೆ ಅಥವಾ ಬಳಸಲು ಬಯಸುತ್ತಾರೆ. ಅಕಾಲಿ ರಾಜಕಾರಣದಿಂದ ಹಿಂದಿ ಮತ್ತು ಪಂಜಾಬಿಯ ಬಗೆಗೆ ಅವರ ಸದ್ಯದ ಭಾವನೆಯು ಕಠಿಣಗೊಳ್ಳಬಹುದು. ಆದರೆ ಇದು ತನ್ನ ಮೂಲದಲ್ಲಿ ಪ್ರತಿಗಾಮಿ ಅಥವಾ ಪ್ರಗತಿವಿರೋಧಿಯಲ್ಲ. ಸಿಖ್ಖರ ಗುರುಗಳೂ ಕೂಡ. ಆಗ ಪ್ರಧಾನ ಆಡುಭಾಷೆಯಾಗಿದ್ದ ಹಿಂದಿ, ಬ್ರಜಭಾಷೆಯಲ್ಲಿ ಪ್ರವೀಣರಾಗಿದ್ದರು. ಸ್ವಾಮಿ ದಯಾನಂದರು ತಮ್ಮ ಸಂದೇಶವನ್ನು ಪಂಜಾಬಿನ ಜನರಿಗೆ ಪ್ರಸಾರ ಮಾಡಲು ಹಿಂದಿ ಭಾಷೆಯನ್ನು ಉಪಯೋಗಿಸಲು ಕಾರಣವೆಂದರೆ ಆ ಭಾಷೆಯು ವ್ಯಾಪಕವಾಗಿ ಅರ್ಥವಾಗುತ್ತಿತ್ತು. ವಾಸ್ತವವಾಗಿ ಪಂಜಾಬಿನಲ್ಲಿ ಹಿಂದಿ ಮತ್ತು ಪಂಜಾಬಿ ಭಾಷೆಗಳೆರಡೂ ಜೊತೆ ಜೊತೆಯಲ್ಲಿಯೇ ಅಭಿವೃದ್ಧಿಹೊಂದುತ್ತಿವೆ. ಪಂಜಾಬಿ ಭಾಷೆಯು ಬೇರೆ ಪ್ರಾದೇಶಿಕ ಭಾಷೆಗಳಲ್ಲೂ ಅಭಿವೃದ್ಧಿ ಹೊಂದುತ್ತಿದ್ದ ಕಾಲದಲ್ಲಿ, ಸಂಪೂರ್ಣವಾಗಿ ಬೆಳೆದ ಭಾಷೆಯಾಗಿರಲಿಲ್ಲವೆಂಬುದನ್ನು ಒಪ್ಪಿಸಿಕೊಳ್ಳಬೇಕು. ಅದರ ಅಭಿವೃದ್ಧಿಯು ನಿಧಾನವಾಗಿದೆ. ಆದರೆ ಅದರಿಂದಾಗಿ ಆ ಭಾಷೆಯು ನಷ್ಟವನ್ನನುಭವಿಸಬಾರದು. ಅಭಿವೃದ್ಧಿಶೀಲ ಅರ್ಥವ್ಯವಸ್ಥೆಯಂತೆ ಅಭಿವೃದ್ಧಿ ಹೊಂದುತ್ತಿರುವ ಭಾಷೆ ಕೂಡ ಯಾವಾಗಲೂ ಕೆಲವು ಒತ್ತಡಗಳನ್ನು, ನಿರ್ಬಂಧಗಳನ್ನು ಅನುಭವಿಸುತ್ತದೆ. ಪಂಜಾಬಿ ಭಾಷೆಯನ್ನು ದೃಢವಾಗಿ ಬೆಂಬಲಿಸುವವರು ಇದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ರಾಜಕೀಯ ಉದ್ದೇಶ ಅಥವಾ ಧಾರ್ಮಿಕ ಚಳವಳಿಗಳ ಜೊತೆ ಅದನ್ನು ಜೋಡಿಸುವ ಮೂಲಕ ಅಡಚಣೆಗಳನ್ನು ಸೃಷ್ಟಿಸುವ ಬದಲು, ಸಾಧ್ಯವಾದಷ್ಟೂ ಜನರು ಅದನ್ನು ಬೆಂಬಲಿಸುವಂತೆ ಮುಕ್ತವಾಗಿ ಬಿಟ್ಟುಬಿಡಬೇಕು.

ಲಿಪಿಯ ಪ್ರಶ್ನೆಯು ಕೂಡ ಸ್ವಲ್ಪ ಮಟ್ಟಿಗೆ ದಿಗ್ಭ್ರಮೆಗೊಳಿಸುತ್ತದೆ. ಗುರುಮುಖಿಯನ್ನು ವಿರೋಧಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಅದರ ಮೂಲವು ಯಾವುದೇ ಇದ್ದರೂ, ಪಂಜಾಬಿ ಮಾತನಾಡುವವರಿಂದ ಅದು ವ್ಯಾಪಕವಾಗಿ ಉಪಯೋಗಿಸಲ್ಪಡುತ್ತಿದೆ. ಆದರೆ ನಾಗರಿ ಲಿಪಿಯನ್ನು ಕೂಡ ಉಪಯೋಗಿಸಬೇಕೆಂದು ಹೇಳುವವರು ಕೂಡ ಬಹಳ ಜನರಿದ್ದಾರೆ. ಇದನ್ನು ಯಾಕೆ ಒಪ್ಪಿಕೊಳ್ಳಬಾರದು? ಇದು ಪಂಜಾಬಿ ಭಾಷೆಯ ಉದ್ದೇಶಕ್ಕೆ ನೆರವು ನೀಡುವುದು. ಪಂಜಾಬಿ ಭಾಷೆಗೆ ನಾಗರೀಲಿಪಿಯನ್ನು ಬಳಸಿದರೆ, ಪಂಜಾಬಿ ಭಾಷೆಯು ತನ್ನ ವಿಶಿಷ್ಟ ಲಕ್ಷಣವನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂಬ ಆತಂಕ, ಭಯಗಳಿವೆ. ಆದರೆ ಈ ಭಯವು ಆಧಾರವಿಲ್ಲದ್ದು, ಮರಾಠಿ ಕೂಡಾ ನಾಗರಿ ಲಿಪಿಯನ್ನು ಹೊಂದಿದೆ, ಆದರೂ ಅದು ಒಂದು ಬೇರೆಯೇ ಭಾಷೆಯಾಗಿದೆ. ಸರ್ಕಾರವು ಏನನ್ನೇ ಮಾಡಿದರೂ ಬರಹಗಾರರು ಮತ್ತು ಪ್ರಕಾಶಕರು, ಪಂಜಾಬಿ ಭಾಷೆಯನ್ನು ಬರೆಯಲು ಹೆಚ್ಚಾಗಿ ನಾಗರಿ ಲಿಪಿಯನ್ನೇ ಬಳಸುತ್ತಾರೆ. ಏಕೆಂದರೆ



ನಾಗರಿ ಲಿಪಿಯಲ್ಲಿ ಪ್ರಕಟಿಸಲ್ಪಟ್ಟ ಗ್ರಂಥಗಳಿಗೆ, ನಿಶ್ಚಯವಾಗಿಯೂ ವ್ಯಾಪಕವಾದ ಮಾರುಕಟ್ಟೆಯನ್ನು ಪಡೆಯುತ್ತದೆ. ಹಿಂದಿಯು ರಾಷ್ಟ್ರಭಾಷೆಯಾಗಿರುವುದರಿಂದ, ಪ್ರತಿಯೊಬ್ಬರೂ ಅದನ್ನು ಕಲಿಯುತ್ತಾರೆ. ಆದ್ದರಿಂದ ನಾಗರಿ ಲಿಪಿಯು ಎಲ್ಲ ಕಡೆಯು ಪರಿಚಿತವಾಗಿರುತ್ತದೆ. ಗುರುಮುಖಿ ಒಂದನ್ನೇ ಬೆಂಬಲಿಸುವವರು, ಪಂಜಾಬಿ ಭಾಷೆಯ ಕ್ಷೇತ್ರವನ್ನು ಪರಿಮಿತಿಗೊಳಿಸಲು ಬಯಸುತ್ತಾರೆ.

ಆದ್ದರಿಂದ ಪಂಜಾಬನ್ನು ಎಲ್ಲ ಉದ್ದೇಶಗಳಿಗಾಗಿಯೂ, ಪಂಜಾಬನ್ನು ದ್ವಿಭಾಷಾ ಪ್ರಾಂತ್ಯವೆಂದು ಮಾನ್ಯತೆ ನೀಡುವ ದೃಷ್ಟಿಕೋನವನ್ನೇ ಜನಸಂಘವು ಹೊಂದಿದೆ. ಹಿಂದಿ ಮತ್ತು ಪಂಜಾಬಿ ಎರಡೂ ಭಾಷೆಗಳು ಎಲ್ಲ ಮಟ್ಟಗಳಲ್ಲಿಯೂ ದೇಶಾದ್ಯಂತ ಬಳಸಲ್ಪಡಬೇಕು. ಎರಡೂ ಭಾಷೆಗಳಲ್ಲಿ ಸಲಹೆ, ಶಿಕ್ಷಣಗಳನ್ನು ನೀಡಲು ಎಲ್ಲ ವ್ಯವಸ್ಥೆಗಳನ್ನು ಮಾಡಬೇಕು. ಇವುಗಳಲ್ಲಿ ಯಾವುದೇ ಒಂದನ್ನು ಯಾವುದೇ ಹಂತದಲ್ಲಿ ವಿರೋಧಿಸಿದರೂ ಅದು ರಾಜ್ಯದ ವಿಭಜನೆಗೆ ಕಾರಣವಾಗಿ ಎಲ್ಲರಿಗೂ ಆಘಾತಕಾರಿ ಪರಿಣಾಮವನ್ನುಂಟುಮಾಡುತ್ತದೆ. ತೀವ್ರವಾದಿ ದೃಷ್ಟಿಕೋನವನ್ನು ಬೆಂಬಲಿಸುತ್ತಾ, ಪ್ರತ್ಯೇಕತೆಯ ನೀತಿಯನ್ನು ಬೋಧಿಸುತ್ತಿರುವ ರಾಜಕೀಯ ಶಕ್ತಿಗಳು ರಾಜ್ಯದಲ್ಲಿ ಇವೆ. ಅವರು ಹಿಂದಿಯಪರವೋ ಅಥವಾ ಪಂಜಾಬಿಯಪರವಾಗಿಯೋ, ಹೇಗೆ ಇದ್ದರೂ ಅವರು ವಾಸ್ತವತೆಯನ್ನು ಅಲಕ್ಷಿಸುತ್ತಾರೆ ಮತ್ತು ಈಗ ಇರುವ ಸ್ವರೂಪವನ್ನು ಬಲಪ್ರಯೋಗದಿಂದ ಬದಲಾಯಿಸಲು ಬಯಸುತ್ತಾರೆ. ಎರಡು ಭಾಷೆಗಳನ್ನೂ ಉಪಯೋಗಿಸುವ ಸ್ವಾತಂತ್ರ್ಯ ಜನರಿಗಿರಲಿ. ಪಂಜಾಬಿ ಭಾಷೆಯು ಇಲ್ಲಿ ನೆಲೆಸಲು ಬಂದಿದೆ ಮತ್ತು ಯಾರಿಗೂ ಅದನ್ನು ಸ್ಥಾನಪಲ್ಲಟ ಮಾಡಲು ಸಾಧ್ಯವಿಲ್ಲ. ಅದನ್ನು ಅಲಕ್ಷಿಸುವ ಮೂಲಕ ಕೆಲವು ಜನರು ಅದು ಕೇವಲ ವಿಭಾಗೀಯ ಆಸಕ್ತಿಗಳಲ್ಲಿ ಉಪಯೋಗಿಸಲು ಬಿಡಬಹುದು. ಆದ್ದರಿಂದ, ರಾಷ್ಟ್ರೀಯ ಆತ್ಮವನ್ನು ಅಭಿವ್ಯಕ್ತಿಸುವ ಸೂಕ್ತ ಮಾಧ್ಯಮವಾಗಿ ಅಭಿವೃದ್ಧಿ ಹೊಂದುವ ಬದಲು ಅದು ಅವರ ಸಂಕುಚಿತ ಗುರಿಗಾಗಿ, ಒಂದು ಪಂಗಡದ ಹಿತಾಸಕ್ತಿಗಳಿಗಾಗಿ ದುರುಪಯೋಗವಾಗುತ್ತದೆ. ಕಮ್ಯೂನಿಸ್ಟ್ ಮತ್ತು ಕೋಮುವಾದಿಗಳ ಹಿಡಿತದಿಂದ ತಮ್ಮ ಮಾತೃಭಾಷೆಯನ್ನು ಮುಕ್ತಗೊಳಿಸುವುದು ಎಲ್ಲ ಪಂಜಾಬಿಗಳ ಪವಿತ್ರ ಕರ್ತವ್ಯವಾಗಿದೆ. ಹಿಂದಿಯನ್ನು ಕೂಡ ಪಂಜಾಬಿನಿಂದ ಸ್ಥಾನಭ್ರಷ್ಟ ಮಾಡುವುದು ಸಾಧ್ಯವಿಲ್ಲ. ಗುರು ಗ್ರಂಥ ಸಾಹಿಬ್ ಅನ್ನು ಗುರುದ್ವಾರಗಳಲ್ಲಿ ಎಲ್ಲಿಯವರೆಗೆ ಪಠಿಸುತ್ತಿರುತ್ತಾರೆಯೋ, ದೇವಸ್ಥಾನಗಳಲ್ಲಿ ರಾಮಾಯಣ ಮತ್ತು ಸುಖಸಾಗರಗಳ ಮತ್ತು ಆರ್ಯಸಮಾಜ ದೇವಸ್ಥಾನಗಳಲ್ಲಿ ಸತ್ಯಾರ್ಥ ಪ್ರಕಾಶದ ಪಠಣ ನಡೆಯುತ್ತಿರುತ್ತದೆಯೋ, ಅಲ್ಲಿಯವರೆಗೂ, ಪಂಜಾಬಿನ ಜನರ ಜೀವನದಲ್ಲಿ ಹಿಂದಿ ಭಾಷೆಯು ಹೆಮ್ಮೆಯ ಸ್ಥಾನವನ್ನು ಆಕ್ರಮಿಸಿಕೊಂಡಿರುತ್ತದೆ. ಪಂಜಾಬಿನ ಸಮಸ್ಯೆಯನ್ನು ಪರಿಹರಿಸಲು

ಅಪ್ಪಟವಾದ ರಾಷ್ಟ್ರೀಯ ಹಾಗೂ ವಸ್ತುನಿಷ್ಠ ಮನಸ್ಸಿನ ಅವಶ್ಯಕತೆಯಿದೆ. ೧೯೫೩ ರಷ್ಟು ಮುಂಚೆಯೇ ಭಾರತೀಯ ಜನಸಂಘವು ವ್ಯಕ್ತಪಡಿಸಿದ್ದ ಈ ಅಭಿಪ್ರಾಯಗಳನ್ನು ನಿರ್ಲಿಪ್ತ ಮತ್ತು ತೀವ್ರವಾಗಿ ದೇಶಾಭಿಮಾನವುಳ್ಳ ವ್ಯಕ್ತಿತ್ವವುಳ್ಳ ಶ್ರೀ ಎಂ.ಎಸ್. ಗೋಲ್‌ವಾಲ್‌ಕರ ಅವರು ಕೂಡ ಸಮರ್ಥಿಸಿರುವುದು ಅತ್ಯಂತ ತೃಪ್ತಿಕರವಾದ ಸಂಗತಿಯಾಗಿದೆ. ಪಂಜಾಬಿಗಳು ತಮ್ಮ ಮಾತೃಭಾಷೆಯನ್ನು ತಮ್ಮದಾಗಿಸಿಕೊಳ್ಳುವಂತೆಯೂ ಸಿಖ್ಖರು ತಮ್ಮ ರಾಷ್ಟ್ರೀಯತೆಯನ್ನು ಅಂದರೆ ಹಿಂದೂತ್ವವನ್ನು ತಮ್ಮದಾಗಿಸಿಕೊಳ್ಳವಂತೆಯೂ ಅವರು ಸಲಹೆ ನೀಡಿದ್ದಾರೆ. ಜನಸಂಘವು ತನ್ನ ನಿಲುವು ನಿರ್ದುಷ್ಟವೆಂದು ಭಾವಿಸುತ್ತದೆ.

ಶ್ರೀ ಗೋಲ್‌ವಾಲ್‌ಕರ್ ಅವರು ತಮ್ಮ ಅಭಿಪ್ರಾಯಗಳಿಗೆ ನೇರವಾದ ಅಭಿವ್ಯಕ್ತ ನೀಡಿದಾಗ ತೀವ್ರಗಾಮಿ ಶಕ್ತಿಗಳು ತಲ್ಲಣಗೊಂಡವು. ಇಂತಹದೊಂದು ಸಮಗ್ರತೆಯ ಏಕೀಕರಣಗೊಳಿಸುವಂತಹ ಭಾಷಣವನ್ನು ಹಿಂದೀ ವಿರೋಧ, ಪಂಜಾಬಿ ವಿರೋಧ ಎಂಬ ನೆಲೆಗಳಲ್ಲಿ ಆಲೋಚಿಸುತ್ತಿದ್ದವರಿಗೆ ಸಮನ್ವಯಾತೆಯ ಮಾರ್ಗವನ್ನು ಇಷ್ಟ ಪಡಲಾಗಲಿಲ್ಲ. ಆದರೂ ವಿವೇಕಿಗಳು ಈ ನಿಲುವನ್ನು ಪ್ರಶಂಸಿಸಿದರು. ದುರದೃಷ್ಟವಶಾತ್, ಕಳೆದ ಕೆಲವು ವರ್ಷಗಳಲ್ಲಿ, ಸುಧಾರಣಾವಾದಿಗಳಾಗಲ್ಲೀ, ರಾಷ್ಟ್ರೀಯವಾದಿಗಳಾಗಲೀ, ತಮ್ಮನ್ನು ದೃಢವಾಗಿ ಘೋಷಿಸಿಕೊಳ್ಳದೇ ಇದ್ದಿದ್ದರಿಂದಾಗಿ ತೀವ್ರವಾದಿಗಳು ತಮಗೆ ಒಂದು ಪ್ರಾತಿನಿಧಿಕ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದಾರೆ. ಪಂಜಾಬ್ ಜನಸಂಘದ ಪ್ರದೇಶ ಕಾರ್ಯಕಾರಣಿ ಸಮಿತಿಯು ನವೆಂಬರ್ ೨೦ ರಂದು ಕಾರ್ನಾಲ್‌ನಲ್ಲಿ ಸಭೆ ಸೇರಿತ್ತು ಮತ್ತು ಇಡಿಯ ಪರಿಸ್ಥಿತಿಯ ಬಗೆಗೆ ಚರ್ಚಿಸಿದ ನಂತರ ತನ್ನ ಮೊದಲ ನಿಲುವನ್ನೇ ಮತ್ತೆ ಒತ್ತಿ ಹೇಳಿತು.

(೧೯೬೦ರ ನವೆಂಬರ್ ೨೮)



# ಮಧ್ಯಪ್ರದೇಶದ ಬುಡಕಟ್ಟು ಜನರು

ಮಧ್ಯಪ್ರದೇಶದ ಜನಸಂಘ ಅಧ್ಯಕ್ಷರಾದ ಶ್ರೀ ಗಿರಿರಾಜ ಕಿಶೋರ ಕಪೂರ್ ಅವರು ಇಟಾರ್ಸಿಯಲ್ಲಿ ನಡೆದ ಪಕ್ಷದ ವಾರ್ಷಿಕ ಸಮ್ಮೇಳನದಲ್ಲಿ ಹದಿನೆಂಟು ಪುಟಗಳ ತಮ್ಮ ಭಾಷಣದಲ್ಲಿ, ಸಂಪೂರ್ಣ ನಾಲ್ಕು ಪುಟಗಳನ್ನು ಆ ಪ್ರಾಂತ್ಯದ ವನವಾಸಿಗಳ–ಆದಿವಾಸಿಗಳು ಎಂದು ತಪ್ಪಾಗಿ ಹೆಸರಿಸುವ– ಸಂಕಷ್ಟ ಅಸಮಾಧಾನಗಳನ್ನು ವಿವರಿಸುವುದಕ್ಕೆ ಮೀಸಲಿಟ್ಟಿದ್ದು, ಸರಿಯಾದ ಪ್ರಮಾಣದಲ್ಲಿರಲಿಲ್ಲವೆಂದು, ಅಥವಾ ಯಥೋಚಿತವಾಗಿರಲಿಲ್ಲವೆಂದು ಕೆಲವರು ಭಾವಿಸಿದರು. ಆದರೆ, ಈ ವಿಷಯದ ಬಗೆಗೆ ಶ್ರೀ ಬೇಡ್ ಅವರ ಕರಪತ್ರವನ್ನು ಓದಿದ ನಂತರ, ಆ ಸಮಸ್ಯೆಯು ತೀರಾ ತೀವ್ರವಾಗಿತ್ತೆಂದೂ, ಮತ್ತು ಅದರ ಬಹುಮುಖೀ ಸಮಸ್ಯೆಯ ಅಂಶಗಳನ್ನು ಪರಿಶೀಲಿಸಲು ಪ್ರತ್ಯೇಕವಾದ ಸಮ್ಮೇಳನವನ್ನೇ ನಡೆಸಬಹುದಾಗಿತ್ತೆಂದು ನಾನು ಭಾವಿಸಿದೆ. ಸಮ್ಮೇಳನಲ್ಲಿ ಉಪಸ್ಥಿತರಿದ್ದ ಸುಮಾರು ಐದನೂರಕ್ಕೂ ಹೆಚ್ಚು ಪ್ರತಿನಿಧಿಗಳಲ್ಲಿ ಸುಮಾರು ಇಪ್ಪತ್ತು ಪರ್ಸೆಂಟ್‌ನಷ್ಟು ವನವಾಸಿಗಳಿದ್ದರು. ಭಾರತೀಯ ಜನಸಂಘವು ಕಾಡಿನ ಈ ಒಳಭಾಗವನ್ನು ಶೀಘ್ರವಾಗಿ ಪ್ರವೇಶಿಸುತ್ತಿದೆ. ಮತ್ತು ಜನಸಂಘದ ಕಾರ್ಯಕರ್ತರಲ್ಲಿ ತಮ್ಮ ಉದ್ದೇಶಕ್ಕೆ ಉತ್ಸಾಹ ಮತ್ತು ನಿಷ್ಠೆಯ ಸಹಾನುಭೂತಿ ತೋರುವವರನ್ನು ವನವಾಸಿಗಳು ಕಂಡುಕೊಂಡಿದ್ದಾರೆ. ಈ ಕಾರ್ಯಕರ್ತರು ಅವರಿಗೆ ದಾರಿ ತೋರಲೆಂದು ಅಲ್ಲಿಗೆ ಹೋಗುವುದಿಲ್ಲ, ಆದರೆ ಅವರ ಪರಿಸ್ಥಿತಿಯನ್ನು ಸುಧಾರಿಸಲು ಹೆಗಲಿಗೆ ಹೆಗಲು ಕೊಟ್ಟು ಪರಿಶ್ರಮಿಸಲು ಹೋಗುತ್ತಾರೆ.

ಶೀಘ್ರವಾಗಿ ಬದಲಾಗುತ್ತಿರುವ ಕಾನೂನುಗಳು, ಯೋಜನೆಗಳ ಅಡಿಯಲ್ಲಿನ ಅವಾಸ್ತವಿಕ ಕಾರ್ಯಕ್ರಮಗಳು ಮತ್ತು ಆಡಳಿತದ ಜಡ್ಡುಗಟ್ಟಿರುವ ನಿರ್ದಯ ಮನೋಭಾವ ಇವುಗಳು ಈ ಜನರು ಮುಖಾಮುಖಿಯಾಗಬೇಕಾಗಿರುವ ಅನೇಕ ಸಮಸ್ಯೆಗಳಿಗೆ ಕಾರಣಗಳಾಗಿವೆ. ಸರ್ಕಾರವು ಹೆಚ್ಚು ಹೆಚ್ಚು ಕಾಡುಗಳನ್ನು ಬೆಳೆಯಲು ಬಯಸುತ್ತದೆ, ವನ್ಯಜೀವಿಗಳನ್ನು ಸಂರಕ್ಷಿಸಲು ಬಯಸುತ್ತದೆ, ಆದರೆ ಅಲ್ಲಿ ವಾಸಿಸುತ್ತಿರುವ ಮಾನವಜೀವಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತದೆ. ಕಾಡಿನ ಉತ್ಪನ್ನದಿಂದ ಬರುವ ಆದಾಯವನ್ನು ಅವಲಂಬಿಸಿ ಅವರು ಸರಳವಾದ ಆದರೆ ಸಂತುಷ್ಟವಾದ ಜೀವನವನ್ನು ನಡೆಸುತ್ತಿದ್ದಾರೆ. ಇದರ ಜೊತೆಗೆ ಆವರ್ತನ ಬೇಸಾಯದ

ರೀತಿಯಲ್ಲಿ, ವಿಶಾಲ ಪ್ರದೇಶಗಳನ್ನು ಉಳುಮೆ ಮಾಡಿ ಬೆಳೆ ಬೆಳೆಯುತ್ತಾರೆ. ಅರಣ್ಯ ಭೂಮಿಯನ್ನು ವ್ಯವಸಾಯದ ಉದ್ದೇಶಕ್ಕೆ ನೀಡಿದುದಕ್ಕೆ ಪ್ರತಿಯಾಗಿ, ಕಾಡು ಬೆಳೆಸಲು ಗಿಡ ನೆಡುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ವಾಸ್ತವವಾಗಿ ಅವರು ಎರಡು ಕರ್ತವ್ಯಗಳನ್ನು ನಿರ್ವಹಿಸಿದ್ದಾರೆ. ಇದು ಟೊಂಗ್ಯಾ ಕ್ರಮ ಪ್ರಸಿದ್ಧವಾಗಿತ್ತು ಮತ್ತು ಅನಾದಿಕಾಲದಿಂದಲೂ ಪ್ರಚಲಿತವಾಗಿತ್ತು. ಹಾಗೂ ಜನಪ್ರಿಯವಾಗಿತ್ತು. ಆದರೆ ಪ್ರಸಕ್ತ ಸರ್ಕಾರವು, ವಿದೇಶೀ ಪರಿಣತರ ಸಲಹೆಯಿಂದಾಗಿ ಈ ವ್ಯವಸ್ಥೆಯನ್ನು ರದ್ದುಪಡಿಸಿದೆ ಮತ್ತು ಎಲ್ಲ ಕಾಡುಗಳನ್ನು 'ಮೀಸಲು ಕಾಡುಗಳು' ಎಂದು ಘೋಷಿಸಿದೆ. ಇದರಿಂದಾಗಿ ಸರಿಯಾದ ಆದೇಶವಿಲ್ಲದೆ, ಈ ಪ್ರದೇಶದ ಒಂದು ಎಳೆ ಹೂಲ್ಲನ್ನು ಮುಟ್ಟುವುದು ಕೂಡ ಕಾನೂನುಬಾಹಿರ ಹಾಗೂ ಶಿಕ್ಷಾರ್ಹ ಅಪರಾಧವಾಗಿ ಮಾಡಲ್ಪಟ್ಟಿದೆ. ಲೇಖನಿಯ ಇಂಥ ಒಂದು ಹೊಡೆತದಿಂದಾಗಿ (ಆದೇಶದಿಂದಾಗಿ) ಮಧ್ಯಪ್ರದೇಶವೊಂದರಲ್ಲಿಯೇ ಮೂರು ಲಕ್ಷ ಜನರ ಜೀವನೋಪಾಯದ ಮಾರ್ಗಗಳನ್ನು ಕಸಿದುಕೊಳ್ಳಲಾಗಿದೆ. ಅವರಿಗೆ ಯಾವುದೇ ಪರಿಹಾರವನ್ನು ನೀಡಲಾಗಿಲ್ಲ ಮತ್ತು ಅವರ ಪುನರ್ವಸತಿಗೆ ಯಾವ ಏರ್ಪಾಟನ್ನು ಸಹ ಮಾಡಲಾಗಿಲ್ಲ. ಈ ಆಜ್ಞೆಯ ಕೇವಲ ಕಾಡುಗಳಿಗೆ ಮಾತ್ರವೇ ವಿಸ್ತರಿಸಲ್ಪಡಲಿಲ್ಲ, ಆದರೆ ಕಾಡಿನ ಚಿಹ್ನೆಯೇ ಅಸ್ತಿತ್ವದಲ್ಲಿರದಿದ್ದ, ಒಂದು ತಲೆಮಾರಿಗಿಂತಲೂ ಹೆಚ್ಚಾಗಿ ವ್ಯವಸಾಯಕ್ಕೆ ಒಳಪಟ್ಟಿದ್ದ ವಿಶಾಲವಾದ ಬಯಲು ಪ್ರದೇಶಗಳಿಗೂ ಕೂಡ ವಿಸ್ತರಿಸಲ್ಪಟ್ಟಿತ್ತು. ಇದಕ್ಕೆ ನೀಡಿದ ಸರಳವಾದ ಕಾರಣವೆಂದರೆ, ಈ ಗ್ರಾಮಗಳನ್ನು ಕಾಡಿನ ಗ್ರಾಮಗಳೆಂದು ದಾಖಲು ಮಾಡಲಾಗಿತ್ತು ಮತ್ತು ಕಂದಾಯದ ಗ್ರಾಮಗಳನ್ನಾಗಿ ಅಲ್ಲ (ಯಾವುದೇ ಹುಟ್ಟುವಳಿ, ವರಮಾನದ ಗ್ರಾಮಗಳಾಗಿರಲಿಲ್ಲ). ಈ ವ್ಯತ್ಯಾಸವು ಕೇವಲ ಕಾಗದದ ಮೇಲಿನದಾಗಿದ್ದತ್ತೇ ವಿನಾ, ವಾಸ್ತವವಾಗಿದ್ದ ವ್ಯತ್ಯಾಸ ಎಲ್ಲ ಎನ್ನುವುದನ್ನು ಪರಿಶೀಲಿಸುವ ತೊಂದರೆಯನ್ನೇ ಸರ್ಕಾರ ತೆಗೆದುಕೊಳ್ಳಲಿಲ್ಲ. ಅದರ ಪರಿಣಾಮವಾಗಿ ಸಾವಿರಾರು ವ್ಯವಸಾಯಗಾರರು ಹೊರಕ್ಕೆ ದಬ್ಬಲ್ಪಟ್ಟರು. ಅವರಲ್ಲಿ ಸ್ವಲ್ಪ ಜನವಾದರೂ ಈಗಲೂ ಉಳುವುದನ್ನು ಮುಂದುವರಿಸುತ್ತಿದ್ದಲ್ಲಿ, ಅದು ಅರಣ್ಯ ಇಲಾಖೆಯ ಅಧಿಕಾರಿಗಳ ಉಪೇಕ್ಷೆಯ ಸಮ್ಮತಿಯಿಂದಾಗಿ ಮಾತ್ರ. ಸರ್ಕಾರದ ಯೋಜನೆಗಳನ್ನು ಕಾರ್ಯಗತಗೊಳಿಸುವುದರಲ್ಲಿನ ವಿಳಂಬಕ್ಕೆ, ಮನವೀಯ ಕರುಣೆಯೋ, ಮಾನವೀಯ ದೌರ್ಬಲ್ಯವೋ–ಲಂಚ ಭ್ರಷ್ಟಚಾರದ ಈ ದಿನಗಳಲ್ಲಿ ತೀರ ಸಾಮಾನ್ಯವಾಗಿರುವ–ಯಾವುದು ಇದಕ್ಕೆ ಹೊಣೆಯೆಂಬುದು ನಮಗೆ ತಿಳಿದಿಲ್ಲ.

ಯಾವುದೇ ಕೈಗಾರಿಕೆಗಳು ಇಲ್ಲಿ ಇಲ್ಲ ಮತ್ತು ಸಾಗಣೆ, ಮರ ಕಡಿಯುವುದು ಮತ್ತು ಮರಕೊಯ್ಯುಲು ಯಂತ್ರೋಪಕರಣಗಳ ಪರಿಚಯದಿಂದಾಗಿ, ಕಾಡುಗಳಲ್ಲಿ ದೈಹಿಕ ಪರಿಶ್ರಮದ ಬೇಡಿಕೆಯೂ ಕಡಮಿಯಾಗುತ್ತಿದೆ. ಗುತ್ತಿಗೆದಾರರು



ಈ ವನವಾಸಿಗಳನ್ನು ತೀರಾಕಡಿಮೆ ಕೂಲಿಗೆ ಗೊತ್ತುಮಾಡಿಕೊಳ್ಳುತ್ತಾರೆ ಮತ್ತು ಅವರಿಗೆ ಯಾವುದೇ ಕೆಲಸವೂ ಇಲ್ಲದಿರುವಾಗ ಅವರನ್ನು ಕೂಲಿಗೆ ಗೊತ್ತುಮಾಡಿಕೊಂಡು, ಸ್ವಲ್ಪವಾದರೂ ಕೆಲಸ ಒದಗಿಸುತ್ತಿದ್ದೇವೆಂದು ಅವರಿಗೆ ಉಪಕರಿಸುತ್ತಿದ್ದೇವೆಂದು ಗುತ್ತಿಗೆದಾರರು ತೃಪ್ತರಾಗುತ್ತಾರೆ (ಸಂತುಷ್ಟರಾಗುತ್ತಾರೆ). ಸಂವಿಧಾನವು 'ಬೇಗಾರ್' ಅನ್ನು – ಒತ್ತಾಯ ಪೂರ್ವಕ ಪರಿಶ್ರಮ–ವನ್ನು ರದ್ದುಪಡಿಸಿರಬಹುದು ಆದರೆ ಅರಣ್ಯ ಇಲಾಖೆ ಅದನ್ನು ರದ್ದುಪಡಿಸಿಲ್ಲ. ಆ ವ್ಯವಸ್ಥೆಗೆ ಸಂಬಂಧಿಸಿದ, ಸರಿಹೊಂದುವಂತಿದ್ದ ಯಾವುದೇ ಸವಲತ್ತುಗಳು, ಬಾಧ್ಯತೆಗಳು ಯಾವುವೂ ಈಗ ಅಲ್ಲಿ ಇರದಿದ್ದಾಗಲೂ ಕೂಡಾ ಅಧಿಕಾರಿಗಳು ಈ 'ಬೇಗಾರ್' ಪದ್ಧತಿಯನ್ನು ಉಳಿಸುವುದು ತಮ್ಮ ಕರ್ತವ್ಯವೆಂದು ಭಾವಿಸುತ್ತಾರೆ. ಈ ಜನಗಳು ಸರಳ ಜೀವಿಗಳು, ಅವರ ಅವಶ್ಯಕತೆಗಳು ತೀರಾ ಕಡಿಮೆ, ಏನೇನೂ ಇಲ್ಲವೆಂದರೂ ನಡೆಯುತ್ತದೆ, ಆದರೆ ಅವರ ಸಂಪನ್ಮೂಲಗಳು ಇನ್ನೂ ಕಡಿಮೆಯಾಗಿವೆ. ನಾನು ಕಳೆದ ಬಾರಿ ನಿಮಾಡ್‌ಗೆ ಪ್ರವಾಸ ಹೋಗಿದ್ದಾಗ ವನವಾಸಿಗಳಲ್ಲಿ ಎರಡು ಹೊತ್ತು ಹೊಟ್ಟೆ ತುಂಬ ಊಟ ಮಾಡುತ್ತಿದ್ದವರು ಕೇವಲ ಅಪವಾದವಾಗಿದ್ದರು. (ಕೆಲವರು ಮಾತ್ರ ಇದ್ದರು) ಎಂದು ಹೇಳಿದರು ನನಗೆ ಅದನ್ನು ನಂಬಲಾಗಲಿಲ್ಲ. ಆದರೆ ನನ್ನ ಸುತ್ತಲೂ ಕುಳಿತಿದ್ದವರ ಮುಖಗಳು ಆ ವಾಸ್ತವತೆಗೆ ನಂಬಿಕೆ ಬರುವಂತಹ ರುಜುವಾತಾಗಿದ್ದವು.

"ಜಮೀನನ್ನು ಕೊಡಿ" ಎನ್ನುವುದು ಕೇವಲ ಅವರ ಘೋಷಣಾ ವಾಕ್ಯವಾಗಿಲ್ಲ. ಅದು ಮರಣಾಸನ್ನರಾಗಿರುವ ಜನರ ಸ್ವಂತ ಅಸ್ತಿತ್ವಕ್ಕಾಗಿ ಹೊರಟಿರುವ ಕೂಗು. ಸಂವಿಧಾನವು ಪರಿಶಿಷ್ಟ ಗುಂಪಿಗೆ ವಿಶೇಷ ಪ್ರಾತಿನಿಧ್ಯವನ್ನು ನೀಡಿದೆ. ಅವರ ಕಲ್ಯಾಣ ಕಾರ್ಯಗಳಿಗಾಗಿ ನಿಗದಿಪಡಿಸಿರುವ ವಿಶೇಷ ಮುಡುಪಿಟ್ಟ ಹಣ ಸಂಗ್ರಹವಿದೆ. ಆದರೆ, ಈ ನಿಧಿಯ ಸಿಂಹಪಾಲು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರಿಗೆ ಸೇರುತ್ತದೆ. ಏಕೆಂದರೆ ಅವರು ತಮ್ಮ ಜೀವನವನ್ನು ಸಂಸ್ಥೀಕರಿಸಿಕೊಂಡಿದ್ದಾರೆ ಮತ್ತು ಸರ್ಕಾರವು ಅವರನ್ನು ಕೂಡ ಬುಡಕಟ್ಟು ಜನಾಂಗದವರೊಂದಿಗೆ ಸಮೀಕರಿಸುತ್ತದೆ. ಆಸ್ಟ್ರೇಲಿಯದವರು, ಸ್ಥಳೀಕರನ್ನು ಕಾಡುಗಳಿಗೆ ಓಡಿಸಿದರು, ಪ್ರಸಕ್ತ ಮಧ್ಯಪ್ರದೇಶದ ಸರ್ಕಾರವು ವನವಾಸಿಗಳನ್ನು ಕಾಡುಗಳಿಂದ ಹೊರಕ್ಕೆ ಅಟ್ಟುತ್ತಿದೆ.

ಭಾರತೀಯ ಜನಸಂಘದ ಧ್ವಜದಡಿಯಲ್ಲಿ ವನವಾಸಿಗಳು ಸಂಘಟಿತರಾಗುತ್ತಿರುವುದು ಹೆಚ್ಚು ತೃಪ್ತಿಕರವಾದ ಸಂಗತಿ. ಥಾಕರ್ ಬಾಪಾ ಮತ್ತು ಆದಿಮಜಾತಿ ಸೇವಾ ಸಂಘ ಅವರುಗಳಿಂದ ನಡುವೆ ಒಮ್ಮೆ ಉತ್ತಮ ಕಾರ್ಯನಿರ್ವಹಿಸಲ್ಪಟ್ಟಿತ್ತು. ಆದರೆ ಸ್ವಾತಂತ್ರ್ಯ ದೊರಕಿದ ನಂತರ, ಆದಿಮ ಜಾತಿ ಸಂಘವು, ಕಾಂಗ್ರೆಸ್‌ಗೆ ಸೇರಿಕೊಂಡಿದ್ದ ಸಂಸ್ಥೆಗಳಿಗಿಂತಲೂ ಹೆಚ್ಚು ಉತ್ತಮವೆಂದು

ಸಾಬೀತಾಗಲಿಲ್ಲ. ನಿಸ್ವಾರ್ಥಿ ಹಾಗೂ ಸೇವಾ ಮನೋಧರ್ಮದ ಕಾರ್ಯಕರ್ತರು, ಈ ಕಾರಣದಿಂದಾಗಿಯೇ, ತಮ್ಮ ಧ್ಯೇಯವನ್ನು ಸಾರ್ಥಕಪಡಿಸಿಕೊಳ್ಳಲು ಭಾರತೀಯ ಜನ ಸಂಘದೆಡೆಗೆ ತಿರುಗುತ್ತಿದ್ದಾರೆ. ವನವಾಸಿಗಳು, ಕಾಡು ಕಡಿದ ಕಾಡಿನ ಪ್ರದೇಶಗಳಲ್ಲಿ ಉಳುವ ಮೂಲಕ ಸತ್ಯಾಗ್ರಹ ಮಾಡಿದರು ಹಾಗೂ ಅನೇಕ ಮೋರ್ಚಾಗಳನ್ನು ಸಂಘಟಿಸಿದರು. ಸರ್ಕಾರವು ದಮನದ ನೀತಿಯನ್ನು ಅನುಸರಿಸುತ್ತಿದೆ. ಧನುರ್ವಿದ್ಯೆಯಲ್ಲಿ ಅತ್ಯಂತ ಪರಿಣತರಾಗಿರುವ ಈ ಜನರು, ಶಾಂತರೀತಿಯ ಸತ್ಯಾಗ್ರಹದ ದಾರಿಯನ್ನು ಅನುಸರಿಸುವುದು ಕಠಿಣವೆಂದು ಆತಂಕಪಡಲಾಗಿತ್ತು. ಆದರೆ, ಈ ಜನರು ಅತ್ಯಂತ ಶಾಂತ ರೀತಿಯಲ್ಲಿ ವರ್ತಿಸುತ್ತಿರುವುದರ ಕೀರ್ತಿಯು ಸಂಘಟಕರಿಗೆ ಸೇರುತ್ತದೆ. ಅವರು ಪ್ರಹ್ಲಾದನ ದಾರಿಯನ್ನು ಅನುಸರಿಸುತ್ತಿದ್ದಾರೆ. ಮತ್ತು ಸರ್ಕಾರವು ಹಿರಣ್ಯಕಶಿಪುವಿನಂತೆ ವರ್ತಿಸುವುದನ್ನು ಮುಂದುವರಿಸಿದರೆ, ಕಾಡಿನಿಂದ ನರಸಿಂಹನ ಆಗಮನವು ಖಚಿತವಾಗಿಯೂ ಆಗುತ್ತದೆ. ಈ ಜನರ ಜಾನಪದ ನೃತ್ಯದ ಪ್ರದರ್ಶನ ಏರ್ಪಡಿಸುವ ಬದಲು ಸರ್ಕಾರವು ಅವರು ಕೂಡ ಮನುಷ್ಯರ ಅಸ್ತಿತ್ವ ಉಳ್ಳವರು, ಮನುಷ್ಯರಂತೆ ಬದುಕುವವರು ಎಂಬುದನ್ನು ಕಂಡುಕೊಳ್ಳಲಿ. ಅವರಿಗೆ ಆಧುನಿಕ ಸೌಲಭ್ಯ, ಸೌಕರ್ಯಗಳೇನೂ ಬೇಕಾಗಿಲ್ಲ. ನಿಜಹೇಳಬೇಕೆಂದರೆ ಈ ಆಧುನಿಕತೆಯು ಅವರನ್ನು ಅವರ ಇರುವಿಕೆಯಿಂದ (ಅಸ್ತಿತ್ವದಿಂದ) ಹೊರಕ್ಕೆ ತಳ್ಳುತ್ತಿದೆ. ಅವರನ್ನು ಶಾಂತವಾಗಿ ಜೀವಿಸಲು ಬಿಡಿ.

ಆ ಪ್ರಾಂತ್ಯದಲ್ಲಿ, ಇಟಾರ್ಸಿಯ ಅಧಿವೇಶನವು ಜನಸಂಘದ ಇತಿಹಾಸದಲ್ಲಿ ಒಂದು ಹೆಗ್ಗುರುತಾಗಿದೆ. ಸಮ್ಮೇಳನವು ಒಪ್ಪಿಕೊಂಡ ಕಾರ್ಯಕ್ರಮಗಳು ಕಾರ್ಯಗತವಾದರೆ, ಮುಂದಿನ ಚುನಾವಣೆಗಳಲ್ಲಿ, ಪ್ರಾಂತ್ಯದ ಭವಿಷ್ಯದ ವ್ಯವಸ್ಥೆಯನ್ನು ಪ್ರಭಾವಿಸುವಂತಹ, ಭದ್ರಸ್ಥಾನ ಪಡೆದು ಜನಸಂಘವು ಸಮರ್ಥಶಕ್ತಿಯಾಗಿ ಹೊರಹೊಮ್ಮುತ್ತದೆಂದು ನಾನು ಭರವಸೆಯಿಂದ ಹೇಳಬಲ್ಲೆ.

(೧೯೬೦ರ ನವೆಂಬರ್ ೨೧)



## ಫೋರ್ಡ್ ಸಂಸ್ಥೆ ಮತ್ತು ಗೋಹತ್ಯೆ

ಪ್ರಬಲ ಟೀಕೆಗಳು ಹಾಗೂ ಪುರಾವೆಗಳಿಂದ ಸಿದ್ಧಪಡಿಸಬಹುದಾದ ವೈಫಲ್ಯಗಳ ನಡುವೆಯೂ, ಈಗಾಗಲೇ ನಮ್ಮಲ್ಲಿ ಅಸ್ತಿತ್ವದಲ್ಲಿರುವ ಜ್ಞಾನದ ಸಂಪತ್ತಿಗೆ ಹೊಸದಾಗಿ ಏನನ್ನೂ ಸೇರಿಸಲಾಗದಂತಹ ವಿಷಯಗಳಲ್ಲಿಯೂ ಸಹ, ಸರ್ಕಾರವು ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ವಿದೇಶೀ ಮೂಲಗಳನ್ನು ಆಕರ್ಷಿಸುವುದು, ಅದರ ಮೇಲೆ ಅವಲಂಬಿಸುವುದನ್ನು ಮುಂದುವರಿಸುತ್ತಿದೆ. ಯಾವಾಗ, ಯಾವುದೇ ಸಮಸ್ಯೆ ತಲೆಯೆತ್ತಿದರೂ, ಸರ್ಕಾರವು ಯಾವುದಾದರೂ ವಿದೇಶಗಳಿಗೆ ಒಂದು ನಿಯೋಗವನ್ನು ತಪ್ಪದೇ ಕಳಿಸುತ್ತದೆ ಅಥವಾ ವಿದೇಶೀತಜ್ಞರನ್ನು ವರದಿ ಮಾಡಲು, ಶಿಫಾರಸು ನೀಡಲು ಆಹ್ವಾನಿಸುತ್ತದೆ. ಈ ಶಿಫಾರಸುಗಳ ವೈಯಕ್ತಿಕ ಅರ್ಹತೆಗಳು ಏನೇ ಇರಬಹುದಾದರೂ, ಅವು ವಿಷಯದ– ವಸ್ತುವಿನ– ಸುಸಂಘಟಿತವಾದ ದೃಷ್ಟಿಕೋನವನ್ನು ಪಡೆಯುವುದರಲ್ಲಿ ವಿಫಲವಾಗುತ್ತವೆಂಬುದು ಖಚಿತವಾಗಿರುತ್ತದೆ. ಪರಿಣತರು, ಅಸಮರ್ಪಕ ಮೌಲ್ಯಮಾಪನ ಮಾಡುತ್ತಾರೆಂದು ಅಲ್ಲದೇ ತಮ್ಮ ವಿಷಯಗಳ ಬಗೆಗೆ ಹೊರತು ಬೇರೆ ವಿಷಯಗಳನ್ನು ಸಂಪೂರ್ಣವಾಗಿ ಅಲಕ್ಷಿಸುತ್ತಾರೆ ಎಂಬುದು ಅವರ ಬಗೆಗೆ ಸಾಮಾನ್ಯವಾಗಿ ಹೇಳಲಾಗುತ್ತದೆ ಮತ್ತು ಆ ಪರಿಣತರು ವಿದೇಶೀಯರಾಗಿದ್ದಲ್ಲಿ, ತಾವು ಯಾರಿಗೆ ಸಲಹೆ ನೀಡುತ್ತಾರೆಯೋ ಆ ಜನರನ್ನು ತಿಳಿದು ಕೂಡ ಇರುವುದಿಲ್ಲ. ಅವರ ವರದಿಯು ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದುದಾದರೆ, ಅದನ್ನು ಕಾರ್ಯಗತಗೊಳಿಸುವುದರಲ್ಲಿ ಹೆಚ್ಚು ತೊಂದರೆಯೇನೂ ಆಗಲಾರದು. ಆದರೆ, ವಿಷಯವು ಅಗಾಧ ಸಂಖ್ಯೆಯ ಜನರ ವೈಯಕ್ತಿಕ ಗಮನದ ಅವಶ್ಯಕತೆಯಿರುವಂತಹುದಾದರೆ, ಅವರು ಖಂಡಿತವಾಗಿಯೂ ತಮ್ಮ ನಿಯೋಜಿತ ಕಾರ್ಯದಲ್ಲಿ ವಿಫಲರಾಗುತ್ತಾರೆ. ಏಕೆಂದರೆ, ಅವರಲ್ಲಿ ಸ್ಥಳೀಯ ನಡೆನುಡಿಗಳ ಆಪ್ತ–ನಿಕಟ– ತಿಳಿವಳಿಕೆಯ ಕೊರತೆಯಿರುತ್ತದೆ. ಫೋರ್ಡ್ ಸಂಸ್ಥೆಯ ತಂಡವು ಭಾರತದಲ್ಲಿ ಕೃಷಿ ಉತ್ಪಾದನೆಯ ಬಗೆಗೆ ನೀಡಿರುವ ವರದಿಯ ಇದೇ ಕೊರತೆಯಿಂದ ಸೊರಗುತ್ತದೆ.

ಆ ತಂಡದ ಸಂಪೂರ್ಣ ವರದಿಯನ್ನು ನಾವು ಇಲ್ಲಿ ಪರೀಕ್ಷಿಸಲು ಇಚ್ಛಿಸುವುದಿಲ್ಲ, ಆದರೆ ಭಾರತದಲ್ಲಿನ ಜಾನುವಾರು ಸಮಸ್ಯೆಗೆ ಸಂಬಂಧಿಸಿದಂತೆ ಅವರ ಶಿಫಾರಸುಗಳ ಬಗೆಗೆ ಮಾತ್ರ ಇಲ್ಲಿ ವ್ಯವಹರಿಸಲು ಉದ್ದೇಶಿಸುತ್ತೇವೆ.

ದೇಶದಲ್ಲಿ ಜಾನುವಾರುಗಳ ಪ್ರಗತಿಪರ ಇಳಿತಾಯಕ್ಕೆ ಆ ತಂಡವು ಸಲಹೆ ನೀಡಿದೆ. ಈ ಗುರಿಯ ಸಾಧನೆಗಾಗಿ ನಿಷ್ಪ್ರಯೋಜಕವಾದ ಜಾನುವಾರುಗಳ ಸಂಪೂರ್ಣ ಹತ್ಯೆಯ ಜೊತೆಗೆ ಅವರು ಈ ಮುಂದಿನ ಕ್ರಮಗಳನ್ನು ಸೂಚಿಸಿದ್ದಾರೆ :

(ಅ) ಜಾನುವಾರುಗಳ ಸಂಖ್ಯೆಯನ್ನು ಆಹಾರ ಸರಬರಾಜಿನೊಡನೆ ಸಮತೋಲನದಲ್ಲಿಡುವ ದೃಷ್ಟಿಯಿಂದ, ಅಂತಹ ಪ್ರಾಣಿಗಳನ್ನು ಸಾಕುವುದು ಅವುಗಳ ಮಾಲಿಕರಿಗೆ ಹೊರೆಯನ್ನಾಗಿ ಮಾಡುವುದರ ಮೂಲಕ ಕೆಲವು ಸೂಕ್ತ ವಿನಾಯಿತಿಗಳೊಡನೆ ಪ್ರಾಣಿಗಳಿಗೆ ಅನುಕ್ರಮವಾಗಿ ತೆರಿಗೆ ವಿಧಿಸುವುದು.

(ಆ) ಸಹಜಸೇವೆಗಾಗಿ ಇರುವ ಎಲ್ಲ ಗೂಳಿಗಳಿಗೂ ಒತ್ತಾಯಪೂರ್ವಕವಾಗಿ ಬಂಧಿಸಿಡುವುದು.

(ಇ) ತಳಿ ಅಭಿವೃದ್ಧಿಗಾಗಿ – ತಳಿ ಬೆಳೆಸಲು– ಅವಶ್ಯಕವಿಲ್ಲದ ಎಲ್ಲ ಹರೆಯದ ಗೂಳಿಗಳಿಗೂ ಬೀಜ ಒಡೆಯುವುದು ಕಡ್ಡಾಯವಾಗಬೇಕು.

(ಈ) ಹೆಚ್ಚುವರಿಯಿರುವ ಹಸುಗಳಿಗೂ ಮತ್ತು ಒಂದಕ್ಕಿಂತಲೂ ಹೆಚ್ಚು ಕರುವನ್ನು ಹಾಕದಿರುವ ಹಸುಗಳಿಗೆ ಒತ್ತಾಯವಾಗಿ ಸಂತಾನಶಕ್ತಿ ಹರಣ ಮಾಡಿ ಗೊಡ್ಡುಮಾಡುವುದು.

(ಉಇ) ಮೈದಾನ ಅಥವಾ ಬಯಲಿನಲ್ಲಿ ಮೇಯುವುದನ್ನು ನಿಷೇಧಿಸುವ ಕಾನೂನನ್ನು ಜಾರಿಗೆ ತರುವುದರ ಸೂಚನೆಯ ಬಗೆಗೆ ಪರೀಕ್ಷೆ ನಡೆಸಬೇಕಾಗಿದೆ; ಪ್ರಾಣಿಗಳನ್ನು ವ್ಯವಸಾಯ ಕ್ಷೇತ್ರದ ಆವರಣಗಳಲ್ಲಿಯೇ ಇಟ್ಟುಕೊಂಡು ಸಾಕಲು ಒತ್ತಾಯಿಸುವುದರಿಂದ ಜಾನುವಾರು ಸಂಖ್ಯೆಯನ್ನು ನಿಯಂತ್ರಣದಲ್ಲಿಡಲು ಸಹಾಯವಾಗುತ್ತದೆ.

ಈ ಶಿಫಾರಸುಗಳು ಖಂಡಿತವಾಗಿಯೂ, ಭಾರತದಲ್ಲಿ ಗೋವಿಗಿರುವ ಸಮಾಜೋ–ಆರ್ಥಿಕ ಪ್ರಾಮುಖ್ಯತೆಯನ್ನು ಅಲಕ್ಷಿಸುತ್ತವೆ. ಪಾಶ್ಚಿಮಾತ್ಯರು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದಂತಹ, ಪ್ರಬಲವಾದ, ಪ್ರಗಾಢವಾದ ಮನೋಭಾವವು, ಭಾರತದಲ್ಲಿ ಗೋವುಗಳ ಬಗೆಗೆ ಇರುವುದನ್ನು ಈ ತಂಡವು ಗುರುತಿಸಿದೆಯಾದರೂ, ಕೆಲವು ಪಾಶ್ಚಾತ್ಯ ಮನೋಭಾವ ತಳೆದವರ ಅಧಿಕಾರ, ನೈಪುಣ್ಯತೆಗಳಿಂದಾಗೀ, ಅದ್ದರಿಂದ– ರಾಷ್ಟ್ರೀಯತೆಯನ್ನು ಬಿಟ್ಟ ಭಾರತೀಯರನ್ನು (ನಾವು ಹೇಳಬೇಕೆ?) ವಿಸ್ತಾರವಾಗಿ ಉದ್ಧರಿಸುತ್ತಾ ಗೋಹತ್ಯೆಯ ಪರವಾಗಿ ಸಲಹೆ ನೀಡುವುದರಲ್ಲಿ ಈ ತಂಡವು ತನ್ನ ದಾರಿಯನ್ನು ಬಿಟ್ಟು ತಪ್ಪು ಹಾದಿ ಹಿಡಿದಿದೆ. ಈ ವಿಷಯದ ಬಗೆಗೆ ತನ್ನ 'ಮುಕ್ತ ಏಷಿಯಾದ ಅಭಿವೃದ್ಧಿ'ಯಲ್ಲಿ ಬರೆದಾಗ ಮಾರಿಸ್ ಜಿನಕನ್ ಸರಿಯಾಗಿ ಟೀಕೆ ಮಾಡಿದ್ದಾನೆ: "ಗೋಹತ್ಯೆಯು



ಪರಮ ಪಾಪವೆಂದೂ, ಗೋಹತ್ಯೆ ಮಾಡಿದವನು ಮುಂದಿನ ಜನ್ಮದಲ್ಲಿ ಪ್ರಾಣಿಯಾಗಿಯೇ ಹುಟ್ಟುವನೆಂದೂ ಒಬ್ಬ ಹಿಂದೂ ನಂಬುವುದಾದರೆ, ಹಾಲು ಕೊಡಲು ತೀರಾ ಮುದಿಯಾಗಿರುವ ಹಸು ಆಹಾರ ತಿನ್ನುತ್ತದೆ ಆದರೆ ಪ್ರತಿಫಲವಾಗಿ ಏನೂ ಕೊಡುವುದಿಲ್ಲ ಎಂದು ಅರ್ಥಶಾಸ್ತ್ರಜ್ಞರು ಹೇಳುವ ಮಾತುಗಳತ್ತ ಗಮನ ಸೆಳೆಯುವುದು ಅಪ್ರಸ್ತುತವಾಗುತ್ತದೆ, ಇಂಗ್ಲೀಷ್ ಉಪನಗರದ ಗೃಹಿಣಿಯೊಬ್ಬಳಿಗೆ ನಿನ್ನ ನಾಯಿಯು ತಿನ್ನುವ ಮಾಂಸವು ಬ್ರಿಟನ್ನಿನ ಪಾವತಿಯ ಸಮತೋಲನವನ್ನು ಹಾಳು ಮಾಡುತ್ತದೆಯಾಗಿ ನಿನ್ನ ನಾಯಿಯನ್ನು ಕೊಂದುಬಿಡು ಎಂದು ಹೇಳುವ ವಾದದಷ್ಟೇ ಸಮಯದ ನಷ್ಟವಾಗುತ್ತದೆ."

ಈ ರೀತಿಯ ಪ್ರಬಲವಾದ ಭಾವನೆಗಳಿದ್ದರೂ ಕೂಡ, ಹಿಂದೂ ಸಮಾಜ ಶಾಸ್ತ್ರದ ಆರ್ಥಿಕ ಸ್ವರೂಪವನ್ನು ಅಧ್ಯಯನ ಮಾಡದಿರುವ ಅರ್ಥಶಾಸ್ತ್ರಜ್ಞರು, ಪದೇ ಪದೇ ಗೋಹತ್ಯೆಯನ್ನು ಶಿಫಾರಸು ಮಾಡುವ ಧಾರ್ಷ್ಟ್ಯ ತೋರಿಸುತ್ತಾರೆ. ಅವಾಸ್ತವವಾಗಿರುವುದರಿಂದಾಗಿ ಅವರ ಶಿಫಾರಸು ಎಲ್ಲ ಶಕ್ತಿಯನ್ನೂ ಕಳೆದುಕೊಳ್ಳುತ್ತದೆ. ಮತ್ತು ಇಂತಹ ತಜ್ಞರನ್ನು ನಮ್ಮ ಸಮಸ್ಯೆಗಳನ್ನು ಶೋಧಿಸಲು– ವಿಶ್ಲೇಷಿಸಲು– ಗೊತ್ತುಮಾಡಿಕೊಳ್ಳುವುದು ಹಣ ಹಾಗೂ ಸಮಯದ ತೀರಾ ನಷ್ಟ ಮಾತ್ರ.

ಹಿಂದೂಗಳಲ್ಲಿ ಗೋವಿನೊಡನೆ ಇಷ್ಟೊಂದು ಗಾಢವಾಗಿ ಬೆಸೆದಿರುವುದು ಕೇವಲ ಭಾವನೆಗಳನ್ನು ಮಾತ್ರವಲ್ಲ. ಭಾರತೀಯ ಅರ್ಥಶಾಸ್ತ್ರದ ಅಡಿಗಲ್ಲು ಗೋವುಗಳೇ ಆಗಿವೆ. ವಿದೇಶಿ ಸಂದರ್ಶಕರು ಅಥವಾ ವಿದೇಶಗಳಿಗೆ ಭೇಟಿ ನೀಡುವ ನಮ್ಮ ಜನರು, ಈ ವಾಸ್ತವ ಸಂಗತಿಯನ್ನು, ಅತಿ ಸುಲಭವಾಗಿ – ಅನುಕೂಲಕರವೆಂಬಂತೆ– ಮರೆತೇಬಿಡುತ್ತಾರೆ. ಆದರೆ, ಹಸುಗಳು ಇರದಿದ್ದಿದ್ದರೆ, ನಮ್ಮ ವ್ಯವಸಾಯವು ಸಾಧ್ಯವಾಗುತ್ತಲೇ ಇರಲಿಲ್ಲವೆಂಬುದನ್ನು, ಭಾರತದಲ್ಲಿರುವ ನಾವು ತಿಳಿದಿದ್ದೇವೆ. ಸುಮಾರು ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ, ಕಾನೂನಿಂದ ಕ್ರಮಬದ್ಧಗೊಳಿಸದೆ ವಸ್ತುಶಃ ಯಾವುದೇ ಅಡೆತಡೆಯಿಲ್ಲದೇ ಜಾನುವಾರುಗಳ ಹತ್ಯೆಯು ನಡೆಯುತ್ತಲೇ ಇದೆ. ಕಟುಕನ ಕತ್ತಿಯ ಮೊನೆಯಿಂದ ಇಷ್ಟು ದೀರ್ಘಕಾಲದವರೆಗೂ ಹಸುಗಳು ಇನ್ನೂ ಉಳಿದಿವೆಯೆಂದರೆ, ಅದು ಅವುಗಳ ಆರ್ಥಿಕ ಪ್ರಾಮುಖ್ಯತೆಯಿಂದ ಮಾತ್ರ. ಅಲ್ಲದೇ, ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಒತ್ತಾಯ ಮಾಡುವವರು ಕೂಡ ಆರ್ಥಿಕ ನೆಲೆಯ ಮೇಲಿನಿಂದಲೇ ಹಾಗೆ ಕೇಳುತ್ತಾರೆ. ನಮ್ಮ ಜಾನುವಾರು ಸಂಪತ್ತಿನ ಹದಗೆಡುವಿಕೆ, ಕ್ಷೀಣವಾಗುವಿಕೆ ಮತ್ತು ಕುಗ್ಗುವಿಕೆಗಳು ನಮ್ಮ ದೇಶದ ಅರ್ಥವ್ಯವಸ್ಥೆಯನ್ನು ಹಾಳುಮಾಡಿವೆ. ನಾವು ಅದನ್ನು ಪುನಃ ನಿರ್ಮಿಸಬೇಕಾದರೆ ತಳಪಾಯವನ್ನು ಪುನಃ ನಿರ್ಮಿಸುವುದರಿಂದ ಮಾತ್ರ ಮಾಡಬಲ್ಲೆವು. ಹಸುಗಳು

ಮತ್ತು ಎತ್ತುಗಳಿಗೆ, ಎಂದಿನಿಂದಲೂ ನಮ್ಮ ಸಮಾಜದಲ್ಲಿ ಇದ್ದ ಪ್ರಮುಖ ಸ್ಥಾನವನ್ನು ಮರು ಸ್ಥಾಪಿಸದಿದ್ದರೆ, ವ್ಯವಸಾಯ ಅಭಿವೃದ್ಧಿಗೆ ರೂಪಿಸಿರುವ ಯೋಜನೆಗಳಿಗೆ ಅರ್ಥವೇ ಇರುವುದಿಲ್ಲ.

ಈ ತಂಡವು ನಮ್ಮ ಎತ್ತುಗಳಿಗಿರುವ ಸ್ಥಾನವನ್ನು ಪ್ರಶಂಸಿಸಿದೆ. ಅದು ಹೀಗೆ ಬರೆಯುತ್ತದೆ: "ತಮ್ಮ ಶಕ್ತಿ, ವೇಗ, ಮತ್ತು ಶ್ರಮಸಾಧ್ಯತೆ, ಸಹಿಷ್ಣುತೆಗಳಿಗಾಗಿ ಭಾರತದ ಎತ್ತುಗಳು ವಿಶ್ವವ್ಯಾಪಕವಾದ ಮನ್ನಣೆ ಪಡೆದಿವೆ. ಹೆಚ್ಚು ಭಾರ ಎಳೆಯುವಂತಹ ಸುಧಾರಿತ ತಳಿಗಳು ಕೃಷಿಕ್ಷೇತ್ರದ ಕಾರ್ಯನಿರ್ವಹಣೆಯಲ್ಲಿ ಮೂಲಾಧಾರವಾಗಿ ಮುಂದುವರಿಯುತ್ತವೆ." ಆದರೆ ಅದು ಹೀಗೆ ಮುಂದುವರಿಸಿದಾಗ, ಆ ಅಭಿಪ್ರಾಯವು ನಮ್ಮ ಗ್ರಹಿಕೆಗೆ ಮೀರಿದುದಾಗುತ್ತದೆ. 'ಆದರೂ, ಜಮೀನಿನ ಮೇಲೆ ಹೆಚ್ಚಾಗಿರುವ ಒತ್ತಡದಿಂದಾಗಿ, ಕೃಷಿಕ್ಷೇತ್ರದ ಶಕ್ತಿ, ನಿಯಂತ್ರಣಗಳ ಬದಲಿ ಮೂಲವೊಂದರ ಬಗೆಗೆ ಗಂಭೀರವಾದ ಅಧ್ಯಯನವು ತೀವ್ರ ಅಗತ್ಯವಿದೆ. ಕೃಷಿಕ್ಷೇತ್ರಗಳ ವಿವಿಧ ಮಾದರಿ ಮತ್ತು ವಿವಿಧ ಆಕಾರ ಪ್ರಮಾಣಗಳ ಅವಶ್ಯಕತೆಯನ್ನು ಪೂರೈಸುವಂತಹ ಸಣ್ಣ ಸಣ್ಣ ಟ್ರಾಕ್ಟರುಗಳ ಸೂಕ್ತತೆಯ ಬಗೆಗೆ, ಉಳುಮೆಯ ಅವಶ್ಯಕತೆ, ಅಭ್ಯಾಸ ಮತ್ತು ನಿರ್ವಹಣಾ ವೆಚ್ಚಗಳ ಬಗೆಗೆ ಪರಿಶೀಲನಾ ಕಾರ್ಯ ನಡೆಯಬೇಕಾಗಿದೆ."

ಈ ಶಿಫಾರಸನ್ನು ಮಾಡಿದಾಗ, ವಾಸ್ತವವಾಗಿ ರಹಸ್ಯವು ಬಯಲಾಗಿದೆ. ತನ್ನ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿರುವ ಅಮೇರಿಕಾದ ಕೈಗಾರಿಕಾ ವಲಯವೇ ಇದರ ಹಿಂದಿರುವುದು. ಎತ್ತುಗಳು ಜಮೀನುಗಳಲ್ಲಿ ಉಳುತ್ತಿರುವವರೆಗೂ ಭಾರತದಲ್ಲಿ ಟ್ರಾಕ್ಟರ್‌ಗಳನ್ನು ಉಪಯೋಗಿಸಲು ಸಾಧ್ಯವಿಲ್ಲ. ಆದ್ದರಿಂದ ಅವುಗಳನ್ನು ಮುಗಿಸಿಬಿಡಬೇಕು(ಕೊಂದುಬಿಡಬೇಕು), ಆಗ ಭಾರತೀಯ ರೈತನಿಗೆ ಯಂತ್ರಗಳನ್ನು ಬಿಟ್ಟು ಬೇರೆ ಬದಲಿ ವ್ಯವಸ್ಥೆಯೇ ಇರುವುದಿಲ್ಲ. ಮ್ಯಾಂಚೆಸ್ಟರ್ ಮತ್ತು ಲಂಕಾಷೈರ್‌ಗಳಲ್ಲಿಯ ನೇಯ್ಗೆ ಮಿಲ್ಲುಗಳಲ್ಲಿನ ತಮ್ಮ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ, ಆ ಮಿಲ್ಲುಗಳ ಉಳಿವಿಗೋಸ್ಕರ, ಬ್ರಿಟಿಷರು ನಮ್ಮ ನೇಕಾರರ ಕೈಗಳನ್ನು ಕತ್ತರಿಸಿದುದನ್ನು ಇದು ನೆನಪಿಸುತ್ತದೆ. ಭಾರತದಲ್ಲಿ ಅಮೇರಿಕಾದ ಕೈಗಾರಿಕೆಯ ಬೆಳವಣಿಗೆಗೆ ಅಡ್ಡಿಯಾಗುವುದರಿಂದ ಜಾನುವಾರು ಸಂತತಿಯು ನಿಷ್ಪ್ರಯೋಜಕವೆಂದು ಅವರ ತೀರ್ಮಾನವಾಗಿದೆ.

ಜಮೀನಿನ ಉತ್ಪನ್ನಕ್ಕಾಗಿ ಮನುಷ್ಯ ಮತ್ತು ಜಾನುವಾರುಗಳಲ್ಲಿ ಸ್ಪರ್ಧೆಯಿರುತ್ತದೆ ಎಂಬ ಸಿದ್ಧಾಂತದ ಮೇಲೆ, ಈ ತಂಡವು ತನ್ನ ವಾದವನ್ನು ಆಧರಿಸುತ್ತದೆ. ಮನಷ್ಯನನ್ನು ಉಳಿಸುವುದಕ್ಕಾಗಿ ಅವರು ಜಾನುವಾರು ಹತ್ಯೆಯ ಸಲಹೆ ನೀಡುತ್ತಾರೆ. ಅಂತಹ ಸ್ಪರ್ಧೆಯಲ್ಲಿಯಾದರೂ ಇದೆಯೇ ಎಂಬುವುದರ ಬಗೆಗೆ ನಾವಿಲ್ಲಿ ಪ್ರಶ್ನಿಸಲು



ಹೋಗುವುದಿಲ್ಲ. ನಾವು ಹೇಳಲೇಬೇಕಾಗಿರುವ ಒಂದು ವಿಷಯವೆಂದರೆ, ಸೃಷ್ಟಿಯಲ್ಲಿನ ಈ ಸ್ಪರ್ಧಾಸಿದ್ಧಾಂತದ ಬಗೆಗೆ ಭಾರತೀಯ ಸಾಮಾಜಿಕಶಾಸ್ತ್ರಜ್ಞರು ಯಾವುದೇ ಒಲವು ತೋರುವುದಿಲ್ಲ. ನಮ್ಮ ಅಭಿಪ್ರಾಯದಂತೆ, ಸೃಷ್ಟಿಯ ನಿಯಮವು ಸ್ಪರ್ಧಾತ್ಮಕ ಎನ್ನುವುದಕ್ಕಿಂತಲೂ ಹೆಚ್ಚಾಗಿ ಸಹಕಾರಾತ್ಮಕವಾಗಿದೆ. ಯಾವುದಾದರೂ ಕೊರತೆಯಿಂದಾಗಿ ಏನಾದರೂ ಅವ್ಯವಸ್ಥೆಯಿದ್ದರೆ, ಅಂತಹ ಸ್ಥಿತಿಯಲ್ಲಿ ಸಹಕಾರವನ್ನು ಸ್ಥಾಪಿಸುವುದು ನಾಗರಿಕತೆಯಲ್ಲಿ ಅಂತರ್ಗತವಾಗಿರುವ ಸತ್ವವಾಗಿರುತ್ತದೆ. ದೇಶದಲ್ಲಿ ಜಾನುವಾರು ಮತ್ತು ಮನುಷ್ಯರ ಜನಸಂಖ್ಯೆಯಲ್ಲಿ ಸ್ಪರ್ಧೆಯಿದ್ದರೆ, ಆ ಎರಡನ್ನೂ ಪರಸ್ಪರ ಪೂರಕವಾಗಿ ಮಾಡುವ ಮೂಲಕ, ಅಂತಹ ಸ್ಪರ್ಧೆಯನ್ನು ತೊಡೆದು ಹಾಕುವುದೇ ಹೊರತು, ಒಂದನ್ನೋ ಅಥವಾ ಮತ್ತೊಂದನ್ನೋ ಕೊಲ್ಲುವುದರಿಂದಲ್ಲ. ಯಾವಾಗಲೂ ಪ್ರಕೃತಿಯನ್ನು ಅನುಸರಿಸುವುದರಿಂದ ಮಾತ್ರವೇ ವಸ್ತುಸ್ಥಿತಿಯನ್ನು ಉತ್ತಮಗೊಳಿಸಲು ಸಾಧ್ಯ ಮತ್ತು ಇದು ಹೆಚ್ಚು ಸುಲಭ ಕೂಡ, ಆದರೆ ಪ್ರಕೃತಿಯನ್ನು ಧಿಕ್ಕರಿಸುವುದರಿಂದ ಅಲ್ಲ ಎಂದು ನಾವು ಆಲೋಚಿಸುತ್ತೇವೆ.

(೧೯೫೮ ನವೆಂಬರ್ ೩೦)

# ರಾಜ್ಯದ ಮೇಲೆ ಹೆಚ್ಚುತ್ತಿರುವ ಅವಲಂಬನೆ

ಹೈದರಾಬಾದಿನಲ್ಲಿ ಭಾಷಣ ಮಾಡುವಾಗ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಜನರು ಪ್ರತಿಯೊಂದು ವಿಷಯಕ್ಕೂ ಸರ್ಕಾರದ ಕಡೆಗೇ ನೋಡುವುದರ ಬಗೆಗೆ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರು. ಜನರು ಸ್ವಾವಲಂಬಿಗಳಾಗಿರಬೇಕೆಂದೂ, ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸರ್ಕಾರವನ್ನು ಅವಲಂಬಿಸಬೇಕಾಗಿಲ್ಲವೆಂದೂ ಅವರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ, ಇದಕ್ಕೆ ಸಂಬಂಧಿಸಿದಂತೆ, ವ್ಯಕ್ತಿಯು ತನ್ನ ವೈಯಕ್ತಿಕತೆಯನ್ನು, ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಳ್ಳಬಹುದಾದ, ವಿಕೇಂದ್ರೀಕರಣಗೊಂಡ ವ್ಯವಸ್ಥೆಯನ್ನು ಶ್ಲಾಘಿಸಿದರು. ಸ್ವಾತಂತ್ರ್ಯಾನಂತರ ತಮ್ಮ ಕಾರ್ಯವು ಮುಗಿಯಿತೆಂದು, ಈಗ ಹೆಚ್ಚಾಗಿ ಕಾಡುತ್ತಿರುವ ಭಾವನೆಯನ್ನು ಬಿಟ್ಟುಬಿಡುವಂತೆಯೂ, ಮತ್ತು ತಮ್ಮ ಪ್ರಯತ್ನಗಳನ್ನು ಮುಂದುವರೆಸುವಂತೆಯೂ, ಅವರು ಸಾಮಾಜಿಕ ಕಾರ್ಯಕರ್ತರಿಗೆ ಒತ್ತಾಯಿಸಿದರು.

ಭಾರತೀಯ ಜೀವನ ಶೈಲಿಯ ಬಗೆಗೆ ಸ್ವಲ್ಪವಾದರೂ ತಿಳಿದಿರುವ ಪ್ರತಿಯೊಬ್ಬ ಚಿಂತನಶೀಲ ವ್ಯಕ್ತಿಯೂ, ಅಧ್ಯಕ್ಷರು ಹೇಳಿರುವುದನ್ನು ಸಮ್ಮತಿಸುತ್ತಾನೆ. ಹಿಂದೂ ಪರಿಕಲ್ಪನೆಯ ಪ್ರಕಾರ, ಸರ್ಕಾರಕ್ಕೆ ಬಹಳ ಪರಿಮಿತವಾದ ಕರ್ತವ್ಯಗಳಿರುತ್ತವೆ. ವ್ಯಕ್ತಿಯು ತನ್ನನ್ನು ತಾನು ತೊಡಗಿಸಿಕೊಳ್ಳುವಂತೆ ಆದೇಶಿಸಿರುವ ನಾಲ್ಕು ಪುರುಷಾರ್ಥಗಳಲ್ಲಿ ಕೇವಲ ಒಂದು ಭಾಗವನ್ನು ಮಾತ್ರವೇ ರಾಜಕಾರಣಕ್ಕೆ ನಿಯೋಜಿಸಿರುವುದರಿಂದಲ್ಲದೇ, ಸರ್ಕಾರ ಹಾಗೂ ಆಡಳಿತದ ಬಹುತೇಕ ಕಾರ್ಯಗಳು ಸ್ಥಳೀಯ ಮಟ್ಟದಲ್ಲಿಯೇ ನಿರ್ವಹಿಸಲ್ಪಡಬೇಕೆಂದು ಭಾವಿಸಲಾಗಿದೆ. ಆಡಳಿತದ ಪ್ರಾಯೋಗಿಕ ಕ್ಷೇತ್ರಕ್ಕಿಂತಲೂ ಹೆಚ್ಚಾಗಿ, ಭಾವನಾತ್ಮಕ ವಲಯದಲ್ಲಿ ಕೇಂದ್ರೀಕರಣವನ್ನು ಸಾಧಿಸುವುದನ್ನು ಗುರಿಯಾಗಿ ಹೊಂದಿದ್ದಿತು. ರಾಷ್ಟ್ರೀಯ ಮತ್ತು ಸಾಂಸ್ಕೃತಿಕವಾಗಿ ಅಂತರ್ಗತವಾಗಿದ್ದ ಐಕ್ಯತೆಯ ಪ್ರಜ್ಞೆಯು, ಆಯಾ ಸ್ಥಳೀಯ ಪ್ರಾದೇಶಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ವಿಭಿನ್ನ ರೀತಿಯಲ್ಲಿ ಅದು ತನ್ನನ್ನು ತಾನು ಅಭಿವ್ಯಕ್ತಪಡಿಸಿಕೊಂಡಿತು. ಇದು ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡಿದ್ದಲ್ಲದೇ ಎಲ್ಲಾ ಪ್ರಾದೇಶಿಕ ಮತ್ತು ಇತರ ಗುಂಪುಗಳಿಗೂ ಅವಕಾಶವನ್ನು ಒದಗಿಸಿತು. ಅಲ್ಲ –ಪ್ರತಿಯೊಬ್ಬ ವ್ಯಕ್ತಿಗೂ ಕೂಡ ಸಂಪೂರ್ಣ ಅಭಿವೃದ್ಧಿಗಾಗಿ ಅನುಕೂಲ ಒದಗಿಸಿತು. ಆದ್ದರಿಂದ, ಆಳವಿಲ್ಲದೆ, ಮೇಲುಮೇಲೆ ಪರಿಶೀಲಿಸುವವನಿಗೆ ಹಿಂದೂ



ಧರ್ಮವು, ಸುಸಂಬದ್ಧತೆ ಮತ್ತು ಐಕ್ಯತೆಗಳಿಂದ ಹೊರತಾಗಿದೆಯೆಂದು ತೋರಬಹುದಾದರೂ, ಅದು ವಿವರಗಳಲ್ಲಿ ಸಮೃದ್ಧವಾದ ಮತ್ತು ಅದರ ಚಿತ್ರಣದಲ್ಲಿ ವೈವಿಧ್ಯಮಯವಾದ ಚಿತ್ರವನ್ನು ಪರಿಚಯಿಸುತ್ತದೆ. ಆಧುನಿಕ ಪ್ರಪಂಚವು ಕೇವಲ ನೀರಸವಾದ ಅದರ ಯಾಂತ್ರಿಕ ಐಕ್ಯತೆಯನ್ನು ಗುರುತಿಸುತ್ತದೆ. ಐಕ್ಯತೆಯ ಮುಖ್ಯ ಲಕ್ಷಣವು ಏಕರೂಪತೆಯೆಂದು ಭಾವಿಸಲಾಗಿದೆ. ಯಾವುದೇ ಒಂದು ಜೀವಂತ ವ್ಯವಸ್ಥೆಯೊಳಗೆ, ಆಂತರಿಕ ಐಕ್ಯತೆಯು, ಏಕರೂಪದ ಮಾರ್ಗಗಳಲ್ಲಿ– ಶೈಲಿಗಳಲ್ಲಿ– ಎಂದೂ ಪ್ರಕಟಗೊಳ್ಳುವುದಿಲ್ಲ. ಒಂದು ಯಂತ್ರವು ಯಾವುದೇ ಸ್ಥಳದಲ್ಲಿಯಾದರೂ ಎಷ್ಟು ಬಾರಿಯಾದರೂ, ಅದೇ ಕ್ರಿಯೆಯನ್ನು ಪುನರಾವರ್ತಿಸಬಲ್ಲದು. ಆದರೆ ಒಬ್ಬ ಮಾನವ ಜೀವಿಯು ಹೀಗೆ ಯಾಂತ್ರಿಕವಾದ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಮರ್ಥನಾಗಿರುವುದಿಲ್ಲ.

ಇಂದು ಸರ್ಕಾರದ ಮೇಲೆ ಅತಿಯಾಗಿ ಅವಲಂಬನೆಯಿದೆ ಎಂದರೆ, ಅದಕ್ಕೆ ಹಲವಾರು ಕಾರಣಗಳಿವೆ ಮತ್ತು ಇವುಗಳಲ್ಲಿ ಅತ್ಯಂತ ಪ್ರಮುಖವಾದದ್ದನ್ನು ಕಾಂಗ್ರೆಸ್ಸಿನ ಸ್ವಾತಂತ್ರ್ಯ ಚಳುವಳಿ ಎಂದು ಗುರುತಿಸಬಹುದು. ನಾವು ವಿದೇಶೀ ಸರ್ಕಾರದ ಆಳ್ವಿಕೆಗೆ ಒಳಪಟ್ಟಿದ್ದಾಗ ನಮ್ಮ ಎಲ್ಲ ಕಷ್ಟ, ನಷ್ಟ, ಕೆಡುಕುಗಳಿಗೂ ಸರ್ಕಾರವನ್ನೇ ಜವಾಬ್ದಾರನನ್ನಾಗಿ ಮಾಡುವ ಅಭ್ಯಾಸವನ್ನು ಬೆಳೆಸಿಕೊಂಡೆವು. ರಾಷ್ಟ್ರೀಯ ನಾಯಕರು ಹಾಗೂ ಗ್ರಾಮೀಣ ಮುಂದಾಳುಗಳೂ ಮತ್ತು ಪುಡಾರಿಗಳು, ಜನರು ತಮ್ಮ ಸಮಸ್ಯೆ, ತೊಂದರೆಗಳಿಂದ ಬಿಡುಗಡೆ ಹೊಂದಬೇಕಾದರೆ, ಅವರು ಈ ವಿದೇಶೀ ಆಡಳಿತದ ನೊಗವನ್ನು ಕಿತ್ತು ಎಸೆಯಬೇಕೆಂದು ಜನರನ್ನು ಕೋರಿದರು. ಅತ್ಯಂತ ದಯಾಮಯವೂ, ಉದಾರವೂ, ನ್ಯಾಯಪೂರ್ಣವೂ, ಕರುಣಾಮಯಿಯೂ ಆದ ಸರ್ಕಾರದ ಆಡಳಿತವನ್ನು ಜನರು ಅನುಭವಿಸುತ್ತಿದ್ದಾರೆ ಎಂದು ಬ್ರಿಟಿಷರು ಅನೇಕ ವಿಧದ ಸೂಕ್ಷ್ಮ ಪ್ರಚಾರದ ಮೂಲಕ ಜನರನ್ನು ಪ್ರಭಾವಿಸಲು ಪ್ರಯತ್ನಿಸಿದರೆ, ರಾಷ್ಟ್ರೀಯವಾದಿಗಳು ಯಾವಾಗಲೂ ಆ ಸರ್ಕಾರವನ್ನು ಪೈಶಾಚಿಕ ಸರ್ಕಾರವೆಂದು ಬಣ್ಣಿಸಿದರು. ಹಾಗಾಗಿ, ಸ್ವಾತಂತ್ರ್ಯ ಪಡೆಯುವುದಕ್ಕೂ ಮುಂಚೆಯೇ, ಜನರ ನಿರೀಕ್ಷೆಗಳು ಮುಗಿಲುಮುಟ್ಟಿದ್ದವು. ಸರ್ಕಾರದಿಂದ ತಮಗೆ ಏನೇನು ಅವಶ್ಯಕತೆಯಿದೆಯೋ ಅವೆಲ್ಲವನ್ನೂ ಕೇಳುವಂತೆ ಅವರಿಗೆ ಹೇಳಲಾಯಿತು. ಗಾಂಧೀಜಿ ಮತ್ತು ಇತರ ನಾಯಕರು ಯಾವುದಾದರೂ ಸ್ವಯಂ ಸೇವಾ ಕಾರ್ಯ ಕೈಗೊಂಡರೆ, ಅದನ್ನು ಸಮಾನಾಂತರ ಸರ್ಕಾರ ಸ್ಥಾಪಿಸುವ ಕಾರ್ಯಕ್ಕೆ ಕೆಲವರು ಹೋಲಿಸುತ್ತಿದ್ದರು. ಅಸಹಕಾರ ಚಳವಳಿಯು ಪ್ರಾರಂಭಿಸಲ್ಪಟ್ಟಾಗ, ರಾಷ್ಟ್ರೀಯ ಶಾಲೆಗಳು ಮತ್ತು ರಾಷ್ಟ್ರೀಯ ವಿಶ್ವವಿದ್ಯಾಲಯಗಳು ಸ್ಥಾಪಿಸಲ್ಪಟ್ಟವು. ಸರ್ಕಾರದ ನಿಯಂತ್ರಣದಿಂದ ವಿದ್ಯಾಸಂಸ್ಥೆಗಳನ್ನು ಮುಕ್ತವಾಗಿಡುವುದರ ಬಗೆಗೆ ರಾಷ್ಟ್ರೀಯ ನಾಯಕತ್ವಕ್ಕೆ ಯಾವುದೇ ನಂಬಿಕೆಯ ಭಾಗವಾಗಿ ಈ ಶಾಲಾಕಾಲೇಜುಗಳು ಸ್ಥಾಪಿಸಲ್ಪಡಲಿಲ್ಲ. ಇದು ಸರ್ಕಾರಿ

ಶಾಲಾ ಕಾಲೇಜುಗಳನ್ನು ಬಹಿಷ್ಕರಿಸುವ ಒಂದು ದಾರಿಯಾಗಿತ್ತು. ಸ್ಥಳೀಯ ನ್ಯಾಯಾಲಯಗಳನ್ನು ಕೂಡ ಸ್ಥಾಪಿಸಲಾಯಿತು. ಇದು ಕೂಡ ಸ್ಥಳೀಯ ಪದ್ಧತಿ, ರೂಢಿಗಳಿಗನುಗುಣವಾಗಿ ಬಹುತೇಕ ವ್ಯಾಜ್ಯಗಳನ್ನು, ಜನರೇ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬಹುದೆಂದು ಕಾಂಗ್ರೆಸ್ ಭಾವಿಸಿದುದರಿಂದ ಅಲ್ಲ ಆದರೆ, ಬ್ರಿಟಿಷ್ ಆಡಳಿತವನ್ನು ನಿಷ್ಕ್ರಿಯಗೊಳಿಸಲು ಮಾತ್ರ ಈ ಸ್ಥಳೀಯ ನ್ಯಾಯಾಲಯಗಳು ಸ್ಥಾಪಿಸಲ್ಪಟ್ಟವು. ಸೇಂದಿ ಅಂಗಡಿಗಳ ಮುಂದೆ ಧರಣಿ ಕುಳಿತವರು ಕಾನೂನಿನ ಮೂಲಕ ಪಾನ ನಿರೋಧ ನೀತಿಯನ್ನು ಜಾರಿ ಮಾಡುವಂತಹ ತಮ್ಮದೇ ಸರ್ಕಾರ ಇಲ್ಲವೆಂಬ ಕಾರಣದಿಂದ, ಒತ್ತಾಯಪೂರ್ವಕವಾಗಿ ಅಲ್ಲಿ ಕುಳಿತಿರುತ್ತಿದ್ದರು. ಆದ್ದರಿಂದ, ನಮ್ಮದೇ ಸರ್ಕಾರದ ಬಂದಾಗ, ಸಾಮಾಜಿಕ ಕಾರ್ಯಕರ್ತರು ತಮ್ಮ ಕೆಲಸ ಮುಗಿಯಿತೆಂದು ಭಾವಿಸುವುದು ಮತ್ತು ಉಳಿದುದೆಲ್ಲಕ್ಕೂ ಸರ್ಕಾರವನ್ನೇ ಅವಲಂಬಿಸುವುದು ತೀರಾ ಸಹಜವಾಗಿಯೇ ಇದ್ದಿತು.

ಇವೆಲ್ಲವನ್ನೂ ಯುಕ್ತಿ, ತಂತ್ರದ ಆಧಾರದಿಂದ ವಿವರಿಸಬಹುದು. ಮತ್ತು ಸಮರ್ಥಿಸಬಹುದು. ಸ್ವಾತಂತ್ರ್ಯವನ್ನು ಗಳಿಸುವುದೊಂದೇ ನಮ್ಮ ಏಕೈಕ ಗುರಿಯಾಗಿದ್ದಾಗ, ಜನರಲ್ಲಿ ಸ್ವಾತಂತ್ರ್ಯಕ್ಕಾಗಿ ಪ್ರೇರಣೆ ಮಾಡಿಸಲು ಎಲ್ಲ ವಿಧಾನಗಳೂ ಸಮರ್ಥನೀಯವಾಗಿದ್ದವು. ಆದರೆ ನಮಗೆ ಸ್ವಾತಂತ್ರ್ಯ ದೊರಕಿದ ಕೂಡಲೇ ಮಾರ್ಗದಲ್ಲಿ ಹೊಸ ನಿರ್ದೇಶನದ ಅಗತ್ಯವಿದ್ದಿತು. ಸೈದ್ಧಾಂತಿಕವಾಗಿಯೂ, ಪ್ರಾಯೋಗಿಕವಾಗಿಯೂ ತನ್ನ ಪರಿಮಿತಿಗಳನ್ನು ಸರ್ಕಾರವು ಜನರಿಗೆ ತಿಳಿಸಬೇಕಾಗಿದ್ದಿತು. ಆದರೆ ಅದು ಹಾಗೆ ಮಾಡಲಿಲ್ಲ. ಅದಕ್ಕೆ ಬದಲಾಗಿ, ಕಲ್ಯಾಣ ರಾಜ್ಯದ ಆದರ್ಶವನ್ನು ಅಳಡಿಸಿಕೊಳ್ಳುವ ಮೂಲಕ, ನಂತರ ಸಮಾಜವಾದೀ ರಾಜ್ಯದ ಆದರ್ಶವನ್ನು ಅಳವಡಿಸಿಕೊಳ್ಳುವ ಮೂಲಕ ಅದು ಜನರನ್ನು ಮತ್ತೂ ಹೆಚ್ಚಾಗಿ, ಎಲ್ಲಕ್ಕೂ ಸರ್ಕಾರವನ್ನೇ ಅವಲಂಬಿಸುವಂತೆ ಮಾಡಿತು. ಮೊದಲಿಂದಲೂ ಅಸ್ತಿತ್ವದಲ್ಲಿದ್ದ, ಹಳೆಯ ಸ್ವಯಂಪ್ರೇರಿತ ಸಂಸ್ಥೆಗಳ ಮೇಲಿನ ಕಟುವಾದ ವಿಮರ್ಶೆಯು ಜನರು ಅವುಗಳಿಂದಲೂ ದೂರವಾಗುವಂತೆ ಮಾಡಿತು. ಈ ಸಂಸ್ಥೆಗಳು ಅನಪೇಕ್ಷಣೀಯವೂ ಅಪ್ರಯೋಜಕವೂ ಆಗಿದ್ದಲ್ಲಿ ಹೊಸ ಸಂಸ್ಥೆಗಳನ್ನು ಸ್ಥಾಪಿಸಬೇಕಾಗಿದ್ದಿತು. ಸಮಾಜವಾದದ ಹೆಸರಿನಲ್ಲಿ ಪ್ರಮಾಣ ಮಾಡುವ ಸರ್ಕಾರವು ಜನರೊಡನೆ ಜವಾಬ್ದಾರಿಯನ್ನು ಹಂಚಿಕೊಳ್ಳಲಾಗುವುದಿಲ್ಲ. ಸರ್ಕಾರವು ಹೇಗೆ, ಯಾವಾಗ ವಿಫಲವಾಗುತ್ತದೆಯೋ ಆಗ ಜನರನ್ನು ಬಲಿಪಶುಗಳಾಗಿ ಮುಂದೆ ತರಲಾಗುತ್ತದೆ.

ಈ ಶೋಚನೀಯ ಪರಿಸ್ಥಿತಿಗೆ ಬಂದು ತಲುಪಿರುವುದಕ್ಕೆ ಇನ್ನೂ ಒಂದು ಕಾರಣವಿದೆ. ಬೃಹತ್ಪ್ರಮಾಣದ ಯೋಜನೆಗಳಿಲ್ಲದೇ ಮತ್ತು ಅದರ ಪರಿಣಾಮವಾದ ಕೇಂದ್ರೀಕರಣವಿಲ್ಲದೇ ನಾವು ಪ್ರಗತಿಹೊಂದಲು ಸಾಧ್ಯವೇ ಇಲ್ಲವೆಂಬ ಸಾಮಾನ್ಯ



ಅಭಿಪ್ರಾಯವಿದೆ. “ಹೇಗಿದ್ದರೂ ವಿಶ್ವವು ಕೇಂದ್ರೀಕರಣದತ್ತ ಸಾಗುತ್ತಿದೆ” ಎಂದು ಹೇಳಲಾಗಿದೆ, “ಮತ್ತು ನಾವು ಅದರ ಪ್ರಭಾವದಿಂದ ತಪ್ಪಿಸಿಕೊಳ್ಳಲಾರೆವು.” ಈ ಅಸಹಾಯಕತೆಯ ಭಾವನೆಯೇ– ಶ್ರದ್ಧೆಯ ಮತ್ತು ಅಮಿತ ಉತ್ಸಾಹಗಳ ಕೊರತೆಯಲ್ಲದಿದ್ದರೂ– ನಮ್ಮ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ವಲಯಗಳ ಎಲ್ಲ ವಿಕೇಂದ್ರಿಕರಣಗೊಂಡ ಸಂಸ್ಥೆಗಳಿಗೆ, ಮರಣದ ಗಂಟೆಯನ್ನು ಬಾರಿಸಿದೆ. ಆಧುನಿಕ ಜಗತ್ತಿನ ಪ್ರಭಾವ, ಒತ್ತಡಗಳಿಂದ ತಪ್ಪಿಸಿಕೊಳ್ಳಲು ನಮಗೆ ಸಾಧ್ಯವಾಗದಿದ್ದರೆ, ಮತ್ತು ನಮ್ಮದೇ ಮಾರ್ಗಗಳನ್ನು ಆಧುನಿಕ ಪರಿಸ್ಥಿತಿಗಳಿಗೆ ಹೆಚ್ಚು ಸೂಕ್ತವೆನಿಸುವಂತೆ ನಮ್ಮ ದಾರಿಯನ್ನು ನಾವು ಕಂಡುಕೊಳ್ಳದಿದ್ದರೆ ಉಳಿದ ಪ್ರಪಂಚದ ಜೊತೆಗೆ ನಾವು ಕೂಡ ನೆಲಕಚ್ಚುತ್ತೇವೆ. ಆದರೆ ವಾಸ್ತವವೆಂದರೆ, ಆ ಜಗತ್ತಿನ ಒತ್ತಡ, ಪ್ರಭಾವಗಳು, ನಾವು ಕಲ್ಪನೆ ಮಾಡಿಕೊಂಡಿರುವಷ್ಟು ಶಕ್ತಿಯುತವಾದದ್ದಾಗಲೀ, ಅಥವಾ ಅನಿವಾರ್ಯವಾದುದಾಗಲೀ ಆಗಿಲ್ಲ. ನಾವು ನಮ್ಮದೇ ತತ್ತ್ವ ಸಿದ್ಧಾಂತಗಳಿಗೆ ದೃಢವಾಗಿ ನೆಚ್ಚಿಕೊಂಡಿದ್ದ, ಇತರರಿಗೂ ಅನುಸರಿಸುವಂತೆ ಪಥ ನಿರ್ಮಾಣ ಮಾಡಬಹುದಾಗಿದೆ.

ಆದರೆ, ಇದು ಜೀವನದ ಬಗೆಗೆ, ಕಾರ್ಯನೀತಿಯ ಬಗೆಗೆ ಮತ್ತು ಯೋಜನೆಯ ಬಗೆಗೆ ಅವರ ದೃಷ್ಟಿಕೋನಕ್ಕೆ ಹೊಸ ನಿರ್ದೇಶನವನ್ನು ಬೇಡುತ್ತದೆ. ನಾವು ಅವುಗಳ ಪರಿಮಿತಿಗಳನ್ನು ಒಪ್ಪಿಕೊಳ್ಳಬೇಕು. ಆದ್ದರಿಂದ ತನ್ನ ಸಮಾಜವಾದದ ಗೀಳನ್ನು ಬಿಟ್ಟುಬಿಡುವಂತೆ ಮತ್ತು ಸೈದ್ಧಾಂತಿಕವಾಗಿ ಹಾಗೂ ಪ್ರಾಯೋಗಿಕವಾಗಿ, ಕಾನೂನುಬದ್ಧವಾಗಿ ಮತ್ತು ಸಾಂಪ್ರದಾಯಿಕವಾಗಿ ಜನರ ವಲಯವಾಗಿರುವುದಕ್ಕೆ ತಮ್ಮ ಒಳದಾರಿಗಳನ್ನು ತಡೆಯುವಂತೆ ಸರ್ಕಾರಕ್ಕೆ ಮನವೊಲಿಸಬೇಕು ಮತ್ತು ಅಧ್ಯಕ್ಷರು ನಿಜವಾಗಿಯೂ ಜನರು ಸ್ವಾವಲಂಬಿಗಳಾಗಬೇಕೆಂದು ಬಯಸುವುದಾದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಅವರು ತಮ್ಮ ಪ್ರಭಾವವನ್ನು ಉಪಯೋಗಿಸಬೇಕು.

(೧೯೫೮ ಆಗಸ್ಟ್ ೪)

* * * *

# ೨. ವಿಚಾರ ರಶ್ಮಿ

**BLANK PAGE**



# ೧. ರಾಷ್ಟ್ರೀಯತೆ–ಮೂಲಮಂತ್ರ

ಯಾವುದೇ ಒಂದು ರಾಷ್ಟ್ರದ ಆಧಾರಭೂತವಾದ ಆದರೆ, ಅತಿ ಸಾಮಾನ್ಯವಾದ ಮೂಲವಿಚಾರ ಎಂದರೆ, ಅದರ 'ರಾಷ್ಟ್ರೀಯತೆ'. ಒಂದು ದೇಶದಲ್ಲಿ 'ರಾಷ್ಟ್ರೀಯತೆ' ಎಂದರೇನು, ಎಂಬ ಪ್ರಶ್ನೆ ಇದ್ದಲ್ಲಿ ಅದು ಆ ದೇಶದ ದೌರ್ಭಾಗ್ಯವೇ ಸರಿ. ಏಕೆಂದರೆ ರಾಷ್ಟ್ರೀಯತೆ ಅಷ್ಟು ಸ್ವಾಭಾವಿಕವಾಗಿ ಪ್ರತಿಯೊಂದು ದೇಶದ ಜನರಲ್ಲೂ ಗಾಢವಾಗಿ ತಳವೂರಿರಬೇಕಾದಂತಹ ಭಾವನೆ. ಆದರೆ, ನಮ್ಮ ದೇಶದಲ್ಲಿಂದು ರಾಷ್ಟ್ರೀಯತೆಯ ಬಗ್ಗೆ ಅಪಾರವಾಗಿ ಭ್ರಮೆ ತುಂಬಿದೆ. ಹೀಗಾಗಿ ಅದರ ಬಗೆಗೆ ನಾವು ಅಗತ್ಯ ಚಿಂತಿಸಬೇಕಾಗಿಬಂದಿದೆ.

**ಅರಸಿದ್ದು ವಜ್ರ, ಸಿಕ್ಕಿದ್ದು...?**

ನಾವು ಯಾರು, ನಾವು ಏನಾಗಿದ್ದೇವೆ– ಎಂಬುದರ ಬಗ್ಗೆ ಜನಗಳಲ್ಲಿ ಅಜ್ಞಾನ ತುಂಬಿದೆ. ಆದುದರಿಂದ ಅರಾಷ್ಟ್ರೀಯವಾದುದನ್ನು ಪುರಸ್ಕರಿಸುತ್ತಲೂ, ರಾಷ್ಟ್ರೀಯವಾದುದನ್ನು ತಿರಸ್ಕರಿಸುತ್ತಲೂ ಜನ ನಡೆದಿದ್ದಾರೆ. ಅಸತ್ಯದ ಪೋಷಣೆಯಿಂದ 'ಸತ್ಯ' ಸಿಗುವುದಿಲ್ಲವೆಂಬುದು ಸದಾಕಾಲಕ್ಕೂ ನಿಜ. ಕಾಗೆ ಕೋಗಿಲೆಯ ಮರಿಯನ್ನು ತನ್ನ ಮರಿಯೆಂದು ಭ್ರಮಿಸಿ ಸಲಹುತ್ತದೆ. ಆದರೆ ಆ ಮರಿ ಸ್ವಲ್ಪ ಬಲಿತೊಡನೆ ಅಲ್ಲಿಂದ ಹಾರಿಹೋಗುತ್ತದೆ. ರಾಷ್ಟ್ರೀಯತೆಯ ಬಗ್ಗೆಯೂ ಇದು ಸತ್ಯ. ಅರಾಷ್ಟ್ರೀಯ ವಿಷಯಗಳ ಪೋಷಣೆಯಿಂದ ರಾಷ್ಟ್ರೀಯತೆ ಬೆಳೆದು ನಿಲ್ಲಲಾರದು.

ನಮ್ಮ ಹಿಂದಿನ ೪೦–೫೦ ವರ್ಷಗಳ ಚರಿತ್ರೆಯನ್ನು ಓದಿದಲ್ಲಿ ರಾಷ್ಟ್ರೀಯತೆಗಾಗಿ ನಾವು ಮಾಡಿದ ತ್ಯಾಗ, ಬಲಿದಾನಗಳ ಸ್ಮರಣೆ ಯಾಗುವುದು. ಅವುಗಳ ಹಿಂದೆ ಪವಿತ್ರತೆ, ಉದಾತ್ತತೆ ಇದ್ದಿತು. ಇಷ್ಟಾದರೂ ರಾಷ್ಟ್ರೀಯತೆ ಪ್ರಬಲವಾಯಿತೇನು? ರಾಷ್ಟ್ರೀಯತೆಯ ಅಭಾವ ತೀವ್ರ ಗೊಂಡಿರುವುದರಿಂದಲೇ ಸರಕಾರ ಅದಕ್ಕಾಗಿ ಒಂದು ಸಮಿತಿ ರಚಿಸಬೇಕಾಗಿ ಬಂದಿತು.

ಈ ಎಲ್ಲ ವರ್ಷಗಳ ಅಪಾರ ಪ್ರಯತ್ನದಿಂದ ರಾಷ್ಟ್ರೀಯತೆಯ ನಿಟ್ಟಿನಲ್ಲಿ ನಮಗೆ ದೊರಕಿರುವ ಲಾಭವೆಂದರೆ ದೇಶವಿಭಜನೆ, ಭಾಷಾವಿವಾದ, ಜಾತೀಯತೆ,

ವ್ಯಕ್ತಿ ಸ್ವಾರ್ಥ ಮತ್ತು ಅಪಾರ ಭ್ರಷ್ಟಾಚಾರ; ಇದೇ 'ರಾಷ್ಟ್ರೀಯ ಜಾಗರಣ'ದ ಫಲ! ಉದ್ದೇಶ ಉತ್ತಮವಿದ್ದರೂ ಇಂತಹ ವಿಷಫಲ ಏಕೆ ಸಿಕ್ಕಿತು? ನಾವು ದಿಕ್ಕು ತಪ್ಪಿದ್ದುದೇ ಇದಕ್ಕೆ ಕಾರಣ. ವಜ್ರಕ್ಕಾಗಿ ನಾವು ಶ್ರಮವಹಿಸಿ ನೆಲ ಅಗೆದರೂ ನಮಗೆ ಸಿಕ್ಕಿದ್ದು ಮಾತ್ರ ಕಲ್ಲಿದ್ದಲು! ಕಾರಣ? ನಾವು ಅಗೆದದ್ದು ವಜ್ರದ ಗಣಿಯನ್ನಲ್ಲ; ಕಲ್ಲಿದ್ದಲ ಗಣಿಯನ್ನು. ದಾರಿ ತಪ್ಪಾದುದರಿಂದ ನಮ್ಮ ಪರಿಶ್ರಮ ವ್ಯರ್ಥವಾಯಿತು.

ಕೇವಲ ಹಿಂದೆ ಮಾತ್ರವಲ್ಲ; ಇಂದಿಗೂ ನಮ್ಮ ಪರಿಸ್ಥಿತಿ ಅದೇ ಆಗಿದೆ. ೪೦–೫೦ ವರ್ಷಗಳ ಕೆಲಸದ ಪರಿಣಾಮವಾಗಿ ಸಿಕ್ಕ ಕಟುಫಲಗಳಿಂದಲೂ ಸಹ ನಾವು ಪಾಠ ಕಲಿತಿಲ್ಲ. ಸತ್ಯವನ್ನು ಅರಿಯುವ ಬದಲು ತಪ್ಪನ್ನೇ ಸರಿಯೆಂದು ಭಾವಿಸಿ ಅದನ್ನೇ ಸಮರ್ಥಿಸುತ್ತೇವೆ. ಅದರ ವ್ಯಾಮೋಹ ಅಷ್ಟೊಂದು ಬೆಳೆದುಬಿಟ್ಟಿದೆ. ಬಿಡಿಸಿಕೊಳ್ಳಲಾಗದಷ್ಟು ಮಟ್ಟಿಗೆ ಅದಕ್ಕೆ ನಾವು ಜೋತುಬಿದ್ದಿದ್ದೇವೆ. ಬಲೆಯೊಳಗೆ ಸಿಕ್ಕಿಕೊಂಡಿರುವ ಹಕ್ಕಿ ಹೊರಬರಲು ಪ್ರಯತ್ನಿಸಿದಷ್ಟೂ ಹೆಚ್ಚು ಹೆಚ್ಚು ಸಿಕ್ಕಿಹಾಕಿಕೊಳ್ಳುವಂತೆ ಇದು; ಬಲೆ ಕಡಿದು ಹೊರಬರುವುದೊಂದೇ ಅದಕ್ಕೆ ಇರುವ ಮಾರ್ಗ.

**ಪೆಟ್ಟಿನಿಂದ ಜ್ಞಾನೋದಯ!**

ರಾಷ್ಟ್ರ ಎಂದರೇನು? ನಮ್ಮ ರಾಷ್ಟ್ರೀಯತೆ ಯಾವುದು? ಇವುಗಳನ್ನು ಅರಿಯುವ ಪ್ರಯತ್ನ ಹಾಗೂ ಆ ಮಾರ್ಗದಲ್ಲಿ ವಹಿಸಬೇಕಾದ ಎಚ್ಚರಿಕೆ ಯಾವುದು? ಈ ಕುರಿತು ನಾವು ಮೂಲಭೂತವಾಗಿ ಆಳವಾಗಿ ಚಿಂತಿಸಬೇಕಾಗಿದೆ. ರೇಖಾಗಣಿತ ಮತ್ತು ನ್ಯಾಯಶಾಸ್ತ್ರಗಳಲ್ಲಿ ಕೆಲವನ್ನು ಸ್ವಯಂಸಿದ್ಧ ಸತ್ಯ (Aximatic truth)ವಾಗಿ ಸ್ವೀಕರಿಸಿ ಮುಂದುವರಿಯುತ್ತಾರೆ. 'ನಾನು ಮನುಷ್ಯ' ಎಂಬುದೂ ಅಂತಹ ಒಂದು ಸ್ವಯಂಸಿದ್ಧ ಸತ್ಯವೇ; ಅದನ್ನು ಸಾಧಿಸಿ ತೋರಿಸುವುದು ಕಠಿಣವಾದರೂ ಮನುಷ್ಯನು ವ್ಯವಹಾರದಿಂದ ಅದನ್ನು ಅರಿಯಬಹುದು. ಆದರೆ ಒಬ್ಬನು 'ತಾನು ಮನುಷ್ಯ' ಎಂಬುದನ್ನೇ ಮರೆತಿದ್ದಲ್ಲಿ, ಅವನಿಗೆ ಅದನ್ನು ಜ್ಞಾಪಿಸಿಕೊಡಬೇಕಾಗುತ್ತದೆ. ಅದು ಭಾವಾತ್ಮಕವಾಗಿ ಅವನಿಗೆ ಅರ್ಥವಾಗದಿದ್ದಲ್ಲಿ ಅಭಾವಾತ್ಮಕ ರೂಪದಲ್ಲಾದರೂ ಅರಿವು ಮಾಡಿಕೊಟ್ಟು ಮುಂದುವರಿಯಬೇಕಾಗುತ್ತದೆ. ಹಾಗೆಯೇ ರಾಷ್ಟ್ರದ ಬಗೆಗೂ.

ಕೆಲವು ವರ್ಷಗಳ ಹಿಂದೆ 'ರಾಷ್ಟ್ರೈಕ್ಯತಾ ಸಮಿತಿ'ಯೊಂದು ಏರ್ಪಾಟಾಗಿತ್ತು. ಸಮಿತಿಯ ಒಂದು ಸಭೆಯಲ್ಲಿ ಅದರ ಕೆಲವು ಸದಸ್ಯರು 'ನಾವು ಈ ಮುಂಚೆ ಒಂದು ರಾಷ್ಟ್ರ ಆಗಿರಲಿಲ್ಲ; ಇನ್ನು ಮುಂದೆ ನಾವೊಂದು ರಾಷ್ಟ್ರವಾಗಿ ರೂಪುಗೊಳ್ಳಬೇಕಾಗಿದೆ' ಎಂದು ಅಭಿಪ್ರಾಯಪಟ್ಟರು. ಆದರೆ ಒಬ್ಬ ಸದಸ್ಯರು



'ನಾವು ಹಿಂದಿನಿಂದಲೂ ರಾಷ್ಟ್ರ ಆಗಿದ್ದೇವೆ, ಅದನ್ನು ಅರಿತುಕೊಳ್ಳುವುದೇ ರಾಷ್ಟ್ರೈಕ್ಯತೆಯ ರಾಜಮಾರ್ಗ' ಎಂದು ಹೇಳಿದರು. ಆದರೆ ಉಳಿದವರು ಅದನ್ನು ಒಪ್ಪಲಿಲ್ಲ. ಅದೇ ಸಮಯಕ್ಕೆ ಚೀನಾ ನಮ್ಮ ಮೇಲೆ ಆಕ್ರಮಣ ಮಾಡಿತು. ಆಗ ನಮ್ಮ ಜನ ಒಗ್ಗೂಡಿ ಬಂದುದಲ್ಲದೆ, ಧನ ನೀಡಲು, ಕಷ್ಟ ಸಹಿಸಲು, ಸೇನೆಯಲ್ಲಿ ಸೇವೆ ಸಲ್ಲಿಸಲು ಮುಂದಾದರು. ಅನಂತರ ಆ ಸಮಿತಿಯ ಸಭೆ ಸೇರಿದಾಗ 'ನಾವು ರಾಷ್ಟ್ರ ಆಗಿದ್ದೇವೆ, ರಾಷ್ಟ್ರೈಕ್ಯತೆ ಸಿದ್ಧಿಸಿದೆ' ಎಂಬ ನಿರ್ಣಯ ಸ್ವೀಕರಿಸಿ ಸಮಿತಿ ಅನಾವಶ್ಯಕವೆಂದು ಸಮಿತಿಯನ್ನೇ ವಿಸರ್ಜಿಸಿದರು.

ಚೀನಾ ನಮ್ಮ ಮೇಲೆಸಗಿದ ಆಕ್ರಮಣದಿಂದ, ಅವರ ವಿರೋಧದಿಂದ 'ನಾವು ರಾಷ್ಟ್ರ' ಎಂಬುದು ನಮಗರಿವಾಯಿತು. ಹೀಗೆ ಅನೇಕ ಬಾರಿ ವಿರೋಧದಿಂದಲೇ ಸತ್ಯಸಂಗತಿಯ ಅರಿವಾಗುತ್ತದೆ; ನಮಗೆ ಅರ್ಥವಾಗದುದನ್ನು ಬೇರೆಯವರು ತಿಳಿಸಿಕೊಡುತ್ತಾರೆ. ಚೀನಾ ಆಕ್ರಮಣಕ್ಕಿಂತ ಮುಂಚೆ 'ನಾವು ರಾಷ್ಟ್ರ' ಎಂಬ ಅರಿವು ನಮಗೆ ಇರಲಿಲ್ಲವೆಂಬುದು ಈಗ ತಿಳಿಯಿತು.

**ಕಥೆ–ನೀತಿ**

ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿ ಒಂದು ಕಥೆ ಬರುತ್ತದೆ. ಹತ್ತು ಜನರು ಯಾತ್ರೆಗೆಂದು ಹೊರಟಾಗ ದಾರಿಯಲ್ಲಿ ನದಿಯೊಂದನ್ನು ಅವರು ಹಾಯ ಬೇಕಾಯಿತು. ನದಿ ದಾಟಿದ ಮೇಲೆ ಅವರಲ್ಲಿ ಒಬ್ಬ 'ನಾವು ಯಾರೂ ಮುಳುಗಿಲ್ಲವಷ್ಟೆ?' ಎಂದು ಚಿಂತಿಸಿ ಎಲ್ಲರನ್ನೂ ಎಣಿಸಿದ. ತನ್ನನ್ನು ಬಿಟ್ಟು ಉಳಿದವರನ್ನು ಮಾತ್ರ ಎಣಿಸಿದುದರಿಂದ ಒಂಭತ್ತೇ ಬಂದಿತು. ಏನಿದು? ನಾವು ಒಂಬತ್ತೇ ಜನ ಇದ್ದೇವೆ! ಯಾರೋ ಒಬ್ಬ ಮುಳುಗಿರಬೇಕು ಎಂದು ಗಾಬರಿಯಾದ... ಉಳಿದವರೂ ಸಹ ಅವನಂತೆಯೇ ತಮ್ಮನ್ನು ಬಿಟ್ಟೇ ಎಣಿಸಿದರು. ಅವರಿಗೂ 'ಒಂಬತ್ತೇ' ಬಂದಿತು. ಆಗ ಅವರೆಲ್ಲರಿಗೂ 'ಯಾರೋ ಒಬ್ಬ ಮುಳುಗಿಹೋದ' ಎಂಬುದು ಖಚಿತವಾಗಿ ಎಲ್ಲರೂ ರೋದಿಸಲಾರಂಭಿಸಿದರು. ಅಲ್ಲೊಬ್ಬ ಕುದುರೆ ಸವಾರ ಹೋಗುತ್ತಿದ್ದ. ಅವನು ಅವರನ್ನು ಕುರಿತು 'ನೀವೇಕೆ ಅಳುವಿರಿ?' ಎಂದು ಪ್ರಶ್ನಿಸಿದ. 'ನಾವು ಹತ್ತು ಜನ ಇದ್ದೆವು. ಈಗ ಒಂಭತ್ತೇ ಇದ್ದೇವೆ– ಯಾರೋ ಒಬ್ಬ ನದಿ ದಾಟುವಾಗ ಮುಳುಗಿದ್ದಾನೆ' ಎಂದರು. ಕುದುರೆ ಸವಾರ ನೋಡಿದಾಗ ಹತ್ತು ಜನ ಕಂಡುಬಂದರು. ಪುನಃ ಅವನು 'ಅದು ಹೇಗೆ?' ಎಂದ. ಆ ಗುಂಪಿನ ಒಬ್ಬನು ತನ್ನನ್ನು ಬಿಟ್ಟು ಉಳಿದೆಲ್ಲರನ್ನೂ ಎಣಿಸಿ ತೋರಿಸಿ 'ಇಗೋ ಒಂಭತ್ತೇ ಮಂದಿ ಇದ್ದೇವೆ' ಎಂದ. ಕುದುರೆ ಸವಾರನಿಗೆ ಇವರೆಲ್ಲಾ ಮೂರ್ಖರೆಂದು ಅರ್ಥವಾಯಿತು. 'ನಾನು ಹತ್ತನೆಯವನನ್ನು ಹುಡುಕಿಕೊಡಲೋ?' ಎಂದ. 'ಹುಡುಕಿಕೊಟ್ಟಲ್ಲಿ ನಾವು ನಿಮಗೆ ಕೃತಜ್ಞರು' ಎಂದರು ಅವರು. ಸರಿ, ತನ್ನ

ಚಾವಟಿಯಲ್ಲಿ ಪ್ರತಿಯೊಬ್ಬನ ಬೆನ್ನಿಗೆ ಏಟು ಬಾರಿಸುತ್ತಾ '೧, ೨, ೩..........೧೦. ಇಗೋ, ನೀವು ಹತ್ತು ಜನ ಇದ್ದೀರಿ!' ಎಂದ. ಅವರು ಸವಾರನಿಗೆ ಕೃತಜ್ಞತೆ ಅರ್ಪಿಸಿ ಹೊರಟರಂತೆ!

ನಮ್ಮನ್ನು ನಾವು ಮರೆತಿದ್ದಾಗ ಬೇರೆಯವರು ಚಾವಟಿಯಲ್ಲಿ ಬಾರಿಸಿ, ನಮಗೆ ನಮ್ಮತನವನ್ನು ತೋರಿಸಿಕೊಟ್ಟರೂ ನಾವು ಅವರಿಗೆ ಕೃತಜ್ಞರಾಗಿಯೇ ಇರುತ್ತೇವೆ. ಚೀನಾ ಆಕ್ರಮಣ ನಡೆದಾಗ ಆದುದೂ ಹಾಗೆಯೇ. ಚೀನಾ ನಾವು ಒಂದು ರಾಷ್ಟ್ರ ಎಂಬುದನ್ನು ಅರಿವು ಮಾಡಿಕೊಟ್ಟಿತು ಎಂದು ಭಾವಿಸಿ, ನಮ್ಮ ನಾಯಕರು ಆಕ್ರಮಕ ಚೀನಕ್ಕೇ ಧನ್ಯವಾದ ಸಮರ್ಪಿಸಿದರು! ಚೀನಾ ಆಕ್ರಮಣ ಭಗವಂತನ ಒಂದು ಪ್ರಚ್ಛನ್ನ 'ವರದಾನ' ಎಂದು ಕರೆದರು. ಏಟು ತಿಂದು ರಾಷ್ಟ್ರೀಯತೆಯನ್ನು ಅರಿಯಲು ಯತ್ನಿಸುವುದು, ಏಟು ತಿಂದು ಸರಿಯಾಗಿ ನಡೆಯುವ ಕುದುರೆ, ಎತ್ತುಗಳಿಗೆ ಸಮಾನ! ಇದು ನಮಗೆ ಗೌರವ ತರುವಂತಹದಲ್ಲ. ಸ್ವಾಭಾವಿಕವಾಗಿಯೇ ನಮ್ಮ ರಾಷ್ಟ್ರೀಯತೆಯ ಅರಿವು ನಮಗಿರಬೇಕು. ಅದನ್ನು ಸ್ವಾಭಾವಿಕವಾಗಿಯೇ ಪುಷ್ಟಿಗೊಳಿಸಬೇಕು. ಭಾವಾತ್ಮಕ ದೃಷ್ಟಿಕೋನದಿಂದ ಅದನ್ನರಿಯಬೇಕು. ಇನ್ನೊಬ್ಬರು ನಮ್ಮ ಮೇಲೆ ಕೈಮಾಡುವುದಿರಲಿ, ನಮ್ಮ ಕಡೆಗೆ ವಕ್ರ ದೃಷ್ಟಿ ಹರಿಸುವುದನ್ನೂ ಸಹ ಸಹಿಸದಿರುವಷ್ಟು ನಮ್ಮ ರಾಷ್ಟ್ರೀಯ ಅರಿವು ಪ್ರದೀಪ್ತವಾಗಿರಬೇಕು.

**ಒಂದು ದೇಶ–ಒಂದು ರಾಷ್ಟ್ರ**

ಭಾವಾತ್ಮಕ ದೃಷ್ಟಿಯಿಂದ ರಾಷ್ಟ್ರೀಯತೆಯನ್ನು ನಾವೀಗ ವಿಚಾರಿಸೋಣ. 'ರಾಷ್ಟ್ರ' ಎಂಬುದು ಒಂದು ಸಮೂಹವಾಚಕ ನಾಮಪದ. ಒಂದು ದೇಶ ಮತ್ತು ಜನಸಮೂಹ ಇವೆರಡೂ 'ರಾಷ್ಟ್ರ' ಆಗಲು ಅವಶ್ಯವೆಂಬುದು ಸರ್ವಸಾಮಾನ್ಯರಿಗೂ ತಿಳಿದಿರುವ ಅಂಶ. ಆದರೆ ಆ 'ದೇಶ'ದ ಸ್ವರೂಪವೇನು, ಅದರ ಪ್ರಕಟೀಕರಣ ಹೇಗಾಗುತ್ತದೆ– ಎಂಬಂಶ ಮಾತ್ರ ಸಾಮಾನ್ಯವಾಗಿ ಕಣ್ಮರೆಯಾಗಿರುತ್ತದೆ.

ರಾಜಕೀಯ ಕನ್ನಡಕಧಾರಿಗಳ ಕಣ್ಣಲ್ಲಿ ದೇಶವು ಕೇವಲ ಒಂದು ರಾಜನೈತಿಕ ಘಟಕ. ಅವರು 'ರಾಜ್ಯ'ವನ್ನೇ 'ದೇಶ' ಎನ್ನುತ್ತಾರೆ. ಒಂದು 'ರಾಜ್ಯ' ಎರಡಾಗಿ ಒಡೆದಲ್ಲಿ ಎರಡು 'ದೇಶ'ಗಳಾದವು ಎನ್ನುತ್ತಾರೆ. ಇಂತಹವರೇ ಭಾರತ, ಪಾಕಿಸ್ತಾನ ಎರಡು ದೇಶಗಳು ಎಂದು ಹೇಳುವುದು. ಒಂದು ದೇಶದಲ್ಲಿ ಒಂದು ರಾಜ್ಯ ಇರಬೇಕೆಂಬುದು ಒಪ್ಪುವಂತಹುದೇ; ಅದೊಂದು ಆದರ್ಶಸ್ಥಿತಿ. ಅದನ್ನು ಸಾಧಿಸಲಾಗದಿದ್ದಾಗ 'ಒಂದೊಂದು ರಾಜ್ಯ'ವನ್ನೂ 'ಒಂದೊಂದು ದೇಶ' ಎಂದು ಭಾವಿಸುವುದು ಮಾತ್ರ ತಪ್ಪು. ಅದೇ ತರ್ಕ ಮುಂದುವರಿಸಿ, ಒಂದು ರಾಜ್ಯವನ್ನೇ



ಒಂದು ದೇಶ, ಆ ದೇಶದಲ್ಲಿ ವಾಸಿಸುವವರೆಲ್ಲರೂ ಒಂದು ರಾಷ್ಟ್ರ ಎನ್ನುವ ನಿರ್ಣಯವೂ ತಪ್ಪಾದುದೇ. ಹಾಗಾದಲ್ಲಿ ರಾಜ್ಯಗಳಾದಷ್ಟು ರಾಷ್ಟ್ರಗಳು ನಿರ್ಮಾಣವಾಗುತ್ತಾ ಹೋದಾವು!

ತಿರುವುಮುರುವಾಗಿ ಆಲೋಚಿಸುವ ಕ್ರಮ ಇದು. ವಾಸ್ತವಿಕವಾಗಿ ಯೋಚಿಸಬೇಕಾದದ್ದು ಭಾವಾತ್ಮಕ ರೀತಿಯಲ್ಲಿ. ಒಂದು ದೇಶದಲ್ಲಿ ಒಂದು ರಾಷ್ಟ್ರ ಇರಬಲ್ಲದೇ ವಿನಾ ಎರಡಲ್ಲ; ಆ ರೀತಿಯಲ್ಲಿ ಎರಡೋ ಮೂರೋ ಗುಂಪುಗಳು ಇದ್ದಲ್ಲಿ ಅಲ್ಲಿನ ರಾಷ್ಟ್ರದ ಜೊತೆಗೆ ಆ ದೇಶದ ಮೇಲೆ ದಬ್ಬಾಳಿಕೆ ನಡೆಸುತ್ತಿರುವ ವಿದೇಶೀಯರಿರಬೇಕು, ಇಲ್ಲವೇ ಶರಣಾರ್ಥಿಗಳು ಇರಬೇಕು. ಒಂದು ಕಾಡಿನಲ್ಲಿ ಎರಡು ಸಿಂಹಗಳೂ, ಒಂದು ಒರೆಯಲ್ಲಿ ಎರಡು ಖಡ್ಗಗಳೂ ಇರಲಾರವು ಎನ್ನುವ ನಾಣ್ಣುಡಿ ಇದೆ. ಅಂತೆಯೇ ಒಂದು ದೇಶದಲ್ಲಿ ಒಂದಕ್ಕಿಂತ ಹೆಚ್ಚು ರಾಷ್ಟ್ರಗಳು ಇರಲಾರವು.

ಅನೇಕ ಬಾರಿ ನಮ್ಮ ಶಕ್ತಿಸಾಮರ್ಥ್ಯವನ್ನನುಸರಿಸಿ ದೇಶದ ರಾಜಕೀಯ ಮೇರೆಗಳು ಅಲ್ಪಸ್ವಲ್ಪ ಬದಲಾಗಬಹುದು. ಪಾಕಿಸ್ತಾನ ಸ್ವಲ್ಪ ಹಿಂದೆ ನಮ್ಮ ದೇಶದ ರಾಜನೈತಿಕ ಪ್ರದೇಶಗಳೊಡನೆ ಸೇರಿಕೊಂಡಿತ್ತು. ಹಾಗೆಯೇ ಅಫ್ಘಾನಿಸ್ತಾನ ಸಹ. ಆದುದರಿಂದ ಒಂದು ದೇಶದ ಅಥವಾ ರಾಷ್ಟ್ರದ ಗಣನೆಗೆ ರಾಜ ನೈತಿಕ ಮೇರೆಗಳಿಗಿಂತಲೂ ಅಲ್ಲಿ ವಾಸಿಸುವ ಮಾನವ ಸಮೂಹವೇ ಮುಖ್ಯ ಸಂಗತಿಯಾಗುತ್ತದೆ.

**ರಾಷ್ಟ್ರ ಶರೀರ– ನೆಲ, ಜನ**

ಆದರೆ ರಾಷ್ಟ್ರ ಆಗಲು ಕೇವಲ ಒಂದು ದೇಶದಲ್ಲಿ ಜನಸಮೂಹವೊಂದು ವಾಸಿಸುತ್ತದೆ ಎಂಬುದೇ ನಿರ್ಣಾಯಕ ಸಂಗತಿಯಾಗಲಾರದು. ಏಕೆಂದರೆ ಅನ್ಯ ದೇಶದ ಜನರೂ ಅಲ್ಲಿ ವಾಸಿಸಲು ಅವಕಾಶವಿದೆ. ನಮ್ಮ ದೇಶದಲ್ಲಿ ಹಿಂದೆ ಇಂಗ್ಲಿಷಿನವರೂ ಇದ್ದರು. ಕೇವಲ 'ಒಂದು ಭೂಮಿ ಮತ್ತು ಜನಸಮೂಹ' ಇವು ಮಾತ್ರ ಸಾಲದು. ಅಲ್ಲಿ ವಾಸಿಸುವ ಆ ಸಮೂಹ ಆ ದೇಶವನ್ನು 'ತಮ್ಮದು' ಎಂದು ಭಾವಿಸಬೇಕು. ಈ ರೀತಿ ಭಾವಿಸುವುದೊಂದೇ ಅಲ್ಲ; ಆ ಭಾವನೆ ತಾಯಿ–ಮಕ್ಕಳಂತೆ ಇರಬೇಕಾದುದೂ ಮುಖ್ಯ. ಏಕೆಂದರೆ ಹಿಂದೆ ಇಂಗ್ಲೀಷಿನವರೂ ಇದು 'ತಮ್ಮ ದೇಶ'' ಎಂದೇ ಹೇಳಿಕೊಳ್ಳುತ್ತಿದ್ದರು. 'ತಮ್ಮದು' ಎಂದು ಹೇಳುವಾಗ ಅವರಲ್ಲಿ 'ತಾವು ಈ ದೇಶದ ಒಡೆಯರು' ಎಂಬರ್ಥ ಬರುತ್ತಿತ್ತೇ ಹೊರತು, 'ತಾವು ಈ ದೇಶದ ಮಕ್ಕಳು' ಎಂಬ ಭಾವ ಇರಲಿಲ್ಲ. ಆದುದರಿಂದ ಆ ಭೂಮಿಯನ್ನು ತಮ್ಮ ತಾಯಿಯೆಂದೂ, ತಮ್ಮನ್ನು ಆಕೆಯ ಮಕ್ಕಳೆಂದೂ ಭಾವಿಸುವ ಜನಸಮೂಹ ಇರಬೇಕು. ಆಗ ಅವೆರಡೂ ಸೇರಿ

ರಾಷ್ಟ್ರ ಆಗುತ್ತದೆ. ಈ ಭಾವನೆಯೇ ಬೆಲೆಯುಳ್ಳ, ಮಹತ್ವದ ಅಂಶ. ಯಾವ ಭೂಭಾಗವನ್ನು ನಾವು 'ತಾಯಿ' ಎಂದು ಕರೆಯುತ್ತೇವೆಯೋ ಅದೇ ನಮ್ಮ 'ದೇಶ' ಆಗುತ್ತದೆ: ರಾಜನೈತಿಕ ದೃಷ್ಟಿಯಿಂದ ಆ ಭೂಭಾಗ ಇಂದು ನಮ್ಮ ವಶದಲ್ಲಿರಲಿ, ಇಲ್ಲದಿರಲಿ.

ಆದುದರಿಂದ ಒಂದು ಭೂಖಂಡದ ಬಗ್ಗೆ ಮಾತೃಭಾವವನ್ನು ತಾಳಿರುವ ಮಾನವರ ಸಮೂಹವೇ ಅಲ್ಲಿನ ರಾಷ್ಟ್ರ. ಈಕೆ ನಮ್ಮ ತಾಯಿ, ಈಕೆಯ ಮಡಿಲಲ್ಲಿ ಗೌರವದಿಂದ, ಸ್ವತಂತ್ರರಾಗಿ ಕೂಡುವುದೇ ನಮ್ಮ ಸ್ವಾಭಾವಿಕ ಸ್ಥಿತಿ. ಅದಕ್ಕೆ ಏನಾದರೂ ಅಡ್ಡಿಗಳು ಬಂದಲ್ಲಿ ಧ್ರುವನಂತೆ ದೃಢ ತಪಸ್ಸನ್ನಾಚರಿಸಿ ಅವುಗಳನ್ನು ನಿವಾರಿಸುತ್ತೇವೆ. ಅದನ್ನೂ ನಾವು ಮರಳಿ ಪಡೆಯುತ್ತೇವೆ ಎಂಬ ಕಲ್ಪನೆ, ಭಾವನೆಗಳಿಂದ ತುಂಬಿರುವ ಜನಸಮೂಹವೇ ರಾಷ್ಟ್ರವಾಗಲು ಯೋಗ್ಯವಾಗುತ್ತದೆ.

**ಆತ್ಮ–ಸಂಸ್ಕೃತಿ**

ಇದರ ಜೊತೆಗೆ ಮತ್ತೊಂದು ಪ್ರಮುಖ ಅಂಶವಿದೆ. ಈ ಭಕ್ತಿಯನ್ನು ದೇಶದ ಯಾವುದಾದರೊಂದು ಭಾಗಕ್ಕೆ ಮಾತ್ರ ತೋರಿದಲ್ಲಿ ಆಗಲೂ ಆಭಾಸವೇ ಆಗುತ್ತದೆ. ಕೆಲವರು ರಾಜಸ್ಥಾನ, ಬಂಗಾಲ ಮುಂತಾದ ದೇಶದ ಭಾಗಗಳನ್ನೇ 'ನಮ್ಮ ಮಾತೃಭೂಮಿ' ಎಂದು ಭಾವಿಸುವುದೂ ಉಂಟು. ಈ ವಿಕೃತಿಯನ್ನು ನಿವಾರಿಸಲು ಮತ್ತೊಂದು ಅಂಶವು ನಮ್ಮ ನೆರವಿಗೆ ಬರುತ್ತದೆ. ಮಾತೃಭೂಮಿ ಮತ್ತು ಇಂತಹ ಪುತ್ರರೂಪಿ ಸಮಾಜಗಳನ್ನು ಒಂದಾಗಿ ಬೆಸೆಯುವ ಅಂಶವೇ ಸಂಸ್ಕೃತಿ. ಸಂಸ್ಕೃತಿಯಿಂದಲೇ ಇಡೀ ಭೂಮಿಯನ್ನು ತಾಯಿಯೆಂದು ಪರಿಗಣಿಸಲು ಸಾಧ್ಯವಾಗುತ್ತದೆ.

ಸಂಸ್ಕೃತಿಯೇ ರಾಷ್ಟ್ರದ ಆತ್ಮ, ಇದರ ಇರುವಿಕೆಯಿಂದಲೇ ಮನುಷ್ಯನ ದೃಷ್ಟಿ ವಿಶಾಲವಾಗುತ್ತದೆ. ಅವನ ಬುದ್ಧಿ ವಿಕಸಿಸುತ್ತದೆ. ಸತ್ಪ್ರೇರಣೆ ದೊರಕುತ್ತದೆ. ಅವನ ವಿಕೃತಿಗಳು ನಾಶವಾಗಿ, ಅವನ ದೃಷ್ಟಿ ವಿಶಾಲವಾಗಿ, ಸಂಕುಚಿತ ಭಾವನೆಗಳು ದೂರವಾಗುತ್ತವೆ. ಮಾತೃಭೂಮಿ, ಪುತ್ರರೂಪಿ ಸಮಾಜ, ಹಾಗೂ ರಾಷ್ಟ್ರದ ಆತ್ಮವಾದ ಸಂಸ್ಕೃತಿ– ಈ ಮೂರರ ಸಂಯೋಗವೇ ನೈಜ ರಾಷ್ಟ್ರೀಯತೆ.

**ದೇಶದ ಬೆನ್ನೆಲುಬು**

ರಾಷ್ಟ್ರೀಯತೆ ಸದಾಕಾಲಕ್ಕೂ, ಸರ್ವದೇಶಗಳಿಗೂ ಸರ್ವರೀತಿಯ ಆಡಳಿತದಲ್ಲೂ, ಒಂದು ದೇಶದ ಬೆನ್ನೆಲುಬು. ಅದು ವಿದ್ಯಮಾನವಿದ್ದಲ್ಲಿ ರಾಷ್ಟ್ರಜೀವನದ ಎಲ್ಲ ರಂಗಗಳೂ, ಎಲ್ಲ ಪದ್ಧತಿಗಳೂ ವಿಕಸಿಸುವುದಲ್ಲದೆ, ಅದರ ಅಳಿವಿನಿಂದ ಎಲ್ಲ ವ್ಯವಸ್ಥೆಗಳೂ ಕುಸಿದುಬೀಳುತ್ತವೆ.



ಪ್ರಜಾಪ್ರಭುತ್ವದಲ್ಲಿ ಪ್ರತಿಯೋರ್ವನಿಗೂ ಮತದ ಅಧಿಕಾರವಿದೆಯಷ್ಟೆ. ಆದರೆ ಅವನು ಅದನ್ನು ಯೋಗ್ಯ ರೀತಿಯಲ್ಲಿ ಚಲಾಯಿಸುವುದು ಅವನಲ್ಲಿ ರಾಷ್ಟ್ರೀಯತೆ ಬೇರೂರಿದ್ದಾಗಲೇ. ಅನ್ಯಥಾ ಅವನು ರಾಷ್ಟ್ರೀಯತೆಯ ವಿರುದ್ಧವೇ ಮತ ನೀಡಿ ರಾಷ್ಟ್ರವನ್ನು ದುರ್ಬಲಗೊಳಿಸುತ್ತಾನೆ. ಪ್ರಜಾತಂತ್ರದಲ್ಲಿ ಒಬ್ಬ ಚುನಾಯಿತ ಶಾಸಕನಲ್ಲೂ ರಾಷ್ಟ್ರೀಯತೆ ಪ್ರಬಲವಾಗಿದ್ದಾಗ ಅವನು ರಾಷ್ಟ್ರದ ಏಳಿಗೆಗಾಗಿ ಕೆಲಸ ಮಾಡುತ್ತಾನೆ, ಅನ್ಯಥಾ ಅವನ ಕೈಯ ಅಧಿಕಾರ ದುರ್ವ್ಯಯವಾಗುತ್ತದೆ. ಮತದಾರ ಲಂಚದ ಆಸೆಗಾಗಿ ಮತ ನೀಡುವಂತೆ, ಶಾಸಕನೂ ತನ್ನ ವ್ಯಕ್ತಿ ಸ್ವಾರ್ಥದ ಪೂರೈಕೆಗಾಗಿ ರಾಷ್ಟ್ರದ ಸಾಧನ ಸಂಪತ್ತನ್ನು ಬಳಸಿಕೊಳ್ಳುತ್ತಾನೆ. ಪ್ರಜಾತಂತ್ರದಲ್ಲಿ ಸಹ ರಾಷ್ಟ್ರೀಯತೆಯೇ ಪ್ರಥಮ; ಪ್ರಜಾಸ್ವಾತಂತ್ರ್ಯದ ಸ್ಥಾನ ಎರಡನೆಯದು.

ಹಾಗೆಯೇ ರಾಜನ ಆಡಳಿತದಲ್ಲಿ ಸಹ. ಪ್ರಜೆ ಮತ್ತು ರಾಜರಲ್ಲಿ ರಾಷ್ಟ್ರೀಯತೆ ಜಾಗೃತವಿದ್ದಾಗಲೇ ಅವರು ರಾಷ್ಟ್ರದ ಏಳಿಗೆಯನ್ನು ಸಾಧಿಸಬಲ್ಲರು. ರಾಷ್ಟ್ರೀಯತೆ ಬಲವಾಗಿತ್ತೆಂದೇ ಇಂಗ್ಲೆಂಡ್ ಹೊರನಾಡುಗಳಲ್ಲಿ ತನ್ನ ಸಾಮ್ರಾಜ್ಯ ಸ್ಥಾಪಿಸಿತು. ಅದರಿಂದಲೇ ಅಲ್ಲಿನ ವ್ಯಾಪಾರಬುದ್ಧಿಯ ಜನರೂ ಸಹ ಭಾರತದಲ್ಲಿ ರಾಜ್ಯ ಕಟ್ಟಲು ಸಮರ್ಥರಾದರು. ಮೊಘಲ್ ದೊರೆಯ ಸಂಬಂಧಿಕರಿಗೆ ಔಷಧಿ ಕೊಟ್ಟು ರೋಗವನ್ನು ಗುಣ ಮಾಡಿದ ಬ್ರಿಟಿಷ್ ವೈದ್ಯ ತನಗಾಗಿ ಏನನ್ನೂ ಬೇಡದೆ, ತನ್ನ ದೇಶದ ವರ್ತಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿದ್ದು ಸಹ ರಾಷ್ಟ್ರೀಯತೆ ಪ್ರದೀಪ್ತವಾಗಿದ್ದ ಕಾರಣದಿಂದಲೇ.

ಸಮಾಜವಾದಿ ಅರ್ಥವ್ಯವಸ್ಥೆ ಇದ್ದ ಕಡೆ ಅದು ಪರಿಣಾಮಕಾರಿ ಆಗುವುದೂ ಅಲ್ಲಿ ರಾಷ್ಟ್ರೀಯತೆ ಇದ್ದಾಗಲೇ. ಅಲ್ಲಿ ರಾಜ್ಯ ತನ್ನ ಕೆಲಸ ಸಾಧಿಸುವುದು ಸರಕಾರಿ ನೌಕರರ ಮೂಲಕವೇ. ಸರಕಾರಿ ನೌಕರರಲ್ಲಿ ರಾಷ್ಟ್ರೀಯತೆ ಇರದಿದ್ದಲ್ಲಿ ಅವರು ಲಂಚಕೋರರಾಗಿ, ಅಲ್ಲಿನ ಅರ್ಥವ್ಯವಸ್ಥೆ ಕುಸಿದುಬೀಳುವುದರಲ್ಲಿ ಸಂಶಯವಿಲ್ಲ.

**ರಾಷ್ಟ್ರೀಯತೆಯ ಮಹಿಮೆ**

ಗೂಢಚಾರ ವ್ಯಕ್ತಿಗಳು ಪರದೇಶದ ರಹಸ್ಯಗಳನ್ನು ಅನೇಕ ಸಲ ಕದ್ದೇ ತರುತ್ತಾರೆ. ಅನೇಕ ಸಲ ಫೈಲ್‌ಗಳನ್ನೇ ಕದಿಯುತ್ತಾರೆ. ಸಾಧಾರಣವಾಗಿ ಕಳ್ಳತನ ನಿಂದ್ಯ ಎನಿಸಿದರೂ ಗೂಢಾಚಾರಿಕೆಯಲ್ಲಿ ರಾಷ್ಟ್ರೀಯತೆಯ ಭಾವ ಇರುವುದರಿಂದ ಅದಕ್ಕೆ ಮಾನ್ಯತೆ, ಗೌರವ.

ಸೈನಿಕನೊಬ್ಬ ಗುಂಡು ಹಾರಿಸಿ ಶತ್ರುಗಳನ್ನು ಹೆಚ್ಚು ಹೆಚ್ಚು ಮರ್ದನ ಮಾಡಿದಷ್ಟೂ ಅವನಿಗೆ ಗೌರವ ಹೆಚ್ಚು. ಸಾಧಾರಣವಾಗಿ ವ್ಯಕ್ತಿಯನ್ನು ಕೊಂದರೆ

ಮರಣದಂಡನೆ ಸಿಗುವುದಾದರೂ, ಸೈನಿಕ ಆ ಕೆಲಸ ಮಾಡುವುದು ತನ್ನ ರಾಷ್ಟ್ರಕ್ಕಾಗಿ; ಅದಕ್ಕಾಗಿ ಅವನಿಗೆ ಪದಕಗಳೂ ಸಿಗುತ್ತವೆ.

ಗಣಿತದಲ್ಲಿ ೧ರ ಪಕ್ಕದಲ್ಲಿ ೧ನ್ನು ಬರೆದಲ್ಲಿ ಮುಂಚಿಗಿಂತ ಅದಕ್ಕೆ ಹತ್ತರಷ್ಟು ಹೆಚ್ಚು ಬೆಲೆ. ಹೀಗೆ ಅದರ ಪಕ್ಕದಲ್ಲಿ ೧ನ್ನು ಪುನಃ ಬರೆಯುತ್ತಾ ಹೋದಂತೆ ಹತ್ತರಷ್ಟು ಹೆಚ್ಚು ಬೆಲೆ ಅದಕ್ಕೆ ಪ್ರಾಪ್ತವಾಗುತ್ತಾ ಹೋಗುತ್ತದೆ. ಇದರಂತೆಯೇ ವ್ಯಕ್ತಿ, ಸಮಾಜ, ರಾಷ್ಟ್ರಗಳೊಂದಿಗೆ ರಾಷ್ಟ್ರೀಯತೆ ಇದ್ದಷ್ಟೂ ಅದಕ್ಕೆ ಬೆಲೆ, ಗೌರವ ಹೆಚ್ಚುತ್ತಾ ಹೋಗುತ್ತದೆ. ರಾಜನೈತಿಕ ಪಕ್ಷಗಳ ಗುರಿ ಸಹ ರಾಷ್ಟ್ರೀಯತೆಯನ್ನು ಕಾಪಾಡುವುದೇ ಆಗಿದೆ. ಏಕೆಂದರೆ ರಾಜನೀತಿ ಇರುವುದೇ ರಾಷ್ಟ್ರೀಯತೆಯ ಸಂರಕ್ಷಣೆ, ಸಂವರ್ಧನೆಗಾಗಿ. ಒಂದು ದೇಶದ ವಿದ್ಯೆ, ಸಂಪತ್ತು, ಬೇಸಾಯ, ಕೈಗಾರಿಕೆ ಇವಕ್ಕೆಲ್ಲ ಹೆಚ್ಚಿನ ಬೆಲೆ ಸಿಗುವುದು ರಾಷ್ಟ್ರೀಯತೆ ಪ್ರಬಲವಾಗಿ ಇರುವಾಗಲೇ.

### ಮಿಕ್ಕೆಲ್ಲ ತತ್ತ್ವಗಳ ಸೋಲು

ಪರಕೀಯ ಆಕ್ರಮಣದಿಂದ ಒಂದು ದೇಶ ತನ್ನನ್ನು ಕಾಪಾಡಿಕೊಳ್ಳಲು ಸಮರ್ಥವಾಗುವುದೂ ರಾಷ್ಟ್ರೀಯತೆಯಿಂದಲೇ, ಇಸ್ಲಾಂ ಶಕ್ತಿಯು ರಾಷ್ಟ್ರೀಯತೆ ದುರ್ಬಲವಾಗಿದ್ದ ಈಜಿಪ್ಟ್, ಇರಾನ್, ಸ್ಪೇನ್‌ಗಳನ್ನು ಬಗ್ಗಿಸಿತೇ ಹೊರತು ಹಿಂದೂಸ್ಥಾನವನ್ನಲ್ಲ. ಗಂಗೆಯ ತೀರಕ್ಕೆ ಬಂದು ಅಲ್ಲಿನ ಬೆಟ್ಟದಂತಹ ರಾಷ್ಟ್ರೀಯತೆಯ ಅಲೆಗಳಿಗೆ ತಾಗಿ ಅದು ಗಂಗೆಯಲ್ಲೆ ಮುಳುಗಿತು. ಭಾರತದಲ್ಲಿ ಅದರ ಆಟ ನಡೆಯದಾಯಿತು. ರಾಷ್ಟ್ರೀಯತೆ ಇದ್ದಲ್ಲೆಲ್ಲ ಇಸ್ಲಾಂ ತನ್ನ ಪ್ರಭಾವ ಬೀರಲಾಗಲಿಲ್ಲ. ಪರ್ಷಿಯಾದಲ್ಲಿ 'ಫೈಲ್ವೀ ಭಾಷೆಯೇ ತಮ್ಮ ಭಾಷೆ, ಇರಾನಿಯನ್ ತಮ್ಮ ಹೆಸರು' ಎಂದು ಅಲ್ಲಿನ ಜನ ಕರೆದುಕೊಂಡರು. ತುರ್ಕಿಯಲ್ಲಿ ಕಮಾಲ್ ಪಾಶಾನಿಂದಾಗಿ ರಾಷ್ಟ್ರೀಯತೆ ಮೇಲೆದ್ದ ಮೇಲೆ ಹಳೆಯ ಖಲೀಫನ ಸಂಪ್ರದಾಯಗಳೆಲ್ಲ ಕಳಚಿಬಿದ್ದವು. 'ಕಮಾಲ ಅತಾತುರ್ಕ' ಅವನಾದ. ಇಂಡೋನೇಶಿಯಾದ ಕಥೆಯೂ ಅದೇ. ತಮ್ಮ ಹಳೆಯ ರಾಷ್ಟ್ರೀಯ ಸ್ಮೃತಿಗನುಗುಣವಾಗಿ ಅಲ್ಲಿನ ಮುಸಲ್ಮಾನರೂ ಜೀವನ ನಡೆಸಲಾರಂಭಿಸಿದ್ದಾರೆ. ಆಫಗಾನಿಸ್ತಾನದಲ್ಲಿ ವಾಸಿಸುವವರು ಮುಸಲ್ಮಾನರೂ ಅಲ್ಲಿನ ಪ್ರಾಚೀನ ರಾಷ್ಟ್ರೀಯತೆಯಿಂದಾಗಿ ಹಿಂದಿನ ಸಂಸ್ಕೃತವೇ ಅಲ್ಲಿನ ಶಾಲೆಯಲ್ಲೀಗ ಬೋಧಿಸಲ್ಪಡುತ್ತದೆ.

ಪ್ರಪಂಚದ ಕಾರ್ಮಿಕರನ್ನು ಒಂದುಗೂಡಿಸಲು ಹೊರಟ ಸಾಮ್ಯವಾದವು ಕಾರ್ಮಿಕರೇ ಹೆಚ್ಚಾಗಿರುವ ಇಂಗ್ಲೆಂಡ್, ಅಮೆರಿಕಾ, ಜರ್ಮನಿಗಳಲ್ಲಿ ತಳವೂರಲಿಲ್ಲ. ಆದರೆ ಕೃಷಿಪ್ರಧಾನವಾದ ರಷ್ಯದಲ್ಲಿ ಅದು ಅಧಿಕಾರಕ್ಕೆ ಬಂದಿತು. ಕಾರಣ ಸ್ಪಷ್ಟವಿದೆ. ರಾಷ್ಟ್ರೀಯತೆ ಜಾಗೃತವಾಗಿದ್ದ ದೇಶಗಳಲ್ಲಿ ಸಾಮ್ಯವಾದದ ಆಟ



ನಡೆಯಲಿಲ್ಲ. ಪ್ರಥಮ ಮಹಾಯುದ್ಧದಲ್ಲಿ ರಷ್ಯ ಸೋತಿದ್ದು ಆ ಕಾರಣದಿಂದಲೇ. ಅದು ದ್ವಿತೀಯ ಯುದ್ಧದಲ್ಲಿ ಕಾರ್ಮಿಕರ ಒಂದುಗೂಡುವಿಕೆಗೆ ಕರೆಕೊಟ್ಟು ಯುದ್ಧ ಗೆಲ್ಲಲಾಗದೆ 'ಪಿತೃಭೂಮಿ'ಯ ರಕ್ಷಣೆಗೆ ಕರೆಕೊಟ್ಟಿತು. ರಷ್ಯದ ಕಾರ್ಮಿಕರೇ, ಜರ್ಮನಿಯ ಕಾರ್ಮಿಕರನ್ನು ಯುದ್ಧರಂಗದಲ್ಲಿ ಎದುರ್ಗೊಂಡರು. ದ್ವಿತೀಯ ಮಹಾಯುದ್ಧದಲ್ಲಿ ರಷ್ಯವು ಜಪಾನನ್ನು ಸೋಲಿಸಿದಾಗ 'ಜಪಾನ್ ರಷ್ಯಾವನ್ನು ೧೯೦೫ರಲ್ಲಿ ಸೋಲಿಸಿದ್ದುದರ ಸೇಡು ಇದು' ಎಂದು ಸ್ಟಾಲಿನ್ ಹೇಳಿದ. ಆದರೆ ಹಿಂದೆ ಸೋತಿದ್ದುದು ಸಾಮ್ಯವಾದಿ ರಷ್ಯವಲ್ಲ–ಝಾರ್‌ನ ರಷ್ಯ! ಅಂದರೆ ಸಾಮ್ಯವಾದವನ್ನು ಮೀರಿ ರಾಷ್ಟ್ರೀಯ ಅಭಿಮಾನವೇ ಸ್ಟಾಲಿನ್ ಮುಖದಲ್ಲಿ ಮಾತನಾಡಿತು.

ಇಂಗ್ಲೆಂಡಿನಲ್ಲಿ ಪ್ರತಿಯೊಂದು ಚುನಾವಣೆಯಲ್ಲೂ ಸಾಮ್ಯವಾದಿಗಳು ಠೇವಣಿ ಕಳೆದುಕೊಳ್ಳುವುದೂ ಅಲ್ಲಿನ ರಾಷ್ಟ್ರೀಯತೆಯ ಪ್ರಬಲ ಆವೇಗದಿಂದಲೇ. ಮಾರ್ಷಲ್ ಟಿಟೋ (ಯುಗೊಸ್ಲೇವಿಯಾ) ರಷ್ಯದ ವಿರುದ್ಧ ಸಿಡಿದು ನಿಂತಿರುವುದೂ ಇದಕ್ಕಾಗಿಯೇ. ಅವನು ಆರ್ಥಿಕ ಸಮಸ್ಯೆಗಳಲ್ಲಿ ರಷ್ಯಕ್ಕೆ ಸಹಕಾರ ಕೊಟ್ಟರೂ ರಾಷ್ಟ್ರೀಯತೆಯನ್ನು ಬಿಟ್ಟುಕೊಟ್ಟಿಲ್ಲ. ತಾತ್ತ್ವಿಕತೆಯು (Ideological Culture) ರಾಷ್ಟ್ರೀಯತೆಯ (National Culture) ಎದುರಿಗೆ ಸೋಲೊಪ್ಪಿ ಕೊಂಡಿತು. ರಾಷ್ಟ್ರೀಯ ವಿಚಾರದೊಂದಿಗೆ ತಾತ್ತ್ವಿಕ ವಿಚಾರ ಹೊಂದಿಕೊಳ್ಳದಿದ್ದಲ್ಲಿ ಈ ಪರಿಣಾಮ ತಪ್ಪಿದ್ದಲ್ಲ. ಆದುದರಿಂದ ರಾಷ್ಟ್ರೀಯತೆಯೇ ತಾತ್ತ್ವಿಕ ವಿಚಾರ ಆಗಬೇಕು.

### ಮೂಲಶಕ್ತಿ

ವಿಮಾನ ಮೇಲಮೇಲಕ್ಕೆ ಹಾರಿದರೂ, ಪೆಟ್ರೋಲಿಗಾಗಿ ನೆಲಕ್ಕೇ ಬರಬೇಕಾದಂತೆ, ಭೂಮಿಯ ಆಕರ್ಷಣೆಯಿಂದ ವಸ್ತುಗಳೆಲ್ಲವೂ ನೆಲ ಮುಟ್ಟುವಂತೆ, ಎಲ್ಲ ಶಕ್ತಿಗಳೂ ರಾಷ್ಟ್ರೀಯತೆಯೆಡೆಗೇ ಆಕರ್ಷಿಸಲ್ಪಡುತ್ತವೆ. ಹೀಗೆ ರಾಷ್ಟ್ರೀಯತೆಯೇ ಒಂದು ರಾಷ್ಟ್ರದ ಮೂಲಶಕ್ತಿ. ಈ ಸತ್ಯವನ್ನು ಮನಗಾಣಬೇಕಾದ ಅಗತ್ಯತೆ ಇಂದು ನಮ್ಮ ದೇಶದ ಜನಕ್ಕೆ ಇರುವಷ್ಟು ಬಹುಶಃ ಪ್ರಪಂಚದ ಇನ್ನಾವ ಜನಾಂಗಕ್ಕೂ ಇರಲಾರದು!

## ೨. ರಾಷ್ಟ್ರದೇವೋ ಭವ

ನಮ್ಮ ಸುತ್ತಮುತ್ತಲ ಪರಿಸ್ಥಿತಿಯ ಕಡೆಗೆ ಕಣ್ಣು ಹೊರಳಿಸಿ ನೋಡಿದಲ್ಲಿ ಕಳಕಳಿಯುಳ್ಳ, ಸಹೃದಯನಾದ ಯಾವನೇ ಒಬ್ಬ ವಿಚಾರವಂತ ವ್ಯಕ್ತಿಯು ನಮ್ಮ ದೇಶದ ಬಗ್ಗೆ ತಳಮಳಗೊಳ್ಳುವುದು ಸಹಜ. ಎಲ್ಲೆಲ್ಲೂ ಅರಾಜಕ ಪ್ರವೃತ್ತಿಗಳು ತಲೆಯೆತ್ತುತ್ತಿವೆ. ನಮ್ಮ ಆಸೆ–ಆಕಾಂಕ್ಷೆಗಳೆಲ್ಲವೂ ದೂರದೂರ ಸರಿದಿವೆ.

**ಹೀಗೇಕೆ?**

ಕಳೆದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಅನೇಕ ಚಿಕ್ಕಪುಟ್ಟ ರಾಷ್ಟ್ರಗಳು, ದ್ವಿತೀಯ ಮಹಾಯುದ್ಧದ ಬೇಗೆಯಲ್ಲಿ ಬೆಂದು ನೆಲ ಕಚ್ಚಿದ್ದ ರಾಷ್ಟ್ರಗಳು ಸಹ, ಪ್ರಗತಿಪಥದಲ್ಲಿ ನಮಗಿಂತ ಎಷ್ಟೋ ಮುಂದೆ ಸಾಗಿವೆ. ಮಹಾಯುದ್ಧದಲ್ಲಿ ತೀವ್ರ ಹಾನಿ ಅನುಭವಿಸಿದ ಪಶ್ಚಿಮ ಜರ್ಮನಿ, ಜಪಾನ್, ಹಾಲೆಂಡ್, ಫ್ರಾನ್ಸ್, ಡೆನ್ಮಾರ್ಕ್, ಬೆಲ್ಜಿಯಂ ಮುಂತಾದ ದೇಶಗಳು ತಮಗಾದ ಅಪಾರ ಜನಹಾನಿ, ಧನಹಾನಿಗಳನ್ನು ತುಂಬಿಕೊಂಡಿರುವುದು ಮಾತ್ರವಲ್ಲದೆ, ಯುದ್ಧ ಪೂರ್ವದ ಸ್ಥಿತಿಗಿಂತ ಹೆಚ್ಚಿನ ಏಳಿಗೆ ಸಾಧಿಸಿವೆ. ಇತ್ತೀಚಿನ ಯುದ್ಧದಲ್ಲಿ ಪುಟ್ಟ ಇಸ್ರೇಲ್ ರಾಷ್ಟ್ರ ದೊಡ್ಡ ಅರಬ್ ದೇಶಗಳಿಗೆ ಮಣ್ಣು ಮುಕ್ಕಿಸಿ ಜಗತ್ತನ್ನೇ ದಿಙ್ಮೂಢಗೊಳಿಸಿರು. ೨೦೦೦ ವರ್ಷಗಳಿಗೆ ಹೀಗೆ ತಮ್ಮ ತಾಯಿನೆಲವನ್ನು ಕಳೆದುಕೊಂಡು ಜಗತ್ತಿನಾದ್ಯಂತ ಹರಿದು ಹಂಚಿಹೋಗಿದ್ದ ಆ ಜನ ಪುನಃ ಒಂದು ರಾಷ್ಟ್ರವಾಗಿ ಎದ್ದುನಿಂತರಷ್ಟೇ ಅಲ್ಲದೆ, ಸುತ್ತಮುತ್ತಿನ ರಕ್ತಪಿಪಾಸು ಆಕ್ರಮಕರ ನಡುವೆಯೂ ಸಹ ತಮ್ಮ ಅಂಗೈಯಗಲ ಭೂಮಿಯಲ್ಲೇ ಅಪ್ರತಿಮ ಪ್ರಗತಿಯನ್ನು ಸಾಧಿಸಿ ತೋರಿಸಿದ್ದಾರೆ. ಸರಕಾರಿ, ಖಾಸಗಿ, ಸಹಕಾರಿ ಉದ್ಯೋಗಗಳಲ್ಲಿ ಒಂದೊಂದರಲ್ಲೂ ಸರ್ವತೋಮುಖವಾಗಿ ಅಭಿವೃದ್ಧಿ ಸಾಧಿಸಿದ್ದಾರೆ. ಒಂದಾದ ಮೇಲೊಂದರಂತೆ ಜಯಭೇರಿ ಹೊಡೆಯುತ್ತಾ ಮರುಭೂಮಿಯಾಗಿದ್ದ ತಮ್ಮ ನೆಲವನ್ನು ಸುಖಸಮೃದ್ಧಿಯ ನಂದನವನವನ್ನಾಗಿ ಪರಿವರ್ತಿಸಿದ್ದಾರೆ.

**ಅಲ್ಲಿ–ಇಲ್ಲಿ**

ಆದರೆ ನಮ್ಮ ಸ್ಥಿತಿ ಹೀಗಿದೆ? ಅತಿ ಪ್ರಾಚೀನ ವಿಶಾಲ ದೇಶ; ಜನ



ಸಂಖ್ಯೆಯಲ್ಲಿ ವಿಶ್ವಕ್ಕೆ ಎರಡನೆಯದು. ಆದರೂ ನಾವು ಇಪ್ಪತ್ತು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿ ಅಗತ್ಯಕ್ಕಿಂತ ತೀರ ಕಡಿಮೆ. ವ್ಯಕ್ತಿವ್ಯಕ್ತಿಗೆ ಹೋಲಿಸಿದರೆ ಬುದ್ಧಿ, ಗುಣ, ಕಾರ್ಯಶಕ್ತಿ ಯಾವುದರಲ್ಲೇ ಆಗಲಿ ನಾವು ಬೇರೆ ಯಾವ ಜನಾಂಗದವರಿಗೂ ಕಳಪೆಯಿಲ್ಲ. ಯಾವನೇ ಭಾರತೀಯ ವ್ಯಕ್ತಿ ಹೊರ ದೇಶಕ್ಕೆ ಹೋಗಿ ನೆಲಸಲಿ, ಅಲ್ಲಿ ಅವನು ಖ್ಯಾತಿ ಗಳಿಸುತ್ತಾನೆ. ಉದಾಹರಣೆಗೆ ಇಂಗ್ಲೆಂಡಿನಲ್ಲಿರುವ ವೈದ್ಯಕೀಯ ರಂಗವು ಒಂದು ದೃಷ್ಟಿಯಿಂದ ನಮ್ಮದೇ ಗುತ್ತಿಗೆ. ಅಲ್ಲಿನ ನಮ್ಮ ವೈದ್ಯರೆಲ್ಲರೂ ಸ್ವದೇಶಕ್ಕೆ ಹಿಂದಿರುಗಿದ್ದೇ ಆದರೆ, ಅಲ್ಲಿನ ಸಾವಿರಾರು ಜನ ರೋಗಗಳಿಂದ ನರಳಿ ಸತ್ತಾರು. ಆಫ್ರಿಕಾದಲ್ಲೂ ಅಲ್ಲಿನ ವಾಣಿಜ್ಯೋದ್ಯಮಗಳ ಸೂತ್ರಚಾಲಕರು ಭಾರತೀಯರೇ. ಆಗ್ನೇಯ ಏಷ್ಯದ ಅನೇಕ ದೇಶಗಳ ಆರ್ಥಿಕ ಅಭಿವೃದ್ಧಿಗೂ ಭಾರತೀಯ ವಾಣಿಜ್ಯೋದ್ಯಮಿಗಳ ಪ್ರೇರಣೆ, ಪ್ರತಿಭೆ, ಪರಿಶ್ರಮಗಳೇ ಮುಖ್ಯ ಕಾರಣ. ಬ್ರಹ್ಮ ದೇಶದ ಅಭಿವೃದ್ಧಿ ಸಾಧಿಸಿದವರೂ ಭಾರತೀಯರೇ ೧೯೩೭ರವರೆಗೂ ಅದು ನಮ್ಮ ದೇಶದ್ದೇ ಒಂದು ಭಾಗವಾಗಿತ್ತು.

ಭಾರತದ ಹೊರಗಡೆ ಇಷ್ಟೆಲ್ಲ ಪವಾಡ ಸಾಧಿಸಿದ ನಮ್ಮ ಜನ ಭಾರತ ದಲ್ಲಿದ್ದಾಗ ಮಾತ್ರ ಅವರ ರೀತಿಯೇ ಬೇರೆಯಾಗುತ್ತದೆ. ತಮ್ಮ ಬುದ್ಧಿಶಕ್ತಿ ಹಾಗೂ ಪರಿಶ್ರಮಗಳಿಂದ ಭಾರತದ ಹೊರಗೆ ತಾವಿರುವ ದೇಶಗಳ ಹಿರಿಮೆಗೂ ಪ್ರಗತಿಗೂ ಕಾರಣರಾದ ಈ ವ್ಯಕ್ತಿಗಳೇ ಭಾರತದಲ್ಲಿ ಕಾಲಿರಿಸಿದರೆ ಸಾಕು, ಪೂರ್ತಿ ಬದಲಾಗಿಹೋಗುತ್ತಾರೆ. ಅವರ ಅದ್ಭುತ ಕ್ರಿಯಾಶಕ್ತಿ ಇಲ್ಲಿ ಮಾಯವಾಗುತ್ತದೆ. 'ಅಲ್ಲಿ ಇವರು ಮುಟ್ಟಿದ್ದೆಲ್ಲಾ ಚಿನ್ನ, ಇಲ್ಲಿ ಹಿಡಿದಿದ್ದೆಲ್ಲಾ ಮಣ್ಣು!' ಇಲ್ಲಿನ ನಮ್ಮ ರಾಜಕಾರಣಿ ಕರ್ತವ್ಯಭ್ರಷ್ಟ; ಉತ್ಪಾದಕ ಅಯಶಸ್ವಿ; ವರ್ತಕ ಲಾಭಬಡುಕ, ಕಾಳಸಂತೆಕೋರ; ಸರ್ಕಾರಿ ನೌಕರ ಕಡುಸ್ವಾರ್ಥಿ ಮತ್ತು ಭ್ರಷ್ಟಾಚಾರಿ; ಶ್ರಮಿಕ ಮೈಗಳ್ಳ ಹಾಗೂ ಮುಷ್ಕರ ನಿರತ; ವಿದ್ಯಾರ್ಥಿಗೆ ಶಿಸ್ತೆಂಬುದೇ ಗೊತ್ತಿಲ್ಲ– ಇದು ಇಲ್ಲಿನ ಪರಿಸ್ಥಿತಿಯನ್ನು ಅವಲೋಕಿಸುವವನಿಗೆ ಕಾಣುವ ದಾರುಣ ಚಿತ್ರ. ಆದರೆ ಇದೇ ಜನ ಹೊರದೇಶಗಳಿಗೆ ಹೋದೊಡನೆ ಅಲ್ಲಿ ಉತ್ತಮ ಹೆಸರು ಗಳಿಸುತ್ತಾರೆ. ಹೀಗೇಕೆ? ಹಾಗಾದರೆ ನಮ್ಮ ಭೂಮಿ ಮನುಷ್ಯನ ಕೀಳುಗುಣಗಳನ್ನೇ ಹೊರತರುವಂತಹದೇನು?

ಇಲ್ಲ, ಹಾಗಿರಲು ಸಾಧ್ಯವಿಲ್ಲ. ಪ್ರಾಚೀನ ಕಾಲದಿಂದಲೂ ನಮ್ಮ ನಾಡು ತ್ಯಾಗ ತಪಸ್ಯೆಗಳ ತೌರು, ಸುಖಸಮೃದ್ಧಿಗಳ ಬೀಡು. ನಮ್ಮ ಗತ ಇತಿಹಾಸವೇ ಇದಕ್ಕೆ ಸಾಕ್ಷಿ. ಇಲ್ಲಿನ ಮಣ್ಣಿನ ಕಣಕಣವೂ ನಿಷ್ಠಾವಂತ ಮಕ್ಕಳ ಬೆವರು ನೆತ್ತರುಗಳಿಂದ ಫಲವತ್ತಾಗಿದೆ. ಹಾಗಾದರೆ ಇಂದಿನ ಈ ವೈಫಲ್ಯ ಏಕೆ?

**ಎಲ್ಲ ಇದೆ– ಆದರೆ...!**

ನಮ್ಮ ಜನರಲ್ಲಿ ಚಟುವಟಿಕೆಗೇನೂ ಕೊರತೆ ಇಲ್ಲ. ಇದು ಎಲ್ಲರಿಗೂ ಎದ್ದುಕಾಣುವ ಸಂಗತಿ. ಎಲ್ಲರೂ ಒಂದಲ್ಲ ಒಂದು ರೀತಿ ಕಾರ್ಯಕುಶಲರೇ. ಕೆಲವರು ಕಲ್ಲು ತೂರಿದರೆ, ಇನ್ನು ಕೆಲವರು ರೈಲು ಬಸ್ಸುಗಳನ್ನೇ ಸುಡುತ್ತಾರೆ! ಮತ್ತೆ ಕೆಲವರು ಘೋಷಣೆ ಚಳವಳಿ ಎಬ್ಬಿಸುತ್ತಾರೆ. ಕಾರ್ಯಯೋಜನೆ, ಕಾರ್ಯಕೌಶಲಗಳಿಲ್ಲದೆ ಈ ಕೆಲಸಗಳನ್ನು ಜರುಗಿಸಲಾದರೂ ಹೇಗೆ ಸಾಧ್ಯ?

ಒಬ್ಬ ಲಂಚಕೋರ ಅಧಿಕಾರಿಯನ್ನೇ ತೆಗೆದುಕೊಳ್ಳಿ. ಸಿಕ್ಕಿಬೀಳದಂತೆ ಲಂಚ ಕೊಡುವುದೂ ತೆಗೆದುಕೊಳ್ಳುವುದೂ ಒಂದು ಕಲೆಯೇ ಸರಿ. ಅದಕ್ಕೆ ಸಾಕಷ್ಟು ಜಾಣ್ಮೆಯೂ ಬೇಕು. ಒಂದು ಕಡೆ ಒಬ್ಬ ರಾಜನ ಅಧೀನದಲ್ಲಿ ಒಬ್ಬ ಅಧಿಕಾರಿ ಇದ್ದ. ಅವನು ಮಹಾಲಂಚಕೋರ. ಅದರಿಂದ ಅವನನ್ನು ತಪ್ಪಿಸಲು ರಾಜ ಅವನನ್ನು ಬೇರೆ ಬೇರೆ ಇಲಾಖೆಗಳಿಗೆ ವರ್ಗಾಯಿಸುತ್ತಾ ಹೋದ. ಆದರೆ ಅವನು ಮಾತ್ರ ಲಂಚ ಹೊಡೆಯುವುದು ನಿಲ್ಲಿಸಲಿಲ್ಲ. ಕಡೆಗೆ ರಾಜನು ಅವನನ್ನು ಒಂದು ನದಿ ದಡದಲ್ಲಿ ಕುಳಿತು ತೆರೆಗಳನ್ನು ಎಣಿಸಿ ಪ್ರತಿನಿತ್ಯ ವರದಿಮಾಡುವಂತೆ ನೇಮಿಸಿದ. ಹೀಗಾದರೂ ಅಧಿಕಾರಿಯ ಕೈಚಳದಕ ತಪ್ಪಿಸಿದೆನೆಂದು ರಾಜ ಆಶಿಸಿದ್ದ. ಆದರೆ ಆ ಅಧಿಕಾರಿ ನದಿಯನ್ನು ಹಾಯುತ್ತಿದ್ದ ದೋಣಿಯನ್ನು ತಡೆಯತೊಡಗಿದ. ರಾಜಾಜ್ಞೆಯಂತೆ ನಾನು ಎಣಿಸಬೇಕಾಗಿದ್ದ ತೆರೆಗಳಿಗೆ ಭಂಗ ತಂದುದಕ್ಕಾಗಿ ಘೋರ ಶಿಕ್ಷೆ ಆಗುವುದಾಗಿ ದೋಣಿಕಾರರಿಗೆ ಬೆದರಿಕೆ ಹಾಕಿದ. ಹಾಗೂ ಆ ದೋಣಿಕಾರರಿಂದ ಕೈ ಬೆಚ್ಚಗೆ ಮಾಡಿಸಿಕೊಂಡು ಅವರನ್ನು ಬಿಟ್ಟ!

ನಾವು ಸೋಮಾರಿಗಳಲ್ಲವೆಂಬುದು ಸಹ ಚುನಾವಣೆಯ ಸಮಯದ ಚಟುವಟಿಕೆಗಳಿಂದ ಸ್ಪಷ್ಟವಾಗುತ್ತದೆ. ನಮ್ಮ ಜನರು ಹಿಮಾಲಯದಲ್ಲಿನ ಸಾಧು ಸಂನ್ಯಾಸಿಗಳಂತೆ ಮೌನವ್ರತ ಧರಿಸಿ ಮೂಗು ಹಿಡಿದು ಕುಳಿತಿರುವವರೇನೂ ಅಲ್ಲ. ಬೆಳಗಿನಿಂದ ರಾತ್ರಿಯವರೆಗೆ ಶಾಲೆ, ಕಾಲೇಜು, ಕಛೇರಿ, ಕಾರ್ಖಾನೆಗಳಲ್ಲಿ ನಮ್ಮ ಚಟುವಟಿಕೆ ಅಖಂಡವಾಗಿ ನಡೆದೇ ಇರುತ್ತದೆ. ನಮ್ಮ ಬುದ್ಧಿಯನ್ನೂ, ಶಕ್ತಿಯನ್ನೂ ನಮ್ಮ ಕೆಲಸಕಾರ್ಯಗಳಿಗಾಗಿ ಬಳಸುತ್ತಲೂ ಇರುತ್ತೇವೆ. ನಮ್ಮ ಆಸೆ ಆಮಿಷಗಳನ್ನು ಪೂರೈಸಿಕೊಳ್ಳಲು ಬೇಕಾದ ಬುದ್ಧಿಶಕ್ತಿ, ಪ್ರೇರಣೆ, ಆಸಕ್ತಿ, ಯೋಜನಾ ಸಾಮರ್ಥ್ಯ ಇವೆಲ್ಲವೂ ನಮ್ಮಲ್ಲಿವೆ.

## ಗುರಿ ಒಂದಿಲ್ಲ

ನಿಜಕ್ಕೂ ಒಂದು ಶ್ರೇಷ್ಠ ಜನಾಂಗವಾಗಿ ಬಾಳಲು ಬೇಕಾದ ಎಲ್ಲ ಗುಣಗಳೂ ನಮ್ಮಲ್ಲಿವೆ. ಆದರೂ ನಮ್ಮ ಸ್ಥಿತಿ ಶೋಚನೀಯವಾಗಿರುವುದೇಕೆ? ಈ ಎಲ್ಲ ಗುಣಗಳನ್ನು ಉಪಯೋಗಿಸಿಕೊಂಡು ಯಾವ ಗುರಿಯನ್ನು ಮುಟ್ಟಬೇಕೋ ಆ ಗುರಿಯನ್ನೇ ನಾವಿಂದು ಮರೆತಿದ್ದೇವೆ. ನಮ್ಮ ವೈಯಕ್ತಿಕ ಪ್ರಯತ್ನಗಳನ್ನು



ಸಮನ್ವಯಗೊಳಿಸಿ, ಸಾರ್ಥಕಗೊಳಿಸಬಲ್ಲ ಜೀವನದ ಮಧ್ಯಬಿಂದುವೇ ನಮಗಿಂದು ಮರೆಯಾಗಿದೆ. ಯಾವುದೇ ಒಂದು ಗುಂಪಾಗಲೀ, ಅದಕ್ಕೆ ಸೇರಿದ ಪ್ರತಿಯೊಬ್ಬನೂ ತನ್ನ ಸಾಮರ್ಥ್ಯವನ್ನರಿತು ಅದನ್ನು ಗುರಿಯ ಸಾಧನೆಗಾಗಿ ಉಪಯೋಗಿಸಿದಾಗಲೇ ಯಾವುದಾದರೂ ಕೆಲಸ ಫಲಿಸೀತು. ಉದಾಹರಣೆಗೆ ಭಾರವಾದ ವಸ್ತುವೊಂದನ್ನು ಎತ್ತಬೇಕಾಗಿದ್ದಲ್ಲಿ ಎಲ್ಲರೂ ಅದನ್ನು ಒಂದೇ ದಿಕ್ಕಿನಲ್ಲಿ ಎತ್ತಬೇಕು. ಒಬ್ಬೊಬ್ಬನೂ ಒಂದೊಂದು ದಿಕ್ಕಿನಲ್ಲಿ ಬಲ ಪ್ರಯೋಗಿಸಿ ಎಳೆಯುತ್ತಿದ್ದರೆ, ಅಂತಹ ಪ್ರಯತ್ನದ ಫಲ ಏನಾದೀತು? ಅವರ ಶಕ್ತಿಯೆಲ್ಲ ಖರ್ಚಾಗುವುದೇನೋ ನಿಜ. ಆದರೆ ಫಲ ಮಾತ್ರ ದೊಡ್ಡ ಸೊನ್ನೆಯೇ! ಆ ವಸ್ತುವನ್ನು ಎತ್ತಲಾಗದ್ದು ಆ ಗುಂಪಿನ ಜನಗಳಲ್ಲಿ ಶಕ್ತಿ ಇರಲಿಲ್ಲವೆಂದಲ್ಲ. ಆದರೆ ಪ್ರತಿಯೊಬ್ಬನೂ ತನ್ನ ವೈಯಕ್ತಿಕ ಶಕ್ತಿಯನ್ನು ಯಾವ ದಿಕ್ಕಿನಲ್ಲಿ ಉಪಯೋಗಿಸಬೇಕಾಗಿತ್ತು ಎಂಬುದನ್ನು ತಿಳಿದಿರಲಿಲ್ಲ.

ನಮ್ಮ ರಾಷ್ಟ್ರದ ಬಗ್ಗೆಯೂ ಅಷ್ಟೆ. ನಾವು ಸಾಧಿಸಬೇಕಾದ ಗುರಿಯೊಂದು ಬೇಕು. ನಮಗಿಂದು ಅಂತಹ ಗುರಿಯೇ ಇಲ್ಲ. ನಾವಿಂದು 'ಗೋಲೇ' ಇಲ್ಲದ ಹಾಕಿ ಆಟ ಆಡುತ್ತಿದ್ದೇವೆ. ಈ ರೀತಿಯ ಆಟದಲ್ಲಿ ಆಟಗಾರ ದಿಗ್ಭ್ರಮೆಗೊಳಗಾಗಿ ಆಟದ ಉದ್ದೇಶವನ್ನೇ ಮರೆಯುತ್ತಾನೆ. ಅಂತಹ ಆಟದಲ್ಲಿ ವಿಜಯ ಸಾಧಿಸಲು ಅನಿವಾರ್ಯವಾಗಿ ಬೇಕಾದ ಆಟಗಾರರಲ್ಲಿನ ಸಹಯೋಗದ ಮನೋಭಾವವೇ ಕಣ್ಮರೆಯಾಗುತ್ತದೆ. ಹಾಗಾದಾಗ ಆ ಆಟದಲ್ಲಿ ಸ್ವಾರಸ್ಯ ಮಾಯವಾಗುತ್ತದೆ. ಸರಿಯಾದ ಆಟದಲ್ಲಿ ಒಂದು ಗುಂಪಿನ ಆಟಗಾರರೆಲ್ಲರ ಗುರಿಯೂ ಎದುರಾಗಿ ಪಕ್ಷಕ್ಕೆ 'ಗೋಲ್' ಹೊಡೆಯುವುದೇ ಆಗಿರುತ್ತದೆ. ಈ ಏಕಮೇವ ಉದ್ದೇಶಕ್ಕಾಗಿ ಅವರೆಲ್ಲರೂ ಒಟ್ಟಾಗಿ ಪ್ರಯತ್ನಿಸುತ್ತಾರೆ. ಆದರೆ ಆ ಗುರಿ ಕಣ್ಮರೆಯಾಗಿ ಪ್ರತಿಯೊಬ್ಬನೂ ಚೆಂಡನ್ನು ತನ್ನ ಮನಸ್ಸಿಗೆ ತೋಚಿದ ಕಡೆ ಹೊಡೆಯಲು ತೊಡಗಿದರೆ ಆಗ ಎಲ್ಲ ಗೊಂದಲವೇ ಗೊಂದಲ ಆಗುತ್ತದೆ. ಆಗ ಒಬ್ಬೊಬ್ಬನೂ ಮತ್ತೊಬ್ಬನ ಎದುರಾಳಿಯೇ! ಪ್ರತಿ ಓರ್ವ ಆಟಗಾರನೂ ತನ್ನ ತಂಡ ಗೋಲು ಹೊಡೆಯಲು ಸಹಾಯವಾಗುವಂತೆ ಸೂಕ್ತ ದಿಕ್ಕಿನಲ್ಲಿ, ಸೂಕ್ತ ಸಹಕಾರಿಗೆ ಚೆಂಡನ್ನು ಸಾಗಿಸುವುದು ತನ್ನ ಕರ್ತವ್ಯವೆಂದು ಭಾವಿಸಿದಾಗ ಮಾತ್ರ ಆ ಆಟಕ್ಕೆ ಸ್ವಾರಸ್ಯ ಬರುತ್ತದೆ. ಅದರಿಂದ ಆಟಗಾರರಿಗೂ ಉತ್ಸಾಹ, ಪ್ರೇಕ್ಷಕರಿಗೂ ಆನಂದ.

ಜೊತೆಗೂಡಿ ಮಾಡಬೇಕಾದ ಕೆಲಸಕ್ಕೆ ಕಾರ್ಖಾನೆಯೂ ಮತ್ತೊಂದು ಉತ್ತಮ ನಿದರ್ಶನ. ಸಾವಿರಾರು ಜನ ಅಲ್ಲಿ ಕೆಲಸ ಮಾಡಿದರೂ ಪ್ರತಿಯೊಬ್ಬನಿಗೂ ತಾನು ನಿಷ್ಣಾತನಾಗಿರುವ ಒಂದು ಕೆಲಸದ ಭಾಗ ಇರುತ್ತದೆ. ಆದರೆ ಪ್ರತಿಯೊಬ್ಬನೂ ತಾನು ಮಾಡುತ್ತಿರುವ ಕೆಲಸವು ಅದಕ್ಕಿಂತ ಹಿರಿದಾದ ಕಾರ್ಯವೊಂದರ ಅವಿಭಾಜ್ಯ ಅಂಶವೆಂದು ಅರಿತಾಗಲೇ ಆ ಕಾರ್ಯದ ಸಫಲತೆಗೆ ಅವನ ಕೊಡುಗೆಯು ಪರಿಣಾಮಕಾರಿಯಾಗುತ್ತದೆ.

ಇದರಂತೆಯೇ ಒಂದು ವಾದ್ಯಗೋಷ್ಠಿ ಸಹ. ವಿವಿಧ ವಾದ್ಯಗಳ ಶ್ರುತಿ ಸಮಾನವಾಗಿದ್ದು, ಎಲ್ಲ ವಾದ್ಯಗಾರರೂ ಒಂದೇ ರಾಗ ಬಾರಿಸಿದಾಗ ಮಾತ್ರ ಸಂಗೀತ ಇಂಪಾಗಿ ಕೇಳಿಬಂದೀತು.

## 'ರಾಷ್ಟ್ರ'ದ ಸ್ಥಾನದಲ್ಲಿ 'ವ್ಯಕ್ತಿ'

ಒಟ್ಟಿನಲ್ಲಿ : ನಮ್ಮ ರಾಷ್ಟ್ರದ ಪರಮವೈಭವ ಸಾಧಿಸಲು ಅಗತ್ಯವಾದ ಎಲ್ಲ ಸಾಧನ ಸಾಮಗ್ರಿಗಳೂ ನಮ್ಮ ದೇಶದಲ್ಲಿ ವಿಪುಲವಾಗಿವೆ. ಆದರೆ ನಮ್ಮ ಪ್ರಯತ್ನಗಳನ್ನು ಸಮನ್ವಯಗೊಳಿಸಿ ಒಗ್ಗೂಡಿಸಬಲ್ಲ ಒಂದು ಗಿರಿಯಾಗಲೀ, ಆ ಗುರಿಯ ಸಾಧನೆಗೆ ಯೋಗ್ಯ ದಿಕ್ಕಾಗಲೀ ನಮ್ಮಲ್ಲಿಲ್ಲ. ಆ ಗುರಿ, ಆ ಕೇಂದ್ರಬಿಂದು ಯಾವುದು? ಅದೇ 'ನಮ್ಮ ರಾಷ್ಟ್ರ'. 'ಸ್ವರಾಷ್ಟ್ರ'ವೇ ನಮ್ಮ ಜೀವನದ ಮೂಲಾಧಾರ ಆಗಬೇಕು. ಆದರೆ ನಾವಿಂದು ಅದನ್ನು ಮರೆತಿದ್ದೇವೆ. ನಮ್ಮೆಲ್ಲರ ಪ್ರಯತ್ನಗಳೂ ವೈಯಕ್ತಿಕ ಸ್ವಾರ್ಥಸಾಧನೆಗೇ ಅಂಟಿಕೊಂಡಿವೆ. ನಮ್ಮ ಆರ್ಥಿಕ ಯೋಜನೆಗಳ ಉದ್ದೇಶ ಸಹ ಇದೇ ಆಗಿದೆ. ಜೀವನಮಟ್ಟವನ್ನು ಏರಿಸುವ ವಿಚಾರವೂ ಅದೇ ಜಾಡಿನಲ್ಲಿ ಸಾಗಿದೆ. ನಮಗೆ, ರಾಷ್ಟ್ರೀಯ ಮಟ್ಟ ಎಂದರೇನು, ಅದನ್ನು ಮೇಲೆತ್ತುವ ವಿಧಾನ ಯಾವುದು ಎನ್ನುವುದರ ಕಲ್ಪನೆ ಅಲ್ಪ ಮಾತ್ರವೂ ಇಲ್ಲ. ತತ್ಫಲವಾಗಿ ವ್ಯಕ್ತಿಯ ಮಟ್ಟವನ್ನು ಏರಿಸುವ ಎಲ್ಲ ಪ್ರಯತ್ನಗಳೂ ಮಣ್ಣುಪಾಲಾಗುತ್ತಿವೆ. ಅಲ್ಲದೆ, ಅಂತಹ ಪ್ರಯತ್ನಗಳಿಂದ ಅವನ ಮಟ್ಟ ಮತ್ತೂ ಕೆಳಗಿಳಿಯುತ್ತಿದೆ. ಇದು ಏತದ ಆಟದಂತೆ. ಅದರಲ್ಲಿ ಆಟಗಾರ ಭಾರ ಹಾಕಿ ಒತ್ತಿದಷ್ಟೂ ಕೆಳಕ್ಕೇ ಇಳಿಯುತ್ತಾನೆ. ಭಾರ ಕಡಿಮೆ ಮಾಡಿಕೊಂಡಷ್ಟೂ ಅವನು ಮೇಲೇರುತ್ತಾನೆ. ಅದರಂತೆಯೇ ವ್ಯಕ್ತಿಯ ಸ್ವಾರ್ಥವನ್ನು ಒತ್ತಿ ಹೇಳಿದಷ್ಟೂ ಅವನು ಕೆಳಗೇ ಇಳಿಯುತ್ತಾನೆ. ವ್ಯಕ್ತಿಯ ಸ್ವಾರ್ಥ ಹಗುರ ಮಾಡಿಕೊಂಡಷ್ಟೂ ರಾಷ್ಟ್ರ ಜೀವನ ಸಂಪನ್ನವಾಗುತ್ತದೆ; ಅವನ ಮಟ್ಟವೂ ಮೇಲೇರುತ್ತದೆ. ವ್ಯಕ್ತಿಯ ಜೀವನಮಟ್ಟವೂ ರಾಷ್ಟ್ರದ ಜೀವನಮಟ್ಟವೂ ಪರಸ್ಪರ ಹೊಂದಿಕೊಂಡಿವೆಯಲ್ಲದೆ, ರಾಷ್ಟ್ರದ ಏರಿಳಿತಗಳ ಜೊತೆಗೇ ಅವೂ ಏರಿಳಿಯುತ್ತಿರುತ್ತವೆ. ಈ ಮೂಲಭೂತ ಸತ್ಯವನ್ನೇ ನಾವು ಮರೆತಿದ್ದೇವೆ. ಇಂದು ವ್ಯಕ್ತಿಯು ತನ್ನ ವೈಯಕ್ತಿಕ ಸ್ವಾರ್ಥ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ರಾಷ್ಟ್ರದ ಹಿತಾಸಕ್ತಿಗಳನ್ನು ಬಲಿಕೊಡುತ್ತಿರುವುದರಿಂದಲೇ ಎಲ್ಲ ರೀತಿಯ ತಿಕ್ಕಾಟ, ಗೊಂದಲಗಳೂ ಉದ್ಭವಿಸಿವೆ. ರಾಷ್ಟ್ರ, ವ್ಯಕ್ತಿ ಇವೆರಡರ ಅಧಃಪತನವೂ ಆಗುತ್ತಿದೆ.

ರಾಷ್ಟ್ರಹಿತವನ್ನು ಕಡೆಗಣಿಸಿ ವೈಯಕ್ತಿಕ ಸ್ವಾರ್ಥ ಸಾಧಿಸಿಕೊಳ್ಳುವ ಪ್ರವೃತ್ತಿಯನ್ನು ತಡೆಗಟ್ಟಲು ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಬಲವಾದ ನಿಯಂತ್ರಣ ಅಗತ್ಯವೆಂದು



ಭಾವಿಸಿ ತಕ್ಕ ಕಾನೂನುಗಳನ್ನು ರಚಿಸಲಾಗುತ್ತಿದೆ. ಅದರಿಂದಾಗಿ ವ್ಯಕ್ತಿಯ ಬದಲಿಗೆ ಶಾಸನಕರ್ತನೇ ಸವಶಕ್ತನಾಗಿ ಬೆಳೆದಿರುವ ಸ್ಥಿತಿ ಬಂದೊದಗಿದೆ. ಅಧಿಕಾರವು ಬಿರ್ಲಾ, ಟಾಟಾಗಳಿಂದ ಅರ್ಥಮಂತ್ರಿಯ ಕೈಗೆ ಬದಲಾಯಿಸಿದೆ ಅಷ್ಟೆ. ವ್ಯಕ್ತಿ ಪ್ರಾಬಲ್ಯಕ್ಕೆ ಅಂಕುಶ ಹಾಕಿಡಲು ನಿಯಂತ್ರಣಗಳನ್ನೂ ಹೇರಲಾಗುತ್ತಿದೆ. ಪ್ರಾಂತ, ಭಾಷೆ, ರಾಜಕೀಯ ಮುಂತಾದ ರಂಗಗಳಲ್ಲಿ ಬೆಳೆಯುತ್ತಿರುವ ಅತಿರೇಕದ ದುಷ್ಪವೃತ್ತಿಗಳನ್ನು ತಡೆದು ಅವನ್ನು ನಿಯಂತ್ರಿಸಲು ಎಲ್ಲ ರೀತಿಯ 'ಬ್ರೇಕ್'ಗಳನ್ನು ವಿಧಿಸಲಾಗುತ್ತಿದೆ. ಎಲ್ಲ ಕಡೆಗಳಿಂದಲೂ ಬ್ರೇಕ್‌ಗಳಿಮದ ತಡೆಹಿಡಿಯಲ್ಪಟ್ಟು, ಆದರೆ ವ್ಯಕ್ತಿಸ್ವಾರ್ಥದ ಪ್ರೇರಣೆಯಿಂದ ಚಲಿಸುವ ವಾಹನದಂತಾಗಿದೆ ನಮ್ಮ ರಾಷ್ಟ್ರದ ಸ್ಥಿತಿ! ಬ್ರೇಕ್ ಸದಾ ಹಾಕುತ್ತಿದ್ದರೆ, ವಾಹನ ಚಲಿಸುವುದಾದರೂ ಹೇಗೆ? ಬ್ರೇಕ್ ಇರುವುದು ಅನಾಹುತಗಳನ್ನು ತಪ್ಪಿಸಲೆಂದು ಮಾತ್ರ. ವಾಹನದ ಯಂತ್ರ ಸಕ್ರಿಯವಾಗಿದ್ದಾಗಲೂ ಬ್ರೇಕ್‌ಗಳನ್ನು ಒಂದೇ ಸಮನೆ ಹಾಕುತ್ತಿದ್ದಲ್ಲಿ ಅದರ ಶಕ್ತಿಯೂ ವ್ಯರ್ಥವಾಗಿ ಅದರ ಯಂತ್ರಕ್ಕೂ ಧಕ್ಕೆ ತಟ್ಟುವುದು ಖಂಡಿತ.

## ರಾಷ್ಟ್ರದೇವೋ ಭವ

ನಾವು ಮುಟ್ಟಬೇಕಾದ ಅಂತಿಮ ಗುರಿ ಯಾವುದೆಂದು ಒಮ್ಮೆ ನಿರ್ಧಾರ ಆಯಿತೆಂದರೆ ದಾರಿ ಯಾವುದಾದರೂ ಸರಿಯೆ, ಗುರಿಯನ್ನು ಹೋಗಿ ಮುಟ್ಟಬಹುದು. ಬೆಟ್ಟದ ತುದಿಯಲ್ಲಿರುವ ದೇವರ ದರ್ಶನ ಮಾಡುವುದೇ ಗುರಿ ಆಗಿದ್ದಲ್ಲಿ ಭಕ್ತರು ಬೆಟ್ಟದ ಶಿಖರವನ್ನು ಯಾವ ರೀತಿಯಾದರೂ ತಲುಪಬಲ್ಲರು. ಕೆಲವರು ಹಾಡುತ್ತಾ ಹೋಗಬಹುದು. ಕೆಲವರು ನಡೆದೇ ಹೋಗಬಹುದು. ಮತ್ತೆ ಕೆಲವರು ಮೋಟಾರ್ ವಾಹನದಲ್ಲಿ ಹೋಗಬಹುದು. ಹಲವರು ಉದ್ದಕ್ಕೂ ನಮಸ್ಕಾರ ಹಾಕುತ್ತಲೇ ಹೋಗಬಹುದು. ಹೇಗೆ ಹೋದರೂ ಕಡೆಗೆ ಎಲ್ಲರೂ ಶಿಖರ ಮುಟ್ಟುವುದಂತೂ ನಿಶ್ಚಿತ. ಆದರೆ, ಬೆಟ್ಟದ ತುದಿಯಲ್ಲಿರುವ ದೇವಸ್ಥಾನವೇ ಕಣ್ಣಿಗೆ ಕಾಣಿಸದೆ, ತಾನು ಅಲ್ಲಿಗೆ ಏಕೆ ಬಂದೆನೆಂಬುದನ್ನೇ ಮರೆತವನು ಜೀವನಪೂರ್ತಿ ಬೆಟ್ಟದ ಸುತ್ತ ಸುತ್ತುತ್ತಲೇ ಇರುವನೇ ಹೊರತು ಎಂದಿಗೂ ಅವನು ದೇವಸ್ಥಾನವನ್ನು ತಲುಪಲಾರನು.

ನಮಗಾದರೋ ರಾಷ್ಟ್ರವೇ ದೇವರು– 'ರಾಷ್ಟ್ರದೇವೋ ಭವ!' ಒಮ್ಮೆ ಈ ಜೀವನಧ್ಯೇಯದ ಅರಿವಾಯಿತೆಂದರೆ ಉಳಿದೆಲ್ಲ ನಮ್ಮ ಸಮಸ್ಯೆಗಳೂ ತಮಗೆ ತಾವೇ ಅದೃಶ್ಯವಾಗುತ್ತವೆ. ಆಗ ರಾಷ್ಟ್ರಸೇವೆಯೇ ನಮ್ಮ ಜೀವನದ ನೈಜ ಸಾರ್ಥಕತೆ ಆಗುತ್ತದೆ. ನಾವು ಪ್ರತಿಯೊಬ್ಬರೂ ಈ ರಾಷ್ಟ್ರ ಶರೀರದ ಸಜೀವ ಅಂಗವೇ. ಈ ರಾಷ್ಟ್ರ ಜೀವಂತವಾಗಿ, ಆತ್ಮಸಹಿತವಾಗಿ ಇದೆ ಎಂದೇ ನಾವು– ಅದರ ಅಂಗಾಂಗಗಳು– ಜೀವಿಸಿದ್ದೇವೆ. ಯಾವುದಾದರೊಂದು ಅಂಗ ತಪ್ಪಾಗಿ ವರ್ತಿಸಿದಲ್ಲಿ

ಅದನ್ನು ಕತ್ತರಿಸಿಹಾಕುವ ಅಗತ್ಯವಿಲ್ಲ. ಆ ಅಂಗವನ್ನು ಬಂಧಿಸುವುದೂ ಉಪಯೋಗವಿಲ್ಲ. ಆತ್ಮಚೇತನವು ದೋಷಮುಕ್ತವಾದೊಡನೆ ಆ ಅಂಗ ತಾನಾಗಿಯೇ ಸರಿಹೋಗುತ್ತದೆ. ಇಲ್ಲವಾದಲ್ಲಿ ಅದೇ ತಪ್ಪನ್ನು ಮತ್ತೊಂದು ಅಂಗ ಸಹ ಮಾಡುವ ಸಂಭವ ಇರುವುದರಿಂದ ಕೇವಲ ಆ ಒಂದು ಅಂಗವನ್ನು ಕಟ್ಟಿ ಹಾಕುವುದರಿಂದ ಸಮಸ್ಯೆ ಪರಿಹಾರವಾಗದು.

**ನಿಷೇಧಾತ್ಮಕ ಕಲ್ಪನೆಯ ದುರಂತ**

ನಮ್ಮ ಜೀವನದಲ್ಲಿರಬೇಕಾದ ಶುದ್ಧ ರಾಷ್ಟ್ರೀಯ ಅಸ್ಮಿತೆಯು ಕಣ್ಮರೆಯಾಗಿರುವುದೇ ನಮ್ಮ ಇಂದಿನ ದುರವಸ್ಥೆಗೆ ಕಾರಣ. ಇದು ಕೇವಲ ಕಳೆದ ೨೦ ವರ್ಷಗಳ ಕಥೆಯಲ್ಲ; ಅದಕ್ಕೂ ಹಿಂದಿನದು. ಬ್ರಿಟಿಷರು ಇಲ್ಲಿದ್ದಾಗ 'ಬ್ರಿಟಿಷ್ ವಿರೋಧವೇ ದೇಶಭಕ್ತಿ' ಎಂಬ ನಿಷೇಧಾತ್ಮಕ ಕಲ್ಪನೆಯನ್ನೇ ಜನಗಳಿಗೆ ಅರೆದು ಕುಡಿಸಲಾಗಿತ್ತು. ರಾಷ್ಟ್ರದ ಬಗೆಗೆ ಭಾವಾತ್ಮಕ ದೃಷ್ಟಿಕೋನವೇ ಬೆಳೆದಿರಲಿಲ್ಲ. 'ರಾಷ್ಟ್ರದ ಕಲ್ಪನೆ ಇರುವ ಅಗತ್ಯವೇನು? ಅದಿಲ್ಲದೆಯೇ ನಾವು ಜೊತೆಗೂಡಿ ಕೆಲಸ ಮಾಡಬಲ್ಲೆವಲ್ಲ?' ಎಂದು ಒಬ್ಬ ಮಹನೀಯರು ನನ್ನೊಡನೆ ಒಮ್ಮೆ ಹೇಳಿದರು. 'ನಾವು ಒಂದು ರಾಷ್ಟ್ರದ ಅಂಗಗಳಾಗಿರದೆಯೇ ಜೊತೆಗೂಡಿ ಜೀವನ ನಡೆಸುವುದಾದರೂ ಹೇಗೆ?' ಎಂದು ಅವರನ್ನು ನಾನು ಕೇಳಿದೆ. ಅದಕ್ಕವರು 'ನಾವು ಸುಮ್ಮನೆ ಪರಸ್ಪರ ಸಹಕರಿಸಬಹುದು' ಎಂದು ಉತ್ತರವಿತ್ತರು. 'ನಾವು ಪರಸ್ಪರ ಏಕೆ ಸಹಕರಿಸಬೇಕು?' ಎಂಬ ನನ್ನ ಮರುಪ್ರಶ್ನೆಗೆ 'ನಾವೆಲ್ಲರೂ ಹಿಂದುಸ್ಥಾನದಲ್ಲೇ ವಾಸಿಸುವುದರಿಂದ' ಎಂದು ಅವರು ಉತ್ತರಿಸಿದರು. 'ಹಿಂದುಸ್ಥಾನ ಎಂದರೆ ಏನು? ಕೇವಲ ನೆಲವೇ, ಪರ್ವತಗಳೇ, ನದಿಯೇ?' ಎಂದು ನಾನು ಮತ್ತೆ ಕೇಳಿದೆ. ಆದರೆ ಅವರ ವಿಚಾರಸರಣಿ ಅಲ್ಲಿಗೇ ನಿಂತಿತು. 'ಹಿಂದುಸ್ಥಾನದಲ್ಲಿ ವಾಸಿಸುವ ಜನರು' ಎಂದು ಯಾರನ್ನು ಕುರಿತು ನಾನು ಹೇಳಿದೆ ಎಂಬುದು ಅವರಿಗೆ ಸ್ಪಷ್ಟವಿರಲಿಲ್ಲ. 'ಈ ದೇಶದಲ್ಲಿ ಯಾವ ರೀತಿಯ ಅಥವಾ ಯಾವ ಗುಂಪಿನ ಜನಗಳು ರಾಷ್ಟ್ರ ಆಗಬಲ್ಲರು?' ಎಂಬುದನ್ನು ಅವರು ಅರಿತಿರಲಿಲ್ಲ. ನಮ್ಮ ಜನಗಳು ನಂಬಿದ್ದ ಕೇವಲ 'ಬ್ರಿಟಿಷರನ್ನು ಹೊರಗಟ್ಟುವ' ನಿಷೇಧಾತ್ಮಕ ರಾಷ್ಟ್ರೀಯ ಕಲ್ಪನೆಯೇ ಈ ಎಲ್ಲ ಗೊಂದಲಗಳಿಗೆ ಕಾರಣ.

**ಹಿಂದುತ್ವ–ರಾಷ್ಟ್ರೀಯತ್ವದ ಅಳತೆಗೋಲು**

ಸ್ವಾತಂತ್ರ್ಯ ಬಂದ ತರುವಾಯ ನಾವು ಹೇಗೆ ಜೀವಿಸಬೇಕು ಎಂಬ ಭವಿಷ್ಯದ ಚಿತ್ರ ನಮಗಿರಲಿಲ್ಲ. 'ಸ್ವರಾಜ್ಯ' ಪದದ ಪೂರ್ಣಾರ್ಥ ತಿಳಿಯದೆಯೇ ನಾವು ಅದನ್ನು ನಮ್ಮ ಗುರಿಯಾಗಿ ಇಟ್ಟುಕೊಂಡಿದ್ದೆವು. ಮುಸಲ್ಮಾನರು ಅದನ್ನು ಮುಸ್ಲಿಂ



ಲೀಗಿನ ರಾಜ್ಯ ಎಂದು ಅರ್ಥಮಾಡಿಕೊಂಡು 'ಪಾಕಿಸ್ತಾನ' ಬೇಕೆಂದು ಹಟ ಹಿಡಿದರು. ಹಿಂದುಗಳಾದರೋ ಆಗ ತಮ್ಮೆಲ್ಲರ ಐಕ್ಯದ ಸೂತ್ರವನ್ನೇ ಮರೆತಿದ್ದರು. ಅದಕ್ಕಾಗಿ ನಮ್ಮೆಲ್ಲರನ್ನೂ ಒಂದಾಗಿ ಸೇರಿಸಬಲ್ಲ ಒಂದು ಧ್ಯೇಯವಾಕ್ಯ ನಮಗೀಗ ಆವಶ್ಯಕವಿದೆ. 'ಅದು ಅತಿವ್ಯಾಪ್ತಿಯೂ ಆಗಿರಬಾರದು, ಅವ್ಯಾಪ್ತಿಯೂ ಆಗಿರಬಾರದು.' ನಮ್ಮ ಗತ ಇತಿಹಾಸವನ್ನು ಹೊಕ್ಕು ನೋಡಿದಲ್ಲಿ 'ಹಿಂದು' ಎನ್ನುವ ಹೆಸರು ಈ ವ್ಯಾಖ್ಯೆಗೆ ಒಪ್ಪುತ್ತದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಮ್ಮ ನಾಯಕರು 'ಹಿಂದು–ಮುಸ್ಲಿಂ ಐಕ್ಯ' ಎಂಬ ಘೋಷಣೆಯನ್ನು ಸೃಷ್ಟಿಸಿದರಷ್ಟೆ. 'ಹಿಂದು–ಮುಸ್ಲಿಂ' ಐಕ್ಯಕ್ಕೆ ಪೂರ್ವಭಾವಿ ಆವಶ್ಯಕತೆಯಾಗಿ 'ಹಿಂದುಗಳ ಐಕ್ಯ' ಇರಬೇಕು ಎಂಬಂಶವೇ ಅವರಿಗೆ ಮರೆವಾಗಿತ್ತು.

ನಮ್ಮನ್ನು ಒಟ್ಟಾಗಿಸಲು 'ಹಿಂದು' ಶಬ್ದವೇ ಸಾಕು ಎಂದು ಅವರು ಕಣ್ಮುಚ್ಚಿ ನಂಬಿದರೂ ಅದನ್ನು ಸಾಧಿಸಲು ಪ್ರಯತ್ನ ಮಾತ್ರ ಏನೂ ಮಾಡಲಿಲ್ಲ. ಅದರ ಬದಲಿಗೆ ಹಿಂದು ಎನಿಸಿದ ಪ್ರತಿಯೊಂದು ಸಂಗತಿಯನ್ನೂ ಹೆಜ್ಜೆ ಹೆಜ್ಜೆಗೂ ಅವರು ಖಂಡಿಸಿದರು. ಇದರ ಪ್ರತಿಫಲವಾಗಿ ಆ ಏಕತೆಯ ದೃಷ್ಟಿಕೋನ ದೂರವಾಗಿ ಪರಸ್ಪರ ಒಡಕು–ಕಚ್ಚಾಟಗಳ ಬೇಗುದಿಗೆ ನಾವು ಬಿದ್ದೆವು. ನಮ್ಮ ಹಿಂದಿನ ನಾಯಕರು ಮಾಡಿದ ಆ ತಪ್ಪುಗಳನ್ನು ಸರಿಪಡಿಸಿಕೊಂಡು ನಾವೀಗ ಮುಂದುವರಿಯಬೇಕಾಗಿದೆ. ಸ್ವಾತಂತ್ರ್ಯಸಂಪಾದನೆಯ ಭರದಲ್ಲಿ ಕ್ರಮಿಸಿದ ತಪ್ಪು ದಾರಿಯಿಂದಾಗಿ ಒದಗಿರುವ ಅನಾಹುತಗಳನ್ನು ಅತಿ ಶೀಘ್ರವಾಗಿ ಸರಿಪಡಿಸಬೇಕು. ಇಲ್ಲಿಯ ರಾಷ್ಟ್ರೀಯ ಜೀವನವು ಹಿಂದು ಜೀವನಾದರ್ಶಗಳೊಂದಿಗೆ ಸಮರಸವಾಗಬೇಕೆಂಬ ಸತ್ಯವನ್ನು ಇನ್ನಾದರೂ ನಾವು ಅರಿತುಕೊಳ್ಳಬೇಕಾಗಿದೆ. ಇದೇ ಅಳತೆಗೋಲನ್ನು ಸ್ಥಿರವಾಗಿಟ್ಟು ನಮ್ಮ ಧ್ಯೇಯ ಧೋರಣೆಗಳನ್ನು ನಿಶ್ಚಿತಪಡಿಸಬೇಕು. ಉಷ್ಣ ಮಾಪಕದಲ್ಲಿ ನೀರು ಕುದಿಯುವ ಬಿಂದು ೦°ಯ ನಿರ್ಧಾರ ಆಗಿರುವುದರಿಂದಲೇ ನಾವು ಕಂಡುಹಿಡಿಯುವ ೨೦° ಉಷ್ಣ ಅಥವಾ ೫° ಶೀತ ಮುಂತಾದ ಅಳತೆಗಳಿಗೆ ಬೆಲೆಯಿದೆ. ಇದರಂತೆಯೇ ನಮ್ಮ ಜೀವನದಲ್ಲೂ 'ಹಿಂದು ರಾಷ್ಟ್ರ'ದಿಂದಲೇ ನಾವು ಆರಂಭಿಸಬೇಕು.

**ಸಂಕಟದಲ್ಲಿ ಸತ್ಯದ ಅರಿವು**

ನಾವೆಲ್ಲ 'ಒಂದೇ ರಾಷ್ಟ್ರದವರು', 'ಹಿಂದು ರಾಷ್ಟ್ರದವರು' ಎಂಬಂಶ ನಮ್ಮ ಹೃದಯಾಂತರಾಳದಲ್ಲಿ ಸುಪ್ತವಾಗಿದ್ದೇ ಇದೆ. ವಿಪತ್ತುಗಳು ಎರಗಿದಾಗ ಆ ಅರಿವು ಪ್ರಕಟವಾಗಿ ಪ್ರಜ್ವಲಿಸುತ್ತದೆ. ಪಾಕಿಸ್ತಾನ ಆಕ್ರಮಣ ಮಾಡಿದಾಗ ಶಿವಾಜಿ, ಪ್ರತಾಪರು ತಾವಾಗಿಯೇ ಸ್ಮರಣೆಗೆ ಬಂದರು. ೧೯೬೨ರಲ್ಲಿ ಚೀನೀಯರ ಆಕ್ರಮಣ ಆದಾಗಲಂತೂ ಹಿಮಾಲಯದ ಭಾವಪೂರ್ಣ ವರ್ಣನೆಯಲ್ಲಿ ದೇಶದ ಎಲ್ಲ

ವರ್ಗದ ಜನರೂ ಮುಂದಾದರು. ಮಾನಸಸರೋವರದ ಅಸ್ತಿತ್ವ, ಪಾರ್ವತಿಯ ತಪಸ್ಸು, ಇವೆಲ್ಲವೂ ಜನರ ಸ್ಮೃತಿಪಟಲದ ಮೇಲೆ ಪುನಃ ಬಂದುನಿಂತವು– ಕಾಳಿದಾಸನ ಮಾತುಗಳು ದೇಶಾದ್ಯಂತ ಮರುದನಿಗೊಂಡವು. ಬೇರಾವ ಸಮಯದಲ್ಲಾದರೂ ಇದೇ ಪದಗಳನ್ನಾಡಿದ್ದರೆ ಅವು ಜಾತೀಯ, ಪ್ರತಿಕ್ರಿಯಾತ್ಮಕ ಹಾಗೂ ಪ್ರಗತಿವಿರೋಧಿ ಎಂದು ಖಂಡಿಸಲಾಗುತ್ತಿತ್ತು. ವಿವೇಚನಾಹೀನ ಬಾಲಕನೊಬ್ಬನಿಗೆ ಹಸಿವಾದಾಗಲೇ ತಾಯಿಯ ನೆನಪಾಗುತ್ತದೆ. ಹೊಟ್ಟೆ ತುಂಬಿತೆಂದರೆ ತಾಯಿಯನ್ನು ಮರೆಯುತ್ತಾನೆ. ಕಷ್ಟದಲ್ಲಿದ್ದಾಗ ಮಾತ್ರ ದೇಶವನ್ನು ಜ್ಞಾಪಿಸಿಕೊಳ್ಳುವುದು ನೈಜ ದೇಶಭಕ್ತನಿಗೆ ಸಲ್ಲದು.

**ದುಃಖ ಮೇ ಸಮಿರನ ಸಬ್ ಕರೇ**
**ದುಃಖ ಮೇ ಕರೇ ನ ಕೋಇ ॥**

ದುಃಖಕಾಲದಲ್ಲಿ ಎಲ್ಲರೂ ದೇವರ ಸ್ಮರಣೆ ಮಾಡುತ್ತಾರೆ. ಆದರೆ ಸುಖದಲ್ಲಿದ್ದಾಗ ಯಾರೂ ಇಲ್ಲ ಎಂದಿದ್ದಾನೆ ಸಂತ ಕಬೀರ. ಒಬ್ಬನಿಗೆ ಖಾಯಿಲೆಯಾದಾಗ ತನಗೆ ಆರೋಗ್ಯವಾದ ಮೇಲೆ 'ಸತ್ಯನಾರಾಯಣ ಪೂಜೆ' ಮಾಡುವುದಾಗಿ ಹರಕೆ ಹೊರುತ್ತಾನೆ. ಆದರೆ ಆ ಕಥೆಯಲ್ಲಿ ನಾವು ಕೇಳುವ ಆ 'ಸತ್ಯ' ಏನು? ಕಷ್ಟ ಕಾರ್ಪಣ್ಯಗಳ ಸಮಯದಲ್ಲಿ ನಾವು ಜ್ಞಾಪಿಸಿಕೊಳ್ಳುವುದೇ 'ಸತ್ಯ' ಎಂದು ಅದರಲ್ಲಿ ವರ್ಣಿಸಲ್ಪಟ್ಟಿದೆ. ಕಬೀರ ಮುಂದುವರಿದು:

**ಸುಖ ಮೇ ಸುಮಿರನ ಜೋ ಕರೇ**
**ದುಃಖ ಕಾಹೇ ಕೋ ಹೋಇ ॥**

ಸುಖಸಂತೋಷಗಳ ಮಧ್ಯದಲ್ಲೂ ನಾವು ದೇವರನ್ನು ಸ್ಮರಿಸಿಕೊಂಡಲ್ಲಿ ದುಃಖವೇ ಬಾರದು ಎಂದಿದ್ದಾನೆ. ರಾಷ್ಟ್ರಜೀವನದಲ್ಲೂ ಹೀಗೆಯೇ.

ಬಿಹಾರದಲ್ಲಿ ಭೀಕರ ಕ್ಷಾಮ ಆವರಿಸಿದಾಗ ಅಲ್ಲಿನ ಜನ ಕನ್ಯಾಕುಮಾರಿಯಿಂದ ಹಿಮಾಲಯದವರೆಗಿನ ಇಡೀ ದೇಶ ಒಂದು, ಇಡೀ ದೇಶವಾಸಿಗಳು ನಮ್ಮ ಸಹಾಯಕ್ಕೆ ಧಾವಿಸಬೇಕು ಎನ್ನುತ್ತಿದ್ದರು. ಆದರೆ ಹೆಚ್ಚು ಆಹಾರವನ್ನು ದೇವರು ಅವರಿಗೆ ಕರುಣಿಸಿದಾಗ ಮಾತ್ರ ಎಲ್ಲವೂ ತಮಗೇ ಬೇಕೆಂದರು. ಪಂಜಾಬ್ ಪ್ರಾಂತ್ಯಕ್ಕೆ ಕಷ್ಟ ಬಂದಾಗ ಪಂಜಾಬಿಗಳಿಗೆ ರಾಷ್ಟ್ರ ನೆನಪಾಯಿತು. ಆದರೆ ಕೇರಳ ಪ್ರಾಂತಕ್ಕೆ ಆಹಾರ ಕಳಿಸಬೇಕೆಂದು ಅವರನ್ನು ಕೇಳಿದಾಗ, 'ಆಹಾರವನ್ನು ಹೊರಗೆ ಕಳುಹಿಸಿ ಪಂಜಾಬಿನಲ್ಲೆ ಬೆಲೆ ಏರಲು ಅವಕಾಶ ಏಕೆ ಕಲ್ಪಿಸಬೇಕು? ಕೇರಳಕ್ಕೆ ಬೇಕಿದ್ದಲ್ಲಿ ಅಮೆರಿಕಾದಿಂದ ಆಹಾರ ತರಿಸಿಕೊಳ್ಳಲಿ' ಎಂದರು. ಬೆಂಗಳೂರಿನ ವ್ಯಕ್ತಿಗೆ ಬೊಂಬಾಯಿನಲ್ಲಿದ್ದಾಗ ರಾಷ್ಟ್ರ ಜ್ಞಾಪಕಕ್ಕೆ ಬರುತ್ತದೆ. ಬೆಂಗಳೂರಿಗೆ



ಮರಳಿ ಬಂದ ಕ್ಷಣವೇ ಅವನು ರಾಷ್ಟ್ರವನ್ನು ಮರೆಯುತ್ತಾನೆ. ಉತ್ತರದ ವ್ಯಾಪಾರಿಯೊಬ್ಬ ಮದ್ರಾಸಿನಲ್ಲಿ ವ್ಯಾಪಾರ ನಡೆಸುವಾಗ ರಾಷ್ಟ್ರದ ಬಗ್ಗೆ ಮಾತನಾಡುತ್ತಿರುತ್ತಾನೆ. ಆದರೆ ಉತ್ತರ ಪ್ರದೇಶಕ್ಕೆ ವಾಪಸಾದಾಗ ಅವನಿಗೆ ರಾಷ್ಟ್ರದ ಮರೆವಾಗುತ್ತದೆ. ದೆಹಲಿಯಲ್ಲಿರುವಾಗ ಒಬ್ಬ ತಮಿಳಿನವನು ಭಾರತವನ್ನು ಸ್ಮರಿಸಿಕೊಂಡರೂ, ಮದ್ರಾಸಿಗೆ ವಾಪಸಾದಾಗ ಅವನು 'ಮದ್ರಾಸಿ'ಯೇ ಆಗುತ್ತಾನೆ. ಆದರೆ ನಮ್ಮ ಪರಂಪರೆಯು ಅತಿ ಹಿಂದಿನಿಂದಲೂ ರಾಷ್ಟ್ರೀಯ ಕಲ್ಪನೆಯನ್ನು ಮನಸ್ಸಿನಲ್ಲಿ ಅಚ್ಚೊತ್ತುವುದೇ ಆಗಿದೆ. ಯಾವುದೇ ಧಾರ್ಮಿಕ ವಿಧಿಯ ಮುನ್ನ ನಮ್ಮ ನಿತ್ಯ ಸಂಕಲ್ಪದಲ್ಲಿ ಜಂಬುದ್ವೀಪೇ, ಭರತವರ್ಷೇ, ಭರತಖಂಡೇ– ಎಂದು ಆರಂಭಿಸಿ ನಮ್ಮ ಕುಟುಂಬ ಮತ್ತು ನಮ್ಮ ಹೆಸರನ್ನು ಕಡೆಯಲ್ಲಿ ಹೇಳುತ್ತೇವೆ. ಇಂದು ಅದೆಲ್ಲಾ ತಿರುವುಮುರುವಾಗಿದೆ. ವ್ಯಕ್ತಿಯೇ ಸರ್ವಸ್ವವಾಗಿ ರಾಷ್ಟ್ರ ಮರೆವಾಗಿದೆ.

**ಮೂಲಭೂತ ಪರಿಹಾರ**

ನಾವೆಲ್ಲರೂ ಒಂದೇ ರಾಷ್ಟ್ರಕ್ಕೆ ಸೇರಿದವರು ಎಂಬ ಸತ್ಯಾಂಶವನ್ನು ಸದಾ ಜ್ಞಾಪಕ ಇಟ್ಟುಕೊಂಡಲ್ಲಿ ನಮ್ಮ ರಾಷ್ಟ್ರದ ಯಾವುದೇ ಸಮಸ್ಯೆಗಳೂ ನಮಗೆ ಹೊರೆಯಾಗದು. ಕನ್ನಡ, ತಮಿಳುಗಳೂ ಹಿಂದಿಯಷ್ಟೆ ರಾಷ್ಟ್ರೀಯವಾದುದರಿಂದ ಅವೂ ನಮ್ಮದೇ. ಶ್ರೀರಾಮನ ಕಥೆಯನ್ನು 'ಹಿಂದಿ'ಯಲ್ಲಿರುವ ರಾಮಚರಿತಮಾನಸದ ಮೂಲಕ ಓದಿದಲ್ಲಿ ಸ್ವಾಭಾವಿಕವಾಗಿಯೇ ಹಿಂದಿಯ ಬಗ್ಗೆ ಭಕ್ತಿ, ಆತ್ಮೀಯತೆ ಹುಟ್ಟುತ್ತದೆ; ಅದು ಪರಭಾಷೆ ಎಂಬ ಭಾವನೆ ದೂರವಾಗುತ್ತದೆ. ನಮ್ಮಲ್ಲಿ ಅನೇಕ ಭಾಷೆಗಳಿರುವುದು ನಮ್ಮ ಸಂಸ್ಕೃತಿಯ ಹಿರಿಮೆ ಹಾಗೂ ಸಿರಿವಂತಿಕೆಯ ಲಕ್ಷಣವೇ ಸರಿ. ನಮ್ಮ ರಾಷ್ಟ್ರೀಯ ಅಸ್ಮಿತೆಯು ಜ್ವಲಂತವಾಗಿದ್ದಲ್ಲಿ ನಮ್ಮ ಭಾಷೆಗಳಲ್ಲಿನ ಕುಂದುಕೊರತೆಗಳಿಗೆ ನಾವು ಹೊಂದಿಕೊಳ್ಳಬಹುದು. ಆಗ ಆ ಭಾಷೆಗಳು ಪರಸ್ಪರ ಪೂರಕಗಳಾಗುತ್ತವೆ. ಒಬ್ಬ ಕುರುಡನಿರಬಹುದು; ಮತ್ತೊಬ್ಬ ಕುಂಟನಿರಬಹುದು. ಕುರುಡನು ಕುಂಟನನ್ನು ಹೊತ್ತುಕೊಳ್ಳಬಲ್ಲ, ಕುಂಟನು ಕುರುಡನಿಗೆ ದಾರಿತೋರಿಸಬಲ್ಲ. ಹೀಗೆ ಇಬ್ಬರೂ ಪರಸ್ಪರ ಸಹಕಾರದಿಂದ ಮುಂದುವರಿಯಬಲ್ಲರು. ಆದ್ದರಿಂದ ನಾವೆಲ್ಲರೂ ಒಂದೇ ರಾಷ್ಟ್ರದ ಅಂಗಗಳೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಅದರಂತೆಯೇ ನಡೆದುಕೊಳ್ಳುವುದು ಮುಖ್ಯ ಕರ್ತವ್ಯ.

ವೈವಿಧ್ಯಗಳಿಂದ ತುಂಬಿದ ರಾಷ್ಟ್ರ ನಮ್ಮದು. ವೈವಿಧ್ಯವು ಹಿಂದುಳಿಕೆಯ ದ್ಯೋತಕವಲ್ಲ. ವಾಸ್ತವಿಕವಾಗಿ ಅದು ಸಮೃದ್ಧ ಪ್ರಗತಿಯ ಚಿಹ್ನೆ. ಪಾಶ್ಚಾತ್ಯ ವಾದುದೆಲ್ಲವೂ ಪ್ರಗತಿಪರ ಎಂದು ಕಣ್ಣುಮುಚ್ಚಿ ನಂಬುವುದು ಸಲ್ಲದು. ಅವರೆಲ್ಲರೂ ಒಂದೇ ರೀತಿ ಉಡುಪು ತೊಟ್ಟರೂ ಅವರಲ್ಲಿ ಬೇಕಾದಷ್ಟು ವ್ಯತ್ಯಾಸಗಳಿವೆ ಮತ್ತು

ಅವರು ಪರಸ್ಪರರಲ್ಲೇ ಕಚ್ಚಾಡುವವರು. ಅದು ಅವರ ದೌರ್ಭಾಗ್ಯ. ವಿವಿಧತೆಯಲ್ಲೂ ಏಕತೆಯನ್ನು ಗುರುತಿಸುವ ನಾವೇ ನಿಜಕ್ಕೂ ಭಾಗ್ಯವಂತರು, ಶ್ರೇಷ್ಠರು. ಅವರಂತೆ ನಾವೂ ನಮ್ಮನಮ್ಮಲ್ಲೆ ಭೇದ ಎಣಿಸಿ ವೈಮನಸ್ಯ ತಂದುಕೊಳ್ಳಬೇಕಿಲ್ಲ. ಎಲ್ಲ ಆದರ್ಶಗಳಿಗೂ ಅವರತ್ತ ನಾವು ನೋಡುವ ಅಗತ್ಯವೂ ಇಲ್ಲ. ಅವರ ಕೈಕುಲುಕುವ ಪದ್ಧತಿ, ನಮ್ಮ ನಮಸ್ಕಾರ ಪದ್ಧತಿಗಿಂತ ಯಾವ ವಿಧದಲ್ಲೂ ಉತ್ತಮವೇನಲ್ಲ. ಹಿರಿಯರ ಕಾಲುಮುಟ್ಟಿ ನಮಸ್ಕರಿಸುವುದು ಸರ್ವಥಾ ಗುಲಾಮಿ ವೃತ್ತಿಯಲ್ಲ. ಅದು ಅವರಿಗೆ ಗೌರವ ಸೂಚಿಸುವ, ನಮ್ಮ ವಿನಯ ಪ್ರಕಟಿಸುವ, ನಮ್ಮದೇ ಆದ ವೈಶಿಷ್ಟ್ಯಪೂರ್ಣ ಪದ್ಧತಿ. ಆದರೆ, ನಾವು ನಮ್ಮ ಆದರ್ಶಗಳನ್ನೇ ಮರೆತು ನಮ್ಮ ಶ್ರೇಷ್ಠ ಪದ್ಧತಿಗಳಿಗೇ ಅಪಚಾರ ಎಸಗುತ್ತಿದ್ದೇವೆ.

ನಮ್ಮ ರಾಷ್ಟ್ರಜೀವನವನ್ನು ನಮ್ಮದೇ ಆದ ಹಿಂದು ಜೀವನಾದರ್ಶಗಳಿಗೆ ತಕ್ಕಂತೆ ರೂಪಿಸಿಕೊಂಡು ಹೆಮ್ಮೆ ಮತ್ತು ವಿಶ್ವಾಸಗಳಿಂದ ನಾವಿಂದು ಮುನ್ನಡೆಯ ಬೇಕಾಗಿದೆ. ಆತ್ಮವಿಶ್ವಾಸದಿಂದ ಶಕ್ತಿಯು ಹುಟ್ಟುತ್ತದೆ. ಹೊರದೇಶಗಳಲ್ಲಿ ವಾಸಿಸುವ ನಮ್ಮ ಜನ ತಮ್ಮ ಆತ್ಮವಿಶ್ವಾಸ ಮತ್ತು ಕರ್ತೃತ್ವದಿಂದ ಅಲ್ಲಿನ ಜನ ಜೀವನದ ಮೇಲೆ ಪ್ರಭಾವ ಬೀರಬಲ್ಲರಾದರೆ ಇಲ್ಲೂ ಅದೇ ರೀತಿ ಮಾಡ ಬಲ್ಲರು. ಅವಶ್ಯ ಬಿದ್ದಲ್ಲಿ ಇನ್ನೂ ಹೆಚ್ಚು ಸಾಧಿಸಬಲ್ಲರು. ಹೊರದೇಶಗಳಲ್ಲಿ ಯುದ್ಧ ಮಾಡಿದ ನಮ್ಮ ಹಿಂದಿನ ಸೇನಾನಾಯಕರು ತಮ್ಮ ಶೌರ್ಯಪ್ರದರ್ಶನದಿಂದ 'ವಿಕ್ಟೋರಿಯಾ ಕ್ರಾಸ್' ಗಳಿಸಿದ್ದರು. ಇಂದು ಸಹ ಅಂತಹ ಸೈನ್ಯಾಧಿಕಾರಿಗಳಿಗೇನೂ ಕೊರತೆಯಿಲ್ಲ. ಪರಿಸ್ಥಿತಿ ಒದಗಿಬಂದಾಗ ತಮ್ಮ ಹಿಂದಿನವರಿಗಿಂತ ತಾವು ಯಾವ ರೀತಿಯಲ್ಲೂ ಕಡಿಮೆ ಇಲ್ಲವೆಂಬುದನ್ನು ಅವರು ತೋರಿಸಿದ್ದಾರೆ; ಮುಂದೆಯೂ ಅದೇ ಪರಿಸ್ಥಿತಿ ಬಂದಲ್ಲಿ ತಮ್ಮ ಹಿರಿಮೆಯನ್ನು ಪುನಃ ತೋರಿಸಿ ಕೊಡಬಲ್ಲರು.

**ಸ್ವಾತಂತ್ರ್ಯದ ಸವಾಲು**

ಸಮಸ್ಯೆಗಳು ಸದಾ ಇರುವಂತಹವೇ. ಅವುಗಳನ್ನು ಜೀವಂತ ವ್ಯಕ್ತಿಗಳೇ ಎದುರಿಸಬಲ್ಲರು. ಸತ್ತವರಿಗಾದರೆ ಏನೂ ಸಮಸ್ಯೆಗಳಿರುವುದಿಲ್ಲ. ನಮ್ಮ ಮುಂದೆ ಇರುವ ನೂರೆಂಟು ಸಮಸ್ಯೆಗಳಿಗೆ ಅಂಜಬೇಕಾದುದಿಲ್ಲ. ಅವುಗಳನ್ನು ದಿಟ್ಟತನದಿಂದ ಎದುರಿಸಿ ಬಗೆಹರಿಸಿದಾಗಲೇ ಪ್ರಗತಿ ಸಾಧ್ಯ. ಈ ಸಮಸ್ಯೆಗಳು ನಮ್ಮ ಪೌರುಷ ಪರಾಕ್ರಮಗಳಿಗೆ ಒಂದು ಸವಾಲು ಇದ್ದಂತೆ. ಪರೀಕ್ಷೆಯಲ್ಲಿ ಯಶಸ್ಸು ಗಳಿಸಬೇಕಾದಲ್ಲಿ ಅನೇಕ ಪ್ರಶ್ನೆಗಳಿಗೆ ಉತ್ತರಕೊಡಲು ತಯಾರಿರಲೇಬೇಕು. ಅದಕ್ಕಾಗಿ ನಮ್ಮ ಮಾರ್ಗ ಯಾವುದೆಂಬುದನ್ನು ನಿಶ್ಚಯಿಸಿ ಮುಂದೆ ಮುಂದೆ ನುಗ್ಗೋಣ. ನಾವು ಹೆಜ್ಜೆ ಮುಂದಿಟ್ಟಂತೆಲ್ಲಾ ಸಣ್ಣ ಪುಟ್ಟ ಅಡ್ಡಿ ಆತಂಕಗಳು ತಾವಾಗಿಯೇ ಮಾಯವಾಗುತ್ತವೆ.



ಆದರೆ ನಾವು ಏನು ಮಾಡಲು ಹೊರಟಿದ್ದೇವೆಂಬುದರ ಬಗ್ಗೆ ನಮಗೆ ಸ್ಪಷ್ಟವಾದ ಸಮಗ್ರವಾದ ಕಲ್ಪನೆ ಇರಬೇಕು. ಮನೆ ಕಟ್ಟಲು ಮೊದಲ ಆವಶ್ಯಕತೆ ಎಂದರೆ ಆ ಕಟ್ಟಡದ ನಕ್ಷೆ. ಮುಗಿಲು ಮುಟ್ಟುವಂತೆ ಮಹಲು ಕಟ್ಟುವ ಯೋಜನೆ ಇದ್ದರೂ ನಾವು ಕೆಲಸ ಆರಂಭಿಸುವುದು ನೆಲದೊಳಗೆ ಪಾಯ ತೋಡುವುದರಿಂದಲೇ. ಕೆಳಗೆ ಅಗೆಯುವುದೆಂದರೆ ಹಿನ್ನಡೆಯೇನೂ ಅಲ್ಲ. ಆದರೂ ಅಗೆಯುವವನಿಗೆ ಮುಂದಿನ ನಿರ್ಮಾಣದ ಸ್ಪಷ್ಟ ಕಲ್ಪನೆ ಇಲ್ಲದೆ ಹೋದರೆ, ಕೇವಲ ಶಕ್ತಿಯ ಹ್ರಾಸ ಆಗುತ್ತದೆ.

ನಾವು ಸ್ವತಂತ್ರರಾಗುವವರೆಗೆ ಇಂಗ್ಲಿಷರು ಹೇಳಿದಷ್ಟನ್ನೇ ಮಾಡಿಕೊಂಡು ಇದ್ದೆವು. ನಾವು ಇಂಗ್ಲಿಷ್ ಕಲಿತು ಗುಮಾಸ್ತರಾಗಿರಬೇಕೆಂಬ ಅವರ ಅಪೇಕ್ಷೆಯನ್ನೂ ಪೂರೈಸಿದೆವು. ನಮ್ಮನ್ನು ಯುದ್ಧಕ್ಕಾಗಿ ಸಿರಿಯಾ, ಆಫಗಾನಿಸ್ತಾನ ಮುಂತಾದ ದೇಶಗಳಿಗೆ ಅವರು ಕಳುಹಿಸಿದರು; ನಾವು ಅವರಿಗಾಗಿ ನಮ್ಮ ರಕ್ತ ಚೆಲ್ಲಿದೆವು. ಅವರ ಆಜ್ಞೆಯಂತೆ ನಮ್ಮ ಸ್ವಂತ ಸೋದರರನ್ನೂ ನಾವು ಗುಂಡಿಟ್ಟು ಕೊಂದೆವು. ಈಗ ಆ ಅಂಕ ಮುಗಿದಿದೆ. ಈಗ ನಮಗೆ ನಾವೇ ಒಡೆಯರು. ಆದರೆ ಈ ಜವಾಬ್ದಾರಿಯೂ ನಮಗೆ ಕೆಲವು ಸಮಸ್ಯೆಗಳನ್ನು ತಂದೊಡ್ಡಿದೆ. ಈಗ ಗುಂಡು ಹಾರಿಸಬೇಕೇ, ಬೇಡವೇ, ಹಾರಿಸಬೇಕಾದಲ್ಲಿ ಯಾರ ಮೇಲೆ ಎಂಬುದನ್ನು ನಿಶ್ಚಯಿಸಬೇಕಾದವರೂ ನಾವೇ.

ಬ್ರಿಟಿಷರು ಇಲ್ಲಿ ಆಳುತ್ತಿದ್ದವರೆಗೆ ಇಂಗ್ಲಿಷ್ ಭಾಷೆ ನಮ್ಮನ್ನು ಒಂದಾಗಿ ಇರಿಸಿತ್ತು ಎಂದೊಬ್ಬ ಮಹನೀಯರು ನನ್ನೊಡನೆ ಹೇಳಿದರು. ಆದರೆ ಅದೆಂತಹ ಏಕತೆ? ಅನೇಕ ಕೈದಿಗಳನ್ನು ಒಂದೇ ಸರಪಣಿಯಿಂದ ಕಟ್ಟಿ ಅವರೆಲ್ಲರನ್ನೂ ಬೀದಿಯಲ್ಲಿ ಮೆರೆಸಿದಾಗ ಅವರಲ್ಲೂ– ಒಂದೇ ದಿಕ್ಕಿನಲ್ಲಿ ಹೋಗುತ್ತಿರುವುದರಿಂದ– ಐಕ್ಯ ಇರುವುದಿಲ್ಲವೇ, ಹಾಗೆ ಅದಿತ್ತು! ಆದರೆ, ಸರಪಣಿ ತುಂಡಾದೊಡನೆ ಅವರು ಎಲ್ಲರೂ ದಿಕ್ಕಾಪಾಲಾಗಿ ಓಡುತ್ತಾರೆ. ಇಂದು ನಮ್ಮ ಅವಸ್ಥೆಯೂ ಅದೇ ರೀತಿ ಆಗಿದೆ. ದಾಸ್ಯಶೃಂಖಲೆಯೇನೋ ತುಂಡಾಗಿದೆ. ಆದರೆ, ಅದರ ಬದಲು ಏಕತೆಯ ಭಾವಾತ್ಮಕ ಕಲ್ಪನೆ ನಮಗೆ ದೊರಕಿಲ್ಲ. ಈ ಭಾವಾತ್ಮಕ ಐಕ್ಯಮಂತ್ರವೇ ನಮ್ಮೆಲ್ಲರ ಶಕ್ತಿ ಸಾಹಸಗಳನ್ನು ಫಲಿತಗೊಳಿಸಿ ಗೌರವಾನ್ವಿತ ರಾಷ್ಟ್ರೀಯ ಜೀವನವನ್ನು ಪುನರ್ನಿರ್ಮಿಸಲು ಸಹಾಯಕವಾದೀತು. ಈ ಉದಾತ್ತ ಕಾರ್ಯಕ್ಕೆ ನಮ್ಮ ವೈಭವಪೂರ್ಣ ಇತಿಹಾಸದಿಂದ ಪ್ರೇರಣೆ ಪಡೆಯೋಣ. ಭ್ರಾತೃತ್ವ, ಏಕತೆಗಳನ್ನು ಬೋಧಿಸಿದ ಶ್ರೀ ಬಸವೇಶ್ವರರೇ ಮುಂತಾದ ನಮ್ಮವರೇ ಆದ ಸಾಧುಸಂತರು ತೋರಿದ ಹಾದಿಯಲ್ಲಿ ನಡೆಯೋಣ. ನಮ್ಮನ್ನು ಇಂದು ಬಲಿತೆಗೆದುಕೊಳ್ಳುತ್ತಿರುವ ಸಕಲ ವಿಫಲತೆಗಳಿಂದಲೂ ಮುಕ್ತರಾಗೋಣ.

**ಐಕ್ಯದ ಪವಾಡ**

ಒಂದು ರಾಷ್ಟ್ರದ ಘಟಕದಲ್ಲಿ ಮಾತ್ರವೇ ಐಕ್ಯ ನಿರ್ಮಾಣವಾಗಲು ಸಾಧ್ಯ. ಮಕ್ಕಳೇ ತಮ್ಮ ತಂದೆ ತಾತಂದಿರ ಐಕ್ಯಸಾಧಕ ಪರಂಪರೆಯ ಉತ್ತರಾಧಿಕಾರಿಗಳಾಗಬಲ್ಲರು. ಇಂದು ನಮ್ಮ ಪೂರ್ವಜರನ್ನೇ ಗುರುತಿಸಲಾರದ ಸ್ಥಿತಿಗೆ ತಲುಪಿರುವ ನಾವಾದರೂ ಎಂತಹ ಮಕ್ಕಳು? ಮೊಗಲರ ಅಥವಾ ಬ್ರಿಟಿಷರ ಸಂತಾನದಂತೆ ನಾವು ಇಂದು ತೋರುತ್ತಿದ್ದೇವೆ. ನಮಗೆ ನಮ್ಮ ಭವ್ಯ ಪರಂಪರೆಯ ಉತ್ತರಾಧಿಕಾರಿಗಳಾಗಬೇಕೆಂಬ ಅಪೇಕ್ಷೆ ಇದ್ದಲ್ಲಿ ಅದರೊಂದಿಗೆ ನಾವು ಆತ್ಮೀಯತೆಯನ್ನು ವೃದ್ಧಿಮಾಡಿಕೊಳ್ಳಬೇಕಾಗಿದೆ. ಇದನ್ನು ಸಾಧಿಸಿದ್ದೇ ಆದರೆ ನಾವು ನಮ್ಮ ವೈಭವದ ಉತ್ತುಂಗತೆಯನ್ನು ಮುಟ್ಟಬಹುದು. ಕೆಲವು ಸಲ ಇಂದಿನ ಕೆಲವು ಮಹಾವಿದ್ವಾಂಸರೂ ಕೂಡ, ಒಂದು ಮಹಾನ್‌ರಾಷ್ಟ್ರದ ಘಟಕರು ತಾವೆಂಬುದನ್ನು ಮರೆಯುತ್ತಾರೆ.

ನಮಗಂತೂ ಭಾಷೆ ಒಂದು ಸಮಸ್ಯೆ ಆಗಲೇಬಾರದು. ಒಮ್ಮೆ ಒಬ್ಬ ವ್ಯಕ್ತಿ ನನ್ನ ಹತ್ತಿರ ತೆಲುಗಿನಲ್ಲಿ ಮಾತು ಆರಂಭಿಸಿ ಆಮೇಲೆ ಹಿಂದಿಯಲ್ಲಿ ಮುಂದುವರಿಸಿದ. ನನ್ನ ಪಕ್ಕದಲ್ಲಿ ಕುಳಿತಿದ್ದ ಸ್ನೇಹಿತರೊಬ್ಬರು, 'ಅವರು ತೆಲುಗಿನಲ್ಲಿ ಮಾತನಾಡಿದ್ದು ನಮ್ಮನ್ನು ಅಪಮಾನಿಸಲೆಂದು' ಎಂದು ದೂರಿದರು. 'ಆತ ಹೇಳಿದ್ದು ನಿಮಗೆ ಅರ್ಥವಾಯಿತೇನು?' ಎಂದು ನಾನು ಆ ಸ್ನೇಹಿತರನ್ನು ಪ್ರಶ್ನಿಸಿದೆ. ನಮ್ಮ ಸ್ನೇಹಿತರಿಗೆ ಆತ ಮಾತನಾಡಿದ್ದು ಅರ್ಥವಾಗಿರಲಿಲ್ಲ. 'ಅದನ್ನು ಅರ್ಥಮಾಡಿಕೊಳ್ಳುವ ಮನಸ್ಸಿನ ಸಿದ್ಧತೆ ಇಲ್ಲದ ಕಾರಣದಿಂದಲೇ ನಿಮಗದು ತಿಳಿಯಲಿಲ್ಲ' ಎಂದು ನಾನು ಅವರಿಗೆ ಹೇಳಿದೆ. ಏಕಾತ್ಮತೆಯ ಅಭಾವದಿಂದಲೇ ಆ ರೀತಿಯ ಎಲ್ಲ ಸಮಸ್ಯೆಗಳೂ ಹುಟ್ಟುತ್ತವೆ. ಏಕಾತ್ಮತೆ ಇದ್ದಲ್ಲಿ ಈ ಸಮಸ್ಯೆಗಳೇ ಏಳುವುದಿಲ್ಲ. ನಮ್ಮದೇ ಆದ ಚಿಕ್ಕ ಮಗುವಿನ ಅಸ್ಫುಟ ಮಾತುಗಳೂ ನಮಗೆ ಅರ್ಥವಾಗುವುದಿಲ್ಲವೇನು? ಅದರ ತೊದಲು ಭಾಷೆಯಿಂದಲೂ ನಮಗೆ ಆನಂದವೇ ಆಗುವುದಿಲ್ಲವೇನು?

ಏಕತೆಯ ಭಾವ ಬೆಳೆಯುತ್ತಾ ಹೋದಲ್ಲಿ ೫೦ ಕೋಟಿಯ ಜನಾಂಗವಾದ ನಮಗೆ ಯಾವ ಕೆಲಸವೂ ಅಸಾಧ್ಯವಲ್ಲ. ಇಸ್ರೇಲ್ ಜನ ಮೃತಪ್ರಾಯವಾಗಿದ್ದ ತಮ್ಮ ಹಿಬ್ರೂ ಭಾಷೆಗೇ ಜೀವತುಂಬಿ ಅದರ ಮೂಲಕವೇ ಅದ್ಭುತ ತಾಂತ್ರಿಕ ಹಾಗೂ ವೈಜ್ಞಾನಿಕ ಪ್ರಗತಿ ಸಾಧಿಸಿರುವಾಗ ನಮ್ಮ ದೇಶದ ಭಾಷೆಗಳು ಯಾವ ದೃಷ್ಟಿಯಲ್ಲಿ ಅದಕ್ಕಿಂತ ಹಿಂದುಳಿದಿವೆ? ನಮ್ಮೆಲ್ಲ ಭಾಷೆಗಳು ಮಾತ್ರವಲ್ಲ, ಭಾಷಾ ಪ್ರಭೇದಗಳು ಸಹ ಹಿಬ್ರೂ ಭಾಷೆಗಿಂತ ಹೆಚ್ಚು ವಿಕಸಿತವಾಗಿವೆ. ಎಲ್ಲ ಭಾಷೆಗಳಲ್ಲೂ ಸಾಕಷ್ಟು ಸಾಹಿತ್ಯದ ರಚನೆಯಾಗಿದೆ. ಭಾಷೆಗಳ ದೃಷ್ಟಿಯಿಂದ ನೋಡಿದರಂತೂ ಸಮಸ್ಯೆಗಳು ಹುಟ್ಟಿರುವುದು ನಮ್ಮ ಏಕರಾಷ್ಟ್ರೀಯತೆಯ ಅರಿವು ತಪ್ಪಿರುವುದರಿಂದಲೇ.



ಇಂದು ನಮ್ಮ ಜೀವನದ ಸರ್ವರಂಗಗಳಲ್ಲೂ ಅತೃಪ್ತಿ, ಅಶಾಂತಿ ಹಬ್ಬಿದೆ. ಇನ್ನು ಅಪೂರ್ಣವಾಗಿರುವ ರಾಷ್ಟ್ರೀಯ ಆಸೆ–ಆಕಾಂಕ್ಷೆಗಳ ಬಗ್ಗೆ ಅತೃಪ್ತಿ ಇದ್ದಲ್ಲಿ ಅದು ಸ್ವಾಗತಾರ್ಹವೇ. ಆದರೆ, ನಮ್ಮ ಜನಗಳ ಕಣ್ಣ ಮುಂದೆ ಯಾವುದಾದರೂ ಅಂತಹ ಉನ್ನತ ರಾಷ್ಟ್ರೀಯ ಆಸೆ–ಆಕಾಂಕ್ಷೆಗಳು ಇವೆಯೇ ಎಂಬುದೇ ಮುಖ್ಯ ಪ್ರಶ್ನೆ.

ಸರಪಣಿಯ ಶಕ್ತಿ ಅದರ ದುರ್ಬಲ ಕೊಂಡಿಯಲ್ಲೇ ಅಡಗಿರುವುದರಿಂದ ಒಬ್ಬ ಕೊಟ್ಟ ಕೊನೆಯ ಅತಿ ಸಾಮಾನ್ಯ ವ್ಯಕ್ತಿಯ ಚಾರಿತ್ರ್ಯ, ಬುದ್ಧಿಶಕ್ತಿ ಹಾಗೂ ಆರ್ಥಿಕ ಮಟ್ಟ ಹೆಚ್ಚಾಗುವವರೆಗೆ ನಾವು ಅತೃಪ್ತಿಯಿಂದಲೇ ಇರೋಣ. ಈ ಸಾಮಾನ್ಯ ಮಟ್ಟ ಮೇಲೇರಿಕೆಯೇ ನಮ್ಮ ಪ್ರಗತಿಯ ನಿಜವಾದ ಅಳತೆಗೋಲು.

ಭೋಜರಾಜನ ಆಳ್ವಿಕೆಯಲ್ಲಿ, ಹೊಲ ಉಳುತ್ತಿದ್ದ ಅತಿ ಸಾಮಾನ್ಯ ವ್ಯಕ್ತಿ ಸಹ ತನ್ನ ರಾಜನ ಬುದ್ಧಿಶಕ್ತಿಗೇ ಸವಾಲು ಹಾಕುವಷ್ಟು ವಿದ್ವಾಂಸನಾಗಿದ್ದ ಎನ್ನುತ್ತಾರೆ. ಇದೇ ನಮ್ಮ ಕಣ್ಣ ಮುಂದೆ ಇರುವ ಗುರಿ.

**ಭವ್ಯ ಭವಿತವ್ಯಕ್ಕಾಗಿ**

ವ್ಯಕ್ತಿಗೆ ನೀಡಲ್ಪಟ್ಟ ಆಯುಕ್ತ ಪ್ರಾಶಸ್ತ್ಯದಿಂದಲೇ ಇಂದು ನಮ್ಮ ರಾಷ್ಟ್ರ ದುರ್ಬಲವಾಗಿದೆ. ಪರಿಶುದ್ಧ ಹಾಗೂ ಪವಿತ್ರ ರಾಷ್ಟ್ರಭಾವದ ಆಧಾರದ ಮೇಲೆ ನಮ್ಮ ರಾಷ್ಟ್ರವನ್ನು ಪುನಃ ಶಕ್ತಿಶಾಲಿಯನ್ನಾಗಿ ಮಾಡೋಣ. ಈ ಕಾರ್ಯ ಮಾಡುವಾಗ ಹಾದಿಯಲ್ಲಿ ತಿಕ್ಕಾಟ ಹುಟ್ಟಿದರೂ ಸಹ ನಮ್ಮ ಅಂತಿಮ ಲಕ್ಷ್ಯದ ಪ್ರಾಪ್ತಿಗಾಗಿ ಅದನ್ನು ಸಂಭಾಳಿಸಿಕೊಂಡು ನಡೆಯೋಣ. ನಾವು ಮುಂದುವರಿಯುತ್ತಿದ್ದಾಗ ನಮ್ಮ ಹಿಂದಿನಿಂದ ಏನಾದರೂ ಢಿಕ್ಕಿ ಸಂಭವಿಸಿದರೂ ಅಕದ್ಮಾಗಿ ಚಿಂತೆ ಬೇಡ. ಏಕೆಂದರೆ ಅದರಿಂದಲೂ ನಾವು ಇನ್ನಷ್ಟು ಮುಂದೆಯೇ ಹೋಗುತ್ತೇವೆ.

ಈ ರೀತಿ, ನಮ್ಮ ಜನಗಳ ಹೃದಯದಲ್ಲಿ ಅಡಗಿರುವ ಸತ್ಯಶುದ್ಧ ರಾಷ್ಟ್ರೀಯತೆಯನ್ನು ಬೆಳಗಿಸುವುದೇ ಇಂದಿನ ಏಕಮೇವ ಅನಿವಾರ್ಯ ಅವಶ್ಯಕತೆಯಾಗಿದೆ. ನಮ್ಮ ವೈಯಕ್ತಿಕ ಕೆಲಸ ಕಾರ್ಯಗಳು ಏನೇ ಇದ್ದರೂ ನಾವು ರಾಷ್ಟ್ರವನ್ನು ಮರೆಯದಿರೋಣ. ಅದೇ ನಮ್ಮ ಜೀವನದ ಪ್ರತಿಯೊಂದು ಚಟುವಟಿಕೆಗೂ ಆಧಾರವಾಗಿರಲಿ. ಆಗಲೇ ಇಂದಿರುವ ನಮ್ಮ ದೇಶದ ಸಮಸ್ಯಾಗ್ರಸ್ತ ನಿಸ್ತೇಜ ವಾತಾವರಣವು ಬಹುಬೇಗ ಮಾಯವಾಗಿ ಎಲ್ಲೆಡೆಯೂ ಪ್ರಕಾಶ ಚಿಮ್ಮುವಂತೆ ಆದೀತು.

## ೩. ಚಿತಿ

ಯಾವುದೇ ಒಂದು ರಾಷ್ಟ್ರವು ಪರಕೀಯರ ಆಡಳಿತಕ್ಕೆ ಒಳಗಾದಾಗ ಆ ದೇಶನಿವಾಸಿಗಳ ರಾಷ್ಟ್ರೀಯತೆಗೆ ಹಾಗೂ ದೇಶಭಕ್ತಿಗೆ ಅಲ್ಲಿನ ಪರದಾಸ್ಯದ ನೊಗವನ್ನು ಕಿತ್ತೊಗೆಯುವುದೇ ಏಕಮಾತ್ರ ಲಕ್ಷ್ಯ ಆಗುತ್ತದೆ. ಪರಕೀಯ ಸತ್ತೆಯನ್ನು ವಿರೋಧಿಸುವವರು ದೇಶಭಕ್ತರೆಂದೂ ಆ ಸತ್ತೆಯನ್ನು ಕೊನೆಗೊಳಿಸುವ ವಿಧಾನಗಳೇ ದೇಶಭಕ್ತಿಯೆಂದೂ ತಿಳಿಯುವುದಾಗುತ್ತದೆ. ಇಂತಹ ಸಮಯದಲ್ಲಿ ಜನಸಾಮಾನ್ಯರ ಮುಂದೆ ರಾಷ್ಟ್ರಭಕ್ತಿಯ ಈ ವಿರೋಧಾತ್ಮಕ ಸ್ವರೂಪವೇ ಇರುತ್ತದೆ. ಈ ಅಭಾವಾತ್ಮಕ ಕಲ್ಪನೆಯ ಆಧಾರದ ಮೇಲೆ ಕಾರ್ಯ ಮಾಡುವವರು ತಮ್ಮ ಪಕ್ಷವನ್ನು ಬಲಪಡಿಸಿಕೊಳ್ಳಲು ಆಳರಸರನ್ನು ಬಿಟ್ಟು ಉಳಿದೆಲ್ಲ ಗುಂಪಿನ ಜನರನ್ನೂ ತಮ್ಮಲ್ಲಿ ಸೇರಿಸಿಕೊಳ್ಳಲು ಪ್ರಯತ್ನಿಸುವುದು ಸ್ವಾಭಾವಿಕ.

### ವಿರೋಧಾತ್ಮಕ ಏಕತೆ

ಸಮಾನ ವಿಪತ್ತುಗಳು ಹಾಗೂ ಸಮಾನ ಶತ್ರುತ್ವ ಇವೇ ಆ ಸಮಯದಲ್ಲಿ ಏಕತೆಯ ಆಧಾರವಾಗುತ್ತವೆ. ಆ ಆಧಾರದ ಮೇಲೆ ಹಲವೊಮ್ಮೆ ರಾಷ್ಟ್ರೀಯ ಆಂದೋಲನಗಳನ್ನೂ ಹೂಡಲಾಗುತ್ತದೆ. ಪರಕೀಯ ಆಡಳಿತದ ಬಗ್ಗೆ ಜನರ ಮನಸ್ಸಿನಲ್ಲಿ ಆದಷ್ಟು ಹೆಚ್ಚು ವಿದ್ವೇಷವನ್ನು ಕೆರಳಿಸುವ ಸಲುವಾಗಿ ಜನತೆಯ ಎಲ್ಲ ಕಷ್ಟ ಕಾರ್ಪಣ್ಯಗಳನ್ನೂ ಪರಕೀಯ ಆಡಳಿತದ ತಲೆಗೆ ಕಟ್ಟಲಾಗುತ್ತದೆ. ದೈಹಿಕ, ದೈವಿಕ ಹಾಗೂ ಭೌತಿಕವಾದ ಎಲ್ಲ ವಿಪತ್ಪರಂಪರೆಗಳಿಗೂ ಅದೇ ಕಾರಣವೆಂದು ಸಾರಲಾಗುತ್ತದೆ.

ಜಗತ್ತಿನ ಆರ್ಥಿಕ ಮುಗ್ಗಟ್ಟಿನಿಂದ ದೇಶಕ್ಕಾಗುವ ಹಾನಿಯಿರಲಿ ಅಥವಾ ತಮ್ಮದೇ ಆದ ಸಾಮಾಜಿಕ ದೋಷಗಳ ದುಷ್ಫಲಗಳಿರಲಿ, ಪ್ರಕೃತಿ ವಿಕೋಪಗಳಾದ ಭೂಕಂಪ, ಅತಿವೃಷ್ಟಿ, ಅನಾವೃಷ್ಟಿಗಳಿರಲಿ ಅಥವಾ ತಮ್ಮ ಹೊಲಸು–ಕೊಳಕುತನ ಗಳಿಂದ ಬರುವ ಪ್ಲೇಗ್, ಸಿಡಿಬುಗಳಿರಲಿ, ಶಾಸನಯಂತ್ರದ ದೋಷಗಳಿಂದ ಆಗುವ ಪ್ರಮಾದಗಳಿಂದ ಅಥವಾ ಕಪಟ ಧಾರ್ಮಿಕತೆಯ ಅಜ್ಞಾನದಿಂದಾಗುವ ಅನಾಹುತಗಳಿರಲಿ– ಇವೆಲ್ಲದರ ಹೊಣೆಯನ್ನು ಆಳರಸರ ತಲೆಗೇ ಕಟ್ಟಲಾಗುತ್ತಿದೆ. ಪರದಾಸ್ಯವನ್ನು ತೊಡೆದುಹಾಕಲು ಶಾಸಕವರ್ಗದ ಬಗ್ಗೆ ದ್ವೇಷ–ತಿರಸ್ಕಾರಗಳನ್ನು



ಪ್ರಚುರಗೊಳಿಸಿ, ಜನಮತವನ್ನು ಅದರ ವಿರುದ್ಧ ಎತ್ತಿಕಟ್ಟುವ ಅವಶ್ಯಕತೆ ಇದೆ ಎಂಬುದು ನಿಜ. ಹಾಗೂ ಜನತೆಯ ಆ ದುಃಖಪರಂಪರೆಗೆ ಪರಕೀಯ ಆಡಳಿತವು ಕಾರಣವಾಗಿರಲಿ ಅಥವಾ ಇಲ್ಲದಿರಲಿ, ಪರಕೀಯ ಆಡಳಿತ ಇರುವವರೆಗೆ ಈ ದುಃಖಪರಂಪರೆಯಿಂದ ಮುಕ್ತರಾಗಲು ಬೇಕಾದ ಪುರುಷಾರ್ಥವನ್ನು ಜನರು ಪ್ರಕಟಿಸಲಾರರೆಂಬುದು ನಿಜವೇ. ಆದ್ದರಿಂದ ತಮ್ಮ ಅಸಹಾಯಕ ಪರಿಸ್ಥಿತಿಗಾಗಿ ದುಃಖಿಸುತ್ತಾ ಪರಕೀಯರನ್ನು ದೂರುವುದೇ ಜನಕ್ಕೆ ಅಭ್ಯಾಸವಾಗಿಬಿಡುತ್ತದೆ.

### ವಿರೋಧದ ಆವೇಶದಲ್ಲಿ

ರಾಷ್ಟ್ರದ ಪ್ರತಿಯೊಂದು ಕ್ಷೇತ್ರವನ್ನೂ ಪರಕೀಯರು ಆಕ್ರಮಿಸಿರುವ ಕಾರಣ ಅದನ್ನು ವಿರೋಧೀಸುವವರು ಹೆಚ್ಚು ಕಡಿಮೆ ಪ್ರತಿಯೊಂದು ಕ್ಷೇತ್ರದಲ್ಲೂ ಹುಟ್ಟಿಕೊಳ್ಳುತ್ತಾರೆ. ಪರಸತ್ತೆಯಿಂದಾಗಿ ಕೆಲವರ ಸ್ವಾರ್ಥಕ್ಕೆ ಅಡ್ಡಿಯಾದರೆ ಇನ್ನು ಕೆಲವರ ಸ್ವಾಭಿಮಾನಕ್ಕೆ ಧಕ್ಕೆ ತಗಲಿರುತ್ತದೆ. ಕೆಲವರ ಯೋಜನೆಗಳು ಮುರಿದುಬಿದ್ದರೆ, ಇನ್ನು ಕೆಲವರ ಬುದ್ಧಿ–ಶಕ್ತಿಗಳ ವಿಕಾಸಕ್ಕೆ ಆಸ್ಪದ ದೊರೆತಿರುವುದಿಲ್ಲ. ಹೀಗೆ ತಮ್ಮ ತಮ್ಮ ಹಿತಕ್ಕೆ ಧಕ್ಕೆ ತಗಲಿದಂತೆ, ವಿರೋಧಿಗಳ ಗುಂಪು ಬೆಳೆದು ಮೇಲೇಳುತ್ತದೆ. ತಮ್ಮ ತಮ್ಮ ಸ್ವಂತ ಆಸೆಗಳನ್ನು, ಸ್ವಂತದ ಸುಂದರ ಭವಿಷ್ಯದ ಹೊಂಗನಸುಗಳನ್ನು ಈಡೇರಿಸಿಕೊಳ್ಳಲು ಎಲ್ಲರೂ ವಿದೇಶಿ ಆಡಳಿತವನ್ನು ಕೊನೆಗಾಣಿಸಲು ಸಿಡಿದೇಳುತ್ತಾರೆ. ಅದಕ್ಕಾಗಿ ತ್ಯಾಗಮಾಡುತ್ತಾರೆ; ಕಷ್ಟನಷ್ಟಗಳನ್ನು ಸಹಿಸುತ್ತಾರೆ; ಯಾತನೆಗಳನ್ನು ಅನುಭವಿಸುತ್ತಾರೆ. ಇದರಲ್ಲಿ ಯಾರು ಮೊದಲಿಗ ನಾಗುತ್ತಾನೋ ಅಥವಾ ಎಲ್ಲರಿಗಿಂತ ತಾನೇ ಮುಂದೆಂದು ತೋರ್ಪಡಿಸಿ ಕೊಳ್ಳುತ್ತಾನೋ ಅವನೇ ಮಿಕ್ಕೆಲ್ಲರಿಗಿಂತ ದೊಡ್ಡ ದೇಶಭಕ್ತನೆನಿಸುತ್ತಾನೆ. ಅವನ ದರ್ಶನಕ್ಕೆ ಜನ ಕಿಕ್ಕಿರಿದು ನೆರೆಯುತ್ತಾರೆ. ಅವನ ಹೆಸರಿಗೆ ಜಯಕಾರ ಹಾಕುತ್ತಾರೆ. ಅವನ ಒಂದೊಂದು ಶಬ್ದವೂ ಮೋಡಿಯ ಕೆಲಸ ಮಾಡುತ್ತದೆ. ಅದರಿಂದ ರಾಷ್ಟ್ರಪುರುಷ ಎಚ್ಚರಗೊಳ್ಳುತ್ತಾನೆ. ರಾಷ್ಟ್ರೀಯ ಭಾವನೆ ಪ್ರಬಲವಾಗುತ್ತದೆ, ರಾಷ್ಟ್ರ ಮೇಲೆದ್ದು ನಿಲ್ಲುತ್ತದೆ.

### ವಿರೋಧ ಕಣ್ಮರೆಯಾದಾಗ...?

ರಾಷ್ಟ್ರೀಯ ಭಾವನೆಯ ಈ ಪ್ರಚಂಡ ಭರತದಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಪರಕೀಯ ರಾಜ್ಯ ಒಮ್ಮೆ ನಿರ್ನಾಮವಾಯಿತು ಎಂದರೆ ಅಥವಾ ಕಣ್ಣೆದುರಿನಿಂದ ಮರೆಯಾಯಿತೆಂದರೆ, ಈ ವಿರೋಧಾತ್ಮಕ ರಾಷ್ಟ್ರೀಯತೆಯ ಮುಂದೆ ಏಕಾಏಕಿ ಒಂದು ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಬಂದು ನಿಲ್ಲುತ್ತದೆ. ಇಷ್ಟೆಲ್ಲ ದೇಶಭಕ್ತಿಗೂ ರಾಷ್ಟ್ರೀಯತೆಗೂ ಆಧಾರವಾಗಿದ್ದ ಪರಕೀಯ ರಾಜ್ಯವೇ ಮಾಯವಾದ ಮೇಲೆ

ಇನ್ನು ಮುಂದೆ ರಾಷ್ಟ್ರೀಯತೆಗೆ, ದೇಶಭಕ್ತಿಗೆ ಆಧಾರವಾದರೂ ಯಾವುದು? ಪರಕೀಯ ಆಡಳಿತವೇ ಆಧಾರ ಎಂಬುದಾದಲ್ಲಿ ಕೇವಲ ಗುಲಾಮಿ ರಾಜ್ಯದಲ್ಲಿ ಮಾತ್ರ ದೇಶಭಕ್ತರಿರುತ್ತಾರೆಯೆ? ರಾಷ್ಟ್ರೀಯತೆಗೆ ದಾಸ್ಯವೇ ಇರಬೇಕೆ? ಹಾಗಾಗಲು ಸಾಧ್ಯವಿಲ್ಲ. ಎಂದಮೇಲೆ ದೇಶಭಕ್ತಿ ಎಂದರೇನು ಎಂದು ಆಲೋಚಿಸಬೇಕಾಗುತ್ತದೆ. ಅದಕ್ಕೆ ಏನಾದರೂ ರಚನಾತ್ಮಕ ಆಧಾರ ಇರಲೇಬೇಕು. ಅದಿಲ್ಲದೆ ಹೋದರೆ, ದೊಡ್ಡ ದೊಡ್ಡ ದೇಶಭಕ್ತರೂ ಸಹ ದೇಶಭಕ್ತಿಯ ಹೆಸರಿನಲ್ಲಿ ಸ್ವಾರ್ಥಸಾಧನೆಯ ವ್ಯಾಪಾರ ಆರಂಭಿಸುತ್ತಾರೆ. ತಮ್ಮ ಹೆಸರು, ಕೀರ್ತಿಗಳಿಗಾಗಿ ದೇಶದ ಹಿತವನ್ನೇ ಬಲಿಗೊಡಲು ಮುಂದಾಗುತ್ತಾರೆ. ಆದುದರಿಂದ ದೇಶಭಕ್ತಿಗೆ ಒಂದು ಭಾವಾತ್ಮಕ (Positive) ಕಲ್ಪನೆ ಬೇಕು; ರಚನಾತ್ಮಕ ಆಧಾರ ಬೇಕು; ಅದು ಚಿರಂತನ ನಿಯಮಗಳಿಗೆ ಅನುಸಾರವಾಗಿ ಇರಬೇಕು. ಇಲ್ಲವಾದರೆ ದೇಶಭಕ್ತಿಯು ಮರಳಿನ ಮೇಲೆ ಕಟ್ಟಿದ ಮಹಲಿನಂತೆ ಗಾಳಿಯ ಸಣ್ಣ ಹೊಡೆತಕ್ಕೇ ಉರುಳಿಬೀಳುತ್ತದೆ.

### ಸ್ವಾರ್ಥಮೂಲ 'ದೇಶಭಕ್ತಿ'

ಈ ರಚನಾತ್ಮಕ ಆಧಾರವನ್ನರಿಯಲು ನಮ್ಮ ದೃಷ್ಟಿ ಅಂತರ್ಮುಖವಾಗಬೇಕು. ಪರಕೀಯ ಶಾಸನದ ಬದಲು ನಮ್ಮ ದೇಶ, ನಮ್ಮ ರಾಷ್ಟ್ರದ ಬಗ್ಗೆಯೇ ಆಲೋಚಿಸಬೇಕು. ಪರಕೀಯರ ಆಡಳಿತವನ್ನು ನಾವೇಕೆ ವಿರೋಧಿಸುತ್ತೇವೆ ಎಂದು ಸ್ವಲ್ಪ ಆಳವಾಗಿ ಆಲೋಚಿಸೋಣ. ಪರಕೀಯ ಆಡಳಿತದಿಂದಾಗಿ ನಮ್ಮ ಆರ್ಥಿಕ ಸ್ಥಿತಿ ಬಿಗಡಾಯಿಸುತ್ತದೆ ಎಂದೇನು? ನಮ್ಮಲ್ಲಿ ನಿರುದ್ಯೋಗವಿದೆ; ಬಡತನವಿದೆ; ನಮಗೆ ಉನ್ನತ ಹುದ್ದೆಗಳು ಸಿಕ್ಕುವುದಿಲ್ಲ, ರಾಜ್ಯದ ಕಾರುಬಾರಿನಲ್ಲಿ ನಮಗೆ ಸ್ಥಾನವಿಲ್ಲ; ನಮ್ಮ ವೈಯಕ್ತಿಕ ಸ್ವಾಭಿಮಾನಕ್ಕೆ ಪೆಟ್ಟು ಬೀಳುತ್ತಿದೆ ಎಂದೇನು? ಇವು ಮೇಲುಮೇಲಿನ ಕಾರಣಗಳಾಗಿದ್ದರೂ ಇವೇ ಸತ್ಯಸಂಗತಿಗಳಲ್ಲವೆಂಬುದು ಸ್ಪಷ್ಟವಾಗುತ್ತದೆ. ಇಂದು ವಿದೇಶೀ ರಾಜ್ಯವನ್ನು ವಿರೋಧಿಸುತ್ತಿರುವವರಿಗೇ ನೌಕರಿ ಸಿಕ್ಕಿ ಅವರು ವಿರೋಧ ಮಾಡುವುದನ್ನು ನಿಲ್ಲಿಸಿದಲ್ಲಿ, ಅವರನ್ನು ದೇಶಭಕ್ತರೆಂದು ಕರೆಯಲಾಗುವುದೇನು? ಬಡತನದ ಕಾರಣಕ್ಕಾಗಿ ವಿರೋಧ ಮಾಡುವ ದೇಶಭಕ್ತನೊಬ್ಬನನ್ನು ಶಾಸಕವರ್ಗವು ಹಣ ಕೊಟ್ಟು ಕೊಂಡುಕೊಂಡಲ್ಲಿ ಅವನು ಅನಂತರವೂ ನಮಗೆ ಶ್ರದ್ಧಾಸ್ಪದನಾಗಿ ಉಳಿಯಬಲ್ಲನೇನು? ಸರಕಾರದಲ್ಲಿ ಇಂದು ಅಧಿಕಾರದಲ್ಲಿ ಇಲ್ಲದಿರುವವನಿಗೆ ನಾಳೆ ಅಧಿಕಾರ ಸಿಕ್ಕಿ ಅವನು ಸರಕಾರದ ಬಾಲ ಬಡುಕನಾದರೆ ಅವನ ಮಾತುಗಳಲ್ಲಿ ದೇಶಭಕ್ತನೊಬ್ಬನ ಮಾತುಗಳಲ್ಲಿರುವ ಮಾಂತ್ರಿಕ ಪ್ರಭಾವ ಉಳಿದಿರುತ್ತದೇನು? ದೇಶಭಕ್ತನಾದರೋ ಧನ, ವೈಭವ, ಸ್ಥಾನಮಾನ ಮುಂತಾದವನ್ನೆಲ್ಲ ಒದ್ದು ತಳ್ಳಿ ದಾರಿದ್ರ್ಯ, ಸರಳತೆ, ಸೇವಾವ್ರತಗಳನ್ನೇ ಸ್ವೀಕರಿಸುತ್ತಾನೆ. ಅದರಲ್ಲೇ ಅವನ ಶ್ರೇಷ್ಠತೆ ಅಡಗಿದೆ.



ಪರಕೀಯ ರಾಜ್ಯ ವಿರೋಧಿಸುವುದರ ಹಿಂದಿರುವುದು ಆ ವ್ಯಕ್ತಿಯ ದಾರಿದ್ರ್ಯ, ನಿರುದ್ಯೋಗ, ಅಧಿಕಾರವಿಹೀನತೆಯ ಪ್ರಶ್ನೆಯಲ್ಲ. ಇಡೀ ರಾಷ್ಟ್ರದ ಬಡತನದ ಹಾಗೂ ನಿರುದ್ಯೋಗದ ಪ್ರಶ್ನೆ. ರಾಷ್ಟ್ರದ ಮುಂದಿರುವ ಈ ಸಮಸ್ಯೆಗಳು ಬಗೆಹರಿಯುವುದು ಅಗತ್ಯ ಎಂದು ಯಾರಾದರೂ ಅನ್ನಬಹುದು. ಆದರೆ ನಾವು ಸ್ವಂತದ ಬದಲಿಗೆ ಸಂಪೂರ್ಣ ರಾಷ್ಟ್ರವನ್ನು ಕುರಿತು ಏಕೆ ಚಿಂತಿಸುತ್ತೇವೆ? ಎಂಬ ಪ್ರಶ್ನೆಗೆ ಮೊದಲಿಗೆ ಉತ್ತರಿಸಬೇಕು. ನಮ್ಮ ಸಮಸ್ಯೆಗಳನ್ನು ಬಿಡಿಸಲು ಒಬ್ಬನ ಬದಲು ಎಲ್ಲರೂ ಒಟ್ಟುಗೂಡಿ ಸೇರಿದಲ್ಲಿ ಸುಲಭವಾಗುತ್ತದೆ ಎಂದೇನು? ನಮ್ಮ ಸ್ವಂತದ ವೈಭವವೂ ಸಹ ರಾಷ್ಟ್ರವೈಭವದಲ್ಲೇ ಸೇರಿಹೋಗಿದೆ ಎಂದೇನು? ಈ ಸ್ವಾರ್ಥಭಾವನೆಗಳಿಂದ ಪ್ರೇರಿತರಾಗಿ ನಾವು ರಾಷ್ಟ್ರಹಿತದ ಆಲೋಚನೆ ಮಾಡಿದೆವಾದಲ್ಲಿ ನಮ್ಮ ರಾಷ್ಟ್ರೀಯತೆಯು ಸಹ ಕಳ್ಳಕಾಕರ ಕೂಟದಂತೆಯೇ ಆದೀತು. ನಾಲ್ಕು ಜನ ಡಕಾಯಿತರೂ ಪರಸ್ಪರ ಸಹಕರಿಸುತ್ತಾರೆ. ಪರಸ್ಪರ ರಕ್ಷಣೆ ಮಾಡುತ್ತಾರೆ. ನಾಯಕನ ಆಜ್ಞೆ ಪಾಲಿಸುತ್ತಾರೆ ಹಾಗೂ ಗುಂಪಿನ ಸ್ವಾರ್ಥಕ್ಕಾಗಿ ವೈಯಕ್ತಿಕ ಸ್ವಾರ್ಥವನ್ನು ತ್ಯಜಿಸುತ್ತಾರೆ.

ಮೇಲುನೋಟಕ್ಕೆ ಇವೆಲ್ಲ ಉತ್ತಮ ಗುಣಗಳಂತೆ ಕಂಡುಬಂದರೂ ಅವರ ಈ ಒಕ್ಕೂಟ ಚಿರಂತನವೂ ಅಲ್ಲ; ಅಥವಾ ಮಾನವತೆಯ ಹಿತಕ್ಕಾಗಿಯೂ ಇಲ್ಲ ಎಂಬುದೂ ನಮಗೆ ಗೊತ್ತು. ಲೂಟಿ ಮಾಡಿದನಂತರ ಅವರಲ್ಲೇ ಲೂಟಿಯ ಹಂಚಿಕೆ ಬಗ್ಗೆ ಕಚ್ಚಾಟ ಬೆಳೆದು ಆ ಗುಂಪು ಒಡೆಯಬಹುದು. ಇಲ್ಲವೇ ಅವರು ಇತರರನ್ನು ಸೂರೆಗೊಳ್ಳುವುದನ್ನೇ ಮುಂದುವರಿಸಬಹುದು. ಎರಡೂ ಹಾನಿಕಾರಕವೇ.

ಇದೇ ರೀತಿ ರಾಷ್ಟ್ರೀಯತೆಯೂ ಸಹ. ಆರ್ಥಿಕ ಕಾರಣಗಳಿಂದ ಅದು ಪ್ರೇರಣೆ ಪಡೆದಿದ್ದರೆ ವೈಯಕ್ತಿಕ ಅಥವಾ ವರ್ಗಸ್ವಾರ್ಥಕ್ಕಾಗಿ ರಾಷ್ಟ್ರದೊಳಗೇ ಪರಸ್ಪರ ತಿಕ್ಕಾಟ ನಡೆಯುತ್ತಿರುತ್ತದೆ. ಇಲ್ಲವೇ ಕೆಲವು ಪಶ್ಚಿಮ ರಾಷ್ಟ್ರಗಳಂತೆ ಪೀಡಿತ ಮಾನವತೆಯ ಹೆಸರಿಟ್ಟು ತಮ್ಮತಮ್ಮ ರಾಷ್ಟ್ರೀಯ ಸ್ವಾರ್ಥದ ಪೂರ್ತಿಗಾಗಿ ಇತರ ರಾಷ್ಟ್ರಗಳನ್ನು ಕಾಲಡಿ ತುಳಿದಿಟ್ಟು ನಿರಂತರ ವಿಶ್ವ ಯುದ್ಧದಲ್ಲಿ ತೊಡಗುತ್ತಾ ಮಾನವತೆಗೇ ಗಂಡಾಂತರಕಾರಿಯಾಗುತ್ತದೆ. ಪಾಶ್ಚಾತ್ಯರಲ್ಲಿ ಪ್ರಚಲಿತವಿರುವ ರಾಷ್ಟ್ರ ಕಲ್ಪನೆಯಲ್ಲಿನ ಈ ಆರ್ಥಿಕ ಆಧಾರವು 'ಸತ್ಯ'ವೂ ಅಲ್ಲ; ಶಿವ ಮತ್ತು ಸುಂದರವೂ ಅಲ್ಲ.

### ರಾಷ್ಟ್ರದ ಆತ್ಮ-ಚಿತಿ

ರಾಷ್ಟ್ರದ ಬಗ್ಗೆ ಭಕ್ತಿ ಮತ್ತು ಸ್ವದೇಶಬಾಂಧವರ ಬಗ್ಗೆ ಸಹಾನುಭೂತಿಗೆ ಮೂಲ ಕಾರಣವು ನಮ್ಮ ಸಾಮೂಹಿಕ ಸ್ವಾರ್ಥವಾಗಲೀ, ಸಮಾನ ಶತ್ರುತ್ವ ಅಥವಾ ಮಿತ್ರತ್ವ

ವಾಗಲೀ ಅಲ್ಲ. ನಮ್ಮ ದೇಶಭಕ್ತಿಯ ನಮ್ಮ ರಾಷ್ಟ್ರದ ಸಮಸ್ತ ಜನಸಮೂಹದ ಮೇಲಿನ ಮಮತೆಯಿಂದ ಉದ್ಭವಿಸಿದ್ದು; ನಮ್ಮಲ್ಲಿನ ಏಕಾತ್ಮತೆಯ ಪರಿಣಾಮ ಅದು. ವ್ಯಕ್ತಿಗೆ ಆತ್ಮವಿರುವಂತೆಯೇ ರಾಷ್ಟ್ರಕ್ಕೂ ಆತ್ಮವಿದೆ. ರಾಷ್ಟ್ರದಲ್ಲಿ ಏಕಾತ್ಮತೆಯು ಚಿಮ್ಮಿ ಏಳಲು ಅದೇ ಕಾರಣ. ರಾಷ್ಟ್ರದ ಈ ಆತ್ಮವನ್ನೇ ನಮ್ಮ ಶಾಸ್ತ್ರಜ್ಞರು 'ಚಿತಿ' ಎಂದಿದ್ದಾರೆ.

ಒಂದೊಂದು ರಾಷ್ಟ್ರಕ್ಕೂ ಒಂದೊಂದು ಆತ್ಮ–'ಚಿತಿ' ಇರುತ್ತದೆ. ಪ್ರತಿ ರಾಷ್ಟ್ರದ ಚಿತಿಯೂ ಬೇರೆ ಬೇರೆ ಆದುದರಿಂದಲೇ ಮತ್ತೊಂದು ದೇಶ ತನ್ನ ದೇಶದ ಮೇಲೆ ಆಡಳಿತ ನಡೆಸಿದಾಗ 'ತಾನು ಪರತಂತ್ರದಲ್ಲಿದ್ದೇನೆ' ಎಂದು ಆ ರಾಷ್ಟ್ರಕ್ಕೆ ಅನಿಸುತ್ತದೆ. ಹಾಗೆ ನೋಡಿದಲ್ಲಿ ಸ್ವತಂತ್ರ ರಾಷ್ಟ್ರದಲ್ಲೂ, ಸರಕಾರ ಇರುತ್ತದೆ. ಒಬ್ಬನ ಮೇಲೆ ಮತ್ತೊಬ್ಬನು ಅಧಿಕಾರ ಚಲಾಯಿಸುತ್ತಾನೆ; ರಾಜ್ಯದ ನಿಯಮ ನಿಬಂಧನೆಗಳೂ ಇರುತ್ತವೆ; ಪ್ರಗತಿಪರಾಗತಿಗಳ ಕಾಲವೂ ಬಂದುಹೋಗುತ್ತದೆ. ಆದರೆ ಆಗ ಯಾವ ದೇಶಭಕ್ತನೂ ಅದಕ್ಕಾಗಿ ದುಃಖಿಸನು; ನಗುನಗುತ್ತಾ ಕಷ್ಟಗಳನ್ನು ಸಹಿಸುತ್ತಾನೆ. ಬಡತನದಲ್ಲೂ ಆನಂದವನ್ನೇ ಅನುಭವಿಸುತ್ತಾನೆ.

ಚಿತಿಯೇ ರಾಷ್ಟ್ರತ್ವದ ಲಕ್ಷಣ. ಚಿತಿಯ ಜನಸಮೂಹದಲ್ಲಿ ವ್ಯಾಪಿಸಿರುವುದರಿಂದಲೇ ಅದು ಸಂಸ್ಕೃತಿ, ಸಾಹಿತ್ಯ ಮತ್ತು ಧರ್ಮದ ಮೂಲಕ ವ್ಯಕ್ತಗೊಳ್ಳುತ್ತದೆ. ಚಿತಿಯೇ– ಆ ದೇಶದ ಆತ್ಮವೇ– ಸಮಾನ ಪರಂಪರೆ, ಇತಿಹಾಸ, ಸಭ್ಯತೆಗಳನ್ನು ರೂಪಿಸುತ್ತದೆ. ಯಾವುದೇ ರಾಷ್ಟ್ರದ ಐಕ್ಯಕ್ಕೆ ಅದರ ಸಂಸ್ಕೃತಿ, ಸಭ್ಯತೆ, ಧರ್ಮ, ಭಾಷೆ ಇವುಗಳ ಒಕ್ಕೂಟವೇ ಮೂಲ ಕಾರಣವಲ್ಲ. ಒಂದೇ ಚಿತಿಯ ವ್ಯಕ್ತ ಪರಿಣಾಮ ಅದು. ಆದುದರಿಂದಲೇ ಭಿನ್ನ ಭಿನ್ನ ಚಿತಿಯ ಜನರ ನಡುವೆ ಮೇಲುಮೇಲಿನ ಪ್ರಯತ್ನಗಳಿಂದ ಭಾಷೆ, ಧರ್ಮ, ಸಭ್ಯತೆ ಮುಂತಾದವುಗಳಲ್ಲಿ ಒಕ್ಕೂಟ ನಿರ್ಮಿಸಿದರೂ ರಾಷ್ಟ್ರೀಯ ಏಕತೆ ನಿರ್ಮಾಣವಾಗಲಾರದು.

ಶರೀರದ ಅಂಗಗಳನ್ನು ಜೊತೆಗೂಡಿಸಿದ ಮಾತ್ರಕ್ಕೆ ಜೀವನ ರೂಪುಗೊಳ್ಳಲಾರದು. ಆತ್ಮವೇ ಜೀವನ ಹಾಗೂ ಚೈತನ್ಯದ ಸ್ರೋತವಾಗಬಲ್ಲದು. ವ್ಯಕ್ತಿಯ ಆತ್ಮದ ಏಕತೆಯೇ ಅವನ ವ್ಯಕ್ತಿತ್ವದ ವೈಶಿಷ್ಟ್ಯಗಳಲ್ಲಿ ಹಾಗೂ ಅವನ ನಡವಳಿಕೆಯ ಏಕಸೂತ್ರತೆಯಲ್ಲಿ ವ್ಯಕ್ತಗೊಳ್ಳುತ್ತದೆ. ಶರೀರದೊಂದಿಗೆ ಅವಯವದ ಸಂಬಂಧ, ಒಂದೊಂದು ಅವಯವವೂ ಒಟ್ಟು ಶರೀರದ ಹಿತಕ್ಕಾಗಿ ಕೆಲಸ ಮಾಡುವುದು ಹಾಗೂ ಶರೀರದ ಜೊತೆಜೊತೆಯೇ ಅವಯವವೂ ಪುಷ್ಟಿಗೊಳ್ಳುವುದು. ಸಮಷ್ಟಿ ಜೀವನದ ಈ ಅನುಭವ ಶರೀರದಲ್ಲಿ ಆತ್ಮ ಇರುವುದರಿಂದ ಇದೆಯೇ ಹೊರತು ಅದು ಅವಯವದ ಸ್ವಾರ್ಥದಿಂದ ಪ್ರೇರಿತವಾದುದಲ್ಲ. ಹಾಗೆಯೇ ರಾಷ್ಟ್ರದ ಅಖಂಡ ಏಕತೆ, ಅದರ ಸಮಷ್ಟಿ ಜೀವನ– ಇವು ರಾಷ್ಟ್ರದ ಆತ್ಮವಾದ ಚಿತಿಯ ಪರಿಣಾಮವಾಗಿಯೇ ರೂಪುಗೊಳ್ಳುತ್ತವೆ.



**ಚಿತಿಯೇ ಒರೆಗಲ್ಲು**

ಚಿತಿಯ ಪ್ರಭೆಯಿಂದಲೇ ರಾಷ್ಟ್ರವು ಏಳಿಗೆ ಹೊಂದುತ್ತದೆ. ಚಿತಿಯ ಅಳಿವಿನಿಂದಲೇ ರಾಷ್ಟ್ರದ ಅಧಃಪತನ ಆಗುತ್ತದೆ. ದಾಸ್ಯಕಾಲದಲ್ಲಿ ಚಿತಿಗೆ ಗ್ರಹಣ ಹಿಡಿಯುತ್ತದೆ. ಜನಜೀವನದಲ್ಲಿ ಅದರ ಹೊಳಪು ಮಾಸುತ್ತದೆ. ಕೇವಲ ಕೆಲವೇ ಕೆಲವು, ಶುದ್ಧ ಹಾಗೂ ಸಾತ್ತ್ವಿಕ ಜನರಲ್ಲಿ ಮಾತ್ರ ಅದು ಎಚ್ಚರವಿರುತ್ತದೆ. ಈ ಚಿತಿಯ ಕಾಂತಿ ಬೆಳಗುವಂತೆ ಮಾಡುವುದೇ ದೇಶಭಕ್ತನ ಪ್ರಮುಖ ಕಾರ್ಯ. ಇದರ ಪರಿಣಾಮವಾಗಿಯೇ ದೇಶವು ಮುಕ್ತಿ ಹೊಂದುತ್ತದೆ. ಅನಂತರವೂ ಅದರ ಪ್ರಕಾಶ ಹೆಚ್ಚುತ್ತಾ ರಾಷ್ಟ್ರ ಜೀವನವನ್ನು ಬಲಿಷ್ಠಗೊಳಿಸುತ್ತದೆ; ಅದನ್ನು ಚಿರಂತನಗೊಳಿಸಿ ಮಾನವಕಲ್ಯಾಣದತ್ತ ಒಯ್ಯುತ್ತದೆ. ಈ ಆತ್ಮಸಾಕ್ಷಾತ್ಕಾರವೇ ರಾಷ್ಟ್ರಜೀವನದ ಮುಖ್ಯ ಧ್ಯೇಯ. ರಾಷ್ಟ್ರವನ್ನು ಆತ್ಮಸಾಕ್ಷಾತ್ಕಾರದೆಡೆಗೆ ಕೊಂಡೊಯ್ಯುವವನು ಮಾತ್ರ ದೇಶಭಕ್ತನಾಗಬಲ್ಲನೇ ವಿನಾ, ಕೇವಲ ವಿದೇಶೀಯರನ್ನು ವಿರೋಧ ಮಾಡುವವನಲ್ಲ. ರಾಷ್ಟ್ರಕ್ಕೆ ಈ ಆತ್ಮಸಾಕ್ಷಾತ್ಕಾರ ಆಗದೆ, ಆತ್ಮವು ಒಂದೇ ಸಮನೆ ದಾಸ್ಯದಲ್ಲಿ ಮುಳುಗಿದ್ದರೆ ಅಥವಾ ನಮ್ಮ ರಾಷ್ಟ್ರದ ಚಿತಿಯ ಮೇಲೆ ಮತ್ತೊಂದು ರಾಷ್ಟ್ರದ ಚಿತಿಯ ಪ್ರಭಾವವೇ ಮುಂದುವರಿದರೆ ಸಮಾಜಜೀವನವು ಉತ್ಕರ್ಷಕ್ಕೆ ಏರುವ ಬದಲು ಅಧೋಮುಖವಾಗುತ್ತದೆ. ಈ ಚಿತಿಗಳ ಸಂಘರ್ಷದಲ್ಲಿ ಸ್ವ ದೇಶದ ಚಿತಿ ಬಲಹೀನವಿದ್ದಲ್ಲಿ ಕಡೆಗೆ ಒಮ್ಮೆ ರಾಷ್ಟ್ರ ಜೀವನವೇ ನಿರ್ನಾಮವಾಗಿ ಅದರ ಸ್ಥಾನವನ್ನು ಇನ್ನೊಂದು ರಾಷ್ಟ್ರ ಆಕ್ರಮಿಸಿಕೊಳ್ಳುತ್ತದೆ.

ಇಂದು ಭಾರತದ ಮುಂದಿರುವುದು ಇದೇ ಸಮಸ್ಯೆ. ಇದುವರೆಗೆ 'ರಾಷ್ಟ್ರೀಯ'ವೆಂದು ಹೇಳಿಕೊಳ್ಳುತ್ತಿದ್ದ ಚಳವಳಿಗಳೆಲ್ಲವೂ ಕೇವಲ ಇಂಗ್ಲಿಷರನ್ನು ವಿರೋಧಿಸುತ್ತಿದ್ದವು. ನಾನಾ ಬಗೆಯ ಕಾರಣಗಳನ್ನು ಒಟ್ಟುಗೂಡಿಸಿ ಅವರ ವಿರುದ್ಧ ಒಂದು ಸಂಯುಕ್ತರಂಗವನ್ನು ಕಟ್ಟಿ ನಿಲ್ಲಿಸುವ ಪ್ರಯತ್ನ ನಡೆಸಿದ್ದವು. ಅದರಲ್ಲಿ ಆದಷ್ಟು ಹೆಚ್ಚು ಜನಸಮೂಹವನ್ನು ಸೇರಿಸಿ ಅವರಲ್ಲಿ ರಾಷ್ಟ್ರೀಯ ಸಮಾನತೆಯನ್ನು ನಿರ್ಮಿಸುವ ಯತ್ನವೂ ಸಾಗಿತು. ಆದರೆ ಅದಕ್ಕೆ ಚಿತಿಯ ಆಧಾರವೇ ಇರದಿದ್ದ ಕಾರಣ ನಮ್ಮಲ್ಲಿ ರಾಷ್ಟ್ರೀಯತೆಯ ರಚನಾತ್ಮಕ ಸ್ವರೂಪವು ಭದ್ರವಾಗಿಲ್ಲವೆಂಬುದು ಇಂದು ನಿಚ್ಚಳವಾಗಿದೆ. ಹೊರಗಿನ ಅವಯವಗಳನ್ನು ಜೋಡಿಸಿ ಆತ್ಮವನ್ನು ಸೃಷ್ಟಿಸುವುದು ಎಂದಿಗೂ ಸಾಧ್ಯವಿಲ್ಲ.

**ವಿಧಾಯಕ ದೇಶಭಕ್ತಿ**

ಇಂದು ನಮ್ಮ ವಿರೋಧದ ಕೇಂದ್ರಬಿಂದು ಕಣ್ಮರೆಯಾಗಿದೆ. ಇಂತಹ ಸಮಯದಲ್ಲಿ ರಚನಾತ್ಮಕ ದೇಶಭಕ್ತಿಯ ಕಡೆಗೆ ನಾವು ವಿಶೇಷವಾಗಿ ಗಮನ ಹರಿಸಬೇಕು. ನಾವು ನಮ್ಮ ಸಮಾಜದ ಚಿತಿಯನ್ನು ಗುರುತಿಸಿ ಅದನ್ನು ಸಂಸ್ಕಾರಗಳ

ಮೂಲಕ ಜನಮನದಲ್ಲಿ ದೃಢಪಡಿಸಲು ಪ್ರಯತ್ನಿಸೋಣ. ಅದರಿಂದಲೇ ನಮ್ಮ ರಾಷ್ಟ್ರದ ಚಿರಕಲ್ಯಾಣ ಸಾಧ್ಯ. ಅದರ ಮೂಲಕವೇ ನಮಗೆ ಮಾನವತೆಯ ಸೇವೆ ಮಾಡುವ ಶಕ್ತಿ ಬಂದೀತು. ಆಗಲೇ:

**ಸರ್ವೇಽಪಿ ಸುಖಿನಃ ಸಂತು ಸರ್ವೇ ಸಂತು ನಿರಾಮಯಾಃ ।**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ಭವೇತ್ ॥**

ಎಂಬ ನಮ್ಮ ಜೀವನಧ್ಯೇಯ ಕೈಗೂಡೀತು.



# ೪. ನಮ್ಮ ರಾಷ್ಟ್ರದ ಆತ್ಮ ಎಲ್ಲಿದೆ?

ಪ್ರತಿಯೊಂದು ರಾಷ್ಟ್ರ ಬದುಕುವುದೂ 'ತನ್ನತನ'ದ ಆಧಾರದ ಮೇಲೆಯೇ. ಅದೇ ರಾಷ್ಟ್ರದ ಆತ್ಮ. ಅದಕ್ಕೇ ಚಿತಿ ಎನ್ನುವುದು. 'ಚಿತಿ'ಯ ಏಳುಬೀಳುಗಳೇ ರಾಷ್ಟ್ರದ ಏಳುಬೀಳುಗಳು. ಭಾರತೀಯ ರಾಷ್ಟ್ರದ ಉತ್ಥಾನ ಪತನಗಳಿಗೆ ಸಹ ನಮ್ಮ ಚಿತಿಯ ಏರಿಳಿತಗಳೇ ಕಾರಣ, ಇಂದು ಭಾರತವು ಉನ್ನತಿಯನ್ನು ಸಾಧಿಸಲು ಬಯಸುತ್ತಿದೆ. ಈ ಲೋಕದಲ್ಲಿ ಸಿರಿ ಸಾಮರ್ಥ್ಯಗಳಿಂದ ತಲೆಯೆತ್ತಿ ನಿಲ್ಲಲು ಹವಣಿಸುತ್ತಿದೆ. ಯಾರ ಬಾಯಲ್ಲಿ ನೋಡಿದರೂ ಇದೇ ಧ್ಯೇಯದ ಉದ್ಘೋಷ ಕೇಳಿಬರುತ್ತಿದೆ. ಅದಕ್ಕಾಗಿ ಪ್ರಯತ್ನಗಳೂ ನಡೆಯುತ್ತಿವೆ.

**ಪ್ರೇರಕ ತತ್ತ್ವ ಯಾವುದು?**

ಇಂತಹ ಪರ್ವಕಾಲದಲ್ಲಿ ನಮ್ಮ ದೇಶದ 'ತನ್ನತನ'ದ ಬಗ್ಗೆ, ನಮ್ಮ ಚಿತಿಯ ಬಗ್ಗೆ ತಿಳಿವಳಿಕೆ ಅವಶ್ಯಕ. ಚಿತಿಯ ಅರಿವು ಇಲ್ಲವಾದರೆ ನಮ್ಮ ಪ್ರಯತ್ನಗಳಿಗೆ ಪ್ರೇರಕ ಶಕ್ತಿಯೇ ಇಲ್ಲದಂತಾಗಿ ಅವು ವಿಫಲಗೊಳ್ಳುತ್ತವೆ. ಅಲ್ಲದೆ, ಮನಸ್ಸಿನಲ್ಲಿ ಭಾರತದ ಹಿತ ಬಯಸುತ್ತಾ ಅದಕ್ಕಾಗಿ ಜೀವನ ಸುರಿದು ದುಡಿದರೂ ಸಹ ನಾವು ಭಾರತವನ್ನು ವೈಭವಕ್ಕೇರಿಸುವ ಬದಲಿಗೆ ಅದನ್ನು ಮಣ್ಣುಗೂಡಿಸಿದಂತಾಗುತ್ತದೆ. ಏಕೆಂದರೆ ಸ್ವಂತ ಪ್ರಕೃತಿಗೆ ಒಗ್ಗದ ಕೆಲಸದಿಂದ ಜೀವನದ ವಿಕಾಸದ ಬದಲು ವಿನಾಶವೇ ಆಗುತ್ತದೆ. 'ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಮ್'– ಗಣೇಶನನ್ನು ಮಾಡಲಿಕ್ಕೆ ಹೋಗಿ ಮಂಗನನ್ನು ಮಾಡಿದಂತಾಗುತ್ತದೆ!

ನಮ್ಮ ರಾಷ್ಟ್ರಜೀವನದ ಚಿತಿ ಯಾವುದು? ನಮ್ಮ ಆತ್ಮದ ಸ್ವರೂಪ ಏನು? ಅದಕ್ಕೊಂದು ವ್ಯಾಖ್ಯೆ ನೀಡುವುದು ಆಗದ ಮಾತು. ಅದನ್ನು ಹೃದಯದಲ್ಲಿ ಅನುಭವಿಸಲು ಮಾತ್ರ ಬಂದೀತು. ನಮ್ಮ ರಾಷ್ಟ್ರದ ಆತ್ಮ ಏನೆಂದು ಚೆನ್ನಾಗಿ ಅರಿತುಕೊಂಡು ತಮ್ಮ ಜೀವನದಲ್ಲಿ ಅದರ ಉಜ್ಜ್ವಲ ಪ್ರಕಾಶವನ್ನು ಮಿಂಚಿಸಿದಂಥ ಮಹಾಪುರುಷರ ಜೀವನದ ಕಡೆ ದೃಷ್ಟಿ ಹರಿಸಿದರೆ, ಅವರ ಜೀವನ ಘಟನೆಗಳನ್ನು ವಿಶ್ಲೇಷಿಸಿ ಮನನ ಮಾಡಿದರೆ, ಆಗ ನಮಗೂ ನಮ್ಮ ಚಿತಿಯ ಪ್ರಭೆ ಒಂದಿಷ್ಟು ದೊರಕೀತು. ಪ್ರಾಚೀನ ಕಾಲದಿಂದ ಇಂದಿನವರೆಗೆ ಬೆಳೆದುಬಂದಿರುವ ನಮ್ಮ ರಾಷ್ಟ್ರ ಪುರುಷರ ಪರಂಪರೆಯಲ್ಲಿ ಹುದುಗಿರುವ ಜೀವನಸೂತ್ರವನ್ನು ಹುಡುಕಿದ್ದೇ

ಆದರೆ ಚಿತಿಯ ಪ್ರತ್ಯಕ್ಷ ಪರಿಣಾಮಗಳ ಮೂಲಕ ಅದರ ಪರೋಕ್ಷ ಸ್ವರೂಪದ ಅರಿವು ನಮಗೆ ಅಲ್ಪವಾದರೂ ಆದೀತು.

ಅನೇಕ ಮಹಾನ್ ವಿಭೂತಿಗಳ ನಾಮಸ್ಮರಣೆಯಿಂದಲೇ ದುರ್ಬಲತೆಯ ಕ್ಷಣಗಳಲ್ಲಿ ನಮ್ಮಲ್ಲಿ ಸಾಮರ್ಥ್ಯ ಸ್ಫುರಿಸುತ್ತದೆ. ಹೇಡಿತನವನ್ನು ಬಿಟ್ಟು ವೀರವ್ರತ ತೊಡುತ್ತೇವೆ. ನಮ್ಮ ಜೀವನಕ್ಕೆ ಇಷ್ಟೊಂದು ಸಾಮರ್ಥ್ಯ ತುಂಬುವಂಥ ಅವರ ಬದುಕಿನಲ್ಲಿದ್ದ ಆ ಗೂಢ ಚೈತನ್ಯ ಯಾವುದು? ನಾವು ಪ್ರಾಣಾರ್ಪಣೆಗೂ ಸಿದ್ಧವಾಗುವಂತೆ ಮಾಡುವ ಆ ಸಂಗತಿ ಯಾವುದು? ನಾವು ನಮ್ರತೆಯಿಂದ ತಲೆಬಾಗುವಂತೆ ಮಾಡುವ ಆ ಶ್ರದ್ಧಾಸ್ಪದ ವಿಷಯ ಯಾವುದು? ನಮ್ಮ ರಾಷ್ಟ್ರ ಜೀವನಕ್ಕೆ ಕೇಂದ್ರದಂತಿರುವ ಆ ಭವ್ಯ ಲಕ್ಷ್ಯ ಯಾವುದು? ಘೋರ ಸಂಗ್ರಾಮಗಳಲ್ಲಿ ನಾವು ಸೆಣಸಿದುದು, ರಕ್ತ ಹರಿಸಿದುದು ಯಾವ ರಾಷ್ಟ್ರೀಯ ತತ್ತ್ವಗಳ ರಕ್ಷಣೆಗಾಗಿ? ಭಾರತಭೂಮಿಗಾಗಿ, ಎಂದು ಉತ್ತರವನ್ನೇನೋ ಕೊಡಬಹುದು. ಆದರೆ 'ಭಾರತ' ಎಂದರೇನು? ಕೇವಲ ಜಡಭೂಮಿಯೇನು? ನಾವು ಹಿಮಾಲಯದ ಕಲ್ಲು ಹಾಗು ಗಂಗೆಯ ನೀರನ್ನು ಮಾತ್ರ ರಕ್ಷಿಸಿದ್ದೇವೇನು? ನಮ್ಮ ಅವತಾರಿ ಪುರುಷರು ಜನ್ಮತಾಳಿದ ಉದ್ದೇಶವಾದರೂ ಏನು? ಅವರನ್ನು 'ಭಗವಂತನ ಅವತಾರ' ಎಂದು ನಾವು ಕರೆದುದಾದರೂ ಏತಕ್ಕೆ?

## ನಮ್ಮ ವೈಶಿಷ್ಟ್ಯ–ಧರ್ಮ

ಹೀಗೆ ನಾನಾ ಪ್ರಶ್ನೆಗಳು ಏಳುತ್ತವೆ. ನಾವು ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡರೆ, ಆಗ ನಮ್ಮ ಚಿತಿಯ ಪರಿಚಯ ಆಗಬಲ್ಲದು. ನಮ್ಮ ಶಾಸ್ತ್ರಕಾರರು ಇದನ್ನು 'ಧರ್ಮ' ಎಂದು ಕರೆದಿದ್ದಾರೆ. ಇಂದು ಆ ಶಬ್ದಕ್ಕೆ ತಪ್ಪು ಅರ್ಥ ಪ್ರಚಲಿತವಾಗಿದೆ. ಇಂಗ್ಲಿಷ್ ಭಾಷೆಯ 'ರಿಲಿಜನ್'ನ ಪರ್ಯಾಯ ವಾಚಕವಾಗಿ 'ಧರ್ಮ' ಶಬ್ದವನ್ನು ತಿಳಿದುಕೊಂಡು 'ರಿಲಿಜನ್' ಮತ್ತು 'ದೀನ್'ಗಳ ಹೆಸರಿನಲ್ಲಿ ಯೂರೋಪ್ ಮತ್ತು ಇತರ ದೇಶಗಳಲ್ಲಿ ನಡೆದ ಅಮಾನುಷ ಅತ್ಯಾಚಾರಗಳೊಂದಿಗೆ ಇದರ ಸಂಬಂಧ ಜೋಡಿಸಿ 'ಧರ್ಮ' ಎಂದು ಶಬ್ದ ಕಿವಿಗೆ ಬಿದ್ದೊಡನೆಯೆ ಬೆದರುವಂತಾಗಿದೆ. ಹೀಗಾಗಿ ಕೆಲವರು ಧರ್ಮವನ್ನೇ ನಾಶಪಡಿಸಲು ಉದ್ಯುಕ್ತರಾದರೆ ಸೌಮ್ಯ ಸ್ವಭಾವದ ಇನ್ನೂ ಕೆಲವರು ಧರ್ಮವನ್ನು ವ್ಯಕ್ತಿಗತ ಜೀವನಕ್ಕೆ ಮಾತ್ರ ಅನ್ವಯಿಸಬೇಕು ಎನ್ನುತ್ತಾರೆ. ರಾಷ್ಟ್ರ ಮತ್ತು ಸಮಾಜಗಳೊಂದಿಗೆ ಧರ್ಮದ ಸಂಬಂಧವಿದೆ ಎನ್ನುವುದನ್ನೆ ಅವರು ಒಪ್ಪುವುದಿಲ್ಲ. 'ಧರ್ಮ'ದ ಅರ್ಥ ಕೇವಲ 'ರಿಲಿಜನ್' ಎಂದಷ್ಟೇ ಆಗಿದ್ದರೆ ಅವರ ಅಭಿಪ್ರಾಯ ಸರಿ ಎನಿಸುತ್ತಿತ್ತು.

ಆದರೆ 'ಧರ್ಮ'ದ ಅರ್ಥ ವ್ಯಾಪಕವಾದದ್ದು. ಈ ವ್ಯಾಪಕ ಅರ್ಥದ ಹಿಂದೆ ಇರುವ ಭಾವವೇ ಭಾರತದ ಕೋಟಿ ಕೋಟಿ ಜನರ ಮನಸ್ಸಿನಲ್ಲಿ ಸ್ಫುರಿಸಬೇಕೆಂದಾದರೆ



'ಧರ್ಮ' ಶಬ್ದವನ್ನೇ ಬಳಸಬೇಕು. ಶ್ರೀರಾಮ, ಶ್ರೀಕೃಷ್ಣರನ್ನು ನಮ್ಮ ಧರ್ಮದ ಮಹಾಪುರುಷರು ಎನ್ನುತ್ತೇವೆ. ಅವರು ಯಾರೊಬ್ಬರ ವೈಯಕ್ತಿಕ ಆಸ್ತಿ ಏನು? ಅವರ ನೆನಪನ್ನು ಭಾರತದಿಂದ ಅಳಿಸಿಹಾಕಲು ಯಾವ ದೇಶಭಕ್ತ ತಾನೆ ಇಚ್ಛಿಸಿಯಾನು? ರಾಮಾಯಣ ಮತ್ತು ಮಹಾಭಾರತ ನಮ್ಮ ಧರ್ಮಗ್ರಂಥಗಳು. ಅವು ಇಂದಿಗೂ ಸಹ ನಮ್ಮ ಓದಿಗೆ ಯೋಗ್ಯವಲ್ಲವೆ? ಅವುಗಳಲ್ಲಿ ಇಂದಿನ ರಾಷ್ಟ್ರಜೀವನಕ್ಕೆ ಪ್ರೇರಣೆ ನೀಡುವಂತಹ ಅಂಶಗಳು ಇಲ್ಲವೆ? ನಮ್ಮ ಧರ್ಮವು ಗಂಗೆಯನ್ನು ಪೂಜ್ಯತೆಯಿಂದ ಕಾಣಲು, ಚತುರ್ಧಾಮಗಳ ಯಾತ್ರೆಯ ಮೂಲಕ ಭಾರತವನ್ನು ಪ್ರದಕ್ಷಿಣೆ ಹಾಕಲು ಬೋಧಿಸುತ್ತದೆ. ಇವು ರಾಷ್ಟ್ರಭಕ್ತಿಯನ್ನು ಉದ್ದೀಪಿಸುವ ಭಾವನೆಗಳಲ್ಲವೆ?

ನಮ್ಮ ಧರ್ಮವೇ ನಮ್ಮ ರಾಷ್ಟ್ರದ ಆತ್ಮ. ಧರ್ಮ ಇಲ್ಲದೆ ರಾಷ್ಟ್ರ ಜೀವನಕ್ಕೆ ಏನೂ ಅರ್ಥ ಉಳಿಯದು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಹರಡಿರುವ ಭೂಪ್ರದೇಶವಾಗಲಿ, ಕೋಟಿ ಕೋಟಿ ಜನರ ಹಿಂಡಾಗಲಿ ಭಾರತರಾಷ್ಟ್ರ ಎನಿಸಲಾರದು. ಇಲ್ಲಿನ ಜನಕೋಟಿಯನ್ನು ಪರಸ್ಪರವಾಗಿ ಹಾಗೂ ಈ ಭೂಮಿಯೊಂದಿಗೆ ಬೆಸೆಯಬಲ್ಲ ಸೂತ್ರವೊಂದು ಬೇಕು. ಆ ಸೂತ್ರವೇ ನಮ್ಮ ಧರ್ಮ. ಧರ್ಮ ಹೋದಲ್ಲಿ ಭಾರತೀಯ ಜೀವನದ ಚೈತನ್ಯವೇ ಉಡುಗುತ್ತದೆ. ಅವರ ಪ್ರೇರಕ ಶಕ್ತಿ ಬತ್ತುತ್ತದೆ. ನಮ್ಮ ಧಾರ್ಮಿಕ ವೈಶಿಷ್ಟ್ಯದಿಂದಾಗಿಯೇ ಪ್ರಪಂಚದ ಅನ್ಯಾನ್ಯ ಜನಾಂಗಗಳ ನಡುವೆ ನಾವು ಒಂದು ರಾಷ್ಟ್ರವಾಗಿ ತಲೆಯೆತ್ತಿ ನಿಲ್ಲಬಲ್ಲೆವು.

## ಜೀವನದ ಒರೆಗಲ್ಲು

ಧರ್ಮದಂಡದಿಂದಲೇ ನಾವು ಎಲ್ಲವನ್ನೂ ಅಳೆದಿದ್ದೇವೆ. ಧರ್ಮದ ಒರೆಗಲ್ಲಿಗೆ ಹಚ್ಚಿಯೇ ನಾವು ಪ್ರತಿಯೊಂದು ಮಾತಿನ 'ಟೊಳ್ಳು–ಗಟ್ಟಿ' ನಿರ್ಧರಿಸಿದ್ದೇವೆ. ನಾವು ಯಾರನ್ನಾದರೂ ಮಹಾಪುರುಷರೆಂದು ಕಂಡು ಗೌರವಿಸಿದ್ದಲ್ಲಿ, ಪೂಜಿಸಿದ್ದಲ್ಲಿ ಅವರ ಜೀವನದ ಹೆಜ್ಜೆಹೆಜ್ಜೆಗೂ ನಮಗೆ ಕಂಡುಬಂದ ಧಾರ್ಮಿಕತೆಯೇ ಅದಕ್ಕೆ ಕಾರಣ. ಶ್ರೀರಾಮನು ಸದಾ ಸರ್ವದಾ ನಮಗೆ ಪೂಜ್ಯ. ರಾವಣನಾದರೋ ನಮಗೆ ತ್ಯಾಜ್ಯ. ಏಕೆ? ಶ್ರೀರಾಮ ಧರ್ಮರಕ್ಷಕನಾಗಿದ್ದ; ರಾವಣ ಧರ್ಮಭಕ್ಷಕನಾಗಿದ್ದ. ಯುಧಿಷ್ಠಿರ ಮತ್ತು ದುರ್ಯೋಧನ ಇಬ್ಬರೂ ಸಹೋದರರು ಹಾಗೂ ಇಬ್ಬರೂ ರಾಜ್ಯಾಕಾಂಕ್ಷಿಗಳೇ ಆಗಿದ್ದರೂ ನಾವು ಒಬ್ಬನನ್ನು ಆದರಿಸಿ ಮತ್ತೊಬ್ಬನನ್ನು ತಿರಸ್ಕರಿಸುವುದು ಇದೇ ಕಾರಣಕ್ಕಾಗಿ.

ಒಂದು ವಿಷಯವನ್ನು ಒಂದು ಪ್ರಸಂಗದಲ್ಲಿ ಒಳ್ಳೆಯದೆಂದೂ, ಅದನ್ನೇ ಮತ್ತೊಂದು ಪ್ರಸಂಗದಲ್ಲಿ ಕೆಟ್ಟದ್ದೆಂದೂ ಕರೆಯುವುದಕ್ಕೆ ಧರ್ಮದ ಅಸ್ತಿತ್ವ ಇಲ್ಲವೇ ಅಭಾವವೇ ಕಾರಣ. ತಾನು ಹುಟ್ಟಿದ ದೇಶಕ್ಕೆ ದ್ರೋಹಿಯಾದ ವಿಭೀಷಣನು

ಪರಮ ವಿಷ್ಣುಭಕ್ತನಾದುದೂ, ಸೂಜಿ ಊರುವಷ್ಟು ಭೂಮಿ ಕೊಡಲೊಪ್ಪದ ದುರ್ಯೋಧನ ವಿಷ್ಣು ವಿರೋಧಿ ಎನಿಸಿದುದೂ ಇದೇ ಕಾರಣದಿಂದಲೇ. ಒಂದು ಕಡೆ ರಾಜಭಕ್ತಿಯನ್ನು ಎತ್ತಿಹಿಡಿದಿದ್ದರೂ, ವೇನರಾಜನನ್ನು ಮಾತ್ರ ಋಷಿಗಳು ರಾಜ್ಯಚ್ಯುತಿಮಾಡಿದುದು ಧರ್ಮರಕ್ಷಣೆಗಾಗಿಯೇ. ಧರ್ಮಕ್ಕಾಗಿ ತಂದೆಯನ್ನು ಸದಾ ಹೊತ್ತುಕೊಂಡೇ ಶ್ರವಣಕುಮಾರ ತಿರುಗಾಡಿದರೆ, ಧರ್ಮಕ್ಕಾಗಿಯೇ ಪ್ರಹ್ಲಾದ ತನ್ನ ತಂದೆ ಹಿರಣ್ಯಕಶಿಪುವನ್ನು ವಿರೋಧಿಸಿದ. ಧರ್ಮರಕ್ಷಣೆಗಾಗಿ ಶ್ರೀರಾಮನು ಏಕಪತ್ನೀ ವ್ರತಸ್ಥನಾದರೆ, ಶ್ರೀಕೃಷ್ಣನು ಬಹುಪತ್ನಿಯರನ್ನು ವಿವಾಹವಾಗಿ ಧರ್ಮರಕ್ಷಣೆ ಮಾಡಿದ. ನಮ್ಮ ಇತಿಹಾಸದಲ್ಲಿ ನಾವು ಶ್ರದ್ಧೆಯಿಂದ ಕಾಣುವ, ಅದರ ಪರಸ್ಪರ ವಿರೋಧವಾಗಿ ತೋರುವ, ಇಂಥ ಎಷ್ಟೋ ಘಟನೆಗಳು ನಡೆದಿವೆಯಾದರೂ ಇವೆಲ್ಲಕ್ಕೂ ಧರ್ಮದಿಂದಲೇ ವಿವರಣೆ ನೀಡಲು ಬಂದೀತು.

ನಾವು ನಮ್ಮ ಬದುಕಿನ ಎಲ್ಲ ಕೆಲಸಗಳನ್ನೂ ಧರ್ಮಕ್ಕೆ ಪ್ರಾಧಾನ್ಯ ಕೊಟ್ಟೇ ನಡೆಸುತ್ತೇವೆ. ಊಟ, ನಿದ್ರೆ, ಹರಟೆ ಮುಂತಾದ ನಮ್ಮೆಲ್ಲ ಚಟುವಟಿಕೆಗಳಲ್ಲೂ ಧರ್ಮಭಾವವೇ ತುಂಬಿದೆ. ಅದಕ್ಕಾಗಿಯೇ ಸ್ಮೃತಿಗ್ರಂಥಗಳು ಅವುಗಳ ಬಗ್ಗೆ ನಿಯಮಗಳನ್ನು ಕೊಟ್ಟಿವೆ. ನಮಗೆ ಅವೂ ಧರ್ಮಗ್ರಂಥಗಳೇ. ನಮ್ಮ ಸಾಹಿತ್ಯಕ್ಕೆ ಸಹ ಲೋಕಕಲ್ಯಾಣದ ಧಾರ್ಮಿಕ ಭಾವನೆಯದೇ ಪ್ರೇರಣೆ. ಒಬ್ಬ ಕವಿ ತನ್ನ ಅಂತಸ್ಸುಖಕ್ಕಾಗಿ ಕವಿತೆಯನ್ನು ಬರೆದರೂ ಅವನು ತನ್ನ ಅಂತರಂಗದಲ್ಲಿ ಆತ್ಮಸಾಕ್ಷಾತ್ಕಾರದ ಸುಖವನ್ನು ಸವಿಯುತ್ತಾ ಧಾರ್ಮಿಕ ಪ್ರವೃತ್ತಿಯ ಉಚ್ಚತಮ ಮೆಟ್ಟಿಲೇರುತ್ತಾನೆ. ರಾಷ್ಟ್ರಾತ್ಮದ ಕರೆಯನ್ನು ಪದಪದದಲ್ಲೂ ಹೊರಸೂಸುವಂತಹ ಆದರೆ ಧಾರ್ಮಿಕ ಭಾವನೆಯಿಂದ ತುಂಬಿ ತುಳುಕದಂತಹ, ಕಾವ್ಯವನ್ನು ರಚಿಸಿದ ಕವಿ ಭಾರತದಲ್ಲಿ ಯಾವನಾದರೂ ಇದ್ದಾನೆಯೆ? ನಮ್ಮ ವಾಲ್ಮೀಕಿ, ವ್ಯಾಸ, ಕಾಳಿದಾಸ, ತುಲಸೀದಾಸ, ಸೂರದಾಸ, ಜ್ಞಾನದೇವ, ಸಮರ್ಥ, ಚೈತನ್ಯ, ನಾನಕ, ಬಸವಣ್ಣ, ಪುರಂದರ ಮುಂತಾದವರು ಕೇವಲ ಕವಿಗಳಾಗಿರಲಿಲ್ಲ; ಅವರು ಋಷಿಗಳೂ, ಸಂತರೂ ಆಗಿದ್ದರು. ನಮ್ಮ ಧರ್ಮವನ್ನು ತಮ್ಮ ದಿನನಿತ್ಯದ ಜೀವನದಲ್ಲಿ ಆಚರಣೆಗೆ ತಂದಿದ್ದ ಆದರ್ಶ ಮಹಾಪುರುಷರೂ ಅವರಾಗಿದ್ದರು. ಅದರಿಂದಲೇ ಅವರ ಒಂದೊಂದು ಮಾತೂ ರಾಷ್ಟ್ರದ ಹೃದಯವನ್ನು ಮಿಡಿಯುವ ಸ್ವರವೇ ಆಯಿತು. ಅವರ ವಾಣಿ ಯುಗಯುಗಗಳಿಂದ ರಾಷ್ಟ್ರಜೀವನದಲ್ಲಿ ಹರಿಯುತ್ತಾ ಬಂದಿದೆ.

**ರಾಜನೀತಿಯೂ ಒಂದು ಧರ್ಮವೇ**

ನಮ್ಮ ರಾಜನೀತಿಜ್ಞರೂ, ಆಚಾರ್ಯಪುರುಷರೂ ರಾಜನೀತಿಗೆ ಧರ್ಮದ ಪುಟ ಕೊಟ್ಟರು. ಶುಕ್ರಾಚಾರ್ಯರು ಮತ್ತು ಚಾಣಕ್ಯರು ಧರ್ಮರಹಿತ ರಾಜನೀತಿಯ



ಪೋಷಕರಾಗಿರಲಿಲ್ಲ. ನಮ್ಮಲ್ಲಿ ಧರ್ಮಹೀನ ರಾಜನೀತಿಗೆ ಸ್ಥಾನವೇ ಇಲ್ಲ. ನಮ್ಮ ಸಾಮ್ರಾಟರು ಅಶ್ವಮೇಧವನ್ನು ಧರ್ಮಕಾರ್ಯ ಎಂದು ತಿಳಿದು ಮಾಡಿದರೋ ಅಥವಾ ರಾಜಕಾರಣ ಎಂದು ತಿಳಿದು ಆಚರಿಸಿದರೋ? ರಾಣಾ ಪ್ರತಾಪನು ಅಕ್ಬರನೊಂದಿಗೆ ನಡೆಸಿದ ಯುದ್ಧ, ಧರ್ಮದ ವ್ಯಾಪ್ತಿಯಲ್ಲಿ ಬರುವಂತಹದೋ ಅಥವಾ ರಾಜಕೀಯ ವ್ಯಾಪ್ತಿಯಲ್ಲೋ? ಶಿವಾಜಿ, ಗುರುಗೋವಿಂದರು ರಾಜ ನೀತಿಕ್ಷೇತ್ರದ ನಾಯಕರೋ, ಧರ್ಮದ ಕ್ಷೇತ್ರದ ನಾಯಕರೋ? ದಯಾನಂದ, ವಿವೇಕಾನಂದರ ಕಾರ್ಯ ರಾಜಕೀಯ ಕ್ಷೇತ್ರದ ಮೇಲೆ ಪ್ರಭಾವ ಬೀರಿತೋ, ಇಲ್ಲವೋ? ಗಾಂಧೀಜಿಯವರ ಭಾರತವ್ಯಾಪಿ ಪ್ರಭಾವದ ಹಿಂದೆ ಅವರ ಧಾರ್ಮಿಕತನವಿತ್ತೋ ಅಥವಾ ರಾಜಕಾರಣವಿತ್ತೋ? ಸ್ವದೇಶಿ ಚಳವಳಿಯಲ್ಲಿ ಗೀತೆಯ ಪ್ರತಿಯನ್ನು ಕೈಯಲ್ಲಿ ಹಿಡಿದು ನೇಣುಗಂಬವನ್ನೇರಿದ ಕ್ರಾಂತಿವೀರರಿಗೆ ಧಾರ್ಮಿಕ ಪ್ರೇರಣೆ ಇತ್ತೋ ಅಥವಾ ರಾಜನೈತಿಕ ಪ್ರೇರಣೆ ಇತ್ತೋ? ಇವೆರಡು ಪ್ರೇರಣೆಗಳೂ ಬೇರೆಬೇರೆಯಾಗಿ ಇತ್ತೆಂದು ಗುರುತಿಸಲು ನಮಗೆ ಸಾಧ್ಯವೇ ಇಲ್ಲ. ನಮ್ಮ ರಾಜನೀತಿ ಕಲ್ಪನೆಯು ನಮ್ಮ ಧಾರ್ಮಿಕವೃತ್ತಿಯಿಂದಲೇ ಉದ್ಭವಿಸಿ ಬಂದಿತು. ಅದು ನಮ್ಮ ಧಾರ್ಮಿಕತ್ವದ ರಕ್ಷಣೆಯ ಒಂದು ಸಾಧನ ಮಾತ್ರ. ನಮ್ಮ ಜೀವನದ ಯಾವ ಕ್ಷೇತ್ರಕ್ಕೂ ಧರ್ಮದ ಪ್ರಭಾವ ತಟ್ಟದೆ ಇಲ್ಲ. 'ಧರ್ಮ' ಅಕ್ಷರಮಟ್ಟಿಗೆ ನಮ್ಮ ಜೀವನವನ್ನು ವ್ಯಾಪಿಸಿದೆ.

**ಧರ್ಮಪ್ರಾಣ ಭಾರತ**

ವರ್ಣಾಶ್ರಮವು ನಮ್ಮ ಸಾಮಾಜಿಕ ವ್ಯವಸ್ಥೆಯೇ ಆದರೂ ಅದು ಧರ್ಮದ ಉಡಿಗೆಯನ್ನೇ ತೊಟ್ಟಿದೆ. ವಿವಾಹವು ಮನುಷ್ಯನಿಗೆ ಶಾರೀರಿಕವಾಗಿ ಹಾಗೂ ಸಾಮಾಜಿಕವಾಗಿ ಒಂದು ಅವಶ್ಯಕತೆಯೇ ಆದರೂ ನಮಗೆ ಅದೊಂದು ಧರ್ಮಕಾರ್ಯ. ಸಂತಾನೋತ್ಪತ್ತಿ ಗೃಹಸ್ಥರಿಗೆ ಧರ್ಮಕಾರ್ಯವಾದರೆ ಮಕ್ಕಳಿಗೆ ಮಾತಾಪಿತರ ಸೇವೆಯು ಧರ್ಮಕಾರ್ಯವೇ. ಮರಣದ ನಂತರದ ಶ್ರಾದ್ಧ ಮುಂತಾದ ಕರ್ಮಗಳೂ ಧರ್ಮದ್ದೇ ಒಂದು ಕಾರ್ಯವಾದರೂ ಈ ಎಲ್ಲ ಕಾರ್ಯಗಳಲ್ಲಿ ಮೂಲ ಉದ್ದೇಶವಾಗಿ ಸಮಾಜರಚನೆ, ಸಮಾಜಪರಂಪರೆಯ ಸನಾತನತ್ವ ಮತ್ತು ರಾಷ್ಟ್ರತ್ವ ಇವುಗಳೇ ಅಡಗಿವೆ. ನಾವು ಪ್ರತಿನಿತ್ಯ ಹಿರಿಯರಿಗೆ, ವೃದ್ಧರಿಗೆ ನಮಸ್ಕರಿಸುವುದೂ ಧರ್ಮದ ಅಂಗ. ನಿತ್ಯಸ್ನಾನವಂತೂ ಧರ್ಮದ ಅಂಗವೆಂದು ಒಬ್ಬ ಹಳ್ಳಿಗನಿಗೂ ಗೊತ್ತು. ಅದಕ್ಕಾಗಿಯೇ ಕರ್ಮಕಾಂಡರತರು ಅನಾರೋಗ್ಯ ಸ್ಥಿತಿಯಲ್ಲೂ ಸ್ನಾನ ಮಾಡಿಯೇ ತೀರುತ್ತಾರೆ. ಸ್ನಾನದ ವಿನಾ ಅವರು ಬದುಕಿರಲಾರರು. ಸ್ನಾನವಿಲ್ಲದೆ ಭೋಜನ ಮಾಡುವುದು ಅಧರ್ಮ. ಕೊಳದೊಳಗೆ ಚಪ್ಪಲಿ ಒಯ್ಯುವುದು ಅಧರ್ಮ. ಅಡಿಗೆಯನ್ನು ಶುಚಿರ್ಭೂತರಾಗಿ ತಯಾರಿಸುವುದು

ಧರ್ಮ. ಮನೆಯೊಳಗೆ ತುಲಸಿ ನೆಡುವುದು ಧರ್ಮದ ಅಂಗವಾಗಿಯೇ ಹೊರತು ಅದು 'ಮಲೇರಿಯಾನಾಶಿ' ಎಂದಲ್ಲ. ಸ್ವಚ್ಛತೆ ಆರೋಗ್ಯನಿಯಮಗಳೂ ಧರ್ಮದ ಭಾಗವೇ. ರೈತನು ಬೀಜ ಬಿತ್ತುವುದರ ಹಿಂದೆ ಸಮಾಜ ಕಲ್ಯಾಣದ ಧರ್ಮ ಅಡಗಿದೆ. ವಿದ್ಯಾರ್ಥಿಗಳು ಗುರುವನ್ನು ಸೇವಿಸುವುದು, ಗುರುವು ವಿದ್ಯಾರ್ಥಿಗಳನ್ನು ತನ್ನ ಮಕ್ಕಳಂತೆಯೇ ಕಾಣುವುದು ಧರ್ಮದ ನಿಯಮಗಳನುಸಾರವಾಗಿಯೇ ಹೊರತು, ಶಾಲೆಯ ವಿಧಿ ನಿಯಮಗಳನ್ನು ಪಾಲಿಸುವ ಭಾವನೆಯಿಂದಲ್ಲ. ನಮ್ಮ ಜೀವನದ ಯಾವ ರಂಗ, ಯಾವ ಪ್ರಸಂಗ ನೋಡಿದರೂ ನಮ್ಮ ಧಾರ್ಮಿಕ ವೃತ್ತಿಯೇ ಎಲ್ಲೆಲ್ಲೂ ಒಡೆದು ಕಾಣುತ್ತದೆ. ಜೀವನದ ಪ್ರತಿಯೊಂದು ಕೆಲಸವನ್ನೂ ನಾವು ಧರ್ಮದ ರಂಗಿನಿಂದ ಸಿಂಗರಿಸಿದ್ದೇವೆ. ಧರ್ಮದ ಪ್ರೇರಣೆಯ ಬುನಾದಿಯ ಮೇಲೆಯೇ ನಮ್ಮ ಜೀವನಸೌಧವನ್ನು ಕಟ್ಟಿಕೊಂಡಿದ್ದೇವೆ.

ಭಾರತದ ರಾಷ್ಟ್ರಜೀವನವು ಬೇರೆಬೇರೆ ಯುಗಗಳಲ್ಲಿ ಬೇರೆಬೇರೆ ಸ್ವರೂಪಗಳಲ್ಲಿ ವ್ಯಕ್ತವಾಗಿದ್ದರೂ ಅದರ ಬುಡದಲ್ಲಿ ಸದಾ ಧರ್ಮಭಾವನೆಯೇ ಹರಿದುಬಂದಿದೆ. ಆದುದರಿಂದಲೇ ವಿದ್ವಾಂಸರು ಭಾರತವನ್ನು 'ಧರ್ಮಪ್ರಾಣದೇಶ' ಎಂದು ಕರೆದಿದ್ದಾರೆ. ಇಂದು ಜಡವಾಗಿ ಬಿದ್ದಿರುವ ನಮ್ಮ ಆತ್ಮದ ಈ ಸುಪ್ತ ಪ್ರೇರಣೆಯನ್ನು ಎಚ್ಚರಿಸಿದಾಗಲೇ ರಾಷ್ಟ್ರಜೀವನದಲ್ಲಿ ಕಂಡುಬರುವ ವಿಕೃತಿಗಳನ್ನು ದೂರಗೊಳಿಸಿ ರಾಷ್ಟ್ರವನ್ನು ಇಂದಿನ ಅನಿಶ್ಚಿತ ಅರಾಜಕ ಸ್ಥಿತಿಯಿಂದ ಪಾರುಮಾಡಬಲ್ಲೆವು.



## ೫. ಸ್ವರಾಷ್ಟ್ರ ದರ್ಶನ

ನಮ್ಮ ಹಿಂದಿನ ಇತಿಹಾಸದಲ್ಲಿ 'ರಾಷ್ಟ್ರ' ಶಬ್ದದ ಪ್ರಯೋಗ ಹಲವು ಕಡೆ ಆಗಿದೆ. 'ರಾಷ್ಟ್ರ'ವು ವೈಭವಯುತವಾಗಲಿ, ವಿಜಯಶಾಲಿಯಾಗಲಿ ಎಂದೂ, ರಾಷ್ಟ್ರ ಸಮೃದ್ಧಿಯಿಂದ ಕೂಡಿರಲಿ ಎಂದೂ, ವೇದಗಳಲ್ಲಿ ಕೆಲವು ಕಡೆ ಉಲ್ಲೇಖ ಬಂದಿದೆ. ಸ್ವಸ್ತಿವಾಚನದಲ್ಲೂ 'ರಾಷ್ಟ್ರ' ಶಬ್ದ ಇದೆ. ಮುಂಚಿನಿಂದ ನಾವು 'ರಾಷ್ಟ್ರ' ಆಗಿದ್ದೆವು ಎನ್ನಲು ಇಂಥ ಅಸಂಖ್ಯ ಸಾಕ್ಷಿಗಳಿವೆ.

**ಪಶ್ಚಿಮದ ಕುರುಡುಭಕ್ತರು**

ಕೆಲವರು 'ಭಾರತದಲ್ಲಿ ಮುಂಚೆ ರಾಷ್ಟ್ರೀಯತೆ ಎಂಬುದೇ ಇರಲಿಲ್ಲ. ಈಗ ನಾವು ಅದನ್ನು ಹೊಸದಾಗಿ ನಿರ್ಮಿಸಬೇಕಾಗಿದೆ' ಎಂದು ಹೇಳುವುದುಂಟು. ಈ ಅಭಿಪ್ರಾಯಕ್ಕೆ ಅವರು ಬರಲು ಕಾರಣ ಪಶ್ಚಿಮದೇಶದ ಚರಿತ್ರೆ ರಾಷ್ಟ್ರದ ಇಂದಿನ ವ್ಯಾಖ್ಯೆಯನುಸಾರ ಆ ದೇಶಗಳಲ್ಲಿ ೫೦೦–೧೦೦೦ ವರ್ಷಗಳ ಹಿಂದೆ ರಾಷ್ಟ್ರವೆಂಬುದೇ ಇರಲಿಲ್ಲ. ಅವರು ಕೇವಲ ಈಸಾಯಿ, ಮುಸ್ಲಿಂ, ಯಹೂದಿ ಮುಂತಾದ ಜಾತಿಗಳಾಗಿ ಜೀವನ ನಡೆಸುತ್ತಿದ್ದರೇ ಹೊರತು 'ರಾಷ್ಟ್ರ'ಗಳಾಗಿ ಅಲ್ಲ. ಒಂದೇ ಅಪವಾದವೆಂದರೆ ಪ್ರಾಚೀನ ಗ್ರೀಕ್ ರಾಷ್ಟ್ರ. ಅದು ಧೂಳೀಪಟವಾದ ಮೇಲೆ ಅಲ್ಲಿ ಕೇವಲ ಜಾತಿಗಳಿದ್ದವೇ ಹೊರತು 'ರಾಷ್ಟ್ರ' ಇರಲಿಲ್ಲ.

ಮುಸಲ್ಮಾನ್–ಈಸಾಯಿಗಳ ನಡುವೆ 'ಕ್ರೂಸೇಡ್ಸ್' ಎಂಬ ಮತೀಯ ಯುದ್ಧ ನೂರಾರು ವರ್ಷಕಾಲ ಇಡೀ ಯೂರೋಪಿನಲ್ಲಿ ನಡೆಯಿತು. ಒಂದೇ ದೇಶದ ಜನ ವಿರುದ್ಧ ಪಕ್ಷಗಳಲ್ಲಿ ನಿಂತು ಹೋರಾಡುತ್ತಿದ್ದರು. ಅನಂತರ ಈಸಾಯಿಗಳಲ್ಲಿ ಸುಧಾರಣಾವಾದಿಯಾದ ಪ್ರಾಟೆಸ್ಟೆಂಟ್ ಪಂಥ ಹುಟ್ಟಿಕೊಂಡಿತು. ತರುವಾಯ ಕೆಥೋಲಿಕರಿಗೂ ಪ್ರಾಟೆಸ್ಟಂಟರಿಗೂ ಹೋರಾಟ ಆರಂಭವಾಯಿತು. ತತ್ಪರಿಣಾಮವಾಗಿ ಯೂರೋಪಿನ ಜನಜೀವನದ ಸರ್ವ ರಂಗಗಳ ಕೇಂದ್ರವಾಗಿದ್ದ ಪೋಪನ ವಿರುದ್ಧ ಇಡೀ ಯೂರೋಪ್ ಸಿಡಿದೆದ್ದಿತು. ಜರ್ಮನಿಯಲ್ಲಿ ಮಾರ್ಟಿನ್ ಲೂಥರ್, ಪ್ರಾಟೆಸ್ಟೆಂಟರ ಮುಖ್ಯಸ್ಥನಾಗಿದ್ದ. ಈ ಕಲಹದ ಫಲವಾಗಿ ಒಂದೊಂದು ಗುಂಪಿನ ಜನ ಒಂದೊಂದು ಕಡೆ ರಾಜ್ಯ ಸ್ಥಾಪಿಸಿಕೊಂಡರು. ಮ್ಯಾಜಿನಿ, ಗ್ಯಾರಿಬಾಲ್ಡಿ, ಇಟಲಿಯಲ್ಲಿ ರಾಜ್ಯ ಕಟ್ಟಿದರು. ಇಂಗ್ಲೆಂಡ್ ಫ್ರಾನ್ಸ್ ಸಹ ಪೋಪನ ಹತೋಟಿಯಿಂದ

ದೂರ ಸರಿದು ವಿವಿಧ ಗುಂಪಿನ ಜನ ಸೇರಿ ಅಲ್ಲಲ್ಲಿ ರಾಜ್ಯ ಕಟ್ಟಿಕೊಂಡರು. ಅದನ್ನೇ ಮುಂದೆ ರಾಷ್ಟ್ರವೆಂದು ಕರೆದರು. ಮುಸಲ್ಮಾನರಲ್ಲಿ ಖಲೀಫನೇ ಅವರ ಧರ್ಮಗುರು ಹಾಗೂ ರಾಜಕೀಯ ಮುಖ್ಯಸ್ಥನಾಗಿದ್ದನು. ಉಳಿದ ಸಣ್ಣಪುಟ್ಟ ರಾಜ್ಯಗಳು ಖಲೀಫನ ಆಣತಿಯಂತೆ ರಾಜ್ಯಭಾರ ನಡೆಸುತ್ತಿದ್ದವು. ಈ ರೀತಿ ಅಲ್ಲಲ್ಲಿ ರಾಜ್ಯಗಳಿದ್ದವೇ ಹೊರತು ರಾಷ್ಟ್ರೀಯತೆ ಅವರಲ್ಲಿ ಬಹುದಿನಗಳವರೆಗೆ ಬೆಳೆದೇ ಇರಲಿಲ್ಲ. ಈ ಚರಿತ್ರೆಯನ್ನು ಓದಿದವರೇ 'ನಮ್ಮ ದೇಶದಲ್ಲೂ ಮುಂಚೆ ರಾಷ್ಟ್ರೀಯತೆ ಇರಲಿಲ್ಲ; ಬ್ರಿಟಿಷರ ಆಗಮನದ ತರುವಾಯವೇ ಆ ಭಾವನೆ ಜನ್ಮ ತಾಳಿತು; ಹಾಗೂ ಪಶ್ಚಿಮ ದೇಶಗಳವರಂತೆಯೇ ನಾವು ಹೊಸದಾಗಿ ರಾಷ್ಟ್ರವನ್ನು ಕಟ್ಟಬೇಕಾಗಿದೆ' ಎಂದು ಹೇಳತೊಡಗಿದರು; ಹಾಗೂ ನಮ್ಮ ರಾಷ್ಟ್ರದ ಪ್ರಾಚೀನತೆಯನ್ನು ಮರೆತರು.

### ಅಲ್ಲಿ ರಾಜನೈತಿಕ, ಇಲ್ಲಿ ಸಾಂಸ್ಕೃತಿಕ

ಅದಲ್ಲದೆ, ನಮ್ಮ ರಾಷ್ಟ್ರೀಯತೆಗೂ ಪಶ್ಚಿಮದೇಶಗಳ ರಾಷ್ಟ್ರೀಯತೆಗೂ ಮೂಲ ಕಲ್ಪನೆಯಲ್ಲೇ ವ್ಯತ್ಯಾಸವಿದೆ. ರಾಷ್ಟ್ರದ ಕಲ್ಪನೆಯ ಆಧಾರಗಳು ಮೂರು: ರಾಜನೈತಿಕ, ಸಾಂಸ್ಕೃತಿಕ ಮತ್ತು ಪ್ರಾದೇಶಿಕ. ಪಾಶ್ಚಿಮಾತ್ಯರ ರಾಷ್ಟ್ರೀಯತೆ ರಾಜನೈತಿಕ ಆಧಾರದ್ದು. ಅದರಲ್ಲಿ ರಾಜಕೀಯಕ್ಕೆ ಪ್ರಮುಖ ಸ್ಥಾನ; ಭೂಮಿ, ಸಂಸ್ಕೃತಿಗಳು ಕೇವಲ ಪೋಷಕ. ನಮ್ಮ ರಾಷ್ಟ್ರೀಯತೆಯಾದರೋ ಸಂಸ್ಕೃತಿಯನ್ನು ಆಧರಿಸಿದ್ದು; ಇಲ್ಲಿ ಸಂಸ್ಕೃತಿಯೇ ಪ್ರಧಾನ. ಭೂಮಿ ಮತ್ತು ರಾಜಕೀಯ ಕೇವಲ ಪೋಷಕ. ಒಂದು ಪ್ರದೇಶದಲ್ಲಿ ವಾಸಿಸುವ ಜನರೆಲ್ಲರೂ, ಅದೊಂದೇ ಕಾರಣದಿಂದ ರಾಷ್ಟ್ರೀಯರು ಎಂದು ಭಾವಿಸುವುದೇ ಪ್ರಾದೇಶಿಕ ರಾಷ್ಟ್ರೀಯತೆ. ಅದರಲ್ಲಿ ಭೂಮಿಗೇ ಪ್ರಾಮುಖ್ಯ.

ನಮ್ಮ ರಾಷ್ಟ್ರೀಯತೆಯು ಇದುವರೆಗೆ ಉಳಿದುಬಂದಿರುವುದೇ ನಮ್ಮ ಸಂಸ್ಕೃತಿಯ ಆಧಾರದ ಮೇಲೆ. ನಮ್ಮ ಇತಿಹಾಸವು ಸಾರಿ ಹೇಳುವಂತೆ ನಮ್ಮ ದೇಶದ ರಾಜಕೀಯ ಜೀವನದಲ್ಲಿ ಎಷ್ಟೊ ಬಾರಿ ಏರುಪೇರುಗಳು ಸಂಭವಿಸಿವೆ. ನಮ್ಮ ದೇಶವು ಸ್ವತಂತ್ರವಾಗಿದ್ದು ಸುಖಸಮೃದ್ಧಿಗಳು ತುಂಬಿ ತುಳುಕಾಡುತ್ತಿದ್ದಾಗ ಮಾತ್ರವಲ್ಲ, ದೇಶವು ಪರಕೀಯರ ವಶವಾಗಿ ದುಃಖ ದಾರಿದ್ರ್ಯಗಳು ಮುತ್ತಿ ಬಂದಾಗಲೂ ನಮ್ಮ ರಾಷ್ಟ್ರೀಯತೆ ಅಳಿಯಲಿಲ್ಲ. ನಮ್ಮ ರಾಷ್ಟ್ರಜೀವನಕ್ಕೆ ಸಂಸ್ಕೃತಿಯ ಆಧಾರವಿದ್ದುದೇ ಇದಕ್ಕೆ ಕಾರಣ. ಪಾಶ್ಚಾತ್ಯ ದೇಶಗಳಲ್ಲಿ ರಾಜಸತ್ತೆಯೇ ಅದರ ಪ್ರಮುಖ ಆಧಾರವಾಗಿದ್ದುದರಿಂದ ಅಲ್ಲಿ ಆಗಿಂದಾಗ್ಗೆ ರಾಷ್ಟ್ರೀಯತೆ ಬುಡ ಮೇಲಾಯಿತು. ರಾಜಸತ್ತೆಗೆ ಧಕ್ಕೆ ತಗಲಿ, ಅದು ಕುಸಿದೊಡನೆ ಅದರೊಟ್ಟಿಗೆ ಅಲ್ಲಿನ ರಾಷ್ಟ್ರೀಯತೆಯೂ ಧೂಳೀಪಟವಾಯಿತು. ನಮ್ಮ ದೇಶದಲ್ಲಿ ಮಾತ್ರ ರಾಜಕೀಯ ದಾಸ್ಯಕ್ಕೆ ಸಿಕ್ಕಾಗಲೂ ನಮ್ಮ ರಾಷ್ಟ್ರೀಯತೆ ಉಳಿದುಕೊಂಡದ್ದಕ್ಕೆ ರಾಜಕೀಯಕ್ಕೆ



ನಾವು ಕೊಟ್ಟ ಗೌಣಸ್ಥಾನವೇ ಕಾರಣ. ಇಡೀ ದೇಶದಲ್ಲಿ ಒಂದು ರಾಜ್ಯವಿದ್ದಿರಲಿ ಅಥವಾ ಅನೇಕ ರಾಜ್ಯಗಳಿದ್ದಿರಲಿ, ರಾಷ್ಟ್ರೀಯತೆ ಮಾತ್ರ ಒಂದೇ ಆಗಿತ್ತು.

### ಏಕತೆಯ ಭದ್ರ ಬುನಾದಿ

ಪೃಥು, ರಘು, ಮಾಂಧಾತ ಮುಂತಾದ ಶಕ್ತಿಶಾಲಿ ಚಕ್ರವರ್ತಿಗಳ ಕಾಲದಲ್ಲಿ ಇಡೀ ಪೃಥ್ವಿ ನಮ್ಮ ವಶದಲ್ಲಿ ಇದ್ದಾಗಲೂ ಹಾಗೂ ಚಂದ್ರಗುಪ್ತನ ಪ್ರಚಂಡ ರಾಜ್ಯ ವಿಸ್ತಾರದ ಸಮಯದಲ್ಲೂ ಸಂಸ್ಕೃತಿಯೇ ನಮ್ಮ ರಾಷ್ಟ್ರೀಯತೆಯ ಜೀವಾಳವಾಗಿತ್ತು. (ವಾಸ್ತವವಾಗಿ ಆಗ ನಮ್ಮ ರಾಜ್ಯ ಇಂಗ್ಲಿಷರ ಇಲ್ಲಿನ ಸಾಮ್ರಾಜ್ಯಕ್ಕಿಂತ ವಿಸ್ತಾರವಾಗಿತ್ತು. ಇಂಗ್ಲಿಷರು ನಮ್ಮ ದೇಶದ ಭೂಭಾಗವನ್ನು ಒಟ್ಟುಗೂಡಿಸಿ ಆಳಿದುದರಿಂದಲೇ ಮೊಟ್ಟಮೊದಲ ಬಾರಿಗೆ ನಮ್ಮ ದೇಶ ರಾಜಕೀಯವಾಗಿ ಒಂದಾಯಿತು ಎಂಬ ಕೆಲವರ ವಾದ ಅದೆಷ್ಟು ಪೊಳ್ಳು!) ಬಹು ಪೂರ್ವಕಾಲದಿಂದಲೂ ಇಲ್ಲಿನ ರಾಜರು ಮತ್ತು ಪ್ರಜೆಗಳ ಮನಸ್ಸಿನಲ್ಲಿ ಇಡೀ ಭಾರತ ಒಂದು ದೇಶ ಎಂಬ ನಂಬಿಕೆ ಮೂಡಿದ್ದುದಕ್ಕೆ ನಮ್ಮಲ್ಲಿ ಸಾಂಸ್ಕೃತಿಕ ಏಕಾತ್ಮತೆಯೇ ಕಾರಣ. ಎಲ್ಲರೂ ತಾವು ಪುಣ್ಯಕಾರ್ಯ ಮಾಡುವಾಗ 'ಜಂಬುದ್ವೀಪೇ, ಭರತಖಂಡೇ...' ಎಂದೇ ಸಂಕಲ್ಪ ಮಾಡುತ್ತಿದ್ದರು. ಭಾರತ ನಮ್ಮ ಮಾತೆ ಎಂಬ ದೃಷ್ಟಿಯೇ ಅವರೆಲ್ಲರಲ್ಲೂ ಇತ್ತು.

**ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್ ।**
**ವರ್ಷಂ ತದ್ಭಾರತಂ ನಾಮ ಭಾರತೀ ಯತ್ರ ಸಂತತಿಃ ॥**

ಎಂಬ ಶ್ಲೋಕ ತಿಳಿಸುವಂತೆ ಪೂರ್ವಕಾಲದಿಂದಲೂ ನಮ್ಮ ದೇಶದ ಸಮಗ್ರ ಚಿತ್ರ ನಮ್ಮ ಕಣ್ಣಿಗೆ ಕಟ್ಟಿತ್ತು. ಕಳೆದ ಒಂದು ಸಾವಿರ ವರ್ಷಗಳಲ್ಲಿ ಈ ಭಾವನೆ ಮಸಕಾಗತೊಡಗಿತು ಎಂದೇ ಶತ್ರುಗಳು ಇಲ್ಲಿ ರಾಜ್ಯ ಸ್ಥಾಪಿಸಲು ಸಾಧ್ಯವಾಯಿತು.

ಹೀಗೆ ನಮ್ಮಲ್ಲಿನ ಎಲ್ಲ ಧಾರ್ಮಿಕ, ಸಾಮಾಜಿಕ ಕಲ್ಪನೆಗಳಲ್ಲೂ ಈ ಸಾಂಸ್ಕೃತಿಕ ಏಕತೆ ಪ್ರಕಟಗೊಂಡಿದೆ. ನಮ್ಮ ರಾಷ್ಟ್ರೀಯತೆಯ ಸಾಂಸ್ಕೃತಿಕ ನೆಲಗಟ್ಟು ಮನಸ್ಸಿಗೆ ನಾಟದೆ ಹೋಗಿದ್ದಲ್ಲಿ ದೇಶದ ಏಕತೆಯ ಸಂಕೇತವಾಗಿ ನಿರ್ಮಿತವಾದ ಚತುರ್ಧಾಮಗಳು ದೇಶದ ನಾಲ್ಕು ಮೂಲೆಗಳಲ್ಲಿರದೆ ದೇಶದ ಹೊರಗಡೆ ಸಹ ಇರಬಹುದಿತ್ತು. ಭಾರತದ ಉದ್ದಗಲಕ್ಕೂ ೫೨ ಶಕ್ತಿ ಪೀಠಗಳು ಹರಡಿರುವ ಕಾರಣವೂ ಇದೆ. ಇದೇ ರೀತಿ ೧೫೬ ವೈಷ್ಣವ ತೀರ್ಥಗಳೂ ೧೨ ಜ್ಯೋತಿರ್ಲಿಂಗಗಳೂ ಭಾರತಾದ್ಯಂತ ಹರಡಿವೆ. ೨೨ ಗಣಪತಿಯ ಪೀಠಗಳೂ ೧೨ ಸೂರ್ಯದೇವಾಲಯಗಳೂ ಜೈನ, ಬೌದ್ಧರ ತೀರ್ಥಸ್ಥಳಗಳೂ ದೇಶದ ಎಲ್ಲೆಡೆಗಳಲ್ಲಿಯೂ ಸ್ಥಾಪಿಸಲ್ಪಟ್ಟಿವೆ. ರಾಮಾಯಣ, ಮಹಾಭಾರತಗಳನ್ನು ಇಡೀ ದೇಶದ ಜನ ಸಮಾನವಾಗಿ, ಗೌರವಾದರಗಳಿಂದ ಕಾಣುತ್ತಾರೆ. ಶ್ರೀರಾಮ, ಶ್ರೀಕೃಷ್ಣರ

ಚರಿತ್ರೆಯು ಆಸೇತುಹಿಮಾಚಲ ವಾಸಿಸುವ ಒಬ್ಬೊಬ್ಬ ವ್ಯಕ್ತಿಯ ಮನಸ್ಸಿನಲ್ಲೂ ಮನೆಮಾಡಿಕೊಂಡಿದೆ. ನಮ್ಮೆಲ್ಲ ಪುರಾಣಗಳೂ ಭಾರತದ ಮಹಿಮೆಯನ್ನೇ ಸಾರುತ್ತವೆ. 'ಭಾರತವೆಂದರೆ ಕರ್ಮ ಭೂಮಿ; ಮೋಕ್ಷಪ್ರಾಪ್ತಿ ಇಲ್ಲಿ ಮಾತ್ರ ಸಾಧ್ಯ. ಅದಕ್ಕಾಗಿ ಸ್ವರ್ಗದ ದೇವತೆಗಳೂ ಇಲ್ಲಿಯೇ ಜನ್ಮತಾಳಲು ಹಂಬಲಿಸುವರು' ಎನ್ನುವ ಪ್ರಬಲ ನಂಬಿಕೆಯಿದೆ. ಇಲ್ಲಿನ ನೀರಿನ ಹನಿಹನಿಯೂ, ಮಣ್ಣಿನ ಕಣಕಣವೂ ನಮಗೆ ಪವಿತ್ರವೇ!

**ರಾಷ್ಟ್ರೀಯತ್ವದ ತಿರುಳು–'ಹಿಂದು'**

ಸಾಂಸ್ಕೃತಿಕ ತಳಪಾಯವುಳ್ಳ ಈ ರಾಷ್ಟ್ರೀಯತೆಯನ್ನು 'ಹಿಂದು' ಎಂಬ ಹೆಸರಿಂದ ಕರೆಯುವುದೇ ಸೂಕ್ತ. ಹಿಂದಿನಿಂದಲೂ ಇದೇ ಹೆಸರು ಅದಕ್ಕಿದೆ. 'ಹಿಂದು' ಎಂಬ ಈ ಹೆಸರನ್ನು ಪಾರಸಿಕರು ಕೊಟ್ಟರು ಎಂದು ಕೆಲವರ ಅಭಿಪ್ರಾಯ. ಹೆಸರು ಹೇಗೆ ಬಂತು? ಹೆಸರನ್ನು ಯಾರು ಕೊಟ್ಟರು? ಎಂಬುದು ಅಷ್ಟು ಮುಖ್ಯವಲ್ಲ. ಮುಖ್ಯವಾದ ಸಂಗತಿ ಎಂದರೆ 'ಹಿಂದು' ಎನ್ನುವ ಹೆಸರು ಈ ದೇಶದ ಜೊತೆಜೊತೆಗೇ ಬೆಳೆದುಕೊಂಡು ಬಂದಿದೆ. (ಒಂದು ದೇಶದ ರಾಷ್ಟ್ರೀಯತೆಗೂ ಆ ದೇಶದ ಹೆಸರೇ ಕೂಡಿಕೊಳ್ಳುತ್ತದೆ. ಕೆಲವೊಮ್ಮೆ ವ್ಯಕ್ತಿಗೆ ಅವನ ಊರ ಹೆಸರೇ ಇಡುವಂತೆ ಇದು.) ಸಿಂಧೂ ನದಿಯ ಈ ಕಡೆ ವಾಸಿಸುವ ಜನರೇ ಹಿಂದುಗಳು ಎಂಬ ಮಾತೂ ಸರ್ವವಿದಿತ. ಪ್ರಾಚೀನವಾದ ನಮ್ಮ ಈ ಹೆಸರು ಸಾವಿರಾರು ವರ್ಷದ ನಮ್ಮ ಪೂರ್ವಜರೊಡನೆ ಮತ್ತು ಪೂರ್ವಕಾಲದೊಡನೆ ನಮ್ಮ ಸಂಬಂಧ ಕಲ್ಪಿಸುತ್ತದೆ. ವ್ಯಾಸರನ್ನೂ ಸಹ ಹಿಂದು ಎನ್ನಲಾಗಿದೆ. ಇದಕ್ಕೆ ಇನ್ನೊಂದು ಹೆಸರೆಂದರೆ ಭಾರತೀಯ ಅಥವಾ ಭರತವಂಶೀಯ.

'ಹಿಂದು' ಎನ್ನುವುದು ನಮ್ಮ ಸಮುಚ್ಚಯವಾಚಕ ಹೆಸರು. ಈ ಹೆಸರಿನಲ್ಲಿಯೇ ನಮ್ಮ ರಾಷ್ಟ್ರೀಯತೆಯ ಎಲ್ಲ ಭಾವನೆಗಳೂ ಅಡಗಿವೆ. ಕೇವಲ ಇದು ಮಣ್ಣು, ಕಲ್ಲು ಎಂದು ಭಾವಿಸುವವರಿಗೆ ಮಾತ್ರ, ಭರತ ಭೂಮಿ ಬೇಸಾಯ ಯೋಗ್ಯವೇ ಅಲ್ಲವೇ, ಎನ್ನುವಷ್ಟೇ ಪ್ರಶ್ನೆ ಏಳುತ್ತದೆ. ಅಂಥವರಿಗೆ ಇದು ಕೇವಲ ಭೋಗ ಭೂಮಿಯೆನ್ನಿಸುತ್ತದೆ. ಆದರೆ 'ಹಿಂದು' ಎಂಬ ಭಾವದಿಂದ ಪ್ರೇರಿತ ರಾದವರಿಗೆ ಈ ಭೂಮಿ ಬದರೀನಾಥ, ಕೇದಾರ, ಗಂಗಾ ಮುಂತಾದ ತೀರ್ಥಸ್ಥಾನ ಗಳನ್ನೊಳಗೊಂಡ ಪುಣ್ಯಭೂಮಿ ಆಗುತ್ತದೆ. ಹಿಂದುವಲ್ಲದವನಿಗೆ ಅಥವಾ ಹಿಂದುತ್ವದ ಭಾವನೆ ಇಲ್ಲದವನಿಗೆ ಇದು ಕೇವಲ ಮಣ್ಣು ಕಲ್ಲು; ನಿರ್ಜೀವ ನೆಲ. ಕೇವಲ ಮಣ್ಣು ಕಲ್ಲಿನ ಬಗ್ಗೆ ಭಕ್ತಿ ಉದಯಿಸಲು ಹೇಗೆ ತಾನೆ ಸಾಧ್ಯ?

ಸಹಸ್ರಾರು ವರ್ಷಗಳ ಈ ಪ್ರಾಚೀನ ಭಾವನೆ ಮನಸ್ಸಿನಲ್ಲಿ ಸ್ಫುರಿಸಿದಾಗಲೇ



ಮಾತೃಭೂಮಿಯ ಬಗೆಗೆ ಭಕ್ತಿ ಹುಟ್ಟಬಲ್ಲದು. ಶ್ರೀಕೃಷ್ಣನ ಲೀಲಾಸ್ಥಳ ಎಂಬ ಕಾರಣದಿಂದ ಯಮುನೆಯೂ, ಭಗೀರಥನ ತಪಸ್ಸಿನಿಂದ ಧರೆಗಿಳಿದು ಬಂದ ಕಾರಣದಿಂದ ಗಂಗೆಯೂ ಭಕ್ತಿಗೆ ಪಾತ್ರರು. ಇದರಿಂದಲೇ ಸತ್ತವರ ಅಸ್ಥಿಯನ್ನು ಆ ನದಿಗಳಲ್ಲಿ ವಿಸರ್ಜಿಸುವ ರೂಢಿಯೂ ಬೆಳೆದುಬಂದಿದೆ. ಇಲ್ಲಿನ ಜನಜೀವನದಿಂದ 'ಹಿಂದು'ವನ್ನು ಹೊರಹಾಕಿದಲ್ಲಿ ಹಿಮಾಲಯ, ಗಂಗಾ, ಕೇದಾರ, ಬದರಿ ಮುಂತಾದ ಸ್ಥಾನಗಳೇನೋ ಇಲ್ಲಿರಬಹುದು. ಆದರೆ, ಅವುಗಳ ಪಾವಿತ್ರ್ಯವಂತೂ ಉಳಿಯದು. ಚಿತ್ತೋಡದ ಭೂಮಿಯಲ್ಲಿ ೧೪,೦೦೦ ಭಗಿನಿಯರು ತಮ್ಮ ಮಾನರಕ್ಷಣೆಗಾಗಿ ಪ್ರವೇಶಿಸಿದ 'ಜೌಹರ್' ಜ್ವಾಲೆಯಿಂದ ಉಕ್ಕಿದ ಸ್ಫೂರ್ತಿ ಆರಿಹೋಗಿ ಅದರ ಬೂದಿಯನ್ನು ಹಣೆಗೆ ಹಚ್ಚಿಕೊಂಡು ಧನ್ಯತೆ ಹೊಂದುವ ಭಾವನೆ ಮಾಯವಾಗುತ್ತದೆ. ಈ ಭೂಮಿಯ ಹೆಸರಿಗೆ ಮತ್ತಷ್ಟು ಶೋಭೆ ಕೊಡುವ ಹೆಸರುಗಳಾದ ಮಾತೃಭೂಮಿ, ಕರ್ಮಭೂಮಿ ಮುಂತಾದವೂ ಅರ್ಥಹೀನವಾಗುತ್ತವೆ. ಇಲ್ಲಿ ಹಿಂದುವು ಜೀವಿಸಿರುವವರೆಗೆ ಮಾತ್ರ ಇದು ಭಾರತ. ಇಲ್ಲಿ ಬೀಜ ಬಿತ್ತಬಹುದು, ಬೆಳೆ ಬೆಳೆಯಬಹುದು, ಸುಖಸಮೃದ್ಧಿ ಅನುಭವಿಸಬಹುದು. ಆದರೆ ಇದರ ಪಾವಿತ್ರ್ಯ, ಮಾತೃತ್ವ ಮಾತ್ರ ಉಳಿಯದು.

**ಪಂಥವಲ್ಲ, ರಾಷ್ಟ್ರ**

ಹೀಗೆ ಹೇಳಿದಾಗ, ಕೆಲವರು 'ಹಿಂದು' ಶಬ್ದದ ವ್ಯಾಖ್ಯೆಯೇನು? ಎಂದು ಪ್ರಶ್ನಿಸುತ್ತಾರೆ. ಮುಸಲ್ಮಾನ ಮತ್ತು ಈಸಾಯಿಗಳಿಗೆ ಒಬ್ಬೊಬ್ಬ ಮತಸ್ಥಾಪಕನೂ, ಒಂದೊಂದು ಮತಗ್ರಂಥವೂ, ಒಂದು ಪೂಜಾಪದ್ಧತಿಯೂ ಇರುವಂತೆ ಹಿಂದು ಧರ್ಮಕ್ಕೆ ಒಬ್ಬ ಸಂಸ್ಥಾಪಕನಾಗಲೀ, ಒಂದು ಧರ್ಮ ಗ್ರಂಥವಾಗಲೀ, ಒಂದೇ ಪೂಜಾಪದ್ಧತಿಯಾಗಲೀ ಇಲ್ಲ. ಲೆಕ್ಕವಿಲ್ಲದಷ್ಟು ಪೂಜಾಪದ್ಧತಿ ಹಾಗೂ ಗ್ರಂಥಗಳು; ಲೆಕ್ಕವಿಲ್ಲದಷ್ಟು ಮಹಾಪುರುಷರು; ಜೊತೆಗೆ ಅನೇಕ ಅವತಾರಗಳು. ಕಡೆಗೆ ಹೆಸರು ಗೊತ್ತಿಲ್ಲದ ಅನೇಕ ಮಹಾತ್ಮರುಗಳು! ಇದರಿಂದಾಗಿ 'ಹಿಂದು' ಶಬ್ದವನ್ನು ವ್ಯಾಖ್ಯೆ ಮಾಡುವುದು ಅಸಾಧ್ಯ ಕೆಲಸ ಎಂದು ಅವರು ಶಂಕೆ ಎತ್ತುತ್ತಾರೆ. ಮೇಲ್ಕಂಡ ಎಲ್ಲ ಸಂಗತಿಗಳೂ ನಿಜವೇ. ಉಪಾಸನಾ ಪದ್ಧತಿಯ ಆಧಾರಗಳಿಂದ ಹಿಂದು ಶಬ್ದದ ವ್ಯಾಖ್ಯೆ ಮಾಡುವುದು ಅಸಾಧ್ಯವೇ ಸರಿ. ಆದುದರಿಂದ ರಾಷ್ಟ್ರದ ಆಧಾರದಿಂದಲೇ ಅದನ್ನು ಎದುರಿಸಬೇಕಾಗುತ್ತದೆ. ಹಿಂದುಸ್ಥಾನವನ್ನು ಮಾತೃಭೂಮಿ, ಪುಣ್ಯಭೂಮಿ ಎಂದೂ ಅದರ ಸಂಸ್ಕೃತಿ ಇತಿಹಾಸಗಳೇ ತನ್ನ ಸಂಸ್ಕೃತಿ ಇತಿಹಾಸಗಳೆಂದೂ ತಿಳಿದು, ಅದರ ಅಪಜಯದಿಂದ ಅವಮಾನವನ್ನೂ, ಅದರ ವಿಜಯಪ್ರಾಪ್ತಿಯಿಂದ ಹೆಮ್ಮೆಯನ್ನೂ ಅನುಭವಿಸುವವನೇ 'ಹಿಂದು' ಆಗಬಲ್ಲನು. ಹಿಂದುವಿನ ಉಪಾಸನಾ ಪದ್ಧತಿಗಳಲ್ಲೂ ನೂರಕ್ಕೆ ೯೦ ಭಾಗ ರಾಷ್ಟ್ರೀಯತೆಯೂ, ಉಳಿದ ಕೇವಲ ೧೦ ಭಾಗ ಮೋಕ್ಷಪ್ರಾಪ್ತಿಯೂ ವರ್ಣಿತವಾಗಿದೆ.

ಹಿಂದುಸ್ಥಾನದೊಂದಿಗೆ ಹಿಂದುವಿನ ಜೀವನ ಒಂದಾಗಿ ಬೆಸೆದುಹೋಗಿದೆ. ಹಿಂದುಸ್ಥಾನವೆಂಬ ಭೂಮಿಯೇ ಒಂದು ವೇಳೆ ಕಣ್ಮರೆಯಾಗಿ ಇಲ್ಲಿ ವಾಸಿಸುತ್ತಿರುವ ಎಲ್ಲಾ ಹಿಂದೂಗಳೂ (ಒಬ್ಬನೂ ಉಳಿಯದಂತೆ) ಈ ದೇಶವನ್ನು ಬಿಟ್ಟು ಆಸ್ಟ್ರೇಲಿಯಾ ದೇಶಕ್ಕೆ ವಲಸೆಹೋದರು ಎಂದು ಭಾವಿಸೋಣ. ಅಲ್ಲಿ 'ಅವರ ಗಂಗೆ' ಇರುವುದಿಲ್ಲ. ಇನ್ನು ವಿಷ್ಣು ಪತ್ನಿ ಎಂದು ಸಂಬೋಧಿಸುವುದು ತಾನೆ ಯಾರನ್ನು? ಆಸ್ಟ್ರೇಲಿಯಾವನ್ನು ವಿಷ್ಣು ಪತ್ನಿ ಎಂದು ನಮಿಸುವುದು ಸಾಧ್ಯವಿಲ್ಲ. ಹೋಮರ್‌ನ ಇಲಿಯಡ್ ಅಥವಾ ಮಿಲ್ಟನ್ನಿನ ಪ್ಯಾರಡೈಸ್ ಲಾಸ್ಟ್, ಹಿಂದೂಗಳಿಗೆ ಮಹಾಭಾರತ ರಾಮಾಯಣಗಳಂತೆ ಸ್ಫೂರ್ತಿ ಪ್ರೇರಣೆಗಳನ್ನು ನೀಡಲಾರವು. ವಾಸ್ತವವಾಗಿ ಹಿಂದು ಮತ್ತು ಹಿಂದುಸ್ಥಾನ ಇವೆರಡೂ ಸೂರ್ಯ ಮತ್ತು ಪ್ರಕಾಶದಂತೆ ಪರಸ್ಪರ ಅಭಿನ್ನವಾದವು. ಹಿಂದುಸ್ಥಾನದಿಂದಲೇ 'ಹಿಂದುವು' ಜೀವಿಸಿದ್ದಾನೆ. ಹಿಂದುವಿನಿಂದಲೇ ಹಿಂದು ಸ್ಥಾನ ಪವಿತ್ರವಾಗಿದೆ.

**ಏಕತೆಯ ಸೂತ್ರ**

ಹೀಗೆ ಹಿಂದುವಿನ ರಾಷ್ಟ್ರೀಯತೆಯೇ ಹಿಂದುಸ್ಥಾನದ ರಾಷ್ಟ್ರೀಯತೆ ಆಗಿದೆ. ಹಿಂದುಭಾವನೆ ಜಾಗೃತವಾದಲ್ಲಿ ಹೊರಗೆ ಕಾಣುವ ಭಿನ್ನತೆಗಳೂ ಅಳಿಯುತ್ತವೆ. ಬೇರೆಬೇರೆ ಭಾಷೆಗಳನ್ನಾಡುವ ಅವರು ಹರಿದ್ವಾರದಲ್ಲಿ ಪುಣ್ಯ ಸ್ನಾನಕ್ಕೆಂದು ಸೇರಿದಾಗ ಅವರವರ ಭಾಷೆಯಲ್ಲಿ ಪ್ರಾರ್ಥಿಸಿದರೂ ಅದು ಗಂಗಾ ಮಾತೆಗೆ ಅರ್ಥವಾಗುತ್ತದೆ. ಚಿಕ್ಕ ಮಗುವೊಂದರ ತೊದಲುನುಡಿ ಬೇರಾರಿಗೂ ತಿಳಿಯದಿರಬಹುದು. ಆದರೆ ತಾಯಿಗೆ ಮಾತ್ರ ತಿಳಿಯುತ್ತದೆ. ಗಂಗಾಮಾತೆಗೆ ನಾವೆಲ್ಲರೂ ಮಕ್ಕಳು. ಅಂತೆಯೇ ನಮ್ಮೆಲ್ಲರ ಭಾಷೆಯೂ ಅವಳಿಗೆ ಅರ್ಥವಾಗುತ್ತದೆ. ಸಮಾನಪ್ರೇಮದಿಂದ ಪ್ರಯತ್ನಿಸಿದಲ್ಲಿ ಪರಸ್ಪರರಲ್ಲೂ ಭಾಷೆ ಅರ್ಥವಾಗುವುದು ಕಷ್ಟವೇನಿಲ್ಲ. ನಮ್ಮೆಲ್ಲರ ಪರಸ್ಪರ ಪ್ರೇಮದ ಸೂತ್ರ ಒಂದೇ– ಹಿಂದು! ಈ ಸೂತ್ರ ಕಿತ್ತುಹೋಯಿತೆಂದರೆ ಈಗಿರುವ ಭಾಷಾವೈಷಮ್ಯಗಳು ಮಾತ್ರವಲ್ಲ, ಇನ್ನೂ ನೂರಾರು ಭೇದಗಳು ಹೊಸದಾಗಿ ತಲೆಯೆತ್ತುತ್ತವೆ. ಶಾಲೆಯಲ್ಲಿ ವ್ಯವಸ್ಥೆಗೋಸ್ಕರ ವಿವಿಧ ತರಗತಿಗಳಿರುತ್ತವೆ. ಅವು ಅವಶ್ಯವೂ ಹೌದು. ಅದೇ ರೀತಿ ಹಿಂದು ಸಮಾಜದಲ್ಲೂ ವಿವಿಧ ಪಂಥ, ಭಾಷೆ ಮುಂತಾದ ವ್ಯವಸ್ಥೆಗಳಿವೆ. ಆದರೆ ಇವೆಲ್ಲವೂ ಹಿಂದು ಸೂತ್ರದೊಳಗೇ ಅಡಗಿದೆ. ಬಂಗಾಲದಲ್ಲಿನ ಹಿಂದುಗಳ ಮೇಲಾದ ದೌರ್ಜನ್ಯದಿಂದ ದೂರದಲ್ಲಿ ವಾಸಿಸುವ ಹಿಂದುವಿನ ಮನಸ್ಸು ವ್ಯಾಕುಲಗೊಳ್ಳುತ್ತದೆ. ಅಸಾಮಿನಲ್ಲಿ ಭೂಕಂಪವಾದಾಗ ಅಲ್ಲಿನ ಜನಗಳ ಸಹಾಯಕ್ಕೆ ಧಾವಿಸಬೇಕೆಂದು ಹಿಂದುವಿಗೆ ಅನಿಸುತ್ತದೆ. ವಿಯಟ್ನಾಂ ಯುದ್ಧದ ಹಾನಿ ಕೇಳಿ ಕನಿಕರ ಹುಟ್ಟಿದರೂ, ಮೇಲ್ಕಂಡ ಪ್ರತಿಕ್ರಿಯೆ ಆಗದಿರಲು ಕಾರಣವೇನು? ಹಿಂದುವು ಒಂದೇ ಸೂತ್ರದಲ್ಲಿ ಬಂಧಿಸಲ್ಪಟ್ಟಿರುವುದೇ!



ಈ ಏಕಸೂತ್ರತೆಯ ಪ್ರಭಾವದಿಂದ ಹಿಂದುವು ತನ್ನ ತೋರಿಕೆಯ ಭೇದಗಳನ್ನು ಮರೆಯಬಲ್ಲನೆಂಬುದೂ ನಿಜವೇ. ಆರ್ಯಸಮಾಜಿಗಳು ಮೂರ್ತಿ ಪೂಜೆಯಲ್ಲಿ ನಂಬಿಕೆ ಇಡುವುದಿಲ್ಲವಷ್ಟೆ. ಒಂದು ಕಡೆ ಅವರನ್ನು ಒಮ್ಮೆ ಇತರ ಹಿಂದುಗಳು ಒಂದು ಸಾಮಾಜಿಕ ಉತ್ಸವಕ್ಕೆ ಕರೆದಿದ್ದರು. 'ಮೂರ್ತಿಪೂಜಕರ ಉತ್ಸವಕ್ಕೆ ಬರುವುದಿಲ್ಲ' ಎಂದು ಅವರು ಉತ್ತರ ಹೇಳಿಯೂ ಇದ್ದರು. ಆದರೆ ಸಮೀಪದ ಒಂದು ಶಿವದೇವಾಲಯದ ಮೇಲೆ ದಾಳಿ ನಡೆದಾಗ ಮಾತ್ರ ಆ 'ಮೂರ್ತಿ'ಯ ರಕ್ಷಣೆಗೆ ಅವರೇ ಮುಂದಾಗಿ ಧಾವಿಸಿದರು. ಪಂಜಾಬಿನಲ್ಲಿ ಸೀಖರಿಗೂ ಸೀಖೇತರ ಹಿಂದೂಗಳಿಗೂ ವೈಮನಸ್ಯ ಬೆಳೆದುಬಂದಿದ್ದರೂ, ೧೯೪೭ರಲ್ಲಿ ಸೀಖರ ಗುರುದ್ವಾರಗಳನ್ನು ರಕ್ಷಿಸಿದವರು ಸೀಖೇತರ ಹಿಂದುಗಳೇ. ಭಾಷೆಯ ಹೆಸರಿನಲ್ಲಿ ಬಿಹಾರ್, ಬಂಗಾಳಗಳಲ್ಲಿ ಕಿತ್ತಾಟ ನಡೆದಿದ್ದರೂ ಹಿಂದೆ ನವಖಾಲಿಯಲ್ಲಿನ ಘಟನೆಗಳಿಗೆ ಬಿಹಾರದ ಜನರೇ ಪ್ರತಿಕ್ರಿಯೆ ತೋರಿಸಿದ್ದರು.

ಇಂದಿನ ಒಬ್ಬ ಬ್ರಾಹ್ಮಣನಿಗೂ, ಪ್ರಾಚೀನ ಕಾಲದಲ್ಲಿ ಕ್ಷತ್ರಿಯನಾಗಿ ಜನಿಸಿದ್ದ ಶ್ರೀರಾಮಚಂದ್ರನಿಗೂ ಸಂಬಂಧ ಏನು? ಆದರೆ ಪೀಳಿಗೆ ಪೀಳಿಗೆಗಳಿಂದ ಕೋಟಿ ಕೋಟಿ ಜನರು ಶ್ರೀರಾಮನ ಗುಣಗಾನ ಮಾಡುತ್ತಾರೆ. ಅವನ ಆದರ್ಶ ಹಿಂದುತನವೇ ಅದಕ್ಕಿರುವ ಸ್ಫೂರ್ತಿ. ಹಿಂದು ಆದರ್ಶಕ್ಕೆ ತಕ್ಕಂತೆ ಅವನು ಧರ್ಮವಿರೋಧಿಯಾದ ರಾವಣನನ್ನು ವಧಿಸಿದ್ದ. ಅಷ್ಟಾದರೂ ಹಿಂದುವಿಗೆ ತೃಪ್ತಿಯಿಲ್ಲ. ಇಂದಿಗೂ ವಿಜಯದಶಮಿ ಉತ್ಸವದಂದು ರಾವಣನನ್ನು ರಾಮನ ಕೈಯಿಂದ ವಧೆ ಮಾಡಿಸುತ್ತಾರೆ.

**ಸೂತ್ರ ಕಿತ್ತ ಗಾಳಿಪಟ!**

'ಇಂಡಿಯನ್ ನ್ಯಾಷನಲಿಸಮ್, ಆಂಗ್ಲರು ಇರುವವರೆಗೆ ಮಾತ್ರ ಇತ್ತು; ಆಂಗ್ಲರು ಇಲ್ಲಿಂದ ಕಾಲ್ತೆಗೆದೊಡನೆ ಅದೂ ಇಲ್ಲಿಂದ ನಿರ್ಗಮಿಸಿತು' ಎಂದು ಕೆಲವರು ಹೇಳುವುದುಂಟು. ಹಾಗಾದರೆ 'ಅದು ಮತ್ತೆ ಮೇಲೇಳಲು ಇನ್ನೊಮ್ಮೆ ಯಾರಾದರೂ ಆಕ್ರಮಿಸಬೇಕು. ನಾವು ಇನ್ನೊಮ್ಮೆ ದಾಸ್ಯತೆಯಲ್ಲಿ ಬೀಳಬೇಕು' ಎಂದು ಹೇಳಿದಂತಾಯಿತು. ಈ ವಾದ ಎಷ್ಟು ಪೊಳ್ಳಾದ್ದು, ಎಷ್ಟು ಅನರ್ಥ ತಂದೊಡ್ಡೀತು– ಯೋಚಿಸಿ. ನಮ್ಮ ಧರ್ಮ, ಸಂಸ್ಕೃತಿ, ಇತಿಹಾಸ, ಪರಂಪರೆ, ದರ್ಶನಗಳು, ಶ್ರೀರಾಮ, ಶ್ರೀಕೃಷ್ಣ, ಹರಿಶ್ಚಂದ್ರ, ಮನು ಇವಾವುದರ ನೆನಪು, ಅಭಿಮಾನ ಸಹ ಈ ದೇಶದಲ್ಲಿ ಉಳಿದಿಲ್ಲ ಎಂದಾಗುತ್ತದಲ್ಲವೆ? ಆದುದರಿಂದ ಹಿಂದುತ್ವವನ್ನು ಬಿಟ್ಟುಕೊಟ್ಟಲ್ಲಿ ಇಲ್ಲಿನ ರಾಷ್ಟ್ರೀಯತೆ ದಾರ ಕಿತ್ತುಹೋದ ಗಾಳಿ ಪಟದಂತೆ ಎತ್ತಿಂದೆತ್ತಲೋ ಹಾರಾಡಿ ಮತ್ತಾವುದೋ ಪ್ರಪಾತದಲ್ಲಿ ಬೀಳುವುದೇ ಖಂಡಿತ.

**ಅಹಿಂದುಗಳ ಪ್ರಶ್ನೆ**

'ಹಿಂದುತ್ವವೇ ರಾಷ್ಟ್ರೀಯತ್ವ' ಎಂದು ಹೇಳಿದಾಗ ಕೆಲವರು ಗಾಬರಿಗೊಳ್ಳುತ್ತಾರೆ.

ಅವರಿಗೆ ಅಹಿಂದುಗಳ ಬಗೆಗೆ ಚಿಂತೆ ಹತ್ತುತ್ತದೆ. ಇಲ್ಲಿರುವ ಮುಸ್ಲಿಂ ಮತ್ತು ಈಸಾಯಿಗಳ ಗತಿ ಏನು? ಎನ್ನುತ್ತಾರೆ. ಈ ಪ್ರಶ್ನೆ ಬರುವುದೂ ಹಿಂದುತ್ವದ ಲಕ್ಷಣವೇ! ಜಗತ್ತಿನ ಏಕಾತ್ಮತೆ ಬಗ್ಗೆ ಚಿಂತಿಸುವ ಹಿಂದುವು ತನ್ನ ಭೂಮಿಯಲ್ಲೇ ವಾಸಿಸುವ ಅಹಿಂದುಗಳ ಬಗ್ಗೆ ಚಿಂತಿಸುವುದೂ ಸ್ವಾಭಾವಿಕವೇ. ಆದರೆ ಸ್ವಲ್ಪ ಆಳವಾಗಿ ಆಲೋಚಿಸಿದಲ್ಲಿ ಇದು ಹಿಂದುಗಳನ್ನು ಕೇಳಬೇಕಾದ ಪ್ರಶ್ನೆಯೇ ಅಲ್ಲ. ಏಕೆಂದರೆ ಇಲ್ಲಿನ ಅಹಿಂದುಗಳ ಭವಿತವ್ಯ ಹಿಂದುಗಳ ಮೇಲೆ ನಿಂತಿಲ್ಲ. ಅದು ಅಹಿಂದುಗಳ ಮೇಲೆ, ಅವರ ನಡವಳಿಕೆಯ ಮೇಲೆಯೇ ನಿಂತಿದೆ. ಅವರು ತಮ್ಮನ್ನು ಹಿಂದುತ್ವದ ಶತ್ರುಗಳೆಂದು ಭಾವಿಸಿ ನಡೆದುಕೊಂಡಲ್ಲಿ ಅವರನ್ನು ನಾವೂ ಶತ್ರುಗಳಂತೆಯೇ ನಡೆಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಶತ್ರುಗಳನ್ನು ಪ್ರೇಮದಿಂದ ಆಲಿಂಗಿಸಿಕೊಳ್ಳುವುದು ಎಂದಿಗೂ ತರವಲ್ಲ. ಆದ್ದರಿಂದ ಆತ್ಮಘಾತವೇ ಆದೀತು. ಅವರು ತಮ್ಮನ್ನು ಈ ಭೂಮಿಯ ಪುತ್ರರೆಂದೂ, ಭಾರತಮಾತೆಯನ್ನು ತಮ್ಮ ಮಾತೆಯೆಂದೂ, ಭಾವಿಸಲು ತಯಾರಾದಲ್ಲಿ ಅವರನ್ನು ನಮ್ಮ ರಾಷ್ಟ್ರೀಯತೆಯೊಳಕ್ಕೆ ಸೇರಿಸಿಕೊಂಡು ಅವರನ್ನು ಪ್ರೇಮದಿಂದ ಆಲಿಂಗಿಸೋಣ. ಅಥವಾ ಅವರು ಆಶ್ರಯಾರ್ಥಿಗಳಂತೆ ಇರಬಯಸಿದಲ್ಲಿ, ಅದರಂತೆ ವರ್ತಿಸಿದಲ್ಲಿ, ಹಿಂದೆ ಪಾರ್ಸಿ ಯಹೂದಿಗಳನ್ನು ಆಶ್ರಯಾರ್ಥಿಯಾಗಿ ನಡೆಸಿಕೊಂಡಂತೆ ಇವರನ್ನೂ ನಡೆಸಿಕೊಳ್ಳಲು ಅಡ್ಡಿಯಿಲ್ಲ.

ಹಿಂದೆ ಮುಸಲ್ಮಾನರು ಇಲ್ಲಿಗೆ ಬಂದದ್ದು ಆಕ್ರಮಕರಾಗಿ; ಶರಣಾರ್ಥಿಗಳಂತಲ್ಲ. ತಮ್ಮ ಕೈ ಮೇಲಾದಾಗ ಅವರು ಹಿಂದುಗಳ ಧರ್ಮ, ಸಂಸ್ಕೃತಿ, ಸಂಪತ್ತು ಎಲ್ಲವನ್ನೂ ಧ್ವಂಸಗೈದರು. ಅವರು ಬೇರೊಂದು ಧರ್ಮಪಂಥವನ್ನು ಪಾಲಿಸುತ್ತಾರೆಂದಮಾತ್ರಕ್ಕೆ ಅದಕ್ಕೆ ಇಲ್ಲಿ ಯಾರ ಅಭ್ಯಂತರವೂ ಇರಲಿಲ್ಲ. ಏಕೆಂದರೆ ಸದಾ ಇಲ್ಲಿ ಉಪಾಸನಾ ಸ್ವಾತಂತ್ರ್ಯ ಇದ್ದೇ ಇದ್ದಿತು. ಆದರೆ ಮತದ ಸೋಗಿನಲ್ಲಿ ಅವರು ಆಕ್ರಮಣಕಾರಿಗಳಾಗಿ ಸಾಮ್ರಾಜ್ಯವಾದಿಗಳಾಗಿ ಬಂದರು. ಆದರೆ ಹಿಂದುಗಳು ಮಾತ್ರ ತಮ್ಮ ಕೈ ಮೇಲಾದಾಗ ಮುಸಲ್ಮಾನರ ಮಸೀದಿಗಳನ್ನು ಕೆಡವಲಿಲ್ಲ. ಶಿವಾಜಿ, ಹರಿಸಿಂಗ್ ನಲ್ವಾ ಅವರು ಸತ್ತವರಿಗೆ ಗೋರಿಗಳನ್ನೂ ಕಟ್ಟಿಸಿಕೊಟ್ಟರು.

### ತಾಯಿನಾಡಿಗೆ ದ್ರೋಹ ಸಲ್ಲದು

ವಾಸ್ತವವಾಗಿ ಇಂದಿನ ಮುಸಲ್ಮಾನ ಕ್ರೈಸ್ತರೆಲ್ಲರೂ ಒಂದು ಕಾಲದಲ್ಲಿ ಹಿಂದುಗಳಾಗಿದ್ದವರೇ, ಇಲ್ಲಿನ ಪೂರ್ವಜರ ಸಂತಾನವೇ; ಎಂದಮೇಲೆ ಕೇವಲ ಉಪಾಸನಾ ಪದ್ಧತಿ ಬದಲಾದ ಮಾತ್ರಕ್ಕೆ ರಾಷ್ಟ್ರ ಜೀವನಕ್ಕೆ ಅವರು ಹೇಗೆ ಪರಕೀಯರಾಗುವರು? ಎಂದು ಕೆಲವರು ಕೇಳುತ್ತಾರೆ. ಕೇವಲ ಉಪಾಸನಾ ಪದ್ಧತಿ ಬದಲಾಯಿಸಿಕೊಂಡರೆಂಬ ಮಾತ್ರಕ್ಕೆ ಅವರನ್ನು ಪರಕೀಯರೆಂದು ನಾವೆಂದಿಗೂ ಹೇಳೆವು. ಆದರೆ 'ಈ ದೇಶ ನನ್ನದಲ್ಲ' ಎಂಬಂತೆ ಅವರು ಭಾವಿಸುವ, ನಡೆದುಕೊಳ್ಳುವ ಅವರ ರೀತಿಯೇ ಇವತ್ತಿನ ಗೊಂದಲಕ್ಕೆಲ್ಲ ಕಾರಣವಾಗಿದೆ. ಮುಸಲ್ಮಾನನು ತಾನು ನಮಾಜಿಗೆ ಕೂತಾಗ ಇಲ್ಲಿಯ 'ಅಪವಿತ್ರ ಮಣ್ಣು' ತಲೆಗೆ ತಾಕದಿರಲೆಂದು ಮಕ್ಕಾದ ಮಣ್ಣನ್ನು ತಂದಿಟ್ಟುಕೊಳ್ಳುತ್ತಾನೆ. ಇದು ಈ ದೇಶದ ಬಗ್ಗೆ ಭಕ್ತಿ ಪ್ರಕಟಿಸುತ್ತದೇನು? ಅವನು ಈ ಭಾವನೆಯಿಂದಾಗಿಯೇ ದೇಶವನ್ನು ತುಂಡರಿಸಲು ಮುಂದಾದ. ತನ್ನ ಮನೆಯನ್ನೇ ಭಂಗಗೊಳಿಸಿದ. ತನ್ನ ಕರ್ಮಭೂಮಿಯನ್ನೇ, ತನ್ನ ಜನ್ಮಭೂಮಿಯನ್ನೇ ಅವನು 'ಯುದ್ಧಭೂಮಿ'– ದಾರುಲ್ ಹರಬ್ ಎಂದು ಸಂಬೋಧಿಸುತ್ತಾನೆ. ತಾನು ವಾಸಿಸುವ ಮನೆಯ ಗೋಡೆಗೋಡೆಯೂ ಅವನ ಪ್ರೀತಿಗೆ ಪಾತ್ರವಾಗಬೇಕಾದಂತಹದನ್ನು ಜೈಲೆಂದೂ, ಪರಕೀಯವೆಂದೂ ಭಾವಿಸುವ ವೃತ್ತಿ ಅವನಲ್ಲಿ ಬೇರುಬಿಡುತ್ತದೆ.

ಹಿಂದೊಮ್ಮೆ ಹಿಂದುವೇ ಆಗಿದ್ದು ಈಗ ಮುಸಲ್ಮಾನ ಅಥವಾ ಈಸಾಯಿ ಆದವನಿಗೆ ಇದುವರೆಗೆ ಪವಿತ್ರವಾಗಿದ್ದ ಗಂಗಾನದಿ ತತ್‌ಕ್ಷಣ ಅಪವಿತ್ರವಾಗುತ್ತದೆ. ಮುಸಲ್ಮಾನನಾದವನು ಗಂಗೆಯನ್ನು ದೋಣಿಯಲ್ಲಿ ದಾಟಬೇಕಾಗಿ ಬಂದರೆ, 'ಅದರ ನೀರು ನಿನ್ನ ಮೈಮೇಲೆ ಬಿದ್ದಲ್ಲಿ ನೀನು ಅಪವಿತ್ರನಾಗುತ್ತೀಯೆ' ಎಂದು 'ಅವರ ಪೀರ' ಉಪದೇಶಿಸುತ್ತಾನಂತೆ. ಅದಕ್ಕಾಗಿ ಉತ್ತರಪ್ರದೇಶದಲ್ಲಿ ಒಂದು ಸೇತುವೆಯನ್ನು ಅವರು ಕಟ್ಟಿಸಿಕೊಂಡಿದ್ದಾರೆ. ಬಿಸಿಲಿನ ಬೇಗೆಯಲ್ಲಿ ನರಳಿಯಾರೇ ಹೊರತು ಗಂಗೆಯ ನೀರನ್ನು ಮಾತ್ರ ಅವರು ಮುಟ್ಟಲಿಕ್ಕಿಲ್ಲ. ಅದೇ ಮುಸಲ್ಮಾನ 'ನನ್ನನ್ನು ಕರೆದುಕೋ' ಎಂದು 'ಮದೀನಾ'ವನ್ನು ಪ್ರಾರ್ಥಿಸುತ್ತಾನೆ. ಹೀಗೆ ಭಾರತದ ಬಗ್ಗೆ ಅವನಿಗೆ ಸ್ಮರಣೆಯೇ ಹಾರಿಹೋಗುತ್ತದೆ. ಅವನು ಮುಸಲ್ಮಾನನಾದ ತತ್‌ಕ್ಷಣ ಅವನ ಪೂರ್ವಜರೂ ಬದಲಾಗುತ್ತಾರೆ. ಅವನಿಗೆ ರಾಮಾಯಣ, ಮಹಾಭಾರತ, ಹಳದೀಘಾಟ್ ಯುದ್ಧಗಳು ಸ್ಮರಣೆಗೆ ಬಾರವು; ಅರೇಬಿಯಾದಲ್ಲಿ ನಡೆದ 'ದಬಾತಾಘಾರಾತ್' ಯುದ್ಧ ಜ್ಞಾಪಕಕ್ಕೆ ಬರುತ್ತದೆ! ಅವನ ಜೀವನದಲ್ಲಿ ಇಸ್ಲಾಂ ಪ್ರವೇಶ ಮಾಡಿದ್ದರ ಫಲ ಇದೆಲ್ಲ. ವಿದೇಶಿ ಆಕ್ರಮಣದ ಪ್ರತಿನಿಧಿಯನ್ನಾಗಿ ಅವನನ್ನು ಬದಲಾಯಿಸಿ, ಭಾರತದ ರಾಷ್ಟ್ರೀಯತೆಯನ್ನು ಮರೆಯುವಂತೆ ಇಸ್ಲಾಂ ಪ್ರೇರಣೆ ನೀಡುತ್ತದೆ.

ಇಷ್ಟೇ ಅಲ್ಲ, ಅವನ ಉಡಿಗೆ ತೊಡಿಗೆ, ಆಚಾರ ವಿಚಾರ, ವ್ಯವಹಾರ ಎಲ್ಲದರಲ್ಲೂ ಬದಲಾವಣೆಯೇ ಕಂಡುಬರುತ್ತದೆ. ಕೇರಳದಲ್ಲಿ ಎಲ್ಲರೂ 'ಮುಂಡು' ಉಟ್ಟರೆ ಅವನ ವೇಷವೇ ಬೇರೆ; ಷರೀಯತ್ ಹೇಳಿರಲಿ, ಹೇಳಿಲ್ಲದಿರಲಿ, ಇಲ್ಲಿ ಏನೇನಿದೆಯೋ ಅವೆಲ್ಲಕ್ಕೆ ವಿರುದ್ಧವಾಗಿಯೇ ಅವನ ಆಚರಣೆ. ಅದಲ್ಲದೆ ಅವನು ಇಡೀ ಭಾರತವನ್ನು ಇಸ್ಲಾಮಿಗೆ ಪರಿವರ್ತಿಸಬೇಕೆಂದು ಇಚ್ಛಿಸುವನೇ ಹೊರತು

ಭಾರತದ ರಾಷ್ಟ್ರೀಯತೆಯೊಡನೆ ಸಮರಸವಾಗುವ ಕಲ್ಪನೆಯೂ ಅವನಿಗಿಲ್ಲ. ವಾಸ್ತವ ಸ್ಥಿತಿ ಹೀಗಿದ್ದರೂ ಕೆಲವರು, ಮುಸಲ್ಮಾನರ ಗತಿ ಏನು? ಎಂದು ನಮ್ಮನ್ನೇ ಕೇಳುವರು. ಇಂಥವರ ಮೌಢ್ಯದ ಬಗ್ಗೆ ಏನು ಹೇಳೋಣ! ಅದೇ ಜನರು ಯಹೂದಿ, ಪಾರ್ಸಿ, ಟಿಬೆಟ್ಟಿನವರ ಬಗ್ಗೆ ವಿಚಾರಿಸದೆ ಮುಸಲ್ಮಾನರ ಬಗ್ಗೆಯೇ ಚಿಂತಿಸುವುದು ಅವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಎಂಬ ಕಾರಣದಿಂದ ಇರಬಹುದು.

**ಕಾಂಗ್ರೆಸ್ಸಿಗರ ಅಭಿಮತವೂ ಅದೇ**

'ಹಿಂದು–ಮುಸ್ಲಿಮ್ ಭಾಯಿ ಭಾಯಿ' ಎಂದು ಘೋಷಿಸಿದ ಕಾಂಗ್ರೆಸ್ಸಿಗರು ಸಹ ಮುಸಲ್ಮಾನರನ್ನು ನೈಜ ಅರ್ಥದಲ್ಲಿ ರಾಷ್ಟ್ರೀಯರೆಂದು ಪರಿಗಣಿಸಿರಲಿಲ್ಲ. ರಾಷ್ಟ್ರೀಯರೆಂದು ಪರಿಗಣಿಸಿದ್ದಲ್ಲಿ ಅವರು ಮುಸಲ್ಮಾನರ ಶರತ್ತುಗಳನ್ನು ಸರ್ವಥಾ ಒಪ್ಪಿಕೊಳ್ಳುತ್ತಿರಲಿಲ್ಲ. ವಿಶೇಷ ರಾಜಕೀಯ ಸವಲತ್ತುಗಳನ್ನು ಮುಸಲ್ಮಾನರಿಗೆ ಕೊಟ್ಟು ಅವರನ್ನು ಒಲಿಸಿಕೊಳ್ಳುವ ವಿಚಾರವೂ ಅವರಿಗೆ ಬರುತ್ತಿರಲಿಲ್ಲ. ಹಿಂದುಗಳ ಬಗ್ಗೆ ಈ ರೀತಿ ಎಂದೂ ಕಾಂಗ್ರೆಸ್ ಮುಖಂಡರು ವರ್ತಿಸಲಿಲ್ಲ. ಹಿಂದುಗಳು ನಮ್ಮವರೇ, ತಾಯಿ ಭಾರತಿಯ ಮಕ್ಕಳೇ, ಎಂದೇ ಅವರ ಭಾವನೆಯಾಗಿತ್ತು. ಅವರು ಮನೆಯವರೇ ಆದುದರಿಂದ 'ಯಾರಾದರೂ ಮನೆಯಲ್ಲಿ ಖಾಯಿಲೆಯಾದರೆ ಮಕ್ಕಳು ಬಿಟ್ಟಿ ದುಡಿಯುವವರು; ಅವರಿಗೇನೂ ಕೂಲಿ ಕೊಡಬೇಕಾಗಿಲ್ಲ; ಏಕೆಂದರೆ ಅದು ಅವರ ಕರ್ತವ್ಯ' ಎಂಬಂತೆ ಹಿಂದುಗಳ ಬಗ್ಗೆ ನಿರ್ಲಕ್ಷ್ಯ! ಆದರೆ ದಾದಿ? ಆಕೆಗಂತೂ ಹಣ ತೆರಬೇಕು. ದಾದಿಯನ್ನು ಸಂಬಳಕ್ಕೆ ಗೊತ್ತುಪಡಿಸುವಂತೆ ಮುಸಲ್ಮಾನರಿಗೆ ಹೆಚ್ಚಿನ ಅಧಿಕಾರ ಸೌಲಭ್ಯಗಳನ್ನು ಕೊಟ್ಟು ತಮ್ಮಲ್ಲಿಗೆ ತಂದುಕೊಳ್ಳಲು ಯತ್ನಿಸಿದರು.

ಹೀಗೆ ತಪ್ಪು ಆಧಾರದ ಮೇಲೆ ನಡೆದ ಪ್ರಯತ್ನಗಳಿಂದಲೇ ದೇಶ ಒಡೆಯಿತು. ದೇಶಮಾತೆ ತುಂಡಾದಳು. ಇವತ್ತಿಗೂ ಇಲ್ಲಿರುವ ಮುಸಲ್ಮಾನರು ತಮ್ಮನ್ನು ತಾವು 'ಹಿಂದಿನ ಆಳರಸರು' ಎಂದೇ ಭಾವಿಸಿಕೊಳ್ಳುತ್ತಾರೆ. ಆದ್ದರಿಂದ ಅವರು ತಮ್ಮ ಇಂದಿನ ಕೃತ್ರಿಮ, ಅಸಹಜ, ಅರಾಷ್ಟ್ರೀಯ ಭಾವನೆಗಳನ್ನು ದೂರಗೊಳಿಸಿಕೊಂಡು ತಮ್ಮ ಉಪಾಸನಾ ಪದ್ಧತಿಯನ್ನು ಅನುಸರಿಸಿಕೊಂಡೇ ಈ ಭೂಮಿಯ ಬಗ್ಗೆ ಶ್ರದ್ಧೆ, ಗೌರವ, ಭಕ್ತಿ ಪ್ರಕಟಿಸಿ ಬಾಳುವುದರಿಂದಲೇ ಅವರು ರಾಷ್ಟ್ರೀಯರಾಗಲು ಅರ್ಹರಾದರು.

**ಸ್ವಾತಂತ್ರ್ಯ ಸಮರ ಮುಗಿದಿಲ್ಲ**

ಹಿಂದು ವಿಚಾರವೇ ಈ ಭೂಮಿಯ ರಾಷ್ಟ್ರೀಯತೆಗೆ ಜೀವಾಳ. ಅದೇ ಈ



ದೇಶದ ಸ್ವಾತಂತ್ರ್ಯ ಸಮರಕ್ಕೂ ಪ್ರೇರಣೆ ಕೊಟ್ಟಿದೆ. ಕ್ರಾಂತಿಕಾರಿಗಳಿಂದ ಮೊದಲ್ಗೊಂಡು ತಿಲಕ, ಗಾಂಧೀಜಿವರೆಗೆ ಎಲ್ಲರೂ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಗವದ್ಗೀತೆಯಿಂದ ಕರ್ಮಪ್ರೇರಣೆಯನ್ನು ಪಡೆದರು. ಹಿಂದುವು ಹೇಡಿ, ಯುದ್ಧ ಮಾಡಲಾರ ಎಂಬುದು ಸುಳ್ಳಾಯಿತು. ಮುಂಚಿನಿಂದಲೂ ಹಿಂದುವೇ ಈ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾನೆ. ಆದರೆ ರಾಷ್ಟ್ರೀಯತೆಯ ಬಗ್ಗೆ ಸರಿಯಾದ ದೃಷ್ಟಿ ಇಲ್ಲದುದರಿಂದ ದೇಶ ಇಬ್ಭಾಗವಾಯಿತು. ದೃಷ್ಟಿ ಸರಿಯಾಗಿದ್ದಲ್ಲಿ ದೇಶ ವಿಭಜಿತವಾಗಲು ಅವನು ಎಂದಿಗೂ ಬಿಟ್ಟುಕೊಡುತ್ತಿರಲಿಲ್ಲ.

ಆದರೆ ಸ್ವಾತಂತ್ರ್ಯಯುದ್ಧ ಇನ್ನೂ ಸಮಾಪ್ತವೇನೂ ಆಗಿಲ್ಲ. ಹಿಂದುತ್ವದ ಪ್ರೇರಣೆಯಿಂದಲೇ ಕಳೆದುಹೋಗಿರುವ ಭೂಭಾಗಗಳನ್ನು ಮರಳಿ ಪಡೆಯಲು ಬಂದೀತು. ಇದುವರೆಗೆ ಅನೇಕ ಯುದ್ಧಗಳಲ್ಲಿ ನಾವು ಸೋತು ರಾಜ್ಯ ಕೈಬಿಟ್ಟಿದ್ದರೂ ನಾವು ಅಂತಿಮವಾಗಿ ಸೋಲನ್ನು ಮಾತ್ರ ಒಪ್ಪಿಕೊಂಡಿಲ್ಲ. ಈ ಎಲ್ಲ ಯುದ್ಧಗಳು ರಾಷ್ಟ್ರೀಯತೆಯ ರಕ್ಷಣೆಗಾಗಿಯೇ ನಡೆಯುತ್ತಿವೆ. ರಾಣಾಪ್ರತಾಪ, ವಿದ್ಯಾರಣ್ಯ, ಗುರುಗೋವಿಂದ, ಶಿವಾಜಿ, ಇವರು ಮಾಡಿದ್ದ ಪ್ರತಿಜ್ಞೆ ಪೂರ್ಣವಾಗಿಲ್ಲ. ಆ ಪ್ರತಿಜ್ಞೆಯನ್ನು ಪೂರ್ಣಗೊಳಿಸುವುದೇ ತಾಯಿಯ ಗೌರವ ಉಳಿಸುವ ನಿಜವಾದ ಮಾರ್ಗ.

**ವಿಶ್ವಮಾನ್ಯತೆಗಾಗಿ**

ನಮ್ಮ ರಾಷ್ಟ್ರೀಯತೆಯು ಹಿಂದು ದರ್ಶನದ ಆಧಾರದ ಮೇಲೆಯೇ ನಿಂತಿದೆ. ನಮ್ಮ ಸ್ವಾತಂತ್ರ್ಯಯುದ್ಧಗಳು ನಡೆದುದೂ ಅದರ ರಕ್ಷಣೆಗಾಗಿಯೇ. ಆದ್ದರಿಂದ ನಮ್ಮ ರಾಷ್ಟ್ರದ ವಿಶೇಷತೆಗಳಾದ ತ್ಯಾಗ, ಸೇವೆ, ಸಂಯಮ, ಆಧ್ಯಾತ್ಮಿಕತೆ, ಇವುಗಳ ಆಧಾರದ ಮೇಲೆಯೇ ನಾವು ಮುಂದುವರಿಯಬೇಕಾಗಿದೆ. ಹಾಗಾದಾಗ ಮಾತ್ರ ಪ್ರಪಂಚದಲ್ಲಿ ನಮಗೆ ಬೆಲೆ. ನಾವಿಂದು ಪ್ರಪಂಚದ ಎಲ್ಲ ದೇಶಗಳಿಂದ ಪ್ರತಿಯೊಂದು ವಿಷಯಕ್ಕೂ ಆಹಾರದಿಂದ ಮೊದಲ್ಗೊಂಡು ಶಸ್ತ್ರಾಸ್ತ್ರಗಳವರೆಗೆ, ಭಿಕ್ಷೆ ಬೇಡುತ್ತಿದ್ದೇವೆ. ಹೀಗೆ ನಾವು ಪ್ರಪಂಚಕ್ಕೆ ಭಾರವಾದ ವಸ್ತುವಾಗಿದ್ದೇವೆ. ಪ್ರಪಂಚಕ್ಕೆ ನಾವು ಏನನ್ನೂ ಮರಳಿ ಕೊಡುತ್ತಿಲ್ಲ.

ವಾಸ್ತವವಾಗಿ ನಾವು ಪ್ರಪಂಚಕ್ಕೆ ಕೊಡಬಹುದಾದ ಅನೇಕ ಅಮೂಲ್ಯ ಸಂಗತಿಗಳಿವೆ. ಅವೆಲ್ಲವೂ ಹಿಂದು ಹೆಸರಿನಲ್ಲೇ ಪ್ರಚಲಿತವಾಗಿದೆ. ಆದರೆ ಈ ಹೆಸರಿನಿಂದ ನಾವು ಪ್ರಪಂಚದ ಮುಂದೆ ನಿಲ್ಲಲು ತಯಾರಿಲ್ಲದಿರುವುದೇ ನಮ್ಮ ಇಂದಿನ ದುರವಸ್ಥೆಗೆ ಮುಖ್ಯ ಕಾರಣ. ಆದುದರಿಂದ ಹಿಂದು ಸ್ವಾಭಿಮಾನದ ಧ್ವಜವನ್ನೆತ್ತಿ ಎದ್ದು ನಿಂತಾಗಲೇ ನಮ್ಮಲ್ಲಿ ಶಕ್ತಿ ಬೆಳೆದು ನಿಂತೀತು. ಅದರಿಂದಲೇ ಕಳೆದುಹೋಗಿರುವ ನಮ್ಮ ಪ್ರತಿಷ್ಠೆ ಗೌರವಗಳನ್ನಲ್ಲದೆ ಭೂಮಿಯನ್ನೂ ಮರಳಿ

ಪಡೆಯಬಲ್ಲೆವು. ನಮ್ಮಲ್ಲಿ ಹಿಂದಿನ ಪರಮ ಪ್ರತಾಪಿ, ತೇಜಸ್ವಿ ಪೂರ್ವಜರ ರಕ್ತ ಹರಿಯುತ್ತಿದೆ ಎಂಬ ಭಾವನೆ ಪ್ರಖರವಾಗಿದ್ದಲ್ಲಿ ಮಾತ್ರ ನಾವು ಅವರಿಗಿಂತಲೂ ಹೆಚ್ಚು ಗರಿಮೆ ಸಾಧಿಸಬಲ್ಲೆವು. ಇದರಲ್ಲೆ ಈ ನಾಡಿನ ಅಮೃತಪುತ್ರರಾದ ನಮ್ಮ ಜೀವನದ ಸಾರ್ಥಕತೆಯೂ ಅಡಗಿದೆ.



# ೬. ನಮ್ಮ ಸಂಸ್ಕೃತಿಯ ಒಳನೋಟ

ಧರ್ಮ, ಸಂಸ್ಕೃತಿ ಇವು ಚಿರಪರಿಚಿತ ಶಬ್ದಗಳು. ಆದರೂ ಎಷ್ಟೋ ಬಾರಿ ಅವುಗಳ ನಿಜವಾದ ಅರ್ಥ ಅರಿಯದೆ ಅವನ್ನು ಉಪಯೋಗಿಸುತ್ತೇವೆ. ಅನೇಕ ಸರಳ ವಿಷಯಗಳ ಬಗ್ಗೆ ವಿಕೃತ ಅರ್ಥವೇ ಪ್ರಚಲಿತವಾಗಿ ಜನ ಅದನ್ನೇ ನಿಜ ಎಂದು ನಂಬುತ್ತಾರೆ.

**ವ್ಯಕ್ತಿಗೆ ತಕ್ಕಂತೆ ವ್ಯಾಖ್ಯೆ**

ಉದಾಹರಣೆಗೆ ವ್ಯಾಪಾರಿ ರಂಗದಲ್ಲಿ ಒಂದು ರೀತಿಯ ಎಣ್ಣೆಗೆ 'ವೆಜಿಟಬಲ್ ಘೀ' ಎಂದು ಕರೆಯುತ್ತಾರೆ. ಇದರಿಂದ ತಯಾರಿಸಿದ ಬಿಸ್ಕತ್, 'ಘೀ'(ಎಂದರೆ ತುಪ್ಪ)ದಿಂದ ತಯಾರಾದುದೆಂದು ಪ್ರಚಾರ ಮಾಡಿ ಹೆಚ್ಚು ಲಾಭವನ್ನೂ ಸಂಪಾದಿಸುತ್ತಾರೆ. ಅದರಂತೆ ನೃತ್ಯ ಗಾನಗಳಿಗೆ 'ಸಂಸ್ಕೃತಿ' ಎನ್ನುವ ಪ್ರಚಾರ ನಮ್ಮ ದೇಶದಲ್ಲಿ ಅತಿಯಾಗಿದೆ. ಪರದೇಶಗಳಿಗೆ ಹೋಗುವ ನೃತ್ಯಗಾನ ತಂಡಗಳನ್ನೇ ಸಾಂಸ್ಕೃತಿಕ ನಿಯೋಗ ಎಂದು ಕರೆಯುತ್ತಾರೆ. ನಮ್ಮ ದೇಶದ ಬಗ್ಗೆ ಏನೂ ತಿಳಿಯದ ವಿದೇಶಿ ಜನ ನಿಮ್ಮ ಸಂಸ್ಕೃತಿ ಎಂದರೆ ಇದೇ ಏನು? ಎಂದು ಪ್ರಶ್ನಿಸುತ್ತಾರೆ.

ಸಾಮಾನ್ಯವಾಗಿ ಜನ ತಮ್ಮ ತಮ್ಮ ತಿಳಿವಳಿಕೆಯ ಚೌಕಟ್ಟಿನಲ್ಲೇ ಧರ್ಮ ಸಂಸ್ಕೃತಿಗಳ ವ್ಯಾಖ್ಯೆ ಮಾಡುತ್ತಾರೆ. ವೇದದಲ್ಲಿ ಉಲ್ಲೇಖವಿದ್ದುದು ಮಾತ್ರ 'ಧರ್ಮ' ಎಂದು ಭಾವಿಸುವ ಜನ ಮೂರ್ತಿಪೂಜೆಯ ಉಲ್ಲೇಖ ವೇದಗಳಲ್ಲಿ ಇಲ್ಲವಾದ ಕಾರಣ ಅದು ಪರಕೀಯ ಎಂದು ಹೇಳುವುದುಂಟು. ಆದಿ ಶಂಕರಾಚಾರ್ಯರ ಮಾಯಾವಾದವೇ ನಮ್ಮ ಧರ್ಮದ ಅವನತಿಗೆ ಮುಖ್ಯ ಕಾರಣ ಎಂದು ಮಾಯವಾದ ನಂಬದವರು ಹೇಳುತ್ತಾರೆ. ವೇದವನ್ನು ಕೇಳಿಸಿಕೊಂಡ ಶೂದ್ರನ ಕಿವಿಯಲ್ಲಿ ಕಾಯಿಸಿದ ಸೀಸ ಹುಯ್ಯಬೇಕೆಂದು ಕೆಲವರು ಹೇಳುವುದೂ ಉಂಟು. ಒಬ್ಬ ಖೂನಿ, ಕಳ್ಳತನ, ಸ್ತ್ರೀ ಅಪಹರಣ, ಜೂಜು ಮುಂತಾಗಿ ಕುಕರ್ಮವೆಲ್ಲಾ ಮಾಡಿದ್ದರೂ 'ಅವನು ಸ್ನಾನಮಾಡದೆ ಉಣಲಿಲ್ಲ, ಬೇರೆ ಜಾತಿಯವ ಮುಟ್ಟಿದ ನೀರು ಮುಟ್ಟಲಿಲ್ಲ'ವೆಂದು ಅವನನ್ನು ಏನೋ ದೊಡ್ಡ ಧರ್ಮ ಪಾಲಿಸಿದವನಂತೆ ಕಾಣುವವರೂ ಇದ್ದಾರೆ. ಕನ್ಯಾಕುಬ್ಜದ ಬ್ರಾಹ್ಮಣರು ಒಟ್ಟಿಗೆ ವಾಸಿಸಿದರೂ ಒಬ್ಬರ ಒಲೆಯ ಬೆಂಕಿ ಮತ್ತೊಬ್ಬರು

ಮುಟ್ಟುವುದಿಲ್ಲ. (ಎಂಟು ಜನ ಇದ್ದರೆ ಒಂಭತ್ತು ಒಲೆ ಇರುತ್ತದಂತೆ. ಎಂಟು ಜನರಿಗೂ ಎಂಟು ಒಲೆ ಆದರೆ, ಇನ್ನೊಂದು ಎಲ್ಲರೂ ಬೆಂಕಿ ತೆಗೆದುಕೊಳ್ಳಲು!) ಕೆಲವರು, ರೈಲುಪ್ರಯಾಣ ನಿಷಿದ್ಧ, ಆದರೆ ವಾಯುಯಾನ ಮಾಡಬಹುದು– ಎನ್ನುವರು. ಏಕೆ ಎಂದು ಕೇಳಿದಲ್ಲಿ ಧರ್ಮಗ್ರಂಥಗಳಲ್ಲಿ ರೈಲಿನ ಉಲ್ಲೇಖವಿಲ್ಲ, ಪುಷ್ಪಕ ವಿಮಾನದ ಉಲ್ಲೇಖ ಇದೆ ಎನ್ನುತ್ತಾರೆ! ಧರ್ಮದ ಈ ಎಲ್ಲ ಕಲ್ಪನೆಗಳೂ ಕುರುಡರು ಆನೆ ಪರೀಕ್ಷಿಸಿ ತಮತಮಗೆ ತಿಳಿದಂತೆ ಆನೆಯ ವರ್ಣನೆ ಮಾಡಿದಂತೆಯೇ ಸರಿ.

**ಮೇಲ್ಮಟ್ಟದ ಸುಖ ಎಲ್ಲಿದೆ?**

ಮನುಷ್ಯನ ಪ್ರತಿಯೊಂದು ಪ್ರಯತ್ನದ ಉದ್ದೇಶವೂ ಸುಖಪ್ರಾಪ್ತಿ. ದೊಣ್ಣೆ ಎತ್ತಿದಲ್ಲಿ ನಾಯಿ ಓಡುತ್ತದೆ. ಏಟು ತಪ್ಪಿಸಿಕೊಳ್ಳುವುದರಲ್ಲೇ ಅದಕ್ಕೆ ಸುಖ. ವಿಷಕ್ರಿಮಿಗಳು ಮಧುರ ಸುಗಂಧಿತ ಫಲಪುಷ್ಪಗಳನ್ನು ಬಿಟ್ಟು ಕೊಳಚೆಯಲ್ಲೇ ಒದ್ದಾಡುತ್ತವೆ. ಅವಕ್ಕೆ ಅದರಲ್ಲೆ ಆನಂದ.

ಒಬ್ಬ ವೈಜ್ಞಾನಿಕ Y ಆಕಾರದ ಕೊಳವೆಯೊಳಗೆ ಕೆಳಭಾಗದಿಂದ ಒಂದು ಇರುವೆ ಬಿಟ್ಟ. ಮೇಲುಗಡೆ ಎಡಭಾಗದಲ್ಲಿ ವಿದ್ಯುಚ್ಛಕ್ತಿ ಹರಿಸಿದ್ದ. ಆ ಇರುವೆ ಬಲಗಡೆಗೆ ಹೋಯಿತು. ಅವನು ಬಲಭಾಗಕ್ಕೆ ವಿದ್ಯುಚ್ಛಕ್ತಿ ಹರಿಸಿದಾಗ ಅದು ಎಡಭಾಗಕ್ಕೆ ಹೊರಳಿತು.

ಹೀಗೆ ಪ್ರಾಣಿಗಳಿಗೆಲ್ಲಾ ಬದುಕುವ ಆಸೆ ಇದೆ. ಬದುಕಲು ಪ್ರಾಣಿ ಮಾತ್ರಕ್ಕೆ ಆಹಾರ ಬೇಕು. ಪ್ರಾಣಿಗಳಂತೆ ಮನುಷ್ಯನಿಗೂ ಆಹಾರ ಬೇಕು. ಆದರೆ ಪ್ರಾಣಿಗಳಿಗೂ ಮನುಷ್ಯನಿಗೂ ಇರುವ ವ್ಯತ್ಯಾಸವೆಂದರೆ ಮನುಷ್ಯನಿಗೆ ಕೇವಲ ಆಹಾರವಿದ್ದರೆ ಸಾಲದು. ಈ ಭೌತಿಕ ಸುಖಕ್ಕಿಂತಲೂ ಮೇಲ್ಮಟ್ಟದ ಮತ್ತೊಂದು ಸುಖ ಅವನಿಗೆ ಬೇಕು.

ಕಮ್ಯುನಿಸ್ಟ್ ಬಂಧುವೊಬ್ಬ ಮನುಷ್ಯನಿಗೆ ಇರುವ ಏಕಮಾತ್ರ ಸಮಸ್ಯೆ ಎಂದರೆ ಆಹಾರದ್ದು ಎನ್ನುತ್ತಿದ್ದ. 'ನಿನಗೆ ದಿನವೂ ಹೊಟ್ಟೆ ತುಂಬ ತಿನ್ನಿಸಿ ಬೆಳಗ್ಗೆ ಸಂಜೆ ಪಾದರಕ್ಷಾ ಪೂಜೆ ಮಾಡುತ್ತೇನೆ' ಎಂದಾಗ ಅದು ಮಾತ್ರ ಅವನಿಗೆ ಒಪ್ಪಿಗೆಯಾಗಲಿಲ್ಲ! ಅವನು ಆಹಾರವನ್ನು ಸ್ವೀಕರಿಸಲಂತೂ ತಯಾರಿದ್ದ. ಆದರೆ, ಚಪ್ಪಲಿ ಏಟನ್ನಲ್ಲ! ತರ್ಪಣ ಕೊಡುತ್ತಿದ್ದ ಒಬ್ಬನನ್ನು ಮತ್ತೊಬ್ಬನು, 'ನಿನ್ನ ತರ್ಪಣ ಆ ಸತ್ತು ಸ್ವರ್ಗ ಸೇರಿದವರಿಗೆ ತಲುಪುತ್ತದೇನು?' ಎಂದು ಹಾಸ್ಯ ಮಾಡಿದ. ಉತ್ತರವಾಗಿ ಅವನು ಹಾಸ್ಯ ಮಾಡಿದವನ ತಂದೆಯನ್ನೇ ಬೈದ. 'ನನ್ನ ತಂದೆಯನ್ನು ಬೈದಲ್ಲಿ ನಿನ್ನ ಗತಿ ನೆಟ್ಟಗಾಗಲಿಕ್ಕಿಲ್ಲ' ಎಂದು ಅವನು ಕೆರಳಿ ಉತ್ತರ ಕೊಟ್ಟ. 'ನನ್ನ ಬೈಗಳು ನಿನ್ನ ತಂದೆಗೆ ತಲುಪುತ್ತವೇನು?' ಎಂದು ಇವನು ಮರುಸವಾಲು ಹಾಕಿದ.



ಮೇಲ್ಕಂಡ ಘಟನೆಗಳ ನಿಷ್ಕರ್ಷೆ ಏನು? ಆಹಾರ, ನಿದ್ರೆ ಮುಂತಾದ ಶಾರೀರಿಕ ಸುಖ ಮನುಷ್ಯನಿಗೆ ಅವಶ್ಯವಿದ್ದರೂ ಮನಸ್ಸಿಗೆ ಆನಂದ ನೀಡುವ ನಂಬಿಕೆಗಳು, ಮಾನಾಪಮಾನದ ಕಲ್ಪನೆಗಳು, ಇವನ್ನು ಅವನು ಬಿಟ್ಟುಕೊಡಲಾರ. ಅದಕ್ಕಾಗಿ ಅವನು ಉಪವಾಸ ಬೇಕಾದರೂ ಇರುತ್ತಾನೆ. ಮಾನಸಿಕ ಸುಖಪ್ರಾಪ್ತಿಗಾಗಿ ಅಗತ್ಯಬಿದ್ದಲ್ಲಿ ಭೌತಿಕ ಸುಖವನ್ನಾದರೂ ತ್ಯಜಿಸುತ್ತಾನೆ. ಇದೇ ಮಾನವನ ಪ್ರವೃತ್ತಿ. ಪಶುಗಳಿಗಾದರೋ ಈ ಕಲ್ಪನೆಗಳಿಲ್ಲ. ಆಹಾರ ಸಿಕ್ಕಿದರೆ ಸಾಕು, ಅವಕ್ಕೆ ತೃಪ್ತಿ. ಮನಸ್ಸಿಗೆ ಸಮಾಧಾನ ತರುವ ಸಂಗತಿಗಾಗಿ ಮನುಷ್ಯನು ತನ್ನ ಶರೀರದ ಸುಖವನ್ನು ಅದೆಷ್ಟು ಬಾರಿ ಬಿಟ್ಟುಕೊಡುವುದಿಲ್ಲ?

ಶ್ರೀಕೃಷ್ಣನು ರುಚಿಯಾದ ಭಕ್ಷ್ಯಭೋಜ್ಯ ತಯಾರಿಸಿ ಕಾದುಕೊಂಡಿದ್ದ ದುರ್ಯೋಧನನ ಮನೆಗೆ ಊಟಕ್ಕೆ ಹೋಗದೆ ಬಡವನಾದ ವಿದುರರ ಮನೆಗೆ ಹೋಗಿ ಕದನ್ನವನ್ನು ತಿಂದದ್ದು ಏಕೆ? ಶ್ರೀಕೃಷ್ಣನಿಗೆ ಅದೇ ಮಾನಸಿಕ ಸುಖ ನೀಡಿತು. ರಾಣಾ ಪ್ರತಾಪನಿಗೆ ದಾಸ್ಯತೆಯ ಸುಖಭೋಗಕ್ಕಿಂತ ಸ್ವಾತಂತ್ರ್ಯದ ಒಣರೊಟ್ಟಿಯೇ, ಹುಲ್ಲು ಹಾಸಿಗೆಯೇ, ಸುಖಸಮಾಧಾನ ನೀಡಿತು. ಧ್ಯೇಯವಾದಿಗಳಿಗೆ ಧ್ಯೇಯಪ್ರಾಪ್ತಿಯೂ, ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ವಾತಂತ್ರ್ಯದ ಸಾಧನೆಯೂ ಅಸೀಮ ಆನಂದ ನೀಡುತ್ತವೆ. ಅವರಿಗೆ ಆ ಮಾರ್ಗದಲ್ಲಿ ಸಿಗುವ ಕಷ್ಟ ಸಂಕಟಗಳೇ ಆನಂದ ತಂದುಕೊಡುತ್ತವೆ. ಹೀಗೆ ಪ್ರತಿಯೊಬ್ಬನ ಬದುಕಿಗೂ ಒಂದೊಂದು ಗುರಿ ಇರಬಹುದು. ಅವರೆಲ್ಲರೂ ಆನಂದ ಕಾಣುವುದು ಅದರ ಪ್ರಾಪ್ತಿಯಲ್ಲೇ.

ಮನುಷ್ಯರು ಅವರವರ ಪ್ರಕೃತಿಗೆ ತಕ್ಕಂತೆ ವಿವಿಧ ವಿಷಯಗಳಲ್ಲಿ ಸುಖವನ್ನು ಕಾಣುತ್ತಾರೆ. ಬುದ್ಧಿ, ಮನಸ್ಸು, ಶರೀರ– ಈ ಮೂರರ ಪಾತ್ರವೂ ಇದರಲ್ಲಿದೆ. ಪರಿಶುದ್ಧ ಬುದ್ಧಿಯಿಂದ ಗ್ರಹಣ ಮಾಡಿದ ಕೆಲಸ ಸಾತ್ತ್ವಿಕವಾದುದು. ಬುದ್ಧಿ ಗ್ರಾಹ್ಯವಲ್ಲದೆ ಕೇವಲ ಮನಸ್ಸಿಗೆ ಹಿತವೆಂದು ಮಾಡಿದುದು ರಾಜಸಿಕ ಕರ್ಮ. ಇವೆರಡೂ ಇಲ್ಲದೆ ಕೇವಲ ಪ್ರಮಾದದಿಂದ, ಮೋಹ, ಅಜ್ಞಾನ, ಅಹಂಕಾರಗಳಿಂದ ಮಾಡುವ ಕೆಲಸ ತಾಮಸಿಕವಾದದ್ದು. ಮನುಷ್ಯನಿಗೆ ನೈಜ ಆನಂದ ಸಿಗುವುದು ಸಾತ್ತ್ವಿಕ ಕ್ರಿಯೆಯಿಂದಲೇ. ತುಲಸೀದಾಸರು ತಮ್ಮ ಹೆಂಡತಿಯ ಮೇಲಿನ ಮೋಹದಿಂದ ಆಕೆಯ ಗಾಳಿಮಳೆಯ ನಿಶಿರಾತ್ರಿಯಲ್ಲೂ ಹುಡುಕಿಕೊಂಡು ಹೋದದ್ದು ತಾಮಸಿಕ ಕ್ರಿಯೆ; ಅನಂತರ ಅವುಗಳನ್ನು ಗೆದ್ದು ಬುದ್ಧಿಪೂರ್ವಕವಾಗಿ ತಮ್ಮನ್ನು ತಾವು ಶ್ರೀರಾಮನಿಗೆ ಅರ್ಪಿಸಿಕೊಂಡದ್ದು ಸಾತ್ತ್ವಿಕ ಕ್ರಿಯೆ. ಈ ಮೂಲಕ ಅವರಿಗೆ ನೈಜ ಆನಂದ ದೊರೆಯಿತು. ಸಾತ್ತ್ವಿಕ ಕ್ರಿಯೆಯಿಂದ ಮನುಷ್ಯನ ವಿಕಾಸವೂ ಆಗುವುದಲ್ಲದೆ, ಸ್ವಾಭಾವಿಕವಾಗಿಯೇ ನೈಜ ಆನಂದ ದೊರಕುತ್ತದೆ.

### ವಿಕಾಸದೊಂದಿಗೆ ಆನಂದ

ಮೊಗ್ಗು ಅರಳಿ ಹೂವಾದಾಗ ಅದು ಪೂರ್ಣ ವಿಕಾಸ ಹೊಂದಿರುತ್ತದೆ. ವ್ಯಕ್ತಿಯೂ ಅದರಂತೆಯೇ. ತನ್ನ ಪೂರ್ಣ ವಿಕಾಸ ಮಾಡಿಕೊಳ್ಳುವವರೆಗೂ ಆತ ವಿರಮಿಸಬಾರದು. ನೈಜ ಆನಂದ ದೊರೆಯುವುದು ಆಗಲೇ. ಬೀಜ ವೃಕ್ಷವಾಗಿ ಬೆಳೆದಾಗಲೇ ಅದರ ಅಂತಸ್ಸತ್ತ್ವ ಅರಳಿ ಹೊರಗಡೆ ಪ್ರಕಟವಾಗುತ್ತದೆ ಎನ್ನಬಹುದು. ಹೀಗೆ ವ್ಯಕ್ತಿಯೂ ವಿಕಸಿತನಾದಾಗಲೇ ಅವನಿಗೆ ಆನಂದ ದೊರಕುತ್ತದೆ. ಈ ಮಾರ್ಗದಲ್ಲಿ ಅವನಿಗೆ ನೆರವಾಗಿ ಅವನ ಸಾತ್ತ್ವಿಕ ಗುಣಗಳನ್ನು ಬೆಳೆಸುವುದು ಸಂಸ್ಕೃತಿ. ವ್ಯಕ್ತಿಯು ತನ್ನ ವಿಕಾಸದ ಜೊತೆಗೆ ಪ್ರಕೃತಿಯೊಡನೆ ಸಮರಸವಾಗಿ ಜೀವನ ನಡೆಸಿದಾಗ ಸಂಸ್ಕೃತಿ ಮತ್ತೂ ಅರಳುತ್ತದೆ. ಏಕೆಂದರೆ ನಮ್ಮ ಸಂಸ್ಕೃತಿಯು ಸೃಷ್ಟಿಯೊಡನೆ ಏಕಾತ್ಮವಾಗಿ ಬಾಳಬೇಕೆಂದು ಬೋಧಿಸುತ್ತದೆ.

ವ್ಯಕ್ತಿಯ ವಿಕಾಸ ಹಾಗೂ ಪ್ರಕೃತಿಯೊಡನೆ ಅವನ ಸಾಮರಸ್ಯ– ಇವೆರಡಕ್ಕೂ ಅವನ ಮನಸ್ಸೇ ಆಧಾರ. ಮನಸ್ಸು ಅವನ ಅಂಕಿತದಲ್ಲಿದ್ದಾಗಲೇ ಇದು ಸಾಧ್ಯ. ಅಂಕಿತದಲ್ಲಿ ಇರಲಿಲ್ಲವೆಂದರೆ, ಕನ್ನಡಕ ಬೇಕೆಂದು ಕೇಳಿದಾಗ ಬೇರೊಂದು ಹೊಳೆಯುವ ವಸ್ತುವನ್ನು ಕೊಟ್ಟರೂ ತೃಪ್ತಿಪಡುವ ಚಿಕ್ಕ ಮಗುವಿನ ಮನಸ್ಸಿನಂತೆ ಅವನ ಸ್ಥಿತಿ ಆಗುತ್ತದೆ. ಮನುಷ್ಯನಿಗೆ, ಅವನು ದೊಡ್ಡವನಾದ ಮೇಲೂ ಸಹ ಮನಸ್ಸಿನ ಸಂಕಲ್ಪ–ವಿಕಲ್ಪಗಳು ಸ್ವಾಭಾವಿಕವೇ. ಆದರೆ ಧ್ಯೇಯವಾದಿಯು ತನ್ನ ಧ್ಯೇಯ ಮುಟ್ಟಲು ಇವುಗಳೊಡನೆ ಹೊಡೆದಾಡಬೇಕಾಗುತ್ತದೆ. ಸಾತ್ತ್ವಿಕ ಬುದ್ಧಿಯು ಇದಕ್ಕೆ ಸಹಾಯಕ ಆಗುವುದಾದರೂ ಮನಸ್ಸನ್ನು ದೃಢವಾಗಿಟ್ಟು ಸರಿ ತಪ್ಪುಗಳ ಯೋಗ್ಯ ನಿರ್ಣಯಕ್ಕೆ ಬರಲು 'ಸದಸದ್ವಿವೇಕ' ಆವಶ್ಯಕ. ಹೀಗೆ ಮನುಷ್ಯನನ್ನು ಸಾತ್ತ್ವಿಕನನ್ನಾಗಿಯೂ, ವಿವೇಕಯುತನನ್ನಾಗಿಯೂ ಮಾಡಿ ತನ್ನ ವಿಕಾಸದಿಂದ ನೈಜ ಸುಖವನನು ಪ್ರಾಪ್ತ ಮಾಡಿಕೊಳ್ಳುವಂತೆ ಅವನನ್ನು ಸಂಸ್ಕೃತಿ ಪ್ರೇರಿಸುತ್ತದೆ. ಭಾರತೀಯ ಸಂಸ್ಕೃತಿಗೆ ಈ ರೀತಿ ವ್ಯಾಖ್ಯೆ ಮಾಡಬಹುದೇ ಹೊರತು ಅದನ್ನು ನೃತ್ಯಗಾನಗಳೆಂದಾಗಲೀ ಭೌತಿಕ ಸುಖಸಾಧನಗಳೆಂದಾಗಲೀ ತಿಳಿಯಬಾರದು.

### ವಿವಿಧತೆಯಲ್ಲಿ ಏಕತೆಯ ದೃಷ್ಟಿ

ಮನುಷ್ಯನಲ್ಲಿ ಸಂಸ್ಕೃತಿಯ ಜೊತೆಜೊತೆಗೇ ಅವನವನ ಪ್ರಕೃತಿಯೂ ಇರುತ್ತದೆ. ಪ್ರಕೃತಿ ಎಂದಲ್ಲಿ ಸ್ವಭಾವ. ಪ್ರತಿಯೊಬ್ಬನ ಸ್ವಭಾವವೂ ಬೇರೆಬೇರೆಯೇ. ಇದು ಜನ್ಮತಃ ಬಂದುದೇ ಹೊರತು ಹೊಸದಾಗಿ ತಯಾರಿಸುವಂತಹದಲ್ಲ. ಮನುಷ್ಯನ ಭೌತಿಕ ದೇಹ ಹುಟ್ಟಿ ಬೆಳೆಯುವ ಜೊತೆ ಜೊತೆಗೇ ಅವನ ವಿಶಿಷ್ಟ ಪ್ರಕೃತಿಯೂ ಹುಟ್ಟಿ ಬೆಳೆಯುತ್ತದೆ. ಮನುಷ್ಯರೆಂದ ಮಾತ್ರಕ್ಕೆ ಎಲ್ಲರೂ ಒಂದೇ ಪ್ರಕೃತಿಯವರಲ್ಲ. ದೂರದಲ್ಲಿ ಬೆಟ್ಟ ನುಣ್ಣಗೆ ಕಾಣುತ್ತದೆ. ಅದರರ್ಥ ಅದರಲ್ಲಿ ಕಲ್ಲು



ಗಿಡಮರಗಳು ಇಲ್ಲವೆಂದಲ್ಲ. ಅವೆಲ್ಲ ಪ್ರತ್ಯೇಕವಾಗಿ ಕಾಣಬೇಕಾದರೆ ಹತ್ತಿರ ಹೋಗಬೇಕು. ಅಂತೆಯೇ ಮನುಷ್ಯ, ಪ್ರಾಣಿ, ಚರಾಚರಗಳ ಪ್ರಕೃತಿ ಬೇರೆಬೇರೆ. ಹತ್ತಿರದಿಂದ ನೋಡಿದಾಗ ಅವುಗಳ ವಿಭಿನ್ನರೂಪಗಳು ಕಾಣುತ್ತವೆ. ನಮಗೆ ಯೂರೋಪಿಯನರೆಲ್ಲ ಒಂದೇ ರೀತಿ ಕಾಣುತ್ತಾರೆ. ಏಕೆ? ಅವರಲ್ಲಿ ಭೇದಗಳಿಲ್ಲವೆಂದೇನು? ಅಲ್ಲಿನವರಿಗೂ ಅಷ್ಟೆ, ನಮ್ಮ ದೇಶದವರೆಲ್ಲಾ ಒಂದೇ ರೀತಿ ಕಾಣುತ್ತಾರೆ. ನಾಲ್ಕು ಜನ ಸೀಖರು ಕೆನಡಾದಲ್ಲಿ ವಾಸಿಸುತ್ತಿದ್ದರು. ಅಲ್ಲಿನವರಂತೆಯೇ ತಾವು ಇರಬೇಕೆಂದು ಯೋಚಿಸಿ ಕ್ಷೌರಿಕನ ಹತ್ತಿರ ಹೋದರು. ಅದೊಂದು ಚಿಕ್ಕ ಊರು. ಇದ್ದವನೂ ಒಬ್ಬನೇ ಕ್ಷೌರಿಕ. ಅದಕ್ಕಾಗಿ ಪ್ರತಿ ಭಾನುವಾರ ಒಬ್ಬೊಬ್ಬರಂತೆ ಅವರು ಕ್ಷೌರಕ್ಕಾಗಿ ಹೋಗುತ್ತಿದ್ದರು. ಬೇರೆಬೇರೆಯವರು ಪ್ರತಿ ವಾರ ಬಂದರೂ ಈ ಕ್ಷೌರಿಕನಿಗೆ ಪ್ರತಿ ವಾರವೂ ಒಬ್ಬನೇ ಇಷ್ಟಿಷ್ಟು ಕೂದಲು ಬೆಳೆಸಿ ಬರುತ್ತಾನೆಂದು ಅನಿಸಿ ಆಶ್ಚರ್ಯಚಕಿತನಾದನಂತೆ!

ಹೀಗೆ ಪ್ರತಿಯೊಬ್ಬನ ಪ್ರಕೃತಿ ಭಿನ್ನಭಿನ್ನವಿದ್ದರೂ ಒಂದೇ ರೀತಿ ಕಾಣುವ ಸಂದರ್ಭಗಳೂ ಇರುತ್ತವೆ. ಪ್ರಪಂಚದಲ್ಲಿರುವ ೩೫೦ ಕೋಟಿ ಜನರ ಕಣ್ಣುಗಳೂ ಬೇರೆ ಬೇರೆ ರೀತಿ ಇವೆಯಂತೆ! ಒಬ್ಬ ಕವಿ ಭಗವಂತನ ಮಹಿಮೆ ವರ್ಣಿಸುತ್ತಾ 'ಅವನ ಕುಲುಮೆ ಅದೆಷ್ಟು ವಿಚಿತ್ರವಾದುದು! ಎಷ್ಟು ತರಹ ಜನ, ಎಷ್ಟು ತರಹ ವಸ್ತು ಅವನು ಸೃಷ್ಟಿಸಿದ್ದಾನೆ' ಎಂದಿದ್ದಾನೆ. ಈ ಪ್ರಕೃತಿಭಿನ್ನತೆ, ವ್ಯಕ್ತಿವೈವಿಧ್ಯಗಳ ನಡುವೆಯೂ ತನ್ನ ಆಂತರಿಕ ಪ್ರೇರಣೆಯಿಂದ ಎಲ್ಲರೊಂದಿಗೆ ಜೊತೆಗೂಡಿ ಜೀವನ ನಡೆಸುವುದೇ 'ಸಂಸ್ಕೃತಿ'. ಇದರಲ್ಲಿ ಅವನು ಪರಿಣತನಾದಷ್ಟೂ ಅವನು ಸುಸಂಸ್ಕೃತನಾಗುತ್ತಾನೆ. ಪ್ರಕೃತಿ ದೈವದತ್ತವಾದುದು. ಸಂಸ್ಕೃತಿ ಮಾತ್ರ ಮಾನವ ನಿರ್ಮಿತವಾದದ್ದು.

### ವ್ಯಕ್ತಿ–ಸಮಾಜ ಸಮನ್ವಯ

ವ್ಯಕ್ತಿಗೆ ಒಂದು ಪ್ರಕೃತಿ ಅಥವಾ ಸ್ವಭಾವ ಇರುವಂತೆ ಸಮಾಜಕ್ಕೂ ಒಂದು ಪ್ರಕೃತಿ ಇರುತ್ತದೆ. ಆದರೆ ಮನುಷ್ಯನ ಪ್ರಕೃತಿ ಕಣ್ಣಿಗೆ ಕಾಣಿಸಿಕೊಂಡರೆ ಸಮಾಜದ ಪ್ರಕೃತಿ ಮಾತ್ರ ಹೊರನೋಟಕ್ಕೆ ಕಾಣಿಸದು. ಸಮಾಜವು ಕೇವಲ ವ್ಯಕ್ತಿಗಳ ಕೂಟವಲ್ಲ. ವ್ಯಕ್ತಿ–ಸಮಾಜಗಳ ನಡುವೆ ಒಂದು ದಿವ್ಯ ಚೈತನ್ಯ ಹರಿಯುತ್ತದೆ. ಈ ಚೈತನ್ಯದ ಅರಿವಾದಾಗಲೇ ವ್ಯಕ್ತಿಯು ಸಮಾಜದ ಸುಖದುಃಖಗಳನ್ನು ತನ್ನದೆಂದು ಕಾಣುತ್ತಾನೆ. ಈ ಸಜೀವ ಸಂಬಂಧವೇ ವ್ಯಕ್ತಿಯನ್ನು ಸಂಸ್ಕೃತಿಯುಕ್ತನನ್ನಾಗಿ ಮಾಡುತ್ತದೆ. ವ್ಯಕ್ತಿ ತನ್ನ ಪ್ರಕೃತಿಯಿಂದ ಮೇಲೆದ್ದು ಇಡೀ ಸಮಾಜವನ್ನು ಕುರಿತು ಯೋಚಿಸುವ, ಸಮಾಜದ ಸುಖದುಃಖದ ಸಂವೇದನೆಗಳಲ್ಲಿ ಒಂದಾಗುವ ಪ್ರೇರಣೆಯನ್ನು ಸಂಸ್ಕೃತಿ ನೀಡುತ್ತದೆ.

ವ್ಯಕ್ತಿ ಅಥವಾ ಸಮಾಜದಲ್ಲಿ ಸಮನ್ವಯ ತಪ್ಪಿ ವಿರೋಧ ಅಥವಾ ತಿಕ್ಕಾಟ ನಿರ್ಮಾಣವಾಗುವುದೇ ವಿಕೃತಿ. ಇದರಿಂದ ವ್ಯಕ್ತಿಯ ವಿಕಾಸಕ್ಕೆ ತಡೆ, ಸಮಾಜಕ್ಕೆ ಕೇಡು; ತನಗೆ ಬೇಕಾದುದಕ್ಕಿಂತ ಹೆಚ್ಚಾಗಿ ಒಬ್ಬ ತಿಂದಲ್ಲಿ ಅವನ ಆರೋಗ್ಯವೂ ಕೆಡುತ್ತದೆ; ಸಮಾಜದ ಇನ್ನೊಬ್ಬನಿಗೆ ಆಹಾರದ ಕೊರತೆಯೂ ಆಗುತ್ತದೆ. ಸೊರಗಿದ ಬರ್ನಾರ್ಡ್ ಷಾ ಮತ್ತು ದಪ್ಪ ಹೊಟ್ಟೆಯ ಚೆಸ್ಟರ್‌ಟನ್ ಇಬ್ಬರೂ ಒಮ್ಮೆ ಭೇಟಿ ಆದರಂತೆ. ಚೆಸ್ಟರ್ ಟನ್ನರು ಷಾ ಅವರನ್ನು 'ನೀವೇಕೆ ಸೊರಗಿದ್ದೀರಿ?' ಎಂದು ಪ್ರಶ್ನಿಸಿದರಂತೆ. 'ನಿಮ್ಮನ್ನು ನೋಡಿದರೆ ಉತ್ತರ ತಾನಾಗಿಯೇ ಸಿಗುತ್ತದೆ' ಎಂದರಂತೆ ಷಾ!

ಸಂಸ್ಕೃತಿಯು ಸಮಾಜದ ಹಾಗೂ ವ್ಯಕ್ತಿಯ ವಿಕೃತಿಯನ್ನು ತಡೆಗಟ್ಟಿ ಪ್ರಕೃತಿಯನ್ನು ಸ್ತಿಮಿತದಲ್ಲಿಡುತ್ತದೆ. ವ್ಯಕ್ತಿಗೆ ಸಮಷ್ಟಿಯ ಸಾಕ್ಷಾತ್ಕಾರ ಮಾಡಿಕೊಟ್ಟು, ವ್ಯಷ್ಟಿ ಮತ್ತು ಸಮಷ್ಟಿ ಈ ಎರಡರ ಪ್ರಕೃತಿಯೂ ಹೊಂದಿಕೊಂಡು ಬೆಳೆಯಲು ಸಹಾಯ ಮಾಡುತ್ತದೆ. ಎರಡರ ಸ್ವತಂತ್ರ ಅಸ್ತಿತ್ವವನ್ನೂ ಕಾಪಾಡುತ್ತದೆ. 'ಶಬ್ದ ಮೊದಲೋ ಅಕ್ಷರ ಮೊದಲೋ' ಎಂಬ ವಿವಾದಕ್ಕೆ ಉತ್ತರ ಹೇಳಲಾಗದಿದ್ದರೂ ಅವೆರಡರಲ್ಲಿ ಸಾಮಂಜಸ್ಯ ಅವಶ್ಯವಾಗಿರುವಂತೆ, ಸಮಾಜ ಮತ್ತು ವ್ಯಕ್ತಿ ಈ ಎರಡೂ ಒಂದನ್ನು ಬಿಟ್ಟು ಮತ್ತೊಂದು ಜೀವಿಸಲಾರದೆಂಬುದು ಸತ್ಯ. ಇವೆರಡೂ ಒಂದುಗೂಡಿಯೇ ತಮ್ಮ ಜೀವನ ಪರಮ ಗುರಿಯನ್ನು ಪ್ರಾಪ್ತಿ ಮಾಡಿಕೊಳ್ಳಬೇಕು. ಎರಡೂ ಪರಸ್ಪರ ಸಮನ್ವಯ ಸಾಧಿಸಲಾಗದಿದ್ದಲ್ಲಿ ಯಾವುದಕ್ಕಾದರೂ ಒಂದಕ್ಕೆ ಹಾನಿ ನಿಶ್ಚಿತ. ವ್ಯಕ್ತಿಯು ಪ್ರಬಲನಾದಾಗ ಸಮಾಜವನ್ನೂ ಸಮಾಜವು ಪ್ರಬಲವಾದಾಗ ವ್ಯಕ್ತಿಯನ್ನೂ ತುಳಿಯುವ ಅನುಭವ ಪಾಶ್ಚಾತ್ಯ ಸಮಾಜಗಳಲ್ಲಿ ಕಂಡುಬಂದಿದೆ. ಆದರೆ ವ್ಯಕ್ತಿಯು ವಾಸ್ತವಿಕವಾಗಿ 'ವ್ಯಷ್ಟಿ–ಸಮಷ್ಟಿ' ಈ ಎರಡೂ ರೀತಿಯ ಜೀವನವನ್ನು ಏಕಕಾಲಕ್ಕೇ ನಡೆಸಬಲ್ಲ. ಒಂದೇ ಕೆಲಸದಿಂದ ಎರಡರ ಹಿತವನ್ನೂ ಸಾಧಿಸಬಲ್ಲ. ವ್ಯಕ್ತಿಗತ ವ್ಯವಹಾರ ನಡೆಸುತ್ತಲೇ ಸಮಷ್ಟಿಜೀವನವನ್ನೂ ನಡೆಸಬಲ್ಲ. ಇದೇ ಸಂಸ್ಕೃತಿ. ಇದೇ ಭಾರತೀಯ ಜೀವನದ ವೈಶಿಷ್ಟ್ಯ.

**'ಸಾಮಾಜಿಕ ಒಪ್ಪಂದ'ದಲ್ಲಿ ಉತ್ತರವಿಲ್ಲ**

ಪಾಶ್ಚಿಮಾತ್ಯರಾದರೋ ಭಿನ್ನ ಭಿನ್ನ ಜನರು ತಮ್ಮ ತಮ್ಮ ಆವಶ್ಯಕತೆಗಳ ಪೂರೈಕೆಗಾಗಿ ಒಟ್ಟಾಗಿ ಬಂದು ಒಂದು ಸಮಾಜವಾಗಿ ಜೀವನ ನಡೆಸುವವರು ಎಂದು ನಂಬುತ್ತಾರೆ. ಪ್ರತಿಯೊಬ್ಬನೂ 'ಪರಾವಲಂಬಿ' ಆದುದರಿಂದ ಈ ಸಹಜೀವನ ಸಾಧ್ಯವಾಗಿದೆ ಎಂಬುದು ಅವರ ಸಿದ್ಧಾಂತ (Social Contract Theory). ರೈತನ ಬೆಳೆ ನೇಕಾರನಿಗೆ ಬೇಕು. ನೇಕಾರನ ಬಟ್ಟೆ ರೈತನಿಗೆ ಬೇಕು. ಹೀಗೆಯೇ ಒಬ್ಬನ ಉತ್ಪಾದನೆಯ ಮೇಲೆ ಮತ್ತೊಬ್ಬನು ಅವಲಂಬಿತನಾಗಿರುವುದೇ ಈ ಒಟ್ಟು ಜೀವನಕ್ಕೆ ಮೂಲ ಪ್ರೇರಣೆ ಎಂದು ಅವರು ನಂಬುತ್ತಾರೆ. ಅಂದರೆ ಕೇವಲ ಭೌತಿಕ ಆವಶ್ಯಕತೆಗಳು ಮಾತ್ರ ಒಂದು ಸಮಾಜದ ಜನರನ್ನು ಅನಿವಾರ್ಯವಾಗಿ ಒಟ್ಟುಗೂಡಿಸಿವೆಯೆಂದೂ ಇದು ಬಿಟ್ಟು ಮತ್ತಾವ ಆಂತರಿಕ ಸಂಬಂಧಗಳೂ ಇಲ್ಲವೆಂದೂ ಇದರ ಅರ್ಥ. ಸಮಾಜಜೀವನದ ಪ್ರತಿಯೊಂದು ಕ್ರಿಯೆಗೂ ಅದೇ ಪ್ರೇರಣೆ ಎನ್ನುತ್ತಾರೆ ಅವರು. ಬಂಡವಾಳ ಹೂಡಿಕೆ ಲಾಭಸಂಪಾದನೆಗೆ; ರೈತ ಬೀಜ ತೆಗೆದಿಡುವುದು ಮುಂದಿನ ಬೆಳೆಗೆ; ಒಬ್ಬನು ಇಂದು ಸಾಲಕೊಡುವುದು ಇನ್ನೊಬ್ಬನಿಂದ ತನಗೂ ನಾಳೆ ಸಾಲ ಸಿಕ್ಕಲಿ ಎಂಬ ಏಕಮಾತ್ರ ಉದ್ದೇಶದಿಂದ. ಇಂಥ ಪರಸ್ಪರ ಲಾಭವೃತ್ತಿಯ ಕಲ್ಪನೆಗಳೇ ಅವರ ಸಮಾಜ ಜೀವನಕ್ಕೆ ಆಧಾರ. ಅಂದರೆ ಇವೆಲ್ಲದರ ಮೂಲಪ್ರೇರಣೆ ಸ್ವಾರ್ಥವೇ ಎಂಬುದು ಸ್ಪಷ್ಟವಾಯಿತು.



ಆದರೆ, ಇನ್ನೂ ಒಂದೆರಡು ಹೆಜ್ಜೆ ಮುಂದೆ ಸಾಗಿ ಜೀವನವನ್ನು ವೀಕ್ಷಿಸಿದಲ್ಲಿ ಈ ವಾದದ ಜಳ್ಳು ಬಯಲಾದೀತು. ಒಬ್ಬನ ಮನೆಗೆ ಬೆಂಕಿ ಬಿದ್ದಾಗ ಆ ಮನೆಯವರ ಪ್ರಾಣರಕ್ಷಣೆಗಾಗಿ ಮತ್ತೊಬ್ಬನು ಧಾವಿಸುವುದನ್ನು ಇದು ಹೇಗೆ ಸಮರ್ಥಿಸೀತು? ಏಕೆಂದರೆ ಇದರಲ್ಲಿ ಆ ವ್ಯಕ್ತಿಯ ಸ್ವಾರ್ಥವಂತೂ ಅಡಗಿಲ್ಲ. 'The Boy Stood on the Buring Deck' ಎಂಬ ಇಂಗ್ಲಿಷ್ ಕವಿತೆಯನ್ನು ನಾವು ಓದಿರಬೇಕು. ಜಹಜು ಉರಿಯುತ್ತಿದ್ದರೂ ಆ ಹುಡುಗ ಅಲ್ಲೇ ನಿಂತಿದ್ದ. ಅದು ಶಿಸ್ತಿಗಾಗಿ ಎಂದರೂ ಅದರಲ್ಲಿ ಯಾವ ಸ್ವಾರ್ಥ ಅಡಗಿತ್ತು. ಅಮೆರಿಕಾದ ಸಿವಿಲ್ ಯುದ್ಧದ ಸಮಯದಲ್ಲಿ ಸೇತುವೆಯೊಂದಕ್ಕೆ ಬೆಂಕಿ ಹೊತ್ತಿಕೊಂಡು ಅದು ಮುರಿದು ಬೀಳುವುದರಲ್ಲಿತ್ತು. ಸ್ವಲ್ಪ ಹೊತ್ತಿನಲ್ಲಿ ಅದರ ಮೇಲೆ ರೈಲು ಬರುತ್ತದೆಂಬುದನ್ನು ತಿಳಿದ ಒಬ್ಬ ಹುಡುಗಿ ಮುಂದೆ ಹೋಗಿ ರೈಲು ನಿಲ್ಲಿಸಲು ಕೈ ತೋರಿಸಿದಳು. ಆದರೆ ರೈಲು ನಿಲ್ಲುವಂತೆ ಕಾಣಲಿಲ್ಲ. ತನ್ನ ಬೆರಳನ್ನೆ ಕಡಿದು ಅದರ ರಕ್ತದಿಂದ ಬಟ್ಟೆ ನೆನಸಿ ರೈಲಿನ ಮುಂದೆ ಹಿಡಿದಳು. ಆದರೂ ರೈಲು ನಿಲ್ಲಲಿಲ್ಲ. ಕಡೆಗೆ ತಾನೇ ರೈಲಿಗೆ ಅಡ್ಡಲಾಗಿ ನಿಂತಳು. ತುಂಡುತುಂಡಾಗಿ ಅವಳು ಕತ್ತರಿಸಿ ಬಿದ್ದಳು. ಈ ಅನಾಹುತ ಕಂಡ ಚಾಲಕ ರೈಲು ನಿಲ್ಲಿಸಿದ. ಆಗ ಅವನಿಗೆ ಮುಂದೆ ರೈಲಿಗೆ ಒದಗಲಿದ್ದ ಅನಾಹುತದ ಅರಿವಾಯಿತು.

ಇಂತಹ ಕ್ರಿಯೆಗಳ ಮೂಲದಲ್ಲಿ ವ್ಯಕ್ತಿಸ್ವಾರ್ಥ ಪೂರೈಸುವ ಯಾವ 'ಸಾಮಾಜಿಕ ಒಪ್ಪಂದ' ಇರಲು ಸಾಧ್ಯ? ರಂತಿದೇವನು ಸ್ವತಃ ಹಸಿವಿನಿಂದ ಕಂಗಾಲಾಗಿದ್ದ. ಅದೇ ಸಮಯಕ್ಕೆ ಅವನ ರೊಟ್ಟಿಯನ್ನು ನಾಯಿಯೊಂದು ಕಚ್ಚಿಕೊಂಡು ಓಡಿತು. ಆದರೆ ಅದನ್ನು ಅವನು ದೊಣ್ಣೆಯಿಂದ ಹೊಡೆಯದೆ 'ಬರೀ ಒಣ ರೊಟ್ಟಿ ಏಕೆ? ಸ್ವಲ್ಪ ಪಲ್ಯವನ್ನೂ ತೆಗೆದುಕೋ' ಎಂದು ನಾಯಿಯನ್ನು ಹಿಂಬಾಲಿಸಿದ. ಇದನ್ನು ಪಾಶ್ಚಾತ್ಯರ 'ಸಾಮಾಜಿಕ ಒಪ್ಪಂದ'ದ ಸಿದ್ಧಾಂತ ಹೇಗೆ ಸಮರ್ಥಿಸಬಲ್ಲದು?

**ಪಾಶ್ಚಾತ್ಯರ ಸಂಕುಚಿತ ದೇವರು**

ಪಾಶ್ಚಿಮಾತ್ಯರಲ್ಲಿ ಜೀವನಪದ್ಧತಿ ಹಾಗೂ ಸಂಸ್ಥೆಗಳಿಗೆ ಮತ್ತೊಂದು ಕಲ್ಪನೆಯೂ ಆಧಾರವಾಗಿ ಬಂದಿದೆ. 'ಜಗತ್ತಿನ ತಂದೆ ಈಶ್ವರ; ನಾವೆಲ್ಲರೂ ಅವನ ಮಕ್ಕಳು; ಆದ್ದರಿಂದ ನಾವು ಸಮಾನರು ಮತ್ತು ಬಂಧುಗಳು.' ಅದೇ, ನಮ್ಮ ಕಲ್ಪನೆ ಹೇಗಿದೆ? 'ಇಡೀ ಸೃಷ್ಟಿಯಲ್ಲಿ ಅಡಗಿರುವ ಸತ್ಯ ಒಂದೇ. ಅದರ ಆಧಾರದ ಮೇಲೆ ಜೀವಿಗಳೂ, ಪ್ರಕೃತಿಯೂ ಪರಸ್ಪರ ಆತ್ಮೀಯತೆಯ ಅನುಭೂತಿ ಪಡೆಯುತ್ತವೆ.' ಬಂಧುತೆ ಸಮಾನತೆಗಳವರೆಗೆ ಮಾತ್ರ ಪಾಶ್ಚಾತ್ಯರ ಕಲ್ಪನೆ ಮುಟ್ಟಿತು. ಏಕಾತ್ಮತೆಯ ಮಟ್ಟಕ್ಕೆ ಅವರು ಏರಲಾಗಲಿಲ್ಲ. ಸಕಲ ಸೃಷ್ಟಿಯೊಂದಿಗೆ ಏಕಾತ್ಮತೆಯಂತೂ ಅವರ ಕನಸು ಮನಸ್ಸಿನಲ್ಲೂ ಸುಳಿಯಲಿಲ್ಲ.

ಪರಮಾತ್ಮನ ಕುರಿತಾಗಿ ಸಹ ಅವರ ಚಿಂತನೆ ಹೆಚ್ಚು ಮುಂದುವರಿದಿಲ್ಲ. 'ಅವನೆಲ್ಲೋ ಕುಳಿತು ಇತರರನ್ನು ನಿಯಂತ್ರಿಸುತ್ತಿದ್ದಾನೆ' ಎಂದು ನಂಬಿದರೇ ಹೊರತು ಅವನು ಸರ್ವವ್ಯಾಪಿಯೆಂದು ಭಾವಿಸಲಿಲ್ಲ. ನಿಸರ್ಗದಲ್ಲಿ ಘಟಿಸುವ ಆದರೆ ತಮಗೆ ಅರ್ಥವಾಗದಂತಹದನ್ನೇ ಅವರು ದೇವರೆಂದು ಕರೆದರು. ಇದರಿಂದ ಅವರು ನಿಸರ್ಗವನ್ನೂ ಅರ್ಥಮಾಡಿಕೊಂಡಿಲ್ಲವೆಂದು ತಿಳಿಯುತ್ತದೆ. 'ಮಳೆ ಆಗುವ ವಿಧಾನ' ತಿಳಿಯುವವರೆಗೆ ಅದು 'ದೇವರೇ' ಆಗಿತ್ತು. ಈಗ ಅದು 'ದೇವರ'ಲ್ಲ. ೨೦ನೆಯ ಶತಮಾನದ ಸಂಶೋಧನೆಗಳಿಂದ ಹೊಸ ಹೊಸ ವಿಷಯ ಗೊತ್ತಾದಂತೆ ಅವರ ದೇವರ ಶಕ್ತಿಯೂ ಕಡಿಮೆ ಆಗುತ್ತಾ ಬಂದಿದೆ! ಹಿಂದೆ ಒಂದು ಸಮಯದಲ್ಲಿ ನಕ್ಷತ್ರಗಳು, ಗ್ರಹಣ, ಅವೆಲ್ಲವೂ ಅವರಿಗೆ ದೇವರೇ ಆಗಿತ್ತು. ಅವರಲ್ಲಿ ದೇವರನ್ನು ನಂಬಿದ ಕೆಲವರ ಪಾಡು ಹೀಗಾದರೆ ಮತ್ತೆ ಕೆಲವರು ಅವನ ಅಸ್ತಿತ್ವವನ್ನೇ ನಂಬುವುದಿಲ್ಲ.

ಈ ಸಣ್ಣ ಚೌಕಟ್ಟಿನೊಳಗೆ ದೇವರನ್ನು ಕೂಡಿಸಿರುವ ಅವರಿಗೆ ಸಮಾನತೆ, ಬಂಧುತೆಗಳೇ ಉಚ್ಚ ಆದರ್ಶವೆನಿಸಿದುದು ಆಶ್ಚರ್ಯವೇನಿಲ್ಲ. ಈ ಸಮಾನತೆಯ ಆಧಾರದ ಮೇಲೆ ಮುಂದುವರಿದ ಅವರು, ಎಲ್ಲರ ಗುಣ ಸಾಮರ್ಥ್ಯಗಳು ಒಂದೇ ಎಂದು ತೀರ್ಮಾನಿಸಿದರು. ಈ ರೀತಿ ಬಾಹ್ಯ ರೀತಿಯಲ್ಲಿ ಸಮಾನರು ಎಂದು ಭಾವಿಸಿದಲ್ಲಿ ಅದರ ಪರಿಣಾಮ ಏನಾದೀತು? ಎಲ್ಲರಿಗೂ ಒಂದೇ ನಿಯಮ ಮಾಡಿ ಅದರಂತೆ ಎಲ್ಲರಿಗೂ 'ನಾಲ್ಕು ರೊಟ್ಟಿ' ಸಮನಾಗಿ ಹಂಚಿದೆವೆನ್ನಿ. ಬಲಶಾಲಿಗೆ ಆ ನಾಲ್ಕು ರೊಟ್ಟಿ ಸಾಲದು. ಅವನ ಹಸಿವು ಇಂಗದು. ಬಲಹೀನ ಅದನ್ನು ತಿನ್ನಲಾರ, ತಿಂದರೆ ಅಜೀರ್ಣ ಆಗುತ್ತದೆ. ಈ ರೀತಿ ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ತೂಗಿದಲ್ಲಿ, ವ್ಯಕ್ತಿಗಳ ಗುಣ, ಸ್ವಭಾವ, ಕ್ಷಮತೆಗಳಲ್ಲಿ ವ್ಯತ್ಯಾಸ ಇರುವುದರಿಂದ ಅವರ ವಿಕಾಸ ಆಗಲಾರದು. ಈ ಸಮಾನತೆಯಿಂದ ಅವರು ಮೇಲೇಳುವ ಬದಲು ಪಾತಾಳಕ್ಕೇ ಇಳಿದಾರು!



**ಸ್ವಾರ್ಥದಿಂದ ಸಂಘರ್ಷ**

ಪಾಶ್ಚಿಮಾತ್ಯರ ಎಲ್ಲ ಪ್ರಯತ್ನಗಳೂ ಮನುಷ್ಯನಿಗೆ ಭೌತಿಕ ಸುಖ ತಂದು ಕೊಡಲು ಹುಟ್ಟಿಕೊಂಡವು. ಅವನ ಆಂತರ್ಯದ ಬಯಕೆ, ಸ್ವಭಾವಗಳನ್ನು ಗಮನಿಸುವ ತತ್ತ್ವಗಳೊಂದೂ ಅಲ್ಲಿ ಜನಿಸಿಲ್ಲ. ಈ ಸುಖದ ಆಧಾರ ಇಟ್ಟು ಕೊಂಡು ಜನಿಸಿದುದರಿಂದ ಪ್ರಜಾತಂತ್ರ ಸಾಮ್ಯವಾದಗಳಿಂದ ಮೊದಲ್ಗೊಂಡು ಸರ್ವಾಧಿಕಾರದವರೆಗೆ ಯಾವುದೂ ವ್ಯಕ್ತಿಗೆ ಮತ್ತೊಬ್ಬನ ಚಿಂತೆ ಮಾಡುವಂತೆ ಪ್ರೇರಣೆ ಕೊಡಲಿಲ್ಲ. ಅವರ ಆರ್ಥಿಕ ರಂಗಕ್ಕೂ ಇದೇ ಪ್ರೇರಣೆಯಾಯಿತು. ೧೫ ರೂ.ಗೆ ಮಾರಾಟವಾಗುವ ಪಂಚೆಯಿಂದ ಮಾಲಿಕನಿಗೆ ೧೦ ರೂ.ಗಳೂ ಕೂಲಿಗಾರನಿಗೆ ೫ ರೂ.ಗಳೂ ಸಿಕ್ಕಿತೆನ್ನಿ. ಆಗ ಮಾಲಿಕನು ಇನ್ನೂ ಹೆಚ್ಚು ಸಿಗಲೆಂದು ಆಶಿಸುತ್ತಾನೆ; ಕಾರ್ಮಿಕನೂ ಅಷ್ಟೆ, ತನಗೆ ಇನ್ನೂ ಹೆಚ್ಚು ಸಿಗಲೆಂದು ಆಶಿಸುತ್ತಾನೆ. ಅದಕ್ಕಾಗಿ ಪರಸ್ಪರ ವಿರೋಧ ತಿಕ್ಕಾಟಗಳು ನಿರಂತರ ನಡೆಯುತ್ತವೆ. ಇದರಲ್ಲಿ ಸಮನ್ವಯದ ದೃಷ್ಟಿಕೋನದ ಅರಿವೇ ಅವರಿಗಿಲ್ಲ. ಕೇವಲ ಸ್ವಾರ್ಥಸಾಧನೆಯ ಮನೋಭೂಮಿಕೆಯೇ ಎರಡರಲ್ಲೂ ಇದೆ. ಇದು ಮಾನವತೆ ಆಗಲಾರದು.

**ಆತ್ಮೀಯತೆಯಿಂದ ಲೋಕಹಿತ**

ಸರ್ವಸೃಷ್ಟಿಯಲೂ ಸರ್ವತ್ರ ವ್ಯಾಪಿಸಿರುವವನು ಈಶ್ವರ; ಆದ್ದರಿಂದ ಸೃಷ್ಟಿಯ (ಮನುಷ್ಯರ, ಪ್ರಾಣಿಗಳ, ನಿಸರ್ಗದ) ಸೇವೆಯೇ ಈಶ್ವರನ ಸೇವೆ ಎಂದು ನಾವು ಭಾವಿಸಿದ್ದೇವೆ. ಇದರಲ್ಲಿ ಪ್ರತಿಫಲಾಪೇಕ್ಷೆ ಇಲ್ಲ. ಕೇವಲ ಆತ್ಮೀಯತೆಯೇ ಇದಕ್ಕೆ ಆಧಾರ.

ವ್ಯಕ್ತಿಗೆ ಈ ಆತ್ಮೀಯತೆಯ ಅನುಭವ ಹೇಗೆ ಬರಬೇಕು? ಪಂಚಾಯತಿ, ಜಾತಿ, ಸಮಾಜ, ರಾಷ್ಟ್ರ ಮುಂತಾದವಕ್ಕೆ ಕ್ರಮಕ್ರಮವಾಗಿ ಸೇವೆ, ತ್ಯಾಗ ಸಲ್ಲಿಸುವ ಮೂಲಕ. ಇವುಗಳೆಲ್ಲವೂ ಆತ್ಮೀಯತೆಗೆ ಪೋಷಕವಾಗಿವೆಯೇ ಹೊರತು ಭೇದಜನಕವಾದವಲ್ಲ. ಅವು ವ್ಯವಸ್ಥೆಗಳೇ ಹೊರತು ಭೇದಗಳಲ್ಲ. ಕೇವಲ ಮಾನವ ಸಮಾಜದೊಂದಿಗೆ ಮಾತ್ರವಲ್ಲ, ಪ್ರಾಣಿಗಳೊಂದಿಗೆ ಸಹ ಆತ್ಮೀಯತೆಯಿಂದ ನಡೆದುಕೊಳ್ಳುವ ಪಾಠ ನಮಗೆ ಸಿಕ್ಕಿದೆ. ಮನೆಯಲ್ಲಿರುವ ಹಸುವನ್ನು ಉಪಯುಕ್ತವಾಗಿರುವವರೆಗೆ ಸಾಕಿ, ಅದು ಅನುಪಯೋಗಿಯಾದ ಮೇಲೆ ಹೊರಗಟ್ಟುವುದಿಲ್ಲ; ಅದಕ್ಕೂ ನಾವು ಆಹಾರ ನೀಡುತ್ತೇವೆ. ಮನೆಯಲ್ಲಿರುವ ಬೆಕ್ಕು, ನಾಯಿಗಳೂ ನಮ್ಮವೇ, ಪ್ರಕೃತಿಯೂ ನಮ್ಮದೇ. ಹೀಗೆ ಎಲ್ಲರಲ್ಲಿಯೂ ಆತ್ಮೀಯತೆಯನ್ನೇ ನಾವು ಬೆಳೆಸಿಕೊಂಡು ಬಂದಿದ್ದೇವೆ.

ಜಗತ್ತಿನ ಎಲ್ಲ ವ್ಯವಹಾರಗಳಲ್ಲೂ ವಿವಿಧತೆ ಕಂಡುಬಂದರೂ ಏಕಾತ್ಮತೆಯೇ ಅದರ ನಿಜವಾದ ಸೂತ್ರ. ಅದಕ್ಕಾಗಿಯೇ ಪರಸ್ಪರರಲ್ಲಿ ಆಕರ್ಷಣೆಯಿದೆ.

ಏಕಾತ್ಮತೆಯಿಂದಲೇ ನಮ್ಮ ಸಂಸ್ಕೃತಿಯು ವಿಕಸಿತವಾಗಲು ಕಾರಣವಾಗಿರುವ ಆತ್ಮೀಯತೆಯೂ ಹುಟ್ಟಿದೆ. ಆತ್ಮೀಯತೆಯಿಂದಲೇ ಸಂಸ್ಕೃತಿಯು ಸರ್ವಸ್ತರಗಳಲ್ಲೂ ವಿಕಾಸ ಸಾಧಿಸಿದೆ. ಪಾಶ್ಚಿಮಾತ್ಯರ 'ಸಮಾನತೆ'ಯಲ್ಲಿ ಅಧಿಕಾರದ ಕಲ್ಪನೆ ನಿಹಿತವಾಗಿದ್ದರೆ, 'ಆತ್ಮೀಯತೆ'ಯಲ್ಲಿ ಅಭೇದತೆಯೂ, ಸೇವೆ ತ್ಯಾಗಗಳೂ ಅಡಗಿವೆ. ಭಾರತೀಯ ಪರಂಪರೆಯಲ್ಲಿ ವಿವಾಹವೂ ಒಂದು ಸಂಸ್ಕಾರ. ಪತಿ ಪತ್ನಿಯರು ಸಮಾನರಲ್ಲ, ಆತ್ಮೀಯರು. ಇಬ್ಬರೂ ಸೇರಿಯೇ ಒಂದು ಜೀವ. ಇದರಿಂದಲೇ ಜೀವನದ ಪರಿಪೂರ್ಣತೆ ಸಾಧಿಸಲು, ಈಶ್ವರನನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಗೀತೆಯಲ್ಲಿ 'ನಿನ್ನ ಮಾತು, ಕೃತಿ, ಸರ್ವಸ್ವವನ್ನೂ ನನಗೆ ಅರ್ಪಿಸು, ನಿನ್ನ ಯೋಗಕ್ಷೇಮ ನನ್ನ ಜವಾಬ್ದಾರಿ. ಎಲ್ಲ ಕರ್ಮಗಳೂ ಯಜ್ಞ, ಎಲ್ಲ ಕರ್ಮಗಳನ್ನೂ ಲೋಕಕಲ್ಯಾಣಕ್ಕಾಗಿ ಮಾಡು' ಎಂದೇ ಹೇಳಿದೆ.

ನಮ್ಮ ಆರ್ಥಿಕ ವ್ಯವಸ್ಥೆ ರಚಿತವಾಗಿರುವುದೂ ಇದೇ ದೃಷ್ಟಿಕೋನದಿಂದಲೇ. ನಿಃಸ್ವಾರ್ಥ, ಸಮಾಜನಿಷ್ಠ ಕರ್ಮದ ಪ್ರೇರಣೆಯೇ ಅದರಲ್ಲಿ ಅಡಗಿದೆ. 'ನಿಷ್ಠೆಯಿಂದ ನಿನ್ನ ಕರ್ಮ ಮಾಡು, ಕರ್ಮಫಲದ ಚಿಂತೆ ಬಿಡು' ಎಂದು ಶ್ರೀಕೃಷ್ಣ ಅರ್ಜುನನಿಗೆ ಹೇಳಿದುದರ ಅರ್ಥ ಇದೇ. ನಮ್ಮಲ್ಲಿ ಪಶ್ಚಿಮದಲ್ಲಿರುವಂತೆ ಜೀವನದ ಮೂಲ್ಯಾಂಕವು (Standard of Life) ರೂ. ಪೈಸೆಗಳಲ್ಲಿಲ್ಲ. ಕರ್ಮಫಲದ ಮೌಲ್ಯವನ್ನು ಕಂಡು ಹಿಡಿಯುವುದಂತೂ ಅಸಾಧ್ಯ. ಮಾತೃಭೂಮಿಯನ್ನು ಸಂರಕ್ಷಿಸುವ ಸೈನಿಕ, ತನ್ನ ಪ್ರಾಣದ ಬೆಲೆಯನ್ನು ತೆತ್ತಾದರೂ ದೇಶವನ್ನು ರಕ್ಷಿಸುವುದು ಸ್ವಕರ್ಮದ ಪಾಲನೆಗಾಗಿಯೇ ಹೊರತು ಕೇವಲ ಹಣ ಗಳಿಕೆಗಾಗಿ ಅಲ್ಲ. ಸೈನಿಕ ಪ್ರಾಣ ನೀಡುವುದನ್ನು 'ದುಡಿತದಷ್ಟು ಧನ'ದ ಆಧಾರದ ಮೇಲೆ ನಿಂತಿರುವ ಸಾಮ್ಯವಾದ ವಿವರಿಸಲಾರದು. ಹಾಗಾಗಿದ್ದಲ್ಲಿ ಧನ ಹೆಚ್ಚು ಸಿಕ್ಕಿದಾಗ ಅವನು ಶತ್ರುಪಕ್ಷವನ್ನು ಸೇರುತ್ತಿದ್ದನು; ಸ್ವಕರ್ಮದ ಮಾರ್ಗವನ್ನು ತೊರೆಯುತ್ತಿದ್ದನು. ತನ್ನ ಕರ್ಮ ಮಾಡದ ಅರ್ಜುನನನ್ನು ಶ್ರೀಕೃಷ್ಣ 'ಅನಾರ್ಯಜುಷ್ಟ' ಎಂದು ಜರೆದಿದ್ದಾನೆ. ನಮ್ಮ ಕೃಷಿಕ ತನಗೆ ಸಾಕಷ್ಟು ಹಣ ದೊರೆಯದಿದ್ದರೂ ಬೇಸಾಯವು ಭೂಮಿತಾಯಿಯ ಸೇವೆಯೆಂದು ಅದಕ್ಕೆ ಅಂಟಿ ನಿಲ್ಲುತ್ತಾನೆ. ಸಮಾಜದ ಸ್ಥಿರತೆಗಾಗಿ ಬಂಡವಾಳದಾರ, ಕೂಲಿಗಾರ, ಅಧ್ಯಾಪಕ, ರೈತ ಮುಂತಾಗಿ ಎಲ್ಲರೂ ತಮ್ಮ ತಮ್ಮ ಕರ್ತವ್ಯ ಕರ್ಮಗಳ್ನು ಮಾಡಬೇಕು. ಇದೇ ನಮ್ಮ ಜೀವನಸೂತ್ರ. ನಮ್ಮ ಪೂರ್ವಜರು ಈ ಆಧಾರದಿಂದಲೇ ಸರ್ವಕರ್ಮಗಳನ್ನೂ ನಡೆಸುತ್ತಿದ್ದರು.

ಮುಸಲ್ಮಾನರು ಮತ್ತು ಕ್ರೈಸ್ತರ ಕರ್ತವ್ಯ ಕರ್ಮಗಳು ಫಲಾಪೇಕ್ಷೆಯ ಹೇತುವಿನಿಂದ ಜರುಗುತ್ತವೆ. ಕಯಾಮತ್ ಅಥವಾ Day of Judgementನಂದು, ತಾವು ಮಾಡಿರುವ ಕೆಟ್ಟ ಕೆಲಸಕ್ಕೆ ಕೆಟ್ಟ ಫಲವೂ, ಉತ್ತಮ ಕೆಲಸಕ್ಕೆ ಉತ್ತಮ



ಫಲವೂ ದೊರಕುತ್ತದೆ ಎಂದು ಅವರು ನಂಬುತ್ತಾರೆ. ಉತ್ತಮ ಫಲ ಸಿಗಲೆಂದು ಆಶಿಸಿ ಉತ್ತಮ ಕರ್ಮ ಮಾಡುತ್ತಾರೆ. ಇದು ವ್ಯಾಪಾರೀ ವೃತ್ತಿಯ ಸ್ವಾರ್ಥೀ ವಿಚಾರವೇ ಹೊರತು ಸಮಾಜದ ಬಗೆಗೆ ಆತ್ಮೀಯತೆ ಅದರಲ್ಲಿಲ್ಲ. 'ಇನ್ನೊಬ್ಬರಿಂದ ನೀನು ಏನನ್ನು ಅಪೇಕ್ಷಿಸುತ್ತೀಯೋ ಅದರಂತೆ ಇತರರಿಗೂ ಮಾಡು' ಎನ್ನುವುದೂ ಅವರ ಮತ್ತೊಂದು ಸೂತ್ರ! ಅವರ ಪ್ರಕಾರ ವಿವಾಹವು ಗಂಡು ಹೆಣ್ಣುಗಳಲ್ಲಿನ ಒಂದು ಒಪ್ಪಂದ, ಒಂದು ಸುಖದ ಸಾಧನ ಮಾತ್ರ. ಈ ರೀತಿ ಸ್ವಾರ್ಥಪ್ರೇರಿತ ವ್ಯವಹಾರದಿಂದ ನಿಜವಾದ ಸಂಸ್ಕೃತಿ ಎಂದಿಗೂ ನಿರ್ಮಾಣ ಆಗದು.

### ವ್ಯವಹಾರನಿಷ್ಠ ಅಧ್ಯಾತ್ಮ

ನಮ್ಮ ಸಂಸ್ಕೃತಿಯ ಇನ್ನೊಂದು ಮುಖವೆಂದರೆ ಆಧ್ಯಾತ್ಮಿಕತೆ. ಆಧ್ಯಾತ್ಮಿಕತೆ ಎಂದರೆ ಲೋಕದ ವ್ಯವಹಾರ ತ್ಯಜಿಸಿ ಕಾಡಿಗೆ ಹೋಗಿ ಮೂಗು ಹಿಡಿದು ಕೂರುವುದಿಲ್ಲ. ನಾವು ಆಧಿಭೌತಿಕ ಆಧಿದೈವಿಕ ಮತ್ತು ಆಧ್ಯಾತ್ಮಿಕಗಳೆಂಬ ಮೂರು ವಿಧದ ಶಕ್ತಿಯಿದೆ ಎಂದು ನಂಬುತ್ತೇವೆ. ಕಣ್ಣಿಗೆ ಕಾಣುವುದು ಆಧಿಭೌತಿಕ. ಆಧಿದೈವಿಕ ಶಕ್ತಿ ನಮ್ಮ ಕಣ್ಣಿಗೆ ಕಾಣಿಸದು; ಕಟ್ಟಿಗೆಯೊಳಗೆ ಅಡಗಿದ್ದು ಬೆಂಕಿ ಹೊತ್ತಿಸಿದಾಗ ಹೊರಬರುವ ಶಕ್ತಿಯಂತೆ ಅದು. ಪ್ರತಿಯೊಂದು ಶಕ್ತಿಯ ಹಿಂದೆ ಅಡಗಿರುವ ಮೂಲ ಚೈತನ್ಯವನ್ನು ಗುರುತಿಸುವುದೇ ಆಧ್ಯಾತ್ಮಿಕತೆ. ಆಧ್ಯಾತ್ಮಿಕತೆಗಾಗಿ ಉಳಿದೆರಡನ್ನು ತ್ಯಜಿಸಬೇಕಾಗಿಲ್ಲ. ತ್ಯಜಿಸಿದಲ್ಲಿ ಅವನು ಅವ್ಯವಹಾರಿ ಎನಿಸಿಕೊಳ್ಳುತ್ತಾನೆ. ಗಣಿತಜ್ಞನೊಬ್ಬ ಸಂತೆಗೆ ಹೋದಾಗ ಅಲ್ಲಿ ಅವನ ಸಂಖ್ಯಾಸೂತ್ರ (Theory of Numbers) ಉಪಯೋಗಕ್ಕೆ ಬಾರದು. ಅವನು ಸಾಮಾನ್ಯ ರೀತಿಯಲ್ಲೇ ಅಂದರೆ ೧, ೨, ೩... ಎಂದೇ ಎಣಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಅವು ಅವ್ಯವಹಾರಿಕ. ಜ್ಯೋತಿಷಿಯೊಬ್ಬ ಆಕಾಶಗಳ ತಾರೆಗಳನ್ನು ಎಣಿಸುತ್ತಾ ನೆಲ ನೋಡದೆ ನಡೆದರೆ ಬಾವಿಯಲ್ಲಿ ಬೀಳುತ್ತಾನೆ.

ಅದರಂತೆ ಆಧ್ಯಾತ್ಮಿಕವನ್ನು ಸಹ ವ್ಯವಹಾರ ಬಿಟ್ಟು ನಡೆಸಿದಲ್ಲಿ ಆಭಾಸಕ್ಕೆ ಎಡೆಗೊಡುತ್ತದೆ. ಭಗವಂತನೂ ತನ್ನ ಕಾರ್ಯಕ್ಕಾಗಿ ಭೌತಿಕ ದೇಹವನ್ನೇ– ಈ ಲೋಕದ ವ್ಯಾವಹಾರಿಕ ರೂಪವನ್ನೇ– ಧರಿಸಿ ಭೂಮಿಗೆ ಬರಬೇಕಾಗುತ್ತದೆ. ಆತ್ಮ, ಸತ್ಯ, ಶರೀರ ನಶ್ವರ; ಆದರೂ ಆತ್ಮ ಕ್ರಿಯಾಶೀಲವಾಗುವುದು ಶರೀರದ ಮುಖಾಂತರವೇ. ಒಳ್ಳೆಯದು–ಕೆಟ್ಟದ್ದರ ಅರಿವಾಗುವುದೂ ಶರೀರದ ಮೂಲಕವೇ. ಜೀವನವು ಒಂದು ನಾಟಕವಾದರೂ, ಪ್ರತಿ ಪಾತ್ರದಾರನೂ ತನ್ನ ಪಾತ್ರವನ್ನು ಒಪ್ಪವಾಗಿ ಸಹಜವಾಗಿ ನಿರ್ವಹಿಸಿದಾಗಲೇ ಆ ನಾಟಕ ಯಶಸ್ವಿಯಾಗುತ್ತದೆ. ಅಲ್ಲಿನ ರಾಜ, ಮಂತ್ರಿಗಳು 'ರಾಜ, ಮಂತ್ರಿ'ಗಳಂತೆಯೇ ವ್ಯವಹರಿಸಬೇಕು. ಕೇವಲ ರಾಮ–ರಾಮ, ಕೃಷ್ಣ–ಕೃಷ್ಣ ಎಂದು ಜಪಿಸುವುದು ಆಧ್ಯಾತ್ಮಿಕವೆನ್ನುವುದಾದರೆ,

ಶ್ರೀರಾಮನ ನಂತರ ಜನಿಸಿದ ಶ್ರೀಕೃಷ್ಣನು ಕೇವಲ 'ರಾಮನಾಮ' ಜಪ ಮಾಡುತ್ತಾ ಒಂದೆಡೆ ಕೂಡದೆ ಜೀವನಪೂರ್ತಿ ಧರ್ಮಸಂಸ್ಥಾಪನೆಯಲ್ಲೇಕೆ ನಿರತನಾಗುತ್ತಿದ್ದ? ಇದೇ ಮಾನವಜೀವನದ ಮುಂದಿರುವ ಶ್ರೇಷ್ಠ ಆದರ್ಶ. ಮಾನವರಿಗಾಗಿ ಜನಿಸಿದ ಮೇಲೆ ಮಾನವಜೀವನದ ಧರ್ಮಕ್ಕನುಗುಣವಾಗಿಯೇ ನಮ್ಮ ಕರ್ಮಗಳನ್ನು ಜರುಗಿಸಬೇಕು. ಇದೇ ಉಚ್ಚ ಸ್ತರದ ಆಧ್ಯಾತ್ಮಿಕತೆ. ನಾಟಕಕ್ಕೆ ಒಂದು ಕಥೆ ಆಧಾರಿತವಾಗಿರುವಂತೆ ಮಾನವಸಮಾಜವೂ ಒಂದು ಜೀವನವ್ಯವಸ್ಥೆಯನ್ನು ಆಧರಿಸಿದೆ. ನಾಟಕ ಆಡುವಾಗ ವಿವಿಧ ದೃಶ್ಯಗಳು ಗಮನದಲ್ಲಿರಬೇಕಾದಂತೆ, ಜೀವನವ್ಯವಸ್ಥೆಯ ವಿವಿಧ ಭಾಗಗಳನ್ನು ಅರ್ಥಮಾಡಿಕೊಂಡೇ ನಾವು ಬಾಳ ಬೇಕಾಗುತ್ತದೆ.

ಭೌತಿಕತೆ ಬಿಟ್ಟು ಆಧ್ಯಾತ್ಮಿಕತೆಯೊಂದೇ ಬದುಕಲಾರದು. ಭೌತಿಕತೆ ನಿಂತಲ್ಲಿಂದ ಆಧ್ಯಾತ್ಮಿಕ ಮುಂದುವರಿಯುತ್ತದೆ. ಸಾವಿರಾರು ವರ್ಷಗಳಿಂದ ನಡೆದು ಬಂದಿರುವ ನಮ್ಮ ಪರಂಪರೆ, ಜೀವನಪದ್ಧತಿಗಳಲ್ಲಿ ಭೌತಿಕತೆ–ಆಧ್ಯಾತ್ಮಿಕತೆಗಳೆರಡೂ ಸಂಗಮಗೊಂಡಿದೆ.

ಇಂತಹ ಸಮಗ್ರ ಜೀವನ ದರ್ಶನವೇ ವಿಶ್ವಕ್ಕೆ ನಾವು ನೀಡಬೇಕಾದ ಕೊಡುಗೆ.



# ೭. 'ಸ್ವರಾಜ್ಯ'ದಿಂದ 'ಸ್ವರಾಷ್ಟ್ರ'ಕ್ಕೆ

'ರಾಷ್ಟ್ರ'ವು ಸ್ಥಾಯೀತತ್ತ್ವ. ರಾಜ್ಯವು ಅದರ ಸೇವೆಗಾಗಿ ಇರುವಂಥದು. ರಾಜ್ಯದ ಅಸ್ತಿತ್ವವೇ ಇಲ್ಲದಿದ್ದರೂ ರಾಷ್ಟ್ರವು ಅಸ್ತಿತ್ವದಲ್ಲಿರಬಲ್ಲದು. ರಾಜ್ಯವಿಲ್ಲದ ಸಮಾಜ ಕೂಡ ರಾಜ್ಯವಿಲ್ಲದ ರಾಷ್ಟ್ರಜೀವನದ ಕಲ್ಪನೆಯೇ ಆಗಿರುತ್ತದೆ. ಸತ್ಯಯುಗದಲ್ಲಿ ಹೀಗೆಯೇ ಇತ್ತು. ಆಗ ಯಾವ ರಾಜನೂ ಇರಲಿಲ್ಲ; ರಾಜ್ಯವೂ ಇರಲಿಲ್ಲ; ಜನರು ಧರ್ಮದ ಆಧಾರದಿಂದಲೇ ಪರಸ್ಪರ ರಕ್ಷಣೆ ಮಾಡುತ್ತಿದ್ದರು.

**ನ ರಾಜ್ಯಂ ನೈವ ರಾಜಾऽऽಸೀತ್ ನ ದಂಡ್ಯೋ ನ ಚ ದಾಂಡಿಕಃ ।**
**ಧರ್ಮೇಣೈವ ಪ್ರಜಾಃ ಸರ್ವಾಃ ರಕ್ಷಂತಿ ಸ್ಮ ಪರಸ್ಪರಮ್ ॥**

ಆದರೆ ಬರಬರುತ್ತ ವ್ಯಕ್ತಿಯಿಂದ ಪ್ರಮಾದಗಳು ಘಟಿಸಿದಂತೆ ಸಮಾಜ ಜೀವನದಲ್ಲಿ ವಿಕಾರಗಳು ಉತ್ಪನ್ನವಾದವು. ಆ ವಿಕಾರಗಳಿಂದ ಸಮಾಜವನ್ನು ರಕ್ಷಿಸುವುದಕ್ಕಾಗಿ 'ರಾಜ್ಯ'ದ ಆವಶ್ಯಕತೆಯುಂಟಾಯಿತು. ಪಾಶ್ಚಾತ್ಯ ವಿಚಾರಶೀಲರು ಕೂಡ ರಾಜ್ಯವಿಲ್ಲದಿರುವ ಸ್ಥಿತಿಯ ಕಲ್ಪನೆಯನ್ನು ಮಾಡಿದ್ದಾರೆ. ಆ ಸಂದರ್ಭದಲ್ಲಿ ರಾಷ್ಟ್ರವೂ ಇಲ್ಲವಾಗುವುದೆ? ರಾಜ್ಯದೊಡನೆ ರಾಷ್ಟ್ರವೂ ತೀರಿಕೊಳ್ಳುವುದೆ? ಹಾಗೆ ಆಗಲಾರದು. ರಾಷ್ಟ್ರವು ಹಿಂದೆಯೂ ಇತ್ತು; ಮುಂದೆಯೂ ಇರುವುದು. ರಾಜಕೀಯ ಸತ್ತೆ ಇಲ್ಲದಿದ್ದರೂ ರಾಷ್ಟ್ರ ಉಳಿದೀತು.

### ರಾಜ್ಯಕ್ಕೆ ಆಧಾರ, ರಾಷ್ಟ್ರ

ಯಾವುದೇ ರಾಷ್ಟ್ರವು ದಾಸ್ಯದಲ್ಲಿರುವಾಗ ಅದರ ರಾಜ್ಯವಿರುವುದಿಲ್ಲ. ಇಲ್ಲಿ ಆಂಗ್ಲೇಯರಿದ್ದಾಗ 'ಬ್ರಿಟಿಷ್ ಸರಕಾರ'ದ ಶಾಸನ ಸತ್ತೆ ಇಲ್ಲಿತ್ತು, ಅವರ ರಾಜ್ಯವಿತ್ತು; ರಾಜ್ಯ ನಮ್ಮದಾಗಿರಲಿಲ್ಲ. ಅದು ನಮ್ಮ ರಾಷ್ಟ್ರದ ಸ್ವಂತವೆನಿಸುವ ರಾಜ್ಯವಾಗಿರಲಿಲ್ಲ. ಆದರೆ ರಾಜ್ಯ ಪರಕೀಯರದಾಗಿತ್ತೆಂದು ರಾಷ್ಟ್ರವೂ ಪರಕೀಯವಾಯಿತೇನು? ರಾಷ್ಟ್ರವು ಸ್ವಕೀಯವೇ ಆಗಿತ್ತು. ರಾಜ್ಯವೂ ರಾಜ್ಯದ ರೂಪಗಳೂ ಪರಿವರ್ತನೆ ಹೊಂದುತ್ತಿರುತ್ತವೆ. ಆದ್ದರಿಂದ ರಾಷ್ಟ್ರ ಮತ್ತು ರಾಜ್ಯ ಒಂದೇ ಎಂದು ಭಾವಿಸುವುದು ತಪ್ಪು. ರಾಷ್ಟ್ರದ ಆವಶ್ಯಕತೆಗಳನ್ನು ಈಡೇರಿಸುವುದಕ್ಕಾಗಿ ರಾಜ್ಯವು ಹುಟ್ಟುತ್ತದೆ ಎಂಬುದು ವಾಸ್ತವಿಕ ಸಂಗತಿ.

ರಾಷ್ಟ್ರವು ಶಕ್ತಿಶಾಲಿಯಾಗಿ ಇಲ್ಲದಿದ್ದರೆ ರಾಜ್ಯವು ಸ್ಥಾಯಿಯಾಗಿ ನಿಲ್ಲುವುದಿಲ್ಲ ಅಥವಾ ಪರಾಧೀನತೆ ಬಂದೆರಗುತ್ತದೆ. ನಾವು ಸ್ವರಾಜ್ಯಕ್ಕಾಗಿ ಹೋರಾಡುವ ಸಂದರ್ಭದಲ್ಲಿ, ಹಿಂದೆ ನಮ್ಮ ಕೈಯಿಂದ 'ಸ್ವರಾಜ್ಯ' ಹೇಗೆ ತಪ್ಪಿಹೋಯಿತು ಎಂಬ ಬಗ್ಗೆ ಆಲೋಚಿಸಿದೆವೇ ಹೇಗೆ? ನಮ್ಮಲ್ಲಿ ರಾಷ್ಟ್ರ ಭಾವ ಕಡಿಮೆಯಾದುದರಿಂದ, ರಾಷ್ಟ್ರೀಯ ದೃಷ್ಟಿ ಮಸಕಾದುದರಿಂದ, ಸಮಾಜಜೀವನವು ಅಸಂಘಟಿತವಾದುದರಿಂದ ನಾವು ಪರರ ಅಧೀನಕ್ಕೆ ಸಿಕ್ಕಿದೆವು. ಸಂಘಟಿತ ಸಮಾಜದಲ್ಲಿ ಮಾತ್ರವೇ ಪರಿಪೂರ್ಣ ರಾಷ್ಟ್ರೀಯ ಭಾವನೆ ಇರುತ್ತದೆ. ಆದುದರಿಂದ ಸಮಷ್ಟಿಭಾವವೇ, ರಾಷ್ಟ್ರಭಾವವೇ ವಾಸ್ತವಿಕವಾದ ಶಕ್ತಿ.

ರಾಷ್ಟ್ರವು ರಾಜ್ಯಕ್ಕೆ ಆಧಾರ. ರಾಷ್ಟ್ರವು ಶಕ್ತಿಶಾಲಿ ಆಯಿತೆಂದರೆ ರಾಜ್ಯ ಮಾತ್ರವಲ್ಲ, ಅಂತಹ ಇನ್ನೂ ಅನೇಕ ಸಂಸ್ಥೆಗಳೂ ಬದುಕಿರಬಲ್ಲವು. ರಾಜ್ಯವು ರಾಷ್ಟ್ರದ ಶಿಶು. ರಾಜ್ಯದಿಂದ ರಾಷ್ಟ್ರ ನಿರ್ಮಾಣವಾಗದು. ಇಂದು ನಮ್ಮ ಜನರಲ್ಲಿ ರಾಜ್ಯಕ್ಕಾಗಿ ರಾಷ್ಟ್ರವೋ ಅಥವಾ ರಾಷ್ಟ್ರಕ್ಕಾಗಿ ರಾಜ್ಯವೋ ಎಂಬ ಗೊಂದಲ ಇದೆ. ರಾಷ್ಟ್ರವೂ ರಾಜ್ಯವೂ ಸಮಾನವೆಂದು ಇಂದಿನ ಕೆಲವರ ಭಾವನೆ. ಕೇವಲ ಸಾಮಾನ್ಯರಲ್ಲ, ದೊಡ್ಡ ದೊಡ್ಡವರೂ ಸಹ ಈ ಭ್ರಮೆಗೆ ಸಿಕ್ಕಿದ್ದಾರೆ. ಆದರೆ ವಾಸ್ತವವಾಗಿ, ರಾಜ್ಯವು ರಾಷ್ಟ್ರದ ಪೂರ್ಣ ಸ್ವರೂಪವೂ ಅಲ್ಲ, ಸಮತತ್ತ್ವವೂ ಅಲ್ಲ.

## ರಾಜ್ಯದ ಪಾತ್ರ

ಈ ಭ್ರಮಪೂರ್ಣ ಕಲ್ಪನೆಯ ಒಂದು ಅಸಾಧು ಪ್ರಯೋಗವೆಂದರೆ 'ಸಂಯುಕ್ತ ರಾಷ್ಟ್ರ ಸಂಘ'. ಅಲ್ಲಿ ಬಂದು ಕುಳಿತವರು 'ರಾಜ್ಯ'ಗಳ ಪ್ರತಿನಿಧಿಗಳೇ ಹೊರತು ರಾಷ್ಟ್ರಗಳ ಪ್ರತಿನಿಧಿಗಳಲ್ಲ. ಯಾರಿಗೆ 'ಸ್ವರಾಜ್ಯ' ಸಿಕ್ಕಿದೆಯೋ ಆ ರಾಜ್ಯದ ಪ್ರತಿನಿಧಿಗಳು ಅಲ್ಲಿ ಸೇರುತ್ತಾರೆ. ಹೀಗೆ ಸಾಮಾನ್ಯವಾಗಿ ಜನರು ರಾಜ್ಯವನ್ನೂ ರಾಷ್ಟ್ರವನ್ನೂ ಒಂದೇ ಎಂದು ತಿಳಿಯುತ್ತಾರೆ.

ರಾಷ್ಟ್ರವು ಒಂದು ಸ್ಥಾಯೀ ಶಕ್ತಿ. ಅದು ಸಂಘಟಿತ ಸಮಾಜದ ಒಂದು ಸ್ವರೂಪ. ಸಮಾಜದಲ್ಲಿ ವಿಕೃತಿ ನಿರ್ಮಾಣವಾದೊಡನೆ ರಾಜ್ಯದ ಆವಶ್ಯಕತೆ ಕಂಡುಬರುತ್ತದೆ. ಉದಾಹರಣೆಗೆ ಎಲ್ಲಾದರೂ ಗಲಾಟೆ ಆಯಿತೆನ್ನಿ ಅಥವಾ ಅಂತಹ ವಾತಾವರಣ ನಿರ್ಮಾಣವಾಯಿತೆನ್ನಿ, ಆಗ ಮಾತ್ರ 'ಪೋಲೀಸ್' ಪಡೆ ಅಲ್ಲಿ ಆವಶ್ಯಕ. ವಿಕೃತಿ ಅಥವಾ ಜಟಿಲತೆ ಹೆಚ್ಚಾಗತೊಡಗಿದರೆ ಅದನ್ನು ಬಗೆಹರಿಸಲು ರಾಜ್ಯ ಬೇಕು. ಅನೇಕ ಬಾರಿ ಜನಗಳು ನಿಯಮಾನುಸಾರವಾಗಿ ಇರುವಾಗಲೂ ಜಟಿಲತೆ ಹುಟ್ಟಬಹುದು. ಅದನ್ನು ದೂರೀಕರಿಸುವುದು ರಾಜ್ಯದ ಹೊಣೆ. ಅದಕ್ಕಾಗಿ ಕೆಲವರಿಗೆ ದಂಡನೆಯನ್ನೂ ಕೊಡಬೇಕಾಗಬಹುದು.

ರಾಜ್ಯವು ಸಮಾಜದ ಸೇವಕ. ಆದುದರಿಂದ ಅದನ್ನು ಬದಲು ಮಾಡುವ



ಅಧಿಕಾರವೂ ಸಮಾಜಕ್ಕಿದೆ. ಪ್ರಜಾತಂತ್ರದಲ್ಲಿ ಚುನಾವಣೆಗಳಾಗಿ ಅದರ ಮೂಲಕ ಶಾಸನ ಬದಲಾಗಬಹುದು. ಅಂತೆಯೇ ಬೇರೆ ರೀತಿಯಲ್ಲೂ ರಾಜ್ಯ ಪದ್ಧತಿಗಳು ಬದಲಾಗಬಹುದು. ಆದರೆ, ರಾಷ್ಟ್ರವನ್ನು ಮಾತ್ರ ಯಾರೂ ಬದಲಾಯಿಸಲಾರರು. ಅದು ಸ್ಥಾಯಿ; ಅದು ಅಪರಿವರ್ತನೀಯ.

## ಇಂದಿನ ಗೊಂದಲ

ಈಚೆಗೆ ರಾಷ್ಟ್ರೀಕರಣದ ಚರ್ಚೆ ಬಹಳವಾಗಿದೆ. ವಸ್ತುತಃ ಇದು ರಾಷ್ಟ್ರೀಕರಣವೋ, ಸರಕಾರೀಕರಣವೋ? ರಾಷ್ಟ್ರದ ಘಟಕನಾದ ವ್ಯಕ್ತಿಯಿಂದ ಆಗುವ ಎಲ್ಲ ಕಾರ್ಯಗಳೂ ರಾಷ್ಟ್ರೀಯವಲ್ಲವೆ? ಯಾವುದನ್ನು ರಾಷ್ಟ್ರೀಕರಣ ಮಾಡಬೇಕಾಗಿದೆ? ಕೆಲಸ ಮಾಡುವ ಇತರರ ಹೃದಯದಲ್ಲಿ ರಾಷ್ಟ್ರಭಾವವಿಲ್ಲವೆ? ಈ ಶಬ್ದ ಒಂದು ತಪ್ಪಾದ ಪ್ರಯೋಗವಾಗಿದೆ. ಇದು ವಕೀಲನು ತನ್ನ ಕಕ್ಷಿಗಾರನ ಸೊತ್ತಿನ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಿದಂತೆಯೇ ಸರಿ. ರಾಜ್ಯವು ರಾಷ್ಟ್ರದ ಸರ್ವಸ್ವವನ್ನೂ ನುಂಗಿ ನೀರು ಕುಡಿದ ಈ ವೃತ್ತಿ ಸರಿಯಾದುದಲ್ಲ. ರಾಜ್ಯವು ರಾಷ್ಟ್ರ ಜೀವನದ ಅವಶ್ಯವಾದ ಅಂಗ; ಮಹತ್ತ್ವದ ಅಂಗವೂ ಹೌದು. ಆದರೆ ಅದೇ ಸರ್ವಸ್ವವಲ್ಲ. ಸರ್ವೇಸರ್ವವಾಗಿ ಯಾವುದಾದರೊಂದು ಇದ್ದರೆ ಅದು ರಾಷ್ಟ್ರವೇ. ಆದರೆ ರಾಷ್ಟ್ರವು ಬಲಹೀನವಾದರೆ ರಾಜ್ಯವು ಅದರ ಅಧಿಕಾರವನ್ನು ಸೆಳೆಯುವ ಮತ್ತು ಅದನ್ನೇ ನುಂಗುವ ಯತ್ನವನ್ನು ಮಾಡುತ್ತದೆ.

'ರಾಜ್ಯ' 'ರಾಷ್ಟ್ರ' ಒಂದೇ ಎನ್ನುವುದರ ಕಲ್ಪನೆ ಎಷ್ಟು ಗೊಂದಲಕ್ಕೆ ಎಡೆ ಕೊಡುತ್ತದೆ, ನೋಡಿ. ೧೯೩೭ರ ತನಕ ಬ್ರಹ್ಮದೇಶವು (ಬರ್ಮಾ) ಭಾರತದೊಡನೆ ಒಂದೇ ರಾಜ್ಯವಾಗಿ ಇತ್ತು. ಆ ಸಮಯದಲ್ಲಿ ಭಾರತದ ರಾಷ್ಟ್ರೀಯತೆಯಲ್ಲಿ ಬರ್ಮವೂ ಅಂತರ್ಗತವಾಗಿತ್ತು. ಅದು ಯಾವಾಗ ಬೇರೆ ರಾಜ್ಯವಾಗಿಹೋಯಿತೋ ಆಗ ಅದು ಭಾರತದ ರಾಷ್ಟ್ರೀಯತೆಯಲ್ಲಿ ಉಳಿಯಲಿಲ್ಲ. ಇಲ್ಲಿ ಏಳುವ ಪ್ರಶ್ನೆಯೆಂದರೆ ೧೯೩೭ರವರೆಗೆ ಭಾರತದ ರಾಷ್ಟ್ರೀಯರಾಗಿದ್ದ ಜನರಿಗೆ ಆಮೇಲೆ ರಾಷ್ಟ್ರೀಯತ್ವವೇ ಕೊನೆಗೊಂಡಿತೆ? ಪಾಕಿಸ್ತಾನ ನಿರ್ಮಾಣವಾದುದರಿಂದಲೂ ಇದೇ ಸಂಗತಿ ಆಯಿತು. ಈ ಕಲ್ಪನೆಯ ವಿಕೃತ ಹಾಗೂ ಯಥಾರ್ಥಹೀನ ಭೂಮಿಕೆಯ ಮೇಲೆ ನಿಂತಿದೆ.

ರಾಜ್ಯದ ಶಕ್ತಿ ಹೆಚ್ಚಾದಲ್ಲಿ ರಾಷ್ಟ್ರದ ಶಕ್ತಿಯೂ ತಾನಾಗಿ ಹೆಚ್ಚುತ್ತದೆ ಎನ್ನಲಾಗುವುದಿಲ್ಲ. ರಾಜ್ಯಶಕ್ತಿ ಬೆಳೆದು ರಾಷ್ಟ್ರ ಮಾತ್ರ ನಿಶ್ಶಕ್ತವಾಯಿತೆಂದರೆ ಅಪಾಯವಾಗುವುದು. ಆದ್ದರಿಂದ ನಮ್ಮ ದೃಷ್ಟಿಕೋನದಲ್ಲಿ ನಮ್ಮ ಸಂಪೂರ್ಣ ಜೀವನದ ಕೇಂದ್ರವೇ ರಾಷ್ಟ್ರ. ರಾಜ್ಯವು ಜೀವನದ ಕೇಂದ್ರ ಆಗಲಾರದು. ಅದು ಸಮಾಜದ ಸೇವಕ ಅಷ್ಟೆ. ರಾಜ್ಯಕ್ಕೆ ನಾವು ರಾಷ್ಟ್ರ ಜೀವನದ ಮೌಲ್ಯಗಳನ್ನು

ಬಲಗೊಡಲಾರೆವು. ನಮ್ಮ ಆದರ್ಶಗಳು ಕೊನೆಗೊಂಡರೂ ಚಿಂತೆಯಿಲ್ಲ, ರಾಜ್ಯ ಸಿಕ್ಕಿದರೆ ಸಾಕು' ಎಂಬ ಮಾತು ಸ್ವೀಕಾರಕ್ಕೆ ಯೋಗ್ಯವಲ್ಲ, ರಾಜ್ಯ ಬೇಕು, ಆದರೆ ಅದು ರಾಷ್ಟ್ರಕ್ಕಾಗಿ. ಇಂತಹ ಭಾವನೆ ಇದ್ದರೆ ಮಾತ್ರ ನಿಜವಾದ ಅರ್ಥವುಳ್ಳ ಸ್ವರಾಜ್ಯವಾಗುವುದು.

### ಸ್ವರಾಜ್ಯದ ಮೂರು ಸೂತ್ರಗಳು

ಸ್ವರಾಜ್ಯದ ವ್ಯಾಖ್ಯೆಯಲ್ಲಿ ಮೂರು ವಿಶೇಷಗಳು ಬರುತ್ತವೆ. ಒಂದು ಸ್ವಕೀಯ ರಾಷ್ಟ್ರದ ಅಂಗವಾಗಿರುವ ಜನರಿಂದಲೇ ನಡೆಸಲ್ಪಡುವ ರಾಜ್ಯ ಅದಾಗಿರಬೇಕು. ಎರಡನೆಯದಾಗಿ ಆ ರಾಜ್ಯದ ಶಾಸನವು ರಾಷ್ಟ್ರದ ಹಿತಕ್ಕಾಗಿ ನಡೆಯುತ್ತಿರಬೇಕು. ನಾವೇ ರಾಜ್ಯ ನಡೆಸುತ್ತಿದ್ದರೂ ಅದು ಅನ್ಯರ ಹಿತಕ್ಕಾಗಿ ನಡೆಯುತ್ತಿದ್ದರೆ ಅದು 'ಸ್ವರಾಜ್ಯ' ಅಲ್ಲ. ಮೂರನೆಯದಾಗಿ ನಮ್ಮ ಹಿತವನ್ನು ಕಾಯ್ದುಕೊಳ್ಳುವ ಸಾಮರ್ಥ್ಯವು ನಮ್ಮಲ್ಲಿರಬೇಕು. ನಾವೇನೋ ಹಿತ ಸಾಧಿಸಲು ಬಯಸುತ್ತೇವೆ. ಆದರೆ ಊಟಕ್ಕೆ ಅನ್ನವಿಲ್ಲ; ಅಮೇರಿಕದಿಂದ ಗೋಧಿ ಬಂದರೆ ಆಹಾರ ಕೊಡುತ್ತೇವೆ; ಹಣ ಹೊರಗಿಂದ ಬಂದರೆ ಕಾರಖಾನೆಗಳನ್ನು ತೆರೆಯುತ್ತೇವೆ; ಆಯುಧ ಸಾಮಗ್ರಿಗಳು ಹೊರಗಿನಿಂದ ಬಂದರೆ ದೇಶ ರಕ್ಷಣೆಯಾದೀತು– ಇಂತಹ ಸ್ಥಿತಿ 'ಸ್ವರಾಜ್ಯ'ವಲ್ಲ.

ಈ ಮೂರೂ ವಿಷಯಗಳು ಸಾಧ್ಯವಾಗಬೇಕಾದರೆ, ನಮ್ಮ ದೃಷ್ಟಿ ರಾಜ್ಯದಿಂದ (ನಾನೆನ್ನುತ್ತೇನೆ, ಸ್ವರಾಜ್ಯದಿಂದ) ತೊಲಗಿ ಸ್ವರಾಷ್ಟ್ರದ ಕಡೆಗೆ ಹೋಗ ಬೇಕು. ಸಾಮರ್ಥ್ಯವು ರಾಷ್ಟ್ರದಿಂದಲೇ ಬರುತ್ತದೆ. ಅದೇ ಮೂಲ ಶಕ್ತಿ, ಅದೇ ಆಧಾರ.



## ೮. ಸಂಘಟನೆಯ ಆಧಾರ

ನಮ್ಮಲ್ಲಿ ಸಮಾಜದ ಸಂಘಟನೆಗಾಗಿ ಅನೇಕರಿಂದ ಅನೇಕ ವೇಳೆ ಪ್ರಯತ್ನಗಳು ನಡೆದಿವೆ. ಹಾಗೆಯೇ ಇತರ ದೇಶಗಳಲ್ಲೂ ಅಲ್ಲಲ್ಲಿನ ಸಮಾಜವನ್ನು ಸಂಘಟಿಸಲು ಪ್ರಯತ್ನಗಳು ನಡೆದಿವೆ; ನಡೆಯುತ್ತಲೂ ಇವೆ.

ಸಂಘಟನೆ ನಮ್ಮೆಲ್ಲರಿಗೂ ಪ್ರಿಯವಾದುದೇ. ಏಕೆಂದರೆ ಅದರಿಂದ ಎಲ್ಲರಿಗೂ ಲಾಭವಿದೆ. ಆದರೆ ಸಮಾಜವನ್ನು ಸಂಘಟಿಸುವುದೆಂದರೆ ಏನು ಎನ್ನುವ ಕುರಿತಾಗಿ ಮಾತ್ರ ಸಾಕಷ್ಟು ವಿವೇಚನೆ ಮತ್ತು ಸ್ಪಷ್ಟವಾದ ಕಲ್ಪನೆ ಎಲ್ಲೂ ಕಾಣಬರುತ್ತಿಲ್ಲ.

### ಏಕರೂಪತೆ ಅಲ್ಲ, ಏಕಾತ್ಮತೆ

ಜೀವನದಲ್ಲಿ ನಾವು ಸರ್ವತ್ರ ವೈವಿಧ್ಯವನ್ನು ಕಾಣುತ್ತೇವೆ. ಈ ವೈವಿಧ್ಯವನ್ನು, ಅಂದರೆ ತೋರಿಕೆಯ ಭೇದಗಳನ್ನು, ಅಳಿಸಿಹಾಕಿ ಸಮಾಜವನ್ನು ಏಕರೂಪಕ್ಕೆ ತರುವುದೇ ಸಂಘಟನೆ ಎಂಬುದು ಕೆಲವರ ಅಭಿಪ್ರಾಯ. ಆದರೆ ಸ್ವಲ್ಪ ಆಳವಾಗಿ ಚಿಂತಿಸಿದಲ್ಲಿ ಪ್ರಕೃತಿಯಲ್ಲೇ ವೈವಿಧ್ಯ ಇರುವುದು ತೋರಿಬರುತ್ತದೆ. ಅವಳಿ ಮಕ್ಕಳ ಉದಾಹರಣೆಯನ್ನು ನೋಡಿ. ಮಕ್ಕಳು ಬೆಳೆಯುತ್ತಾ ಹೋದಂತೆ ಅವರಲ್ಲಿನ ಶರೀರ, ಮನಸ್ಸು ಬುದ್ಧಿಗಳ ವಿಕಾಸದ ರೀತಿ ಬೇರೆಬೇರೆಯೇ ಆಗುತ್ತದೆ. ಇನ್ನು ಸಮಸ್ತ ಜನರ ನಡೆನುಡಿಗಳಲ್ಲಿ ಅದೆಷ್ಟು ವೈವಿಧ್ಯ! ಸಸ್ಯಸೃಷ್ಟಿಯಲ್ಲಿ ಎಷ್ಟು ವಿಭಿನ್ನತೆ! ಎರಡು ಬೇವಿನ ಮರಗಳಲ್ಲೇ ಅದೆಷ್ಟು ವ್ಯತ್ಯಾಸ! ಈ ಎಲ್ಲ ವೈವಿಧ್ಯ ತೊಡೆದು ಹಾಕಿ 'ಏಕರೂಪತೆ' ತರುತ್ತೇವೆಂದಲ್ಲಿ ಅದು ಎಲ್ಲಕ್ಕೂ ಮೃತ್ಯುವನ್ನು ಆಹ್ವಾನಿಸಿದಂತೆಯೇ.

ಹಾಗಾದರೆ ಅಸಂಖ್ಯ ವಿವಿಧತೆಗಳುಳ್ಳಂಥ ಜನರನ್ನು ಒಂದುಗೂಡಿಸುವುದು ಹೇಗೆ? ಅವರನ್ನು ಪರಸ್ಪರ ಜೋಡಿಸುವಂತಹ ಸೂತ್ರ ಯಾವುದು? ಮನುಷ್ಯನ ಶರೀರದಲ್ಲಿನ ಕಣ್ಣು, ಕಿವಿಗಳನ್ನೇ ತೆಗೆದುಕೊಳ್ಳೋಣ. ಅವುಗಳು ಬೇರೆಬೇರೆಯಾದರೂ ಒಂದಕ್ಕೊಂದು ಪೋಷಕ, ಪೂರಕ. ಕಣ್ಣಿನಿಂದ ಹಾವನ್ನು ಕಂಡಾಗ ಅಥವಾ ಕಿವಿಯಿಂದ ಯಾವುದೇ ಅಪಾಯದ ಮುನ್ಸೂಚನೆ ಕೇಳಿಬಂದಾಗ ಅವುಗಳ ಜೊತೆಗೆ ಉಳಿದ ಅವಯವಗಳೂ ಜೊತೆಗೂಡಿ ಕೆಲಸ ಮಾಡುತ್ತವೆ. ಇಡೀ ದೇಹವೇ ಅಪಾಯದಿಂದ ಪಾರಾಗಲು ಪ್ರಯತ್ನಿಸುತ್ತದೆ. ಶರೀರದ ಅವಯವಗಳು

ಬೇರೆಬೇರೆಯಾಗಿಯೇ ಇದ್ದರೂ ತಮ್ಮ ತಮ್ಮ ಕ್ರಿಯೆಗಳ ಮೂಲಕ ಒಂದೇ ಉದ್ದೇಶಕ್ಕಾಗಿ ಒಟ್ಟುಗೂಡಿ ನಿಲ್ಲುತ್ತವೆ. ಸಮಾಜದ ಬಗೆಗೂ ಅಷ್ಟೆ. ಸಮಾಜದಲ್ಲಿನ ವ್ಯಕ್ತಿಗಳ ಜ್ಞಾನ, ಕರ್ಮ, ಭಾವನೆ ಈ ಮೂರರ ಸಂಗಮವನ್ನು ಸಾಧಿಸಿದಲ್ಲಿ ಹೊರಗಿನ ಭೇದಗಳು ಎಷ್ಟೇ ಇದ್ದರೂ ಸಂಘಟನೆ ಸಾಧ್ಯ. ಇದೇ ಸಂಘಟನೆಯ ಮೂಲಸೂತ್ರ. ಆದುದರಿಂದ ನಮ್ಮ ಸಮಾಜದಲ್ಲಿರುವ ವೈವಿಧ್ಯಗಳಿಂದಾಗಿ ಸಂಘಟನೆ ಸಾಧ್ಯವಿಲ್ಲ ಎಂಬುದಾಗಲೀ ಅಥವಾ ವೈವಿಧ್ಯಗಳನ್ನು ನೆಲಸಮಗೊಳಿಸಿ ಏಕರೂಪತೆ ಸಾಧಿಸಬೇಕೆಂಬುದಾಗಲೀ, ಯೋಗ್ಯವಲ್ಲ.

ನಮ್ಮ ದೇಶ ಅತಿ ವಿಶಾಲವಾದದ್ದು. ನಮ್ಮ ಪರಂಪರೆ ಸುಮಾರು ೨೦–೨೫ ಸಾವಿರ ವರ್ಷಗಳಷ್ಟು ಪುರಾತನವಾದುದು. ಇದೆಲ್ಲದರಿಂದಾಗಿ ನಮ್ಮ ದೇಶದಲ್ಲಿನ ನಡೆನುಡಿಗಳಲ್ಲಿ ನಾನಾ ವೈವಿಧ್ಯಗಳು ಸ್ವಾಭಾವಿಕವಾಗಿಯೇ ಬೆಳೆದುಬಂದವು. ಅಲ್ಲದೆ, ನಮ್ಮಲ್ಲಿ ಎಂದೂ ವೈಚಾರಿಕ ದಾಸ್ಯ ಇರಲಿಲ್ಲ. ಪ್ರತಿಯೊಬ್ಬನಿಗೂ ತನ್ನ ಬುದ್ಧಿಶಕ್ತಿಗಳಿಗನುಗುಣವಾಗಿ ವಿಕಾಸ ಹೊಂದಲು ಮುಕ್ತ ಅವಕಾಶವಿತ್ತು. ಹೀಗಾಗಿ ಅನೇಕ ವಿಧದ ಅಧ್ಯಾತ್ಮ ಸಾಧನೆಗಳೂ, ಉಪಾಸನಾ ಪದ್ಧತಿಗಳೂ ಇಲ್ಲಿ ಹುಟ್ಟಿಕೊಂಡವು. ಹೀಗಿದ್ದರೂ ವೈವಿಧ್ಯಗಳ ಜೊತೆಜೊತೆಗೆ ನಮ್ಮ ಜೀವನದಲ್ಲಿ ಅಂತರಂಗದ ಏಕಾತ್ಮತೆ ಸಹ ಬೆಳೆದುಬಂದಿತು. ಇದೇ ನಮ್ಮ 'ಐಕ್ಯ'ದ ಆಧಾರವಾಯಿತು. ಏಕರೂಪತೆಯ ಪ್ರತಿಪಾದಕರಿಗಾಗಲಿ ಅಥವಾ ವೈವಿಧ್ಯ ಇರುವ ಕಾರಣದಿಂದಾಗಿ ಸಂಘಟನೆ ಅಸಾಧ್ಯ ಎನ್ನುವವರಿಗಾಗಲಿ ಈ ಆಂತರಿಕ ಏಕತೆಯ ಒಳಗುಟ್ಟೇನು ಎಂಬುದು ಅರ್ಥವಾಗಿಲ್ಲ.

**ಬಾಹ್ಯ ಆಧಾರಗಳು ಸಲ್ಲ**

ಕೆಲವು ಬಾಹ್ಯ ಸಂಗತಿಗಳ ಆಧಾರದ ಮೇಲೆ ಸಂಘಟನೆ ಕಟ್ಟಲೂ ಕೆಲವರು ಪ್ರಯತ್ನಿಸುವುದುಂಟು. ಕಸುಬು, ಭಾಷೆ, ಜಾತಿ, ರಾಜಕೀಯ ಸಿದ್ಧಾಂತ ಮುಂತಾದ ಆಧಾರಗಳ ಮೇಲೆ ಸಮಾಜಸಂಘಟನೆಗೆ ಹಲವರು ಯತ್ನಿಸುತ್ತಾರೆ. ಶಾಶ್ವತವಾದ ಸಂಘಟನೆಯನ್ನು ಇವುಗಳ ಬುನಾದಿಯ ಮೇಲೆ ಕಟ್ಟಲು ಎಂದಿಗೂ ಸಾಧ್ಯವಿಲ್ಲ.

ಇನ್ನೊಬ್ಬರ ವಿರೋಧದ ಆಧಾರವಿಟ್ಟುಕೊಂಡು ಸಂಘಟನೆ ಕಟ್ಟುವ ಪ್ರಯತ್ನವೂ ಅನೇಕ ಕಡೆ ನಡೆದಿದೆ. ಇಂದಿನ ಪ್ರಜಾತಂತ್ರ, ಸಾಮ್ಯವಾದ, ನಿರಂಕುಶಾಧಿಕಾರ ಮುಂತಾದವೆಲ್ಲವೂ ಯಾವುದಾದರೊಂದು ಹಿಂದಿನ ಪದ್ಧತಿಯ ಬಗೆಗೆ ವಿರೋಧದಿಂದಲೇ ಪ್ರೇರಣೆ ಪಡೆದಿವೆ. ಪಾಶ್ಚಾತ್ಯರ ರಾಷ್ಟ್ರದ ಕಲ್ಪನೆಯೂ ಯಾವುದೇ ರಚನಾತ್ಮಕ ಆಧಾರ ಹೊಂದಿಲ್ಲ. ೫೦–೬೦ ವರ್ಷಗಳ ಹಿಂದೆ ನಮ್ಮ ದೇಶದಲ್ಲೂ 'ಬ್ರಿಟಿಷ್ ವಿರೋಧವೇ ದೇಶ ಪ್ರೇಮ' ಎಂದು ಪರಿಗಣಿಸಿ ರಾಷ್ಟ್ರ



ಸಂಘಟನೆ ಕಟ್ಟುವ ಸಾಹಸ ನಡೆಯಿತು. ಆದರೆ ಇದರ ಪರಿಣಾಮವೂ ಕ್ಷಣಿಕವೇ ಆಯಿತು. ರಾಷ್ಟ್ರದಲ್ಲಿ ಯಥಾರ್ಥವಾದ ಏಕತೆಯ ಅನುಭವ ದೊರಕಲಿಲ್ಲ. ದ್ವೇಷ ಅಥವಾ ವಿರೋಧದ ಮೇಲೆ ಸಂಘಟನೆ ಆಧಾರಿತವಾಗಿದ್ದಲ್ಲಿ ನಮ್ಮ ಗಮನವೆಲ್ಲ ವಿರೋಧಿಗಳ ಕಡೆಗೇ ಇದ್ದು ಅದರ ಪ್ರಭಾವವೇ ನಮ್ಮ ಮೇಲೆ ಆಗುತ್ತದೆ. ಯಾವ ದುರ್ಗುಣಗಳ ಕಾರಣಕ್ಕಾಗಿ ಅವರನ್ನು ವಿರೋಧಿಸುತ್ತೇವೋ ಅವುಗಳ ಸತತ ಚಿಂತನೆಯ ಫಲವಾಗಿ ಆ ದುರ್ಗುಣಗಳೇ ನಮ್ಮಲ್ಲೂ ಮನೆ ಮಾಡುವ ಅಪಾಯವಿದೆ. ಅಲ್ಲದೆ, ವಿರೋಧದ ಅಂಶ ಕಣ್ಮರೆಯಾದನಂತರ ಸಂಘಟನೆಯೂ ನೆಲಕ್ಕೊರಗುತ್ತದೆ.

ಸಮಾನ ಶತ್ರುವನ್ನು ಎದುರಿಸಲು ಹಲವರು ಸೇರಿ ಸಂಘಟನೆ ಕಟ್ಟಿದರೂ ಅದೂ ಅಸ್ಥಿರವೇ. ಏಕೆಂದರೆ ಶತ್ರು ಕಣ್ಣೆದುರಿಗೆ ಇರುವವರೆಗೆ ಸಂಘಟನೆ ಇದ್ದು ಶತ್ರು ದೂರವಾದ ಮೇಲೆ ಅವರೇ ಪರಸ್ಪರ ಜಗಳ ಆಡುತ್ತಾರೆ. ನಮ್ಮ ದೇಶದಲ್ಲೂ ಸಮಾನ ಶತ್ರುವಾದ ಬ್ರಿಟಿಷರನ್ನು ಎದುರಿಸಲು ಹಿಂದು ಮತ್ತು ಮುಸ್ಲಿಮರನ್ನು ಒಟ್ಟುಗೂಡಿಸುವ ಯತ್ನ ನಡೆಯಿತು. ಆದರೆ ಇವರಿಬ್ಬರಲ್ಲಿ ಬ್ರಿಟಿಷ್ ವಿರೋಧ ಬಿಟ್ಟು ಬೇರೆ ಯಾವುದೇ ಸಮಾನ ಅಂಶವಾಗಲೀ, ಆತ್ಮೀಯತೆಯಾಗಲೀ ಇರಲಿಲ್ಲವಾದ್ದರಿಂದ ಆ ಪ್ರಯತ್ನ ವಿಫಲವಾಯಿತು. ಎರಡನೆಯ ಮಹಾಯುದ್ಧದ ಸಮಯದಲ್ಲಿ ಜರ್ಮನಿಯನ್ನು ಎದುರಿಸಲು ಫ್ರಾನ್ಸ್, ಇಂಗ್ಲೆಂಡ್, ರಷ್ಯಗಳು ಒಂದಾದವು. ಆದರೆ, ಜರ್ಮನಿಯು ಸೋತ ಮೇಲೆ ಅವುಗಳು ಒಂದಾಗಿ ಉಳಿಯಲಿಲ್ಲ. ಅದಲ್ಲದೆ ಈ ರೀತಿ ಶತ್ರುವನ್ನೆದುರಿಸಲು ಬಲಶಾಲಿಗಳೊಡನೆ ದುರ್ಬಲರು ಸೇರಿಕೊಂಡರೆ ಅದರಿಂದ ಬಲಶಾಲಿಗೆ ಲಾಭ, ದುರ್ಬಲನಿಗೆ ಹಾನಿ ತಪ್ಪದು. ಏಕೆಂದರೆ ಬಲಶಾಲಿಯು ದುರ್ಬಲನ ಉಪಯೋಗವನ್ನು ತನ್ನ ಸ್ವಾರ್ಥಕ್ಕಾಗಿಯೇ ಮಾಡಿಕೊಳ್ಳುತ್ತಾನೆ.

ಇನ್ನು ಸ್ವಾರ್ಥದ ಉದ್ದೇಶದಿಂದ ನಡೆವ ಸಂಘಟನೆಯ ಪ್ರಯತ್ನಗಳಿಂದ ವ್ಯಕ್ತಿಯ ಜೀವನದಲ್ಲಾಗಲೀ ಸಾಮುದಾಯಿಕ ಜೀವನದಲ್ಲಾಗಲೀ ವಿಕಾಸ ಸಾಧ್ಯವಿಲ್ಲ. ಅದರಿಂದ ಪ್ರೇಮವಂತೂ ನಿರ್ಮಾಣವಾಗದು. ಕೇವಲ ಅದು ಕೊಡು–ತೆಗೆದುಕೊಳ್ಳುವ ವ್ಯಾಪಾರ ಆಗುತ್ತದೆ.

ಆದುದರಿಂದ ಭಾವನಾತ್ಮಕ–ರಚನಾತ್ಮಕ ಆಧಾರಗಳ ಮೇಲೆಯೇ ಸಂಘಟನೆ ನಿಲ್ಲಬೇಕು. ಆದ್ದರಿಂದ ವ್ಯಕ್ತಿಗಳಲ್ಲಿ ಪರಸ್ಪರ ಸ್ವಾರ್ಥರಹಿತವಾದ ಆತ್ಮೀಯತೆ, ಏಕಾತ್ಮತೆ ಮೊಳೆಯುತ್ತದೆ. ನಿಜವಾದ ಆತ್ಮೀಯತೆ ಇರುವಲ್ಲಿ ಮತ್ತೊಬ್ಬನನ್ನು ಶೋಷಿಸುವ ದುಷ್ಟ ವೃತ್ತಿಗೆ ಆಸ್ಪದವಿರುವುದಿಲ್ಲ. ಸ್ವಾರ್ಥವಿಲ್ಲದೆ ಜನಗಳು ಸೇರಿ ಕೆಲಸ ಮಾಡುವಲ್ಲಿಯೇ ಸಂಸ್ಕೃತಿ ಹೊರಸೂಸುತ್ತದೆ. ಆ ಸಂಸ್ಕೃತಿಯೇ, ಅದರಿಂದ ಉತ್ಪನ್ನವಾಗುವ ಮಹಾನ್ ಸದ್ಗುಣಗಳೇ, ವ್ಯಕ್ತಿಯ, ಸಮಾಜದ ಕಡೆಗೆ ವಿಶ್ವದ

ಕಲ್ಯಾಣವನ್ನು ಸಾಧಿಸೀತು. ಇಂತಹ ಸಂಸ್ಕೃತಿಯನ್ನು ಕಡೆಗಣಿಸಿದುದರಿಂದಲೇ ನಮ್ಮ ಸಮಾಜದ ಸಂಘಟನೆ ಮುರಿದುಬಿತ್ತು. ಸಂಘಟನೆ ನಷ್ಟವಾದುದರಿಂದ ನಮ್ಮ ಸಮಾಜ ದುರ್ಬಲವಾಯಿತು. ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಇಡೀ ರಾಷ್ಟ್ರದ ಪತನ ಆಯಿತು.

ಸಮಾಜದ ಸಂಘಟನೆಗೆ ಅಗತ್ಯವಾದ ಆ ರಚನಾತ್ಮಕ–ಭಾವನಾತ್ಮಕ ಆಧಾರ ಯಾವುದು? ಆಧ್ಯಾತ್ಮಿಕತೆ! ಬಾಹ್ಯ ಸಂಗತಿಗಳ ಆಧಾರದ ಮೇಲಲ್ಲ, ಆದರೆ ಮಾನವ ಮಾತ್ರನಲ್ಲಿ ಸುಪ್ತವಾಗಿರುವ ಆತ್ಮಚೇತನದ ಆಧಾರದ ಮೇಲೆ ಹೊರಟಾಗಲೇ ವ್ಯಕ್ತಿಗಳಲ್ಲಿ ಏಕಾತ್ಮತೆಯ ಅನುಭೂತಿಯುಂಟಾಗಬಲ್ಲದು; ಪರಸ್ಪರರಲ್ಲಿ ಸಹಜವಾದ ನಿಃಸ್ವಾರ್ಥವಾದ ಸ್ನೇಹ ನೆಲಸಿ ಶಾಶ್ವತವಾದ ಸಂಘಟನೆ ನಿರ್ಮಣ ಆಗಬಲ್ಲದು. ಒಂದು ಸಮಾಜಕ್ಕೆ ಮಾತ್ರವಲ್ಲ, ಸಮಗ್ರ ಮಾನವ ಏಕತೆಗೂ ಇದೇ ಏಕಮಾತ್ರ ಅಡಿಗಲ್ಲಾಗಬಹುದು.

**ತಪ್ಪು ದಿಸೆಯ ಫಲ**

ಪಾಶ್ಚಾತ್ಯ ದೇಶಗಳಲ್ಲಿ ಮಾವನ–ಏಕತೆಯ ಕೂಗು ಹಾಕಿ ಹೊರಟವರೆಲ್ಲರೂ ಏಕತೆಯ ಬದಲಿಗೆ ಹೊಸ ಭೇದವನ್ನೇ ಸೃಷ್ಟಿಸಿದರು. ನಿಜವಾದ ಆಧ್ಯಾತ್ಮಿಕ ದೃಷ್ಟಿಯನ್ನು ಬಿಟ್ಟುಕೊಟ್ಟು ಯಾವುದೊ ಒಬ್ಬ ವ್ಯಕ್ತಿ, ಒಂದು ಪಂಥ, ಒಂದು ರಾಜಕೀಯ ಆರ್ಥಿಕವಾದವನ್ನು ಬುನಾದಿಯಾಗಿ ಇಟ್ಟು ಹೊರಟಿದ್ದರ ಫಲ ಅದು. ಈಸಾಯಿಗಳು ಮತ, ಜಾತಿ, ರಾಷ್ಟ್ರ ಎಲ್ಲವನ್ನೂ ಬದಿಗೊತ್ತಿ ಮಾನವನ ಏಕತೆಯನ್ನು ಉದ್ಘೋಷಿಸಿದರು. ಆದರೆ ಸ್ವಲ್ಪ ದಿನಗಳಲ್ಲಿ ಅವರ ಕಣ್ಣಲ್ಲೆ ಜಗತ್ತು ಈಸಾಯಿ ಮತ್ತು ವಿಗ್ರಹಾರಾಧಕ ಎಂದು ಎರಡು ಹೋಳಾಯಿತು. ಇಸ್ಲಾಂ ಸಹ ಮಾನವ–ಏಕತೆಯನ್ನೇ ಉದ್ಘೋಷಿಸಿ ಹೊರಟಿತು. ಆದರೆ ಅದೂ ಮಿಲತ್ ಇಸ್ಲಾಂ ಮತ್ತು ಕಾಫಿರ್ ಎಂದು ಮಾನವರನ್ನು ಎರಡು 'ಜಾತಿ'ಗಳಾಗಿ ಒಡೆಯಿತು.

ಸಾಮ್ಯವಾದಿಗಳು ಈಸಾಯಿ ಮತ್ತು ಇಸ್ಲಾಂ ಮತಗಳಂತೆ ಪರಲೋಕದ ಸ್ವರ್ಗದ ಮಾತನ್ನು ಆಡದಿದ್ದರೂ, ಇಹಲೋಕದಲ್ಲೇ ಏಕತೆಯ ಸ್ವರ್ಗ ನಿರ್ಮಿಸುತ್ತೇವೆ ಎಂದು ಸಾರಿದರು. ಆದರೆ ಅವರೂ ಕಮ್ಯುನಿಸ್ಟೇತರ ದೇಶಗಳ ಮೇಲೆ ದಾಳಿ ಇಟ್ಟರು. ಸಾಮ್ಯವಾದವು ಬಂಡವಾಳಗಾರರ ವಿರುದ್ಧ ಕಾರ್ಮಿಕರನ್ನು ಎತ್ತಿ ಕಟ್ಟಿ 'ಪ್ರಪಂಚದ ಕಾರ್ಮಿಕರೇ, ಒಂದಾಗಿ' ಎಂಬ ಘೋಷಣೆ ಹಾಕಿದ್ದಾದರೂ ಏಕೆ? ಈ ರೀತಿ ಒಟ್ಟಾದಲ್ಲಿ ಆ ಸಾಮರ್ಥ್ಯದ ಭರವಸೆಯ ಮೇಲೆ ತಮ್ಮ ಸ್ವಾರ್ಥ ಹೆಚ್ಚಾಗಿ ಗಿಟ್ಟಿಸಿಕೊಳ್ಳಲು ಬಂದೀತು ಎಂದು.

'ಕಾರ್ಮಿಕರೇ, ಒಟ್ಟಾಗಿ' ಎನ್ನುವ ಘೋಷಣೆಯ ಬುಡದಲ್ಲಿ ಒಬ್ಬೊಬ್ಬ



ವ್ಯಕ್ತಿಯೂ ದುರ್ಬಲ, ಅವನಿಂದ ಏನೂ ಆಗಲಾರದು– ಎನ್ನುವ ಅವಿಶ್ವಾಸದ ದೌರ್ಬಲ್ಯದ ಮನೋಭಾವ ಅಡಗಿತ್ತು. ಮನಶ್ಶಾಸ್ತ್ರದ ದೃಷ್ಟಿಯಿಂದ ನೋಡಿದಲ್ಲಿ ಮನೋದೌರ್ಬಲ್ಯವಿರುವಲ್ಲಿ ವಾಸ್ತವವಾದ ಶಕ್ತಿ ಎಂದಿಗೂ ನಿರ್ಮಾಣವಾಗದು. ಒಂದು ವೇಳೆ ಅಂಥ ದುರ್ಬಲನ ಕೈಗೆ ಅಧಿಕಾರ ಸಿಕ್ಕಿದಲ್ಲಿ ಅವನು ಅದರ ಅಪವ್ಯಯ ಮಾಡುವುದೂ ಅಷ್ಟೇ ಶತಸ್ಸಿದ್ಧ. ಉದಾಹರಣೆಗೆ, ಧನವನ್ನು ಕಷ್ಟ ಪಟ್ಟು ಸಂಪಾದಿಸದೆ ಕೇವಲ ಲಾಟರಿಯಲ್ಲೋ ಅಥವಾ ಬೇರಿನ್ನಾವ 'ಸುಲಭ'ದ ರೀತಿಯಲ್ಲೋ ಸಂಪಾದಿಸಿದವನೊಬ್ಬ ಅದನ್ನು ದುರ್ವ್ಯಯ ಮಾಡುವಂತೆ. ಇವತ್ತು ಸಾಮ್ಯವಾದಿಗಳು ತಮ್ಮ ಕೈಯಲ್ಲಿನ ಅಧಿಕಾರವನ್ನು ಯಾವ ರೀತಿ ಬಳಸುತ್ತಿದ್ದಾರೆಂಬುದಕ್ಕಿಂತ ಈ ಮಾತಿಗೆ ಇನ್ನಾವ ಸಾಕ್ಷಿ ಬೇಕು?

**'ವಿಶ್ವವಾದ' ವ್ಯಕ್ತಿವಾದವಾಯಿತು!**

ವಿಶ್ವವಾದದ ಪ್ರಚಾರ ಮಾಡಿದ ಸ್ಟಾಲಿನ್ ವ್ಯಕ್ತಿವಾದದ ಚರಮ ಸೀಮೆಯಾದ ಸರ್ವಾಧಿಕಾರ ಪಟ್ಟವನ್ನೇ ಏರಿದ. ಇವನಂತೆಯೇ ಫ್ರಾನ್ಸ್‌ನಲ್ಲಿ ಲೋಕತಂತ್ರದ ಕ್ರಾಂತಿಯ ನಂತರ ನೆಪೋಲಿಯನ್ ಅಲ್ಲಿನ ಜನಗಳ ತಲೆ ಮೇಲೆ ಸರ್ವಾಧಿಕಾರಿಯಾಗಿ ಸವಾರಿ ಮಾಡಿದ. ಇಟಲಿ, ಜರ್ಮನಿಗಳಲ್ಲಿ ಸರ್ವಾಧಿಕಾರಕ್ಕೆ ಎಡೆಗೊಟ್ಟ ಫ್ಯಾಸಿಸಂ, ನಾಜಿಸಂಗಳ ಕತೆಯೂ ಅದೇ. ಇವೆಲ್ಲದರ ಹಿಂದೆ ವ್ಯಕ್ತಿವಾದ ಅಡಗಿತ್ತೇ ಹೊರತು ಸಮಾಜದ ಏಕಾತ್ಮತೆಯ ಸಾಕ್ಷಾತ್ಕಾರ ಇರಲಿಲ್ಲ. ಮಾನವ ಸಮಾಜದೊಂದಿಗೆ, ಏಕಾತ್ಮತೆಯ ಸಮರಸತೆಯ ಅನುಭೂತಿ ಇರದುದರಿಂದಲೇ ಅವರೆಲ್ಲರೂ ಕಡೆಗೆ ಸ್ವಾರ್ಥಿಗಳಾದುದು, ಸರ್ವಾಧಿಕಾರಿಗಳಾದುದು.

ನಿಜವಾದ ಆಧ್ಯಾತ್ಮಿಕ ದೃಷ್ಟಿ ಇಲ್ಲದ್ದರಿಂದ ಸೃಷ್ಟಿಯ ಬಗೆಗಿನ ಅವರ ದೃಷ್ಟಿಕೋನವೂ ಸ್ವಾರ್ಥಪ್ರೇರಿತವಾಗಿದೆ: 'ವಿಶ್ವದಲ್ಲಿ ಮಾನವನೇ ಸರ್ವೋತ್ಕೃಷ್ಟ ಸೃಷ್ಟಿ. ಅವನಿಗೆ ಮಾತ್ರ 'ಆತ್ಮ' ಇದೆ; ಇನ್ನಾವ ಪ್ರಾಣಿಗೂ, ವಸ್ತುವಿಗೂ ಇಲ್ಲ. ಹಾಗೂ ಲೋಕವೆಲ್ಲ ಅವನಿಗಾಗಿಯೇ ಸೃಷ್ಟಿಯಾಗಿದೆ. ಮಿಕ್ಕೆಲ್ಲ ಜೀವಜಂತುಗಳನ್ನೂ ತನ್ನ ಸ್ವಾರ್ಥಕ್ಕಾಗಿ ಬಲಿಗೊಡಲು ಅವನಿಗೆ ಅಧಿಕಾರವಿದೆ.' ಎಂಥ ಅಹಂಕಾರದ ಮಾತು! ಇದೇ ತರ್ಕ ಮುಂದುವರಿಸಿ ಮಾನವರಲ್ಲೆ ಕೆಲವರು ಶ್ರೇಷ್ಠರು; ಉಳಿದವರು ನಿಕೃಷ್ಟರು, ಅವರನ್ನು ಅಭ್ಯಂತರವಿಲ್ಲ ಎಂದು ಹೇಳಿದಲ್ಲಿ ಆಶ್ಚರ್ಯವೇನು? ಹಿಟ್ಲರನ 'ವಂಶವಾದ', ಬಲಿಗೊಡಲು ಇಂಗ್ಲಿಷರ 'ಬಿಳಿ ಜನರ ಹೊಣೆಗಾರಿಕೆ'ಯ ವಾದ, ಈಸಾಯಿ ಇಸ್ಲಾಂ ಕಮ್ಯುನಿಸಂಗಳ 'ನನ್ನ ಬಿಟ್ಟರೆ ಇನ್ನಿಲ್ಲ' ಎನ್ನುವ ದೃಷ್ಟಿಕೋನ– ಇವೆಲ್ಲ ಅದರದೇ ಬೇರೆ ಬೇರೆ ಮುಖಗಳಲ್ಲವೆ?

**ವಿಶ್ವೈಕ್ಯದ ಅಡಿಗಲ್ಲು**

ಒಟ್ಟಿನಲ್ಲಿ– ಮಾನವರಲ್ಲಿ ಮಾತ್ರವಲ್ಲ, ಸಂಪೂರ್ಣ ಸೃಷ್ಟಿಯಲ್ಲಿ ಏಕಾತ್ಮಭಾವ, ಸಾಮರಸ್ಯ ಸಿದ್ಧಿಸಬೇಕಾದರೆ ಆಧ್ಯಾತ್ಮಿಕ ದೃಷ್ಟಿಗೆ ಶರಣು ಬರದೆ ವಿಧಿ ಇಲ್ಲ. ಅಂಥ ಆಧ್ಯಾತ್ಮಿಕ ಅಧಿಷ್ಠಾನವಿಲ್ಲದ್ದರಿಂದಲೇ ವಿಶ್ವ ಕಲ್ಯಾಣದ ಹಾದಿಯಲ್ಲಿ ಹೊರಟ 'ಲೀಗ್ ಆಫ್ ನೇಷನ್ಸ್' ವಿಫಲವಾಯಿತು. ಇಂದಿನ ವಿಶ್ವ ರಾಷ್ಟ್ರ ಸಂಸ್ಥೆಯೂ ಒಂದು ಕಡೆ ನಾನಾ 'ಸ್ವಾತಂತ್ರ್ಯ'ಗಳನ್ನು ಉದ್ಘೋಷಿಸುತ್ತಾ ಇನ್ನೊಂದು ಕಡೆ ಇತರರ ಸ್ವಾತಂತ್ರ್ಯ ಅಪಹರಿಸುವ 'ಷಡ್ಯಂತ್ರ'ವಾಗಿ ಇಂದು ಪರಿಣಮಿಸಿದೆ. ಕಾರಣವೆಂದರೆ ಅದರ ಆಧಾರವೇ ತಪ್ಪಾಗಿದೆ. ದೊಡ್ಡ ಕಟ್ಟಡದ ಅಡಿಗಲ್ಲು ಭದ್ರವಿಲ್ಲದಾಗ ಇಡೀ ಕಟ್ಟಡವೇ ಕುಸಿದುಬೀಳುವಂತೆ, ದೊಡ್ಡ ಗಣಿತದ ಪ್ರಶ್ನೆ ಬಿಡಿಸಲು ಹೊರಟು ಆರಂಭದಲ್ಲೇ ತಪ್ಪಿದಲ್ಲಿ ಬರುವ ಫಲಿತಾಂಶಗಳೆಲ್ಲಾ ತಪ್ಪೇ ಆಗುವಂತೆ ಪಾಶ್ಚಾತ್ಯರ ಈ ಎಲ್ಲ ಪ್ರಯೋಗಗಳೂ ಕಹಿಫಲಗಳನ್ನೇ ಕೊಟ್ಟಿವೆ.

ವಿಶ್ವದ ಏಕಾತ್ಮತೆಯನ್ನು ಕಾಣುವ ದರ್ಶನ ಭಾರತದಲ್ಲಿ ಮಾತ್ರ ಇದೆ. ಅದರ ಆಧಾರದ ಮೇಲೆ ನಮ್ಮ ಸಮಾಜವನ್ನು ಪ್ರಭಾವಿಯಾಗಿ ನಾವು ಸಂಘಟಿಸಿದ್ದೇ ಆದರೆ ಮಾನವ– ಏಕತೆಯತ್ತ ಅದೊಂದು ದೊಡ್ಡ ಹೆಜ್ಜೆ ಇಟ್ಟಂತಾಗುತ್ತದೆ. ಜೀವನದ ವಿವಿಧತೆಗಳಲ್ಲಿ ಏಕತೆಯನ್ನು, ಸಾಮರಸ್ಯವನ್ನು ಸಾಧಿಸುವ ನಮ್ಮ ಸಮಾಜದ ಆದರ್ಶ ಸಂಘಟಿತ ಜೀವನವನ್ನು ಲೋಕದ ಎದುರಲ್ಲಿ ಮಾದರಿಯಾಗಿ ಸ್ಥಾಪಿಸಲು ಸಾಧ್ಯವಾಗುತ್ತದೆ.

**ಕುರುಕ್ಷೇತ್ರದ ಪಾಠ**

ಎಲ್ಲಿ ಆಧ್ಯಾತ್ಮಪ್ರಧಾನವಾದ ಸಮಷ್ಟಿವಾದವಿರುತ್ತದೋ ಅಲ್ಲೇ ಅಪ್ರತಿಮ ಸಾಮರ್ಥ್ಯ ನಿರ್ಮಾಣವಾಗುತ್ತದೆ. ಅಂಥ ಸಂಘಟನೆ ವಿಜಯಶಾಲಿ ಆಗುತ್ತದೆ. ಮಹಾಭಾರತದ ಯುದ್ಧದ ನಿದರ್ಶನವನ್ನೇ ನೋಡಿ. ಪಾಂಡವರ ವಿಜಯದ, ಕೌರವರ ಪರಾಜಯದ, ರಹಸ್ಯ ಯಾವುದರಲ್ಲಿದೆ ಎಂಬುದನ್ನು ಸೂಕ್ಷ್ಮವಾಗಿ ವಿವೇಚಿಸಿದರೆ ಈ ಮಾತಿನ ಸತ್ಯಾಂಶ ಗೊತ್ತಾಗುತ್ತದೆ.

ಶಿಖಂಡಿಯು ಯುದ್ಧದಲ್ಲಿ ಎದುರಾದಲ್ಲಿ ಯುದ್ಧ ಮಾಡುವುದಿಲ್ಲ ಎನ್ನುವುದು ಭೀಷ್ಮನ ವ್ಯಕ್ತಿಗತವಾದ ಶಪಥ. ಅದು ಅವನ 'ಪ್ರತ್ಯೇಕ ವ್ಯಕ್ತಿತ್ವ'ದ ಗುರುತು. ಅದರಲ್ಲಿ ತನ್ನ ಪಕ್ಷದ, ಸಮಷ್ಟಿಯ ರಕ್ಷಣೆ, ಕ್ಷೇಮ ಅಡಗಿಲ್ಲ. ಭೀಷ್ಮನಂತೂ ಆಗ ಕೌರವರ ಸೇನಾನಿಯೇ ಆಗಿದ್ದ. ಅಂಥವನೇ ವ್ಯಕ್ತಿವಾದಿ ಆಗಿದ್ದ. ಆದರೆ ಅರ್ಜುನನಾದರೋ ಸಮಷ್ಟಿವಾದಿ; ಧರ್ಮ ಸಂಸ್ಥಾಪನೆಗಾಗಿ ಯುದ್ಧ ಆರಂಭಿಸಿದ್ದ. ಭೀಷ್ಮನ ಬಗೆಗೆ ತನ್ನ ಮನಸ್ಸಲ್ಲಿದ್ದ ವ್ಯಕ್ತಿಗತವಾದ ಶ್ರದ್ಧಾಭಾವವನ್ನು ಬದಿಗಿಟ್ಟು ಅವನ ವಧೆಗೂ ಸಿದ್ಧನಾದ.



ದ್ರೋಣನಿಗೆ ಯುದ್ಧಭೂಮಿಯಲ್ಲೂ ಸಹ ಪುತ್ರಪ್ರೇಮ ಒತ್ತಿಕೊಂಡು ಬಂದಿತು! ಪುತ್ರನ ಬಗ್ಗೆ ಚಿಂತಿಸುವುದು ಸೇನಾನಿಯ ಕೆಲಸವಲ್ಲ. ಹೀಗೆ ಆತನೂ ವ್ಯಕ್ತಿವಾದಿಯೇ. ಅದೇ ಸತ್ಯವಚನಿ ಧರ್ಮರಾಯ, ತನ್ನ ವೈಯಕ್ತಿಕ ಸತ್ಯನಿಷ್ಠೆಗೆ ಕುಂದುಬಂದರೂ, ತನ್ನ ರಥದ ಗಾಲಿ ಭೂಮಿಯ ಮೇಲೆ ಹರಿದು ತನ್ನ ಕೀರ್ತಿಭಂಗವಾದರೂ ಚಿಂತೆಯಿಲ್ಲ ಎಂದು ಭಾವಿಸಿ ಸಮಷ್ಟಿ ಧರ್ಮಕ್ಕೆ ತಕ್ಕಂತೆ ನಡೆದುಕೊಂಡ.

ಕರ್ಣನ ಉದಾಹರಣೆಯೂ ಅಷ್ಟೆ. ಅವನಿಗೆ ತಾನು ದಾನಶೂರನೆಂಬ ಕೀರ್ತಿ ಗಳಿಸಬೇಕೆಂಬ ಹಂಬಲ. ಸೂರ್ಯಭಗವಾನನು, 'ಕರ್ಣಕುಂಡಲಗಳು ನಿನ್ನಲ್ಲಿರುವವರೆಗೆ ನೀನು ಮೃತ್ಯುಂಜಯ, ಅದನ್ನು ಯಾರಿಗೂ ದಾನ ಮಾಡಬೇಡ' ಎಂದು ಎಚ್ಚರಿಸಿದ್ದರೂ ಅವನು ಕೇಳಲಿಲ್ಲ. ಅವನ್ನು ಇಂದ್ರನಿಗೆ ದಾನ ಮಾಡಿದ. ಅದೇ, ಇಂದ್ರ ಉದಾಹರಣೆ ನೋಡಿ. ಇಂದ್ರನು ದೇವತೆಗಳ ರಾಜ. ಅಂಥವನು ಭಿಕ್ಷೆ ಬೇಡುವುದೆಂದರೇನು? ಆದರೆ ಧರ್ಮದ ಉಳಿವಿಗಾಗಿ ಕರ್ಣನ ಬಳಿಗೆ ಹೋಗಿ ಅವನು ಭಿಕ್ಷೆ ಬೇಡಲೂ ಹಿಂಜರಿಯಲಿಲ್ಲ.

ಕುಂತಿ ತನ್ನ ಮಗನಾದ ಅರ್ಜುನನನ್ನು ಬದುಕಿಸಿಕೊಳ್ಳಲು ತನ್ನ ಮಗ ಕರ್ಣನಿಂದಲೇ ವರ ಬೇಡಲು ಹೊರಟಳು. ಕರ್ಣನೂ ಅವಳಿಗೆ ಮಗನೇ! ಆದರೆ ಅರ್ಜುನ ಧರ್ಮ ಸಂಸ್ಥಾಪನೆಗಾಗಿ ನಿಂತಿದ್ದರಿಂದ ಕರ್ಣ, ಅರ್ಜುನರಲ್ಲಿ ಅರ್ಜುನನನ್ನು ಉಳಿಸಿಕೊಳ್ಳುವುದೇ ತನ್ನ ಕರ್ತವ್ಯವೆಂದು ಅವಳು ಬಗೆದಳು. ಇನ್ನು ಸ್ವತಃ ಕಷ್ಣ. ಅವನು ಭಾರತಯುದ್ಧದಲ್ಲಿ ಶಸ್ತ್ರ ಹಿಡಿಯುವುದಿಲ್ಲವೆಂದು ಪ್ರತಿಜ್ಞೆ ತೊಟ್ಟಿದ್ದ. ಆದರೆ ಪ್ರಸಂಗ ಬಂದಾಗ ತನ್ನ ಶಪಥವನ್ನೂ ಮುರಿದು ಭೀಷ್ಮನ ಮೇಲೆ ಚಕ್ರ ಹಿಡಿದು ಹೊರಟ. ಇವೆಲ್ಲವೂ 'ಸಮಷ್ಟಿಧರ್ಮ'ದ ಪಾಲನೆಗೇ ಹೊರತು ಬೇರೆ ಅಲ್ಲ.

ಕೌರವ ಪಕ್ಷದ ಪ್ರತಿಯೊಬ್ಬನೂ ವೈಯಕ್ತಿಕವಾಗಿ ಪಾಂಡವರಿಗಿಂತ ಹೆಚ್ಚು ಶಕ್ತಿಶಾಲಿಯೇ. ಆದರೆ, ಅವರಲ್ಲಿ 'ಸಮಷ್ಟಿ'ಯ ಹಿತದ ಅರಿವು ಇರಲಿಲ್ಲ. ಪ್ರತಿಯೊಬ್ಬನಿಗೂ ತನ್ನ ವೈಯಕ್ತಿಕ ಪ್ರತಿಷ್ಠೆಯೇ ತನ್ನ ಪಕ್ಷದ ವಿಜಯಕ್ಕಿಂತ ಹೆಚ್ಚಾಗಿತ್ತು.

ಆದರೆ ಪಾಂಡವರ ಧ್ಯೇಯ ಒಂದೇ ಇತ್ತು. ಅವರ ಗುಂಪಿಗೆ ಶ್ರೀಕೃಷ್ಣ ನಾಯಕ. ಅವನ ಆಜ್ಞೆಗೆ ಅವರೆಲ್ಲರೂ ತಲೆಬಾಗಿದರು. ಅವನ ಮಾತೆಂದರೆ ಧರ್ಮದ ಆದೇಶ. ತಮ್ಮ ವೈಯಕ್ತಿಕ ಪ್ರತಿಷ್ಠೆ ಅದಕ್ಕೆ ಅಡ್ಡಿ ಬರಲು ಅವರು ಎಂದೂ ಅವಕಾಶ ಕೊಟ್ಟವರಲ್ಲ. ಅವರು ಹೀಗೆ ಸಮಷ್ಟಿಭಾವದಿಂದ ವರ್ತಿಸಿದ್ದರಿಂದಲೇ ಅವರಿಗೆ ಅಂತಿಮವಾಗಿ ಜಯ ಸಿಕ್ಕಿತು.

ಲೋಕದ ಎದುರಲ್ಲಿ ನಮ್ಮ ಸಮಾಜವನ್ನು ಒಂದು ಉಜ್ವಲವಾದ ಮೇಲ್ಪಂಕ್ತಿಯಾಗಿ ಕಟ್ಟಿ ನಿಲ್ಲಿಸಲು ಪಣತೊಟ್ಟು ಹೊರಡುವ ಪ್ರತಿಯೊಬ್ಬ

ಕಾರ್ಯಕರ್ತನೂ ನಿತ್ಯ ಚಿಂತಿಸಬೇಕಾದ, ಅದರಂತೆ ತನ್ನ ಬುದ್ಧಿ ಹೃದಯಗಳನ್ನು ರೂಪಿಸಿಕೊಳ್ಳಬೇಕಾದ ಪಾಠ ಇದರಲ್ಲಿದೆ.



## ೯. ರಾಷ್ಟ್ರೀಯತೆ ಮತ್ತು ಮಾನವ-ಏಕತೆ

ರಾಷ್ಟ್ರೀಯತ್ವವು ಮೂಲತಃ ಭಾವಾತ್ಮಕ (Positive) ಆಗಿದ್ದರೂ ಅದರ ವಿರೋಧಾತ್ಮಕ ಸ್ವರೂಪವು ಎಂದಾದರೊಮ್ಮೆ ಪ್ರಕಟಗೊಂಡಾಗ ಅದರ ಪ್ರಭಾವದಿಂದಾಗಿ ಸಾಮಾನ್ಯ ಜನರಿರಲಿ, ಭಾರಿಭಾರಿ ವಿಚಾರವಂತರೂ ರಾಷ್ಟ್ರೀಯತೆಯ ವಾಸ್ತವಿಕ ಸ್ವರೂಪವನ್ನು ಮರೆಯುತ್ತಾರೆ. ರಾಷ್ಟ್ರಗಳ ನಡುವಣ ತಿಕ್ಕಾಟದಿಂದ ಉದ್ಭವಿಸುವ ಯುದ್ಧ ಮತ್ತು ಅದರ ಭೀಷಣ ಪರಿಣಾಮಗಳಿಂದ ಎದೆಯೊಡೆದು, ಅವರು ಅದರಿಂದ ಉಳಿದುಕೊಳ್ಳಲು ರಾಷ್ಟ್ರ ಮತ್ತು ರಾಷ್ಟ್ರೀಯ ಭಾವನೆಗಳನ್ನೇ ಹೇಯ ಹಾಗೂ ಹಾನಿಕರವೆಂದು ಸಾರಿ ಅವನ್ನು ನಾಶಗೊಳಿಸುತ್ತಾರೆ. ಆದರೆ ಇದು ತಲೆನೋವನ್ನು ಹೋಗಲಾಡಿಸಲು ತಲೆಯನ್ನೇ ಕತ್ತರಿಸಿದಂತೆ! ಕಣ್ಣುಗಳೇ ವಿಕಾರದ ಉತ್ಪತ್ತಿಯ ಮೂಲವೆಂದು ಸೂರದಾಸರು ಕಣ್ಣುಗಳನ್ನೇ ಇಂಗಿಸಿಕೊಂಡರಂತೆ. ಇಂದು ಪ್ರಪಂಚದ ಅನೇಕ ವಿಚಾರಶೀಲರು ಸಹ ಸೂರದಾಸರಾಗಲು ಆಶಿಸುತ್ತಿದ್ದಾರೆ. ಜೀವನ ಮತ್ತು ಕಣ್ಣುಗಳ ನಡುವಣ ಭಾವಾತ್ಮಕ ಸಂಬಂಧ ಅವರ ತಲೆಗೆ ಹೊಳೆಯುವುದಿಲ್ಲ.

**ಸಂಘರ್ಷದ ಭೂತ**

ಪಾಶ್ಚಾತ್ಯರು, ಜೀವನಸಂಘರ್ಷದಿಂದಲೇ ಸೃಷ್ಟಿವಿಕಾಸ ಎಂದು ಭಾವಿಸಿ ಹೊರಟದ್ದರಿಂದ ಪ್ರತಿ ಘಟನೆಯಲ್ಲೂ ಅವರು ಸಂಘರ್ಷವನ್ನೇ ಕಾಣುತ್ತಾರೆ. ಅವರ ಕಲ್ಪನೆಯಂತೆ ಎರಡು ಅಥವಾ ಹೆಚ್ಚು ಘಟಕಗಳು ಒಟ್ಟಾಗುವುದು ಸಹ ಇನ್ನಾವುದೋ ದೊಡ್ಡ ಶಕ್ತಿಯೊಡನೆ ಹೋರಾಡುವುದಕ್ಕಾಗಿಯೇ. ಡಾರ್ವಿನ್ನನು ಪ್ರಾಣಿಶಾಸ್ತ್ರವನ್ನೂ, ಹೆಗೆಲ್‌ನು ದರ್ಶನಶಾಸ್ತ್ರವನ್ನೂ, ಮಾರ್ಕ್ಸ್‌ನು ಇತಿಹಾಸವನ್ನೂ ಇದೇ ಆಧಾರದ ಮೇಲೆ ವಿವೇಚಿಸಿದರು. ನೀತ್ಸೆ ಕಲ್ಪನೆಗಳ ಪರಿಣತರೂಪವಾದ ಹಿಟ್ಲರನ ನಾಜಿವಾದಕ್ಕೂ ಈ ಸಿದ್ಧಾಂತವೇ ಮೂಲ. ಬಂಡವಾಳಶಾಹಿ ಅರ್ಥಶಾಸ್ತ್ರವು ತಿಕ್ಕಾಟದ ಹಾಗೂ ಪೈಪೋಟಿಯ ಸಿದ್ಧಾಂತಗಳನ್ನೇ ಅಚಲ ವೈಜ್ಞಾನಿಕ ಸತ್ಯ ಎಂದು ನಂಬಿ ಹೊರಟಿದೆ. ಈ ಸಂಘರ್ಷಕ್ಕೆ ಸಾಮುದಾಯಿಕ ಹಾಗೂ ಸಂಘಟಿತ ರೂಪ ಕೊಟ್ಟು ಒಂದು ವರ್ಗವನ್ನೇ ನಿರ್ಮೂಲಗೊಳಿಸಿ ವರ್ಗವಿಹೀನ ಸಮಾಜ ನಿರ್ಮಾಣದ ಕಲ್ಪನೆ ಧರಿಸಿ ಸಾಮ್ಯವಾದ ಹೊರಟಿದೆ. ಇವರೆಲ್ಲರೂ

'ರಾಷ್ಟ್ರ'ವನ್ನು ತಾವು ಉದ್ದೇಶಿಸಿದ ಸಂಘರ್ಷಕ್ಕೆ ಸಾಧಕವಾಗಿದೆಯೋ ಅಥವಾ ಬಾಧಕವಾಗಿದೆಯೋ ಎನ್ನುವ ದೃಷ್ಟಿಕೋನದಿಂದಲೇ ನೋಡುತ್ತಾರೆ. ರಾಷ್ಟ್ರೀಯತೆಯನ್ನು ಸಮರ್ಥಿಸುವವರು ತಮ್ಮ ಸಾಮ್ರಾಜ್ಯಶಾಹಿ ಸಂಘರ್ಷಕ್ಕೆ ರಾಷ್ಟ್ರೀಯ ಭಾವನೆ ಸಹಾಯಕ ಆಗುತ್ತದೆಂದು ರಾಷ್ಟ್ರೀಯತೆಯನ್ನು ಸಮರ್ಥಿಸುತ್ತಾರೆ. ವಿಶ್ವಸಂಘರ್ಷದ ತಮ್ಮ ಕ್ರಾಂತಿಗೆ ರಾಷ್ಟ್ರೀಯತೆ ಅಡ್ಡಿ ಬರುತ್ತದೆ ಎಂದು ತಿಳಿಯುವವರು ರಾಷ್ಟ್ರೀಯತೆಯನ್ನು ವಿರೋಧಿಸುತ್ತಾರೆ.

**ಸಂಘರ್ಷದ ಸಿದ್ಧಾಂತದಿಂದ ಸಂಘರ್ಷ ಅಳಿದೀತೆ?**

ಈ ಪಾಶ್ಚಿಮಾತ್ಯ ಸಿದ್ಧಾಂತವು ಈಶ್ವರ–ಸೈತಾನರ ನಡುವಣ ಜಗಳದ ಈಸಾಯಿ ಕಲ್ಪನೆಯನ್ನು ಆಧರಿಸಿ ಹೊರಟಿರುವಂತೆ ತೋರುತ್ತದೆ. ಸೈತಾನನ ಹಿಡಿತದಿಂದ ತಪ್ಪಿಸಿಕೊಂಡು ದೇವರ ಆಶ್ರಯ ಸೇರಲೆಂದು ಈಸಾಯಿ ಮತದ ಸ್ಥಾಪನೆ ಆದಂತೆಯೇ ರಕ್ಷಣಾತ್ಮಕ ಹಾಗೂ ವಿಭೇದಾತ್ಮಕ ಆಧಾರದ ಮೇಲೆ ಅಲ್ಲಿನ ಎಲ್ಲ ಮಾನವೀ ಸಂಸ್ಥೆಗಳೂ ಹುಟ್ಟಿಕೊಂಡಿವೆ. ರಾಷ್ಟ್ರವೂ ಅವುಗಳಲ್ಲಿ ಒಂದು. ಜೀವನದ ಈ ತತ್ತ್ವಜ್ಞಾನವು ಇಂದಿನ ವಿಚಾರವಂತರು ಧರಿಸಿ ಹೊರಟಿರುವ ಸಹಯೋಗ, ಪ್ರೇಮ ಮತ್ತು ಏಕಾತ್ಮತೆಗಳ ಆಕಾಂಕ್ಷೆಯೊಂದಿಗೆ ಹೊಂದಿಕೊಳ್ಳುವಂತಹದಲ್ಲ. ಸಂಘರ್ಷಾತ್ಮಕ ತತ್ತ್ವಗಳ ಆಧಾರದ ಮೇಲೆ ಸಂಘರ್ಷವಿಹೀನ ಸಮಾಜವನ್ನು ನಿರ್ಮಿಸುವುದು ಸಾಧ್ಯವಿಲ್ಲದ ಮಾತು.

ಮಾನವನ ಅಥವಾ ಪ್ರಾಣಿಗಳ ಮೂಲಸ್ವಭಾವವೇ ಸಂಘರ್ಷದ್ದಾಗಿದ್ದು, ಅದರ ಪ್ರತಿಯೊಂದು ಕ್ರಿಯೆಯ ಪ್ರೇರಣೆಯೂ ಇನ್ನೊಂದು ಜೀವನವನ್ನು ನುಂಗಿಹಾಕಿ ತಾನು ಬದುಕಬೇಕೆಂಬುದೇ ಆಗಿದ್ದಲ್ಲಿ, ಆ ಜೀವಿ ಇನ್ನೊಂದು ಜೀವಿಗಾಗಿ ಬದುಕುವುದನ್ನಾಗಲೀ, ಪ್ರೀತಿಸುವುದನ್ನಾಗಲೀ ನಾವು ಕಲಿಸಲಾರೆವು. ಒಂದುವೇಳೆ ಪ್ರೇಮ, ಸಹಕಾರಗಳಿಗೆ ಆಧಾರ ಕಲ್ಪಿಸಿದರೂ ಅದು ಪ್ರಬಲ ಶತ್ರುವೊಬ್ಬನ ಮುಂದೆ ತಮ್ಮ ಶಕ್ತಿಹೀನತೆಯ ಹಾಗೂ ಸೋಲಿನ ಭಾವದ ಮೇಲೆ ನಿಂತಂತಹದು. ಅದು ತಾತ್ಕಾಲಿಕವಾಗಿದ್ದೀತು. ಅದರಿಂದ ಮನುಷ್ಯನಲ್ಲಿ ಸದ್ಭಾವನೆ, ತ್ಯಾಗ, ಸೇವೆ, ಸಹಿಷ್ಣುತೆ, ಅನುಶಾಸನ ಮುಂತಾದ ಗುಣಗಳು ಒಂದು ಧೋರಣೆಯಾಗಿ ರೂಪುಗೊಂಡಾವೇ ಹೊರತು ಅವು ಆ ಮನುಷ್ಯನ ಅಥವಾ ಸಮಾಜಜೀವನದ ಸಹಜಗುಣಗಳಾಗಲಾರವು. ಬೇರೆಯವರನ್ನು ವಂಚಿಸಲು ನಾಲ್ಕು ಜನ ಠಕ್ಕರು ಪರಸ್ಪರರಲ್ಲಿ ತೋರುವ ಪ್ರಾಮಾಣಿಕ ವ್ಯವಹಾರದಂತೆಯೇ ಈ ಗುಣಗಳೂ ಇರುತ್ತವೆ. ಪರಸ್ಪರ ಪ್ರಾಮಾಣಿಕತೆಯಿಂದಿರಲು ಈ ಠಕ್ಕರು ತಮ್ಮ ಮುಂದೆ ಯಾವುದಾದರೊಂದು ಬೇಟೆಯನ್ನು ಇರಿಸಿಕೊಂಡಿರಲೇಬೇಕಾಗುತ್ತದೆ. ದರೋಡೆ ಮಾಡಲು ಯಾರೂ ಉಳಿಯದಿದ್ದಲ್ಲಿ ಅವರು ತಮ್ಮತಮ್ಮಲ್ಲೇ ಪರಸ್ಪರ ತಲೆ



ಒಡೆಯಲೂ ಸಿದ್ಧರಾಗುತ್ತಾರೆ.

ಇಂದು ಪಶ್ಚಿಮ ರಾಷ್ಟ್ರಗಳಿಗೆ ಎದುರಾಗಿರುವ ವಿಪತ್ತೇ ಇದು. ತಮ್ಮ ತಲೆಯಲ್ಲಿ ತುಂಬಿರುವ ವಿರೋಧಿಗಳು ಮತ್ತು ಶತ್ರುಗಳ ಮೇಲಿನ ದ್ವೇಷವನ್ನು ತೆಗೆದುಹಾಕಿದಲ್ಲಿ ಅವರ ಅಸ್ತಿತ್ವವೇ ಉಳಿಯಲಾರದು. ಏಕೆಂದರೆ ಅವರ ಏಕತೆಯ ಆಧಾರವೇ ಕುಸಿದುಬೀಳುತ್ತದೆ. ಒಂದುವೇಳೆ ಈ ವಿರೋಧಾತ್ಮಕ ಆಧಾರವಿಟ್ಟುಕೊಂಡೇ ಮುಂದುವರಿದಲ್ಲಿ ಮಾನವ–ಏಕತೆಯ ಹಾಗೂ ಶಾಂತಿಸ್ಥಾಪನೆಯ ಅವರ ಆಕರ್ಷಕ ಘೋಷಣೆಗಳು ಎಂದಿಗೂ ಸಾಕಾರಗೊಳ್ಳಲಾರವು. ರಾಷ್ಟ್ರೀಯತೆಯಾದರೋ ಅವರ ಪಾಲಿಗೆ ಗಂಟಲಿನಲ್ಲಿ ಸಿಕ್ಕಿಕೊಂಡಿರುವ ಮೂಳೆಯಂತಾಗಿದೆ. ಇತ್ತ ಬಿಸುಡಲೂ ಅವರಿಗೆ ಸಾಧ್ಯವಿಲ್ಲ; ಅತ್ತ ಇಟ್ಟುಕೊಂಡಷ್ಟೂ ಅವರ ವೇದನೆ ಹೆಚ್ಚು.

**ಸ್ವಾರ್ಥದ ಮಹಲು**

ಪ್ರಪಂಚದ ಯಾವ ದೇಶದ ರಾಜನೀತಿಜ್ಞರೂ ತಮ್ಮ ರಾಷ್ಟ್ರೀಯತೆಯನ್ನು ತೊಡೆದುಹಾಕುವ ಆತ್ಮಘಾತುಕ ಪ್ರಯತ್ನಕ್ಕೆ ಕೈಹಾಕಲಾರರು. ಅವರಾದರೋ ಇತರರ ಹಿತವನ್ನು ಮುಳುಗಿಸಿ ಸ್ವಂತ ರಾಷ್ಟ್ರದ ಸ್ವಾರ್ಥ ಪೂರೈಸಿಕೊಳ್ಳಲು ಜಾಗತಿಕ ಏಕತೆಯ ಘೋಷಣೆಯನ್ನು ಬಳಸಿಕೊಳ್ಳುವುದು ಹೇಗೆ ಎಂಬ ಚಿಂತೆಯಲ್ಲೇ ಮುಳುಗಿದ್ದಾರೆ. ಅದರಿಂದಾಗಿ ಸಂಯುಕ್ತ ರಾಷ್ಟ್ರ ಸಂಘದಂತಹ ಸಂಸ್ಥೆ ಸಹ ಎರಡು ಬಣವಾಗಿ ಹಂಚಿಹೋಗಿದೆ; ಒಂದು ಬಣ ಮತ್ತೊಂದರ ಮೇಲೆ ಕತ್ತಿ ಮಸೆಯುತ್ತಿದೆ. ಅದಕ್ಕಾಗಿಯೇ ಸಾಮ್ಯವಾದ ಮತ್ತು ಪ್ರಜಾತಂತ್ರದ ಸಿದ್ಧಾಂತಗಳ ಪ್ರತಿಪಾದನೆಯೂ ಆರಂಭವಾಗಿದೆ.

**ಸಂಘರ್ಷವಾದ ಸುಳ್ಳು**

ಜಗತ್ತು ನಾಶವಾಗದೆ ಬದುಕುಳಿಯಬೇಕೆಂಬ ಆಸೆ ನಮಗಿದ್ದಲ್ಲಿ, ಈ ಪರಿಸ್ಥಿತಿಯನ್ನು ಬದಲಾಯಿಸಬೇಕು. 'ರಾಷ್ಟ್ರ'ವನ್ನು ಬದಲಾಯಿಸುವ ಆವಶ್ಯಕತೆ ಇಲ್ಲ. ಅದು ಬದಲಾಗುವಂತಹದೂ ಅಲ್ಲ. ಬದಲಾಯಿಸಬೇಕಾದುದು ಜೀವನದ ಸಿದ್ಧಾಂತಗಳನ್ನು. ಅದಕ್ಕಾಗಿ ಸೃಷ್ಟಿ ವಿಕಾಸವನ್ನು ಕುರಿತು ಸರಿಯಾಗಿ ವಿವೇಚಿಸಬೇಕಾಗುತ್ತದೆ. ಪಾಶ್ಚಾತ್ಯ ಖಗೋಳಶಾಸ್ತ್ರಜ್ಞರೂ ಕೋಪರ್ನಿಕಸ್‌ಗಿಂತ ಮುಂಚೆ ಟಾಲೆಮಿ ಸಿದ್ಧಾಂತವನ್ನೇ ಪರಮ ಸತ್ಯವೆಂದು ನಂಬಿ ನಡೆಯುತ್ತಿದ್ದರು. ಅಲ್ಲಿಯವರೆಗೂ ಸೂರ್ಯನೇ ಭೂಮಿಯ ಸುತ್ತ ಸುತ್ತುತ್ತಿದ್ದ; ಅನಂತರ ಭೂಮಿಯೇ ಸೂರ್ಯನ ಸುತ್ತ ಸುತ್ತಲಾರಂಭಿಸಿತು! ಇಂದು ಪಶ್ಚಿಮಕ್ಕೆ ಇಂತಹ ಯಾವುದಾದರೊಂದು ಕ್ರಾಂತಿಕಾರಿ ಸಿದ್ಧಾಂತದ ಆವಶ್ಯಕತೆ ಇದೆ. ಭಗವಾನ್

ಹಾಗೂ ಸೈತಾನ್ ಇವರಿಬ್ಬರ ದ್ವೈತದ ಜಾಗದಲ್ಲಿ ಅದ್ವೈತದ ಕಲ್ಪನೆಯನ್ನು ಅವರಿಗೆ ಮನಗಾಣಿಸಬೇಕಾಗಿದೆ.

ಈ ಜಗತ್ತು ಸಂಘರ್ಷಾತ್ಮಕವಲ್ಲ, ಸೃಜನಾತ್ಮಕ. ಬೀಜವು ವೃಕ್ಷರೂಪದಲ್ಲಿ ಹೊರಬರುವುದು ಸಂಘರ್ಷದ ಉದ್ದೇಶದಿಂದಲ್ಲ, ತನ್ನ ಸ್ವಂತದ ವಿಕಾಸಕ್ಕಾಗಿ, ಸಾಕ್ಷಾತ್ಕಾರಕ್ಕಾಗಿ. ಅದರ ಜೀವನೋದ್ದೇಶವು ಇನ್ನಾವುದರ ವಿನಾಶವೂ ಅಲ್ಲ, ಆದರೆ ಇನ್ನೊಂದಕ್ಕಾಗಿ ತನ್ನನ್ನು ತಾನೇ ಸಮರ್ಪಿಸಿಕೊಳ್ಳುವುದೇ ಆಗಿದೆ. ಸಂಪೂರ್ಣ ಸೃಷ್ಟಿಯು ಪರಸ್ಪರ ಸಹಕಾರದಿಂದಲೇ ಮುಂದುವರಿಯುತ್ತದೆ. ಅದರ ಆಧಾರವು ಸಂಘರ್ಷವಲ್ಲ, ಸಹಯೋಗ. ಪಂಚಮಹಾಭೂತಗಳು ಜೊತೆಗೂಡುವುದು ಇನ್ನಾವುದರೊಂದಿಗೂ ಸಂಘರ್ಷ ಮಾಡಲೆಂದಲ್ಲ, ಆದರೆ ತಮ್ಮ ಪ್ರಕೃತಿಗೆ ತಕ್ಕಂತೆ ನಡೆದುಕೊಂಡು ಆ ಮೂಲಕ ಸೃಷ್ಟಿಕರ್ತನ ಇಚ್ಛೆಯನ್ನು ಪೂರ್ಣ ಮಾಡಲೆಂದು.

**ಭಾರತದ ಸೃಜನಾತ್ಮಕ ದರ್ಶನ**

ನಾವು ವಿಕಾಸವಾದಿಗಳಾಗಿದ್ದಲ್ಲಿ ಸೃಷ್ಟಿಯ ಸೃಜನಾತ್ಮಕ ನಿಯಮಗಳನ್ನು ಒಪ್ಪಿಕೊಳ್ಳಬೇಕೇ ಹೊರತು, ಅದರ ವಿಸರ್ಜನೆಯ ಅಥವಾ ವಿನಾಶದ ನಿಯಮಗಳನ್ನಲ್ಲ. ಸಂಪೂರ್ಣ ಸೃಷ್ಟಿಯಲ್ಲೂ ಪ್ರಾಣಿ ಮಾತ್ರದ ಚೇತನದಲ್ಲೂ ಯಾವುದೋ ಒಂದು ಅವ್ಯಕ್ತ ಶಕ್ತಿಯ ಪ್ರೇರಣೆ ಮತ್ತು ಇಚ್ಛೆಯೇ ಕೆಲಸ ಮಾಡುತ್ತಿದ್ದಲ್ಲಿ ಅದು ನಿಶ್ಚಿತವಾಗಿಯೂ ವಿಧಾಯಕವಾದುದು, ನಿರ್ಮಾಣಾತ್ಮಕವಾದುದು, ಏಕಾತ್ಮಕ ಹಾಗೂ ಭಾವಾತ್ಮಕವಾದುದೇ ಹೊರತು ವಿನಾಶಕವಾಗಲೀ, ವಿಭೇದಕವಾಗಲೀ ಅಲ್ಲ. ಎಲ್ಲವನ್ನೂ ವಿನಾಶದ ಗರ್ಭದಲ್ಲಿ ಸೇರಿಸಿಕೊಳ್ಳುವ ಪ್ರಲಯಕಾಲವೇನೂ ಇದಲ್ಲ! ಜೀವಿಗಳನ್ನು ಬದುಕಿಸಿಕೊಳ್ಳುವ ಸರ್ಜನ್‌ಗಳ ಇಂದಿನ ಯುಗದಲ್ಲಿ ಪ್ರಲಯದ ನಿಯಮಗಳನ್ನು ಅನ್ವಯಿಸುವುದು ಹೇಗೆ ತಾನೆ ಸಾಧುವಾದೀತು?

ಭಾರತವು ರಾಷ್ಟ್ರೀಯತೆಯನ್ನು ಸಹ ಸಂಪೂರ್ಣ ಜಗತ್ತಿನ ಹಾಗೂ ಜೀವನದ ವಿಶ್ಲೇಷಣೆಯ ಆಧಾರದ ಮೇಲೆ ಭಾವಾತ್ಮಕ ರೀತಿಯಲ್ಲಿ ಕಂಡಿದೆ. ನಮ್ಮ ರಾಷ್ಟ್ರೀಯತೆಯು ಇನ್ನೊಬ್ಬರೊಂದಿಗೆ ಸಂಘರ್ಷ ಹಾಗೂ ಸ್ಪರ್ಧೆಯ ಆಧಾರದ ಮೇಲೆ ಬದುಕಿಲ್ಲ. ಕಾಲಕಾಲಕ್ಕೆ ಹಲಕೆಲವು ಅಂಥ ಸಂಘರ್ಷಗಳಾಗಿದ್ದರೂ ಅವುಗಳಿಂದ ರಾಷ್ಟ್ರಮಾನಸದ ಮೇಲೆ ಆಳವಾದ ಮುದ್ರೆಯೇನೂ ಬಿದ್ದಿಲ್ಲ. ನಿಜ–ರಾಷ್ಟ್ರಜೀವನದಲ್ಲಿನ ವಿಕೃತಿಗಳನ್ನು ಅಂತ್ಯಗೊಳಿಸಲು ಯಾವ ಅಂತರ್ಯುದ್ಧಗಳು ನಮ್ಮೊಳಗೆ ನಡೆದವೋ ಅವುಗಳ ಪ್ರಭಾವ ಮಾತ್ರ ಅಚ್ಚೊತ್ತಿದೆ. ರಾಮ ರಾವಣರ ಯುದ್ಧ, ಮಹಾಭಾರತ ಯುದ್ಧಗಳು ಪರಕೀಯರ ಮೇಲೆ ನಡೆದವಲ್ಲ. ಅವು ನಮ್ಮನಮ್ಮೊಳಗೇ ನಡೆದವು.



**ರಾಷ್ಟ್ರ–ಭಗವತೀ ಯೋಜನೆ**

ರಾಷ್ಟ್ರಗಳ ಆವಿರ್ಭಾವವು ಯಾವುದೇ ಐತಿಹಾಸಿಕ ಸಂಯೋಗಗಳ ಕಾರಣದಿಂದ ಅಲ್ಲ. ಆದರೆ ದೈವೀಪ್ರಕೃತಿಯ ಮೂಲ ಯೋಜನೆಯಂತೆ ಆಗಿದೆ ಎಂಬುದೇ ನಮ್ಮ ಧೋರಣೆ. ಕೋಟ್ಯಾವಧಿ ಮನುಷ್ಯರು ರಾಷ್ಟ್ರದ ರೂಪದಲ್ಲಿ ಯಾವುದೇ ಕೃತ್ರಿಮ ಸಾಧನೆಗಳಿಂದ ಒಗ್ಗೂಡಿ ಬರಲಾರರು. ಅವರ ಜೀವನದ ಏಕಸೂತ್ರತೆ, ಮಾತೃಭೂಮಿಯ ಬಗ್ಗೆ ಸಮಾನವಾದ ಪ್ರೇಮ, ಸಮಾನವಾದ ಶತ್ರು–ಮಿತ್ರಭಾವ, ಹಾಗೂ ಇವೆಲ್ಲಕ್ಕಿಂತ ಅಧಿಕವಾಗಿ ತಮ್ಮ ಜೀವನದ ಸಾರ್ಥಕತೆಯ ಕುರಿತಾಗಿ ಸಮಾನ ಭಾವನೆಗಳು, ಆದರ್ಶಗಳು ಇವೆಲ್ಲ ಯಾವುದೇ ಬಾಹ್ಯ ಪ್ರಚಾರತಂತ್ರದ ಮೂಲಕ ಉತ್ಪನ್ನವಾಗುವಂತಹವಲ್ಲ. ರಾಷ್ಟ್ರಜೀವನದಲ್ಲಿ ಕಂಡುಬರುವ ಸಮಾನತೆಗಳು ಯಾವುದೋ ಒಂದು ಅಂತಃಸ್ಥ ಚೇತನದ ಅಭಿವ್ಯಕ್ತಿ ಮಾತ್ರ. ಅವೆಲ್ಲವೂ ರಾಷ್ಟ್ರದ ಲಕ್ಷಣಗಳೇ ಹೊರತು ಅವುಗಳಿಂದಾಗಿಯೇ ರಾಷ್ಟ್ರ ನಿರ್ಮಾಣವಾಗಿಲ್ಲ. ಪಶ್ಚಿಮದೇಶದ ವಿದ್ವಾಂಸರು ಲಕ್ಷಣಗಳನ್ನೇ ಹೇತುವೆಂದು ತಿಳಿದು ಕೃತ್ರಿಮರೂಪದಲ್ಲಿ ರಾಷ್ಟ್ರನಿರ್ಮಾಣದ ಕಲ್ಪನೆ ಮಾಡಿದ್ದಾರೆ. ಮೊದಲನೆಯ ವಿಶ್ವಯುದ್ಧದ ತರುವಾಯ ವಾರ್ಸಾ ಒಪ್ಪಂದದ ಮೂಲಕ ಆ ರೀತಿ ಅನೇಕ ಹೊಸ ರಾಷ್ಟ್ರಗಳನ್ನು ಸೃಷ್ಟಿಸುವ ಪ್ರಯತ್ನ ನಡೆಯಿತು. ಆದರೆ ದ್ವಿತೀಯ ಮಹಾ ಯುದ್ಧವು ಅಂಥ ಪ್ರಯತ್ನಗಳು ವ್ಯರ್ಥವೆಂಬುದನ್ನು ಸಿದ್ಧಮಾಡಿ ತೋರಿಸಿತು.

ಹರಿದ್ವಾರದಲ್ಲಿ ಒಮ್ಮೆ ಕುಂಭಮೇಳ ನಡೆಯಿತು. ಅಲ್ಲಿನ ಅಪಾರ ಜನಸಂದಣಿಯನ್ನು ವೀಕ್ಷಿಸಿದ ಒಬ್ಬ ಅಮೆರಿಕನ್ ಪ್ರವಾಸಿಯು ಪಂ॥ ಮದನ ಮೋಹನ ಮಾಳವೀಯರನ್ನು ಕುರಿತು 'ಈ ಪ್ರಚಂಡ ಜಾತ್ರೆಯ ಪ್ರಚಾರಕ್ಕೆ ಎಷ್ಟು ಹಣ ಖರ್ಚಾಗಿರಬಹುದು? ಹಾಗೂ ಏನೇನು ತಂತ್ರ ಅನುಸರಿಸಲಾಯಿತು?' ಎಂದು ಪ್ರಶ್ನಿಸಿದನು. ಮಾಳವೀಯರು ಪಂಚಾಂಗದ ಪ್ರತಿಯೊಂದನ್ನು ಬಿಚ್ಚಿ 'ಕುಂಭ ಪರ್ವ' ಎಂದು ಮುದ್ರಿಸಿದ್ದ ಜಾಗವನ್ನು ತೋರಿಸುತ್ತಾ 'ಇದೇ ನಮ್ಮ ಸಮಸ್ತ ಪ್ರಚಾರ. ಈ ಒಂದು ಸಾಲನ್ನು ಮುದ್ರಿಸಲು ಎಷ್ಟು ಹಣ ಖರ್ಚಾಗಿರಬಹುದೆಂಬುದನ್ನು ನೀವೇ ಊಹಿಸಿಕೊಳ್ಳಿ' ಎಂದರು! ಕುಂಭಪರ್ವದಂತಹ ಅಸಂಖ್ಯಾತ ಪರ್ವ ಹಾಗೂ ಉತ್ಸವಗಳು ರಾಷ್ಟ್ರದ ಅಸ್ತಿತ್ವದ ಪರಿಣಾಮಗಳೇ ಹೊರತು ಇವೇ ರಾಷ್ಟ್ರ ನಿರ್ಮಾಣದ ಕಾರಣಗಳಲ್ಲ.

**ವಿಶ್ವಾತ್ಮ ಮತ್ತು ರಾಷ್ಟ್ರಾತ್ಮ**

ಜೀವಾತ್ಮದಂತೆಯೇ ರಾಷ್ಟ್ರಾತ್ಮದ ಅಮರತೆ ಹಾಗೂ ವಿಶ್ವಾತ್ಮದೊಂದಿಗೆ ಅದರ ಅಭಿನ್ನ ಸಂಬಂಧದ ಆಧಾರದ ಮೇಲೆಯೇ ನಾವು ಅದರ ವಿಕಾಸದ

ಹಾದಿಯನ್ನು ನಿಶ್ಚಯಿಸಲು ಬಂದೀತು. ಆ ಮಾರ್ಗ ವಿರೋಧಾತ್ಮಕವಲ್ಲ; ವಿಧಾಯಕ. ಸೇನೆಯ ಒಂದು ತುಕಡಿಯ ಉನ್ನತಿ ಹಾಗೂ ಅದರ ಕರ್ತವ್ಯಪೂರ್ತಿಯು ಸಂಪೂರ್ಣ ಸೇನೆಯು ನಿರ್ಧರಿಸುವ ಯೋಜನೆಗೆ ಒಳಪಟ್ಟು, ತನಗಾಗಿ ನಿಯೋಜಿಸಲ್ಪಟ್ಟಿರುವ ವಿಶಿಷ್ಟ ಕಾರ್ಯಭಾಗದ ಯೋಗ್ಯ ನಿರ್ವಹಣೆಯ ಮೂಲಕವೇ ಆಗುತ್ತದೆ. ಆರ್ಥಿಕ ದೃಷ್ಟಿಯಿಂದ ಪ್ರತಿಯೊಂದು ವಿಭಾಗದಲ್ಲೂ ನೈಪುಣ್ಯದ ಸಿದ್ಧಾಂತವನ್ನು ಪ್ರತಿಪಾದಿಸುವ ಪಶ್ಚಿಮ ದೇಶದ ದಾರ್ಶನಿಕರು ಪ್ರತಿಯೊಂದು ರಾಷ್ಟ್ರವೂ ಆ ಸರ್ವಶಕ್ತನಿಂದ ಒಂದು ವಿಶಿಷ್ಟ ಜೀವನಧ್ಯೇಯವನ್ನು ಪಡೆದು ಬಂದಿದೆ ಎಂಬ ವಿಷಯವನ್ನು ಮಾತ್ರ ಏಕೆ ಮರೆಯುತ್ತಾರೋ?

ರಾಷ್ಟ್ರದ ಜೀವನಧ್ಯೇಯವು ಇನ್ನೊಬ್ಬರನ್ನು ನಾಶಗೊಳಿಸುವುದಲ್ಲ, ಸೃಷ್ಟಿಯ ಪರಿಪಾಲನೆಯಲ್ಲಿ ಸಹಕರಿಸುವುದು. ಈ ಕಾರ್ಯಪೂರ್ತಿಗಾಗಿ ತನ್ನ ಸಂಪೂರ್ಣ ಶಕ್ತಿ ಸುರಿಯುವುದೇ ಆ ರಾಷ್ಟ್ರವಿಕಾಸದ ಏಕಮೇವ ಸರ್ವೋತ್ತಮ ಹಾದಿ. ರಾಷ್ಟ್ರಗಳ ಈ ವಿಶೇಷತೆಯನ್ನು ಅಳಿಸಿಹಾಕಿ ಎಲ್ಲರನ್ನೂ ಮಾನವತೆಯ ಹೆಸರಿನಲ್ಲಿ ಒಂದೇ ಅಚ್ಚಿನಲ್ಲಿ ಎರಕ ಹೊಯ್ಯುವ ಪ್ರಯತ್ನವು ಜೀವನದ ನಿಯಮಗಳ ಕುರಿತಾದ ಅಜ್ಞಾನದ ದ್ಯೋತಕವೇ ಸರಿ.

## ಪ್ರಕೃತಿಯಲ್ಲಿ ಸಮನ್ವಯ, ವಿಕೃತಿಯಿಂದ ಸಂಘರ್ಷ

ತಮ್ಮ ತಮ್ಮ ನಿಶ್ಚಿತ ಕಾರ್ಯಪೂರ್ತಿಗಾಗಿ ಉದಿಸಿದ ರಾಷ್ಟ್ರಗಳು ಪರಸ್ಪರ ತಿಕ್ಕಾಟ ನಡೆಸಿದಲ್ಲಿ ಅದು ಅವುಗಳಲ್ಲಿನ ವಿಕೃತಿಯ ದ್ಯೋತಕ; ತಮ್ಮ ಜೀವನೋದ್ದೇಶಗಳ ವಿಸ್ಮೃತಿಯ ಪರಿಣಾಮ. ಅದು ಮಾನವನ ಸುದೀರ್ಘ ವೈವಿಧ್ಯಪೂರ್ಣ ಇತಿಹಾಸದಲ್ಲಿ ವಿರಳವೆಂದೇ ಹೇಳಬೇಕು. ಪ್ರತಿನಿತ್ಯ ಸಾವಿರಾರು ಮೈಲು ಓಡುವ ರೈಲುಗಾಡಿಗಳು ಪರಸ್ಪರ ಢಿಕ್ಕಿಯಾದಾಗ ಅದು ಚಿಂತೆ ತರುವಂತಹದಾದರೂ ನಾವು ಅವುಗಳ ದಿನನಿತ್ಯದ ಒಳ್ಳೆ ಕೆಲಸವನ್ನು ಪರಿಗಣಿಸದಿರಲು ಸಾಧ್ಯವಿಲ್ಲ. ಅಥವಾ ಚಲಿಸುವ ರೈಲುಗಾಡಿಗಳ ಉದ್ದೇಶವೇ ಪರಸ್ಪರ ಢಿಕ್ಕಿ ಹೊಡೆಯುವುದು ಎಂದು ಭಾವಿಸುವುದು ಸಾಧ್ಯವಿಲ್ಲ. ಪ್ರತಿ ರೈಲುಗಾಡಿಯ ಚಾಲಕನಿಗೂ ಅವನ ಜವಾಬ್ದಾರಿ ಹಾಗೂ ಸಂಚಾರ ನಿಯಮಗಳ ಬಗ್ಗೆ ಹೆಚ್ಚು ತಿಳಿವಳಿಕೆ ಮತ್ತು ಎಚ್ಚರಿಕೆ ಮನದಟ್ಟು ಮಾಡಿಕೊಡುವುದೇ ರೈಲುಗಾಡಿಗಳ ಅಪಘಾತ ತಪ್ಪಿಸುವ ಮಾರ್ಗ.

ಎಲ್ಲ ರಾಷ್ಟ್ರಗಳ ನಡುವೆ ಸಹಬಾಳ್ವೆ ಸಾಧ್ಯ ಮಾತ್ರವಲ್ಲ, ಅನಿವಾರ್ಯವೂ ಹೌದು. ಈ ಸಹ–ಅಸ್ತಿತ್ವವು, ಅಖಾಡಕ್ಕಿಳಿಯುವತನಕ ತೊಡೆತಟ್ಟುತ್ತಿರುವ ಇಬ್ಬರು ಪೈಲ್ವಾನರ ಸಹ–ಅಸ್ತಿತ್ವದಂತಲ್ಲ. ಏತದ ಆಟ ಆಡುತ್ತಾ ಕುಳಿತಿರುವ ಇಬ್ಬರು ಬಾಲಕರ ಸಹ–ಅಸ್ತಿತ್ವದೊಂದಿಗೂ ಇದನ್ನು ಹೋಲಿಸಲಾಗುವುದಿಲ್ಲ. ಇದಾದರೋ



ಕಾಮನ ಬಿಲ್ಲಿನ ಸಪ್ತವರ್ಣಗಳೂ ಸುಂದರವಾಗಿ ಮೇಳವಿಸಿರುವಂತಹ ಸಹ–ಅಸ್ತಿತ್ವ. ಅವು ಏಳು ಬಣ್ಣಗಳೂ ತಮ್ಮ ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಂಡು ಸಮಗ್ರ ಸೌಂದರ್ಯಕ್ಕೆ ತಮ್ಮ ಕಾಣಿಕೆ ನೀಡುವುದಿಲ್ಲವೆ, ಆ ರೀತಿ. ಚಿತ್ರದ ಪ್ರತಿಯೊಂದು ಗೆರೆಗೂ ತನ್ನದೇ ಆದ ಮಹತ್ತ್ವದ ಪಾತ್ರವಿದೆ. ಗೆರೆಗಳಿಂದಲೇ ಚಿತ್ರವು ಬರೆಯಲ್ಪಟ್ಟಿದೆಯಾದರೂ ಚಿತ್ರದಿಂದಲೇ ಪ್ರತಿರೇಖೆಗೂ ಸಾರ್ಥಕ್ಯ ದೊರಕುವುದು. ಮನುಷ್ಯನ ಚಿತ್ರದಲ್ಲಿರುವ ಒಂದು ವಕ್ರರೇಖೆ ಕಿವಿಯಂತೆ ಕಾಣಬಹುದು. ಅದೇ ರೇಖೆ ಬೇರೆ ಕಡೆ ಬೇರೊಂದು ರೂಪವನ್ನು ಧರಿಸಬಲ್ಲದು. ಅದರ ವಕ್ರತೆಯನ್ನು ನಾಶಮಾಡಲಾಗಲೀ, ಅದನ್ನು ಚಿತ್ರದಿಂದ ಬೇರೆ ಮಾಡಿ ಬರೆಯಲಾಗಲೀ ಸಾಧ್ಯವಿಲ್ಲ. ಎರಡು ರೀತಿಯಿಂದಲೂ ಅದು ನಾಶವೇ ಆದೀತು. ಇದೇ ರೀತಿ ರಾಷ್ಟ್ರವೂ ತನ್ನ ವಿಶೇಷತೆಯನ್ನೂ, ಪೂರಕತೆಯನ್ನೂ ಅರಿತುಕೊಂಡಾಗಲೇ ಒಂದು ಸುಂದರ ವಿಶ್ವವನ್ನು ರಚಿಸಲು ಶಕ್ತವಾದೀತು.

## ರಾಷ್ಟ್ರೀಯತ್ವದ ವಿಧಾಯಕ ಜಾಗರಣೆಗಾಗಿ

ಸಂಘರ್ಷದ ಬದಲು ಸಹಯೋಗದ ಸತ್ಯತತ್ತ್ವವನ್ನು ಅನುಸರಿಸಿದಾಗಲೇ ಇದನ್ನು ಸಾಧಿಸಲಾದೀತು. ಭಾರತವು ತನ್ನ ರಾಷ್ಟ್ರಜೀವನವನ್ನು ಈ ಆಧಾರದ ಮೇಲೆಯೇ ನಡೆಸುತ್ತ ಬಂದಿದೆ. ಪಶ್ಚಿಮದೇಶಗಳೊಂದಿಗೆ ಸಂಪರ್ಕ ಬಂದ ಮೇಲೆ ಇಂಗ್ಲಿಷರನ್ನು ವಿರೋಧಿಸಲು ಇಲ್ಲೂ ಸಹ ಪಾಶ್ಚಾತ್ಯ ರಾಷ್ಟ್ರೀಯತೆಯ ಆಧಾರದ ಮೇಲೆ ವಿರೋಧಾತ್ಮಕ ರಾಷ್ಟ್ರ ನಿರ್ಮಾಣದ ಪ್ರಯತ್ನ ಆರಂಭವಾಯಿತು. ಆದರೆ, ಅದರಲ್ಲಿ ಯಶಸ್ಸು ದೊರಕಲಿಲ್ಲ. ರಾಷ್ಟ್ರ ಜಾಗರಣದ ಈ ಪ್ರಯತ್ನವು ನೀರಿನ ಗುಳ್ಳೆಯಂತೆಯೇ ಕ್ಷಣಿಕ ಜೀವಿ ಎಂಬುದು ಸ್ಪಷ್ಟವಾಯಿತು. ಅದರಿಂದ ರಾಷ್ಟ್ರದ ಮನಸ್ಸಿನಲ್ಲಿ ಕೆಲವು ವಿಕೃತ ಕಲ್ಪನೆಗಳು ಹುಟ್ಟಿಕೊಂಡಿವೆ ಎಂಬುದೂ ನಿಜ.

ಅವುಗಳನ್ನು ನಾವು ಅಗತ್ಯವಾಗಿ ಸರಿಪಡಿಸಬೇಕು. ಇಂದು ಕಾಣಬರುವ ಪ್ರಾಂತೀಯತೆ, ಜಾತೀಯವಾದ, ಗುಂಪುಗಾರಿಕೆ ಮುಂತಾದ ಭಾವನೆಗಳೆಲ್ಲ ಆ ವಿಕೃತ ಜೀವನದರ್ಶನದ್ದೇ ಪರಿಣಾಮ. ಈ ಭಿನ್ನತೆಗಳನ್ನು ತೊಡೆದುಹಾಕಲು ಆಗಾಗ್ಗೆ ಏಕರೂಪತೆಯನ್ನು ಹೊರಿಸುವ ಕೃತ್ರಿಮ ಪ್ರಯತ್ನಗಳೂ ಮಾಡಲ್ಪಡುತ್ತವೆ. ಒಮ್ಮೆ ರಾಷ್ಟ್ರಕ್ಕೆ ತನ್ನ ಜೀವನದ ಗುರಿಯ ಅರಿವಾಯಿತೆಂದರೆ, ರಾಷ್ಟ್ರ ಶರೀರದಲ್ಲಿ ಪ್ರಾಣಶಕ್ತಿ ಸಂಚಾರವಾಯಿತೆಂದರೆ, ಈ ವಿಘಟನಾತ್ಮಕ ಪ್ರವೃತ್ತಿಗಳೆಲ್ಲವೂ ತಾವಾಗಿಯೇ ಮಾಯವಾಗುತ್ತವೆ.

ಈ ಏಕಾತ್ಮಕ ಹಾಗೂ ವಿಧಾಯಕ ರಾಷ್ಟ್ರ ಜೀವನದ ಜಾಗರಣದ ಪ್ರಯತ್ನದಲ್ಲಿ ಒಂದುಗೂಡಿ ಬನ್ನಿ. ಈ ಪ್ರಯತ್ನವು ಧಾರಣಾತ್ಮಕವಾದುದರಿಂದ ಇದೇ ನಮ್ಮ

ಹಾಗೂ ಇಡೀ ವಿಶ್ವದ ಧರ್ಮ. ಇದರಿಂದಲೇ ವಿಶ್ವ ಕಲ್ಯಾಣದ ಹಾದಿಯಲ್ಲಿ ನಾವು ಮುಂದಾಳುಗಳಾಗಲ್ಲೆವು.



# ೧೦. ವ್ಯಕ್ತಿಸುಖದ ರಹಸ್ಯ

ನಾವೆಲ್ಲರೂ ಮಾನವ ವ್ಯಕ್ತಿಗಳು. ನಮ್ಮ 'ವ್ಯಕ್ತಿತ್ವ' ಎಂದರೆ ಕೇವಲ ನಮ್ಮ ಶರೀರ ಮಾತ್ರವಲ್ಲ. ಈ ಶರೀರವನ್ನು ನಡೆಸುವ ಆತ್ಮ ಒಂದಿದೆ. ಅದರ ಜೊತೆಗೆ ಬುದ್ಧಿಯಿದೆ, ಮನಸ್ಸು ಇದೆ. ಶರೀರಕ್ಕೆ ಚೈತನ್ಯ ಉಸಿರುವುದು ಆತ್ಮವೇ ಆದರೂ ಅದು ವಾಸಿಸಲು ದೇಹ ಬೇಕೇಬೇಕು. ಹೀಗೆ ಶರೀರ, ಆತ್ಮ ಇವುಗಳ ಜೊತೆಗೆ ಬುದ್ಧಿ, ಮನಸ್ಸುಗಳು ಸೇರಿ 'ವ್ಯಕ್ತಿ' ಆಗಿದ್ದಾನೆ.

ಇವುಗಳ ಪರಸ್ಪರ ನಿಕಟ ಸಂಬಂಧ ನಮಗೆ ಹೆಜ್ಜೆ ಹೆಜ್ಜೆಗೂ ಗೋಚರಿಸುತ್ತದೆ. ಶರೀರ ನಿರೋಗಿಯಾಗಿ ಇರಬೇಕಾದರೆ ಮನಸ್ಸಿನ ಪಾತ್ರವೂ ಮುಖ್ಯ. ಒಬ್ಬ ವ್ಯಕ್ತಿ ಆರೋಗ್ಯದ ನಿಯಮದಂತೆ ಆಹಾರ ಸೇವಿಸಿದರೂ ಅವನ ಮನಸ್ಸು ಚಿಂತೆಯಲ್ಲಿ ಮುಳುಗಿದ್ದರೆ ಅವನು ಒಬ್ಬ ರೋಗಿಯೇ. ಅವನ ಶರೀರ ವಿಕಾಸವಾಗುವುದಿಲ್ಲ. ಮರಣದಂಡನೆಯ ಶಿಕ್ಷೆ ಒಬ್ಬನಿಗೆ ವಿಧಿಸಲ್ಪಟ್ಟಿದೆ ಎಂದು ಭಾವಿಸಿ. ಅವನಿಗೆ ಭಕ್ಷ್ಯ ಭೋಜ್ಯಗಳಾವುವೂ ರುಚಿಸವು. ಈಚೆಗೆ ಕೆಲವು ಪಾಶ್ಚಾತ್ಯ ಮಾನಸಿಕ ಚಿಕಿತ್ಸಕರು ಸಹ ವ್ಯಕ್ತಿಯ ದೇಹಾರೋಗ್ಯಕ್ಕೆ ಮನಸ್ಸೇ ಬಹುಮಟ್ಟಿಗೆ ಮೂಲ ಎಂಬ ನಿರ್ಣಯಕ್ಕೆ ಬಂದು ಮುಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ವ್ಯಕ್ತಿಯ ಸುಖದ ಸ್ವರೂಪ ಏನೆಂದು ಚಿಂತಿಸಬೇಕಾಗಿದೆ.

**ಶಾರೀರಿಕ ಸೌಖ್ಯಕ್ಕೆ ಆಧಾರ**

ಪ್ರತಿ ವ್ಯಕ್ತಿಗೂ ತನ್ನ ಸುಖ ಸಾಧಿಸಿಕೊಳ್ಳಬೇಕೆಂಬ ಹಂಬಲ ಇರುವುದಂತೂ ತೀರ ಸ್ವಾಭಾವಿಕವೇ. ಕೇವಲ ಮನುಷ್ಯನಲ್ಲ, ಪ್ರಾಣಿಗಳು ಸಹ ಸುಖಕ್ಕಾಗಿ ಹಾತೊರೆಯುತ್ತವೆ. ಪ್ರಾಣಿಗಳಿಗೆ, ಮನುಷ್ಯರಿಗೆ ಆಹಾರ ಬೇಕು. ಇದನ್ನು ಭೌತಿಕ ಸುಖಗಳಲ್ಲಿ ಒಂದೆಂದು ಭಾವಿಸಬಹುದು. ಆದರೆ, ಆಹಾರದ ವಸ್ತು ಇದ್ದ ಮಾತ್ರಕ್ಕೆ ಕೆಲಸವಾಗದು. ಅಡಿಗೆ ತಯಾರಿಕೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆದರೂ ಅದರ ರುಚಿ, ಅದರ ಸುಖ ಹತ್ತುವುದಿಲ್ಲ. ಹಲ್ವ ಮಾಡಲು ಕೇವಲ ಸಾಮಾನುಗಳು ಇದ್ದರೆ ಸಾಲದು. ಅದರ ತಯಾರಿಕೆಯೂ ಹದವಾಗಿರಬೇಕು. ಭೌತಿಕ ಸುಖದ ಇತರ ಸಾಧನಗಳ ಬಗೆಗೂ ಇದೇ ಮಾತು ನಿಜ. ಬಟ್ಟೆಯನ್ನು ನಮಗೆ ಒಪ್ಪುವ ರೀತಿಯಲ್ಲಿ ಹೊಲಿಯದಿದ್ದರೆ ಅದು ಆನಂದ ನೀಡಲಾರದು. ನನ್ನ ಹತ್ತಿರ ಒಂದು

ಅಂಗಿ ಇತ್ತು. ಅದರಲ್ಲಿ ಎಡಗಡೆಗೆ ಇರಬೇಕಾದ ಕಿಸೆ ಬಲಕ್ಕೂ, ಬಲಗಡೆಗೆ ಇರಬೇಕಾದ್ದು ಎಡಗಡೆಗೂ ಇತ್ತು. ಅದು ಹರಿದುಹೋಗುವವರೆಗೂ, ಅದನ್ನು ಹಾಕಿಕೊಂಡಾಗಲೆಲ್ಲ ನನಗೆ ಏನೋ ಒಂದು ಮುಜುಗರ ಆಗುತ್ತಿತ್ತು. ಒಬ್ಬ ವ್ಯಕ್ತಿ ಒಂದು ಸಲ ತಲೆ ಕ್ಷೌರ ಮಾಡಿಸಿಕೊಂಡು ಬಂದ. ಆದರೆ ಅವನ ತಲೆ ನೋಡಿ ಉಳಿದವರು ಗೇಲಿ ಮಾಡಿದರು. ಅದಕ್ಕಾಗಿ ಅವನು ಪುನಃ ಕ್ಷೌರಿಕನ ಹತ್ತಿರ ಹೋಗಬೇಕಾಯಿತು! ಹೀಗೆ ಕೇವಲ ತನ್ನ ಸ್ವಂತಕ್ಕಾಗುವ ಆನಂದ ತಪ್ಪಿದಲ್ಲಿ ಮನುಷ್ಯ ಪರಿತಪಿಸುವಂತೆಯೇ ಇತರರು ಅವನನ್ನು ನೋಡಿ ಹಾಸ್ಯ ಮಾಡಿದರೂ ಅವನ ಮನಸ್ಸು ಅಸುಖಿಯಾಗುತ್ತದೆ. ಅಂದರೆ ವ್ಯಕ್ತಿಯ ಸೌಖ್ಯವು ಇನ್ನೊಬ್ಬನನ್ನು ಅವಲಂಬಿಸಿಯೇ ಇರುತ್ತದೆ.

ನಾವು ರೈಲಿನಲ್ಲಿ ಪ್ರಯಾಣಕ್ಕೆ ಹೊರಟೆವೆನ್ನಿ. ರೈಲನ್ನು ನಡೆಸುವ ಚಾಲಕ ಮತ್ತು ಇತರ ವ್ಯವಸ್ಥಾಪಕ ವರ್ಗದವರ ಪರಿಚಯ ನಮಗೇನೂ ಇರುವುದಿಲ್ಲ. ಆದರೂ ನಾವು ಸುರಕ್ಷಿತವಾಗಿ ಊರು ತಲುಪಬೇಕಾಗಿದ್ದಲ್ಲಿ ಆ ಎಲ್ಲರೂ ತಮ್ಮ ತಮ್ಮ ಕೆಲಸವನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಬೇಕಾಗುತ್ತದೆ. ಒಬ್ಬ 'ಸಿಗ್ನಲ್' ಕೊಡುವವನು ಅಂದು ತನ್ನ ಪತ್ನಿಯೊಡನೆ ಜಗಳ ಆಡಿ ಬಂದಿದ್ದ ಎನ್ನಿ. ಅವನು ಅದೇ ಬೇಸರದಿಂದ ಕೆಲಸಕ್ಕೆ ಬಂದಿದ್ದಲ್ಲಿ ಅದರಿಂದ ನಮ್ಮ ಜೀವನಕ್ಕೆ ಎಂಥ ಗಂಡಾಂತರ ಒದಗಬಹುದು! ನಾವು ಬೀದಿಯಲ್ಲಿ ಸೈಕಲ್ ಬಿಡುವಾಗಲೂ ಅಷ್ಟೆ. ಇತರ ಸೈಕಲ್ ಸವಾರರ ಮತ್ತು ಪಾದಚಾರಿಗಳ ಸಹಕಾರ ಇಲ್ಲವಾದಲ್ಲಿ ಪರಸ್ಪರ ಢಿಕ್ಕಿಯೇ ಗತಿ! ಹೀಗೆ ನಮ್ಮ ಎಲ್ಲಾ ವ್ಯವಹಾರಗಳಲ್ಲೂ ಇನ್ನೊಬ್ಬರ ಸಹಕಾರ ಇಲ್ಲದೆ ನಡೆಯುವಂತೆಯೇ ಇಲ್ಲ.

**ಬುದ್ಧಿವಿಕಾಸದ ಮೂಲ**

ನಮಗೆ ಮಾನವಬುದ್ಧಿ ಬೆಳೆದಿರುವುದು ಸಹ ಸಮಾಜದಿಂದಲೇ. ಎರಡಕ್ಕೆ ಎರಡು ಕೂಡಿಸಿದರೆ ನಾಲ್ಕು ಆಗುವುದು ಎಂದು ನಾವು ಇಂದು ಸರಾಗವಾಗಿ ಹೇಳುತ್ತೇವೆ. '೧೦೫' ಎಂಬ ಅಂಕೆಯನ್ನು ನಾವು ತತ್‌ಕ್ಷಣ ಬರೆಯಬಲ್ಲೆವು. ಆದರೆ ಇಂದು ಬಹು ಸರಳವಾಗಿ ತೋರುವ ಸಂಗತಿಗಳನ್ನು ಮೊದಲಿಗೆ ಕಂಡುಹಿಡಿಯಲು ಅನೇಕರು ಜೀವ ತೇದಿದ್ದಾರೆ. ಸೊನ್ನೆಯ ಕಲ್ಪನೆಗೆ ಬಂದು ಮುಟ್ಟಲು ಅದೆಷ್ಟೋ ಸಂಶೋಧನೆಗಳು ನಡೆದವು. ಎಂದಮೇಲೆ ಇವತ್ತಿನ ನಮ್ಮ 'ಬುದ್ಧಿಶಕ್ತಿ' ನಮಗೆ ನಮ್ಮ ಹಿರಿಯರಿಂದ, ಗುರುಗಳಿಂದ, ಬೇರೆ ಬೇರೆ ವ್ಯಕ್ತಿಗಳಿಂದ ಪ್ರಾಪ್ತವಾಗಿದೆ ಎನ್ನುವುದು ನಿರ್ವಿವಾದ.

ನಾವು ಕಲಿಯುವ ಭಾಷೆಯೂ ಅಷ್ಟೆ. ಭಾಷೆಯಿಂದ ನಮ್ಮ ಭಾವನೆಗಳನ್ನು ಪ್ರಕಟಿಸಬಹುದು, ಜಗಳಗಳನ್ನು ತಪ್ಪಿಸಬಹುದು. ಕೋಪಗೊಂಡ ಜನರನ್ನು



ಶಾಂತಗೊಳಿಸಬಹುದು. ಅಗತ್ಯ ಬಿದ್ದಾಗ, ಜಗಳ ಸಹ ಆಡಬಹುದು! (ಇಲ್ಲದಿದ್ದಲ್ಲಿ ಕೇವಲ ಗುದ್ದಾಡಬೇಕಿತ್ತು!) ನಮ್ಮ ಪ್ರೇಮವನ್ನು ಪ್ರಕಟಿಸಬಹುದು. ಭಾಷೆಯ ಉಪಯೋಗ ಅಷ್ಟಿಷ್ಟಲ್ಲ. ನಮ್ಮ ಭಾವನೆಗಳನ್ನು ಪ್ರಕಟಿಸಲು ಮಾತ್ರವಲ್ಲ, ನಮ್ಮ ಮನಸ್ಸಿನಲ್ಲಿ ಒಂದು ನಿರ್ದಿಷ್ಟ ಕಲ್ಪನೆ ಮೂಡಿಸಲೂ ಸಹ ಅದು ಸಹಾಯ ನೀಡುತ್ತದೆ. ಉದಾಹರಣೆಗೆ 'ಆತ್ಮ', 'ಮನಸ್ಸು' ಎಂಬ ಕ್ಲಿಷ್ಟ ಪದಗಳ ನಿರ್ದಿಷ್ಟ ಅರ್ಥ, ಅಭಿಪ್ರಾಯಗಳು ಸಹ ನಮಗೆ ಗೊತ್ತಾಗುವುದು ಭಾಷೆಯಿಂದಲೇ. (ಇಂಗ್ಲಿಷ್ ಭಾಷೆಯಲ್ಲಿ ಆತ್ಮವನ್ನು Soul ಎಂದೂ, ಮನಸ್ಸನ್ನು Mind ಎಂದೂ ಭಾಷಾಂತರ ಮಾಡುತ್ತಾರೆ. ಆದರೆ ಆ ಶಬ್ದಗಳು ಪೂರ್ಣಾರ್ಥ ಕೊಡುವುದಿಲ್ಲ.) ಹೀಗೆ ನಮ್ಮ ವ್ಯವಹಾರಕ್ಕೆ ಸಹಕಾರಿಯಾದ, ಮಾಧ್ಯಮವಾದ ಭಾಷೆಯನ್ನು ನಾವು ಸಮಾಜದಿಂದಲೇ ಕಲಿತಿದ್ದೇವೆ.

**ಮನಸ್ಸಿನ ಆನಂದ ಎಲ್ಲಿದೆ?**

ವ್ಯಕ್ತಿಗೆ ಸಂತೋಷವಾಯಿತು, ಎಂದರೆ ಅರ್ಥವೇನು? ವ್ಯಕ್ತಿಯ ಮನಸ್ಸಿಗೆ ಆ ಕೆಲಸ ಒಪ್ಪಿತು, ಅದರಲ್ಲಿ ಅವನ ಮನಸ್ಸು ರಮಿಸಿತು ಎಂದು. ಅಲ್ಲದೆ, ಮನುಷ್ಯ ಒಬ್ಬೊಂಟಿಗನಾಗಿ ಆ ಸಂತೋಷವನ್ನು ಅನುಭವಿಸಲಾರ. ಅವನೊಬ್ಬನೇ ನಗುವುದೂ ಸಾಧ್ಯವಿಲ್ಲ. ಅವನು ತಾನು ಮಾಡಿದ ಸಾಹಸದ ಕೆಲಸವನ್ನು ಮತ್ತೊಬ್ಬರ ಹತ್ತಿರ ಹೇಳಿಕೊಳ್ಳುತ್ತಾನೆ. ಆಗಲೇ ಅವನಿಗೆ ಆನಂದ ವೃದ್ಧಿಯಾಗುವುದು. ಅದಕ್ಕಾಗಿಯೇ ಸಮಾರಂಭಗಳನ್ನು ಆತ ನಡೆಸುತ್ತಾನೆ. ಬಂಧುಮಿತ್ರರಿಗೆ ಆಹ್ವಾನ ನೀಡುತ್ತಾನೆ. ವಿವಾಹ ಸಮಯದಲ್ಲಿ ಎಲ್ಲರನ್ನೂ ಆಹ್ವಾನಿಸಿ ಸತ್ಕರಿಸುತ್ತಾನೆ. ಆಗಲೇ ಅದು ಪೂರ್ಣವಾಯಿತೆಂದು ಅವನು ಭಾವಿಸುತ್ತಾನೆ. ಒಬ್ಬ ಯಾರನ್ನೋ ಆ ಸಂದರ್ಭದಲ್ಲಿ ಕರೆಯದಿದ್ದರೆ ಅಥವಾ ಕರೆದವರು ಬಾರದಿದ್ದಲ್ಲಿ ಅದೇನೋ ಅಸಮಾಧಾನ. 'ಕಾಡಿನಲ್ಲಿ ನವಿಲು ನಾಟ್ಯವಾಡಿದಂತೆ' ಅದು. ಪದ್ಮಶ್ರೀ, ಪದ್ಮಭೂಷಣ, ಬಿರುದುಗಳು ಸಮಾಜದಿಂದಲೇ ಬರುತ್ತವೆ. ಅದರಿಂದ ಹೊಟ್ಟೆ ತುಂಬದಿದ್ದರೂ ಸಂತೋಷ ಸಿಗುತ್ತದೆ. ಸಮಾಜ ನೀಡಿದ ಸನ್ಮಾನ ಅದು. ಸಮಾಜ ನನ್ನನ್ನು ಕೆಟ್ಟವನು ಎಂದಲ್ಲಿ ನನಗೆ ದುಃಖವೂ, ಸಮಾಜ ಒಳ್ಳೆಯವನು ಎಂದಲ್ಲಿ ಆನಂದವೂ ಉಂಟಾಗುತ್ತದೆ.

ಒಬ್ಬ ಹೆಂಗಸಿಗೆ ತಾನು ಕೊಂಡು ತಂದಿದ್ದ ಉಂಗುರವನ್ನು ಎಲ್ಲರಿಗೂ ತೋರಿಸಬೇಕು ಎನ್ನಿಸಿತು. ಆಕೆ ಅದನ್ನು ಬೆರಳಲ್ಲಿ ತೊಟ್ಟು ಊರೆಲ್ಲಾ ಅಲೆದಳು. ಆದರೆ ಯಾರೂ ಅದರ ಬಗ್ಗೆ ವಿಚಾರಿಸಲಿಲ್ಲ. ಅವಳಿಗೆ ವಿಪರೀತ ನಿರಾಸೆ, ದುಃಖ ಆಯಿತು. ಆಗ ಅವಳು ತನ್ನ ಸ್ವಂತ ಮನೆಗೇ ಬೆಂಕಿ ಹಚ್ಚಿದಳು. ಜನ ಬೆಂಕಿ ಆರಿಸಲೆಂದು ಬಂದರು. ಅವರು ನೀರು ಹಾಕಿ ಬೆಂಕಿ ಆರಿಸುತ್ತಿದ್ದಾಗ ತನ್ನ

ಉಂಗುರ ಇರುವ ಬೆರಳನ್ನು ಮುಂದೆ ಮಾಡಿ ಅವಳು 'ಇಗೋ ಇಲ್ಲಿ ನೀರು ಹಾಕಿ, ಅಗೋ ಅಲ್ಲಿ ನೀರು ಹಾಕಿ' ಎಂದು ತೋರಿಸಲಾರಂಭಿಸಿದಳು. ಆಗ ಯಾರೋ 'ಉಂಗುರ ಯಾವಾಗ ಕೊಂಡಿರಿ, ಬಹು ಚೆನ್ನಾಗಿದೆ' ಎಂದರು. ತತ್‌ಕ್ಷಣ ಆಕೆ 'ನೀವು ಮುಂಚೆಯೇ ಈ ಪ್ರಶ್ನೆ ಕೇಳಿದ್ದರೆ ನಾನು ಮನೆಗೆ ಬೆಂಕಿ ಹಚ್ಚುವ ಪ್ರಸಂಗವೇ ಬರುತ್ತಿರಲಿಲ್ಲ' ಎಂದಳಂತೆ!

ಕವಿಗಳೂ ಅಷ್ಟೆ. ಅವರು ಬರೆದ ಕವಿತೆಗಳನ್ನು ಇನ್ನೊಬ್ಬರು ಓದಿಸಿ ಕೇಳಿ 'ಭೇಷ್' ಎಂದಾಗಲೇ ಅವರಿಗೆ ಸಮಾಧಾನ. ಅರಸಿಕರ ಎದುರಲ್ಲಿ ಕವಿತೆ ಹೇಳುವ ದೌರ್ಭಾಗ್ಯವನ್ನು ವಿಧಿ ನನಗೆ ಕೊಡದಿರಲಿ, ಎಂದೇ ಒಬ್ಬ ಕವಿ ಪ್ರಾರ್ಥಿಸಿದ್ದಾನೆ! ಒಬ್ಬ ರಾಜನಿಗೆ ಒಂದು ಕಿವಿ ಹರಿದುಹೋಗಿತ್ತು. ಕ್ಷೌರಿಕನೊಬ್ಬನನ್ನು ಬಿಟ್ಟು ಬೇರಾರಿಗೂ ಅದು ತಿಳಿಯದು. 'ಯಾರಿಗೂ ಅದನ್ನು ತಿಳಿಸಬಾರದು, ತಿಳಿಸಿದಲ್ಲಿ ಘೋರ ಶಿಕ್ಷೆ' ಎಂದು ಅವನಿಗೆ ಕಟ್ಟಪ್ಪಣೆಯಾಗಿತ್ತು. ಆದರೆ ಬೇರೆಯವರಿಗೆ ಅದನ್ನು ಹೇಳಬೇಕೆಂಬ ಆತುರ ಅವನಿಗೆ. ಕೊನೆಗೆ ಅವನು ಅದನ್ನು ತಡೆಯಲಾರದೆ ಕಾಡಿನಲ್ಲಿದ್ದ ಒಂದು ಮರದ ಹತ್ತಿರ ಹೋಗಿ 'ರಾಜನಿಗೆ ಎಡಕಿವಿ ಹರಿದುಹೋಗಿದೆ' ಎಂದು ಜಪ ಮಾಡತೊಡಗಿದನಂತೆ! ಹೀಗೆ ವ್ಯಕ್ತಿ ತನ್ನ ಆನಂದವನ್ನು ಅನುಭವಿಸಲೂ, ತನಗೆ ಗೊತ್ತಿರುವ ವಿಷಯ ಇನ್ನೊಬ್ಬರಿಗೆ ಹೇಳಲೂ ಅವನಿಗೆ ಮತ್ತೊಬ್ಬ ಬೇಕೇಬೇಕು.

**ಒಂಟಿತನದಲ್ಲಿ ಭಯ**

ವ್ಯಕ್ತಿಗೆ ಒಬ್ಬನೇ ಯಾವ ಕೆಲಸ ಮಾಡಲೂ ಹಿಂಜರಿಕೆ, ಬೇಸರಿಕೆ. ಅವನ ಜೊತೆಗೆ ಇನ್ನೊಬ್ಬರು ಇದ್ದರೆ ಅವನು ಕೆಲಸದಲ್ಲಿ ಉತ್ಸಾಹದಿಂದ ಮುಂದಾಗುತ್ತಾನೆ. ಒಂಟಿಗನಾಗಿದ್ದಲ್ಲಿ ತನಗೇನಾದರೂ ಅಪಾಯ ತಟ್ಟೀತೆಂದು ಅವನಿಗೆ ಹೆದರಿಕೆಯೂ ಆಗುತ್ತದೆ. ಕತ್ತಲೆಯಾದಾಗ ಜೊತೆಗೆ ಯಾರಾದರೂ ಒಬ್ಬರು ಬೇಕು. ಒಂದರ ಪಕ್ಕದಲ್ಲಿ ಒಂದನ್ನು ಬರೆದಂತೆ ಇದು. ಆಗ ಅದರ ಮೌಲ್ಯ '೧೧' ಆಗುತ್ತದೆ. ಎಂದರೆ ಹತ್ತರಷ್ಟು ಹೆಚ್ಚುತ್ತದೆ. ವ್ಯಕ್ತಿಗೆ ಇನ್ನೊಬ್ಬರ ಸಹವಾಸದಿಂದ ಹತ್ತರಷ್ಟು ಧೈರ್ಯ ಬೆಳೆಯುತ್ತದೆ. ಜೊತೆಗೊಬ್ಬ ಇದ್ದರೆ ದರೋಡೆಗಾರನಿಗೂ ಎಲ್ಲಿಲ್ಲದ ಧೈರ್ಯ!

ಯುದ್ಧದ ಸಮಯದಲ್ಲಿ ನಡೆದ ಒಂದು ಘಟನೆ. ಆಗ ರೈಲು ಭರ್ತಿಯಾದಲ್ಲಿ ಕೆಲವೊಮ್ಮೆ ಟಿಕೆಟ್ ಕೊಡುತ್ತಿರಲಿಲ್ಲ. ಒಬ್ಬ ಹಳ್ಳಿಯ ವ್ಯಕ್ತಿ ಟಿಕೆಟ್ ಇಲ್ಲದೆ ರೈಲು ಹತ್ತಿದ್ದ. ಆದ್ದರಿಂದ ಸೀಟಿನ ಮೇಲೆ ಕುಳಿತುಕೊಳ್ಳಲು ಆತನಿಗೆ ಏನೋ ಹೆದರಿಕೆ. ಅವನು ಕೆಳಗಡೆಯೇ ಕುಳಿತಿದ್ದ. ಕ್ರಮೇಣ ಮಾತುಕತೆಯಲ್ಲಿ ಸೀಟ್ ಮೇಲೆ ಕುಳಿತಿದ್ದ ಕೆಲವರಲ್ಲೂ ಟಿಕೆಟ್ ಇಲ್ಲವೆಂಬುದು ಗೊತ್ತಾಯಿತು. ತನಗೆ



'ಜೊತೆಗಾರರು' ಸಿಕ್ಕಿದರೆಂದು ಅವನಿಗೆ ಧೈರ್ಯ ಬಂದಿತು. ಕೂಡಲೇ ಅವನೂ ಎದ್ದು ಬಂದು ಸೀಟಿನ ಮೇಲೆ ಕುಳಿತ! ರಾಬಿನ್‌ಸನ್ ಕ್ರೂಸೋ ನಿರ್ಜನ ಪ್ರದೇಶದಲ್ಲಿ ಅಲೆಯುತ್ತಿದ್ದಾಗ, ಎಷ್ಟೋ ದಿನಗಳ ಮೇಲೆ ಒಬ್ಬ ವ್ಯಕ್ತಿ ಅವನಿಗೆ ಸಿಕ್ಕಿದ. ಅವನಿಗೆ ಮಾತೂ ಬಾರದು. ಆದರೂ ಆಗ ಕ್ರೂಸೋಗೆ ಆದ ಸಮಾಧಾನಕ್ಕೆ ಕೊನೆ ಎಲ್ಲಿ!

'ಏಕೋಽಹಂ ಬಹು ಸ್ಯಾಮ್' ಒಬ್ಬನಿದ್ದವನು, ಬರುಬರುತ್ತಾ ಅನೇಕವಾಗಿ ಬೆಳೆಯಬೇಕು ಎನ್ನುವುದೇ ನಿಸರ್ಗದ ನಿಯಮ. ಹೀಗೆ ವ್ಯಕ್ತಿ, ತನ್ನ ಶರೀರದ, ಮನಸ್ಸಿನ, ಬುದ್ಧಿಯ, ಆತ್ಮದ ಸುಖವನ್ನು ಇನ್ನೊಬ್ಬರೊಂದಿಗೆ ಹಂಚಿಕೊಂಡೇ ಅನುಭವಿಸುತ್ತಾನೆ.

**ವ್ಯಕ್ತಿತ್ವದ ವಿಕಾಸ**

ಇನ್ನೊಬ್ಬರೊಂದಿಗೆ ಸೇರುವುದು, ಸಂವಾದ ಮಾಡುವುದು, ವ್ಯವಹಾರ ನಡೆಸುವುದು, ಇವೆಲ್ಲ ವ್ಯಕ್ತಿಯ ಜೀವನದಲ್ಲಿ ಹಾಸುಹೊಕ್ಕಾಗಿವೆ. ವ್ಯಕ್ತಿಯ ಬದುಕು ಮತ್ತೆ ಹಲವರ ಅವಲಂಬನೆಯಿಂದ ಎಂಬುದು ನಿತ್ಯಾನುಭವದ ಸಂಗತಿ. ಯಾವುದಾದರೂ ವಸ್ತುವನ್ನು ಹತ್ತು ಜನ ಇಟ್ಟ ಹೆಸರಿನಿಂದಲೇ ಅವನು ಕರೆಯುತ್ತಾನೆ. ವ್ಯವಹಾರಕೌಶಲವನ್ನು ಸಹ ನಾವು ಕಲಿತಿರುವುದು ನೆರೆಹೊರೆಯವರಿಂದಲೇ. ಅಕಸ್ಮಾತ್ ನಾವು ಕಾಡಿನಲ್ಲೇ ಇದ್ದಿದ್ದರೆ ನಮಗೆ ಮಾತನಾಡಲೂ ಬರುತ್ತಿರಲಿಲ್ಲ. ಲಕ್ನೋದ 'ವೃಕಬಾಲಕ' ರಾಮುವಿನ ಪ್ರಸಂಗ ನಮಗೆ ಗೊತ್ತಿರಬೇಕು. ಮಗುವಾಗಿದ್ದಾಗ ತೋಳವೊಂದು ಅವನನ್ನು ಎತ್ತಿಕೊಂಡು ಹೋಗಿ ತನ್ನ ಗುಹೆಯಲ್ಲಿ ಸಾಕಿಕೊಂಡಿತು. ಕಾಡಿಗೆ ಹೋಗಿದ್ದ ಕಟ್ಟಿಗೆ ಕಡಿಯುವವರಿಗೆ ಆ ಬಾಲಕ ಸಿಕ್ಕಿದ. ತೋಳಗಳ ಸಹವಾಸದಲ್ಲಿದ್ದ ಆ ಹುಡುಗನಿಗೆ ಮಾತು ಹೇಗೆ ಬಂದೀತು? ಪ್ರಾಣಿಗಳಂತೆ ಅವನು ನೆಲಕ್ಕೇ ಬಾಯೊಡ್ಡಿ ತಿನ್ನುತ್ತಿದ್ದ. ತನ್ನೆರಡು ಕೈಗಳನ್ನು ನೆಲಕ್ಕೆ ಊರಿಕೊಂಡು ಪ್ರಾಣಿಯಂತೆ ನಡೆಯುತ್ತಿದ್ದ. ಹೀಗೇಕೆ? ಅವನು ತೋಳಗಳ ಜೊತೆಯಲ್ಲಿ ಬೆಳೆದಿದ್ದುದೇ ಅದರ ಕಾರಣ. ಅಮೇರಿಕನರಿಗೆ ನಮ್ಮ ಹಾಗೆ ಕಾಲು ಮಡಿಸಿ ಕೂರಲು ಬರುವುದಿಲ್ಲ. ಆಫ್ರಿಕಾದಲ್ಲೂ ಅಷ್ಟೆ. ಅಲ್ಲಿನ ಹೆಂಗಸರು ಕಾಲು ಚಾಚಿಕೊಂಡೇ ಕೂರುತ್ತಾರೆ. ಏಕೆಂದರೆ ಅವರಿಗೆ ಹಾಗೆ ಕುಳಿತೇ ಅಭ್ಯಾಸ. ಇದರ ನಿಷ್ಕರ್ಷೆ ಏನು? ತಾನು ವಾಸಿಸುವ ಸುತ್ತಮುತ್ತಲಿನ ಜನರಂತೆಯೇ ಮನುಷ್ಯನ ಅಭ್ಯಾಸಗಳೂ ರೂಪುಗೊಳ್ಳುತ್ತವೆ.

ನಮ್ಮೆಲ್ಲ ಕ್ರಿಯೆಗಳಲ್ಲೂ ನಮ್ಮ ಸುತ್ತ ವಾಸಿಸುವ ಜನಗಳ ಸಂಪರ್ಕ ಬರುತ್ತದೆ. ಬೇಸಾಯ, ತಂತ್ರಜ್ಞತೆ, ಕಲೆ, ವಿಜ್ಞಾನ, ಈ ಎಲ್ಲಾ ಇನ್ನೊಬ್ಬರಿಂದಲೇ ನಾವು ಕಲಿಯುವಂತಹ ಸಂಗತಿಗಳು. ಒಬ್ಬ ಹುಡುಗನಿಗೆ, ಒಳ್ಳೆಯ ಕೆಲಸ, ಕೆಟ್ಟ ಕೆಲಸಗಳ

ವಿವೇಚನೆ ತಿಳಿಸುವುದೂ ಸಮಾಜವೇ. ಪಾಪ–ಪುಣ್ಯ ಎಂದರೇನು? ಒಳ್ಳೆಯ ಆಚಾರ–ವಿಚಾರ ಯಾವುವು? ಇವುಗಳೂ ಹಿರಿಯರಿಂದಲೇ ತಿಳಿಯುತ್ತವೆ. ನಡವಳಿಕೆಯಲ್ಲಿನ ವಿಧಿ–ನಿಷೇಧಗಳು ಕೂಡ ನಮ್ಮಷ್ಟಕ್ಕೆ ನಮಗೆ ಅರ್ಥವಾಗುವುದಿಲ್ಲ. ಔದಾರ್ಯ, ಸೇವಾಭಾವ, ಸ್ನೇಹ, ಸುಖ–ದುಃಖದ ಸಂವೇದನೆ ಇತ್ಯಾದಿ ಸುಗುಣಗಳೂ ಸಮಾಜದಿಂದಲೇ ನಮಗೆ ದೊರೆಯುತ್ತವೆ. ಉತ್ತಮ ಸಂಸ್ಕಾರಗಳನ್ನು ನೀಡುವ ಕೀರ್ತನೆ, ಭಜನೆಗಳು ಯೋಜಿತವಾಗಿರುವುದೂ ಸಮಾಜದಿಂದಲೇ. ಭಕ್ತಿಯ ಉಗಮಕ್ಕೂ ಸಮಾಜವೇ ಮೂಲ. ಶಿಷ್ಟಾಚಾರಗಳು ತಿಳಿಯುವುದೂ ಸುತ್ತಮುತ್ತಲವರಿಂದ. ಕೊನೆಗೆ ಮಗು ಹುಟ್ಟಿದಾಗ ಅದರ ತಲೆಗೆ ಸರಿಯಾದ ಆಕಾರವನ್ನೂ ದಾದಿಯೇ ಕೊಡುವಳು.

**ಸಮಾಜದಂತೆ ವ್ಯಕ್ತಿ**

ಪ್ರತಿ ವ್ಯಕ್ತಿಯೂ ತಾನು ಹುಟ್ಟಿ ಬೆಳೆದ ಸಮಾಜದ ವೈಶಿಷ್ಟ್ಯಗಳನ್ನೇ ತಾನೂ ಮೈಗೂಡಿಸಿಕೊಳ್ಳುತ್ತಾನೆ. ಅದರಂತೆ ಪ್ರತಿ ಜನಾಂಗದಲ್ಲೂ ಅದರದೇ ವಿಶಿಷ್ಟ ಕಲ್ಪನೆಗಳು, ರೂಢಿಗಳು ಪ್ರಚಲಿತವಿರುತ್ತವೆ. ನಾವು ನಮ್ಮ ದೇಶದಲ್ಲಿ ದಡ್ಡನನ್ನು 'ಗೂಬೆ' ಎಂಬ ಹೆಸರಿಟ್ಟು ಕರೆದರೆ, ಇಂಗ್ಲಿಷಿನವರು 'ಗೂಬೆಯಂತೆ ಜಾಣ' ಎನ್ನುತ್ತಾರೆ! ಅರಬ ದೇಶದಲ್ಲಿ 'ಕತ್ತೆ' ಬುದ್ಧಿವಂತ ಪ್ರಾಣಿಯೆಂದು ನಂಬಿಕೆ! ಇಂಗ್ಲೆಂಡಿನ ಜನ ಪರಸ್ಪರ ಕೈಕುಲುಕಿದರೆ ನಾವು ಕೈ ಜೋಡಿಸಿ ನಮಸ್ಕಾರ ಮಾಡುತ್ತೇವೆ. ಆಫ್ರಿಕಾದಲ್ಲಂತೂ ಪರಸ್ಪರ ಮೂಗುಜ್ಜಿ ಆದರ ಪ್ರಕಟಿಸುತ್ತಾರಂತೆ! ಇಂಗ್ಲೆಂಡ್ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ಪ್ರಚಲಿತವಿರುವ 'ಬಾಲ್ ಡಾನ್ಸ್' ಅವರಿಗೆ ಆನಂದ ನೀಡುವ ಸಾಧನ. ನಮ್ಮ ಸಂಪ್ರದಾಯಗಳಿಗೆ ಅದು ಬಹು ದೂರ. ಹೀಗೆ ಪ್ರತಿಯೊಂದು ಸಮಾಜದ ನಡವಳಿಕೆ, ರೀತಿ ನೀತಿ ಬೇರೆಬೇರೆ. ಮತ್ತು ಆಯಾ ಸಮಾಜಕ್ಕೆ ತಕ್ಕಂತೆ ಅಲ್ಲಲ್ಲಿನ ವ್ಯಕ್ತಿಯ ವಿಶಿಷ್ಟ ವ್ಯಕ್ತಿತ್ವವೂ ರೂಪುಗೊಳ್ಳುತ್ತದೆ.

ವ್ಯಕ್ತಿಗೆ ಮನಸ್ಸು ಇರುವಂತೆ ಸಮಾಜಕ್ಕೂ ಒಂದು ಮನಸ್ಸಿದೆ. ನಮ್ಮ ನಾಡಿನ ಹತ್ತು ಜನ ಒಟ್ಟಿಗೆ ಸೇರಿದಲ್ಲಿ ಒಂದು ದೇವಸ್ಥಾನ ಕಟ್ಟೋಣ ಎಂದು ಯೋಚಿಸುತ್ತಾರೆ. ಅದಕ್ಕಾಗಿ ಚಂದಾ ಸಹ ತಾವೇ ಹಾಕುತ್ತಾರೆ. ವ್ಯಕ್ತಿಯ ಮನಸ್ಸು ಒಮ್ಮೊಮ್ಮೆ ಪ್ರಮಾದದಿಂದ ವರ್ತಿಸುವಂತೆ ಸಮಾಜವೂ ಒಮ್ಮೊಮ್ಮೆ ವರ್ತಿಸಬಹುದು. ಲಕ್ನೋದಲ್ಲಿ ಒಮ್ಮೆ ಯಾರೋ ಮಕ್ಕಳನ್ನು ಅಪಹರಿಸುತ್ತಿದ್ದರು. ಜೋಳಿಗೆ ಹಿಡಿದು ಹೋಗುತ್ತಿದ್ದ ಸಂನ್ಯಾಸಿಯೊಬ್ಬನನ್ನೇ ಯಾರೋ 'ಮಕ್ಕಳ ಕಳ್ಳ' ಎಂದು ಕೂಗಿದರು. ಉಳಿದವರು ಅದಕ್ಕೆ ದನಿ ಕೂಡಿಸಿದರು. ಕೊನೆಗೆ ಎಲ್ಲರೂ ಸೇರಿ ಅವನನ್ನು ಥಳಿಸಿದರು. ಹತ್ತು ಜನರ ಮನಸ್ಸಿನ ಭಾವನೆಗಳ ಪರಿಣಾಮವೇ ಉಳಿದವರ ಮೇಲೂ ಆಯಿತು.



**ನಿಸರ್ಗದ ಮಡಿಲಲ್ಲಿ**

ವ್ಯಕ್ತಿಯ ಸುಖ ಸಮಾಜದ ಮೇಲೆ ಮಾತ್ರವಲ್ಲ, ಪ್ರಕೃತಿಯ ಮೇಲೆಯೂ ನಿಂತಿದೆ. ಅವನ ಆತ್ಮಕ್ಕೆ ನಿಸರ್ಗದಿಂದಲೂ ಅನೇಕ ಸಲ ಆನಂದ ದೊರೆಯುತ್ತದೆ. ಅವನ ಮನಸ್ಸು ಚಿಂತಿತವಾಗಿದ್ದಾಗ ನಿಸರ್ಗದಿಂದ ಅವನಿಗೆ ಸಮಾಧಾನ ದೊರಕುತ್ತದೆ. ಹೂವು ಅರಳುವುದನ್ನು ನೋಡಿದಾಗ ವ್ಯಕ್ತಿಯ ಮನಸ್ಸೂ ಅರಳುತ್ತದೆ. ಹಕ್ಕಿಗಳ ಇಂಚರ ಕೇಳಿ ವ್ಯಕ್ತಿ ತಾನೂ ಅದನ್ನು ಅನುಕರಿಸುತ್ತಾನೆ. ಬಾನಂಗಣವನ್ನು ಬೆಳಗುವ ಬಣ್ಣಗಳನ್ನು ಕಂಡಾಗ ಆನಂದಪರವಶನಾಗಿ ಅದರ ಕಡೆಗೆ ದಿಟ್ಟಿಸುತ್ತಾನೆ. ಕೆಲವರಿಗಂತೂ ಅದರಿಂದಲೇ ಹೊಸ ಹೊಸ ಕಲ್ಪನೆಗಳೂ ಹೊಮ್ಮುತ್ತವೆ. ಸೂರ್ಯೋದಯ, ಸೂರ್ಯಾಸ್ತ ಯಾವ ಮನುಷ್ಯನ ಮನಸ್ಸನ್ನು ತಾನೆ ಸೂರೆಗೊಳ್ಳುವುದಿಲ್ಲ? ಕಡಲಿನ ಮೊರೆತ, ಅಲೆಗಳ ಏರಿಳಿತ ನೋಡುತ್ತಾ ಅದೆಷ್ಟು ಜನ ಮೈಮರೆಯುವುದಿಲ್ಲ? ಹೀಗೆ ವ್ಯಕ್ತಿಗೆ ಆನಂದ ತರುವುದರಲ್ಲಿ ನಿಸರ್ಗದ್ದೂ ಪಾತ್ರ ಇದೆ.

**ಮರೆತರೆ ಮೃತ್ಯು**

ವ್ಯಕ್ತಿಯ ಜೀವನಕ್ಕೆ ಸಮಾಜ ಇಷ್ಟು ಆವಶ್ಯಕತೆಯುಳ್ಳದ್ದು, ಹಾಗೂ ನಿಸರ್ಗದ ಸಹಕಾರವಿಲ್ಲದೆ ನಾವು ಬದುಕಲಾರೆವು ಎಂಬ ಅಂಶ ಸೂರ್ಯ ಪ್ರಕಾಶದಷ್ಟು ಸ್ಪಷ್ಟವಿದ್ದರೂ ತನ್ನ ಸುತ್ತುಮುತ್ತಲಿನ ಸಮಾಜವನ್ನು, ನಿಸರ್ಗವನ್ನು ವ್ಯಕ್ತಿಯು ಮರೆತು ವ್ಯವಹರಿಸುವ ಸಂಭವ ಇಲ್ಲದಿಲ್ಲ. ಉದಾಹರಣೆಗೆ, ಅನ್ನ, ನೀರು, ಗಾಳಿ ಇವು ಮನುಷ್ಯನ ಜೀವನ ನಿರ್ವಹಣೆಗೆ ಅವಶ್ಯವಿರುವಂತಹವು. ಈ ಮೂರರಲ್ಲಿ ಅನ್ನ ಇಲ್ಲದೆ ವ್ಯಕ್ತಿ ಕೆಲವು ದಿನ ಬದುಕಿರಬಹುದು. ಪುರಿಯ ಪೂಜ್ಯ ಶ್ರೀ ಶಂಕರಾಚಾರ್ಯರೂ ಮತ್ತು ಶ್ರದ್ಧೆಯ ಪ್ರಭುದತ್ತ ಬ್ರಹ್ಮಚಾರಿಯವರೂ, ಎಷ್ಟೋ ದಿನ ಕೇವಲ ಗಂಗಾಜಲ ಸೇವಿಸಿಯೇ ಬದುಕಿದ್ದರು. ನೀರು ಇಲ್ಲದೆಯೂ ಒಂದೆರಡು ದಿನ ಬದುಕಿರಬಹುದು. ಆದರೆ ಗಾಳಿ? ಅದಿಲ್ಲದೆ ಒಂದೆರಡು ಕ್ಷಣಗಳಿಗಿಂತ ಹೆಚ್ಚಿಗೆ ಯಾರೂ ಬದುಕಲಾರರು. ಜನಭರಿತ ನಗರಗಳಲ್ಲಿ, ಗಣಿಗಳಲ್ಲಿ ಉತ್ತಮ ಗಾಳಿಗಾಗಿ ಎಷ್ಟು ಪರದಾಟ! ಆದರೆ ಗಾಳಿಯಿಂದಲೇ ನಾವು ಬದುಕಿದ್ದೇವೆ ಎಂಬ ಪರಿವೆ ನಮಗಿರುವುದೇ ಇಲ್ಲ. ಇದೇ ರೀತಿ ಅತ್ಯವಶ್ಯವಾದ ಅನೇಕ ಸಂಗತಿಗಳ ಅಸ್ತಿತ್ವವನ್ನು ಮರೆತೇ ಎಷ್ಟೋ ಸಲ ಜೀವನ ಸಾಗಿಸುತ್ತೇವೆ. ಆದರೂ ಅವುಗಳಿಲ್ಲದೆ ನಾವು ಬದುಕಲಾರೆವು ಎಂಬುದು ಅಷ್ಟೇ ನಿಜ. ನಾವು ಅನೇಕ ಸಲ ಪುರೋಹಿತರನ್ನು ಹಾಸ್ಯ ಮಾಡುವುದುಂಟು. ಆದರೆ ಅವರಿಲ್ಲದೆ ಮದುವೆ ಜರುಗುವುದೆಂತು? ಸಮಯದಲ್ಲಿ ಅವರು ಸಿಗದಿದ್ದರೆ ನಮ್ಮ ಪರದಾಟ ಹೇಳತೀರದು!

ಹೀಗೆ ಸಮಾಜ ನಮ್ಮ ಜೀವನ ನಿರ್ವಹಣೆಗೆ, ಆನಂದಕ್ಕೆ ಅತ್ಯಗತ್ಯವಾಗಿರುವ

ಮಹತ್ತ್ವದ ಪಾತ್ರ ವಹಿಸುತ್ತದೆ. ಅದಕ್ಕಾಗಿ ಅದರ ಜ್ಞಾಪಕ ನಮಗೆ ಯಾವಾಗಲೂ ಅವಶ್ಯ. ನಮ್ಮ ಎಲ್ಲ ಸುಖದುಃಖಗಳಲ್ಲಿ ಅದು ಸಮಭಾಗಿಯಾಗುತ್ತದೆ. ನಾವು ಅತ್ತರೆ ಸಮಾಜವೂ ಅಳುತ್ತದೆ. ನಾವು ನಕ್ಕರೆ ಸಮಾಜವೂ ನಗುತ್ತದೆ. ಒಮ್ಮೆ ಒಬ್ಬ ಹುಡುಗಿಗೆ ಮದುವೆ ಆಯಿತು– ಒಂದು ದಿನ ಅವಳ ಮನಸ್ಸಿನಲ್ಲಿ ತನಗೆ ಮಗುವೊಂದು ಹುಟ್ಟಿದಂತೆ ಭಾಸವಾಯಿತು. ಮಗುವಿಗೆ ಖಾಯಿಲೆ ಆದಂತೆಯೂ, ಯೋಗ್ಯ ಔಷಧೋಪಚಾರಗಳಿಲ್ಲದೆ ಅದು ತೀರಿಹೋದಂತೆಯೂ ಅವಳು ಕಲ್ಪಿಸಿಕೊಂಡಳು. ಅವಳಿಗೆ ದುಃಖ ಉಮ್ಮಳಿಸಿ ಬಂದಿತು. ಅಳಲಾರಂಭಿಸಿದಳು. ಅದನ್ನು ನೋಡಿದ ಮನೆಯವರೆಲ್ಲರೂ ಅಳಲು ಪ್ರಾರಂಭಿಸಿದರು. ಅದನ್ನು ಕಂಡು ನೆರೆಹೊರೆಯವರೂ ಅಳಲು ಮೊದಲಿಟ್ಟರು. ಎಲ್ಲರಿಗೂ ಏನೋ ದುರಂತ ಸಂಭವಿಸಿರಬೇಕು ಎಂಬ ಕಲ್ಪನೆಯೇ! ಕೊನೆಗೆ ವಿಚಾರಿಸಲಾಗಿ ಹುಡುಗಿ ಅಳಲಾರಂಭಿಸಿದ್ದೇ ಎಲ್ಲರ ಅಳುವಿಗೆ ಮೂಲ ಕಾರಣ ಎಂಬುದು ತಿಳಿಯಿತು. ವ್ಯಕ್ತಿ– ಸಮಾಜದ್ದು ಇಷ್ಟು ಘನಿಷ್ಠ ಜೀವನದ ನಂಟು. ಸಮಾಜ ಸುಖಿಯಾಗಿದ್ದಾಗಲೇ ವ್ಯಕ್ತಿಯೂ ಸುಖಿ. ಸಮಾಜ ಬಲಶಾಲಿ ಆಗಿದ್ದಾಗ ವ್ಯಕ್ತಿಯೂ ಬಲಶಾಲಿ. ಆದುದರಿಂದ ಸಮಾಜವನ್ನು ಬಲಪಡಿಸುವುದೇ ವ್ಯಕ್ತಿಯ ಕರ್ತವ್ಯ. ನಮ್ಮಲ್ಲಿನ ರೈತ ಬೀಜ ಬಿತ್ತುವ ಮುಂಚೆ, ಪಶು, ಪಕ್ಷಿ, ಮನುಷ್ಯ, ರಾಜ ಮತ್ತು ತನಗೆ ಎಲ್ಲರಿಗೂ ಆಹಾರ ಕೊಡು, ಎಂದು ದೇವರನ್ನು ಪ್ರಾರ್ಥಿಸುತ್ತಾನೆ. ಸಮಾಜಕ್ಕೆ ಅನ್ನ ಸಿಕ್ಕಿದಾಗಲೇ ತನಗೂ ಅನ್ನ ದೊರಕುವುದು ಎಂದು ಅವನಿಗೆ ಗೊತ್ತು.

ಸಮಾಜ ಎಂದರೆ ಅದೊಂದು ಬ್ಯಾಂಕ್‌ನಂತೆ. ಬ್ಯಾಂಕ್‌ನಿಂದ ಕೇವಲ ಹಣವನ್ನು ತೆಗೆಯುತ್ತಾ ಹೋದಲ್ಲಿ ಅದು ದಿವಾಳಿ ಏಳುತ್ತದೆ. ಅದರಂತೆ ವ್ಯಕ್ತಿಯೂ ಸಮಾಜದಿಂದ ಕೇವಲ ಪಡೆಯುತ್ತಿದ್ದರೆ, ಸಮಾಜಕ್ಕೆ ಪ್ರತಿಯಾಗಿ ಏನೂ ಸಲ್ಲಿಸದಿದ್ದರೆ ಸಮಾಜ ಕಡೆಗೆ ದುರ್ಬಲ, ನಿಸ್ಸತ್ತ್ವ ಆಗುತ್ತದೆ. ಇದರಿಂದ ಹಾನಿ ತಟ್ಟುವುದು ವ್ಯಕ್ತಿಗೇ. ಗೊಬ್ಬರ ಹಾಕದೆ ವರ್ಷಗಟ್ಟಲೆ ಬೆಳೆ ತೆಗೆದರೆ ಆ ಭೂಮಿ ತಾನೆ ಏನು ಕೊಟ್ಟೀತು? ಮನೆಗೆ ತರಕಾರಿ ತಂದರೆ ತಾನೆ ಅದರಿಂದ ಪಲ್ಯ ಹುಳಿ ತಯಾರಾಗಿ ಬಾಯಿಗೆ ರುಚಿ ಹತ್ತುವುದು ಹಾಗೂ ಹೊಟ್ಟೆ ತುಂಬುವುದು? ಸಮಾಜಕ್ಕೂ ಅಷ್ಟೆ, ನಾವೇನನ್ನು ಕೊಟ್ಟರೂ ಅದು ಸುತ್ತಿ ನಮಗೆ ವಾಪಸ್ಸು ಮಾಡುತ್ತದೆ. ಆದ್ದರಿಂದ ಸಮಾಜಕ್ಕೆ ಸೇವೆ ಸಲ್ಲಿಸುವುದೇ ವ್ಯಕ್ತಿಯ ಪ್ರಥಮ ಕರ್ತವ್ಯ. ಬದುಕಿನ ಮುಖ್ಯ ಸೂತ್ರವೇ ಅದಾಗಬೇಕು. ಅದನ್ನು ಮರೆತಲ್ಲಿ ಸಮಾಜಕ್ಕೂ ತತ್ಫಲವಾಗಿ ವ್ಯಕ್ತಿಗೂ ಮೃತ್ಯು ಸಿದ್ಧ.

**ಮರ್ಮ ಇಲ್ಲಿದೆ**

ಇದು ಒಂದು ಮುಖ. ಇನ್ನೊಂದು ಮುಖ, ಈ ರೀತಿ ಸಮಾಜಕ್ಕಾಗಿ



ಸೇವೆ ಸಲ್ಲಿಸುವುದರಲ್ಲೇ ವ್ಯಕ್ತಿಗೆ ನಿಜವಾದ ಆನಂದ. ಆತ್ಮದ ವಿಕಾಸ ಸಿದ್ಧಿಸುತ್ತದೆ. ಇದೇ ಮುಖ್ಯವಾದ ಮಾತು. ಅದಕ್ಕಾಗಿಯೇ ನಮ್ಮಲ್ಲಿ ದಟ್ಟ ದರಿದ್ರನೂ ಸಹ ಅತಿಥಿಯೊಬ್ಬ ಮನೆಗೆ ಬಂದರೆ ಒಣಕಲು ರೊಟ್ಟಿಯಿದ್ದರೂ ಸರಿಯೆ, ಅವನೊಡನೆ ಹಂಚಿಕೊಂಡು ತಿನ್ನುತ್ತಾನೆ. ಅದರಲ್ಲೇ ಅವನಿಗೆ ಆನಂದ! ನಾನೊಮ್ಮೆ ಒಬ್ಬರ ಮನೆಯಲ್ಲಿ ಇಳಿದುಕೊಂಡಿದ್ದೆ. ಅವರ ಮನೆಯಲ್ಲಿದ್ದುದು ಒಂದೇ ಮಂಚ. ಅದರ ಮೇಲೆ ನನಗೆ ಜಾಗ ಕೊಟ್ಟು ಅವರು ನೆಲದ ಮೇಲೆ ಮಲಗಿದರು. ಅವರಿಗೆ ದುಃಖವಾಗುವುದೆಂದು ಅದನ್ನು ನಾನು ನಿರಾಕರಿಸಲೂ ಆಗಲಿಲ್ಲ. ಹೀಗೆ ವ್ಯಕ್ತಿಗೆ ಆನಂದ ದೊರಕುವುದು ತನ್ನ ಸ್ವಂತ ಸಣ್ಣ ವ್ಯಕ್ತಿತ್ವದ ಗೂಡಿನಿಂದ ಹೊರಬಂದು ಇತರರನ್ನು ಪ್ರೀತಿಸಿ ಸೇವಿಸಿದಾಗಲೇ. ಈ ಮೂಲತತ್ತ್ವದ ಆಧಾರದ ಮೇಲೆಯೇ ನಮ್ಮ ಧರ್ಮದ ಕಲ್ಪನೆ ಬೆಳೆದು ನಿಂತಿದೆ. ಕೇವಲ ತನ್ನ ಹಿತಕ್ಕಾಗಿ ಮಾಡಿದ್ದು ಅಧರ್ಮ. ಪರರ ಹಿತಕ್ಕೆ ಮಾಡಿದ್ದೇ ಧರ್ಮ. ಇದೇ ವ್ಯಕ್ತಿ ಮತ್ತು ಸಮಾಜದ ಸಂಬಂಧದ ನಿಜವಾದ ಮರ್ಮ.

# ೧೧. ಸಮಾಜದ ನೈಜ ರೂಪ

ವ್ಯಕ್ತಿಯ ಬದುಕಿಗೆ ಸಮಾಜವೇ ಆಧಾರವಾಗಿರುವಂತೆ ಸಮಾಜದ ಅಸ್ತಿತ್ವಕ್ಕೂ ವ್ಯಕ್ತಿಗಳೇ ಆಧಾರವಾಗಿದ್ದಾರೆಂಬುದೂ ಸ್ಪಷ್ಟವಾಗಿಯೇ ಇದೆ. ಆದ್ದರಿಂದ ನಾವೀಗ ವ್ಯಕ್ತಿಗಳಿಂದ ಒಂದು ಸಮಾಜ ಹೇಗೆ ರೂಪುಗೊಳ್ಳುತ್ತದೆಂಬುದನ್ನು ವಿವೇಚಿಸೋಣ.

**'ಸಮಾಜ', 'ಸಮೂಹ' ಅಲ್ಲ**

ಪಾಶ್ಚಾತ್ಯದ ಕಲ್ಪನೆಯಂತೆ ವ್ಯಕ್ತಿಗಳ ಸಮೂಹವೇ ಸಮಾಜ. ಮತ್ತು 'ವ್ಯಕ್ತಿ'ಯ ಕಲ್ಪನೆಯನ್ನೂ ಅವರು ಮೂಲತಃ ಆರ್ಥಿಕ ಚೌಕಟ್ಟಿನಲ್ಲಿಯೇ ಮಾಡಿದರು. ಹೀಗಾಗಿ ಸಮಾಜದಲ್ಲಿನ ವ್ಯಕ್ತಿಗಳನ್ನು ಅವರವರ ವ್ಯಾಪಾರ ವ್ಯವಹಾರಗಳ ಮೇಲೆಯೇ ವಿಂಗಡಿಸಿದರು. ಪ್ರತಿ ವ್ಯಕ್ತಿಯೂ ಕೂಲಿಗಾರ, ಮಾಲಿಕ, ವ್ಯಾಪಾರಿ ಈ ರೀತಿಯಾಗಿ ಒಂದಲ್ಲ ಒಂದು ಗುಂಪಿನಲ್ಲಿ ಸೇರಿಹೋದನು. ತನ್ನ ಗುಂಪಿನ ಸ್ವಾರ್ಥ, ವರ್ಗದ ಹಿತಸಾಧನೆಯೇ ಆಯಾ ವ್ಯಕ್ತಿಗೆ ಮುಖ್ಯ ಗುರಿ ಆಯಿತು. ತತ್ಫಲವಾಗಿ ಒಂದು ಗುಂಪಿನ ಸ್ವಾರ್ಥ ಇನ್ನೊಂದರ ಸ್ವಾರ್ಥಕ್ಕೆ ಅಡ್ಡಿಯಾದೊಡನೆ ವರ್ಗಸಂಘರ್ಷ ಸಿಡಿದೆದ್ದಿತು. ಈ ತಿಕ್ಕಾಟದಲ್ಲಿ ಎಲ್ಲೆಲ್ಲಿ ಯಾವ ಯಾವ ವರ್ಗ ಪ್ರಬಲವೆನಿಸಿತೋ ಅದರ ಏಳಿಗೆಯನ್ನಷ್ಟೇ ಪ್ರಮುಖವಾಗಿ ಎಣಿಸಿದ ರಾಜ್ಯಪದ್ಧತಿ ಅಲ್ಲಲ್ಲಿ ನಿರ್ಮಾಣವಾಯಿತು.

ಆದರೆ ನಮ್ಮ ವಿಚಾರಸರಣಿ ಇದಕ್ಕಿಂತ ತೀರ ಬೇರೆಯಾದುದು. ನಾವು ಕೇವಲ ವ್ಯಕ್ತಿಗಳ ಸಮೂಹವನ್ನು 'ಸಮಾಜ' ಎಂದು ಕರೆಯಲಿಲ್ಲ. ಉದಾಹರಣೆಗೆ, ಹತ್ತು ಜನ ಕಳ್ಳರು ಒಗ್ಗೂಡಿ ನಡೆಸುವ ಕಳ್ಳತನ 'ಸಮಾಜಕಾರ್ಯ' ಆಗಲಾರದು! ಮೂವರು ಧೂರ್ತರ ಕತೆ ಪ್ರಸಿದ್ಧವಾದದ್ದು. ಒಬ್ಬ ಬ್ರಾಹ್ಮಣ ಒಂದು ಆಡಿನ ಮರಿ ಕೊಂಡೊಯ್ಯುತ್ತಿದ್ದ. ಈ ಧೂರ್ತರಿಗೆ ಅದನ್ನು ಲಪಟಾಯಿಸಬೇಕೆಂದು ಅನ್ನಿಸಿತು. ಅದಕ್ಕಾಗಿ ಒಂದು ಸಂಚು ಹೂಡಿ ಮೂವರೂ ಆ ಬ್ರಾಹ್ಮಣ ಬರುವ ಹಾದಿಯಲ್ಲಿ ಸ್ವಲ್ಪ ಸ್ವಲ್ಪ ದೂರದಲ್ಲಿ ನಿಂತರು. ಆ ಬ್ರಾಹ್ಮಣ ಬಂದೊಡನೆ ಒಬ್ಬರಾದ ಮೇಲೆ ಒಬ್ಬರು 'ಇದೇನು? ನೀನು ಬ್ರಾಹ್ಮಣನಾಗಿದ್ದುಕೊಂಡು ನಾಯಿಮರಿ ಎತ್ತಿಕೊಂಡು ಹೋಗುತ್ತಿದ್ದೀಯಲ್ಲ?' ಎಂದು ಅಪಹಾಸ್ಯ ಮಾಡಿದರು. ಮೊದಲನೆಯವನು



ಹೇಳಿದಾಗ, ಬ್ರಾಹ್ಮಣನಿಗೆ ಆಶ್ಚರ್ಯ. ಎರಡನೆಯವನು ಹೇಳಿದಾಗ ಸಂದೇಹ ಬಂತು. ಮೂರನೆಯವನೂ ಅದೇ ರೀತಿ ಹೇಳಿದಾಗ 'ನಾಯಿಮರಿ'ಯೇ ಇರಬೇಕು ಎಂಬ ನಿಷ್ಕರ್ಷೆಗೆ ಬಂದು ಆ ಬ್ರಾಹ್ಮಣ ಆಡಿನ ಮರಿಯನ್ನು ಬಿಸಾಡಿ ಹೊರಟುಹೋದ! ಧೂರ್ತರು ಅದನ್ನು ತೆಗೆದುಕೊಂಡು ಪರಾರಿಯಾದರು. ವ್ಯಕ್ತಿಗಳ ಗುಂಪೇ ಸಮಾಜವಾಗಿ ಇದ್ದಲ್ಲಿ ಈ ಮೂರೂ ಜನ 'ಸಮಾಜ' ಆಗಿದ್ದು ಅವರು ಮಾಡಿದ ಕೆಲಸ 'ಸಮಾಜಕಾರ್ಯ'ವೇ ಆಗಬೇಕಿತ್ತು! ಬ್ರಾಹ್ಮಣ ಆಡಿನ ಮರಿ ಬಿಸಾಡಿದ್ದು 'ಸಮಾಜಕ್ಕಾಗಿ ಮಾಡಿದ ತ್ಯಾಗ' ಎನಿಸುತ್ತಿತ್ತು!

**ಸಮಾಜ, ಸಜೀವಸೃಷ್ಟಿ**

ಹಾಗಾದರೆ 'ಸಮಾಜ' ಎಂದರೇನು? ಅದು ಕೇವಲ ವ್ಯಕ್ತಿಗಳ ಸಮೂಹ, ಜೋಡಣೆ ಅಲ್ಲ. ಬಿಡಿಬಿಡಿ ಭಾಗಗಳನ್ನು ಜೋಡಿಸಿ ಒಂದು ಮೋಟಾರ್, ಒಂದು ನಿರ್ಜೀವ ಯಂತ್ರ ತಯಾರಿಸಬಹುದು. ಆದರೆ ಆ ರೀತಿ ಜೋಡಿಸಿ ಒಂದು ಸಜೀವ ಸೃಷ್ಟಿ 'ತಯಾರಿಸಲು' ಸಾಧ್ಯವಿಲ್ಲ. ಲಕ್ಷಲಕ್ಷ ಎಲೆ, ಹೂ, ಚಿಗುರುಗಳು ಮರದಲ್ಲಿದ್ದರೂ ಅವುಗಳನ್ನು ಜೋಡಿಸಿದರೆ ಮರ ಆಗುವುದಿಲ್ಲ. ಕೇವಲ ಕೈ, ಕಾಲು, ಕಣ್ಣು, ಮೂಗು ಮುಂತಾದ ಅಂಗಗಳ ಜೋಡಣೆಯಿಂದ ಮನುಷ್ಯ ತಯಾರಾಗುವುದಿಲ್ಲ. ಮರ, ಪ್ರಾಣಿ, ಮನುಷ್ಯ ಇವು ಜೀವಂತ, ಪ್ರಾಣಯುಕ್ತ ವ್ಯವಸ್ಥೆಗೆ ಸೇರಿದ ಸೃಷ್ಟಿ. ಇದರಂತೆಯೇ ಸಮಾಜವೂ ಸಹ. ಸಮಾಜವನ್ನು ನಿರ್ಮಿಸಲು ಕೇವಲ ಜನರು ಒಟ್ಟುಗೂಡಿ ಬಂದರೆ ಸಾಲದು. ಸಂಸ್ಥೆಗಳು, ಸಮಿತಿಗಳು ಒಂದು ಸಮಾಜ ಆಗಲಾರದು. ವೃಕ್ಷ, ಪ್ರಾಣಿ, ಮನುಷ್ಯರು ಹುಟ್ಟಲು ಬೆಳೆಯಲು ಬೇಕಾಗುವ ಒಂದು ರೀತಿಯ ಅಂತಶ್ಚೈತನ್ಯವೇ ಸಮಾಜನಿರ್ಮಾಣಕ್ಕೂ ಆವಶ್ಯಕವಿದೆ. ಅವುಗಳಂತೆಯೇ ಸಮಾಜಕ್ಕೂ ಅದರ ವಿವಿಧ ಭಾಗಗಳನ್ನು ಜೀವಂತವಾಗಿ ಜೋಡಿಸುವ ಪ್ರಾಣಶಕ್ತಿಯೊಂದು ಬೇಕು.

ಜೀವವುಳ್ಳ ಮನುಷ್ಯ, ಪ್ರಾಣಿ, ಗಿಡಗಳಂತೆ ಸಮಾಜವೂ ಜನಿಸುತ್ತದೆ, ತಯಾರಿಸಲ್ಪಡುವುದಿಲ್ಲ. ಈ ಪ್ರಾಣಶಕ್ತಿ ಕೇವಲ ಕೆಲವು ನಿಯಮಗಳಿಂದ, ಒಪ್ಪಂದಗಳಿಂದ ರೂಪುಗೊಳ್ಳುವಂತಹದಲ್ಲ. ಅದು ತಾನಾಗಿಯೇ ಮೈತಾಳಿ ಪ್ರಕಟವಾಗುತ್ತದೆ. ಆದುದರಿಂದ ಸಮಾಜವನ್ನು, ರಾಷ್ಟ್ರವನ್ನು, 'ಹೊಸದಾಗಿ ನಿರ್ಮಿಸಬೇಕು' ಎಂಬ ಕಲ್ಪನೆ ಸರಿಯಲ್ಲ. ಅದು ಈಗಾಗಲೇ ಅಸ್ತಿತ್ವದಲ್ಲಿದೆ, ಅದರ ಸೇವೆ ಮಾತ್ರ ನಮ್ಮ ಕರ್ತವ್ಯ ಎನ್ನುವ ವಾಸ್ತವಾಂಶ ನೆನಪಿನಲ್ಲಿಡಬೇಕು.

**ಸಂಬಂಧವೂ ಸಜೀವವೇ**

ಸಮಾಜವು ಕೇವಲ ವ್ಯಕ್ತಿಗಳ ಸಮೂಹವಲ್ಲ, ಅದೊಂದು ಸಜೀವ ಸೃಷ್ಟಿ.

ಎಂದಮೇಲೆ ವ್ಯಕ್ತಿ–ಸಮಾಜ ಸಂಬಂಧವೂ ಜೀವಂತವೇ ಇರಬೇಕು. ವ್ಯಕ್ತಿಯು ತನ್ನ ಬಾಳಿನಲ್ಲಿ, ಪುತ್ರ, ಪತಿ, ತಂದೆ, ಭ್ರಾತೃ, ಕವಿ, ಭಕ್ತ, ರಾಜಕಾರಣಿ ಮುಂತಾದ ಅನೇಕ ಪಾತ್ರ ವಹಿಸಬೇಕಾಗುತ್ತದೆ. ಒಂದು ಕಡೆ 'ಪುತ್ರ'ನಾದವನೇ ಮತ್ತೊಂದು ಕಡೆ 'ಕವಿ' ಆಗಿರುತ್ತಾನೆ. ಹೀಗೆ ಅವನ ವಿವಿಧ ಸಂಬಂಧಗಳೆಲ್ಲವೂ ಸಾಮಾಜಿಕವೇ. ಹೀಗಾಗಿ ಅವನು 'ನಾನು' ಇಂದ 'ನಾವು' ಆಗುತ್ತಾನೆ. ಅವನೊಬ್ಬ ಸಮಾಜದ ಅಭಿನ್ನ, ಏಕಜೀವ ಸಂಘಟಕನಾಗುತ್ತಾನೆ.

ಇದು ನಮ್ಮ ಕಲ್ಪನೆಯಾದರೆ ಪಾಶ್ಚಾತ್ಯರ ಕಲ್ಪನೆಯೇ ಬೇರೆ. ಅವರ ಅಭಿಪ್ರಾಯದಂತೆ ವ್ಯಕ್ತಿ ಬೇರೆ, ಸಮಾಜ ಬೇರೆ. ಈ ಎರಡರಲ್ಲೂ ಯಾವಾಗಲೂ ತಿಕ್ಕಾಟ ತಪ್ಪಿದ್ದಲ್ಲ. ಅವರು ಸಮಾಜವನ್ನು 'ವ್ಯಕ್ತಿಗಳ ಸಮೂಹ' ಎಂದು ಮಾತ್ರ ಪರಿಗಣಿಸಿದ್ದರಿಂದ ಸಮೂಹವು ಪ್ರಬಲವಾದಾಗ ವ್ಯಕ್ತಿಯನ್ನೂ, ವ್ಯಕ್ತಿಯು ಪ್ರಬಲನಾದಾಗ ಸಮೂಹವನ್ನೂ ತುಳಿಯುವುದು ಸಹಜವೆಂದು ಭಾವಿಸುತ್ತಾರೆ. ರೈತನು ರೈತರ ಗುಂಪಿಗೆ ಸೇರಿದವನು, ವ್ಯಾಪಾರಿಯು ವ್ಯಾಪಾರಿಗಳ ಗುಂಪಿಗೆ ಸೇರಿದವನು ಎಂದು ಭಾವಿಸಿ ಅವರಿಬ್ಬರಿಗೂ ಸಂಘರ್ಷ ಅನಿವಾರ್ಯ ಎಂದೇ ಭಾವಿಸುತ್ತಾರೆ. ಒಬ್ಬ ವ್ಯಕ್ತಿಯೇ ವಿವಿಧ ಕ್ಷೇತ್ರಗಳಲ್ಲಿ ನಾನಾ ಸಾಮಾಜಿಕ ರೂಪಗಳಲ್ಲಿ ಪ್ರಕಟಗೊಂಡು ಆಯಾ ಪಾತ್ರಕ್ಕೆ ಅನುಗುಣವಾಗಿ ವರ್ತಿಸುವನೆಂಬ ನಮ್ಮ ಕಲ್ಪನೆ ಅವರ ಕೈಗೆ ಎಟುಕಿಲ್ಲ. ಹಾಗಾದರೆ, ಸಂಘರ್ಷ ಕೇವಲ ಪಾಶ್ಚಾತ್ಯರಲ್ಲಾಯಿತು. ನಮ್ಮಲ್ಲಿ ಆಗಲಿಲ್ಲವೆ? ನಿಜ, ನಮ್ಮಲ್ಲೂ ಸಂಘರ್ಷಗಳು ನಡೆದವು. ಆದರೆ, ಅವು ಆಸುರೀ ಪ್ರವೃತ್ತಿಯೊಡನೆ, ಮಾನವೀ ವಿಕೃತಿಯೊಡನೆ ನಡೆದದ್ದೇ ಹೊರತು ಎರಡು ವ್ಯಕ್ತಿಗಳಲ್ಲಿ, ಎರಡು ಸಮೂಹಗಳಲ್ಲಿ ಅಥವಾ ವ್ಯಕ್ತಿ ಮತ್ತು ಸಮಾಜಗಳಲ್ಲಿ ನಡೆದದ್ದಲ್ಲ. ಮಾನವೀ ವಿಕೃತಿಯ ವಿರುದ್ಧವಾದ ನಮ್ಮ ಹೋರಾಟವನ್ನು ವೈಯಕ್ತಿಕವಾಗಿ, ಸಾಮಾಜಿಕವಾಗಿ ಎರಡೂ ರೀತಿಯಲ್ಲಿ ನಡೆಸಿದ್ದೇವೆ. ಶರೀರದೊಳಗಿನ ಕೆಂಪು ರಕ್ತಕಣಗಳು, ಬಿಳಿಯ ರಕ್ತಕಣಗಳು ಎರಡೂ ಕೂಡಿಕೊಂಡು ವಿಷಕ್ರಿಮಿಗಳೊಡನೆ ನಡೆಸುವ ಹೋರಾಟದಂತೆ ಇದು.

### ಸಾಮರಸ್ಯವೇ ಜೀವನ

ಶರೀರದ ಅವಯವಗಳೆಲ್ಲವೂ ದೇಹದ ಜೀವಂತ ಭಾಗಗಳೇ. ಅವು ತಮ್ಮ ತಮ್ಮೊಳಗೇ ಬಡಿದಾಡುವುದಿಲ್ಲ. ಅವು ಪರಸ್ಪರ ಸಹಕರಿಸಿಯೇ ನಡೆಯುವುವು. ಅದರಂತೆಯೇ ವ್ಯಕ್ತಿ–ಸಮಾಜಗಳ ನಡುವೆ ಸಂಘರ್ಷವಲ್ಲ, ಸಹಕಾರ ಇರಬೇಕು. ಈ ಸಹಕಾರ, ಸಹಯೋಗದ ದೃಷ್ಟಿ ಕೇವಲ ವ್ಯಕ್ತಿ ಮತ್ತು ಸಮಾಜಗಳ ನಡುವೆ ಮಾತ್ರ ಅಲ್ಲ; ಪ್ರಾಣಿಜೀವನದೊಂದಿಗೂ ಅದೇ ದೃಷ್ಟಿ ನಮ್ಮದು. ಅಷ್ಟೇ ಅಲ್ಲ, ಪ್ರಕೃತಿಯೊಂದಿಗೂ ಸಹಯೋಗದ್ದೇ ನಮ್ಮ ಮನೋಧರ್ಮ. ನಿಸರ್ಗದಲ್ಲಿ ಜೀವನ



ಸಾಗುವ ರೀತಿಯೂ ಇದೇ. ಮನುಷ್ಯನಿಗೆ ಬೇಡವಾದ ಇಂಗಾಲ ಗಿಡ ಮರಗಳಿಗೆ ಬೇಕು. ಅವಕ್ಕೆ ಬೇಡವಾದ ಆಮ್ಲಜನಕ ಮನುಷ್ಯನಿಗೆ ಬೇಕು. ಪ್ರಾಣಿಗಳಿಗೆ ಮನುಷ್ಯನು ಆಹಾರ ಹಾಕಿದರೆ ಅವು ನಾನಾ ರೀತಿಯಲ್ಲಿ ಮನುಷ್ಯನಿಗೆ ಪ್ರತ್ಯುಪಕಾರ ಮಾಡುತ್ತವೆ. ಅಷ್ಟೇಕೆ, ಪ್ರಾಣಿಗಳನ್ನು ಕೊಲ್ಲುವಂತಹ ವಿಷವನ್ನೂ ಸಹ ಔಷಧಿಯಂತೆ ಉಪಯೋಗಿಸಿಕೊಳ್ಳಲು ಬಂದೀತು. ಹೀಗೆ ಮನುಷ್ಯ, ಪ್ರಾಣಿ, ನಿಸರ್ಗ ಇವುಗಳಲ್ಲಿ ಸಾಮರಸ್ಯ, ಪರಸ್ಪರ ಸಹಯೋಗ ಇದೆಯೇ ಹೊರತು ಸಂಘರ್ಷ ಇಲ್ಲ.

ಈ ಪರಸ್ಪರ ಸಹಯೋಗ–ಸಹಕಾರಗಳೇ ನಿಸರ್ಗದ ಸಾಮಾನ್ಯ ನಿಯಮ. ನೂರಾರು ಪಾರಿವಾಳ, ಗುಬ್ಬಿಗಳಿಗೆ ಕಾಳನ್ನು ಎರಚಿದಾಗ ಅವು ತಮ್ಮತಮ್ಮಲ್ಲಿ ಹಂಚಿಕೊಂಡು ತಿನ್ನುತ್ತವೆ. ಅಪವಾದ ನಾಯಿ ಮಾತ್ರ! ಈ ಅಪವಾದವನ್ನೇ ಜೀವನದ ನಿಯಮವೆಂದು ಪಾಶ್ಚಾತ್ಯರು ಭಾವಿಸಿರುವುದೇ ಅವರ ಜೀವನದಲ್ಲಿನ ಗೊಂದಲಕ್ಕೆ ಮುಖ್ಯ ಕಾರಣ. ಪಾಶ್ಚಾತ್ಯರ ಈ ನಂಬಿಕೆಯಂತೆ ನಡೆದಲ್ಲಿ ಶರೀರದ ಎಲ್ಲ ಅವಯವಗಳೂ ಪರಸ್ಪರ ಬಡಿದಾಡಬೇಕು. ಸ್ಪರ್ಧಿಸಬೇಕು! ಹಾಗಾದಾಗ ಮನುಷ್ಯ ಜೀವಿಸುವುದೇ ಅಸಾಧ್ಯ. ಸಹಕಾರ, ಸಾಮರಸ್ಯವೇ ಜೀವನ. ಕಾಲು ಶ್ರಮ ಹಾಕಿ ಶರೀರವನ್ನು ಸುಂದರ ದೃಶ್ಯವಿರುವಲ್ಲಿಗೆ ಕರೆದೊಯ್ದು ಕಣ್ಣಿಗೆ ಆನಂದ ದೊರಕಿಸುತ್ತದೆಯಾದರೆ ಕಾಲು ಎಡವಿ ಮುಗ್ಗರಿಸದಂತೆ ಕಣ್ಣು ದಾರಿ ತೋರಿಸುತ್ತದೆ. ಇದಕ್ಕೆ ಪೂರಕದೃಷ್ಟಿ ಎನ್ನುವುದು.

### ಅರೆಸತ್ಯದ ಅನರ್ಥ

ಸಮಾಜಕ್ಕೂ ಇದೇ ಮಾತು ಅನ್ವಯಿಸುತ್ತದೆ. ವ್ಯಕ್ತಿಯ ಸ್ವಾರ್ಥದಿಂದಾಗಿ ಅಕಸ್ಮಾತ್ ತಿಕ್ಕಾಟ ಬಂದರೂ ಅದನ್ನು ಮರೆಯುವುದೇ ಉತ್ತಮ ಜೀವನದ ಸೂತ್ರ. ಅದಿಲ್ಲದೆ ಸ್ವಾರ್ಥವನ್ನೇ ಆಧರಿಸಿ ತಿಕ್ಕಾಟವನ್ನು ಮುಂದುವರಿಸಿದ್ದೇ ಆದರೆ, ಎಲ್ಲರೂ ನಾಶಹೊಂದುವುದು ಖಂಡಿತ. ನಾಲ್ಕು ಜನ ಕಳ್ಳರು ಸೇರಿ ಒಮ್ಮೆ ಕಳ್ಳತನ ಮಾಡಿದರು. ಸಿಕ್ಕ ಲೂಟಿಯಲ್ಲಿ ಒಬ್ಬೊಬ್ಬನಿಗೂ ತನಗೇ ಹೆಚ್ಚು ಪಾಲು ಸಿಗಬೇಕೆಂಬ ಸ್ವಾರ್ಥ ಹೆಡೆಯೆತ್ತಿತ್ತು. ಅವರ ಪೈಕಿ ಒಬ್ಬ, ಪೇಟೆಗೆ ಆಹಾರ ತರಲೆಂದು ಹೋದವ ಅದರಲ್ಲಿ ವಿಷಹಾಕಿ ತಂದ. ಅದನ್ನು ತಿಂದು ಉಳಿದವರು ಸತ್ತಲ್ಲಿ ಇಡೀ ಲೂಟಿ ತನಗೇ ದಕ್ಕುತ್ತದೆಂದು ಅವನ ತಂತ್ರ. ಆದರೆ, ಅವನು ಮರಳಿ ಬಂದೊಡನೆ ಉಳಿದ ಮೂವರೂ ಸೇರಿ ಅವನನ್ನು ಬಡಿದು ಕೊಂದರು– ಅವನ ಪಾಲು ತಮಗೇ ಸಿಗಲೆಂದು, ಅನಂತರ ಅವನು ತಂದ ಆಹಾರ ತಿಂದು ಅವರೂ ಸತ್ತರು. ಅವರ ಸ್ವಾರ್ಥವೇ ಅವರೆಲ್ಲರನ್ನೂ ನಾಶಪಡಿಸಿತು.

ಸಮಾಜದಲ್ಲಿ ವ್ಯಕ್ತಿ, ಸಮೂಹಗಳ ಬಗ್ಗೆಯೂ ಇದೇ ಮಾತು ಸತ್ಯ.

ಆದುದರಿಂದ ಡಾರ್ವಿನ್‌ನ 'ಬಲಶಾಲಿಗೇ ಉಳಿವು' ಎಂಬ ವಿಕಾಸವಾದವೂ, ಮಾರ್ಕ್ಸ್‌ನ ಸಂಘರ್ಷವಾದವೂ ಅರ್ಧ ಸತ್ಯಗಳು. ಮನುಷ್ಯನಲ್ಲಿ ಕಾಮ, ಕ್ರೋಧ, ಲೋಭ, ಮೋಹ ಮುಂತಾದ ಪ್ರವೃತ್ತಿ ಮಾತ್ರ ಇದೆ. ಅವನಲ್ಲಿ ತ್ಯಾಗ, ಪ್ರೇಮ, ಸೇವಾವೃತ್ತಿ ಮುಂತಾದ ಗುಣಗಳಿಲ್ಲ ಎಂದು ಭಾವಿಸುವುದೇ ಈ ಅರೆತತ್ತ್ವಗಳ ಆಧಾರ. ಇಂಥ ಏಕಾಂಗಿ ದೃಷ್ಟಿಕೋನದಿಂದ ಜೀವನದ ಪೂರ್ಣದರ್ಶನ ಲಭಿಸಲಾರದು. ಅರೆಬರೆ ಜ್ಞಾನದಿಂದ ಆಗುವ ಅಚಾತುರ್ಯ, ಅನರ್ಥಕ್ಕೆ ಕೊನೆ ಮೊದಲೇ ಇಲ್ಲ.

ಒಮ್ಮೆ ಒಬ್ಬ ಹುಲ್ಲು ಕೊಯ್ಯುವವನು ತನ್ನ ಕುಡಗೋಲನ್ನು ಬಿಸಿಲಿನಲ್ಲಿ ಇಟ್ಟಿದ್ದ. ಅದು ಕಾದು ಬಿಸಿಯಾಯಿತು. ಅದಕ್ಕೆ ಜ್ವರ ಬಂದಿದೆಯೆಂದು ಬಗೆದು ಅವನು ಅದನ್ನು ವೈದ್ಯರ ಬಳಿ ಕೊಂಡೊಯ್ದ. ಅವನ ಮೌಢ್ಯ ನೋಡಿ ವೈದ್ಯರಿಗೆ ನಗು ಬಂತು. 'ಅದನ್ನು ನೀರಿನೊಳಗೆ ಮುಳಿಗಿಸಿಡು, ಜ್ವರ ಬಿಡುತ್ತದೆ' ಎಂದರು. ಅವನು ಅಂತೆಯೇ ಮಾಡಿದ. ಕುಡುಗೋಲಿನ 'ಜ್ವರ' ಬಿಟ್ಟುಹೋಯಿತು. ಮತ್ತೊಮ್ಮೆ ಅವನ ಅಜ್ಜಿಗೆ ಜ್ವರ ಬಂದಿತು. ವೈದ್ಯರು ಹೇಳಿದ್ದು ಸ್ಮರಣೆಗೆ ಬಂದು, ಅವಳಿಗೆ ಜ್ವರ ಬಿಡಿಸಲು ಬಾವಿಯೊಳಗೆ ಬಹಳ ಹೊತ್ತು ಮುಳುಗಿಸಿಟ್ಟ. ಅನಂತರ ಅವಳನ್ನು ಹೊರತೆಗೆದ. ಮೈ ಏನೋ ತಣ್ಣಗಿತ್ತು. ಜ್ವರ ಬಿಟ್ಟಿತ್ತು! ಅವಳೂ ಜೀವ ಬಿಟ್ಟಿದ್ದಳು. ಹೀಗೆ ಒಂದು ಕಡೆಯ, ಒಂದು ಮುಖದ ಅನುಭವವನ್ನೇ ಜೀವನದ ಎಲ್ಲ ಕಡೆಗೂ ಅನ್ವಯಿಸಿದರೆ ಅನಾಹುತವೇ ಪ್ರತಿಫಲ.

## ಸಮಗ್ರ ಜೀವನದರ್ಶನ

ಆದುದರಿಂದ ಮನುಷ್ಯನ ಕುರಿತಾಗಿ ಆಲೋಚಿಸುವಾಗ ಅವನಲ್ಲಿ ದುರ್ಗುಣಗಳಿದ್ದರೂ, ಸದ್ಗುಣಗಳೂ ಇವೆ, ಸ್ವಂತ ಸುಖಸಾಧನೆಯ ಪ್ರವೃತ್ತಿಯ ಜೊತೆಗೆ ಸಮನ್ವಯದ ಸಾಮಾಜಿಕ ಪ್ರವೃತ್ತಿಯೂ ಇದೆ– ಎಂಬ ಪೂರ್ಣ ಸತ್ಯವನ್ನು ಆಧರಿಸಿಯೇ ಹೊರಡಬೇಕು; ಜೀವನದ ಸಮಗ್ರ ಚಿಂತನೆ ಮಾಡಿಯೇ ಮುಂದುವರಿಯಬೇಕು. ಹಾಗಿಲ್ಲದೆ, ವ್ಯಕ್ತಿಯ ಸುಖಸಾಧನೆಗಾಗಿ ಸಿರಿ ಸಮೃದ್ಧಿ ಹೆಚ್ಚಿದರೂ ವ್ಯಕ್ತಿಗೆ ನಿಜವಾದ ಸುಖ ಮಾತ್ರ ಸಿಕ್ಕದಾಗುತ್ತದೆ. ಊಟ ಮಾಡುವಾಗ ಕೇವಲ ಕೈ, ಬಾಯಿಗಳು ಅದರಲ್ಲಿ ಪಾತ್ರ ವಹಿಸಿದರೂ ಅದರ ಉಪಯೋಗ, ಪ್ರತಿಫಲ ಶರೀರದ ಎಲ್ಲ ಭಾಗಗಳಿಗೂ ಆಗುತ್ತದೆ. ಶರೀರದ ಯಾವುದಾದರೊಂದು ಅಂಗಕ್ಕೆ ನೋವಾದರೂ ಅದರ ಪರಿಣಾಮ ಇಡೀ ಶರೀರದಲ್ಲಿ ಕಾಣಿಸಿಕೊಳ್ಳುತ್ತದೆ. ಕಾಲಿನಲ್ಲಿ ಹುಣ್ಣು ಎದ್ದರೆ ಬಾಯಿಗೆ ಊಟ ರುಚಿಸದು. ಶರೀರಕ್ಕೆ ನಿದ್ರೆಯೂ ಬಾರದು.

ಸಮಾಜವೂ ಇದರಂತೆಯೇ. ಅದರಲ್ಲೂ ಜೀವಂತ ಸಂಬಂಧವಿದೆ.



ಸಮಾಜ ಸುಖಿ ಇದ್ದರೆ ಮಾತ್ರ ವ್ಯಕ್ತಿಯೂ ಸುಖಿಯಾಗುತ್ತಾನೆ. ವ್ಯಕ್ತಿಯು ಶಕ್ತಿಹೀನನಾದರೆ ಸಮಾಜವೂ ಬಲಹೀನವಾಗುತ್ತದೆ. ಪರಸ್ಪರ ಸೇವೆಯಿಂದಲೇ ವ್ಯಕ್ತಿ, ಸಮಾಜ ಎರಡಕ್ಕೂ ಬಲ ಸಿಗುವುದು; ಸುಖ ಪ್ರಾಪ್ತಿಯಾಗುವುದು. ಆದ್ದರಿಂದ ವ್ಯಕ್ತಿ–ಸಮಾಜದ ಏಕಜೀವ, ಏಕರಸದ ಈ ದರ್ಶನವನ್ನು ಆಧರಿಸಿಯೇ ನಮ್ಮ ಸಮಾಜವನ್ನು ಕಟ್ಟಿದ್ದೇವೆ. ಹಾಗೂ ವ್ಯಕ್ತಿಯಲ್ಲಿನ ಶರೀರ, ಮನಸ್ಸು, ಬುದ್ಧಿ ಮತ್ತು ಆತ್ಮಗಳೆಲ್ಲವನ್ನೂ ಗಮನದಲ್ಲಿರಿಸಿಕೊಂಡೇ ಅವನ ಸುಖದ ಸ್ವರೂಪವನ್ನು ಚಿಂತಿಸಿದ್ದೇವೆ. ವ್ಯಕ್ತಿ–ಸಮಾಜದ್ದು ಮಾತ್ರವಲ್ಲ, ಇಡೀ ಸಜೀವಸೃಷ್ಟಿಯೊಂದಿಗೆ, ಅಷ್ಟೇಕೆ ಸಂಪೂರ್ಣ ನಿಸರ್ಗದೊಂದಿಗೆ ಸಮನ್ವಯಗೊಳಿಸುವಂತಹ ದೃಷ್ಟಿಯನ್ನು ನಾವು ತಳೆದಿದ್ದೇವೆ. ಈ ರೀತಿ ಮಾನವ ಜೀವನದ ಕುರಿತಾಗಿ ಸಮಗ್ರ ದರ್ಶನ ನಮ್ಮದಾಗಿದೆ.

## ಆಧ್ಯಾತ್ಮಿಕ ದೃಷ್ಟಿಯಲ್ಲಿ

ಈ ವ್ಯಾವಹಾರಿಕ ದೃಷ್ಟಿಯ ಜೊತೆಗೆ, 'ವ್ಯಕ್ತಿ'ಯನ್ನು ಆಧ್ಯಾತ್ಮಿಕ ದೃಷ್ಟಿಯಿಂದ ವಿಶ್ಲೇಷಿಸಿದರಂತೂ ಅವನಿಗೆ ಒಂದು ಸ್ವತಂತ್ರವಾದ ಅಸ್ತಿತ್ವವೇ ಇಲ್ಲ. ಚರಾಚರ ವಿಶ್ವವನ್ನೆಲ್ಲ ಒಂದೇ ಶಕ್ತಿ (ಬ್ರಹ್ಮ) ವ್ಯಾಪಿಸಿದೆ. ಅದರಲ್ಲಿ ಏಕರೂಪವಾಗುವುದೇ ಮೋಕ್ಷ. ಅದರಲ್ಲೇ ವ್ಯಕ್ತಿಯ ವಿಕಾಸವೂ ಅಡಗಿದೆ. ಬೀಜವನ್ನು ಮುಚ್ಚಿಟ್ಟಲ್ಲಿ ಅದು ಹೇಗೆ ಮೊಳಕೆ ಒಡೆಯಲಾರದೋ ಅದೇ ರೀತಿ ವ್ಯಕ್ತಿ ಒಬ್ಬನೇ ಇದ್ದಲ್ಲಿ ಇವನು ವಿಕಾಸ ಹೊಂದಲಾರ. ಬೀಜವನ್ನು ಭೂಮಿಯಲ್ಲಿ ಬಿತ್ತಿದಾಗ ಅದು ಮಣ್ಣಿನೊಂದಿಗೆ ಬೆರೆತು ಮೊಳಕೆ ಒಡೆಯುತ್ತದೆ. ಹಾಗೆ ವ್ಯಕ್ತಿಯೂ ಸಮಾಜದಲ್ಲಿ ಸೇರಿ, ಅದರೊಳಗೆ ಬೆರೆತು ತನ್ನ ವಿಕಾಸ ಮಾಡಿಕೊಳ್ಳಬೇಕಾಗಿದೆ. ವ್ಯಕ್ತಿಯ ಆಧ್ಯಾತ್ಮಿಕ ವಿಕಾಸವೂ ಅವನ ಒಂಟಿತನದಲ್ಲಿಲ್ಲ, ಅನೇಕತೆಯಲ್ಲಿದೆ. ವಾಸ್ತವಿಕವಾಗಿ ಅವನ ಜೀವನವೆಂದರೇನೇ ಸಮಾಜದೊಡನೆ ಒಂದಾದ ಸಹಜೀವನ. ವ್ಯಕ್ತಿಯ ಸುಖ, ಭೌತಿಕ ಆವಶ್ಯಕತೆಗಳು ಹಾಗೂ ಅವನ ವಿಕಾಸದ ಉಳಿದೆಲ್ಲ ಸಾಧನಗಳೂ ಸಮಾಜವನ್ನೇ ಅವಲಂಬಿಸಿವೆ. ಹೀಗೆಂದಮೇಲೆ ವ್ಯಕ್ತಿಯು ಸಮಾಜರೂಪದಲ್ಲೆ ಉಳಿಯಬೇಕು, ಬೆಳೆಯಬೇಕು.

ಸಮಾಜ, ಸಮಷ್ಟಿ, ಇವು ಆರಂಭವಾಗುವುದಾದರೂ ಎಲ್ಲಿ? ಒಬ್ಬ ಇದ್ದವನು ಇಬ್ಬರಾದೊಡನೆ ಅಲ್ಲಿಂದಲೇ ಆರಂಭ. ಅಲ್ಲಿಂದ ಬ್ರಹ್ಮಾಂಡದವರೆಗೆ ಅದರ ವ್ಯಾಪ್ತಿ. ಸಣ್ಣ ಸಣ್ಣ ಕಣಗಳಾದ ಎಲೆಕ್ಟ್ರಾನ್‌ಗಳಲ್ಲಿ ಸಹ ಬ್ರಹ್ಮ ಇದೆ. ಅಲ್ಲಿಂದ ಆರಂಭಿಸಿ ಸಕಲ ನಿರ್ಜೀವ, ಸಜೀವ ಸೃಷ್ಟಿ; ಇವುಗಳನ್ನೊಳಗೊಂಡ ಭೂಮಿ; ಅಂತಹ ಅಸಂಖ್ಯ ಭೂಮಿಗಳು ಸುತ್ತುತ್ತಿರುವ ಸೂರ್ಯ; ಅಂತಹ ಅಗಣಿತ ಸೂರ್ಯಗಳು, ಅಗಣಿತ ಸೂರ್ಯಮಂಡಲಗಳು; ಹೀಗೆ ಬ್ರಹ್ಮಾಂಡ. ಆ ವಿಶಾಲ ಬ್ರಹ್ಮಾಂಡದಲ್ಲೂ ಅದೇ ಬ್ರಹ್ಮ. ಈ ಬ್ರಹ್ಮನಲ್ಲಿ 'ತಾದಾತ್ಮ್ಯ' ಅನುಭವಿಸುವುದೇ ಅಂತಿಮ ಸತ್ಯ.

## ಸ್ವಸಮಾಜವೇ ಶ್ರದ್ಧಾಕೇಂದ್ರ

ಇದನ್ನು ಸಾಧಿಸುವುದು ಹೇಗೆ? ಅದೆಷ್ಟೋ ಯೋಗಸಾಧನೆ ಮಾಡಿದವರೂ ಈ ಬ್ರಹ್ಮನನ್ನು ಪೂರ್ಣ ವಿವರಿಸಲಾರದೆ 'ನೇತಿ' 'ನೇತಿ' (ಇದಲ್ಲ; ಇದಲ್ಲ) ಎಂದರಲ್ಲದೆ, ಇದೇ ಎಂದು ಹೇಳಲಾಗಲಿಲ್ಲ. ಕಡೆಗೂ 'ಹತ್ತು ಬೆರಳಳತೆಯ' ವರ್ಣನೆ ಬಾಕಿ ಉಳಿಯಿತು. ಇನ್ನು ಅದನ್ನು ವಿವರಿಸುವವರು ಯಾರು? ಸಾಧಿಸುವ ಮಾತಂತೂ ದೂರವೇ ಉಳಿಯಿತು. ಆದ್ದರಿಂದ ಮಾನವನ ವ್ಯವಹಾರದ ವ್ಯಾಪ್ತಿಗೆ ಸಿಗುವುದೆಂದರೆ 'ಮಾನವತೆ'. ಅವರೊಡನೆ ಜೊತೆಗೂಡಿ ನಡೆಯೋಣ ಎಂದು ಯತ್ನಿಸಿದವರೂ ಇದುವರೆಗೆ ವಿಫಲರಾಗಿದ್ದಾರೆ. ಸಾಧಾರಣ ಮನುಷ್ಯಜೀವಿಗೆ ಸಮಸ್ತ ಮಾನವ ಜನಾಂಗದ ಕಲ್ಪನೆ ಮಾಡುವುದೂ ಅಶಕ್ಯವೇ. ಆದ್ದರಿಂದ ಜೀವನ ವಿಕಾಸಕ್ಕೆ ಮೊದಲ ಘಟ್ಟವಾಗಿ ಸಮಾಜವನ್ನೇ ಇಟ್ಟುಕೊಳ್ಳಬೇಕಾಗಿದೆ. ಮುಂದೆ ಎಂದಾದರೂ ಮಾನವತೆಯ ಏಕತೆ ಸಾಧ್ಯವಾಗಬಹುದು. ಅಲ್ಲಿಯವರೆಗೆ ಸಮಾಜವೇ ಶ್ರದ್ಧಾಕೇಂದ್ರ ಆಗಿರಬೇಕು.

ಸಮಾಜವೇ ವ್ಯಕ್ತಿಯ ಜೀವನಕ್ಕೆ ಮಧ್ಯಬಿಂದು ಎಂದಲ್ಲಿ, ಅವನ ನಡವಳಿಕೆ ಹೇಗಿರಬೇಕು? ತನ್ನ ಆಚರಣೆಯನ್ನು ಅವನು ತನ್ನ ಸಮಾಜದ ರೀತಿನೀತಿಗಳ ಚೌಕಟ್ಟಿನೊಳಗೇ ರೂಪಿಸಿಕೊಳ್ಳಬೇಕಾಗುತ್ತದೆ. ಮಗು ಚಿಕ್ಕದಿದ್ದರೂ ಅದೂ ಸಹ 'ಕೈಯಿಂದ ಬಾಯಿಗೆ' ಆಹಾರ ತಿನ್ನಬೇಕು. ಅದಿಲ್ಲದೆ, ನಾಲಗೆಯಿಂದ ನೆಕ್ಕಿ ಪ್ರಾಣಿಗಳಂತೆ ತಿನ್ನುವುದು ಸಮಾಜದ ನಡವಳಿಕೆ ಆಗಲಾರದು. ಅದು ಒಂದು ವಿಕೃತಿ. ಭಾರತದಲ್ಲಿನ ವ್ಯಕ್ತಿ ಚೀನಾದವರಂತೆ ಒಂದೊಂದೇ ಅನ್ನದ ಅಗಳನ್ನು ಬಾಯೊಳಗಿಟ್ಟು ತಿನ್ನಲಾರಂಭಿಸಿದನೆಂದರೆ ಅವನು ಇಲ್ಲಿ ಅಪಹಾಸ್ಯಕ್ಕೆ ಗುರಿಯಾಗುತ್ತಾನೆ. ಹೀಗೆ ಆಯಾ ಸಮಾಜದ ಪದ್ಧತಿಗಳೇ ಅವರವರಿಗೆ ಒಪ್ಪುತ್ತವೆ.

ನಿಯಮಗಳ ಬಗ್ಗೆಯೂ ಇದೇ. ವ್ಯಕ್ತಿಯ ಜೀವನವು ಕೆಲವು ನಿಯಮಗಳಿಗೆ ಅನುಗುಣವಾಗಿ ನಡೆಯುವಂತೆ, ಸಮಾಜದ ಜೀವನವೂ ನಡೆಯಬೇಕು. ಆ ಸಮಾಜದ ಜೀವನಾದರ್ಶಗಳೇ ಅದರ ನೀತಿ ನಿಯಮಗಳು.

## ಸಮಾಜದ ಜೀವನದಿ

ಸಮಾಜಜೀವನವನ್ನು ಒಂದು ನದಿಯ ಪ್ರವಾಹಕ್ಕೆ ಹೋಲಿಸಬಹುದು. ನದಿ ನೀರಿನ ಪ್ರಮಾಣ ಮತ್ತು ವೇಗ ಹೆಚ್ಚು ಕಡಿಮೆಯಾದರೂ ನದಿ ಹರಿಯುತ್ತಲೇ ಇರುತ್ತದೆ. ಭೂಮಿಯ ರಚನೆ ವ್ಯತ್ಯಾಸವಾದಂತೆ ಅದು ತನ್ನ ದಾರಿ, ಆಕಾರ ಬದಲಾಯಿಸಿಕೊಂಡು ಹರಿಯುವುದೇ ಹೊರತು, ಅದರ ಹೆಸರು ಬದಲಾಗದು. ಅಂತೆಯೇ ಸಮಾಜವೂ. ಆ ನದಿಗೆ ಉಪನದಿಗಳು, ಅನ್ಯ ಜಲರಾಶಿಗಳು ಬಂದು



ಸೇರಿದರೂ ಅದೇ ಹೆಸರಿರುತ್ತದೆ. ಗಂಗಾನದಿ ಅನೇಕ ಉಪನದಿಗಳನ್ನು ಸೇರಿಸಿಕೊಂಡರೂ ಅದರ ಹೆಸರು ಸಮುದ್ರ ಸೇರುವಾಗಲೂ 'ಗಂಗಾ' ಎಂದೇ. (ಅಪರೂಪವಾಗಿ ಮಿಸ್ಸೋರಿ–ಮಿಸಿಸಿಪ್ಪಿಗಳಂತಹ ಉದಾಹರಣೆ ಇರಬಹುದು.) ಇದೇ ರೀತಿ ಸಮಾಜಜೀವನವು ಸಾಗಿಬರುವಾಗ ಅದರೊಳಗೆ ಸೇರುವ ವಿವಿಧ ವ್ಯಕ್ತಿಗಳನ್ನು ತನ್ನಲ್ಲಿ ಐಕ್ಯಮಾಡಿಕೊಳ್ಳುತ್ತದೆ. ಹಾಗೆ ಸೇರಿಕೊಂಡವರು ಆ ಸಮಾಜದ ಜೀವನಾದರ್ಶಗಳನ್ನು ಪಾಲಿಸಿ ಸಂವರ್ಧಿಸಬೇಕೇ ಹೊರತು, ಅವನ್ನೇ ಬುಡಮೇಲು ಮಾಡಬಾರದು. ಹಾಗಾದಾಗ ಸಮಾಜ ನಷ್ಟವಾಗುತ್ತದೆ. ಪ್ರತಿ ಸಮಾಜದಲ್ಲೂ ತಂದೆ, ತಾಯಿ, ಹಿರಿಯರು ಮುಂತಾದವರನ್ನು ಸಂಬೋಧಿಸುವ ಬಗ್ಗೆ, ಗೌರವ ಪ್ರಕಟಿಸುವ ಬಗ್ಗೆ, ವಿಶಿಷ್ಟ ಪದ್ಧತಿಗಳು ಬೆಳೆದು ಬಂದಿರುತ್ತವೆ. ಅಂತೆಯೇ ಇತರ ನಿಯಮಗಳು. ಇವೆಲ್ಲವನ್ನೂ ಕಾಪಾಡಿಕೊಂಡು ಮುಂದುವರಿಸುವದೇ ಸಮಾಜ ಜೀವನವನ್ನು ಭದ್ರವಾಗಿ ಮುಂದುವರಿಸುವ ವಿಧಾನ.

ಈ ವ್ಯವಸ್ಥೆ, ನಿಯಮಗಳಾದರೂ ಹಲವೊಂದು ಮೂಲ ತತ್ತ್ವಗಳ ಚೌಕಟ್ಟಿನೊಳಗೇ ನಡೆದು ಬಂದಿರುತ್ತವೆ. ಅದೇ ಸಮಾಜಜೀವನದ ಸ್ವಾಭಾವಿಕ ಸ್ಥಿತಿ. ನದಿ ತನ್ನ ಎರಡು ದಡಗಳ ಮಧ್ಯೆ ಹರಿಯುವುದೇ ಸ್ವಾಭಾವಿಕ ಸ್ಥಿತಿ. ಇದನ್ನು ಉಲ್ಲಂಘಿಸಿದಲ್ಲಿ ಅದು ಭೂಮಿಯೊಳಗೆ ಇಂಗುತ್ತದೆ; ಅಥವಾ ಮೇರೆ ಮೀರಿ ಹರಿದಲ್ಲಿ ತನ್ನನ್ನು ತಾಯಿಯೆಂದು ತಿಳಿದಿರುವವರನ್ನು, ತಾನು ರಕ್ಷಿಸ ಬೇಕಾದವರನ್ನೇ ಮುಳುಗಿಸುತ್ತದೆ; ಅಷ್ಟೇ ಅಲ್ಲ, ಅದು ತನ್ನ ಗುರಿಯಾದ ಸಾಗರವನ್ನೂ ಸೇರಲಾರದು. ಅಂತೆಯೇ ಸಮಾಜದ ನಿಯಮಗಳೂ ಒಂದು ಚೌಕಟ್ಟಿನೊಳಗೆ ಇದ್ದಾಗ ಮಾತ್ರ ಅದು ವ್ಯಕ್ತಿಯನ್ನು ಪೋಷಿಸುವುದಲ್ಲದೆ, ತಾನೂ ಬಲಶಾಲಿ ಆಗುತ್ತದೆ. ನಮ್ಮ ದೇಶದ ರಾಜ್ಯಾಂಗದ ಉದಾಹರಣೆ ತೆಗೆದುಕೊಂಡಲ್ಲಿ, ಅದರ ನಿಯಮಗಳನ್ನು ಬದಲಾಯಿಸಬೇಕಾದರೂ ಕೆಲವೊಂದು ಮೂಲಭೂತ ಸಿದ್ಧಾಂತಗಳ ಚೌಕಟ್ಟಿನೊಳಗೆ ಬದಲಾಯಿಸಬೇಕೇ ಹೊರತು ಮನಬಂದಂತೆ ಬದಲಾಯಿಸಿದಲ್ಲಿ ರಾಜ್ಯಾಂಗದ ಉದ್ದೇಶವೇ ನಾಶವಾಗುತ್ತದೆ.

## ರಾಷ್ಟ್ರದ ಸ್ವರೂಪ

ವ್ಯಕ್ತಿ, ಸಮಾಜಗಳು ಅಭಿನ್ನವಾದವು. ಒಂದೇ ಜೀವನರಸದ ಸಂಬಂಧದಿಂದಲೇ ಈ ಅಭೇದ ಏರ್ಪಟ್ಟಿದೆ. ಆ ಚೈತನ್ಯದಿಂದಲೇ ವ್ಯಕ್ತಿ, ಸಮಾಜಗಳ ನಡುವೆ ಅಭಂಗ ಆತ್ಮೀಯತೆಯೂ ನಿರ್ಮಾಣವಾಗಿದೆ. ಆ ಚೈತನ್ಯವೇ ವ್ಯಕ್ತಿಗೆ ಸಮಾಜಕ್ಕಾಗಿ ದುಡಿಯುವ ಪ್ರೇರಣೆಯನ್ನೂ, ಸಮಾಜಕ್ಕೆ ವ್ಯಕ್ತಿಯನ್ನು ತನ್ನ ಅಂಗವೆಂಬಂತೆ ಕಾಣುವ ಪ್ರೇರಣೆಯನ್ನೂ ನೀಡಿದೆ. ಈ ಸಂಬಂಧದ ಆಧಾರದ ಮೇಲೆ ಹುಟ್ಟುವ ಮಾನವಸಮೂಹಕ್ಕೇ 'ಸಮಾಜ' ಎಂದು ಹೆಸರು. ಜನ್ಮತಃ ಬೆಳೆದು ಬಂದ

ಒಂದು ಜೀವಂತ ಅಸ್ತಿತ್ವ, ಸಮಾಜ. ಒಂದು ನಿರ್ದಿಷ್ಟ ಭೂಭಾಗದಲ್ಲಿ ವಾಸಿಸುತ್ತಾ ಆ ಭೂಮಿಯೊಡನೆ ಮಾತಾ–ಪುತ್ರ ಸಂಬಂಧವನ್ನು ಸ್ಥಾಪಿಸಿಕೊಂಡಾಗ ಅದೇ ಅಲ್ಲಿನ 'ರಾಷ್ಟ್ರ' ಎನಿಸುತ್ತದೆ.

'ರಾಷ್ಟ್ರ' ಆಗಲು ಎರಡು ಸಂಗತಿಗಳು ಅವಶ್ಯ: ಒಂದು, ನಿರ್ದಿಷ್ಟವಾದ ಭೂ ಪ್ರದೇಶ. ಎರಡು, ಆ ಭೂಮಿಯನ್ನು ತಾಯಿಯಂತೆ ಕಾಣುವ ಸಮಾಜ, ಆ ಭೂಮಿಯಲ್ಲಿ ವಾಸಿಸುವ ಯಾವುದೇ ಒಂದು ಗುಂಪು ಅದನ್ನು ಮಾತೃಭೂಮಿ ಎಂದು ಭಾವಿಸುವ ಬದಲಿಗೆ ಭೋಗಭೂಮಿಯೆಂಬ ಭಾವವನ್ನು ತಾಳಿದ್ದಲ್ಲಿ ಅದು ರಾಷ್ಟ್ರದ ಅಂಗವಾಗುವುದಿಲ್ಲ. ತನ್ನ ನಾಡಿನ ಬಗೆಗೆ ಮಾತೃಭಾವ ಹೊಂದಿದ ವ್ಯಕ್ತಿಯು ಆ ರಾಷ್ಟ್ರದ ಅವಯವ ಆಗುತ್ತಾನೆ. ಶರೀರದ ಅವಯವಗಳಿಗೆ ತನ್ನ ಶರೀರಕ್ಕಾಗಿ ಕೆಲಸಮಾಡುವುದು ಸಹಜ ಕರ್ತವ್ಯವೇ ಆಗುತ್ತದೆ. ಅಂಗವು ಶರೀರದ ಸೇವೆಯಿಂದ ಸಾರ್ಥಕ್ಯ ಪಡೆಯುವಂತೆ ವ್ಯಕ್ತಿಯೂ ರಾಷ್ಟ್ರಸೇವೆ ಮಾಡಿ ಸಾರ್ಥಕ್ಯ ಕಂಡುಕೊಳ್ಳುತ್ತಾನೆ.

ತನ್ನ ರಾಷ್ಟ್ರದ ಹಿತಕ್ಕೆ ವಿರೋಧಿಯಾದ ಇನ್ನೊಂದು ಸಮಾಜಕ್ಕಾಗಿ ಕೆಲಸ ಮಾಡಿದರೆ ಅದರಲ್ಲಿ ಆನಂದವೂ ಇಲ್ಲ, ಸಾರ್ಥಕ್ಯವೂ ಇಲ್ಲ. ಅಂತಹ ವ್ಯಕ್ತಿಗೆ ಸಮಾಜದಲ್ಲಿ ಗೌರವ ಸಿಗದು. ಬ್ರಿಟಿಷರ ರಾಜ್ಯ ಇಲ್ಲಿದ್ದಾಗ ಅವರ ಪರವಾಗಿ ಕೆಲಸ ಮಾಡಿದಂಥ ನಮ್ಮ ಜನರಿಗೆ ಗೌರವ ಸಿಕ್ಕಿತೇನು? ಮಹಮ್ಮದ್ ಘೋರಿಗೆ ಸಹಕಾರ ಕೊಟ್ಟ ಜಯಚಂದನಿಗೆ ಇತಿಹಾಸದಲ್ಲಿ ಸಮ್ಮಾನ ದೊರಕಿತೇನು? ಇಲ್ಲ. ಇಂಗ್ಲಿಷರನ್ನು ವಿರೋಧಿಸಿ ಅವರ ಮೇಲೆ ಬಾಂಬ್ ಎಸೆದವರಿಗೆ ಹಾಗೂ ಮಹಮ್ಮದ್ ಘೋರಿಯನ್ನು ಶಬ್ದವೇಧೀ ಬಾಣದಿಂದ ಹೊಡೆದು ಕೊನೆಗಾಣಿಸಿದ ಪೃಥ್ವಿರಾಜನಿಗೆ ಇಲ್ಲಿ ಅಪಾರ ಗೌರವ ದೊರೆಯಿತು. ಪ್ರತಿಯೊಂದು ರಾಷ್ಟ್ರದ್ದೂ ಇದೇ ಪರಂಪರೆ. ಫ್ರಾನ್ಸಿಗೆ ಹಿಟ್ಲರನ ಸೇನೆ ನುಗ್ಗಿದ್ದ ಸಮಯ. ಅಲ್ಲಿನ ಪ್ರಧಾನಮಂತ್ರಿ ಮಾರ್ಶಲ್ ಪೀಟೆನ್, 'ಶಾಂತಿಸ್ಥಾಪನೆ'ಗಾಗಿ ಮತ್ತು ಪ್ರಾಣಹಾನಿ ತಪ್ಪಿಸಲೆಂದು ಹಿಟ್ಲರನಿಗೆ ಶರಣಾದ. ಆದರೆ ಡಿಗಾಲ್ ಲಂಡನ್ ತಲುಪಿ, ಅಲ್ಲಿಂದಲೇ ಯುದ್ಧ ಮುಂದುವರಿಸಿದ. ಕೊನೆಗೆ ತನ್ನ ದೇಶದಿಂದ ಹಿಟ್ಲರನನ್ನು ಹೊರಹಾಕಿದ. ನಿಜ, ಅದರಿಂದಾಗಿ ಅನೇಕರ ಪ್ರಾಣಹಾನಿಯಾಯಿತು. ಆದರೆ, ಜನರು ಗೌರವಿಸಿದ್ದು ಡಿಗಾಲ್‌ನನ್ನು, ಪೀಟೇನನ್ನು ಅಲ್ಲ. ಏಕೆಂದರೆ ಡಿಗಾಲ್ ದೇಶದ ಸ್ವಾಭಿಮಾನವನ್ನು ರಕ್ಷಿಸಿದ್ದ.

### ನಿಜವಾದ ಸೇವೆ

ರಾಷ್ಟ್ರದ ಸೇವೆ ಮಾಡಬೇಕೆಂದು ಎಲ್ಲರೂ ಹೇಳುತ್ತಾರೆ. ಆದರೆ 'ಸೇವೆ' ಎಂದರೇನು? ಒಬ್ಬನಿಗೆ ಒಂದೇ ಸಮನೆ ತಿನ್ನಿಸುವುದು ಸೇವೆ ಆಗಲಾರದು.



ಬ್ರಹ್ಮದೇಶದ ಜನ ಬೌದ್ಧರು. ಅಹಿಂಸೆ ಅವರ ಧರ್ಮ. ಪ್ರಾಣಿಗಳನ್ನು ಕೊಲ್ಲಬಾರದೆಂಬುದು ಅವರ ನಿಯಮ. ಆದುದರಿಂದ ಅವರು ಪ್ರಾಣಿಗಳಿಗೆ, ವಿಶೇಷವಾಗಿ ನಾಯಿಗಳಿಗೆ, ತಿನ್ನಿಸಿ, ತಿನ್ನಿಸಿ, ಅದು ಸಾಯುವವರೆಗೂ ಅದರ ಬಾಯೊಳಕ್ಕೆ ಆಹಾರ ತುರುಕುತ್ತಾರೆ. ತಿಂದು ತಿಂದು, ಉಸಿರು ಕಟ್ಟಿ ಅದು ಸತ್ತಾಗ ಅದನ್ನು ತಾವು ತಿನ್ನುತ್ತಾರೆ! ನಾಯಿಯನ್ನು ತಾವು ಕೊಲ್ಲಲಿಲ್ಲ. ಕೇವಲ ಅದಕ್ಕೆ ತಾವು ಆಹಾರ ತಿನ್ನಿಸಿದೆವು. 'ಅಹಿಂಸಾ ವ್ರತ' ಪಾಲಿಸಿದೆವು ಎಂಬುದು ಅವರ ಸಮಾಧಾನ! ವಾಸ್ತವವಾಗಿ ಅದು ಅಹಿಂಸೆಯೂ ಅಲ್ಲ, ಸೇವೆಯಂತೂ ಮೊದಲೇ ಅಲ್ಲ. ಹಿತಸಾಧನೆಯೇ ಸೇವೆಯ ನಿಜವಾದ ರೀತಿ.

ಹಾಗೆಯೇ, ನಿಜವಾದ ರಾಷ್ಟ್ರಸೇವೆ ಎಂದರೆ, ಆ ರಾಷ್ಟ್ರದ ಆತ್ಮಕ್ಕೆ ಅನುರೂಪವಾದ, ಹಿತವಾದ ಕೆಲಸ. ತನ್ನ ರಾಷ್ಟ್ರಕ್ಕೋಸ್ಕರ ರಣಾಂಗಣದಲ್ಲಿ ಹೋರಾಡಿ ಪ್ರಾಣ ನೀಡುವುದು ವ್ಯಕ್ತಿಯ ಕರ್ತವ್ಯವೇ; ಅವನಿಗದು ಅತಿ ಪವಿತ್ರವಾದ ಕಾರ್ಯ. ಆ ರೀತಿ ಸತ್ತವರಿಗೆ ಗೌರವ–ಸಮ್ಮಾನವೇ ಹೊರತು, ಆತ್ಮಹತ್ಯೆ ಮಾಡಿಕೊಂಡವನಿಗಲ್ಲ. ಆತ್ಮಹತ್ಯೆಯಾದರೊ ಅತಿ ನಿಂದ್ಯ. ಈ ವ್ಯತ್ಯಾಸಕ್ಕೆ ಕಾರಣವೇನು? ಒಂದು ಕೆಲಸ ತನ್ನ ರಾಷ್ಟ್ರ, ಅದರ ಪರಂಪರೆ ಜೀವನೋದ್ದೇಶಗಳಿಗಾಗಿ ಮಾಡಿದ್ದಾದರೆ, ಮತ್ತೊಂದು ಉದ್ದೇಶ ಹೀನವಾದದ್ದು. ಅದೇ ರೀತಿ ತನ್ನ ವಸ್ತು ಅಥವಾ ಹಣವನ್ನು ಮತ್ತೊಬ್ಬರ ಹಿತಕ್ಕಾಗಿ ಬಿಟ್ಟುಕೊಟ್ಟರೆ ಅದು ತ್ಯಾಗ, ಸಾರ್ಥಕ; ಬೀದಿಯಲ್ಲಿ ಸುಮ್ಮನೆ ಚೆಲ್ಲಿದರೆ ನಿರರ್ಥಕ. ಕೌಪೀನಧಾರಿಯಾದ ಸಂನ್ಯಾಸಿಗೆ ಗೌರವ ಸಿಕ್ಕಿದರೆ, ಬುದ್ಧಿಭ್ರಮಣೆ ಹೊಂದಿ ಅರೆಬೆತ್ತಲೆ ತಿರುಗುವವನಿಗೆ ಸಿಗುವ ಬಹುಮಾನ ಅಪಹಾಸ್ಯವೇ. ಈ ಎರಡೂ ಕ್ರಿಯೆ ತೋರಿಕೆಗೆ ಒಂದೇ ರೀತಿ ಕಂಡರೂ ರಾಷ್ಟ್ರದ ಕಲ್ಯಾಣಕ್ಕೆ ಅದು ಎಷ್ಟರ ಮಟ್ಟಿಗೆ ಪೋಷಕವಾಗಿದೆ ಎಂಬುದರ ಮೇಲೆ ಅದರ ಬೆಲೆ ಕಟ್ಟಲಾಗುತ್ತದೆ.

### ಅಮರತೆಯ ರಹಸ್ಯ

'ಭಗವಂತನ ಎಲ್ಲ ಸೃಷ್ಟಿಗೂ ಒಂದು ಉದ್ದೇಶವಿದೆ'– ಇದು ನಮ್ಮ ನಂಬಿಕೆ. ಯಂತ್ರವೊಂದರಲ್ಲಿ, ಕೆಲವು ಚಿಕ್ಕದಾದ, ಮತ್ತೆ ಕೆಲವು ದೊಡ್ಡದಾದ ಭಾಗಗಳು ಇರುತ್ತವೆ. ಅವುಗಳಲ್ಲಿ ಎಲ್ಲವೂ ಮುಖ್ಯವೇ ಹೌದು. ಯಾವುದೊಂದು ಕೆಟ್ಟುಹೋದರೂ ಯಂತ್ರದ ಕೆಲಸ ನಿಂತುಹೋಗುತ್ತದೆ. ಕಾರಖಾನೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಕೆಲಸವೂ ಮುಖ್ಯವೇ. ಯಾವನೊಬ್ಬನ ಕೆಲಸ ನಿಂತುಹೋದರೂ ವಸ್ತು ತಯಾರಾಗದು. ಹಾಗೆಯೇ ಸೃಷ್ಟಿಯಲ್ಲೂ ಎಲ್ಲವೂ ಒಂದು ರೀತಿ ಉಪಯೋಗಿಯೇ. ಉಪಯೋಗಿಯಲ್ಲದುದು ತಾನಾಗಿ ಕ್ರಮೇಣ ನಾಶವಾಗುತ್ತದೆ. ರಾಷ್ಟ್ರ, ಸಂಸ್ಕೃತಿಗಳ ಬಗೆಗೂ ಇದೇ ಮಾತು ನಿಜ. ಒಂದು

ರಾಷ್ಟ್ರದ ಸಂಸ್ಕೃತಿಯ ಅಗತ್ಯ ಮುಗಿಯಿತೆಂದರೆ ಅದೂ ಅಸ್ತಂಗತವಾಗುತ್ತದೆ. ಈಜಿಪ್ಟ್, ಬ್ಯಾಬಿಲೋನಿಯಾ, ಸಿರಿಯಾ ಇತ್ಯಾದಿ ಸಂಸ್ಕೃತಿಗಳು ನಷ್ಟವಾದುದು ಹೀಗೆಯೇ. ಗ್ರೀಕ್ ರಾಷ್ಟ್ರವಂತೂ ಹಿಂದೆ ಅಲೆಗ್ಸಾಂಡರ್, ಹೆರೊಡೋಟಸ್, ಅರಿಸ್ಟಾಟಲ್ ಇವರಿಗೆ ಜನ್ಮದಾತ್ರಿ. ಅಂತಹ ಭವ್ಯ ರಾಷ್ಟ್ರವೂ ಇಂದು ಬದುಕಿಲ್ಲ. ಆ ಎಲ್ಲ 'ರಾಷ್ಟ್ರ'ಗಳೂ ಸತ್ತವು. ಎಂದರೆ ಅದರ ಅರ್ಥವೇನು? ಅಲ್ಲಿನ 'ಭೂಮಿ' ನಾಶವಾಯಿತು ಎಂದಲ್ಲ. ಅಲ್ಲಿನ ಭೂಪ್ರದೇಶ ಹಿಂದಿನಂತೆಯೇ ಈಗಲೂ ಇದೆ. ಅಲ್ಲೀಗ ವಾಸಿಸುವ ಜನರೂ ಸಹ ಅದೇ ಪೂರ್ವಜರ ವಂಶದವರೇ. ಹೀಗೆ ಅದೇ ಭೂಮಿಯೂ ಇದ್ದು, ಅದೇ ಪುರಾತನ ಜನಾಂಗಗಳ ಸಂತಾನವೂ ಅಲ್ಲಲ್ಲಿ ಬದುಕಿದ್ದು ಆ 'ರಾಷ್ಟ್ರ'ಗಳು ಮಾತ್ರ ಹೇಗೆ ನಷ್ಟವಾದವು? ಕಾರಣ ಇಷ್ಟೆ: ಅಲ್ಲಿ ವಾಸಿಸುವ ಜನಗಳು ಅಲ್ಲಿನ ತಮ್ಮ ಪುರಾತನ ವಂಶಜರೊಡನೆ ತಮ್ಮ ಸಂಬಂಧಗಳನ್ನು ಕಡಿದುಕೊಂಡಿದ್ದಾರೆ. ತಮ್ಮ ಆ ಪೂರ್ವಜರ ಆದರ್ಶಗಳು, ಇತಿಹಾಸ, ಪರಂಪರೆ, ಭಾವನೆಗಳನ್ನು ತಮ್ಮದೆಂದು ಇವತ್ತಿನ ಆ ಜನಾಂಗಗಳು ಭಾವಿಸುವುದಿಲ್ಲ. ಅವನ್ನು ಗೌರವಿಸುವುದೂ ಇಲ್ಲ. ಆ ಪುರಾತನ ರಾಷ್ಟ್ರಗಳು ಸತ್ತವು ಎಂದರೆ ಇದೇ ಅರ್ಥ.

ಆದರೆ ಹಿಂದುಸ್ಥಾನದಲ್ಲಿ ವಾಸಿಸುವ ನಾವು ಬಹು ಪ್ರಾಚೀನ ಕಾಲದಿಂದಲೂ ಒಂದು ರಾಷ್ಟ್ರವಾಗಿ ಬದುಕಿದ್ದೇವೆ. ನಮ್ಮ ಪೂರ್ವಜರ ಪರಂಪರೆ, ಭಾವನೆ, ಜೀವನೋದ್ದೇಶಗಳು ನಮ್ಮ ನರನಾಡಿಗಳಲ್ಲಿ ಇಂದಿಗೂ ಪ್ರತಿಧ್ವನಿಸುತ್ತಿವೆ. ಅವನ್ನು ರಕ್ಷಿಸಲು ನಾವು ಪ್ರಾಣವನ್ನು ಚೆಲ್ಲಾಡಲು ಇಂದಿಗೂ ಮುಂದಾಗುತ್ತೇವೆ. ಇದರ ಅರ್ಥ ನಮ್ಮ ರಾಷ್ಟ್ರ ಜೀವಂತವಾಗಿದೆ; ನಾವು ಸಾಧಿಸಬೇಕಾಗಿರುವ ಮಹಾನ್ ಉದ್ದೇಶವೂ ಜೀವಂತವಾಗಿ ಉಳಿದಿದೆ.

ನಮ್ಮ ಈ 'ರಾಷ್ಟ್ರಜೀವನ'ದ ಬೆಳವಣಿಗೆಗೆ ಅನುರೂಪವಾಗಿ ನಡೆಯುವ ಕಾರ್ಯಗಳೆಲ್ಲವೂ 'ನಮ್ಮ ಸಮಾಜ'ದ ಕೆಲಸ ಎನಿಸುತ್ತದೆ. ನಮ್ಮ ರಾಷ್ಟ್ರೀಯ ಆದರ್ಶಗಳನ್ನು ರಕ್ಷಿಸುವ ಸಲುವಾಗಿ ಸಂಘರ್ಷ ಅಗತ್ಯಬಿದ್ದರೆ ಅದನ್ನೂ ಮಾಡಬೇಕಾದೀತು. ಹಿಂದೆ ನಡೆದ 'ಮಹಾಭಾರತ' ಯುದ್ಧದಲ್ಲಿ ಅಪಾರ ಜನಹಾನಿ, ಧನಹಾನಿ ಆಯಿತು. ಕೆಲವರು ಇದಕ್ಕೆಲ್ಲ ಶ್ರೀಕೃಷ್ಣನೇ ಕಾರಣನೆಂದು ದೂರಿದರು. ಆದರೆ ನಮ್ಮ ರಾಷ್ಟ್ರದ ಆದರ್ಶಗಳ– ಧರ್ಮದ– ರಕ್ಷಣೆಗಾಗಿಯೇ ಶ್ರೀಕೃಷ್ಣ ಆ ಎಲ್ಲ ದುಷ್ಟರನ್ನೂ ನಾಶಮಾಡುವ ಯೋಜನೆ ಮಾಡಿದ್ದ; ಆ ಯುದ್ಧ ನಡೆಸಿದ್ದ.

## ರಾಜ್ಯದ ಅಗತ್ಯ, ಪರಿಮಿತಿ

ನಮ್ಮ ಸಮಾಜಜೀವನದ ಆದರ್ಶಗಳು ಸ್ಥಾಪಿತವಾಗಬೇಕಾದಲ್ಲಿ ಸಮಾಜದಲ್ಲಿನ ಎಲ್ಲ ವ್ಯಕ್ತಿಗಳೂ ಅದಕ್ಕನುಗುಣವಾಗಿ ಕಾರ್ಯ ನಡೆಸಬೇಕಾಗುತ್ತದೆ. ಕೆಲವೊಮ್ಮೆ



ಕೆಲವರು ಈ ಧ್ಯೇಯಕ್ಕೆ ಅನುಗುಣವಾಗಿ ಕಾರ್ಯ ಮಾಡುವುದಿಲ್ಲ. ಇನ್ನು ಕೆಲವರು ತಾವೂ ಕೆಲಸ ಮಾಡದೆ, ಇತರರ ಕೆಲಸದ ಫಲಗಳನ್ನೂ ದೋಚಿಕೊಂಡು ಅವನ್ನು ತಾವೇ ಅನುಭವಿಸುವ ದುಷ್ಟಕಾರ್ಯಕ್ಕೆ ಎಳಸುತ್ತಾರೆ. ಇಂತಹವರನ್ನು ಹದ್ದುಬಸ್ತಿನಲ್ಲಿ ಇಡಲು, ಶಿಕ್ಷಿಸಲು ಒಂದು ಕೇಂದ್ರ ವ್ಯವಸ್ಥೆ ಬೇಕಾಗುತ್ತದೆ. ಹತ್ತು ಜನ ಒಟ್ಟಿಗೆ ಒಂದು ಶಿಬಿರದಲ್ಲಿ ವಾಸ ಮಾಡುತ್ತಿದ್ದಾರೆನ್ನಿ. ಆಗ ಒಬ್ಬನು ಮತ್ತೊಬ್ಬನು ಕುಡಿಯಲು ತಂದು ಇಟ್ಟುಕೊಂಡಿರುವ ನೀರು ಕುಡಿದು, ತಂದವನಿಗೇ ನೀರು ಇಲ್ಲದಂತೆ ಮಾಡಿದರೆ ಅಲ್ಲಿ ಜಗಳ ಕಾಲಿಡುತ್ತದೆ. ಅದನ್ನು ತಪ್ಪಿಸಲು ಹಾಗೂ ಮುಂದೆ ಆ ರೀತಿಯ ಅವ್ಯವಸ್ಥೆ ತಪ್ಪಿಸಲು ಒಂದು ವ್ಯವಸ್ಥೆ ಬೇಕಾಗುತ್ತದೆ. ಇದರಂತೆಯೇ ಚೋರರಿಂದ, ವಂಚಕರಿಂದ ಸಮಾಜವನ್ನು ರಕ್ಷಿಸಲು ರಾಜ್ಯವ್ಯವಸ್ಥೆ ಬೇಕಾಗುತ್ತದೆ. ನಾವಂತೂ ಬಹುಪೂರ್ವದಲ್ಲಿ ರಾಜ್ಯಯಂತ್ರವೇ ಅಗತ್ಯವಿರದಂಥ ಆದರ್ಶ ಸಮಾಜವನ್ನು ಕಟ್ಟಿದ್ದೆವು. ಆಗ ಎಲ್ಲರೂ ತಮ್ಮ ತಮ್ಮ ಧರ್ಮಕ್ಕನುಸಾರವಾಗಿ ಸಮರ್ಪಕವಾಗಿ ಕಾರ್ಯ ನಡೆಸುತ್ತಿದ್ದರು. ಆದರೆ ಕ್ರಮೇಣ ಸಮಾಜದಲ್ಲಿ ತಮ್ಮ ತಮ್ಮ ಕರ್ತವ್ಯ, ಕರ್ಮಗಳ ಬಗೆಗೆ ಅಲಕ್ಷ್ಯ ಬೆಳೆಯಿತು. ಅದು ಬೆಳೆದಂತೆಲ್ಲಾ ಜನರನ್ನು ಯೋಗ್ಯ ಮಾರ್ಗದಲ್ಲಿ ನಡೆಯುವಂತೆ ನಿಯಂತ್ರಿಸಲು ರಾಜ್ಯಯಂತ್ರದ ಅವಶ್ಯಕತೆಯೂ ಬಿದ್ದಿತು.

ರಾಜ್ಯದ ಕೆಲಸವನ್ನು ರಾಜ್ಯದಿಂದ ನಿಯುಕ್ತರಾದವರು ಮಾಡಬೇಕೇ ವಿನಾ ಎಲ್ಲರೂ ಮಾಡಲಾಗದು. ರೈಲಿನಲ್ಲಿ ಪ್ರಯಾಣ ಮಾಡುವಾಗ ಒಬ್ಬ ಜೇಬುಗಳ್ಳ ಸಿಕ್ಕಿದನೆನ್ನಿ. ಅವನ ಮೇಲೆ ಖಟ್ಲೆ ಹಾಕಿ ಅವನಿಗೆ ಶಿಕ್ಷೆ ಆಗುವಂತೆ ಮಾಡುವುದು ಪೊಲೀಸಿನವನ ಕೆಲಸ. ಅದರ ಬದಲು ಎಲ್ಲರೂ 'ಪೊಲೀಸರೇ' ಆದರೆ ಗತಿ? ಅಮೇರಿಕಾದಲ್ಲಿ ನೀಗ್ರೋ ತಪ್ಪು ಮಾಡಿದಲ್ಲಿ ಆಳಿಗೊಂದು ಕಲ್ಲೆಸೆದು ಅವನನ್ನು ಕೊಲ್ಲುತ್ತಿದ್ದರು. ಹೀಗೆಯೇ ಎಲ್ಲ ಕೆಲಸದ ಬಗ್ಗೆಯೂ ಆದೀತು. ಎಲ್ಲರೂ ಎಲ್ಲ ಕೆಲಸವನ್ನೂ ಮಾಡಬೇಕೆಂಬುದು ಶಕ್ಯವೂ ಅಲ್ಲ, ಹಿತವೂ ಅಲ್ಲ. ಅದು ಸಮಾಜಜೀವನ ನಿರ್ವಹಣೆಗೆ ಒಗ್ಗುವುದಿಲ್ಲ. ಪ್ರತಿಯೊಂದು ಕಾರ್ಯವಿಭಾಗಕ್ಕೂ ಪ್ರತ್ಯೇಕ ವ್ಯವಸ್ಥೆಯೇ ಬೇಕು.

## ರಾಜ್ಯ ಸರ್ವಶಕ್ತವಾದಲ್ಲಿ...

ರಾಜ್ಯಕ್ಕೆ ಅಧಿಕಾರವು ಸಮಾಜದಿಂದಲೇ ಕೊಡಲ್ಪಡುತ್ತದೆ. ಸಮಾಜದ ವ್ಯವಸ್ಥೆ ಮತ್ತು ರಕ್ಷಣೆ ಅದರ ಕೆಲಸ. ಇತರ ಸಮಾಜಗಳೊಡನೆ ವ್ಯವಹರಿಸುವ ಜವಾಬ್ದಾರಿಯೂ ಅದರದೇ. ಸೈನ್ಯ ಕಟ್ಟಬೇಕಾದದ್ದೂ ರಾಜ್ಯವೇ. ಈ ಕೆಲಸಗಳನ್ನೆಲ್ಲ ಸಮಾಜದ ಪ್ರತಿನಿಧಿಯಾಗಿ ರಾಜ್ಯ ಮಾಡುತ್ತದೆ. ಆದರೆ ಸಮಾಜದಲ್ಲಿ ಅವ್ಯವಸ್ಥೆ ಹೆಚ್ಚಿದಂತೆ ರಾಜ್ಯ ಅಥವಾ ರಾಜನ ಅಧಿಕಾರವೂ ಹೆಚ್ಚುತ್ತಾ ಹೋಗುತ್ತದೆ.

ಮುಂಚಿನ ಜವಾಬ್ದಾರಿಯ ಜೊತೆಗೆ ಕಾರ್ಮಿಕರ, ವೃದ್ಧರ, ಅನಾಥರ, ಶಿಕ್ಷಣದ, ಔಷಧೋಪಚಾರದ ಜವಾಬ್ದಾರಿಯೂ ಬಂದು ಸೇರುತ್ತದೆ. ಹೀಗೆ ಅದರ ಜವಾಬ್ದಾರಿ ಹೆಚ್ಚುತ್ತಾ ಹೋದಂತೆ ಅದರ ಕೈಯಲ್ಲಿನ ಅಧಿಕಾರವೂ ಹೆಚ್ಚುತ್ತದೆ. ಅಧಿಕಾರ ಹೆಚ್ಚಾದಂತೆ ಅದು ಸಮಾಜದ ಮೇಲೆ ಸವಾರಿಮಾಡುವ ಪ್ರವೃತ್ತಿಯೂ ಬಲಿಯುತ್ತದೆ. ತಾನು ಸಮಾಜದ ಪ್ರತಿನಿಧಿ, ಅದರ ಸೇವೆಯೇ ಈ ಎಲ್ಲ ಜವಾಬ್ದಾರಿ, ಅಧಿಕಾರಗಳ ಉದ್ದೇಶ ಎಂಬುದು ಅದಕ್ಕೆ ಮರೆವಾಗಿ, ತನಗೆ ಯಾರಿಂದ ಅಧಿಕಾರ ಪ್ರಾಪ್ತವಾಯಿತೋ ಅದೇ ಸಮಾಜವನ್ನು ತನ್ನ ಆಳಿನಂತೆ ಕಾಣತೊಡಗುತ್ತದೆ. ಬರುಬರುತ್ತಾ ರಾಜ್ಯವೊಂದೇ ಸಮಾಜದ ಏಕಮೇವ ಸರ್ವಶಕ್ತ ಪ್ರತಿನಿಧಿಯಾಗಿ ಮಾರ್ಪಡುತ್ತದೆ.

ಈ ಸ್ಥಿತಿ ಬಂದಿತೆಂದರೆ ಸಮಾಜಕ್ಕೆ ಕೇಡು ಸಿದ್ಧ. ಇಂತಹ ಸಂದರ್ಭಗಳಲ್ಲಿ ರಾಜ್ಯಕರ್ತರು ಸಮಾಜಪ್ರೇಮಿಗಳಲ್ಲದಿದ್ದಲ್ಲಿ ಕೇಡು ಮತ್ತೂ ಹೆಚ್ಚು. ಅವರು ಅಧಿಕಾರಬಲದಿಂದ ಸಮಾಜದ ಏಳಿಗೆಯ ವಿರುದ್ಧವಾದ ಕಾರ್ಯಗಳನ್ನೇ ಮಾಡುತ್ತಾರೆ. ರಾಜ್ಯಯಂತ್ರವು ಪರಕೀಯರ ಅಧೀನವಾದರಂತೂ ಸಮಾಜದ ಮೇಲೆ ಸರ್ವರೀತಿಯ ದಬ್ಬಾಳಿಕೆಯೇ ನಡೆಯುತ್ತದೆ. ಬ್ರಿಟಿಷ್ ಆಡಳಿತದಲ್ಲಿ ನಮಗೆ ಈ ಅನುಭವ ಸಾಕಷ್ಟು ಸಿಕ್ಕಿದೆ. ಈ ಎರಡೂ ಸಂದರ್ಭಗಳಲ್ಲಿ ರಾಜ್ಯಕರ್ತರು ಮತ್ತು ಸಮಾಜ ಬೇರೆಬೇರೆಯಾಗುತ್ತಾರೆ. ಸರ್ವ ಅಧಿಕಾರಗಳನ್ನೂ ರಾಜ್ಯಕ್ಕೆ ವಹಿಸಿಕೊಡುವುದರಿಂದ ಆಗುವ ಅಪಾಯ ಇದು. ಇಲ್ಲವೆ, ವ್ಯಕ್ತಿಯ ಸ್ವಾತಂತ್ರ್ಯ ಮೊಟಕಾಗುತ್ತದೆ ಅಥವಾ ಸಮಾಜದ ಸ್ವತಂತ್ರ ಬಾಳುವೆಯೇ ಮಣ್ಣುಗೂಡುತ್ತದೆ.

ಅಂತಹ ಸನ್ನಿವೇಶಗಳಲ್ಲಿ ರಾಜ್ಯವು ಸಮಾಜಜೀವನದ ನಿರ್ವಹಣೆಗೆ ದಂಡಬಲವನ್ನೇ ಆಧಾರವಾಗಿಡುತ್ತದೆ. 'ಕಲ್ಯಾಣಕಾರಿ ರಾಜ್ಯ'ಕ್ಕೂ ಇದೇ ಆಧಾರ ಆಗುತ್ತದೆ. ಪ್ರೇಮ ಸದ್ಭಾವಗಳು ದೂರವಾಗುತ್ತವೆ. ತಾನು ಸಮಾಜದ ಪ್ರತಿನಿಧಿ ಎಂಬ ಭಾವವು ರಾಜ್ಯಯಂತ್ರಕ್ಕೆ ಇಲ್ಲವಾಗುತ್ತದೆ. ಈಗಂತೂ, ಕೇವಲ ವ್ಯಾಪಾರೀ ಉದ್ಯೋಗವಾದ ರೈಲ್ವೆ ಸಂಚಾರವೂ ಒಂದು ಪೊಲೀಸ್ ವ್ಯವಸ್ಥೆಯಂತೆ ಇರುವುದನ್ನು ನಾವು ಗಮನಿಸಿರಬಹುದು.

ರಾಜ್ಯಯಂತ್ರವು ಈ ರೀತಿ ಏಕಾಧಿಕಾರ ಹೊಂದಿದ್ದಲ್ಲಿ ವ್ಯಕ್ತಿಯು ಸಮಾಜ ಹಿತಕ್ಕಾಗಿ ಸ್ವಯಂಸ್ಫೂರ್ತಿಯಿಂದ ಮುಂದುವರಿಯಲಾರ. ಅವನು ರಾಜ್ಯದ ಆಜ್ಞಾಪಾಲನೆ ಮಾಡುವ ಕೇವಲ ಒಂದು ಕೈಗೊಂಬೆಯಾಗುತ್ತಾನೆ. ಈ ರೀತಿ ಒತ್ತಾಯದ ಕೆಲಸದಲ್ಲಿ ವ್ಯಕ್ತಿವಿಕಾಸ ಸಾಧ್ಯವಾಗದು. ವ್ಯಕ್ತಿಯ ಸ್ವಾತಂತ್ರ್ಯ ಹಾರಿಹೋಗುತ್ತದೆ. ವ್ಯಕ್ತಿಯ ವಿಕಾಸಕ್ಕೆ ಕೆಲವೊಂದು ನಿಯಮ; ಮಾರ್ಗದರ್ಶನ



ಅವಶ್ಯವಾದರೂ ಅವುಗಳ ಪಾಲನೆಯನ್ನು 'ರಾಜ್ಯ'ದ ದಂಡಬಲದ ಒತ್ತಾಯದ ಮೇಲೆಯೇ ಅವನು ಮಾಡುವಂತಾಗಬಾರದು. ಅವನು ಅವನ್ನು ಸ್ವಯಂ ಸ್ಫೂರ್ತಿಯಿಂದ ಪಾಲಿಸುವಂತಾದಾಗಲೇ ವ್ಯಕ್ತಿ ಮತ್ತು ಸಮಾಜ ಎರಡೂ ವಿಕಾಸ ಹೊಂದುವುದು. ವ್ಯಕ್ತಿ, ಸಮಾಜಗಳ ಸ್ವಾತಂತ್ರ್ಯವೂ ರಕ್ಷಿತವಾಗುತ್ತದೆ.

**ಸಹಯೋಗವೇ ಜೀವನಧರ್ಮ**

ಇದುವರೆಗೆ ವಿವೇಚಿಸಿದ ಸಮಾಜದ ಏಕಮೇವ ಪ್ರತಿನಿಧಿತ್ವ ಹೊಂದಿದ ರಾಜ್ಯವ್ಯವಸ್ಥೆ ನಮ್ಮ ಪೂರ್ವಜರ ಕಲ್ಪನೆಗೆ ವಿರೋಧವಾದುದು. ಅವರಾದರೋ, ಸಮಾಜದ ಪ್ರತಿನಿಧಿತ್ವ ಬಹುಮುಖವಾಗಿ ಆಗಬೇಕೆಂದೇ ಆಲೋಚಿಸಿದರು. ಸಮಾಜವನ್ನು ಪ್ರತಿನಿಧಿಸುವ ಅನೇಕ ವ್ಯವಸ್ಥೆಗಳ ಪೈಕಿ ರಾಜ್ಯವೂ ಒಂದು, ಅಷ್ಟೆ. ಅದೇ ಏಕಮಾತ್ರ ಪ್ರತಿನಿಧಿ ಅಲ್ಲ. ಉದ್ಯೋಗ, ವ್ಯಾಪಾರ, ಶಿಕ್ಷಣ ಮುಂತಾದವಕ್ಕೆ ಸಂಬಂಧಿಸಿದ ಸಂಸ್ಥೆಗಳೂ ಸಹ ಸಮಾಜವನ್ನು ಪ್ರತಿನಿಧಿಸಬೇಕು.

ತಲೆ ಕೈ, ಕಾಲು, ಕಿವಿ ಹೀಗೆ ಶರೀರದಲ್ಲಿರುವ ಎಲ್ಲಾ ಅಂಗಗಳೂ ಶರೀರದ ಪ್ರತಿನಿಧಿಗಳೇ. ಯಾವುದೇ ಒಂದು ಅಂಗ ಮಾತ್ರ ಶರೀರವನ್ನು ಪ್ರತಿನಿಧಿಸುವುದಿಲ್ಲ. ನಾನು ಒಮ್ಮೆ ಒಬ್ಬ ಬಾಲಕನೊಡನೆ ಆಟವಾಡುತ್ತಾ 'ನನ್ನನ್ನು ಮುಟ್ಟು' ಎಂದೆ. ಅವನು ನನ್ನ ಕೈಯನ್ನು ಮುಟ್ಟಿದ. 'ನೀನು ನನ್ನ ಕೈ ಮುಟ್ಟಿದೆಯೇ ಹೊರತು ನನ್ನನ್ನು ಮುಟ್ಟಲಿಲ್ಲ' ಎಂದೆ. ಹೀಗೆ ಒಂದೊಂದು ಭಾಗ ಅವನು ಮುಟ್ಟಿದಾಗಲೂ, ನೀನು ನನ್ನನ್ನು ಮುಟ್ಟಲಿಲ್ಲ ಎಂದು ಹಾಸ್ಯ ಮಾಡಿದೆ. ಅವನು ಒಮ್ಮೆ ನನ್ನ ಕಿವಿಯನ್ನು ತಿರುಚಿದ. ನಾನು ಇದೇನು ಎನ್ನಲು 'ನಿಮಗೇನೂ ಮಾಡಿಲ್ಲ, ಕೇವಲ ನಿಮ್ಮ ಕಿವಿ ತಿರುವಿದೆ' ಎಂದು ನನಗೇ ತಿರುಮಂತ್ರ ಹಾಕಿದ! ಹೀಗೆ ಶರೀರದ ರಚನೆ ಯಾವುದೇ ಒಂದು ಅವಯವದ ಏಕಾಧಿಕಾರದಿಂದ ಕೂಡಿದ್ದಲ್ಲ. ಬಹು–ಪ್ರತಿನಿಧಿತ್ವದಿಂದ ಕೂಡಿದ್ದು. ಆದರೆ ಈ ಎಲ್ಲ ಅಂಗಗಳೂ ಪರಸ್ಪರ ಸಹಕಾರದಿಂದ ಕೆಲಸ ಮಾಡಿದಾಗಲೇ ಇಡೀ ಶರೀರಕ್ಕೆ ಸೌಖ್ಯ ಎಂಬ ಅಂಶವೂ ಅಷ್ಟೇ ನಿಜ. ಅದೇ ರೀತಿ ಸಮಾಜದ ಎಲ್ಲ ಅಂಗಗಳೂ ತಾವು ಸಮಾಜದ ಪ್ರತಿನಿಧಿಗಳೆಂದು ಅರಿತು ಸಹಕಾರದಿಂದ ಕೆಲಸ ಮಾಡಬೇಕು.

ಕಣ್ಣಿನ ಕೆಲಸವನ್ನು ಕೈ, ಅಥವಾ ನಾಲಿಗೆಯ ಕೆಲಸವನ್ನು ಕಣ್ಣು ಮಾಡುವುದು ಅಸಾಧ್ಯ. ತುಲಸೀದಾಸರು ಒಂದು ಕಡೆ 'ಸೀತೆಯನ್ನು ನೋಡಿದ ಕಣ್ಣು ಬರೆಯಲಾರದು, ಮಾತನಾಡಬಲ್ಲ ನಾಲಗೆ ನೋಡಲಾರದು. ಈ ಸ್ಥಿತಿಯಲ್ಲಿ ಸೀತೆಯ ವರ್ಣನೆ ನಾನು ಹೇಗೆ ಮಾಡಲಿ?' ಎಂದು ಕಾವ್ಯಾತ್ಮಕವಾಗಿ ಹೇಳಿದ್ದಾರೆ. ಆದರೆ ಸಾಮಾನ್ಯವಾದ ಅನುಭವದಲ್ಲಿ ಕಣ್ಣು ನೋಡಿದ್ದನ್ನೆ ನಾಲಗೆ ವರ್ಣಿಸುತ್ತದೆ. ಎರಡರಲ್ಲೂ ಸಾಮಂಜಸ್ಯ ಇರುವುದೇ ಸಾಧಾರಣವಾದ ನಿಯಮ. ಶರೀರ,

ಸಮಾಜ ಹಾಗೂ ಸೃಷ್ಟಿ ಎಲ್ಲದರಲ್ಲೂ ಸಹಯೋಗ ತತ್ತ್ವವೇ ಇದೆ. ಸಹಯೋಗವೇ ಧರ್ಮ, ಅದೇ ಜೀವನ. ಅಸಹಯೋಗವೇ ಅಧರ್ಮ, ಅದೇ ಮರಣ.



## ೧೨. ಸಮಾಜವಾದ–ಪ್ರಜಾಪ್ರಭುತ್ವ–ಹಿಂದುತ್ವ

ಯೂರೋಪು ದೇಶದ ವಿಚಾರಗಳು ನಮ್ಮ ದೇಶದ ವಿದ್ಯಾವಂತ ಜನರ ಮೇಲೆ ಪ್ರಭಾವ ಬೀರಲು ಆರಂಭವಾದಂದಿನಿಂದ ಸಮಾಜವಾದಿ ವಿಚಾರ ಹಾಗೂ ಪಕ್ಷಗಳು ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿದ್ದರೂ ಆ ಸಿದ್ಧಾಂತ ಇಲ್ಲಿನ ಜನರ ಸಾಮಾಜಿಕ ಅಥವಾ ರಾಜನೈತಿಕ ಜೀವನದಲ್ಲಿ ತನ್ನ ವರ್ಚಸ್ಸು ಸ್ಥಾಪಿಸಲು ಸಾಧ್ಯವಾಗಲಿಲ್ಲ. ಆದರೆ ಕಾಂಗ್ರೆಸ್ಸು ತನ್ನ ಆವಡಿ ಅಧಿವೇಶನದಲ್ಲಿ 'ಸಮಾಜವಾದಿ ಸಮಾನ ರಚನೆ'ಯೇ ತನ್ನ ಅಂತಿಮ ಗುರಿಯೆಂದು ಘೋಷಿಸಿದಾಗ ಪರಿಸ್ಥಿತಿ ಸ್ವಲ್ಪ ಬದಲಾಯಿತು. ತಥಾಪಿ ಸಾಧಾರಣ ಜನತೆಯ ಮಟ್ಟಿಗೆ ಆ ವಿಚಾರ ಇಂದಿಗೂ ಅಷ್ಟೇ ದೂರ ಉಳಿದಿದೆ.

**ಇಂದಿನ 'ಶೋಕಿ'**

ಕಾಂಗ್ರೆಸ್ಸು ಸಮಾಜವಾದೀ ನಿರ್ಣಯವನ್ನು ಸ್ವೀಕರಿಸಿದ ಮೇಲೂ ಅದು ಜನಗಳ ಹೃದಯವನ್ನು ಸೂರೆಗೊಳ್ಳಲು ಶಕ್ಯವಾಗಿಲ್ಲ. ಜನರು ಆ ಬಗ್ಗೆ ಉತ್ಸಾಹತಾಳಿಲ್ಲ. ಸರಕಾರದ ರೀತಿನೀತಿಗಳನ್ನು ಆ ದಿಸೆಯಲ್ಲಿ ರೂಪಿಸಬೇಕೆಂದು ಭಾವಿಸುವವರಿಗೆ ಇದೊಂದು ಚಿಂತೆಯ ವಿಷಯವಾಗಿದೆ. ಸಮಾಜವಾದಿ ವಿಚಾರಧಾರೆಯನ್ನು ಒಪ್ಪುವ ಜನರ ಸಂಖ್ಯೆಯ ಪ್ರಮಾಣಕ್ಕಿಂತ ಎಷ್ಟೋ ಪಾಲು ಮಹತ್ತ್ವ ಅದಕ್ಕಿಂದು ದೊರಕಿದೆ.

ಜೊತೆಗೆ ಪ್ರಧಾನಮಂತ್ರಿ ಪಂ॥ ಜವಾಹರಲಾಲ್ ನೆಹರು ಅವರ ಲೋಕಪ್ರಿಯತೆ ಹಾಗೂ ಪ್ರಸಿದ್ಧಿಗಳಿಂದಾಗಿ ಕೆಲವು ಕಾಲದವರೆಗೆ ಸಮಾಜವಾದವು ಇಡೀ ಜನತೆಗೆ ಅತಿ ಪ್ರಿಯವಾದ ಜೀವನದರ್ಶನ ಎನಿಸುವಂತೆ ಆಗಿದೆ. ಇಂದು ಯಾರು ನೋಡಲಿ, 'ನಾನು ಸಮಾಜವಾದಿ' ಎಂದು ಕರೆದುಕೊಳ್ಳುವುದೇ ಒಂದು ಶೋಕಿ ಆಗಿಹೋಗಿದೆ. ಕಾಲದ ಪ್ರವಾಹದಲ್ಲಿ ತೇಲಿ ಹರಿಯುವ ರಾಜಕೀಯ ಪಕ್ಷಗಳಲ್ಲಂತೂ, ಮಿಕ್ಕೆಲ್ಲರಿಗಿಂತ ಹೇಗೆ ತಾವೇ ಆದರ್ಶ ಸಮಾಜವಾದಿಗಳು ಎಂದು ಸಿದ್ಧಪಡಿಸುವಲ್ಲಿ ಒಂದು ಭಾರಿ ಸ್ಪರ್ಧೆಯೇ ಎದ್ದಿದೆ. ಹಿಂದು ಮಹಾಸಭೆ ಸಹ 'ಹಿಂದು ಸಮಾಜ ವಾದ'ದ ಮಾತನ್ನು ಆಡತೊಡಗಿದೆ. ವೈದಿಕ ಪಂಡಿತರೂ ಹಳೆಯ ಪುರಾಣ ಸಾಹಿತ್ಯಗಳಲ್ಲಿ ಶೋಧನೆ ನಡೆಸಿ ಹೊಸದಾಗಿ 'ವೈದಿಕ ಸಮಾಜವಾದ'ವನ್ನು ಕಂಡು ಹಿಡಿದಿದ್ದಾರೆ!

### ಸಮಾಜವಾದದ ಅನೇಕ ಮುಖಗಳು

ಸಮಾಜವಾದದ ಘೋಷಣೆ ಹಾಕಿರುವ ಪಕ್ಷಗಳಲ್ಲಿ ಕಾಂಗ್ರೆಸ್ಸೇ ಮೊದಲನೆಯದಲ್ಲ. ಅದಕ್ಕೆ ಮುಂಚಿನಿಂದಲೂ ಇಲ್ಲಿ ಸಮಾಜವಾದಿ ಪಕ್ಷಗಳಿದ್ದವು. ಈಗಲೂ ಇವೆ. ಆ ಪಕ್ಷಗಳಲ್ಲಿ ಅಸಂತುಷ್ಟರಾಗಿರುವವರೂ ಸಹ ತಮ್ಮನ್ನು ತಾವು ಸಮಾಜವಾದಿಗಳೆಂದೇ ಕರೆದುಕೊಳ್ಳುತ್ತಾರೆ. ಅಷ್ಟೇ ಅಲ್ಲ, ತಾವು ಹೇಳುವ ಸಮಾಜವಾದವೇ ಪರಿಶುದ್ಧವಾದುದು ಎಂದೂ ವಾದಿಸುತ್ತಾರೆ. ಇದರಿಂದ ಸಮಾಜವಾದದ ಬಗ್ಗೆ ಭ್ರಮೆ ಇನ್ನಷ್ಟು ಹೆಚ್ಚಾಗಿದೆ. ಯುರೋಪಿನಲ್ಲೂ ಅನೇಕ ರೀತಿಯ ಸಮಾಜವಾದಗಳು ಇವೆ. ರೂಸ್‌ವೆಲ್ಟ್, ಹಿಟ್ಲರ್, ಮುಸೋಲಿನಿ, ಸ್ಟಾಲಿನ್ ಇವರೆಲ್ಲರೂ ತಮ್ಮನ್ನು ತಾವು ಸಮಾಜವಾದಿ ಎಂದೇ ಕರೆದುಕೊಳ್ಳುತ್ತಿದ್ದರು. ಜೊತೆಗೆ, ರಾಜಕೀಯದಿಂದ ದೂರವಿರುವಂಥವರೂ ಸಹ ಅನೇಕ ತರಹದ ಸಮಾಜವಾದಗಳನ್ನು ಸೃಷ್ಟಿಸಿದ್ದಾರೆ. ಭಾರತದಲ್ಲಿ ಈ ಎಲ್ಲ ರೀತಿಯ ಸಮಾಜ ವಾದಗಳ ಅನುಯಾಯಿಗಳೂ ಇದ್ದಾರೆ. ಯೂರೋಪಿನ ಸಮಾಜವಾದವನ್ನು ಭಾರತೀಯ ಸಾಮಾಜಿಕ, ಸಾಂಸ್ಕೃತಿಕ ಜೀವನದ ಅಚ್ಚಿನಲ್ಲಿ ಎರಕಹೊಯ್ದು ಸ್ವೀಕರಿಸಬೇಕೆನ್ನುವವರೂ ಇಲ್ಲದೆ ಇಲ್ಲ. ಬಾಬು ಜಯಪ್ರಕಾಶರು ಇಂದಿಗೂ ಸಮಾಜವಾದಿಯೇ. ಎಂ. ಎನ್. ರಾಯ್ ಅವರು ತಮ್ಮ ವೃದ್ಧಾಪ್ಯದಲ್ಲಿ ಸಮಾಜ ವಾದವನ್ನು ಪೂರ್ಣ ತ್ಯಜಿಸಿದ್ದರು. ಆದರೂ ಅವರು ಸಾಯುವಾಗಲೂ ತಮ್ಮನ್ನು 'ರ್‍ಯಾಡಿಕಲ್ ಸೋಷಲಿಸ್ಟ್' ಎಂದೇ ಕರೆದುಕೊಂಡರು! ರಾಜನೀತಿಜ್ಞರೂ ಅಜ್ಞ ಜನರೂ ಸಮಾಜವಾದದ ಬಗ್ಗೆ ತಮ್ಮ ಮನಬಂದಂತೆ ವ್ಯಾಖ್ಯೆ ಮಾಡುತ್ತಿರುವಾಗಲೇ ಅನ್ಯ ವಿಚಾರವಾದಿಗಳೂ ಅದರ ಬಗ್ಗೆ ತಮತಮಗೆ ತೋರಿದಂತೆ ವಿವರಣೆ ಕೊಡುತ್ತಿದ್ದಾರೆ. ಇವೆಲ್ಲದರಿಂದಾಗಿ ಜನಗಳು ಸಮಾಜವಾದ ಏನೆಂಬ ಬಗ್ಗೆ ಪೂರಾ ದಿಗ್ಭ್ರಾಂತರಾಗಿದ್ದಾರೆ.

### ಪ್ರೇರಣೆಯ ಮೂಲ ಬುಗ್ಗೆ

'ಸಾಮಾನ್ಯ ಜನರ ಮಟ್ಟ ಮೇಲೆತ್ತಬೇಕು' ಎನ್ನುವುದು ಎಲ್ಲ ರೀತಿಯ ಸಮಾಜವಾದಿಗಳ ಮುಖ್ಯ ಅಭಿಲಾಷೆ. ಅವರು ಯಾರನ್ನು 'ಕೆಲಸಗಳ್ಳರು' ಅಥವಾ 'ಮಜದೂರರಿಗೆ ಉಚಿತ ಲಾಭಾಂಶ ಕೊಡದವರು' ಎಂದು ಭಾವಿಸುವರೋ ಅವರ ವಿರುದ್ಧವಾಗಿ ನಿಂತು, ಕಷ್ಟಪಡುವ ಮಜದೂರರ ಪಕ್ಷ ವಹಿಸುತ್ತಾರೆ. ಆಶ್ಚರ್ಯದ ಮಾತೆಂದರೆ, ಸ್ವಾಮಿ ವಿವೇಕಾನಂದರೂ ತಮ್ಮನ್ನು 'ಸಮಾಜವಾದಿ' ಎಂದು ಕರೆದುಕೊಂಡದ್ದುಂಟು. ಅವರು ಒಮ್ಮೆ ಭಾಷಣದಲ್ಲಿ 'ನಾನು ಒಬ್ಬ ಸಮಾಜವಾದಿ. ಏಕೆ? ಸಮಾಜವಾದವು ಒಂದು ಪೂರ್ಣದರ್ಶನ ಎನ್ನುವ ಕಾರಣಕ್ಕಾಗಿ ಅಲ್ಲ. ಆದರೆ ಉಪವಾಸ ಇರುವುದಕ್ಕಿಂತಲೂ ಒಂದು ತುತ್ತು ಅನ್ನ ಸಿಕ್ಕುವುದು



ಎಷ್ಟೋ ಮೇಲು. ಕೆಲವರಿಗೆ ಕೇವಲ ಸುಖ, ಕೆಲವರಿಗೆ ಕೇವಲ ದುಃಖ ಇರುವ ಸ್ಥಿತಿಗಿಂತ ಸುಖದುಃಖಗಳ ಸಮಾನ ಹಂಚಿಕೆಯೇ ಶ್ರೇಯಸ್ಕರ. ಈ ಕಷ್ಟಮಯ ಜಗತ್ತಿನಲ್ಲಿ ಪ್ರತಿಯೊಬ್ಬನಿಗೂ ಒಳ್ಳೆಯ ದಿನಗಳನ್ನು ಕಾಣುವ ಅವಕಾಶ ಸಿಗಲೇಬೇಕು' ಎಂದು ಹೇಳಿದ್ದರು. ಹಸಿದ ಜನರ ಬಗ್ಗೆ ಸಹಾನುಭೂತಿ ಹಾಗೂ ಸಮಾಜದಲ್ಲಿ ಅವರಿಗೆ ಉಳಿದವರೊಂದಿಗೆ ಸಮಾನವಾದ ಹಾಗೂ ಸಮ್ಮಾನಯುಕ್ತವಾದ ಸ್ಥಾನ ದೊರಕಿಸಿಕೊಡಬೇಕೆಂಬ ಹಂಬಲವೇ ಪ್ರತಿಯೊಬ್ಬ ಸಮಾಜವಾದಿಗೂ ಪ್ರೇರಣೆಯಾಗಿದೆ.

### ಮಾರ್ಕ್ಸ್‌ನ ಅಪೂರ್ಣ ಸಿದ್ಧಾಂತ

ಸಮಾಜವಾದಿಗಳ ಸದಿಚ್ಛೆ ಶ್ಲಾಘನೀಯವೇ. ಕಷ್ಟಕಾರ್ಪಣ್ಯಗಳಿಂದ ಕೂಡಿದ ಈ ಲೋಕದಲ್ಲಿ ಅಪಮಾನ, ಅನ್ಯಾಯ, ದುಃಖ, ಕಷ್ಟ, ದಬ್ಬಾಳಿಕೆ, ದಾಸ್ಯ, ಶೋಷಣೆ ಮತ್ತು ಹಸಿವುಗಳನ್ನು ಕಂಡಾಗ ಮಾನವೀ ಹೃದಯ ಉಳ್ಳ ಯಾವ ವ್ಯಕ್ತಿಯಾದರೂ ಈ ಸಮಾಜವಾದಿ ಮನೋಧರ್ಮವನ್ನು ಬೆಳೆಸಿಕೊಳ್ಳದಿರಲು ಸಾಧ್ಯವೇ ಇಲ್ಲ. ಆದರೆ ಸಮಾಜವಾದ ಅಷ್ಟಕ್ಕೇ ನಿಂತಿಲ್ಲ. ಅವರು ಪರಿಸ್ಥಿತಿಯನ್ನು ವಿಶ್ಲೇಷಿಸಿ, ರೋಗ ಏನೆಂದು ಕಂಡುಹಿಡಿದು, ಔಷಧೋಪಚಾರವನ್ನೂ ಯೋಜಿಸಿದ್ದಾರೆ. ಈ ವಿಷಯದಲ್ಲಿ ಅವರು ಮಾರ್ಕ್ಸ್‌ನ ಶಿಷ್ಯತ್ವ ಸ್ವೀಕರಿಸದೆ ವಿಧಿ ಇಲ್ಲವಾಗಿದೆ.

ಮಾರ್ಕ್ಸ್‌ನು ತನ್ನ ಕಾಲದ ಸಮಾಜವಾದಿ ವಿಚಾರಗಳನ್ನು ಸಂಕಲಿತಗೊಳಿಸಿ, ಬರಲಿರುವ ಪೀಳಿಗೆಗಳನ್ನು ಸಹ ಆಕರ್ಷಿಸಬಲ್ಲಂತಹ ವಿವರವಾದ ವಿಚಾರ ಧಾರೆಯನ್ನು ಮಂಡಿಸಿದ. ಮಾರ್ಕ್ಸ್‌ನೊಂದಿಗೆ ಮತಭೇದವಿದ್ದ ಸಮಾಜವಾದಿಗಳೂ ಸಹ ಅವನ ಬಲವಾದ ತರ್ಕವನ್ನು ಅಲ್ಲಗಳೆಯಲಾಗುತ್ತಿರಲಿಲ್ಲ. ಅಲ್ಲದೆ, ಮಾರ್ಕ್ಸ್‌ನು ಒಂದು ಪ್ರತ್ಯಕ್ಷ ಕಾರ್ಯಯೋಜನೆಯನ್ನೂ ಮುಂದಿಟ್ಟಿದ್ದ. ಆ ಯೋಜನೆಯನ್ನು ಕಾರ್ಯಗತಗೊಳಿಸಲು ಬೋಲ್ಷೆವಿಕ್ ಪಕ್ಷವು ರಷ್ಯದಲ್ಲಿ ತನ್ನ ಅಧಿಕಾರ ಸ್ಥಾಪಿಸಿತು. ಬೋಲ್ಷೆವಿಕ್ ಕ್ರಾಂತಿಯಿಂದ ಇಂದಿನವರೆಗಿನ ರಷ್ಯ ದೇಶದ ಇತಿಹಾಸವು, ಅನೇಕ ಕ್ಷೇತ್ರಗಳಲ್ಲಿನ ಭಾರಿ ಸಾಧನೆಗಳ ನಡುವೆಯೂ ಈ ಪದ್ಧತಿಯ ಅಪೂರ್ಣತೆಗೇ ನಿದರ್ಶನವಾಗಿದೆ.

### ಪ್ರಜಾಪ್ರಭುತ್ವದ ಮೇಲೆ ಹಲ್ಲೆ

ಸಮಾಜವಾದವು ಪ್ರಜಾತಂತ್ರದ ಮೇಲೆಯೇ ತನ್ನ ಮೊದಲನೆಯ ದಾಳಿ ನಡೆಸಿತು. ಉಕ್ಕಿನ ಪರದೆಯ ಹಿಂದಿನ ದೇಶಗಳ ವಿನಾ ಲೋಕದ ಸಮಸ್ತ ಸಮಾಜವಾದಿ ಚಿಂತಕರೂ ಅದರಿಂದ ಗಾಬರಿಯಾದರು. ಅವರಿಗೆಲ್ಲ ಪ್ರಜಾತಂತ್ರದಲ್ಲಿ ಆಸಕ್ತಿ ಇತ್ತು. ಹಾಗೆ ನೋಡಿದಲ್ಲಿ, ಪ್ರಜಾತಂತ್ರದ ಆದರ್ಶ ಹೊಂದಿದ್ದರಿಂದಲೇ

ಅವರಿಗೆ ಜನರ ಬಗ್ಗೆ ಕಳಕಳಿ ಹುಟ್ಟಿತ್ತು ಹಾಗೂ ದಲಿತ ಜನಕ್ಕೆ ಸಮಾನ ಸ್ಥಾನಮಾನ ಪ್ರಾಪ್ತಿ ಮಾಡಿಕೊಡಬೇಕೆಂದು ಅವರು ಆಶಿಸುತ್ತಿದ್ದರು. ಪ್ರಜಾಪ್ರಭುತ್ವವೇ ಅವರಿಗೆ ರಾಜನೈತಿಕ ಸಮಾನತೆ ತಂದುಕೊಟ್ಟಿತ್ತು. ಆದರೆ ವೈಜ್ಞಾನಿಕ ಸಂಶೋಧನೆಗಳು ಹಾಗೂ ಯಾಂತ್ರಿಕ ಉತ್ಪಾದನೆ ಪದ್ಧತಿಗಳು ಜನರನ್ನು ಆರ್ಥಿಕ ವಿಷಮತೆಯ ಹಳ್ಳಕ್ಕೆ ತಳ್ಳಿತು. ಇಂಥ ಪರಿಸ್ಥಿತಿಯಲ್ಲಿ ರಾಜಕೀಯ ಸಮಾನತೆಗೆ ಮಹತ್ತ್ವವೇನೂ ಉಳಿಯಲಿಲ್ಲ.

ಮಾರ್ಕ್ಸ್‌ನು ವರ್ಗರಹಿತ ಸಮಾಜರಚನೆಯ ಘೋಷಣೆ ಹಾಕಿದನು. ಅದು ಸಿದ್ಧಿಸುವವರೆಗೆ ಮಜದೂರರ ಸರ್ವಾಧಿಕಾರ ಇರುತ್ತದೆಂದೂ ಹೇಳಿದನು. ಇದರಲ್ಲಿ ಸಂದೇಹಕ್ಕೆ ಸಾಕಷ್ಟು ಅವಕಾಶವಿತ್ತು. ಒಂದು ಸಂದೇಹಾಸ್ಪದ ವಸ್ತುವಿನ ಪ್ರಾಪ್ತಿಗಾಗಿ ಜನರ ಕೈಯಲ್ಲಿದ್ದ ರಾಜನೈತಿಕ ಸಮಾನತೆಯನ್ನು ಬಿಟ್ಟುಕೊಡುವಂತೆ ಹೇಳಲಾಯಿತು. ಸಮಾಜವಾದವು ತಮಗೆ ಮುಂಚಿನಿಂದ ಇದ್ದ ರಾಜನೈತಿಕ ಅಧಿಕಾರವನ್ನೂ ಕಸಿದುಕೊಳ್ಳುತ್ತದೆಂದು ಜನರು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ. ಮೊದಲಿಂದಲೂ ಅಭಾವಗ್ರಸ್ತರಾಗಿದ್ದ ಜನ ಅವರು. ಸಮಾಜವಾದದಿಂದ ಅವರಿಗೆ ಏನಾದರೂ ಹೊಸದಾಗಿ ಸಿಕ್ಕಬೇಕಿತ್ತೇ ಹೊರತು ಅವರಲ್ಲಿ ಮುಂಚೆ ಇದ್ದುದನ್ನೂ ಕಸಿದುಕೊಳ್ಳುವುದು ಬೇಕಾಗಿರಲಿಲ್ಲ. ಆದರೆ ಸಮಾಜವಾದವು ಅವರಿಗೆ ಏನಾದರೂ ಕೊಡುವುದಕ್ಕೆ ಮುಂಚೆಯೇ ಅವರ ವ್ಯಕ್ತಿಗತ ಸ್ವಾತಂತ್ರ್ಯ ಹಾಗೂ ರಾಜಕೀಯ ಸಮಾನತೆಯನ್ನು ಅಪಹರಿಸಿತು.

೧೯೧೯ರ ಏಪ್ರಿಲ್ ೨೮ರಲ್ಲಿ ಪ್ರಿನ್ಸ್ ಕ್ರೋಪಾಟ್‌ಕಿನ್ ಎಂಬಾತನು ಪಶ್ಚಿಮ ಯೂರೋಪಿನ ಮಜದೂರರನ್ನು ಉದ್ದೇಶಿಸಿ ಬರೆದ ಪತ್ರ ಇಂತಿದೆ: 'ನಾನೊಂದು ಮಾತನ್ನು ನಿಮಗೆ ಸ್ಪಷ್ಟವಾಗಿ ಸೂಚಿಸುವುದು ನನ್ನ ಜವಾಬ್ದಾರಿ ಎಂದು ಭಾವಿಸುವೆ. ನನ್ನ ಅಭಿಪ್ರಾಯದಲ್ಲಿ ಒಂದು ಪ್ರಬಲ ಕೇಂದ್ರ ಸತ್ತೆಯ ಆಧಾರದ ಮೇಲೆ ಹಾಗೂ ಪಕ್ಷದ ಉಕ್ಕಿನ ಸವಾಧಿಕಾರತ್ವದ ಕೈಕೆಳಗೆ ಕಮ್ಯುನಿಸ್ಟ್ ಗಣತಂತ್ರವಾದಿ ರಾಜ್ಯವನ್ನು ನಿರ್ಮಿಸುವ ಈ ಪ್ರಯತ್ನವು ವಿಫಲತೆಯಲ್ಲೇ ಪರ್ಯವಸಾನ ಆಗುತ್ತದೆ. ಜನಸ್ವಾಮ್ಯ ಪದ್ಧತಿಯನ್ನು ತರಬಾರದ ರೀತಿ ಯಾವುದೆಂಬುದನ್ನು ರಷ್ಯದಲ್ಲಿ ನಾವೀಗ ಅರಿಯುತ್ತಿದ್ದೇವೆ. ಪಕ್ಷ– ಸರ್ವಾಧಿಕಾರದ ರಾಜ್ಯ ನಡೆಯುವವರೆಗೆ ಶ್ರಮಿಕ ಮತ್ತು ರೈತಸಂಘಗಳಿಗೆ ಏನೂ ಅರ್ಥ ಉಳಿಯದು. ರಸ್ತೆ ಬಿರುಗಾಳಿಗೆ ಉರುಳಿದ ಮರವೊಂದನ್ನು ಹರಾಜು ಹಾಕಲು ೪೦ ಜನ ನೌಕರರು ಬೇಕಾಗುವಂತಹ ಫ್ರಾನ್ಸ್‌ನ ನೌಕರಶಾಹಿ ಸಹ ಗಣನಾರ್ಹವಲ್ಲವೆನಿಸುವಷ್ಟು ಪ್ರಚಂಡ ನೌಕರಶಾಹಿಯು ರಷ್ಯದಲ್ಲಿ ಬೆಳೆದು ನಿಲ್ಲುತ್ತಿದೆ.'



**ಪ್ರಜಾತಂತ್ರವಾದಿಗಳೇ ಪ್ರಥಮ ಬಲಿ**

'ಜನತಾಂತ್ರಿಕ ಸಮಾಜವಾದ' ಎಂಬ ಹೆಸರಿನ ಪದ್ಧತಿಯು ಯೂರೋಪಿಯನ್ ಸಮಾಜವಾದಿಗಳ ಹೊಸ ಪ್ರಯತ್ನಗಳ ಫಲವಾಗಿ ಜನ್ಮ ತಾಳಿತು. ಇವರು ಕಮ್ಯುನಿಸ್ಟರೊಂದಿಗೆ ಭಿನ್ನಾಭಿಪ್ರಾಯ ತಾಳಿ, ಸಮಾಜವಾದವು ಪ್ರಜಾತಂತ್ರದ ಆಧಾರದ ಮೇಲೆ ನಿರ್ಮಾಣ ಆಗಬೇಕೆಂದು ಪ್ರತಿಪಾದಿಸಿದರು. ಅವರು ಸಮಾಜವಾದ, ಜನತಂತ್ರ ಇವೆರಡನ್ನೂ ಒಟ್ಟಿಗೇ ತರಲಿಚ್ಛಿಸುತ್ತಾರೆ. ಆದರೆ ಇಲ್ಲಿ ಪ್ರಶ್ನೆಯೆಂದರೆ, ಇವೆರಡೂ ಜೊತೆಗೂಡಿ ಜೀವಿಸಬಲ್ಲವೇನು? ಸಿದ್ಧಾಂತವಾದಿಗಳು ಇದು ಸಾಧ್ಯವಾದೀತು ಎಂದಲ್ಲಿ, ಪ್ರಗತಿವಾದಿಗಳು ಸಾಧ್ಯವಿಲ್ಲವೆನ್ನುವರು. ಸಮಾಜವಾದವು ಉತ್ಪಾದನೆಯ ಎಲ್ಲ ಸಾಧನಗಳೂ ಸರಕಾರದ ಕೈಯಲ್ಲಿರಬೇಕೆಂದು ಹೇಳುತ್ತದೆ. ಸಮಾಜದ ರಾಜನೈತಿಕ, ಬೌದ್ಧಿಕ ಹಾಗೂ ಸಾಮಾಜಿಕ ಜೀವನವು ಅದರ ಉತ್ಪಾದನಾ ಸಾಧನಗಳಿಂದ ರೂಪಿತವಾಗುವುದರಿಂದ ಸಮಾಜವಾದಿ ವ್ಯವಸ್ಥೆಯಲ್ಲಿ ರಾಜನೈತಿಕ, ಆರ್ಥಿಕ ಮುಂತಾದ ಎಲ್ಲಾ ಕ್ಷೇತ್ರಗಳ ಮೇಲಿನ ಹತೋಟಿ ಶಾಸನಕ್ಕಿರುವುದು ಅಗತ್ಯ ಎಂದು ಸಮಾಜವಾದಿಗಳು ಭಾವಿಸುತ್ತಾರೆ. ಇದಕ್ಕೆ ಪ್ರಜಾತಂತ್ರವಾದಿಗಳಿಂದ ವಿರೋಧ ಬರುವುದೂ ಸಹಜವೇ. ಆದ್ದರಿಂದ ಸಮಾಜವಾದಿ ಸರಕಾರದ ಮೊದಲ ಗುಂಡಿಗೆ ಆಹುತಿಯಾಗುವುದು ಖಂಡಿತವಾಗಿಯೂ ಯಾವನಾದರೊಬ್ಬ ಪ್ರಜಾತಂತ್ರವಾದಿಯೇ. ಸಮಾಜವಾದ–ಲೋಕತಂತ್ರಗಳ ಸಹ–ಅಸ್ತಿತ್ವ ಎಂದಿಗೂ ಸಾಧ್ಯವಿಲ್ಲ– ಹುಲಿ ಮತ್ತು ಕುರಿ ನದಿಯ ಒಂದೇ ದಡದಲ್ಲಿ ನಿಂತು ನೀರು ಕುಡಿಯುವುದು ಹೇಗೆ ಅಶಕ್ಯವೋ ಹಾಗೆ.

**ಸಹ–ಅಸ್ತಿತ್ವ ಅಶಕ್ಯ**

ಇಂದು ಸಮಾಜವಾದಿ ಲೋಕದಲ್ಲಿರುವ ಭ್ರಮಾಪೂರ್ಣ ಕಲ್ಪನೆಗಳಿಗೆ ಬಹುತಾಂಶ ಈ ಸಿದ್ಧಾಂತವೇ ಕಾರಣ. ಸಮಾಜವಾದ, ಪ್ರಜಾತಂತ್ರಗಳೆರಡೂ ಸಹಜೀವನ ನಡೆಸುವಂತಹ ದೋಷರಹಿತ ಹಾಗೂ ಸರ್ವಾಂಗಪೂರ್ಣ ಚಿತ್ರವನ್ನು ತಯಾರಿಸುವಲ್ಲಿ ಇದುವರೆಗೆ ಯಾರೂ ಯಶಸ್ವಿಯಾಗಿಲ್ಲ. ಪ್ರಜಾತಂತ್ರದ ವಿವಿಧ ಆದರ್ಶಗಳು ಮತ್ತು ಸ್ವರೂಪಗಳು ಅನ್ಯಾನ್ಯ ದೇಶಗಳ ಸಾಮಾಜಿಕ, ಸಾಂಸ್ಕೃತಿಕ ಜೀವನರಚನೆಗಳು, ಅವುಗಳ ಭೌತಿಕ ಮತ್ತು ಆರ್ಥಿಕ ಸ್ತರಗಳನ್ನೂ ಕುರಿತು ಚಿಂತಿಸಿದಲ್ಲಿ ಈ ಭ್ರಮೆಯು ಇನ್ನಷ್ಟು ದಟ್ಟವಾಗುತ್ತದೆ. ಈ ಭ್ರಮೆಯ ಜಟಿಲತೆಯಿಂದಾಗಿ ಸಮಾಜವಾದದ ಕಗ್ಗಂಟು ಮತ್ತಷ್ಟು ಬಿಗಿಯಾಗಿ ಅದನ್ನು ಬಿಚ್ಚುವುದು ಅಶಕ್ಯವೇ ಆಗುತ್ತದೆ.

ಸಮಾಜವಾದಿಗಳಲ್ಲದ ಇತರ ದೇಶದವರೂ ಸಮಾಜವಾದಿಗಳ ಭ್ರಮೆಯನ್ನೇ ಹೆಚ್ಚಿಸಿದ್ದಾರೆ. ಕಳೆದ ೩೦ ವರ್ಷಗಳ ಅವಧಿಯಲ್ಲಿ ತಮ್ಮ ಉದಾರ ಧೋರಣೆಗಳು

ಮತ್ತು ನವೀನ ಆರ್ಥಿಕ ಚಿಂತನೆಗಳಿಂದಾಗಿ ಸಮಾಜವಾದಿಗಳನ್ನು ಅವರು ಹತಪ್ರಭಗೊಳಿಸಿದ್ದಾರೆ. ಅಮೆರಿಕಾ ಅಥವಾ ಇಂಗ್ಲೆಂಡ್‌ನಲ್ಲಿರುವ ಇಂದಿನ ಸರ್ವಸಾಮಾನ್ಯ ವ್ಯಕ್ತಿಯು, ಅವನು ರೈತನಿರಲಿ, ಕಾರ್ಮಿಕನಿರಲಿ (ಯಾರಿಗೆ ಸಮಾಜವಾದವು 'ಶೋಷಿತ' ಎಂದು ಹೆಸರಿಟ್ಟಿದೆಯೋ) ಅವನಿಂದು ೧೦೦ ವರ್ಷಗಳ ಹಿಂದಿದ್ದ ದುಃಸ್ಥಿತಿಯಲ್ಲಿಲ್ಲ. ಬಂಡವಾಳಶಾಹಿ ರಾಜ್ಯದಿಂದ ಅವರು ಕಲ್ಯಾಣಕಾರಿ ರಾಜ್ಯದ ಆದರ್ಶದತ್ತ ಮುಂದುವರಿಯುತ್ತಿದ್ದಾರೆ. ಬಂಡವಾಳಶಾಹಿ ಮತ್ತು ಸಮಾಜವಾದಿ ಈ ಎರಡು ದೇಶಗಳ ಬಗ್ಗೆ ಮಾರ್ಕ್ಸ್ ನುಡಿದ ಭವಿಷ್ಯ ಹುಸಿಯಾಗಿದೆ. ನಿನ್ನಿನ ಬಂಡವಾಳಶಾಹಿ ದೇಶಗಳು ತಮ್ಮ ವಿಧಾನಗಳಲ್ಲಿ ಸುಧಾರಣೆ ಮಾಡಿಕೊಳ್ಳುತ್ತಾ ಮುನ್ನಡೆದಿರುವಾಗ ಸಮಾಜವಾದದ ಗಾಡಿ ಮಾತ್ರ ಹೊರಟಾಗ ಇದ್ದಲ್ಲಿಯೇ ಇವತ್ತಿಗೂ ಇದೆ. ಅಕಸ್ಮಾತ್ ಒಂದೆರಡು ಹೆಜ್ಜೆ ಇಟ್ಟಿದ್ದರೂ, ಅದು ಯೋಗ್ಯದಿಶೆಯಲ್ಲಿಲ್ಲ. ಬಂಡವಾಳಶಾಹಿ ದೇಶದಲ್ಲಾದರೋ ಪ್ರಜಾತಂತ್ರ ಇರುವುದರಿಂದ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲೂ ಹೊಸಹೊಸ ವಿಚಾರಗಳನ್ನು ಸ್ವೀಕರಿಸಲೂ ಮುಕ್ತ ಅವಕಾಶವಿರುತ್ತದೆ. ಸಮಾಜವಾದಿ ದೇಶಗಳಲ್ಲಿ ಈ ರೀತಿಯ ಸುಧಾರಣೆಗೆ ಮಾರ್ಗವೇ ಇಲ್ಲವಾಗಿದೆ. ಅವರ ವಿಚಾರಧಾರೆಯಲ್ಲಿ ಯಾವ ಹೊಸ ಚಿಂತನೆಗೂ ಪ್ರೇರಣೆ ಸಿಗದು. ಪರಿವರ್ತನೆ ವಿರೋಧಿ ಮತ್ತು ಅಂಧಶ್ರದ್ಧೆಯ ಕರ್ಮಠ ಮತವಾದಿಗಳಂತೆ ಸಮಾಜವಾದಿಗಳೂ ಹೊಸ ಸ್ವತಂತ್ರ ವಿಚಾರಗಳನ್ನು ಸ್ಪರ್ಶಿಸಲೂ ಇಚ್ಛಿಸುವುದಿಲ್ಲ. ಕಮ್ಯುನಿಸ್ಟ್ ನಿಘಂಟಿನಲ್ಲಿ ಅಂತಹ ವಿಚಾರವಂತರ ಬಗ್ಗೆ ನಾನಾ ಬಗೆಯ ಬೈಗಳೇ ತುಂಬಿರುತ್ತದೆ. ಆದರೆ ವಿವೇಚನಾಶೀಲನಾದ ಮಾನವನು ಯೋಚಿಸದೆ ಇರುವುದು ಅಸಾಧ್ಯ. ಅವನ ಚಿಂತನೆಗಳಿಗೆ ಯೋಗ್ಯ ರೂಪು ಕೊಡುವ ಸುನಿಯೋಜಿತ ವ್ಯವಸ್ಥೆ ಇಲ್ಲದಿದ್ದಲ್ಲಿ ಅವನು ಭ್ರಮೆಯ ಚಕ್ರಕ್ಕೆ ಸಿಲುಕದೆ ಇರಲಾರ.

**ಇದೆಂತಹ ವಿರೋಧ?**

ಭಾರತದಲ್ಲಿಂದು ಸಮಾಜವಾದದ ಬಗ್ಗೆ ಎದ್ದಿರುವ ವಾದವಿವಾದಗಳು ಉದ್ಯೋಗಗಳ ಸರಕಾರೀಕರಣ ಮಾಡಬೇಕೋ ಬೇಡವೋ ಎನ್ನುವುದರ ಬಗ್ಗೆಯೇ ನಡೆದಿದೆ. ಸಮಾಜವಾದದ ಸಮರ್ಥಕರು ಮತ್ತು ಸ್ವತಂತ್ರ ಉದ್ಯೋಗದ ಬೆಂಬಲಿಗರು ಪರಸ್ಪರ ತೊಡೆತಟ್ಟಿ ಕುಸ್ತಿಯ ಕಣಕ್ಕೆ ಇಳಿದಿದ್ದಾರೆ. ಒಂದು ಚೋದ್ಯದ ಸಂಗತಿಯೆಂದರೆ ಎರಡು ಗುಂಪಿನವರೂ ಒಬ್ಬರು ಇನ್ನೊಬ್ಬರಿಗೆ ಸಾಕಷ್ಟು ಪ್ರಮಾಣದಲ್ಲಿ ನ್ಯಾಯಬದ್ಧ ಕ್ಷೇತ್ರಗಳನ್ನು ಬಿಟ್ಟುಕೊಡಲು ತಯಾರಾಗಿದ್ದಾರೆ. ಸಾಧಾರಣ ಸ್ಥಿತಿಯಲ್ಲಿ ಸ್ವತಂತ್ರ ವ್ಯಕ್ತಿಗಳ ಕೈಯಲ್ಲಿ ಬಿಡಬಹುದಾದಂಥ ಕೆಲವು ಕೈಗಾರಿಕೆಗಳನ್ನು ಹಿಂದುಳಿದ ಆರ್ಥಿಕ ಸ್ಥಿತಿಯಲ್ಲಿ ಸರಕಾರವೇ ತನ್ನ ಕೈಯಲ್ಲಿ



ತೆಗೆದುಕೊಳ್ಳಬೇಕಾಗಬಹುದು. ಪಾಶ್ಚಾತ್ಯ ದೇಶಗಳಲ್ಲಿ ಶತಮಾನಗಳಿಂದ ರೂಢಿಯಲ್ಲಿರುವಂತೆ, ಸ್ವತಂತ್ರ ಉದ್ಯೋಗಪತಿಗಳಿಗೆ ಸಂಪೂರ್ಣವಾಗಿ ಮುಕ್ತ ಅವಕಾಶವನ್ನು ನೀಡಲು ಯಾವುದೇ ಯೋಜನಾಬದ್ಧ ಅರ್ಥವ್ಯವಸ್ಥೆಯಲ್ಲೂ ಸಾಧ್ಯವಿಲ್ಲ. ವಾಸ್ತವವಾಗಿ ಇವೆರಡರಲ್ಲಿನ ಸ್ಪರ್ಧೆಯನ್ನು ಹತೋಟಿಯಲ್ಲಿಟ್ಟಲ್ಲಿ ಎರಡರಲ್ಲೂ ಹೊಂದಾಣಿಕೆ ಸಾಧ್ಯವಾದೀತು. ಸಮಸ್ಯೆಗಳನ್ನು ಎದುರಿಸುವ ಪ್ರಸಂಗ ಬಂದಾಗ ಸಮಾಜವಾದಿಯು ಸ್ವತಂತ್ರರ ಸಾಲಿನಲ್ಲಿ, ಸ್ವತಂತ್ರರು ಸಮಾಜವಾದಿಗಳ ಸಾಲಿನಲ್ಲಿ ಬಂದು ಕೂಡುತ್ತಾರೆ.

**ಧ್ಯೇಯಕ್ಕೆ ತಕ್ಕಂತೆ ಸಾಧನ**

ಸಮಾಜವಾದ ಶ್ರೇಷ್ಠವೋ ಸ್ವತಂತ್ರ ಉದ್ಯೋಗ ಶ್ರೇಷ್ಠವೋ ಎನ್ನುವುದು ಮುಖ್ಯ ಪ್ರಶ್ನೆಯಲ್ಲ. ಸಮಾಜವಾದ ಮತ್ತು ಲೋಕತಂತ್ರವನ್ನು ಪರಸ್ಪರ ಹೊಂದಾಣಿಸುವುದು ಅಸಾಧ್ಯವಾದರೂ ನಮ್ಮ ಮಟ್ಟಿಗೆ ಅದೇನೂ ಮುಖ್ಯ ಮಾತಲ್ಲ. ಅವು ಕೇವಲ ಸಾಧನಗಳೇ ಹೊರತು ಧ್ಯೇಯ ಅಲ್ಲ. ಹಾಗಾದಲ್ಲಿ, ಧ್ಯೇಯ ಯಾವುದು? ಮೊದಲಿಗೆ ಗುರಿ ನಿರ್ಧರಿಸಿ ಅನಂತರವೇ ಮಾರ್ಗವನ್ನು ನಿರ್ಧರಿಸಬೇಕಾಗುತ್ತದೆ. ಎಲ್ಲ ವಿಚಾರವಂತರೂ ಮಾನವ ಕಲ್ಯಾಣವೇ ತಮ್ಮ ಗುರಿ ಎಂದು ಸಾರಿದ್ದಾರೆ. ಮಾನವಕಲ್ಯಾಣ ಎಂದೊಡನೆ, ಯಾರ ಕಲ್ಯಾಣ ಮಾಡಲು ಹೊರಟಿದ್ದೇವೋ ಆ 'ಮಾನವ'ನ ಸ್ವರೂಪ ಏನು?– ಎನ್ನುವ ಪ್ರಶ್ನೆ ಏಳುತ್ತದೆ. ದೌರ್ಭಾಗ್ಯದಿಂದ ಇದುವರೆಗೂ ಮಾನವನ ನಿಜಸ್ವರೂಪವನ್ನು ಅರಿಯುವುದರಲ್ಲೇ ಅವರು ಅಸಮರ್ಥರಾಗಿದ್ದಾರೆ. ಮಾನವನಿಗೆ ಸುಖ–ಸಮೃದ್ಧಿಗಳನ್ನು ತಂದುಕೊಡುವ ಪ್ರಯತ್ನದಲ್ಲಿ ಸಮಾಜವಾದ ಮತ್ತು ಪ್ರಜಾತಂತ್ರಗಳೆರಡೂ ಅವನಿಗೊಂದು ಬೀಭತ್ಸರೂಪ ತಂದುಕೊಟ್ಟಿವೆ. ಅವು ಅವನ ಎಲ್ಲ ವೈಶಿಷ್ಟ್ಯಗಳನ್ನೂ ಕಸಿದುಕೊಂಡಿವೆ. ರೇನೇಫುಲಪ್ ಎಂಬಾತನು ತನ್ನ 'ಡಿ–ಹ್ಯೂಮನೈಸೇಶನ್ ಇನ್ ಮಾಡರ್ನ್ ಸೊಸೈಟಿ' ಎಂಬ ಪುಸ್ತಕದಲ್ಲಿ ಪ್ರಜಾತಂತ್ರ ಮತ್ತು ಸಮಾಜವಾದದ ಈ ಮುಖವನ್ನು ವಿಶದವಾಗಿ ವಿಶ್ಲೇಷಿಸಿದ್ದಾನೆ. 'ಪ್ರಜಾತಂತ್ರವು ಮತದಾನ, ನ್ಯಾಯದ ಅವಕಾಶ, ಪತ್ರಿಕಾಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಉದ್ಯೋಗ ಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯಗಳನ್ನು ತಂದುಕೊಟ್ಟಿದ್ದರೂ ಅದು "ಆರ್ಥಿಕ–ಮಾನವ"ನನ್ನೂ ಸೃಷ್ಟಿಸಿದೆ' ಎಂದಿದ್ದಾನೆ.

'ಆರ್ಥಿಕ ಮಾನವ'ನ ಈ ಕಲ್ಪನೆಯು ಬಂಡವಾಳಶಾಹಿಗೆ ಜನ್ಮವಿತ್ತು. ಉತ್ಪಾದನಾ ಸಾಮರ್ಥ್ಯವನ್ನು ಅತ್ಯಧಿಕವಾಗಿ ಹೆಚ್ಚಿಸುವಂತೆ ಪ್ರೇರಣೆಯನ್ನೇನೋ ನೀಡಿತು. ಆದರೆ ಜನರಲ್ಲಿ ಒಂದು ಉದ್ದೇಶಕ್ಕೆ ತಕ್ಕಂತೆ ಬಾಳುವ ಸಾಮರ್ಥ್ಯ ಬೆಳೆಸಬೇಕೆಂಬುದನ್ನು ಮಾತ್ರ ಪೂರ್ತಿಯಾಗಿ ದುರ್ಲಕ್ಷ್ಯ ಮಾಡಿತು. ಇನ್ನೊಂದು

ಕಡೆ ಸಮಾಜವಾದ ಅಥವಾ ಸಾಮ್ಯವಾದವು ಸಾಮೂಹಿಕ ಕ್ಷೇಮ ಮತ್ತು ಕಾರ್ಮಿಕಹಿತ–ಸಂವರ್ಧನೆಯ ಕೂಗನ್ನು ಹಾಕಿತು. ಆದರೆ ಅದರ ಜೊತೆಗೇ 'ಯುದ್ಧ ಪಿಪಾಸು ಮಾನವ'ನನ್ನೂ ನಿರ್ಮಿಸಿತು. ಈ 'ಯುದ್ಧಪಿಪಾಸು ಮಾನವ'ನಂತೂ ಸಮಾಜವಾದದ್ದೇ ಶಿಶು. ಅದರಲ್ಲಿ ಸ್ವತಃ ಯೋಚಿಸುವುದಕ್ಕಾಗಲಿ, ನಿರ್ಣಯ ಕೈಗೊಳ್ಳುವುದಕ್ಕಾಗಲಿ ವ್ಯಕ್ತಿಗೆ ಸ್ವಾತಂತ್ರ್ಯವಿಲ್ಲ. ಈ ವ್ಯವಸ್ಥೆಯಲ್ಲಿ ಮಾನವನಿಗೆ ಒಂದು ಮೂಕ ಪ್ರಾಣಿಗಿಂತ ಹೆಚ್ಚೇನೂ ಸ್ಥಾನವಿಲ್ಲ.

### ಯಂತ್ರದಾಸ್ಯ ತೊಲಗಲಿ

ಸಮಾಜವಾದ, ಪ್ರಜಾತಂತ್ರಗಳೆರಡೂ ಮಾನವನ ಭೌತಿಕ ಸ್ವರೂಪ ಹಾಗೂ ಭೌತಿಕ ಅವಶ್ಯಕತೆಗಳ ಮೇಲೆಯೇ ಗಮನ ಹರಿಸಿವೆ; ಹಾಗೂ ಆಧುನಿಕ ವಿಜ್ಞಾನ ಮತ್ತು ಯಾಂತ್ರಿಕ ಉತ್ಕರ್ಷಗಳಲ್ಲಿ ನಿತಾಂತ ಶ್ರದ್ಧೆ ತಾಳಿವೆ. ಇವೆರಡೂ ನವನವೀನ ಭೌತಿಕ ಸಾಧನೆಗಳಿಗೆ ಮಾರುಹೋಗಿವೆ. ಇದರಿಂದಾಗಿ ಮಾನವನ ಕಲ್ಯಾಣ ಮತ್ತು ಅವಶ್ಯಕತೆಗಳಿಗನುಗುಣವಾಗಿ ಉತ್ಪಾದನೆಯ ಸಾಧನಗಳನ್ನು ನಿರ್ಧರಿಸುವ ಬದಲಿಗೆ ಯಂತ್ರಗಳಿಗೆ ಅನುಗುಣವಾಗಿ ನಿರ್ಧರಿಸಲಾಗುತ್ತಿದೆ. ಉತ್ಪಾದನೆಯು ಕೇಂದ್ರೀಕೃತವಾದಲ್ಲಿ, ಅದರ ನಿಯಂತ್ರಣ ವ್ಯಕ್ತಿಯದಾಗಿರಲಿ ಅಥವಾ ಸರಕಾರದ್ದೇ ಆಗಲಿ, ಮಾನವನ ಸ್ವಾತಂತ್ರ್ಯಕ್ಕೆ ಚ್ಯುತಿ ಬರುವುದು ನಿಶ್ಚಿತ. ಅಲ್ಲಿ ಮನುಷ್ಯನೂ ಯಂತ್ರದ ಒಂದು ತಿರುಗಣೆ ಆಗುತ್ತಾನೆ, ಅಷ್ಟೆ ಅವನ ಮಾನವತೆಯನ್ನು ರಕ್ಷಿಸಬೇಕಿದ್ದಲ್ಲಿ ಅವನನ್ನು ಯಂತ್ರದ ದಾಸ್ಯದಿಂದ ಮುಕ್ತಗೊಳಿಸಬೇಕು. ಇಂದು ಮನುಷ್ಯನು ಯಂತ್ರದ ಸ್ವಾಮಿ ಆಗುವ ಬದಲಿಗೆ ಯಂತ್ರವೇ ಮನುಷ್ಯನನ್ನು ಆಳುತ್ತಿದೆ. ಈ 'ಯಂತ್ರಪ್ರೇಮ'ದ ಬುಡದಲ್ಲಿ ಮನುಷ್ಯನ ಭೌತಿಕ ಅವಶ್ಯಕತೆಗಳನ್ನು ಆದಷ್ಟು ಹೆಚ್ಚಾಗಿ ತೃಪ್ತಿಪಡಿಸುವ ಆಶಯ ಅಡಗಿದೆ. ಆದರೆ ಕೇವಲ ಭೌತಿಕ ಸಮೃದ್ಧಿ ಇದ್ದ ಮಾತ್ರಕ್ಕೆ ಮನುಷ್ಯ ಸುಖಿಯಾಗಲಾರ.

ಭೌತಿಕ ಸುಖಸಾಧನಗಳು ಸಮೃದ್ಧವಾಗಿರುವ ದೇಶಗಳಲ್ಲೂ ಸಮಸ್ಯೆಗಳೇನೂ ಕಡಿಮೆಯಾಗಿಲ್ಲ. ಮಾನವನ ಸಮಗ್ರ ಜೀವನವನ್ನು ಕಣ್ಮುಂದೆ ಇರಿಸಿಕೊಂಡು ಅದಕ್ಕನುಗುಣವಾಗಿ ಉತ್ಪಾದನೆ, ವಿತರಣೆ ಮತ್ತು ಸುಖ ಸಾಧನೆ ಇವು ಮೂರನ್ನೂ ಒಟ್ಟಾಗಿ ಪರಿಗಣಿಸಬೇಕಾಗುತ್ತದೆ. ಮನುಷ್ಯನು ಉತ್ಪಾದನೆ ಮಾಡುವಾಗ ಹಾಗೂ ಸುಖ ಅನುಭವಿಸುವಾಗ ಸಾರ್ಥಕ್ಯ ಕಾಣುವಂತಹ ಜೀವನಪದ್ಧತಿಯನ್ನು ರೂಪಿಸಬೇಕಾಗಿದೆ. ಮನುಷ್ಯನಿಗೆ ಕೇವಲ ಭೌತಿಕ ಆವಶ್ಯಕತೆಗಳು ಮಾತ್ರವಲ್ಲ, ಆಧ್ಯಾತ್ಮಿಕ ಆವಶ್ಯಕತೆಗಳೂ ಇವೆ. ಮನುಷ್ಯಜೀವನದ ಆಧ್ಯಾತ್ಮಿಕ ಅಂಶವನ್ನು ಉಪೇಕ್ಷಿಸುವ ಜೀವನಪದ್ಧತಿಯು ಎಂದಿಗೂ ಪೂರ್ಣವೆನಿಸಲಾರದು. ಭೌತಿಕ ಉತ್ಕರ್ಷದ ಜೊತೆಜೊತೆಗೆ ಆಧ್ಯಾತ್ಮಿಕ ಉನ್ನತಿಯನ್ನೂ ಸಾಧಿಸುವ ಕಲ್ಪನೆಯು



ಕೇವಲ ಗಾಳಿಗೋಪುರವೇನಲ್ಲ. ಮನುಷ್ಯತ್ವದ ಘನತೆಯನ್ನು ಕಾಯ್ದುಕೊಂಡು ಸಮಾಜದ ಭೌತಿಕ ಆವಶ್ಯಕತೆಗಳನ್ನು ಪೂರೈಸುವ ಹೊಣೆಯನ್ನು ನಾವು ನಿಭಾಯಿಸಲೇಬೇಕು. ಸಮಾಜವಾದ, ಪ್ರಜಾತಂತ್ರ– ಈ ಎರಡೂ ಏಕಾಂಗವಾದ ವಿಚಾರಗಳೇ. ಮನುಷ್ಯನ ಭೌತಿಕ ಮತ್ತು ಆಧ್ಯಾತ್ಮಿಕ ಪ್ರವೃತ್ತಿಗೊಳಿಸುವ ಬದಲಿಗೆ ಅವನನ್ನು ಭ್ರಮೆಯಲ್ಲಿ ಕೆಡವಿ ಬೇರೆಬೇರೆ ಶಕ್ತಿಗಳಿಗೆ ಒಂದು ಯುದ್ಧರಂಗವನ್ನೇ ಇವು ಸಿದ್ಧಗೊಳಿಸಿಟ್ಟಿವೆ.

### ಸಮಗ್ರ ದರ್ಶನ

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಆಧಾರ ಹೊಂದಿರುವ ಹಿಂದು ಜೀವನಾದರ್ಶವೇ ನಮ್ಮನ್ನು ಈ ವಿಪತ್ತಿನಿಂದ ಪಾರು ಮಾಡಬಲ್ಲದು. ಪ್ರಪಂಚದ ಸಮಸ್ಯೆಗಳಿಗೆ ಹಿಂದುತ್ವವು ಯೋಗ್ಯ ಉತ್ತರ ನೀಡ ಬಲ್ಲದೇ ವಿನಾ ಸಮಾಜವಾದವಲ್ಲ. ಮನುಷ್ಯನನ್ನು ಭಾಗಭಾಗವಾಗಿ ವಿಚ್ಛೇದ ದೃಷ್ಟಿಯಿಂದ ನೋಡದೆ ಒಟ್ಟಾಗಿ ಅಖಂಡವಾಗಿ ಕಂಡಿರುವ ವಿಚಾರಧಾರೆಯೇ ಹಿಂದುತ್ವ.

ಪಾಶ್ಚಾತ್ಯರಾದರೋ ಜೀವನವನ್ನು ಒಂದು ಸಮುಚ್ಚಯ ಎಂದು ಭಾವಿಸದೆ ಅದನ್ನು ತುಂಡುತುಂಡಾಗಿ ವಿಭಜಿಸಿ ಆಲೋಚಿಸಿದ್ದಾರೆ. ಅವರ ರೋಗ ನಿವಾರಕ ಪದ್ಧತಿಯೂ ಒಂದು ವಿಶಿಷ್ಟ ಅವಯವದ ರೋಗವನ್ನನುಸರಿಸು ತ್ತದೆಯೇ ಹೊರತು ಅವನ ಸಮಗ್ರ ಶರೀರವನ್ನು ಗಮನಿಸಿ ಅಲ್ಲ. ನಮ್ಮ ಪದ್ಧತಿಯಾದ ಆಯುರ್ವೇದದಲ್ಲಿಯಾದರೋ ಶರೀರ ಮತ್ತು ರೋಗ ಎರಡನ್ನೂ ಅವಲೋಕಿಸಿಯೇ ಔಷಧಿ ನೀಡುವ ಪದ್ಧತಿ ಇದೆ. ಪಾಶ್ಚಾತ್ಯರ ಭೋಜನಪದ್ಧತಿಯೂ ಇದರಂತೆಯೇ. ನಾವು ಸಾರು, ಸಾಂಬಾರ್‌ಗಳನ್ನು ಅನ್ನದೊಂದಿಗೆ ಕಲಸಿ ತಿನ್ನುವಂತೆ ಅವರು ತಮ್ಮ ಆಹಾರಸಾಮಗ್ರಿಗಳನ್ನು ತಿನ್ನುವುದಿಲ್ಲ. ಪ್ರತಿಯೊಂದನ್ನು ಬೇರೆಬೇರೆಯಾಗಿ ತಿನ್ನುತ್ತಾರೆ.

ನಾವು ಜೀವನವನ್ನು ಏಕರೂಪವಾಗಿ, ಏಕಾತ್ಮವಾಗಿ (Integral) ನೋಡಿದರೆ ಪಾಶ್ಚಾತ್ಯರು ತುಂಡುತುಂಡಾಗಿ ಪರಿಗಣಿಸುತ್ತಾರೆ. ಪರೀಕ್ಷೆಯಲ್ಲಿ ವಿದ್ಯಾರ್ಥಿ ಉತ್ತೀರ್ಣನಾಗಬೇಕಾದಲ್ಲಿ ಅವನು ಎಲ್ಲ ವಿಷಯಗಳಲ್ಲೂ ಪರಿಣತನಾಗಿರಬೇಕೇ ಹೊರತು ಕೇವಲ ಒಂದು ವಿಷಯದಲ್ಲಾದರೆ ಸಾಲದು. ಜೀವನವೂ ಅದರಂತೆಯೇ. ಧರ್ಮ, ಅರ್ಥ, ಕಾಮ, ಮೋಕ್ಷ– ಈ ನಾಲ್ಕನ್ನೂ ಸಾಧಿಸುವುದರಿಂದಲೇ ವ್ಯಕ್ತಿಯ ಜೀವನ ಸಾರ್ಥಕವಾಗುತ್ತದೆ. ಸಾಮರ್ಥ್ಯ ಪೂರ್ಣವಾಗುತ್ತದೆ. ಅಂತೆಯೇ ವ್ಯಕ್ತಿ ಮತ್ತು ಸಮಾಜ ಎರಡರ ಉನ್ನತಿಯೂ ಆಗಬೇಕು. ಜೋರಾಗಿ ಓಡಬೇಕಾದಲ್ಲಿ ಕಣ್ಣು–ಕಾಲು ಇವೆರಡೂ ಸಹಕಾರ

ನೀಡಬೇಕು. ಕೇವಲ ಕಾಲು ಮಾತ್ರ ಓಡುತ್ತಾ ಕಣ್ಣು ಮುಚ್ಚಿಕೊಂಡಿದ್ದಲ್ಲಿ ಒಂದು ಹಳ್ಳಕ್ಕೇ ಬೀಳಬೇಕಾಗುತ್ತದೆ. ಸಮಾಜಜೀವನದ ಪ್ರಗತಿಗೂ ಇದೇ ಮಾತು ನಿಜ. ಒಂದು ಅಂಗವನ್ನು ಬಿಟ್ಟು ಇನ್ನೊಂದು ಬದುಕಲಾರದು, ಕೆಲಸ ಮಾಡಲಾರದು. ಈ ರೀತಿಯ ಸಮಗ್ರ, ಸಮನ್ವಯಾತ್ಮಕ ದೃಷ್ಟಿಕೋನವೇ ನಮ್ಮ ಹಿಂದುತ್ವದ ವೈಶಿಷ್ಟ್ಯ.

ಹಿಂದು ಜೀವನಾದರ್ಶಗಳನ್ನು ಕುರಿತು ಚಿಂತಿಸುವಾಗ ಕೆಲವು ನಿರ್ಜೀವ ಕರ್ಮಕಾಂಡಗಳೊಂದಿಗೆ ಅಥವಾ ಹಿಂದು ಸಮಾಜದಲ್ಲಿ ಬೇರುಬಿಟ್ಟಿರುವ ಕೆಲವು ಅಹಿಂದು ಪದ್ಧತಿಗಳೊಡನೆ ಅವನ್ನು ಗಂಟುಹಾಕಬಾರದು. ಹಿಂದುತ್ವವು ಇಂದಿನ ವೈಜ್ಞಾನಿಕ ಸಾಧನೆಗಳಿಗೆ ವಿರೋಧವಾದುದು ಎಂಬುದೂ ಸತ್ಯವಲ್ಲ. ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನಕ್ಕೆ ಹೊಂದುವಂತಹ ರೀತಿಯಲ್ಲಿ ವಿಜ್ಞಾನ ಮತ್ತು ಯಂತ್ರಗಳ ಉಪಯೋಗ ಆಗಬೇಕೆಂಬುದು ಹಿಂದುತ್ವದ ದೃಷ್ಟಿಕೋನ.

**ತಾರಕಮಂತ್ರ**

ಗಾಂಧೀಜಿ ಮುಂದಿಟ್ಟ ವಿಶ್ವಸ್ತ (ಟ್ರಸ್ಟೀಷಿಪ್–ನ್ಯಾಸ) ಕಲ್ಪನೆ ಹಿಂದುತ್ವದಿಂದ ಪ್ರೇರಿತವಾದುದೇ. ಸಮಾಜವಾದಿಗಳು, ಸಮಾಜವಾದಿಗಳಲ್ಲದವರು– ಇಬ್ಬರೂ ಸ್ವೀಕರಿಸಲು ಅರ್ಹವಾಗಿರುವ ತತ್ತ್ವ ಇದು. ನಾವು ಪಾಶ್ಚಾತ್ಯರ ಯಂತ್ರ ಪ್ರಣಾಲಿಯನ್ನು ಕಣ್ಣುಮುಚ್ಚಿ ಅನುಕರಿಸಲಾರಂಭಿಸಿದಲ್ಲಿ, ಇತ್ತ ಸರ್ವೋದಯದ ಘೋಷಣೆಯಾಗಲೀ, ಅತ್ತ ಸಮಾಜವಾದದ ಕೂಗಾಗಲೀ ನಮ್ಮ ಸಂಸ್ಕೃತಿಯನ್ನು ರಕ್ಷಿಸಲಾರವು. ನಮ್ಮ ಯಾವ ಸಮಸ್ಯೆಗಳನ್ನೂ ಬಗೆಹರಿಸಲಾರವು.

ನಾವು ರಾಜನೈತಿಕ, ಆರ್ಥಿಕ, ಸಾಮಾಜಿಕ, ಸೈದ್ಧಾಂತಿಕ ಮುಂತಾದ ಸರ್ವ ರಂಗಗಳಲ್ಲೂ ಈ ಯಂತ್ರವಾದವನ್ನು ಎದುರಿಸಬೇಕಾಗಿದೆ. ನಾವು ಧರ್ಮರಾಜ್ಯ, ಪ್ರಜಾಪ್ರಭುತ್ವ, ಸಾಮಾಜಿಕ ಸಮತೆ ಮತ್ತು ಆರ್ಥಿಕ ವಿಕೇಂದ್ರೀಕರಣ– ಇವನ್ನೇ ನಮ್ಮ ಗುರಿಯಾಗಿ ಇರಿಸಿಕೊಳ್ಳಬೇಕು. ಈ ನಾಲ್ವರ ಸಮ್ಮಿಳಿತ ಸಿದ್ಧಾಂತವೇ ಇಂದಿನ ವೈಚಾರಿಕ ಗೊಂದಲ ಬಿರುಗಾಳಿಯಿಂದ ನಮ್ಮನ್ನು ರಕ್ಷಿಸಬಲ್ಲದು. ಇದನ್ನು ಹಿಂದುತ್ವ, ಮಾನವತಾವಾದ ಅಥವಾ ಇನ್ನಾವುದೇ ಹೆಸರಿನಲ್ಲೇ ಕರೆಯಿರಿ, ಕೊನೆಗೆ ಈ ಮಾರ್ಗವೇ ಭಾರತದ ಆತ್ಮಕ್ಕೆ ಅನುರೂಪವಾಗಿರಬಲ್ಲದು. ಇದೇ ಜನರಲ್ಲಿ ನವೀನ ಉತ್ಸಾಹವನ್ನು ಉಸಿರಬಲ್ಲದು. ಅಲ್ಲದೆ ಭ್ರಮಿಷ್ಟವಾಗಿ ದಿಕ್ಕುಗಾಣದಂತಾದ ಇಂದಿನ ಜಗತ್ತಿಗೂ ದಾರಿದೀಪವಾಗಬಲ್ಲದು.



## ೧೩. ಧರ್ಮರಾಜ್ಯ : ಏನು ಮತ್ತು ಏಕೆ ?

ಭೂಮಿ, ಜನ, ಸಂಸ್ಕೃತಿ– ಈ ಮೂರರ ಎರಕವೇ ರಾಷ್ಟ್ರ. ಜನ ಮತ್ತು ಸಂಸ್ಕೃತಿಗಳು ನಿರ್ಜೀವ ಭೂಮಿಗೆ ಚೈತನ್ಯ ತುಂಬುತ್ತವೆ. ಭೂಮಿ ಮತ್ತು ಸಂಸ್ಕೃತಿಗಳು ನಶ್ವರ ಜನರನ್ನು ಅಮರಗೊಳಿಸುತ್ತವೆ. ದಿನನಿತ್ಯ ಜನರು ಬದಲಾಗುತ್ತಿದ್ದರೂ ಜನಾಂಗ ಮಾತ್ರ ಸ್ಥಿರವಾಗಿ ಉಳಿಯುತ್ತದೆ. ಅದರ ಬದುಕಿನ ಗುರಿಗೂ ವಿವರಣೆಗೂ ಮತ್ತು ನಡೆನುಡಿಯ ಇತಿಮಿತಿಗಳಿಗೂ ಭೂಮಿ ಮತ್ತು ಸಂಸ್ಕೃತಿಗಳೇ ಆಧಾರ.

**ರಾಷ್ಟ್ರದ ಮುಖ್ಯಾಂಗಗಳು**

ಜನಕ್ಕೂ ಭೂಮಿಗೂ ಇರುವ ಪರಸ್ಪರ ಸಂಬಂಧ ಮತ್ತು ಕ್ರಿಯೆ ಪ್ರತಿಕ್ರಿಯೆಗಳ ಫಲಿತಾಂಶವೇ ಸಂಸ್ಕೃತಿ. ಸ್ವತಃ ಭಗವಂತನೇ ಒಂದೊಂದು ವೈಶಿಷ್ಟ್ಯವನ್ನಿಟ್ಟು ಒಂದೊಂದು ಜನಾಂಗವನ್ನು ಸೃಷ್ಟಿಸುತ್ತಾನೆ. ಮತ್ತು ಆ ಮೂಲವೈಶಿಷ್ಟ್ಯದ ವಿಕಸಿತ ರೂಪವೇ ಸಂಸ್ಕೃತಿ ಎನ್ನುತ್ತಾರೆ ಕೆಲವರು ಶಾಸ್ತ್ರಜ್ಞರು. ಇನ್ನು ಕೆಲವರ ಅಭಿಪ್ರಾಯದಂತೆ ಜನರ ಪರಸ್ಪರ ನಡೆನುಡಿಗಳು ಒಂದು ನಿರ್ದಿಷ್ಟ ಆದರ್ಶದತ್ತ ಸಾಗಿದಾಗ ಮನಸ್ಸಿನ ಮೇಲೆ ಮೂಡುವ ಸಂಸ್ಕಾರವೇ ಸಂಸ್ಕೃತಿ; ಅನಂತರ ಅದೇ ಜನಾಂಗದ ನಡೆನುಡಿಗಳನ್ನೂ ರೂಪಿಸುತ್ತದೆ, ನಿಯಂತ್ರಿಸುತ್ತದೆ. ಸಂಸ್ಕೃತಿಯು ಜನಜೀವನದಲ್ಲಿನ ಕರ್ತವ್ಯಗಳಿಗೆ ಕಾರಣವೂ ಅಹುದು, ಅವುಗಳ ಪರಿಣಾಮವೂ ಅಹುದು. ಭೂಮಿಯ ಬಗ್ಗೆ ಜನರು ತೋರುವ ಮಮತೆ, ಪರಸ್ಪರ ಇರುವ ಸಾಧ್ಯ–ಸಾಧಕ, ಪೋಷ್ಯ–ಪೋಷಕ, ರಕ್ಷಕ–ರಕ್ಷಿತ, ತಾಯಿ–ಮಗು ಈ ಸಂಬಂಧಗಳಿಂದ ಸಂಸ್ಕೃತಿಯು ಕಾಂತಿಪೂರ್ಣವಾಗುತ್ತದೆ.

ಒಟ್ಟಿನಲ್ಲಿ, ಭೂಮಿ, ಜನ, ಸಂಸ್ಕೃತಿ– ಈ ಮೂರೂ ಪರಸ್ಪರ ಒಂದನ್ನೊಂದು ಆಶ್ರಯಿಸಿವೆ. ತತ್ತ್ವವೇತ್ತರು ಜೀವ ಆತ್ಮ ಮತ್ತು ದೇಹ ಇವುಗಳಲ್ಲಿ ಯಾವುದಾದರೂ ಒಂದಕ್ಕೋ ಅಥವಾ ಹೆಚ್ಚಿನದಕ್ಕೋ ಪ್ರಾಧಾನ್ಯ ನೀಡಿದರೂ ಈ ಮೂರು ಸತ್ಯವೇ. ಅದೇ ರೀತಿ ಭೂಮಿ, ಜನ ಮತ್ತು ಸಂಸ್ಕೃತಿ ಈ ಮೂರರಲ್ಲಿ ಯಾವುದೊಂದನ್ನೂ ನಾವು ನಿಕೃಷ್ಟವಾಗಿ ಕಾಣಲು ಸಾಧ್ಯವಿಲ್ಲ. ಅವಿಲ್ಲದೆ ರಾಷ್ಟ್ರಕ್ಕೆ ಅಸ್ತಿತ್ವವಿಲ್ಲ.

**ಧರ್ಮವೇ ಬುನಾದಿ**

ಈ ಮೂರೂ ಎರಕಗೊಂಡು ಮೈತಾಳುವ ರಾಷ್ಟ್ರದ ರಕ್ಷಣೆ, ಪೋಷಣೆ ಹಾಗೂ ಪ್ರಗತಿಗಳಿಗೆ ಆಧಾರವಾಗುವುದೇ 'ಧರ್ಮ'. ಧರ್ಮದಿಂದಲೇ ಜೀವನದ

ಧಾರಣೆ ಹಾಗೂ ಇಹಪರಗಳ ಏಳಿಗೆ. ಧರ್ಮದಿಂದಲೇ ವ್ಯಷ್ಟಿ ಮತ್ತು ಸಮಷ್ಟಿಯ ಹಿತಗಳಲ್ಲಿ ಸಾಮಂಜಸ್ಯ. ಧರ್ಮಿಷ್ಠನಾದ ವ್ಯಕ್ತಿಯು ತನ್ನ ದೇಹವನ್ನೂ ಗಟ್ಟಿಮುಟ್ಟಾಗಿ ಇಟ್ಟುಕೊಂಡು, ಆತ್ಮಸಾಕ್ಷಾತ್ಕಾರವನ್ನೂ ಮಾಡಿಕೊಂಡು, ತನ್ನ ಬಾಳಿನಲ್ಲಿ ಭೌತಿಕ ಹಾಗೂ ಆಧ್ಯಾತ್ಮಿಕ ಆನಂದಗಳೆರಡನ್ನೂ ಅನುಭವಿಸುತ್ತಾನೆ. ಅದೇ ರೀತಿ ಧಾರ್ಮಿಕ ರಾಷ್ಟ್ರ ಸಹ ಭೂಮಿ, ಜನ ಮತ್ತು ಸಂಸ್ಕೃತಿ ಈ ಮೂರರ ಹಿತವನ್ನೂ ಸಾಧಿಸಬಲ್ಲದು. ಈ ಧರ್ಮ ಮೂಲ ಕಲ್ಪನೆಯಿಂದಾಗಿಯೇ ಭೂಮಿ ಪೂಜೆ, ತೀರ್ಥಯಾತ್ರೆ, ಮಾತೃ ವಂದನೆ, ಸಮಾಜವ್ಯವಸ್ಥೆ, ಯಜ್ಞ ಯಾಗ ಇತ್ಯಾದಿಗಳೆಲ್ಲವೂ ನಮ್ಮ ಧಾರ್ಮಿಕ ಪರಂಪರೆಯಲ್ಲಿ ಸೇರಿಕೊಂಡಿವೆ. ಈ ಧರ್ಮವೇ ವ್ಯಕ್ತಿವ್ಯಕ್ತಿಗಳ ನಡುವಿನ, ವ್ಯಕ್ತಿ ಮತ್ತು ಸಮಷ್ಟಿಯಲ್ಲಿನ, ಸಮಷ್ಟಿ–ಸಮಷ್ಟಿಯಲ್ಲಿನ, ಜಡ–ಚೇತನಗಳಲ್ಲಿನ ವ್ಯವಹಾರಗಳೆಲ್ಲವನ್ನೂ ನಿಯಂತ್ರಿಸಿ ಅವುಗಳಿಗೆ ಪರಸ್ಪರ ಅನುಕೂಲ ಸಂಬಂಧ ಕಲ್ಪಿಸುತ್ತದೆ. ಧರ್ಮ ನಮ್ಮ ಇಡೀ ಜೀವನವನ್ನು ವ್ಯಾಪಿಸಿಕೊಂಡಿದೆ.

ಧರ್ಮಕ್ಕೆ ಇಷ್ಟೊಂದು ಮಹತ್ತ್ವದ ಸ್ಥಾನ ಇರುವುದರಿಂದ ನಮ್ಮ ರಾಷ್ಟ್ರ ಜೀವನದ ಸಂಸ್ಥೆಗಳೆಲ್ಲವೂ ಧರ್ಮಾಧಿಷ್ಠವಾಗಿಯೇ ನಡೆದುಬಂದಿವೆ. ಮುಖ್ಯವಾಗಿ ರಾಷ್ಟ್ರದ ರಕ್ಷಣೆಗಾಗಿಯೇ ಸೃಷ್ಟಿಯಾದ ರಾಜ್ಯಯಂತ್ರವು ಧರ್ಮವನ್ನು ಕಡೆಗಣಿಸಿ ಬದುಕಲಾರದು. ಅಡಿಗೆ ಮಾಡಲು ಹೊರಟವನು ಸೌದೆಯನ್ನೂ, ಅದರ ಬೆಂಕಿಯನ್ನೂ ಬಿಟ್ಟು ಏನು ತಾನೇ ಮಾಡಬಲ್ಲ? ಸಮಾಜಧಾರಣೆ ಮಾಡುವ ಧರ್ಮವನ್ನು ಉಪೇಕ್ಷಿಸಿದ್ದೇ ಆದರೆ ಅಂಥ ರಾಜ್ಯಯಂತ್ರವು ರಾಷ್ಟ್ರದ ರಕ್ಷಣೆಯನ್ನು ಎಂದಿಗೂ ಮಾಡಲಾರದು. ಆದುದರಿಂದಲೇ ನಮ್ಮಲ್ಲಿ ರಾಜ್ಯದ ಸ್ವರೂಪ ಎಂದರೆ 'ಧರ್ಮರಾಜ್ಯ'. ರಾಜ್ಯದ ಹೊರವ್ಯವಸ್ಥೆ ಅಷ್ಟು ಪ್ರಾಮುಖ್ಯದ್ದಲ್ಲ. ರಾಜ್ಯವು ಧರ್ಮಾಧಿಷ್ಠಿತವಾಗಿದ್ದಲ್ಲಿ, ಆಗ ಅದು ಲೋಕತಂತ್ರವೇ ಆಗಿರಲಿ ಅಥವಾ ಏಕತಂತ್ರವೇ ಆಗಿರಲಿ ಅವೆರಡೂ ಸಮಾಜದ ಒಳಿತನ್ನೇ ಸಾಧಿಸುತ್ತವೆ. ಧರ್ಮದ ಆಧಾರವಿಲ್ಲದೆ ನಡೆದ ರಾಜ್ಯಗಳು ಅವು ಲೋಕತಂತ್ರವಿರಲಿ, ಏಕತಂತ್ರೀಯವಿರಲಿ, ಎರಡೂ ಪ್ರಜಾಪೀಡಕವಾಗಿ ವರ್ತಿಸಿದ ಉದಾಹರಣೆಗಳು ಪ್ರಪಂಚದ ಚರಿತ್ರೆಯಲ್ಲಿ ಸಿಗುತ್ತವೆ.

### ಧರ್ಮದ ವಿಶೇಷತೆ–ಸಮಗ್ರ ದೃಷ್ಟಿ

ಧರ್ಮರಾಜ್ಯದಲ್ಲಿ ಒಂದು ಪ್ರಮುಖವಾದ ಅಂಶವೆಂದರೆ, ಭೂಮಿಯ ಏಕತೆ, ಅಖಂಡತೆ ಮತ್ತು ಅದರ ಬಗೆಗೆ ಶ್ರದ್ಧೆ. ಧರ್ಮರಾಜ್ಯ ಎಂದೂ ಸಂಕುಚಿತವಾಗಿ ಬಾಳಲಾರದು. ಧರ್ಮದ ಸಂಪರ್ಕದಿಂದ ಅತಿ ತುಚ್ಛ ವಸ್ತುವೂ ಪೂಜ್ಯತೆಗೆ ಏರುತ್ತದೆ. ಭೂಮಿಯನ್ನು ಅತೀವ ಶ್ರದ್ಧಾದರಗಳಿಂದ ಕಾಣುವುದೂ ಈ ಗುಣದ ಮಹಿಮೆಯಿಂದಲೇ. ನಿಃಸ್ವಾರ್ಥ ದೇಶಭಕ್ತಿ ಎಂದಿಗೂ ಧರ್ಮಾತೀತವಾಗಲಾರದು. ಪ್ರಜಾಸೇವೆಯೇ ಧರ್ಮರಾಜ್ಯದ ಏಕಮೇವ ಉದ್ದೇಶ. ಒಬ್ಬನೇ ಒಬ್ಬ ಪ್ರಜೆ



ಉಪವಾಸ ನರಳುತ್ತಿದ್ದರೂ ಸಹ ಧರ್ಮನಿಷ್ಠ ಶಾಸಕನಿಗೆ ಊಟ ಮಾಡಲು ಹಕ್ಕಿಲ್ಲ. ಪ್ರಜೆಗಳನ್ನು ರಂಜಿಸುವ ಶಾಸಕನೇ 'ರಾಜಾ'. ಧರ್ಮನೀತಿಯು ಮೂಲತಃ ಜನನೀತಿಯೇ ಆಗಿದೆ. ಧರ್ಮ ಭಾವವು ಜನರನ್ನು ಬಿಡಿಬಿಡಿಯಾಗಿ ನೋಡದೆ ಅವರ ಬಗ್ಗೆ ಸಮಗ್ರವಾಗಿ ಚಿಂತಿಸುತ್ತದೆ. ದೇಹ ಮತ್ತು ಅವಯವಗಳ ರೀತಿಯಲ್ಲೇ ಜನತೆಯೊಂದಿಗೆ ಜನ ಸಂಸ್ಥೆಗಳ ಹಾಗೂ ವಿಭಿನ್ನ ಆಧಾರಗಳ ಮೇಲೆ ರಚಿತವಾದ ವಿವಿಧ ವರ್ಗಗಳ ಸಂಬಂಧ ಇರುತ್ತದೆ. ದೇಹವನ್ನೇ ಆಗಲಿ ಅಥವಾ ಅಂಗವನ್ನೇ ಆಗಲಿ ಕೀಳೆಂದು ಭಾವಿಸಲು ಸಾಧ್ಯವಿಲ್ಲ. ದಳಗಳಿಲ್ಲದೆ ಹೂವೆಲ್ಲಿ? ಹೂವಾಗಿ ಅರಳುವುದರಲ್ಲೇ ದಳಗಳ ಶೋಭೆ ಹಾಗೂ ಬಾಳಿನ ಸಾರ್ಥಕ್ಯ ಅಡಗಿದೆ. ಪ್ರತ್ಯೇಕತಾವಾದಕ್ಕೆ ಇಲ್ಲಿ ಎಡೆಯಿಲ್ಲ.

ಸಾಂಸ್ಕೃತಿಕ ದೃಷ್ಟಿಯಿಂದಲೂ ಧರ್ಮವು ಏಕಾತ್ಮವಾದಿಯೇ ಹೌದು. ಜೀವನದ ಏಕಾತ್ಮತೆಯ ಅನುಭೂತಿಯೇ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ಈ ಭಾವದಿಂದ ಭರಿತವಾದ ಆಚಾರಸಂಹಿತೆಯೇ ಧರ್ಮ. ಈ ಆಚಾರ ಸಂಹಿತೆಯ ಗುರಿಯು ಸಮಷ್ಟಿಯ ಸಂರಕ್ಷಣೆ ಹಾಗೂ ವ್ಯಕ್ತಿಯ ವಿಕಾಸ ಎಂಬುದಂತೂ ಸತ್ಯ. ವ್ಯಕ್ತಿ, ಸಮಾಜ– ಈ ಎರಡರಲ್ಲಿ ಯಾವುದೇ ಒಂದನ್ನು ಪ್ರಮುಖವೆಂದು ಭಾವಿಸಿ ಕೆಲಸ ಮಾಡುವುದು ಏಕಾಂಗೀ ವಿಚಾರ. ಭಾರತೀಯ ಸಂಸ್ಕೃತಿಯು ಎರಡರ ಹಿತವನ್ನೂ ಸಮಾನವಾಗಿಯೇ ಸಾಧಿಸುತ್ತದೆ. ಲೋಕ ಮತ್ತು ಸಮಾಜವಾದಗಳು ಈ ತಂತ್ರವನ್ನು ಅಳವಡಿಸಿಕೊಳ್ಳಲಾರದೆ ಹೋದವು. ಧರ್ಮಕ್ಕೆ ಮಾತ್ರ ಅದು ಸಹಜಸಾಧ್ಯ.

### ತದ್ವಿರುದ್ಧ, ಮತೀಯ ರಾಜ್ಯ

ಧರ್ಮರಾಜ್ಯದ ಸ್ವರೂಪವು ಮತೀಯ ರಾಜ್ಯಕ್ಕಿಂತ ಸರ್ವಥಾ ಬೇರೆಯಾದುದು. ಧರ್ಮ ಮತ್ತು ಮತ ಒಂದೇ ಅಲ್ಲ. ಇಂಗ್ಲಿಷ್ ಭಾಷೆಯ 'ರಿಲಿಜನ್' ಪದವನ್ನು 'ಧರ್ಮ' ಎಂದು ಅನುವಾದ ಮಾಡಿದ್ದರಿಂದ ಈ ಭ್ರಮೆ ಹುಟ್ಟಿದೆ. ಧರ್ಮವು ವ್ಯಾಪಕವಾದುದು. ಪೂಜಾಪದ್ಧತಿಯಾಗಲೀ, ಸಂಪ್ರದಾಯವಾಗಲೀ ಧರ್ಮದ ಒಂದು ಮುಖ ಮಾತ್ರ. ನಾಲ್ಕು ಪುರುಷಾರ್ಥಗಳಲ್ಲಿ ಒಂದರ– ಧರ್ಮದ– ವ್ಯಕ್ತಿಗತ ಭಾಗವಾಗಿ ಮತ ನಿರ್ಮಿತವಾಗಿದೆ. ಧರ್ಮವು ನಾಲ್ಕು ಪುರುಷಾರ್ಥಗಳ ಪೈಕಿ ಒಂದಾದರೂ ಮಿಕ್ಕೆಲ್ಲಕ್ಕೂ ಅದೇ ಮೂಲ. ಆದುದರಿಂದ 'ಧರ್ಮರಾಜ್ಯ'ವು 'ಥಿಯಾಕ್ರಟಿಕ್ (ಮತೀಯ) ಶಾಸನ' ಆಗದು. ರಾಜನೇ ಮತದ ಗುರುವೂ ಆದಾಗ 'ಥಿಯಾಕ್ರಸಿ' ಹುಟ್ಟುತ್ತದೆ. ಭಾರತದಲ್ಲಿ ರಾಜನಿಗೆ ಆ ಸ್ಥಾನವನ್ನು ಎಂದಿಗೂ ಕೊಡಲಿಲ್ಲ. ಖಿಲಾಫತ್ ಹಾಗೂ ಹಿಂದಿನ ರೋಮನ್ ರಾಷ್ಟ್ರಗಳು 'ಥಿಯಾಕ್ರಟಿಕ್' (ಮತೀಯ) ರಾಜ್ಯಗಳಾಗಿದ್ದವು. ಇದಕ್ಕೆ ಪಾಕಿಸ್ತಾನ ಇತ್ತೀಚಿನ ಉದಾಹರಣೆ. ಅದು ತನ್ನನ್ನು 'ಇಸ್ಲಾಮಿಕ್ ರಾಜ್ಯ' ಎಂದು ಘೋಷಿಸಿಕೊಂಡಿದೆ. ಅಲ್ಲಿ ಮುಸಲ್ಮಾನ

ಅಲ್ಲದವನು ದ್ವಿತೀಯ ದರ್ಜೆಯ ಪ್ರಜೆ. ಈ ವ್ಯತ್ಯಾಸವನ್ನು ಬಿಟ್ಟಲ್ಲಿ ಪಾಕಿಸ್ತಾನದ ಆಡಳಿತದಲ್ಲಿ ಇಸ್ಲಾಮಿನ ಇನ್ನಾವ ಚಿಹ್ನೆಯೂ ಇಲ್ಲ. ಕೊರಾನ್, ಮಸೀದಿ, ರೋಜಾ, ಈದ್, ನಮಾಜ್ ಇವುಗಳ ಸ್ಥಾನ ಭಾರತದಲ್ಲಿರುವಂತೆಯೇ ಇದೆ. 'ಮತೀಯ ಶಾಸನ'ದಲ್ಲಿ ಒಂದು ಧರ್ಮಪಂಥಕ್ಕೆ ಮಾತ್ರ ಎಲ್ಲ ಸ್ವಾತಂತ್ರ್ಯ ಸೌಲಭ್ಯಗಳು ದೊರಕಿದಲ್ಲಿ ಉಳಿದ ಪಂಥಗಳಿಗೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ತಡೆಗಳು ಹಾಕಲ್ಪಟ್ಟಿರುತ್ತವೆ. ಆದರೆ ಧರ್ಮರಾಜ್ಯವು ಪ್ರತಿಯೊಬ್ಬನಿಗೂ ಅವನಿಗೆ ಸೂಕ್ತವಾದ ಉಪಾಸನಾ ಮಾರ್ಗವನ್ನು ಅನುಸರಿಸಲು ಸ್ವಾತಂತ್ರ್ಯ ಕೊಡುತ್ತದೆ.

ಧರ್ಮರಾಜ್ಯವು ವ್ಯಕ್ತಿಯ ವಿಕಾಸ, ಅವನ ಸುಖ ಮತ್ತು ಶಾಂತಿಗಳ ಪ್ರಾಪ್ತಿಗೆ ಉಪಾಸನಾಪದ್ಧತಿಯು ಅಗತ್ಯವೆಂಬುದನ್ನು ಮನಗಂಡಿದೆ. ಒಂದು ಮತವನ್ನು ಅನುಸರಿಸುತ್ತ ಮತ್ತೊಂದರ ಬಗ್ಗೆ ಆದರಭಾವ ತಾಳಲೂ ಅದು ಕಲಿಸಿಕೊಡುತ್ತದೆ. 'ನನ್ನ ಮತಸ್ವಾತಂತ್ರ್ಯದ ಅರ್ಥ ಇನ್ನೊಬ್ಬನ ಮತಕ್ಕೆ ಧಕ್ಕೆ ತರುವುದಲ್ಲ' ಎಂಬುದೇ ಧರ್ಮರಾಜ್ಯದ ಸೂತ್ರ. ಪ್ರತಿಯೊಂದು 'ಸ್ವಾತಂತ್ರ್ಯ'ಕ್ಕೂ ಒಂದು ಮಿತಿ ಇದ್ದೇ ಇರುತ್ತದೆ. ನನ್ನ ಕೈಯನ್ನು ಹೇಗೆ ಬೇಕಾದರೂ ತಿರುಗಿಸಲು ನನಗೆ ಸ್ವಾತಂತ್ರ್ಯವಿದ್ದರೂ ಅದು ಮತ್ತೊಬ್ಬರ ಮೂಗಿಗೆ ಅಪ್ಪಳಿಸಬಾರದು! ಏಕೆಂದರೆ ಅದು ಅವನ ಸ್ವಾತಂತ್ರ್ಯಕ್ಕೆ ಭಂಗ ತರುತ್ತದೆ. ಮತಗಳ ಬಗೆಗೂ ಇದು ಸತ್ಯ. ಅನ್ಯಥಾ ಅದು ಮತ ಸ್ವಾತಂತ್ರ್ಯದ ದುರುಪಯೋಗವೇ ಸರಿ. ಇದು ಜೀವನದ ಎಲ್ಲ ರಂಗಗಳಿಗೂ ಅನ್ವಯಿಸುತ್ತದೆ. ಧರ್ಮರಾಜ್ಯ ಹೀಗೆ ಮತಸ್ವಾತಂತ್ರ್ಯವನ್ನು ಕೊಟ್ಟಿದ್ದರೆ 'ಥಿಯಾಕ್ರಟಿಕ್' ರಾಜ್ಯ ಈ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ.

**ಸಮಾಜವಾದದಿಂದಲೂ ಮತೀಯ ರಾಜ್ಯವೇ!**

ಶಾಸನದ ಕೈಯಲ್ಲಿ ಎಲ್ಲ ಶಕ್ತಿಗಳೂ ಕೇಂದ್ರಿತವಾದಲ್ಲಿ ಅಲ್ಲಿ ನಿಜವಾಗಿ 'ಥಿಯಾಕ್ರಸಿ' ತಲೆ ಎತ್ತುತ್ತದೆ. ಶಾಸಕನು ನಿಜಕ್ಕೂ ಆಸ್ತಿಕನಾಗಿದ್ದರೆ ಅಥವಾ ಅವನ ಮನಸ್ಸು ಯಾವುದಾದರೊಂದು ವಿಶಿಷ್ಟ ಮತಕ್ಕೆ ಒಲಿದಿದ್ದರೆ ಅವನು ಸಂಪೂರ್ಣ ಸಮಾಜದ ಜೀವನವನ್ನು ತನ್ನ ಆ ಮತದ ಅಂಕುಶಕ್ಕೆ ಒಳಪಡಿಸುತ್ತಾನೆ. ಯೂರೋಪಿನ ಸರಕಾರಗಳು ಈಸಾಯಿಯೇತರರಿಗೂ, ಈಸಾಯಿಗಳಲ್ಲೇ ಬೈಬಲಿನ ಸಾಂಪ್ರದಾಯಿಕ ಸಿದ್ಧಾಂತಗಳನ್ನು ಒಪ್ಪದವರಿಗೂ, ವಿರುದ್ಧವಾಗಿದ್ದವು. ಗೆಲಿಲಿಯೋನನ್ನು ಜೈಲಿಗೆ ಹಾಕಲು ಇದೇ ಕಾರಣ. ಖಲೀಫ್ ಮತ್ತು ಪೋಪ್‌ಶಾಹಿಗಳು ಹುಟ್ಟಿಕೊಂಡುದೂ ಈ ಕಾರಣದಿಂದಲೇ. ಇಂದೂ ಸಹ ಚೀನ, ರಷ್ಯಗಳಲ್ಲಿ ನಡೆಯುತ್ತಿರುವುದು ಥಿಯಾಕ್ರಸಿಯೇ. ಸಾಮ್ಯವಾದಿಗಳದ್ದು ಈಶ್ವರನಿಷ್ಠ ಸಂಪ್ರದಾಯ ಅಲ್ಲದಿದ್ದರೂ ಮತವಾದದ ಸರ್ವಲಕ್ಷಣಗಳೂ ಅದರಲ್ಲಿವೆ. ಸಮಾಜವಾದದ ಗುರಿಯಿಟ್ಟುಕೊಂಡು ಹೊರಡುವ ಎಲ್ಲರೂ ಯಶಸ್ಸು ಸಾಧಿಸಿದ್ದೇ



ಆದರೆ ಇದೇ ರೀತಿಯ ಮತೀಯ ರಾಜ್ಯವನ್ನೇ ಎಲ್ಲೆಡೆ ಸ್ಥಾಪಿಸುತ್ತಾರೆ. ಸಮಾಜವಾದವೇ ಅವರ 'ಮತ' ಆಗುತ್ತದೆ. ರಾಜನೈತಿಕ, ಆರ್ಥಿಕ, ಸಾಮಾಜಿಕ ಹಾಗೂ ಬೌದ್ಧಿಕ (ಆತ್ಮಿಕಕ್ಕಂತೂ ಅಲ್ಲಿ ಸ್ಥಾನವಿಲ್ಲ) ಮುಂತಾದ ಎಲ್ಲ ಶಕ್ತಿಗಳೂ ಆ ಮತೀಯ ಸರಕಾರದ ಅಧೀನಕ್ಕೆ ಒಳಪಡುತ್ತವೆ.

**ರಾಜನಿಗಿಂತ ಧರ್ಮ ಮಿಗಿಲು**

ಇದಕ್ಕೆ ವಿರುದ್ಧವಾಗಿ ಧರ್ಮರಾಜ್ಯಕ್ಕೆ ಶಕ್ತಿಯ ವಿಕೇಂದ್ರೀಕರಣ ಅಥವಾ ಅದರ ಸುವ್ಯವಸ್ಥಿತ ಹಂಚಿಕೆಯಲ್ಲಿ ನಂಬಿಕೆ ಇದೆ. 'ರಾಜ ಮಾಡಿದ್ದೆಲ್ಲಾ ಸರಿ' ಎಂಬ ತತ್ತ್ವಕ್ಕೆ ಇಲ್ಲಿ ಸ್ಥಾನವಿಲ್ಲ. ಅದರ ಬದಲು ರಾಜನು ನ್ಯಾಯದಂತೆ ನಡೆಯಬೇಕು. ನ್ಯಾಯ ಯಾವುದು ಎಂಬುದನ್ನು ಧರ್ಮವೇ ನಿರ್ಣಯಿಸುತ್ತದೆ; ರಾಜಸತ್ತೆಯಲ್ಲ. ಇಂದಿನ ಪರಿಭಾಷೆಯಲ್ಲಿ ಇದನ್ನು ಸಂವಿಧಾನಾತ್ಮಕ ಸರಕಾರ ಎನ್ನಬಹುದು. ಆದರೆ ಇಲ್ಲಿ ಒಂದು ಮೂಲಭೂತ ವ್ಯತ್ಯಾಸವಿದೆ. ಇಂದಿನ ಸಂವಿಧಾನವು ಸಾಧಾರಣ ಜನಗಳಿಂದಲೇ ತಯಾರಿಸಲ್ಪಟ್ಟು ಅದು ರಾಜ್ಯಕರ್ತರ ಆಟದ ವಸ್ತುವಾಗಿ ಪರಿಣಮಿಸಿದೆ. ಅವರು ಅದನ್ನು ತಮಗೆ ಮನಬಂದಂತೆ ಬದಲಾಯಿಸುತ್ತಲೂ ಇರುತ್ತಾರೆ. ತತ್‌ಫಲವಾಗಿ ಇಂದು ಸಂವಿಧಾನದಂತೆ ಶಾಸನ ನಡೆಯುವ ಬದಲು ಶಾಸನಕ್ಕನುಗುಣವಾಗಿ ಸಂವಿಧಾನ ಎಂಬ ಸ್ಥಿತಿ ಬಂದೊದಗಿದೆ.

ಧರ್ಮದ ಸಿದ್ಧಾಂತಗಳನ್ನಾದರೋ ಸೃಷ್ಟಿಯ ಗೂಢರಹಸ್ಯಗಳನ್ನು ತಮ್ಮ ಒಳಗಣ್ಣಿನಿಂದ ಕಂಡುಕೊಂಡ ಜಿತೇಂದ್ರಿಯರಾದ ಮಹಾಪುರುಷರು ಗೊತ್ತುಪಡಿಸುತ್ತಾರೆ. ಅದರಲ್ಲಿ ಲಿಖಿತ ನಿಯಮಗಳಿಂದಲೂ ಅಲಿಖಿತ ನಿಯಮಗಳಿಗೇ ಹೆಚ್ಚು ಮಹತ್ತ್ವ. ಸಮಾಜವು ತನ್ನ ನಡೆನುಡಿಗಳ ಮೂಲಕ ತನ್ನ ಆತ್ಮದ ಪರಿಚಯವನ್ನು ಮಾಡಿಕೊಡುತ್ತಾ ಹೋಗುತ್ತದೆ. ನಿಯಮಗಳಾಗಲೀ ಅಥವಾ ಶಾಸ್ತ್ರಗಳಾಗಲೀ ಸಮಾಜದ ಅಂತರಾಳದ ಭಾವನೆಗಳನ್ನು ಕೇವಲ ಪ್ರತಿಬಿಂಬಿಸಬೇಕು, ಅಷ್ಟೆ. ಸಮಾಜವು ಧರ್ಮಸಮ್ಮತವಾದ ಶಿಷ್ಟಾಚಾರಗಳನ್ನು ತಾನಾಗಿಯೇ ಪಾಲಿಸುವುದರಿಂದ ಅದರ ನಡವಳಿಕೆಗಳಲ್ಲಿ ಸ್ವೈರತೆಗಾಗಲಿ, ಸ್ವಚ್ಛಂದತೆಗಾಗಲಿ ಅವಕಾಶವಿರುವುದಿಲ್ಲ. ಇದರಿಂದ ಧರ್ಮ ರಾಜ್ಯವು 'ಮೊಬೋಕ್ರಸಿ' ಹಾಗೂ 'ಆಟೋಕ್ರಸಿ' ಇವೆರಡರ ಲೋಪದೋಷಗಳಿಂದಲೂ ಮುಕ್ತವಾಗುತ್ತದೆ.

ಧರ್ಮರಾಜ್ಯವು ಯಾವುದೇ ಗ್ರಂಥದ ಮೇಲೆ ನಿಂತಿಲ್ಲ. ಅದು ನಿಂತಲ್ಲಿಯೇ ನಿಲ್ಲದೆ ಸದಾ ಚಲಿಸುತ್ತಲೇ ಇರುತ್ತದೆ. ಆದರೆ ಅದರ ಚಲನೆಯನ್ನು ಚಂಚಲತೆ ಅಥವಾ ಹಿನ್ನಡೆ ಎನ್ನಲಾಗುವುದು. ದೇಶ ಕಾಲಗಳಿಗೆ ತಕ್ಕಂತೆ ಅದು ಬದಲಾದರೂ

ಜೀವನದ ಮೌಲಿಕ ಸಿದ್ಧಾಂತಗಳ ಬಗ್ಗೆ ಮಾತ್ರ ಅಚಲವಾಗಿರುತ್ತದೆ. ಇಲ್ಲಿ ರಾಜ್ಯಾಂಗ ರಚನೆಯ ಸಾಮರ್ಥ್ಯ ಇರುವುದು ರಾಜನಿಗಲ್ಲ, ಧರ್ಮಕ್ಕೆ. ವಾಸ್ತವವಾಗಿ ರಾಜ್ಯಾಂಗದ ವಿಧಿನಿಯಮಗಳನ್ನು ಶಾಸಕರಲ್ಲದವರೇ ರಚಿಸಬೇಕು. ಧರ್ಮರಾಜ್ಯಕ್ಕೆ ಸಾಧಾರಣವಾಗಿ 'Rule of Law' 'ನ್ಯಾಯಾಡಳಿತ' ಎಂದು ಕರೆಯುತ್ತಾರೆ. ಆದರೆ ಎಲ್ಲಿ ಕಾನೂನು ರಚನೆಯ ಅಧಿಕಾರ ರಾಜನಿಗೆ ಇರುತ್ತದೋ, ಅಲ್ಲಿ ಅದರ ನೈಜ ವ್ಯಾವಹಾರಿಕ ಅರ್ಥ 'ರಾಜನಿರ್ಮಿತ ನ್ಯಾಯದ ಆಡಳಿತ' ಎಂದೇ ಆಗುತ್ತದೆ. ಧರ್ಮರಾಜ್ಯದಲ್ಲಿ ರಾಜನಿಗೆ ಈ ಅಧಿಕಾರ ದೊರಕದು.

**ಪ್ರಜೆಗೂ ಧರ್ಮದ ಅಂಕುಶ**

ಧರ್ಮರಾಜ್ಯಕ್ಕೂ ಇಂದಿನ ಪ್ರಜಾತಂತ್ರಕ್ಕೂ ವ್ಯತ್ಯಾಸವಿದೆ. ಪ್ರಜಾರಂಜನೆಯೇ ರಾಜನ ಕರ್ತವ್ಯವಾದರೂ ರಾಜನಿಗೆ ಧರ್ಮದ ಅಂಕುಶ ಇದ್ದೇ ಇದೆ. ಪ್ರಜೆಗಳನ್ನು ಸಹ ಧರ್ಮವೇ ಆಳುತ್ತದೆ. ಧರ್ಮಾನುಯಾಯಿ ಪ್ರಜೆಗಳನ್ನು ಹಿಂಸಿಸುವ ಅಥವಾ ಹೊರಹಾಕುವ ಹಕ್ಕು ರಾಜನಿಗೆ ಇಲ್ಲದಿರುವ ಹಾಗೆಯೇ ಧರ್ಮಾನುಯಾಯಿ ರಾಜನನ್ನು ಉರುಳಿಸುವ ಅಧಿಕಾರ ಪ್ರಜೆಗಳಿಗೂ ಇಲ್ಲ. ಪ್ರಜಾತಂತ್ರದಲ್ಲಿ ರಾಜ ಮತ್ತು ಪ್ರಜೆಯ ಹಿತಗಳು ಎಂದೆಂದಿಗೂ ಪರಸ್ಪರ ವಿರುದ್ಧವೆಂದೇ ಭಾವಿಸಿ ರಾಜನನ್ನು ಸದಾಕಾಲ ಪ್ರಜೆಗಳ ಹತೋಟಿಯಲ್ಲೇ ಇಟ್ಟಿರಲು ವಿರೋಧಿ ಪಕ್ಷವೆಂಬ ಶಾಶ್ವತವಾದ ಖಡ್ಗವನ್ನು ರಾಜನ ತಲೆಯ ಮೇಲೆ ತೂಗುಬಿಟ್ಟಿರುತ್ತಾರೆ. ಪ್ರಜಾತಂತ್ರದ ಈ ಸ್ವರೂಪವು ಮಾನವವಿಕಾಸಕ್ಕೆ ಅನುಕೂಲವಾದುದಲ್ಲ. ಪ್ರಾಯಶಃ ಇದು ದೇವರು ಮತ್ತು ಸೈತಾನರ ದ್ವೈತದಲ್ಲಿ ನಂಬಿಕೆ ಇಟ್ಟಿರುವ ಈಸಾಯಿ ಸಿದ್ಧಾಂತದ ಆಧಾರದಿಂದ ಹುಟ್ಟಿರಬಹುದು. ರಾಜನು ಧರ್ಮದ ವಿರುದ್ಧ ಕೆಲಸ ಮಾಡಿದಲ್ಲಿ ಪ್ರಜೆಗಳು ಅವನನ್ನು ಉರುಳಿಸಬಲ್ಲರು. ಆದರೆ ರಾಜನನ್ನು ಉರುಳಿಸುವುದೇ ಪ್ರಜೆಗಳ ಧರ್ಮವಲ್ಲ. ಧರ್ಮಪಾಲನೆಯೇ ಪ್ರಜೆಗಳ ಕೆಲಸ.

**ಧರ್ಮರಾಜ್ಯ, ಚೈತನ್ಯಸ್ರೋತ**

ಧರ್ಮದ ಮಹತ್ತ್ವವನ್ನು ಅನೇಕರು ಒಪ್ಪುತ್ತಾರೆ. ಆದರೆ 'ಧರ್ಮ ರಾಜ್ಯ' ಎಂದು ಘೋಷಿಸುವುದು ಮಾತ್ರ ಅಗತ್ಯವಿಲ್ಲ ಎನ್ನುತ್ತಾರೆ; ಅವರು, ಅಂತರ್ಮುಖರಾಗಿ ಯೋಚಿಸಿದಲ್ಲಿ ಅವರ ಅಭಿಪ್ರಾಯದ ಬುಡದಲ್ಲಿ ಧರ್ಮದ ಬಗ್ಗೆ ಇರುವ ಭ್ರಮಾಪೂರ್ವಕ ಕಲ್ಪನೆಗಳು ಹಾಗೂ ಕಳೆದ ಅರ್ಧಶತಮಾನದ ರಾಜನೀತಿಯ ಪ್ರಭಾವ ಇರುವುದು ಸ್ಪಷ್ಟವಾಗುತ್ತದೆ. ಈ ದಿಕ್ಕನ್ನು ನಾವು ಬದಲಾಯಿಸಬೇಕಾದಲ್ಲಿ, ನಾವು ನಮ್ಮ ರಾಜ್ಯದ ಸ್ವರೂಪವನ್ನು ಸ್ಪಷ್ಟ ಶಬ್ದಗಳಲ್ಲಿ ಘೋಷಿಸಬೇಕಾಗುತ್ತದೆ. ಇದುವರೆಗೆ ಸೆಕ್ಯುಲರ್ ಸ್ಟೇಟ್, ವೆಲ್‌ಫೇರ್ ಸ್ಟೇಟ್, ಸೋಷಿಯಲಿಸ್ಟ್ ಸ್ಟೇಟ್



ಮುಂತಾದ ಅನೇಕ ಘೋಷಣೆಗಳನ್ನು ಹಾಕಿದ್ದಾಯಿತು. ಆದರೆ ಅವು ಮೂಲತಃ ಭಾರತೀಯ ಪರಂಪರೆಗೂ ಪ್ರಕೃತಿಗೂ ವಿರೋಧವಾಗಿರುವುದರಿಂದ ವ್ಯಕ್ತಿ ಚಾರಿತ್ರ್ಯವನ್ನಾಗಲೀ ಸಮಾಜದಲ್ಲಿ ವ್ಯವಸ್ಥೆಯನ್ನಾಗಲಿ ನಿರ್ಮಿಸಲು ಸಾಧ್ಯವಾಗಿಲ್ಲ.

ಧರ್ಮರಾಜ್ಯವು ನಿಶ್ಚಿತವಾಗಿಯೂ ಈ ಚಮತ್ಕಾರವನ್ನು ಮಾಡಿ ತೋರಿಸಬಲ್ಲದು. ನಮ್ಮಲ್ಲಿ ಸುಪ್ತವಾಗಿರುವ ಶಕ್ತಿ ಸಾಮರ್ಥ್ಯಗಳನ್ನು ಎಚ್ಚರಿಸುವ ಚೈತನ್ಯ ಅದರಲ್ಲಿದೆ. ಇಂದು ಧರ್ಮರಾಜ್ಯದ ಕಲ್ಪನೆಯ ಬಗ್ಗೆ ಒಮ್ಮತವಿಲ್ಲದಿರುವುದೂ ನಿಜವೇ. ಧರ್ಮವು ಸತ್ಯವೇ ಆದರೂ ಅದರ ಸ್ವರೂಪದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದೇ ಇವೆ. ಇದೇ ಪ್ರಕಾರ ಧರ್ಮ ರಾಜ್ಯದ ಬಗ್ಗೆಯೂ ಮತಭಿನ್ನತೆ ಇರಬಹುದು. ಈ ದೃಷ್ಟಿಯಿಂದ ಸಮಾಜವಾದ ಮುಂತಾದ ವಾದಗಳ ಅವಸ್ಥೆಯೂ ಉತ್ತಮವೇನಿಲ್ಲ. ಎಷ್ಟು ಜನ ಸಮಾಜವಾದಿಗಳಿದ್ದಾರೋ ಅಷ್ಟು ರೀತಿಯ ಸಮಾಜವಾದದ ವಿಭಿನ್ನ ರೂಪಗಳಿವೆ! ಆದರೆ ಈ ಎಲ್ಲ ಕಲ್ಪನೆಗಳೂ ಮೂಲತಃ ಪರಕೀಯವಾದುದರಿಂದ ಅವುಗಳನ್ನು ಸ್ವೀಕರಿಸಿದಲ್ಲಿ ನಮ್ಮ ದೃಷ್ಟಿ ಹೊರಗಡೆಗೇ ಹರಿಯುತ್ತದೆ. ಧರ್ಮರಾಜ್ಯವು ಪ್ರಮುಖವಾಗಿ ಭಾರತೀಯ ಕಲ್ಪನೆಯದಾದುದರಿಂದ ಅಭಿಪ್ರಾಯಭಿನ್ನತೆ ಎಷ್ಟೇ ಇದ್ದರೂ ನಾವು ಅಂತರ್ಮುಖಿಗಳಾಗಿಯೇ ಯೋಚಿಸುತ್ತೇವೆ. ರಾಷ್ಟ್ರೀಯವಾಗಿ ಆಲೋಚಿಸಿ, ವ್ಯವಹರಿಸುವವರಿಂದ ದೇಶಕ್ಕೆ ಎಂದೂ ಹಾನಿ ತಟ್ಟದು. 'ವಾದೇ ವಾದೇ ಜಾಯತೇ ತತ್ತ್ವಬೋಧಃ' ಎಂಬಂತೆ ಪರಸ್ಪರ ಚರ್ಚೆಯಿಂದ ನಮಗೂ ಧರ್ಮದ ಅರಿವು ಹೆಚ್ಚು ಹೆಚ್ಚು ಸ್ಪಷ್ಟ ಆಗಬಲ್ಲದು.

## ೧೪. ಲೋಕಹಿತದ ರಾಜಮಾರ್ಗ

ನಮ್ಮೆಲ್ಲರ ಜೀವನದ ಗುರಿ–ಸ್ವರಾಷ್ಟ್ರೋನ್ನತಿ. ಸ್ವದೇಶದ, ಸ್ವರಾಷ್ಟ್ರದ ವೈಭವ. ಇದನ್ನು ಕೇಳಿದೊಡನೆ ನಮ್ಮಲ್ಲಿ ಕೆಲವರು, 'ಸ್ವರಾಷ್ಟ್ರ ಶಬ್ದದಲ್ಲಿ ಕೇವಲ ನಮ್ಮ ದೇಶದ ಸ್ವಾರ್ಥ ಅಡಗಿದೆ; ಅದರಲ್ಲಿ ಮಾನವತೆಯ ಕಲ್ಯಾಣವಿಲ್ಲ; ಆದ್ದರಿಂದ ನಮ್ಮ ಬಗ್ಗೆ ಮಾತ್ರವಲ್ಲ. ಇಡೀ ಲೋಕದ ಹಿತಕ್ಕಾಗಿ ನಾವು ಶ್ರಮಿಸಬೇಕು' ಎಂದು ಹೇಳುವುದುಂಟು. ಇನ್ನು ಕೆಲವರು 'ಕೇವಲ ರಾಷ್ಟ್ರದ ಬಗ್ಗೆಯೇ ಯೋಚಿಸಿದರೆ ವ್ಯಕ್ತಿಯ ಗತಿ ಏನು? ಅದು "ಮನೆಗೆ ಮಾರಿ, ಪರರಿಗೆ ಉಪಕಾರಿ" ಎಂಬಂತೆ ಆದೀತು. ತನ್ನನ್ನೇ ನೋಡಿಕೊಳ್ಳದವನು ಬೇರೆಯವರನ್ನು ಹೇಗೆ ನೋಡಿಕೊಳ್ಳಬಲ್ಲ? ವ್ಯಕ್ತಿಗಳ ಬಗ್ಗೆ ಗಮನ ಕೊಟ್ಟರೆ ರಾಷ್ಟ್ರ ತಾನೇ ತಾನಾಗಿ ಅಭಿವೃದ್ಧಿ ಹೊಂದುವುದು' ಎಂದೂ ಅಭಿಪ್ರಾಯಪಡುವುದುಂಟು. ಹೀಗೆ ಎರಡು ಅತಿರೇಕದ ವಾದಗಳೂ ನಮ್ಮ ಸಮಾಜದಲ್ಲಿ ರೂಢಿಯಲ್ಲಿವೆ.

### ಮೂರೂ ಹಿತದ ಸಾಧನೆ

ಹಾಗಾದಲ್ಲಿ ಸ್ವದೇಶ, ಸ್ವರಾಷ್ಟ್ರದ ಉನ್ನತಿಯ ಸಾಧನೆಯಲ್ಲಿ ಮಾನವ ಕಲ್ಯಾಣ ಹಾಗೂ ವ್ಯಕ್ತಿಯ ಹಿತ ಎರಡೂ ಸಾಧಿತವಾಗುತ್ತದೆಯೋ ಇಲ್ಲವೋ ಎಂಬ ಬಗ್ಗೆ ನಾವೀಗ ಯೋಚಿಸಬೇಕಾಗಿದೆ.

ನಮ್ಮ ರಾಷ್ಟ್ರದ ವೈಭವ, ಉತ್ಕರ್ಷ ಸಾಧಿಸುವುದರಲ್ಲೇ ವ್ಯಕ್ತಿಯ ಹಾಗೂ ಮಾನವತೆಯ ಹಿತವನ್ನು ನಾವು ಸಾಧಿಸಬಲ್ಲೆವು ಎಂದೇ ನಮ್ಮ ನಂಬಿಕೆ. ಉದಾಹರಣೆಗೆ, ಅನ್ನವನ್ನು ಯೋಗ್ಯರೀತಿಯಲ್ಲಿ ತಯಾರಿಸಿದಲ್ಲಿ ಅಕ್ಕಿಯೆಲ್ಲ ಬೆಂದೇ ಬೇಯುತ್ತದೆ. ಯಾವ ಅಕ್ಕಿಯ ಕಾಳೂ ಬೇಯದೆ ಉಳಿಯಲಾರದು. ಹಾಗೂ ಅನ್ನ ಸೀಯುವುದೂ ಇಲ್ಲ. ಅನ್ನ ತಯಾರಿಸುವ ಉತ್ತಮ ವಿಧಾನ ಇದೇ ಹೊರತು ಒಂದೊಂದೇ ಅಕ್ಕಿಯ ಕಾಳನ್ನೇ ಪ್ರತ್ಯೇಕವಾಗಿ ಬೇಯಿಸುವ ಪದ್ಧತಿ ಎಲ್ಲೂ ಬಳಕೆಯಲ್ಲಿಲ್ಲ. ಇಡೀ ಶರೀರದಲ್ಲಿ ಬಲ ಇದ್ದರೆ ಎಲ್ಲ ಅಂಗಗಳೂ ಬಲವಾಗಿಯೇ ಇರುತ್ತವೆ. ಅದೇರೀತಿ ರಾಷ್ಟ್ರವನ್ನು ಸಮೃದ್ಧಿಗೊಳಿಸಿದಲ್ಲಿ ಒಬ್ಬೊಬ್ಬ ವ್ಯಕ್ತಿಯೂ ತಾನಾಗಿ ಶಕ್ತಿವಂತನಾಗುತ್ತಾನೆ. ಅಂದರೆ ಸ್ವರಾಷ್ಟ್ರದ ವೈಭವದಲ್ಲಿ ವ್ಯಕ್ತಿಯ ವೈಭವವೂ ಇದೆ.

ರಾಷ್ಟ್ರದ ವೈಭವ ಏತಕ್ಕಾಗಿ? ಎಂದು ಪ್ರಶ್ನಿಸಿದಲ್ಲಿ 'ನಮ್ಮ ರಾಷ್ಟ್ರದ ಹಿತ



ಸಾಧನೆಗಾಗಿ' ಎಂಬುದೇ ಸಹಜವಾದ ಉತ್ತರ. ರಾಷ್ಟ್ರದ ಹಿತಸಾಧನೆ ಏತಕ್ಕೆ? ಎಂದು ಪ್ರಶ್ನಿಸಿದರೆ 'ಮಾನವತೆಯ ಕಲ್ಯಾಣಕ್ಕಾಗಿ' ಎನ್ನುವುದೇ ನಮ್ಮ ಉತ್ತರ. ಗ್ರಾಮರಕ್ಷಕನ ಕೈಯಲ್ಲಿ ಆಯುಧ ಇದ್ದಾಗ ಮಾತ್ರ ಗ್ರಾಮರಕ್ಷಣೆ ಆಗುವಂತೆ ನಮ್ಮ ರಾಷ್ಟ್ರ ಬಲಶಾಲಿ ಆದರೆ ಮಾತ್ರ ಇಡೀ ಮಾನವತೆಯ ಹಿತಸಾಧನೆಯೂ ಆಗುತ್ತದೆ.

### ರಾಷ್ಟ್ರೋನ್ನತಿಗೆ ಹೆದ್ದಾರಿ

ಹಾಗಾದರೆ ರಾಷ್ಟ್ರೋನ್ನತಿಯನ್ನು ಸಾಧಿಸುವ ಮಾರ್ಗ ಯಾವುದು? ವ್ಯಕ್ತಿಯು ಸಮಾಜಕ್ಕಾಗಿ ದುಡಿದಾಗ ಸಮಾಜವು ಶಕ್ತಿಶಾಲಿಯಾಗುತ್ತದೆ; ಅದರಿಂದ ವ್ಯಕ್ತಿಗೂ ಸುಖ ಮತ್ತು ಬಲ ದೊರೆಯುತ್ತದೆ. ವ್ಯಕ್ತಿಯು ಸಮಾಜಕ್ಕಾಗಿ ತನ್ನನ್ನು ತಾನು ಸಮರ್ಪಿಸಿಕೊಳ್ಳುವುದಕ್ಕೇ ನಮ್ಮಲ್ಲಿ 'ಯಜ್ಞ ಪರಂಪರೆ' ಎನ್ನುತ್ತೇವೆ. ವ್ಯಕ್ತಿಯು ಸಮಾಜಕ್ಕಾಗಿ ತನ್ನ ಸ್ವಾರ್ಥವನ್ನು ಕಡಿಮೆ ಮಾಡಿಕೊಳ್ಳುತ್ತಾ ಮುಂದುವರಿದು ತನ್ನ ಸರ್ವಸ್ವವನ್ನೂ ಅದರಡಿಯಲ್ಲಿ ಸಮರ್ಪಿಸುವ ಪ್ರೇರಣೆಯನ್ನು ಯಜ್ಞ ಪರಂಪರೆ ನೀಡುತ್ತದೆ. ನಾವು ಮಾಡುವ ಪಿಂಡಪ್ರದಾನದಿಂದ ಆರಂಭಿಸಿ ದಧೀಚಿಯಂತೆ ತನ್ನ ಬೆನ್ನೆಲುಬನ್ನು ಜಗತ್ಕಲ್ಯಾಣಕ್ಕಾಗಿ ನೀಡುವುದರವರೆಗೆ ವ್ಯಕ್ತಿಯನ್ನು ಪ್ರೇರಿಸುವುದು ನಮ್ಮ ಯಜ್ಞದ ಕಲ್ಪನೆಯೇ. 'ಸಮಾಜವು ನನ್ನದು' ಎಂಬ ಭಾವನೆ ಹೃದಯಾಂತರಾಳದಿಂದ ಸ್ಫುರಿಸುವಂತೆ ಇದು ಪ್ರೇರಿಸುತ್ತದೆ. ಇದರಿಂದಲೇ ವ್ಯಕ್ತಿಯು ಸಮಾಜ ಹಿತಕ್ಕಾಗಿ ಅದರ ಉನ್ನತಿಗಾಗಿ ದುಡಿಯುವುದು ಸ್ವಾಭಾವಿಕವಾಗಿದೆ.

ಸಮಾಜಕ್ಕೆ ದೊರಕಿದ ಸಮೃದ್ಧಿ ಸಂಪತ್ತನ್ನು ಅದು ತನ್ನೆಲ್ಲ ಘಟಕಗಳಿಗೆ– ತಾಯಿ ತನ್ನೆಲ್ಲ ಮಕ್ಕಳಿಗೂ ಅವರವರ ಆವಶ್ಯಕತೆಗಳಿಗನುಗುಣವಾಗಿ, ಆದರೆ ಸಮಾನ ಪ್ರೇಮದಿಂದ ಅನ್ನ ಬಡಿಸುವಂತೆ– ವಿತರಣೆ ಮಾಡುತ್ತದೆ. ಕುಟುಂಬದಂತೆಯೇ ಪಂಚಾಯತಿ ಮತ್ತು ಸರಕಾರಗಳು ಸಹ ವ್ಯಕ್ತಿಗಳು ತಮಗೆ ಕಂದಾಯ, ಆದಾಯ ತೆರಿಗೆ ಮುಂತಾದ ರೂಪದಲ್ಲಿ ಅರ್ಪಿಸಿದ ಧನವನ್ನು ಪಾಠಶಾಲೆ, ಔಷಧ ವಿತರಣೆ, ಮುಂತಾದ ಆವಶ್ಯಕ ಉಪಯೋಗ ಸಾಧನಗಳ ರೀತಿಯಲ್ಲಿ ವಾಪಸ್ಸು ಮಾಡುತ್ತವೆ. ತಾಯಿಗೆ ಭಕ್ತಿಯಿಂದ ಸಮರ್ಪಿಸುವ ಹಾಗೂ ತಾಯಿಯಿಂದ ಪ್ರೇಮರೂಪವಾಗಿ ಪ್ರಸಾದದಂತೆ ಸ್ವೀಕರಿಸುವ ಈ ಪದ್ಧತಿಗೇ 'ಯಜ್ಞ ಚಕ್ರ' ಎನ್ನುತ್ತಾರೆ. ಸಮುದ್ರದ ನೀರಿನಿಂದ ಆವಿ, ಆವಿಯಿಂದ ಮಳೆ, ಮಳೆಯಿಂದ ನದಿಗೆ ನೀರು, ಮತ್ತೆ ಸಮುದ್ರಕ್ಕೇ ನದಿಯ ಸೇರ್ಪಡೆ– ನಿಸರ್ಗದ ಈ ಚಕ್ರದಂತೆಯೇ ರಾಷ್ಟ್ರ ಜೀವನದ ಚಕ್ರವೂ ತಿರುಗುತ್ತದೆ. ಕರ್ಮದಿಂದ ಫಲ, ಫಲದಿಂದ ಯಜ್ಞ– ಈ ಚಕ್ರ ಯಾವ ಸಮಾಜದಲ್ಲಿ ಸುವ್ಯವಸ್ಥಿತವಿರುತ್ತದೋ ಅದು ಸಫಲ ಸಮಾಜ ಆಗುತ್ತದೆ.

**ರಾಜನಿಗೆ ಅಂಕುಶ**

ನಮ್ಮ ಸಮಾಜದ ವ್ಯವಸ್ಥೆ ವ್ಯಕ್ತಿಸ್ವಾರ್ಥದ ಆಧಾರದ ಮೇಲೆ ನಿರ್ಮಿತವಾಗಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ವ್ಯಕ್ತಿಯು ತನ್ನ ಸಮಾಜಕ್ಕಾಗಿ ಆತ್ಮಾರ್ಪಣೆ ಮಾಡಿಕೊಳ್ಳುವುದೇ ನಮ್ಮ ವ್ಯವಸ್ಥೆಯ ಮೂಲ ಆಧಾರವಾಗಿದೆ. ಇದೇ ವ್ಯಕ್ತಿಯ ಧರ್ಮ, ಸಮಾಜಜೀವನದ ಸಮಗ್ರ ಬೆಳವಣಿಗೆಗೆ ಆಧಾರವಾದ ವ್ಯಕ್ತಿಯ ಸುಖ ಹಾಗೂ ಅವನ ವಿಕಾಸಕ್ಕೂ, ವ್ಯಕ್ತಿಗಳ ಹಿತ ಸಾಧನೆಯ ಮೂಲವಾದ ಸಮಾಜದ ವ್ಯವಸ್ಥೆ ಮತ್ತು ಅದರ ಭದ್ರತೆಗೂ ಸಾಧನ ಆಗಬಲ್ಲಂಥ ಧರ್ಮಾಧಾರಿತ ರಾಜ್ಯ ವ್ಯವಸ್ಥೆಯೇ ನಮ್ಮ ದೇಶದಲ್ಲಿ ಹಿಂದಿನಿಂದಲೂ ನಡೆದುಬಂದಿತು. ಅದಕ್ಕಾಗಿಯೇ ಅದನ್ನು 'ಧರ್ಮರಾಜ್ಯ' ಎಂದು ನಾವು ಕರೆದೆವು. ಈ ಧರ್ಮ ರಾಜ್ಯದಲ್ಲಿ ಧರ್ಮದ ಕಲ್ಪನೆಗಳಿಗನುಗುಣವಾಗಿಯೇ ನಮ್ಮೆಲ್ಲ ಕರ್ತವ್ಯ ಕರ್ಮಗಳೂ ನಡೆಯಲಾರಂಭವಾದವು.

ರಾಜನು ಧರ್ಮವನ್ನು ಕಾಪಾಡಲೆಂದೇ ರಾಜ್ಯವಾಳುತ್ತಿದ್ದನು. ರಾಜ ಅಥವಾ ರಾಜ್ಯದ ಸ್ಥಾನ ಮಹತ್ತ್ವದ್ದಾಗಿದ್ದರೂ ಅದು ಸರ್ವಶಕ್ತವಾಗಿರಲಿಲ್ಲ. ಪರಿಸ್ಥಿತಿಯನ್ನು ರಾಜನು ನಿರ್ಮಿಸುವನೋ ಅಥವಾ ರಾಜನು ಪರಿಸ್ಥಿತಿಯ ಅಧೀನನೋ ಎಂದು ಭೀಷ್ಮಾಚಾರ್ಯರಿಗೆ ಒಮ್ಮೆ ಪ್ರಶ್ನೆ ಕೇಳಲಾಯಿತು. ಅದಕ್ಕೆ ಅವರು ಉತ್ತರ ಕೊಡುತ್ತಾ 'ರಾಜಾ ಕಾಲಸ್ಯ ಕಾರಣಂ'– 'ರಾಜನೇ ಪರಿಸ್ಥಿತಿಯ ನಿರ್ಮಾತೃ' ಎಂದರು. ಕೆಲವರು ಇದನ್ನು 'ರಾಜನು ಸರ್ವಶಕ್ತ' ಎಂದು ತಿಳಿದುಕೊಳ್ಳುತ್ತಾರೆ. ಆದರೆ ಇದು ಸತ್ಯವಲ್ಲ. ರಾಜನು ಧರ್ಮಕ್ಕಿಂತ ಮಿಗಿಲಾದವನೆಂದು ಭೀಷ್ಮರು ಅಭಿಪ್ರಾಯಪಡಲಿಲ್ಲ. 'ರಾಜನು ಹೆಚ್ಚು ಮಹತ್ತ್ವ ಹೊಂದಿದರೂ ಅವನ ಕರ್ತವ್ಯವು ಧರ್ಮರಕ್ಷಣೆಯೇ ಆಗಿತ್ತು' ಎಂದೇ ಅಭಿಪ್ರಾಯಪಟ್ಟಿದ್ದರು. ಹಿಂದೆ ರಾಜನ ಪಟ್ಟಾಭಿಷೇಕ ಆದಾಗ ಅವನು, 'ನಾನೇ ಸಾರ್ವಭೌಮ, ನನ್ನ ಮಾತೇ ಸರ್ವಮಾನ್ಯ, ನನ್ನನ್ನಾರೂ ಶಿಕ್ಷಿಸುವವರಿಲ್ಲ', 'ಧರ್ಮದಂಡ್ಯೋsಸಿ' ಎಂದು ಅವನ ತಲೆಯ ಮೇಲೆ ಧರ್ಮದಂಡದಿಂದ ಕುಟ್ಟುತ್ತಿದ್ದ. ರಾಜ ಮೂರುಬಾರಿ ಅಗ್ನಿಪ್ರದಕ್ಷಿಣೆ ಮಾಡುವಾಗಲೂ ತಪ್ಪದೆ ಪುರೋಹಿತನೂ ಅವನ ತಲೆಯ ಮೇಲೆ ಕುಟ್ಟುತ್ತಿದ್ದ. ರಾಜನು ಧರ್ಮದ ಅಡಿಯಾಳಾಗಿದ್ದನೆಂಬುದಕ್ಕೆ ಇದು ಸೂಚಕ ವಿಧಿ.

**ದೇವರಿಗಿಂತ ದೊಡ್ಡದು!**

ಪಶ್ಚಿಮ ದೇಶಗಳಲ್ಲಿನ ರಾಜರು 'ರಾಜನು ಏನೂ ತಪ್ಪು ಮಾಡಲಾರ' (The King can do no wrong) ಎನ್ನುತ್ತಿದ್ದರಂತೆ. ಆದರೆ ನಮ್ಮಲ್ಲಿ ಅವನ ತಪ್ಪು ಒಪ್ಪುಗಳನ್ನು ನಿಷ್ಕರ್ಷಿಸುವ ಧರ್ಮವೊಂದಿತ್ತು. ರಾಜನಿರಲಿ, ದೇವರು ಸಹ ಅಧರ್ಮ ಎಸಗುವುದು ಅಸಾಧ್ಯ! ಒಬ್ಬ ಧರ್ಮಪ್ರಚಾರಕ ಒಮ್ಮೆ ಜನಗಳಿಗೆ 'ಪರಮಾತ್ಮ



ಸರ್ವಶಕ್ತಿವಂತ' ಎಂದು ಬೋಧಿಸುತ್ತಲಿದ್ದ. ಯಾರೋ ಎದ್ದುನಿಂತು, ಅವನು ಸರ್ವಶಕ್ತನಾದುದರಿಂದ ಅವನು ಅಧರ್ಮ ಎಸಗಬಹುದೇನು?– ಎಂದು ಪ್ರಶ್ನಿಸಿದರು. ಆಗ ಧರ್ಮಪ್ರಚಾರಕ ಒಂದು ಗೊಂದಲಕ್ಕೇ ಸಿಕ್ಕಿಬಿದ್ದ. ಪರಮಾತ್ಮನು ಅಧರ್ಮ ಎಸಗಲಾರ ಎಂದಲ್ಲಿ ಅವನ ಸರ್ವಶಕ್ತಿಗೆ ಅದೊಂದು ಕುಂದೇ ಸರಿ! ಅಧರ್ಮವು ದುರ್ಬಲತೆಯ ದ್ಯೋತಕವೇ ಹೊರತು ಅದು ಶಕ್ತಿಯ ಪ್ರತೀಕವಲ್ಲ. ಬೆಂಕಿಯು ತನ್ನ ಸುಡುವ ಗುಣವನ್ನು ಕಳೆದುಕೊಂಡಲ್ಲಿ ಅದು ಬೆಂಕಿಯಾಗಿ ಉಳಿಯಲಾರದು. ಅದು ಸತ್ತಂತೆಯೇ ಸರಿ.

ಶಕ್ತಿ ನೆಲಸುವುದು ಮನಬಂದ ವರ್ತನೆಯಿಂದಲ್ಲ; ಸಂಯಮದ ವ್ಯವಹಾರದಿಂದ. ಆದುದರಿಂದ ಸರ್ವಶಕ್ತಿವಂತನಾದ ಪರಮಾತ್ಮನೂ ಸ್ವಯಂ ನಿಯಮಗಳಿಂದ ಬಂಧಿತನೇ. ಅವನೂ ಸಹ ಧರ್ಮಕ್ಕೆ ಅನುಗುಣವಾಗಿಯೇ ವ್ಯವಹರಿಸಬೇಕಾಗುತ್ತದೆ. ಅವನು ಮನುಷ್ಯರೂಪ ಧರಿಸುವುದು ಸ್ವೇಚ್ಛಾವರ್ತನೆ ನಡೆಸುವುದಕ್ಕಲ್ಲ; ಅಧರ್ಮದ ನಾಶಮಾಡಿ ಧರ್ಮಸಂರಕ್ಷಣೆ ಮಾಡಲು ಮಾತ್ರ. ಆದುದರಿಂದ ದೇವರು ಎಲ್ಲ ಕೆಲಸಗಳನ್ನೂ ಮಾಡಬಲ್ಲನಾದರೂ ಅವನು ಧರ್ಮದ ವಿರುದ್ಧ ನಡೆಯಲಾರ. ಅದನ್ನು ತಪ್ಪಾಗಿ ಅರ್ಥಮಾಡಿಕೊಳ್ಳದಿರಲಿ ಎಂದೇ ಧರ್ಮವು ದೇವರಿಗಿಂತ ಶ್ರೇಷ್ಠ ಎಂದು ಹೇಳಬೇಕಾಗುತ್ತದೆ. ಅವನು ಧರ್ಮಕ್ಕನುಗುಣವಾಗಿ ನಡೆಯುತ್ತಿರುವುದರಿಂದಲೇ ಸೃಷ್ಟಿಯೂ ಮುಂದುವರಿಯುತ್ತಲಿದೆ. ಧರ್ಮರಾಜ್ಯದ ರಕ್ಷಕನಾಗಿದ್ದುದರಿಂದಲೇ ರಾಜನನ್ನು ದೇವರ ಪ್ರತಿನಿಧಿ ಎಂದು ಕರೆಯುತ್ತಿದ್ದರು.

**ಪ್ರಜೆಗಳಿಗಿಂತ ಹಿರಿದು**

ಪ್ರಜಾತಂತ್ರದಲ್ಲಿ ಕೆಲವು ಬಾರಿ ಪ್ರಜೆಗಳಿಗೆ ಅವರಿಗೆ ಇಷ್ಟ ಬಂದುದನ್ನು ಮಾಡಲು ಸ್ವಾತಂತ್ರ್ಯ ಇದೆಯೆಂದು ಹೇಳಲಾಗುತ್ತದೆ. ಹಾಗಾದರೆ ಅವರಿಗೆ ಇಷ್ಟವಾದುದು ಅಧರ್ಮವಾದರೂ ಅದನ್ನು ಮಾಡಬಹುದೆಂದು ಅರ್ಥವೇನು? ನಮ್ಮ ಪದ್ಧತಿಯಂತೆ ಧರ್ಮದ ವಿರುದ್ಧ ಪ್ರಜೆಗಳು ಏನು ಮಾಡಲೂ ಅವಕಾಶ ಇಲ್ಲ. ಪ್ರಜಾತಂತ್ರದ ಸಿದ್ಧಾಂತಗಳಲ್ಲಿ ಬಹುಜನರ ಅಭಿಪ್ರಾಯಕ್ಕೆ ಮನ್ನಣೆ ಉಂಟೆಂದು ಹೇಳಲಾಗುತ್ತದಷ್ಟೆ. ಆದರೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಆಂದೋಲನಗಳಲ್ಲಿ ಬಹುಸಂಖ್ಯಾತ ಜನಗಳು (Majority) ಬ್ರಿಟಿಷರ ವಿರುದ್ಧ ಕತ್ತಿ ಕಟ್ಟಿ ನಿಂತಿರಲಿಲ್ಲ. ಕ್ರಾಂತಿಕಾರಿಗಳ ಸಂಖ್ಯೆಯಂತೂ ತೀರ ಕಡಿಮೆಯಾಗಿತ್ತು. ಅಂತೆಯೇ ಅನ್ಯ ಚಳವಳಿಗಾರರೂ ನಮ್ಮ ದೇಶದ ಜನಸಂಖ್ಯೆಯ ಹೋಲಿಕೆಯಲ್ಲಿ ಬಹುಸಂಖ್ಯೆಯಲ್ಲೇನೂ ಇರಲಿಲ್ಲ. ಲೋಕ ಮಾನ್ಯ ತಿಲಕರು 'ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು' ಎಂದು ಘೋಷಿಸಿದುದು ಬಹುಜನರ ಬೆಂಬಲದಿಂದಾಗಲೀ, ಅಥವಾ ಜನಮತಗಣನೆಯ ಅಭಿಪ್ರಾಯದಂತಾಗಲೀ ಆಗಿರಲಿಲ್ಲ. ಇದರರ್ಥ

ಏನು? ರಾಷ್ಟ್ರೀಯ ಧರ್ಮವೇ ಎಲ್ಲಕ್ಕಿಂತ ಹೆಚ್ಚಿನದು. ಸ್ವಾತಂತ್ರ್ಯ ಪ್ರತಿ ದೇಶದ ಧರ್ಮ. ಸ್ವಾತಂತ್ರ್ಯ ರಕ್ಷಣೆ ಹಾಗೂ ದಾಸ್ಯಕ್ಕೆ ಒಳಗಾದಾಗ ಸ್ವಾತಂತ್ರ್ಯ ಪಡೆಯಲು ಯತ್ನಿಸುವುದು ಪ್ರತಿಯೊಬ್ಬನ ಮೂಲಭೂತ ಕರ್ತವ್ಯ ಅರ್ಥಾತ್ 'ಧರ್ಮ' ಆಗುತ್ತದೆ. ಅದು ಬಹುಸಂಖ್ಯೆಯ ಆಧಾರದ ಮೇಲೆ ನಿರ್ಣಯಿಸುವಂಥ ವಿಷಯ ಅಲ್ಲ. ಎಂದರೆ, ಬಹುಮತದ ಆಧಾರಕ್ಕಿಂತ– ಪ್ರಜಾತಂತ್ರಕ್ಕಿಂತ ಹೆಚ್ಚು ಬೆಲೆಯುಳ್ಳ ಒಂದು ತತ್ತ್ವ ಇದೆ ಎಂದಾಯಿತು. ಅದು ಒಂದು ವಿಷಯದ ಮೂಲ ಸತ್ಯವನ್ನು ಆಧರಿಸಿರುತ್ತದೆ. ಅದಕ್ಕೇ 'ಧರ್ಮ' ಎಂದು ಹೆಸರು.

ನಮ್ಮ ಹಿಂದು ವಿವಾಹ ಪದ್ಧತಿಯಲ್ಲಿ ಗಂಡನಾಗಲಿ, ಹೆಂಡತಿಯಾಗಲಿ, ಇಚ್ಛೆಪಟ್ಟರೂ ವಿವಾಹ ವಿಚ್ಛೇದನ ಹೊಂದುವಂತಿಲ್ಲ. ಏಕೆ? ಸತಿಪತಿಯರ ನಡವಳಿಕೆಗಳನ್ನು ಧರ್ಮ ನಿಯಂತ್ರಿಸಬೇಕೇ ಹೊರತು ಅವರವರ ಸ್ವಂತ ಇಚ್ಛೆ ಅನಿಚ್ಛೆಗಳಲ್ಲ. ರಾಷ್ಟ್ರದ ಬಗೆಗೂ ಇದೇ ಮಾತು ಸತ್ಯ. ಗೋವಾ ಕಾಶ್ಮೀರ ಮುಂತಾದ ಪ್ರಾಂತಗಳ ಭವಿಷ್ಯವನ್ನು ಅಲ್ಲಲ್ಲಿಯ ಜನರೇ ನಿರ್ಧರಿಸಬೇಕು, ಅದಕ್ಕಾಗಿ ಜನಮತಗಣನೆ ನಡೆಯಲಿ ಎಂದು ಕೆಲವರು ಸಲಹೆ ಮಾಡುವುದುಂಟು. ಇದು ತಪ್ಪು ಹೆಜ್ಜೆ, ಅಧರ್ಮ; ಏಕೆಂದರೆ ರಾಷ್ಟ್ರೀಯ ಐಕ್ಯಕ್ಕೆ ಅದು ಭಂಗತರುವಂತಹದು. ರಾಷ್ಟ್ರಜೀವನದ ಮೂಲಭೂತ ಆಧಾರಗಳ ಬಗ್ಗೆ, ಧರ್ಮದ ಬಗ್ಗೆ, ನಿರ್ಣಯಿಸಲು ಜನಕ್ಕೆ ಅಧಿಕಾರವಿಲ್ಲ. ರಾಜ್ಯವನ್ನು ಯಾರು ಆಳಬೇಕೆಂಬದನ್ನು ಬಹುಮತ ನಿರ್ಧರಿಸಬಹುದೇ ಹೊರತು ರಾಷ್ಟ್ರ ಧರ್ಮವನ್ನು ಬಹುಮತ ನಿರ್ಣಯಿಸಲಾಗದು.

**ಧರ್ಮವೇ ಹೆಚ್ಚು**

ಕೆಲದಿನಗಳ ಹಿಂದೆ ಸರ್ವೋಚ್ಚ ನ್ಯಾಯಾಲಯವು ಸಾರ್ವಭೌಮ (Sovereign)ವೋ, ಸಂಸತ್ತೋ ಎನ್ನುವ ವಾಗ್ವಾದ ಎದ್ದಿತು. ಬಲಗೈಗೆ ಅಧಿಕಾರ ಹೆಚ್ಚಿರಬೇಕೋ ಅಥವಾ ಎಡಗೈಗೋ ಎನ್ನುವ ವಿವಾದದಂತೆ ಇದು. ಶಾಸಕಾಂಗ, ನ್ಯಾಯಾಂಗ ಈ ಎರಡೂ ರಾಜ್ಯದ ಎಡ–ಬಲ ಅಂಗಗಳು. ಎರಡರ ಜವಾಬ್ದಾರಿಯೂ ಬೇರೆ ಬೇರೆ. ಆದರೆ ಅವೇ 'ನಾ ಹೆಚ್ಚು ತಾ ಹೆಚ್ಚು' ಎಂದು ಕುಣಿದಾಡುವುದು ನಿಜಕ್ಕೂ ಸೋಜಿಗ. ವಾಸ್ತವವಾಗಿ ಧರ್ಮವೇ ಈ ಎರಡಕ್ಕಿಂತಲೂ ಶ್ರೇಷ್ಠವಾದುದು, ಸಾರ್ವಭೌಮವಾದುದು. ಏಕೆಂದರೆ ರಾಜ್ಯದ ಈ ಎರಡು ಅಂಗಗಳ ಕರ್ತವ್ಯವೂ ಧರ್ಮದ ರಕ್ಷಣೆಯೇ ಆಗಿದೆ. ಹಾಗೂ ಇವೆರಡಕ್ಕೂ ನೀತಿನಿರ್ದೇಶನ ಮಾಡುವುದೂ ಧರ್ಮವೇ ಆಗಿದೆ.

**ಧರ್ಮರಾಜ್ಯವೇ ನಿಜವಾದ ಜನರಾಜ್ಯ**

ಪ್ರಜೆಗಳು ಸಹ ಧರ್ಮದ ವಿರುದ್ಧ ನಡೆಯುವಂತಿಲ್ಲ. ಒಂದು ವೇಳೆ



ಬಹುಮತದಿಂದ ಚುನಾಯಿತವಾದ ಪಕ್ಷವು ದೇಶವನ್ನು ಅಧರ್ಮದ ಹಾದಿಯಲ್ಲಿ ಕೊಂಡೊಯ್ದಲ್ಲಿ ಅಥವಾ ಅದಕ್ಕೆ ಅವಕಾಶವಿತ್ತಲ್ಲಿ, ಅದೊಂದು ಸಂಘಟಿತವಾದ ಡಕಾಯಿತರ ಗುಂಪೆಂದೇ ಪರಿಗಣಿಸಬೇಕು. ಭಾರತದ ಐವತ್ತು ಕೋಟಿ ಜನರಲ್ಲಿ ಒಬ್ಬನನ್ನು ಬಿಟ್ಟು ಉಳಿದವರೆಲ್ಲರೂ ಧರ್ಮವಿರುದ್ಧವಾದ ಯಾವುದೋ ಒಂದು ಕಾರ್ಯವನ್ನು ಬೆಂಬಲಿಸಿದರು ಎನ್ನಿ. ಆಗಲೂ ಸಹ ಅದು ಅಧರ್ಮವೇ. ಅದರ ಬದಲು ಒಬ್ಬನೇ ವ್ಯಕ್ತಿ ಧರ್ಮಸಮ್ಮತವಾದ ಕಾರ್ಯ ಮಾಡಿದರೂ ಸರಿಯೆ, ಅದೇ ಸತ್ಯ. ಅದೇ ಧರ್ಮ. ಇನ್ನುಳಿದ ಅಧರ್ಮಿಗಳನ್ನು ಧರ್ಮಮಾರ್ಗದಲ್ಲಿ ಕೊಂಡೊಯ್ಯುವುದೇ ಆ ಒಬ್ಬನ ಕರ್ತವ್ಯವಾಗುತ್ತದೆ. ಈ ಆಧಾರದ ಮೇಲೆಯೇ ಆ ವ್ಯಕ್ತಿಗೆ ಧರ್ಮಮಾರ್ಗದಲ್ಲಿ ನಡೆಯಲು ಅಧಿಕಾರವೂ ಸಿಗುತ್ತದೆ. ಆದುದರಿಂದ ಧರ್ಮವು ಕೇವಲ ಬಹುಮತ ಅಥವಾ ಜನಾಭಿಪ್ರಾಯದೊಂದಿಗೆ ಸೇರಿಕೊಂಡಿರಬೇಕು ಎಂಬ ನಿಯಮವಿಲ್ಲ.

ಧರ್ಮಕ್ಕೆ ತನ್ನದೇ ಆದ ಕೆಲವು ಅಚಲ ಸತ್ಯಗಳಿವೆ. ಆದ್ದರಿಂದ ಪ್ರಜಾ ರಾಜ್ಯವನ್ನು ಕೇವಲ 'ಜನಗಳ ಸರ್ಕಾರ' ಎಂದು ವರ್ಣಿಸಿದರೆ ಅದು ಅಪೂರ್ಣ. ಅದು ಜನಗಳ ಕಲ್ಯಾಣವನ್ನು ಸಾಧಿಸಬೇಕು. ಪ್ರಜೆಗಳ ಕಲ್ಯಾಣ ಯಾವುದು ಎಂಬುದನ್ನು ಧರ್ಮ ನಿರ್ಧರಿಸುತ್ತದೆ. ಆದುದರಿಂದ ಪ್ರಜಾಪ್ರಭುತ್ವವು ಧರ್ಮಾನುಗುಣವಾಗಿರಬೇಕು. ಅರ್ಥಾತ್ ಧರ್ಮರಾಜ್ಯವೇ ಆಗಿರಬೇಕು. ಪ್ರಜಾತಂತ್ರದ ಸೂತ್ರವಾದ 'Government of the people, by the people and for the pelple'ನಲ್ಲಿ 'of' ಎಂಬುದು ಸ್ವಾತಂತ್ರ್ಯವನ್ನೂ 'by' ಎಂಬುದು ಪ್ರಜಾರಾಜ್ಯವನ್ನೂ 'for' ಎಂಬುದು ಧರ್ಮವನ್ನೂ ಸೂಚಿಸುತ್ತವೆ. 'ಸ್ವಾತಂತ್ರ್ಯ ಮತ್ತು ಧರ್ಮ; ಎರಡೂ ಎಲ್ಲಿ ರಕ್ಷಿಸಲ್ಪಟ್ಟಿವೆಯೋ ಅದೇ ನಿಜವಾದ ಪ್ರಜಾಪ್ರಭುತ್ವ. ಧರ್ಮರಾಜ್ಯದಲ್ಲಿ ಈ ಎಲ್ಲ ಕಲ್ಪನೆಗಳೂ ಅಡಗಿವೆ.

**ವ್ಯಕ್ತಿಯಿಂದ ಮಾನವತೆವರೆಗೆ**

ಮೊದಲಿಗೆ ನಮ್ಮ ಸಮಾಜದಲ್ಲಿ ಜಾತಿಗಳು ಸೃಷ್ಟಿಯಾದುದೂ ಧರ್ಮದ ಆಧಾರದ ಮೇಲೆಯೇ. ಧರ್ಮವೆಂದರೆ ಇಲ್ಲಿ ಅವನ ಸ್ವಭಾವ, ಸ್ವಕರ್ಮ ಎಂದಾಗುತ್ತದೆ. ಭಿನ್ನ ಭಿನ್ನ ಪ್ರಕೃತಿಗಳಿಗನುಗುಣವಾಗಿ ಬ್ರಾಹ್ಮಣನಿಂದ ಹಿಡಿದು ಕೃಷಿಕನವರೆಗೆ ಜಾತಿಗಳು ನಿರ್ಮಾಣವಾದುವು. ಇವು ಪರಸ್ಪರ ಭೇದಗಳಲ್ಲ. ಒಂದಕ್ಕೆ ಮತ್ತೊಂದು ಪೂರಕ. ಅವರವರ ಕರ್ಮವನ್ನು ಸಮಾಜದ ಧಾರಣೆಗಾಗಿ ಮಾಡುವುದೇ ಅವರವರ ಧರ್ಮ–ಸ್ವಧರ್ಮ– ಎನಿಸಿತು. ಬಡಗಿ ಇಲ್ಲದಿದ್ದಲ್ಲಿ ಗಾಣಿಗನ ಗಾಣ ತಯಾರಾಗದು. ಗಾಣಿಗ ಎಣ್ಣೆ ತೆಗೆಯದಿದ್ದಲ್ಲಿ ಬಡಗಿ ಬದುಕಲಾರ. ಕಮ್ಮಾರನು ಕೊಡಲಿ ಮಾಡದಿದ್ದಲ್ಲಿ ಸೌದೆ ಒಡೆಯುವವನ ಕೆಲಸ ಸಾಗದು. ಸೌದೆ ಇಲ್ಲದಿದ್ದಲ್ಲಿ

ಕಮ್ಮಾರನಿಗೆ ಬೇಕಾದ ಕಬ್ಬಿಣದ ಕಾವಿನ ಮರ ಸಿಗದು. ಈ ರೀತಿ ಪರಸ್ಪರ ಸಹಯೋಗದ ಭಾವವನ್ನು, ನಾವೆಲ್ಲ ಒಂದೇ ಸಮಾಜಕ್ಕೆ ಸೇರಿದ್ದೇವೆ ಎನ್ನುವ ಭಾವನೆಯನ್ನು, ಧರ್ಮವೇ ನಿರ್ಮಿಸಿತು.

ನಮ್ಮ ಈ ಧರ್ಮದ ಪರಂಪರೆಯಲ್ಲಿ 'ಗುರುವಿನ ಸೇವೆ ಮಾಡುವುದು ಶಿಷ್ಯನ ಅಧಿಕಾರ' ಎಂದು ಹೇಳಿದೆ. ಇಲ್ಲಿ 'ಅಧಿಕಾರ' ಶಬ್ದಕ್ಕೆ 'ಕರ್ತವ್ಯ' ಎಂಬ ಅರ್ಥ. ಇನ್ನೊಬ್ಬರ ಮೇಲೆ 'ದಬ್ಬಾಳಿಕೆ' ಎಂದಲ್ಲ. ಇನ್ನೊಬ್ಬರ ಅಭಿಪ್ರಾಯವನ್ನು ಕೇಳುವುದು ಮಾತ್ರವಲ್ಲ, ಅದನ್ನು ಆದರದಿಂದ ಕಾಣುವ ಪದ್ಧತಿಯೂ ನಮ್ಮಲ್ಲಿ ಬೆಳೆದುಬಂದಿತು. ಸಮಾಜದ ಸರ್ವ ಅಂಗಗಳನ್ನೂ ಪ್ರತಿನಿಧಿಸುವ ಪಂಚಾಯತಿಗಳೂ ಸ್ಥಾಪಿತವಾದವು. ಯಜ್ಞ ಮಾಡಿ ಪ್ರಸಾದ ತಿನ್ನುವುದು ಎಂದರೆ ಸರ್ವಸ್ವವನ್ನೂ ಸಮಾಜಕ್ಕಾಗಿ ಅರ್ಪಿಸಿ, ಸಮಾಜವು ಕೊಟ್ಟಷ್ಟನ್ನೇ ತನ್ನದೆಂದು ತಿಳಿದು ಅನುಭವಿಸುವುದು ಎನ್ನುವ ಪರಂಪರೆ ಬೆಳೆಯಿತು. ತಂದೆ ಶಿಕ್ಷೆ ಕೊಟ್ಟಾಗ ಅದು ತನ್ನ ವಿಕಾಸಕ್ಕೆ ಅವಶ್ಯವೆಂದು ತಿಳಿದು ಮಗನು ಸಂತೋಷದಿಂದ ಸ್ವೀಕರಿಸುವುದೇ ನಮ್ಮ ಪದ್ಧತಿಯಾಯಿತು.

ಬಲಶಾಲಿಯು ದುರ್ಬಲನನ್ನು ನುಂಗುವ ಪ್ರವೃತ್ತಿ ಲೋಕದಲ್ಲಿ ಎಲ್ಲೆಲ್ಲೂ ಕಾಣುತ್ತೇವಾದರೂ ನಮ್ಮಲ್ಲಿನ ಬಲಶಾಲಿಗಳು ದುರ್ಬಲರನ್ನು ನುಂಗಲಿಲ್ಲ. ಬದಲು ಅವರನ್ನು ತಮ್ಮ ಸಮಾನರಂತೆ ಕಂಡರು. ಸರ್ವ ವ್ಯಾಪಕ ದಿವ್ಯ ಚೈತನ್ಯವೊಂದು ನಮ್ಮ ಜೀವನದ ಸರ್ವಕ್ಷೇತ್ರಗಳಲ್ಲಿ ವಿದ್ಯಮಾನವಾಗಿದೆ ಎಂಬ ಭಾವನೆಯಿಂದಾಗಿ ಪರಸ್ಪರ ಪ್ರೀತಿ, ಸೌಹಾರ್ದ, ಸಹಕಾರ, ಸೇವೆ ಈ ಉದಾತ್ತ ಗುಣಗಳು ನಿರ್ಮಾಣವಾದವು. ಇದನ್ನು ಹೆಜ್ಜೆಹೆಜ್ಜೆಗೂ ವರ್ಧಿಸಿಕೊಂಡು ಇಡೀ ಮಾನವತೆಯನ್ನು ಪ್ರೀತಿಯಿಂದ ಕಂಡೆವು. ಇದೇ ಅನುಭೂತಿಯನ್ನು ವಿಶಾಲ ಮಾಡಿಕೊಂಡು ಚರಾಚರ ಸೃಷ್ಟಿಯನ್ನೂ ಪ್ರೀತಿಸಿದೆವು. ಇದರಿಂದಲೇ ನಾವು ಶಕ್ತಿಶಾಲಿಗಳಾದಾಗಲೂ ಯಾರ ಮೇಲೂ ಆಕ್ರಮಣ ಮಾಡಲಿಲ್ಲ. ಬದಲಾಗಿ ಸರ್ವರನ್ನೂ ನಮ್ಮವರೆಂದೇ ಭಾವಿಸಿದುದರಿಂದ ಜಗತ್ಕಲ್ಯಾಣವೇ ನಮ್ಮ ಧ್ಯೇಯ ಆಯಿತು. ಈ ಎಲ್ಲವೂ ನಮ್ಮ ಜೀವನದ ಆಧಾರವಾಗಿ ಧರ್ಮ ಇದ್ದುದರಿಂದಲೇ ಸಾಧ್ಯವಾಯಿತು.

ಒಟ್ಟಿನಲ್ಲಿ ಧರ್ಮದ ಆಧಾರಿತವಾದ ನಮ್ಮ ಕಲ್ಪನೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯವೂ ಇದ್ದಿತು. ಅದರಿಂದ ವ್ಯಕ್ತಿಯ ವ್ಯಕ್ತಿತ್ವವೂ ವಿಕಾಸವಾಯಿತು. ಸಮಾಜಕ್ಕಾಗಿ ವ್ಯಕ್ತಿ ತನ್ನ ಸರ್ವಸ್ವವನ್ನು ಅರ್ಪಿಸಿದುದರಿಂದ ಸಮಾಜವೂ ವಿಕಾಸವಾಯಿತು, ಶಕ್ತಿಶಾಲಿಯಾಯಿತು. ಜಗತ್ತಿನ ಬಗ್ಗೆಯೂ ಆತ್ಮೀಯತೆ ಇದ್ದುದರಿಂದ ಜಗತ್ತಿನ ಕಲ್ಯಾಣಕ್ಕಾಗಿಯೂ ಶ್ರಮಿಸಿದೆವು. ಹೀಗೆ ನಮ್ಮ 'ರಾಷ್ಟ್ರವೈಭವ'ದ ಕಲ್ಪನೆಯೊಳಗೆ ವ್ಯಕ್ತಿಯ ಹಿತದಿಂದ ಮೊದಲ್ಗೊಂಡು ಮಾನವತೆಯ ಹಿತದವರೆಗೆ ಎಲ್ಲವೂ ನಿಹಿತವಾಗಿದೆ.



**ಪಾಶ್ಚಾತ್ಯ ಪ್ರಯೋಗಗಳ ಫಲ**

ಪ್ರಜಾತಂತ್ರ, ವ್ಯಕ್ತಿಸ್ವಾತಂತ್ರ್ಯ, ಸಮತೆ, ಬಂಧುತೆ, ಸಮಾಜವಾದ, ವಿಶ್ವಶಾಂತಿ– ಈ ರೀತಿಯ ಘೋಷಣೆಗಳನ್ನು ಪಾಶ್ಚಾತ್ಯರು ಹಾಕುತ್ತ ಹೊರಟಿದ್ದಾರಷ್ಟೆ. ಇವು ಆ ದೇಶಗಳಲ್ಲಿ ಆಗಾಗ್ಗೆ ಎದ್ದ ತಾತ್ಕಾಲಿಕ ಸಮಸ್ಯೆಗಳನ್ನು ಎದುರಿಸಲು ಹುಟ್ಟಿಬಂದವು. ವ್ಯಕ್ತಿ, ಸಮಾಜ, ಮಾನವತೆ– ಈ ಎಲ್ಲ ಅಂಶಗಳನ್ನೂ ಗಮನಕ್ಕೆ ತಂದುಕೊಂಡು ಅವೆಲ್ಲದರ ಪ್ರಗತಿ ಸಾಧಿಸಲು ನಿರ್ಮಾಣವಾದ ಸಮಗ್ರ ತತ್ತ್ವಜ್ಞಾನಗಳೇನೂ ಅವಲ್ಲ.

ಆರಂಭದಲ್ಲಿ ಇಡೀ ಯೂರೋಪ್ ಖಂಡವು ಧರ್ಮಗುರು ಪೋಪನ ಆಡಳಿತಕ್ಕೆ ಒಳಪಟ್ಟಿತ್ತು. ಮೊದಲಿಗೆ ಅವನು ಕೇವಲ ಅವರ ಧರ್ಮಗುರು ಆಗಿದ್ದ. ಬರುಬರುತ್ತಾ ಅಲ್ಲಿಯ ಸಂಪೂರ್ಣ ಜನಜೀವನಕ್ಕೆ, ಸಾಮಾಜಿಕ, ಆರ್ಥಿಕ, ರಾಜಕೀಯ ಮುಂತಾದ ಎಲ್ಲ ಅಧಿಕಾರಗಳಿಗೂ ಆತನೇ ಕೇಂದ್ರವ್ಯಕ್ತಿಯಾದ. ಎಲ್ಲ ರಂಗಗಳಲ್ಲಿಯೂ ಅವನ ಮಾತೇ ವೇದವಾಕ್ಯವಾಯಿತು. ಹೀಗೆ ಅಧಿಕಾರ ಕೇಂದ್ರೀಕರಣ ಆದೊಡನೆ ಅಲ್ಲಿನ ಜನ ಪೋಪನ ದಬ್ಬಾಳಿಕೆಗೆ ತುತ್ತಾದರು. ಪೋಪನ ಸರ್ವಾಧಿಕಾರ ತಪ್ಪಿಸಲು ಪ್ರಾಟೆಸ್ಟೆಂಟ್ ಪಂಥ ಎದ್ದು ನಿಂತಿತು. ಅನಂತರ ನಡೆದ ಹೊಡೆದಾಟ ಕದನಗಳಿಂದ ಪೋಪನ ರಾಜ್ಯಾಧಿಕಾರ ನಷ್ಟವಾಯಿತು. ಬೇರೆ ಬೇರೆ ರಾಜ್ಯಗಳ್ಲಲಿ ಅಧಿಕಾರ ಹಂಚಿಹೋಯಿತು. ರಾಜರು ಅಧಿಕಾರ ಪಡೆದರು.

ಆದರೆ ಅವರೂ ಸಹ ಜನಹಿತಸಾಧನೆ ಮಾಡುವ ಬದಲು ಅಧಿಕಾರ ಬಲದಿಂದ ಮತ್ತೊಮ್ಮೆ ಜನಗಳನ್ನು ತಮ್ಮ ಕಾಲಡಿ ತುಳಿದಿಟ್ಟರು. ಇಂಗ್ಲೆಂಡಿನಲ್ಲಿ ರೋಮನ್ ಕ್ಯಾಥೊಲಿಕ್ ಚರ್ಚ್ ಮತ್ತು ಚರ್ಚ್ ಆಫ್ ಇಂಗ್ಲೆಂಡ್ ಈ ರೀತಿ ಎರಡು ಗುಂಪುಗಳಾದವು. ಚರ್ಚ್ ಆಫ್ ಇಂಗ್ಲೆಂಡ್‌ನ ಮುಖ್ಯಸ್ಥನೇ ರಾಜನಾದ. ಅವನೇ ದೇವರ ಅವತಾರವೆಂದು ಭಾವಿಸಲ್ಪಟ್ಟನು. ಅವನೂ ತನಗೆ ಅಧಿಕಾರ ದೇವದತ್ತವಾದುದು ಎಂದೇ ಭಾವಿಸಿದ. ಆ ಉನ್ಮಾದದಲ್ಲಿ ಅವನು ಪ್ರಜೆಗಳನ್ನು ಕಾಡತೊಡಗಿದ. ಜನಗಳ ಸ್ವಾತಂತ್ರ್ಯ ನಷ್ಟವಾದುದರಿಂದ ಅವರು ರೊಚ್ಚಿಗೆದ್ದರು. ರಾಜನ ವಿರುದ್ಧ ಸ್ವಾತಂತ್ರ್ಯಕ್ಕಾಗಿ ದಂಗೆ ಎದ್ದು ರಾಜನನ್ನೇ ಕೆಳದೂಡಿದರು. ಜನಗಳ ಕೈಗೇ ಅಧಿಕಾರ ಬಂದಿತು. ಮಿಕ್ಕ ದೇಶಗಳಲ್ಲಿ ರಾಜ ಜನಗಳಿಗೇ ಅಧಿಕಾರ ವಹಿಸಿಕೊಟ್ಟು ತಾನು ಹೆಸರಿಗೆ ಮಾತ್ರ ರಾಜನಾಗಿ ಉಳಿದುಕೊಂಡ. ಇದೇ 'ಪ್ರಜಾತಂತ್ರ', 'ಪ್ರಜಾಸತ್ತೆ' ಎಂಬ ಹೆಸರು ಪಡೆಯಿತು.

ಈ ವ್ಯವಸ್ಥೆಯಲ್ಲಿ ಸಹ ಸಾಮಾನ್ಯ ಜನಗಳಿಗೆ ಅನುಕೂಲ ಆಗಲಿಲ್ಲ. ಹಣವಂತರು ಅಥವಾ ಅವರ ಪ್ರತಿನಿಧಿಗಳು ಚುನಾವಣೆಗಳಲ್ಲಿ ಗೆದ್ದು ಗದ್ದುಗೆ ಏರಿದರು. ಅವನ ಗುರಿ ಕೇವಲ ಅಧಿಕಾರ ಆಗಿದ್ದುದರಿಂದ, ಅವರು ತಮ್ಮ ಕೈಯಲ್ಲಿನ ಅಧಿಕಾರವನ್ನು ತಮ್ಮ ಅಭಿಪ್ರಾಯಗಳನ್ನು ಒಪ್ಪದವರ ವಿರುದ್ಧವಾಗಿಯೂ,

ಹಾಗೂ ಜನಸಾಮಾನ್ಯರ ವಿರುದ್ಧವಾಗಿಯೂ ಪ್ರಯೋಗಿಸಿದರು. ಹೀಗೆ ಅಧಿಕಾರವು ಪೋಪನಿಂದ ರಾಜರುಗಳ ವಶಕ್ಕೆ, ಅನಂತರ ಅವರಿಂದ ಪ್ರಜೆಗಳ ವಶಕ್ಕೆ ಬಂದರೂ ಅಧಿಕಾರ ನಡೆಸುತ್ತಿದ್ದವರೆಲ್ಲರ ದೃಷ್ಟಿಯೂ 'ಅಧಿಕಾರ'ವೇ ಆಗಿದ್ದುದರಿಂದ ಅವರಾರೂ ಪ್ರಜೆಗಳ ಹಿತಚಿಂತನೆ ಮಾಡಲಿಲ್ಲ. ಕೆಲವರು ಪ್ರಜೆಗಳ ಸ್ವಾತಂತ್ರ್ಯಹರಣವನ್ನೇ ಮಾಡಿದರೆ, ಮತ್ತೆ ಕೆಲವರು ಆ ಸ್ವಾತಂತ್ರ್ಯವನ್ನು ತಮ್ಮ ಸ್ವಾರ್ಥಸಾಧನೆಗಾಗಿ ದುರುಪಯೋಗ ಮಾಡಿಕೊಂಡರು. ಈ ಎಲ್ಲ ಪದ್ಧತಿಗಳಲ್ಲೂ ಜನಜೀವನದಿಂದ ಪರಸ್ಪರ ಪ್ರೀತಿ, ಸಹಕಾರಗಳು ಮಾಯವಾದವು. ಇದರಿಂದ ಸಂಘರ್ಷ ಹಾಗೂ ಅವಿಶ್ವಾಸಗಳು ಜನಿಸಿ, ಅವುಗಳ ಆಧಾರದ ಮೇಲೆಯೇ ಅಲ್ಲಿನ ಜನಜೀವನವನ್ನು ಕಟ್ಟುವ ಪ್ರಯತ್ನ ಜರುಗಿತು.

**ಸಮಾಜವಾದದಲ್ಲಿ ಸಮಾಜದ ಗತಿ**

ಪ್ರಜಾತಂತ್ರದ ಜೊತೆಜೊತೆಗೇ ವಿಜ್ಞಾನದ ಪ್ರಗತಿಯೂ ಆಯಿತು. ಔದ್ಯೋಗಿಕ ಕ್ರಾಂತಿಯೂ ಜರುಗಿತು. ಅದರ ಪರಿಣಾಮವಾಗಿ ಕಾರ್ಖಾನೆಗಳೂ ಹೆಚ್ಚಿದವು. ಹಣವಂತರೇ ಸ್ವಾಭಾವಿಕವಾಗಿ ಈ ಕಾರ್ಖಾನೆಗಳ ಮಾಲಿಕರೂ ಆದರು. ಹಣದ ಜೊತೆಗೆ ಪ್ರಭಾವವೂ ಸೇರಿತು. ಮಾಲಿಕರು ಅಥವಾ ಅವರ ಹಿಂಬಾಲಕರೇ ಪ್ರಜಾತಂತ್ರವನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡರು. ಇದರಿಂದ ಹೆಚ್ಚು ದುಡಿತ ಹಾಗೂ ಕಡಿಮೆ ವೇತನ, ದುಡಿಯದಿದ್ದಲ್ಲಿ ಉಪವಾಸ– ಇದು ಕಾರ್ಮಿಕರ ಗತಿ ಆಯಿತು. ಇಷ್ಟೇ ಅಲ್ಲ, ವಿಜ್ಞಾನಿಗಳು ಮತ್ತು ಕುಶಲ ಕೆಲಸಗಾರರು ಸಹ ಬಂಡವಾಳಗಾರರ ಗುಲಾಮರೇ ಆದರು. ಕೂಲಿಗಾರರು ಕೆಲಸ ಮಾಡಿದಷ್ಟೂ ಬಂಡವಾಳಗಾರರು ಹೆಚ್ಚು ಹಣವಂತರಾದರು. ಇದರಿಂದ ಅತೃಪ್ತಿಗೊಂಡ ಶ್ರಮಿಕರು ಮಾಲಿಕರ ವಿರುದ್ಧ ಬಂಡೆದ್ದರು. ಕಲಹ, ಸಂಘರ್ಷ ಪುನಃ ಆರಂಭವಾಯಿತು. ವ್ಯಕ್ತಿಸ್ವಾತಂತ್ರ್ಯಕ್ಕಾಗಿ ಹಿಂದೆ ಒಂದಾಗಿದ್ದವರೇ ಈಗ ಪರಸ್ಪರ ವಿರೋಧಿಗಳಾದರು. ಕೂಲಿಗಾರ–ಮಾಲಿಕ ಈ ಎರಡು ವರ್ಗ ನಿರ್ಮಾಣ ಆಯಿತು. ಒಬ್ಬರು ಮತ್ತೊಬ್ಬರ ವಿನಾಶಕ್ಕಾಗಿ ಕತ್ತಿಕಟ್ಟಿ ನಿಂತರು.

ಇದರ ಫಲವಾಗಿ ಕೂಲಿಗಾರರ ಹಿತರಕ್ಷಣೆ ಮತ್ತು ಬಂಡವಾಳಗಾರರ ವಿರೋಧದ ಆಧಾರವುಳ್ಳ 'ಸಮಾಜವಾದ' ಹುಟ್ಟಿತು. ಪ್ರಜಾಪ್ರಭುತ್ವದಲ್ಲಿ ಕಡೆಗಣಿಸಲ್ಪಟ್ಟ ಹಾಗೂ ಬಂಡವಾಳಗಾರರ ದಬ್ಬಾಳಿಕೆಗೆ ತುತ್ತಾಗಿದ್ದ ಕಾರ್ಮಿಕರಿಗೇ ಅಧಿಕಾರ ಸಿಗಬೇಕೆಂಬ ಕೂಗು ಎದ್ದಿತು. ರಷ್ಯದಲ್ಲಿ ಸಮಾಜವಾದಿ ಕ್ರಾಂತ ಆಯಿತು. ಅಲ್ಲಿ ಸಮಾಜವಾದ ಅಧಿಕಾರಕ್ಕೆ ಬಂದಿತು. ಇದರಿಂದ ವರ್ಗಸಂಘರ್ಷಕ್ಕೆ ಮತ್ತೂ ಪುಟ ಸಿಕ್ಕಿತು.



ಸಮಾಜವಾದದಲ್ಲಿ ವ್ಯಕ್ತಿಯ ಅಧಿಕಾರಗಳನ್ನು ಮೊಟಕು ಮಾಡಲಾಯಿತು. ಅವನು ಸರ್ವಾಧಿಕಾರ ಹೊಂದಿದ್ದ ರಾಜ್ಯದ ಆದೇಶ ಪಾಲನೆ ಮಾಡುವ ಕೇವಲ ಕೈಗೊಂಬೆಯಾದ. ಅವನ ಪ್ರತಿಭೆಗೆ, ಪರಿಶ್ರಮಕ್ಕೆ ಪ್ರೇರಣೆ ಸಿಗಲಿಲ್ಲ. ವ್ಯಕ್ತಿಸ್ವಾತಂತ್ರ್ಯ ಅಳಿಯಿತು. ಎಲ್ಲ ಅಧಿಕಾರಗಳೂ ರಾಜ್ಯದ ಕೈಯಲ್ಲೇ ಕೇಂದ್ರೀಕೃತವಾದವು. ರಾಜ್ಯವೇ ಸಮಾಜದ ಏಕಮಾತ್ರ ಪ್ರತಿನಿಧಿ ಆಯಿತು. ವ್ಯಕ್ತಿಯ ಸ್ವಾತಂತ್ರ್ಯ ನಷ್ಟವಾಗಿ ಅವನ ಪ್ರತಿಭೆಗೆ ಪುರಸ್ಕಾರ ಸಿಗದುದರಿಂದ ಅವನ ವಿಕಾಸವೂ ಕುಂಠಿತವಾಯಿತು. ಬಂಡವಾಳಗಾರರನ್ನು ವಿರೋಧಿಸಿದ್ದು ಸ್ವಾರ್ಥದಿಂದಲೇ ಆದುದರಿಂದ ಆ ಪ್ರವೃತ್ತಿಯೂ ಬೆಳೆಯುತ್ತಲೇ ಹೋಯಿತು. ಹೀಗೆ ವ್ಯಕ್ತಿಯ ಸದ್ಗುಣಗಳ ಸಮಾಧಿಯೇ ಆಯಿತು. ಇತ್ತ ಸಮಾಜವಾದ 'ಸಮಾಜ'ವನ್ನೇ ಮರೆತು ತಾನೊಂದು 'ರಾಜ್ಯವಾದ' ಆಯಿತು. ಬರುಬರುತ್ತಾ ಅದು ಪೊಲೀಸ್ ರಾಜ್ಯವಾಯಿತು. ಹೀಗೆ ಇದರಿಂದಲೂ ಸಹ ಇತ್ತ ವ್ಯಕ್ತಿಯ ಹಿತವನ್ನಾಗಲೀ, ಅತ್ತ ಸಮಾಜದ ಹಿತವನ್ನಾಗಲೀ ಸಾಧಿಸಲು ಆಗಲಿಲ್ಲ.

ಸಮಾಜವಾದದ ಮತ್ತೊಂದು ರೂಪವಾದ 'ನ್ಯಾಷನಲ್ ಸೋಷಿಯಲಿಸಂ' ಅಥವಾ ನಾಜಿ ವಾದದ ಕರ್ತೃಗಳು ಹಿಟ್ಲರ್ ಮತ್ತು ಮುಸೋಲಿನಿ. ಇವರಂತೂ ಸಣ್ಣಪುಟ್ಟ ರಾಷ್ಟ್ರಗಳ ಮೇಲೆ ಹಲ್ಲೆ ನಡೆಸಿ ಅವರ ಸ್ವಾತಂತ್ರ್ಯವನ್ನು ಅಪಹರಿಸಿದರು. ಅವರ ಮೇಲೆ ದಬ್ಬಾಳಿಕೆ ನಡೆಸಿದರು. ಇವರ ಕೃತ್ಯಗಳಿಂದ ಜಗತ್ತು ಭೀತಿ, ಅಸ್ಥಿರತೆ, ಅಶಾಂತಿಗಳಲ್ಲಿ ಮುಳುಗಿತು.

**ನಮಗೊಂದು ಎಚ್ಚರಿಕೆ**

ಫ್ರಾನ್ಸ್ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಮನ್ನಣೆ ಇದ್ದ ಪರಿಸ್ಥಿತಿಯ ಬದಲಾಗಿ ಅಲ್ಲೀಗ ಒಂದು ರೀತಿಯ ಸರ್ವಾಧಿಕಾರವೇ ತಲೆಯೆತ್ತಿದೆ. ಹೀಗೆ ಅವರಿಗೂ ಶಾಂತಿಯು ಕನಸೇ ಆಗಿದೆ. ಅಮೇರಿಕದಲ್ಲಿ ವೈಭವ, ಧನಸಂಪತ್ತುಗಳು ಹೇರಳವಾಗಿದ್ದರೂ, ಅವರ ಮನಸ್ಸು ನೆಮ್ಮದಿ ಕಾಣದಾಗಿದೆ, ಅಶಾಂತಿ ತುಂಬಿ ತುಳುಕುತ್ತಿದೆ. ಶಾಂತಿಗಾಗು ಅವರು ಹಾತೊರೆಯುತ್ತಿದ್ದಾರೆ. ನಿತ್ಯ ನಿದ್ರೆ ಬರಲೂ ಸಹ ಗುಳಿಗೆ ನುಂಗುವ ಪರಿಸ್ಥಿತಿ ಅವರಿಗೆ ಒದಗಿದೆ! ಹೀಗೆ ಪೋಪ್ ಆಡಳಿತದಿಂದ ಆರಂಭಿಸಿ ಇತ್ತೀಚಿನವರೆಗೆ ಪಾಶ್ಚಾತ್ಯರು ಅನೇಕ ವಿಧವಾದ ಪ್ರಯೋಗಗಳನ್ನು ನಡೆಸಿದ್ದರೂ ಅನೇಕ ವಿಧದಲ್ಲಿ ಜನಜೀವನವನ್ನು ಸುಖ, ಸಮೃದ್ಧಿ, ಶಾಂತಿಗಳತ್ತ ಕೊಂಡೊಯ್ಯಲು ಶ್ರಮಿಸಿದ್ದರೂ, ಅವರ ವಿಚಾರಧಾರೆಯಲ್ಲಿನ ಮೂಲಭೂತ ದೋಷಗಳಿಂದಾಗಿ ಅವರ ಪ್ರಯತ್ನಗಳೆಲ್ಲ ವಿಫಲವಾಗಿವೆ. ಇನ್ನು ಅವರು ಬೇರೆಯವರಿಗೆ ದಾರಿ ತೋರಿಸುವುದಾದರೂ ಹೇಗೆ? ಇದನ್ನು ತಿಳಿದೂ ತಿಳಿದೂ ಅವರನ್ನೇ ನಾವು ಅನುಕರಿಸಿದೆವೆಂದರೆ ನಾವೂ ಅವರಂತೆಯೇ ವಿನಾಶದ ಮಡುವಿನಲ್ಲಿ

ಬಿದ್ದೇವು; ಒಬ್ಬ ಕುರುಡನ ಕೈಹಿಡಿದು ಹೊರಟ ಮತ್ತೊಬ್ಬ ಕುರುಡನ ಗರಿಯಂತಾದೀತು ನಮ್ಮ ಪಾಡು. ಒಳಗಿನ ತಿರುಳೇನಿದೆ ನೋಡದೆ, ಒಂದು ಪುಸ್ತಕದ ಮುಖ ಚಿತ್ರವನ್ನು ಮಾತ್ರ ನೋಡಿ ಅದನ್ನು ಕೊಂಡುಕೊಂಡಂತೆ ಆದೀತು. ಆದ್ದರಿಂದ ಆಂತರಿಕ ಮೌಲ್ಯಗಳಿಂದ ಕೂಡಿದ, ಜನಕಲ್ಯಾಣವನ್ನು ಸಾಧಿಸಬಲ್ಲ, ರಾಷ್ಟ್ರವೈಭವದ ಜೊತೆಗೆ ವ್ಯಕ್ತಿವಿಕಾಸವನ್ನು ಸಾಧಿಸಬಲ್ಲ, ಇಡೀ ವಿಶ್ವಕ್ಕೂ ದೀಪಸ್ತಂಭವಾಗಬಲ್ಲಂಥ ನಮ್ಮ ಜೀವನದರ್ಶನಕ್ಕೆ ನಾವು ಮರಳುವುದೇ ಸರ್ವ ದೃಷ್ಟಿಯಿಂದಲೂ ಶ್ರೇಯಸ್ಕರ.